Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಕುವೆಂಪು: ವೈಚಾರಿಕ ನೆಲೆಗಳು

**ಮಂಜುನಾಥ ಪಾಟೀಲ**
ಸಂಶೋಧನ ವಿದ್ಯಾರ್ಥಿ
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ,
ಬೆಳಗಾವಿ

ಕನ್ನಡದ ಆಧುನಿಕ ಸಾಹಿತ್ಯ ಎಂದ ಕೂಡಲೇ ನೆನಪಾಗುವುದು ಕನ್ನಡದ ದೈತ್ಯ ಪ್ರತಿಭೆ ಕುವೆಂಪು. ಇವರು ಕನ್ನಡ ಸಾಹಿತ್ಯಕ್ಕೆ ವೈಚಾರಿಕ ದೃಷ್ಟಿಕೋನ ನೀಡಿ ಅದನ್ನು ಪುನರ್ ವ್ಯಾಖ್ಯಾನಿಸಿದ ಚಿಂತಕ. ಸಾಹಿತ್ಯದ ಆಶಯ ಮನುಷ್ಯನನ್ನು ಪ್ರಜ್ಞಾವಂತನಾಗಿ ಮಾಡುವುದು. ಈ ಪ್ರಜ್ಞೆ ಮತ್ತು ವೈಜ್ಞಾನಿಕ ಮನೋವೃತ್ತಿ ಬೆಳೆಸದಿದ್ದರೆ ದೇಶ ಅಭಿವೃದ್ಧಿಯಾಗಲಾರದು. ಅದಕ್ಕಾಗಿಯೇ ನೆಹರು ಅವರು "ವೈಜ್ಞಾನಿಕ ಮನೋವೃತ್ತಿ ಎಂಬುದು ಆಲೋಚನೆಯ ಪ್ರಕ್ರಿಯೆ. ಕ್ರಿಯೆಯ ವಿಧಾನ. ಸತ್ಯದ ಶೋಧನೆ. ಬದುಕಿನ ಮಾರ್ಗ ಮತ್ತು ಎಲ್ಲದಕ್ಕಿಂತ ಮುಖ್ಯವಾಗಿ ಅದು ಸ್ವತಂತ್ರ ಮಾನವನ ಚೇತನ"[೧] ಎಂದಿದ್ದಾರೆ. ಅಷ್ಟಲ್ಲದೇ ಭಾರತ ಸಂವಿಧಾನದ ೫೧.ಎ ಅನುಚ್ಛೇದ "ವೈಜ್ಞಾನಿಕ ಮನೋವೃತ್ತಿ, ಮಾನವೀಯತೆ, ಅನ್ವೇಷಣೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವುದು"[೨] ಪ್ರತಿಯೊಬ್ಬ ಭಾರತೀಯರ ಕರ್ತವ್ಯವೆಂದು ಹೇಳುವುದರ ಜೊತೆಗೆ ವೈಚಾರಿಕತೆ ಮೂಡಿಸುವುದು ಸರಕಾರದ ಕರ್ತವ್ಯವೆಂದು ಹೇಳುತ್ತದೆ. ಇದನ್ನೇ ಕುವೆಂಪು ತಮ್ಮ ಸಾಹಿತ್ಯದ ಮೂಲಕ ಮಾಡಿದ್ದಾರೆ. ಇವರು ಕವಿ, ನಾಟಕಕಾರ, ಕಾದಂಬರಿಕಾರನಾಗಲ್ಲದೆ ವೈಚಾರಿಕ ಚಿಂತಕರಾಗಿ ಕಾಣಿಸುತ್ತಾರೆ. ಸರ್ವರಿಗೂ ಸಮಪಾಲು, ಸಮಬಾಳು, ಸಮಾನ ಹಂಚಿಕೆ, ಸಮಾನ ಜೀವನ ಎಂಬ ಸಮಾನತೆಯ ತತ್ವ ಪ್ರತಿಪಾದಕರಾಗಿದ್ದಾರೆ. ಇವರ ಬರಹಗಳಿಗಿಂತ ಅವರು ಬೆಳೆಸಿಕೊಂಡ ಜೀವನ ಪಥ ಒಂದು ಸಂದೇಶವಾಗಿದೆ. 'ಯುನಿವರ್ಸಲ್ ಹ್ಯುಮ್ಯಾನಿಸಂ' ಅಂದರೆ ವಿಶ್ವ ಮಾನವತಾವಾದದ ಹಿನ್ನೆಲೆಯಾಗಿ ಜಾತಿ ತಾರತಮ್ಯ, ಧರ್ಮಾಂಧತೆ, ಲಿಂಗ ಅಸಮಾನತೆ, ಮೂಢನಂಬಿಕೆಗಳ ವಿರುದ್ಧ ವೈಚಾರಿಕ ದೃಷ್ಟಿಕೋನವು ಕುವೆಂಪು ಅವರ ಸಾಹಿತ್ಯದಲ್ಲಿದೆ. ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಯಾದಾಗ ಇವರು ವಿಜ್ಞಾನ ಮತ್ತು ಭಾಷೆಗಳ ಅಧ್ಯಯನ ಆರಂಭಿಸಿದ್ದು ಅವರ ವೈಜ್ಞಾನಿಕ ದೃಷ್ಟಿಕೋನಕ್ಕೆ ಸಾಕ್ಷಿಯಾಗಿದೆ.

ಮೂಢನಂಬಿಕೆ ವೈಚಾರಿಕತೆಗೆ ವಿರುದ್ಧವಾದದ್ದು. ಈ ಮೂಢನಂಬಿಕೆಯ ಮೂಲ ಪುರೋಹಿತಶಾಹಿತ್ವ. ಪ್ರಾಚೀನ ಕಾಲದಿಂದ ಪುರೋಹಿತಶಾಹಿ ಮೇಧಾವಿಗಳ ವಿಚಾರಕ್ಕೆ ಕಡಿವಾಣ ಹಾಕಿ, ವೈಜ್ಞಾನಿಕ ಪ್ರಗತಿಯನ್ನು ಕುಂಠಿತಗೊಳಿಸಿ, ಅಭ್ಯುದಯಕ್ಕೆ ತೊಡಕಾಗಿದೆ. "ಜಾತೀಯತೆ ಸಹಸ್ರಾರು ವರ್ಷಗಳಿಂದ ಭಾರತಮಾತೆಯ ದೇಹಕ್ಕೆ ಅಂಟಿಕೊಂಡ ಬಂದ ಕ್ಯಾನ್ಸರ್ ಗಾಯ".[೩] ಪುರೋಹಿತಶಾಹಿಯನ್ನು ಮೂಲೆಗುಂಪು ಮಾಡಿದ ಎಲ್ಲ ರಾಷ್ಟ್ರಗಳಿಂದು ಅಭಿವೃದ್ಧಿಯ ಮುಂಚೂಣಿಯಲ್ಲಿವೆ. ಮತ ಪ್ರಬಲವಾಗಿರುವ ಕಡೆ ಪುರೋಹಿತಶಾಹಿ ವಿಜೃಂಭಿಸುತ್ತದೆ. ಕ್ರಾಂತಿಯಿಂದಲ್ಲದೆ ಅದರಿಂದ ಮುಕ್ತಿಯಿಲ್ಲವೆಂದು ಕುವೆಂಪು ಉದ್ಧರಿಸುತ್ತಾರೆ. ಕ್ಷಣಕ್ಷಣಕ್ಕೂ ಜನರ ರಕ್ತವನ್ನು ಹೀರುತ್ತಿರುವ ಜೀಗಣೆಗಳವು. ಸ್ವಾರ್ಥಕ್ಕಾಗಿ ಸೃಷ್ಟಿಸಿದ ಅರ್ಥವಿಲ್ಲದ ಶಾಸ್ತ್ರಗಳಿಂದ ದೇಶದ ಪ್ರಗತಿ ಕುಂಠಿತವಾಗಿದೆ. ವೈಚಾರಿಕ ವಿಕಾಸಕ್ಕೆ, ವೈಜ್ಞಾನಿಕ ಮನೋಧರ್ಮದ ಬೆಳವಣಿಗೆಗೆ ಕುತ್ತಾಗಿವೆ. ಅವನ್ನು ತಿರಸ್ಕರಿಸಬೇಕೆಂದು ಕುವೆಂಪು ಹೇಳುತ್ತಾರೆ.

"ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?
ನಿನ್ನೆದೆಯ ದನಿಯೇ ಋಷಿ! ಮನು ನಿನಗೆ ನೀನು!
ನೀರಡಿಸಿ ಬಂದ ಸೋದರಗೆ ನೀರನ್ನು ಕೊಡಲು
    ಮನುಧರ್ಮಶಾಸ್ತ್ರವೆನಗೊರೆಯಬೇಕೇನು?
    ನೊಂದವರ ಕಂಬನಿಯನೊರಸಿ ಸಂತೈಸುವೊಡೆ
    ಶಾಸ್ತ್ರ ಪ್ರಮಾಣವದಕಿರಲೆಬೇಕೇನು?
ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ
ದಡದಲ್ಲಿ ಮೀಯುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೆಟ್ಟು ಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರ ಸಮ್ಮತವದೇನು?
    ಅಂತು ಮನು ತಾನು ಹೇಳಿರಲಾರನಯ್ಯಯ್ಯೊ!
    ಹೇಳಿದ್ದರವನನೂ ಶಾಸ್ತ್ರದೊಳೆ ಸುತ್ತಿ,
    ಸ್ವರ್ಗ ಹೋಗಲಿ, ಮತ್ತೆ ನರಕ ಬಂದರು ಬರಲಿ,
    ಎದೆಯ ಧೈರ್ಯವ ಮಾಡಿ ಬಿಸುಡಾಚೆಗೆತ್ತಿ!"[೪]

ಇಲ್ಲಿ ಪುರೋಹಿತ ವರ್ಗದಿಂದ ಸೃಷ್ಟಿಯಾದ ವೇದ, ಶಾಸ್ತ್ರ, ಪುರಾಣಗಳಲ್ಲಿ ಸಮಾಜಕ್ಕೆ ಮಾರಕವಾದ ಅಂಶಗಳೇ ಹೆಚ್ಚಿವೆ ಎಂಬುದನ್ನು ಕುವೆಂಪು ತಿಳಿಸುತ್ತಾರೆ. ಅದಕ್ಕಾಗಿ ಶಾಸ್ತ್ರ ರಚನಾಕಾರರನ್ನು ಕುರಿತು ವಿವೇಕಾನಂದರು "ಪ್ರಪಂಚದ ಯಾವ ಧರ್ಮವೂ ದೀನ ದಲಿತರ ಕುತ್ತಿಗೆಯನ್ನು ಹಿಂದೂ ಧರ್ಮದಷ್ಟು ಕ್ರೂರವಾಗಿ ತುಳಿಯುವುದಿಲ್ಲ. ತಪ್ಪು ಹಿಂದೂ ಧರ್ಮದಲ್ಲ. ಅಲ್ಲಿರುವ ಸಂಪ್ರದಾಯ ಶರಣರದು; ಪುರೋಹಿತರದು; ಪಾರಮಾರ್ಥಿಕ ಮತ್ತು ವ್ಯಾವಹಾರಿಕ ಎಂದು ನಾನಾ ರೀತಿಯ ಕ್ರೂರವಿಧಾನಗಳನ್ನು

ಸೃಷ್ಟಿಸುವ ಠಕ್ಕರದ್ದು”[೫] ಎಂದಿದ್ದಾರೆ. ಹೀಗೆ ಶಾಸ್ತ್ರ ರಚನಾಕಾರರು ತಮ್ಮ ಸ್ವಾರ್ಥಕ್ಕಾಗಿ, ತಮ್ಮ ಸ್ಥಾನ ಭದ್ರತೆಗಾಗಿ, ಜನ ಸಾಮಾನ್ಯರ ಮೌಢ್ಯ ಮತ್ತು ಅಜ್ಞಾನವನ್ನು ಬಂಡವಾಳವನ್ನಾಗಿ ಮಾಡಿಕೊಂಡು ಸೃಷ್ಟಿಸಿದ ಕೃತಿಗಳೇ ಶಾಸ್ತ್ರಗಳು. ತಮ್ಮ ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳಿಗೆ ಶಾಸ್ತ್ರಸಮ್ಮತವೆಂಬ ಮುದ್ರೆ ಹಾಕಿ, ಶಾಶ್ವತವಾಗಿ ಜೀವಂತವಾಗಿರುವಂತೆ, ವ್ಯವಸ್ಥಿತವಾಗಿ ನಡೆಸಿದ ಹುನ್ನಾರದ ಪರಿಣಾಮವಾಗಿ ಈ ಸಮಾಜ ಎಂದೂ ಒಂದಾಗದಂತಾಯಿತು. ಶಾಸ್ತ್ರೋಕ್ತ ಎಂಬ ಕಾರಣಕ್ಕೆ ಸಮಾಜದ ಕೆಲವು ವರ್ಗಗಳು ನಿರಂತರ ಸುಖಭೋಗಿಗಳಾಗಿಯೂ, ಬಹುಸಂಖ್ಯಾತ ವರ್ಗ ನಿರಂತರ ಶ್ರಮಿಕರಾಗಿ, ಶೋಷಿತರಾಗಿ ಬಾಳಬೇಕಾಯಿತು. ವರ್ಣವ್ಯವಸ್ಥೆ, ಜಾತಿಪದ್ಧತಿ, ಅಸ್ಪೃಶ್ಯತೆಗಳೆಲ್ಲ ಈ ಶಾಸ್ತ್ರಗಳಲ್ಲಿ ಉಲ್ಲೇಖಗೊಂಡಿರುವುದರಿಂದ, ಜನರ ಮನಸ್ಸುಗಳಲ್ಲಿ ಆಳವಾಗಿ ಬೇರು ಬಿಟ್ಟಿವೆ. ಆದ್ದರಿಂದ ಇವುಗಳನ್ನು ನಿರ್ಮೂಲನೆ ಮಾಡಲು ಇಂದಿಗೂ ಸಾಧ್ಯವಾಗುತ್ತಿಲ್ಲ. ಆದ್ದರಿಂದಲೇ ಶಾಸ್ತ್ರಗಳನ್ನು ಕುವೆಂಪು ತಿರಸ್ಕರಿಸುತ್ತಾರೆ. ಯಾವುದೋ ಕಾಲದಲ್ಲಿ ಕೆಲವರ ಅಗತ್ಯಗಳಿಗಾಗಿ, ಸ್ವಾರ್ಥಕ್ಕಾಗಿ ರಚಿಸಲ್ಪಟ್ಟ ಶಾಸ್ತ್ರಗಳನ್ನು ಎಲ್ಲ ಕಾಲಕ್ಕೂ ಅನ್ವಯಿಸುವುದು, ಅವುಗಳ ಪ್ರಕಾರವೇ ನಡೆಯುವುದು ಮೂರ್ಖತನವಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ಅವನದೇ ಆತ್ಮಸಾಕ್ಷಿ ಇರುತ್ತದೆ. ಅವನ ಅಂತರಾತ್ಮದ ಪ್ರೇರಣೆಯಂತೆ ನಡೆದು ಬದುಕನ್ನು ರೂಪಿಸಿಕೊಳ್ಳುವುದು ಬುದ್ಧಿವಂತಿಕೆಯಾಗುತ್ತದೆ ಎಂಬ ಸತ್ಯವನ್ನು ಕುವೆಂಪು ನಿರೂಪಿಸುತ್ತಾರೆ. ಇದನ್ನೇ ಬುದ್ಧರು “ನೀವು ಅದನ್ನು ಎಲ್ಲಾದರೂ ಓದಿರಲಿ. ಯಾರಾದರೂ ಹೇಳಿರಲಿ. ಅಷ್ಟೇ ಏಕೆ ನಾನೇ ಹೇಳಿದರೂ, ಅದು ನಿಮ್ಮ ತರ್ಕ ಮತ್ತು ಸಮಾನ್ಯ ಯುಕ್ತಾಯುಕ್ತ ವಿವೇಚನೆಗೆ ಸಮ್ಮತವಾಗಿಲ್ಲವಾದರೆ ಅದ್ಯಾವುದನ್ನು ನಂಬಬೇಡಿ”[೬] ಎಂದು ಹೇಳಿದ್ದಾರೆ.

ವರ್ಣವ್ಯವಸ್ಥೆ ಜಾತಿಪದ್ಧತಿಗಳ ಪ್ರತಿಪಾದನೆ ಇರುವ ಮನುಧರ್ಮಶಾಸ್ತ್ರವನ್ನು, ಕುವೆಂಪು ವಿಮರ್ಶಿಸುತ್ತಾರೆ. ಮಾನವೀಯತೆಗೆ ಸ್ಥಾನವಿಲ್ಲದ ಧರ್ಮಶಾಸ್ತ್ರದ ಅಗತ್ಯವಿಲ್ಲ, ಸಹಮಾನವರೊಂದಿಗೆ ಬೆರೆಯಲು, ನೊಂದವರ ಕಂಬನಿ ಒರೆಸಲು, ಅವರನ್ನು ಸಂತೈಸಲು, ಅವಕಾಶವೀಯದ ಶಾಸ್ತ್ರದಿಂದ ಲೋಕಕ್ಕೆ ಪ್ರಯೋಜನವಿಲ್ಲ ಇಂತಹ ಮಾನವ ವಿರೋಧಿ ಶಾಸ್ತ್ರಗಳು ತಿರಸ್ಕಾರಾರ್ಹವಾದವುಗಳು. ಶಾಸ್ತ್ರಕಾರರನ್ನು, ಶಾಸ್ತ್ರಗಳನ್ನು ಸುತ್ತಿ ಎಸೆಯುವಂತೆ ಕುವೆಂಪು ಕರೆ ಕೊಡುತ್ತಾರೆ. ಈ ಧರ್ಮಶಾಸ್ತ್ರಗಳಾದರೂ ನಮ್ಮಂತೆ ಸ್ವಾರ್ಥ, ಲೋಭ, ದ್ವೇಷ, ಅಸೂಯೆಯಿಂದ ಕೂಡಿದ ಮಾನವರಿಂದ ರಚಿತವಾದವು. ವೇದ ಶಾಸ್ತ್ರಗಳು ಅಪೌರಷೇಯ ಎಂದು ಹೇಳಿ ಸನಾತನ ಧರ್ಮಕ್ಕೆ ಕೊಡಲಿ ಪೆಟ್ಟು ಹಾಕಿದ್ದಾರೆ. ಹೀಗೆ ಪೌರೋಹಿತ್ಯಶಾಹಿಯ ಭದ್ರಬುನಾದಿಯಾದ ಮನುಧರ್ಮಶಾಸ್ತ್ರವನ್ನು ಅಲಾಡಿಸುವ ವೈಚಾರಿಕತೆಯನ್ನು ಕುವೆಂಪು ಮಂಡಿಸುತ್ತಾರೆ. ಮತಾಂಧತೆ ಮತ್ತು ಪರೋಹಿತಶಾಹಿ ಇರುವೆಡೆ ವೈಚಾರಿಕತೆಗೆ ವೈಜ್ಞಾನಿಕತೆಗೆ ಜಾಗವಿಲ್ಲ. ಇವುಗಳ ಪ್ರಾಬಲ್ಯವಿರುವ ಸಮಾಜ ಪ್ರತಿಗಾಮಿಯಾಗಿರುತ್ತದೆ. ಪುರೋಹಿತ ವರ್ಗ ಎಲ್ಲ ಮತಗಳಲ್ಲಿಯೂ ಇರುವುದರಿಂದ ಯಾವುದೇ ಒಂದು ಮತದವರಿಗೆ ಮಾತ್ರ ಅವರು ಸಂದೇಶ ನೀಡಿಲ್ಲ. ಪುರೋಹಿತಶಾಹಿ ಮತ್ತು ಮತ ಇವುಗಳ ಆಶ್ರಯ ತಾಣಗಳು ಗುಡಿ, ಚರ್ಚು, ಮಸೀದಿ ಮುಂತಾದ ಧಾರ್ಮಿಕ ಕೇಂದ್ರಗಳು ಆದ್ದರಿಂದ ಇವುಗಳು ಸಾಂಸ್ಥಿಕವಾಗಿರುವವರೆಗೆ ಜನರಲ್ಲಿ ವೈಚಾರಿಕತೆ ಬರಲು ಸಾಧ್ಯವಿಲ್ಲ. ವೈಚಾರಿಕತೆ, ವೈಜ್ಞಾನಿಕತೆಗಳನ್ನು ಅಳವಡಿಸಿಕೊಳ್ಳದ ರಾಷ್ಟ್ರ ಪ್ರಗತಿ ಹೊಂದಲು ಸಾಧ್ಯವಿಲ್ಲ. ಆದ್ದರಿಂದ ಕುವೆಂಪು ಕೆಳಗಿನ ಗೀತೆಯ ಮೂಲಕ ಎಲ್ಲ ಧರ್ಮಗಳ ಚೌಕಟ್ಟುಗಳನ್ನು ಮೀರಬೇಕೆಂದು ಕರೆ ನೀಡಿದ್ದಾರೆ.

“ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ,
ಬಡತನವ ಬುಡಮಟ್ಟ ಕೀಳಬನ್ನಿ,
ಮೌಢ್ಯತೆಯ ಮಾರಿಯನು ಹೊರದೊಡಲ್ಕೆ ತನ್ನಿ,
ವಿಜ್ಞಾನ ದೀವಿಗೆಯ ಹಿಡಿದು ಬನ್ನಿ,
ಓ, ಬನ್ನಿ, ಸೋದರರೆ, ಬೇಗಬನ್ನಿ!
ಅದೊ ನೋಡಿ, ರಷ್ಯಾ ಜಪಾನು ತುರ್ಕಿಗಳೆಲ್ಲ
ಪರೆಗಳಚಿ ಹೊರಟಿಹವು ಹೊಸಪಯಣಕೆ.
ಬೆಳಗಿಹರು ನೆತ್ತರೆಣ್ಣೆಯ ತಿಳಿವಿನುರಿಯಲ್ಲಿ
ಕಿಚ್ಚಿಟ್ಟು ಹಳೆಕೊಳಕು ಬಣಗು ತೃಣಕೆ.
ಓ, ಬನ್ನಿ, ಸೋದರರೆ, ರಾಷ್ಟ್ರರಣಕೆ!
ಸಿಲುಕದಿರಿ ಮತವೆಂಬ ಮೋಹದ ಜ್ಞಾನಕ್ಕೆ;
ಮತಿಯಿಂದ ದುಡಿಯಿರೈ ಲೋಕಹಿತಕೆ.
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ.
ಓ, ಬನ್ನಿ, ಸೋದರರೆ, ವಿಶ್ವ ಪಥಕೆ!”[೭]

ಕುವೆಂಪು ಮತದ ವಿಕೃತಿಯನ್ನು ಕುರಿತು ಮಂಡಿಸಿರುವ ವಿಚಾರಗಳು ಮೌಲಿಕವಾಗಿವೆ. ಯುವ ಜನರಿಗೆ ಮಾರ್ಗದರ್ಶನವಾಗಿವೆ. ಸರ್ವಕಾಲಿಕ ಬೆಲೆಯುಳ್ಳ ನುಡಿಗಳಾಗಿವೆ. “ಮತ ನಮಗೊಂದು ದೊಡ್ಡ ಬಂಧನವಾಗಿದೆ; ನಾಡಿನ ಏಳ್ಗೆಯ ಕುತ್ತಿಗೆಗೆ ಉರುಳಾಗಿದೆ. ಪರಮಶಾಂತಿಯೂ ಪರಮಾನಂದವೂ ಆಗಿರುವ ಪರಮೇಶ್ವರನನ್ನು ಪಡೆಯಲೆಂದು ಜೀವನ ಮಾಡುವ ಪ್ರಯತ್ನವೆ ಮತದ ನಿಜಾವಸ್ಥೆ. ಆದರೆ ಈಗ ನಾವು ಮತ ಎಂದು ಕರೆದುಕೊಳ್ಳುವ ಆಚಾರ ಸಮೂಹ ಬರಿಯ ಸಾಮಾಜಿಕವಾದ ಕಟ್ಟುಕಟ್ಟಳೆಗಳ ಕಾಟವಾಗಿದೆ. ಒಬ್ಬರನ್ನೊಬ್ಬರು ಮುಟ್ಟದಿರುವುದನ್ನು, ನೋಡದಿರುವುದು; ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು; ನಾಮ ಹಾಕಿಕೊಳ್ಳುವುದು; ಕೆಲವರನ್ನು ಸಾರ್ವಜನಿಕವಾದ ಬಾವಿಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು; ಕೆಲವರನ್ನು ದೇವಸ್ಥಾನದೊಳಕ್ಕೆ ಸೇರಿಸದಿರುವುದು; ಮತ್ತೆ ಕೆಲವರನ್ನು ಗುಡಿಯೊಳಗೆ ಹತ್ತು ಮಾರು ಮಾತ್ರ ಬರಗೊಡಿಸುವುದು; ಹಾಗೆ ಬರಗೊಡಿಸಬೇಕೇ ಬೇಡವೇ ಎಂದು ಚರ್ಚೆ ನಡೆಸುವುದು; ಇತ್ಯಾದಿ ಕೆಲಸಕ್ಕೂ ಬಾರದ, ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ ವ್ಯವಹಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ. ಉಪನಿಷತ್ತು, ಭಗವದ್ಗೀತೆ ಮತ್ತು ಮಹಾವಿಭೂತಿಗಳು ಸಾರಿದ ಮತ್ತು ಸಾರುತ್ತಿರುವ ಅಮೃತ ಸಂದೇಶ ಅರಣ್ಯರೋದನವಾಗಿದೆ”.[೮] ಈ ರೀತಿ ಮತದ ಕಾರಣದಿಂದ ನಮ್ಮ ಸಮಾಜ ಅನಾಗರಿಕವಾಗಿ ಅಧೋಗತಿಗಿಳಿದಿರುವುದನ್ನು ಕುವೆಂಪು ಮನಗಾಣಿಸಿದ್ದಾರೆ. ಇಲ್ಲೆಲ್ಲ ಅವರ ಸಾಮಾಜಿಕ ಕಳಕಳಿ ಹಾಗೂ ಇಂತಹ ಕ್ರೂರ ವ್ಯವಸ್ಥೆಯನ್ನು ಬದಲಾಯಿಸುವ ಇಲ್ಲವೆ ಸುಧಾರಿಸುವ ಆಶಯವನ್ನು ಕಾಣಬಹುದು.

"ದಿಗಂತದಿಂದೆ ದಿಗಂತಕೆ ಹಬ್ಬಿದೆ
ವಿಶ್ವವ ತಬ್ಬಿದೆ, ರುಂದ್ರರಾತ್ರಿ
ಸಾಂದ್ರ ತಮಂಧದಿ ಮುಳುಮುಳುಂಗುತೆ ಕರಂಗಿದೋಲಿದೆ ಧಾತ್ರಿ!
ವಿಶಾಲ ವ್ಯೋಮಾದಿ ತಾರೆಗಳಿಲ್ಲ, ಶಶಿಯಿಲ್ಲ, ಕಾಂತಿಯ ಕಣವಿಲ್ಲ!
ಜಗತ್ತು ಪ್ರಜ್ಞೆಯಿಲ್ಲದೆ ಶೂನ್ಯಮಹಾಶವ ಬಿದ್ದವೊಲಿದ್ದತ್ತು
ಹುಸಿಮಮತೆ, ಇಂದ್ರಿಯ ಲೋಲುಪತೆ,
ಮೌಢ್ಯದ ಸಂತೃಪ್ತಿ, ಅಜ್ಞಾನದ ಸುಪ್ತಿ;
ಭಕ್ತಿಯ ಹೆಸರನು ಧರಿಸುತೆ ಮರೆಯುವ ಚಿತ್ತದ ದಾಸ್ಯ;
ದೇವರ ಗುಡಿ ಎಂಬುವ ಸೆರೆಯಲ್ಲಿ
ಸ್ವಾತಂತ್ರ್ಯದ ಶವಸಂಸ್ಕಾರದ ಪರದೆಯ ಮರೆಯಲ್ಲಿ
ಪೂಜೆಯ ನಕಲಿಯ ಪರಿಹಾಸ್ಯ!
ಶಾಸ್ತ್ರದ ಆಚಾರದ ಧರ್ಮದ ಕಬ್ಬಿಣನೇಣು,
ಸಿಲುಕಿಹುದದರಲಿ ಮಾನವನಮೃತಾತ್ಮದ ಗೋಣು!
ಕಟ್ಟ ಕಡೆಯಲ್ಲಿ ದೇವರ ಗುಡಿಯಲ್ಲಿ
ಪೂಜಾರಿಯೇ ದಿಟದ ನಿವಾಸಿ; ದೇವರೆ ಪರದೇಶಿ!"[೯]

ವೈದಿಕ ಪುರೋಹಿತ ವರ್ಗವು ವ್ಯಕ್ತಿಗಳ ಆಧ್ಯಾತ್ಮ ಸಾಧನೆಗೆ ಅಡ್ಡಿಯಾಗಿರುವುದನ್ನು ಕುವೆಂಪು ಈ ಕವನದಲ್ಲಿ ಚಿತ್ರಿಸಿದ್ದಾರೆ. ದೇವರು ಭಕ್ತರ ನಡುವೆ ನೇರ ಅನುಸಂಧಾನವಾಗದಂತೆ ಇವರ ನಡುವೆ ದಲ್ಲಾಳಿಯಾಗಿ ಪೂಜಾರಿ ಕೆಲಸ ಮಾಡುತ್ತಾನೆ. ಪೂಜಾರಿಯ ಕಾರುಬಾರಿನಿಂದ ದೇವರೆ ಪರದೇಶಿಯಾಗಿರುವುದು ತಿಳಿಯುತ್ತದೆ. ಜಗತ್ತು ಅಂಧಕಾರದಲ್ಲಿ ಮುಳುಗಿ ಅಜ್ಞಾನದಿಂದ ಮೌಢ್ಯದಿಂದ ತುಂಬಿದೆ ಎಂಬುದನ್ನು ಹುಸಿಮಮತೆ, ಚಿತ್ತದ ದಾಸ್ಯ, ದೇವರ ಗುಡಿ ಎಂಬ ಸೆರೆಯಲ್ಲಿ ಸ್ವಾತಂತ್ರ್ಯದ ಶವ, ಮಾನವನ ಅಮೃತಾತ್ಮದ ಗೋಣು, ಇಂದ್ರಿಯ ಲೋಲುಪತೆ, ಮೌಢ್ಯದ ಸಂತೃಪ್ತಿ, ಅಜ್ಞಾನದ ಸುಪ್ತಿ ಎಂಬ ರೂಪಕಗಳಿಂದ ಕುವೆಂಪು ಚಿತ್ರಿಸಿದ್ದಾರೆ. ಈ ಎಲ್ಲ ರೂಪಕಗಳು ಭಾರತದ ಸಮಾಜ ವೈದಿಕ ಪುರೋಹಿತಶಾಹಿ ವ್ಯವಸ್ಥೆಯಡಿಯಲ್ಲಿ ನಲುಗುತಿರುವುದನ್ನು ಪ್ರತಿನಿಧಿಸುತ್ತವೆ. ಇಂತಹ ಲೋಕವನ್ನು ಬೆಳಕಿನೆಡೆಗೆ ಸಾಗಿಸಲು ಹುಟ್ಟಿಬಂದ ಮಹಾಪುರುಷರನ್ನು, ಅವರ ತತ್ವಗಳನು ವೈದಿಕ ಮತ ನಾಶ ಮಾಡಿರುವುದನ್ನು ಹಾಗೂ ಮಹಾಪುರುಷರೆಲ್ಲರ ಸಂದೇಶಗಳು ಪುರೋಹಿತರ ಮಂತ್ರಘೋಷದಲ್ಲಿ ಅಡಗಿ ಹೋಗಿರುವುದನ್ನು ಕುವೆಂಪು ಸಂಕೇತಿಸುತ್ತಾರೆ. ಪುರೋಹಿತ ವರ್ಗದ ಪ್ರಾಬಲ್ಯದಿಂದ ಲೋಕ ಪುನಃ ಯಥಾಸ್ಥಿತಿಗೆ ಮರುಳುತ್ತದೆಂದು ಕವನದ ಕೊನೆಯಲ್ಲಿ ನಿರೂಪಿಸಿದ್ದಾರೆ. ಧಾರ್ಮಿಕ ಏಕಸ್ವಾಮ್ಯದ ಪರಿಣಾಮವಾಗಿ ಸಮಾಜ ಪೌರೋಹಿತ್ಯಶಾಹಿಯ ಹಿಡಿತದಲ್ಲಿ ಶೋಷಣೆಯನ್ನು ಅನುಭವಿಸುತ್ತಾ ನರಳುತ್ತಲೇ ಇರುತ್ತದೆಂಬ ನಿರಾಶವಾದ ಕೊನೆಯಲ್ಲಿದೆ. ಆದರೂ ಈ ಕವನದ ಉದ್ದೇಶ ಸಾಮಾಜಿಕ ಜಾಗೃತಿ. ಎಲ್ಲಿಯವರಿಗೆ ಈ ಲೋಕ ಪುರೋಹಿತಶಾಹಿಯ ಹಿಡಿತದಲ್ಲಿರುತ್ತದೆಯೋ ಅದುವರೆಗೂ ಮುಕ್ತಿ ಸಾಧ್ಯವಿಲ್ಲ ಎಂದು ಕುವೆಂಪು ಎಚ್ಚರಿಕೆಯನ್ನು ನೀಡಿದ್ದಾರೆ.

"ದೇವರು ಸೆರೆಯಾಳ್, ದೇಗುಲ ಸೆರಮನೆ, ಕಾವಲು ಪೂಜಾರಿ!
ನೀನಾವಾಗಲು ನನ್ನಯ ಬಿಳಿಯಿರೆ, ಬಲು ತೊಂದರೆ ಎಂದು
ಗಿರಿ ಶಿಖರದೊಳತಿದೂರದಿ ಕಟ್ಟಿದೆ, ಗುಡಿಯನು ನಿನಗೊಂದು;
ಕಲ್ಲಿನ ಗೋಪುರ, ಕಲ್ಲಿನ ಗೋಡೆ, ದುರ್ಗದವೊಲೆ ಬಲು ದುರ್ಗಮ ನೋಡೆ!
ಸೆರೆಯನು ತಪ್ಪಿಸಿಕೊಳ್ಳದ ತೆರದಲಿ, ಅರ್ಚಕ ರಕ್ಷೆಯಿದೆ;
ತೆಂಗಿನ ಕಾಯೊಳೆ ತಲೆಯನು ಬಡಿಯುವ, ಪೂಜೆಯ ಶಿಕ್ಷೆಯಿದೆ!
ಪುರಸತ್ತಾದರೆ ಕೆಲಸದೊಳಿಲ್ಲಿ, ಬೇಸರ ಪರಿಹಾರಕ್ಕೆ ಬಹೆನಲ್ಲಿ!"[೧೦]

ಪುರೋಹಿತಶಾಹಿ ವರ್ಗ ಮಾನವರ ಮನಸ್ಸುಗಳನ್ನು ಮಾತ್ರವಲ್ಲದೆ ದೇವರನ್ನು ಬಂಧಿಸಿಟ್ಟಿದೆ ಎಂಬುದನ್ನು ಈ ಕವನದಲ್ಲಿ ಕುವೆಂಪು ಹೇಳುತ್ತಾರೆ. ಪುರೋಹಿತರು ತಮ್ಮ ಸ್ವಾರ್ಥಕ್ಕಾಗಿ ದೇವರನ್ನು ಉಪಯೋಗಿಸಿಕೊಂಡಿರುವುದನ್ನು ಕುವೆಂಪು ತಿಳಿಸಿದ್ದಾರೆ. ಸಾಮಾಜಿಕ, ಧಾರ್ಮಿಕ ಚಲನವಲನಗಳನ್ನು ಹಾಗೂ ಅದರ ಪ್ರವಾಹ ಗತಿಯನ್ನು ಪುರೋಹಿತ ವರ್ಗ ಸ್ಥಗಿತಗೊಳಿಸಿದೆ ಎಂಬುದನ್ನು ಮತ್ತು ಈ ವರ್ಗದ ಕುಹಕ ಕಪಟಗಳನ್ನು ಕುವೆಂಪು ತೀಕ್ಷ್ಣವಾಗಿ, ಕಟುವಾಗಿ ನಿಷ್ಠುರವಾಗಿ ಖಂಡಿಸುತ್ತಾರೆ. ಪುರೋಹಿತಶಾಹಿಯ ಪ್ರಾಬಲ್ಯ ಮತ್ತು ಮತ ಮೌಢ್ಯತೆಯಿಂದಾಗಿ ಆಗುವ ಕೆಟ್ಟ ಪರಿಣಾಮಗಳನ್ನು ಕಾವ್ಯದಲ್ಲಿ ಮಾತ್ರವಲ್ಲದೆ ಕತೆ, ಕಾದಂಬರಿ ಮತ್ತು ವೈಚಾರಿಕ ಲೇಖನಗಳಲ್ಲಿಯೂ ಮಂಡಿಸಿದ್ದಾರೆ. 'ಶೂದ್ರತಪಸ್ವಿ'ಯಲ್ಲಿ ಪುರೋಹಿತರ ಕುತಂತ್ರ ಹಾಗೂ 'ರಾಮಾಯಣ ದರ್ಶನಂ'ದಲ್ಲಿ ಲಿಂಗ ಸಮಾನತೆಯನ್ನು ಪ್ರತಿಪಾದಿಸಿ ವೈಚಾರಿಕ ನೋಟವನ್ನು ಬೀರಿದ್ದಾರೆ. ಪುರೋಹಿತರ ಸುಲಿಗೆಕೋರತನವನ್ನು ಅವರ ಕತೆ 'ಧನ್ವಂತರಿಯ ಚಿಕಿತ್ಸೆ' ಎಂಡಬಿಸುತ್ತದೆ. ಇಲ್ಲಿ ಬರುವ ವಿಶ್ವಾಮಿತ್ರ ಪರಶುರಾಮರು ಭೂಲೋಕಕ್ಕೆ ಬಂದು ದೇವಾಲಯವೊಂದರಲ್ಲಿ ಪೂಜಾರಿ ಮಾಡುತ್ತಿದ್ದ ಭಕ್ತರ ಸುಲಿಗೆಯನ್ನು ಕಂಡು ಈ ವಿಷಯ ಕುರಿತು ಸಂಭಾಷಣೆ ನಡೆಸುತ್ತಾರೆ. ಈ ಪ್ರಸಂಗ ಈಗಿನ ಕಾಲಕ್ಕೂ ಪ್ರಸ್ತುತವಾಗುವಂತೆ ಕುವೆಂಪು ಚಿತ್ರಿಸಿದ್ದಾರೆ. ಕುವೆಂಪು ಅವರ ಕಾದಂಬರಿ 'ಕಾನೂರು ಹೆಗ್ಗಡತಿ' ನಾಟಕ 'ಜಲಗಾರ' ಇವುಗಳಲ್ಲಿ ಪುರೋಹಿತಶಾಹಿಯ ಸುಲಿಗೆಕೋರತನವನ್ನು ಬಿಂಬಿಸಿದ್ದಾರೆ. ಕಾದಂಬರಿಯಲ್ಲಿ ಹಳ್ಳಿಗರ ಮೌಢ್ಯವನ್ನೇ ತನ್ನ ಸಂಪಾದನೆಯ ಬಂಡವಾಳವನ್ನಾಗಿ ಮಾಡಿಕೊಂಡು ಸಮಾಜವನ್ನು ವಂಚಿಸಿ ಬದುಕುತ್ತಿರುವ ಪುರೋಹಿತಶಾಹಿ ವರ್ಗದ ಚಿತ್ರಣವಿದೆ. ಪುರೋಹಿತರು ಯಾವ ಯಾವ ವಿಧಾನಗಳಲ್ಲಿ ಜನರನ್ನು ಸುಲಿಗೆ ಮಾಡುತ್ತಿದ್ದಾರೆಂಬುದನ್ನು ಪ್ರಸ್ತಾಪಿಸಿ ಖಂಡಿಸಿದ್ದಾರೆ.

ಒಟ್ಟಿನಲ್ಲಿ ಜನಸಾಮಾನ್ಯರ ಮೌಢ್ಯತೆ ಮತ್ತು ಅಜ್ಞಾನಗಳನ್ನು ದುರುಪಯೋಗಪಡಿಸಿಕೊಂಡ ಪುರೋಹಿತಶಾಹಿಯನ್ನು "ಕಲ್ಲಿನಿಂದ ಹೊಡೆದರೆ ಸಾಲದು ಗುಂಡೇಟಿನಿಂದ ಒಂದೇ ಏಟಿಗೆ ಹೊಡೆದು ಹಾಕಬೇಕೆಂದು"[೧೧] ಕುವೆಂಪು ಯುವಕರಿಗೆ ಕರೆ ಕೊಟ್ಟಿದ್ದಾರೆ. 'ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ', ಎಂಬ ಲೇಖನದಲ್ಲಿ ತರುಣರನ್ನು ಕುರಿತು ಮಾತನಾಡುತ್ತ, ಕುವೆಂಪು ಪುರೋಹಿತಶಾಹಿಯ ವಿರುದ್ಧ ವಾಗ್ದಾಳಿ ಮಾಡಿರುವುದನ್ನು ಗಮನಿಸಬಹುದು. "ಶೂದ್ರರನ್ನು ಗುಲಾಮರನ್ನಾಗಿ ಮಾಡಿ ಮೂಢ

ಪಶುಗಳಿಗಿಂತಲೂ ಕೀಳು ಮಟ್ಟದಲ್ಲಿಟ್ಟು, ಅವರ ದುಡಿಮೆಯಿಂದ ತಾವು ಸುಖಭೋಗಿಗಳಾಗಿರುವ ಆಚಾರ್ಯನಾಮಕ ನೀಚರನ್ನು ವಿಚಾರ ವೇದಿಕೆಯ ಸಾಕ್ಷಿ ಪೆಟ್ಟಿಗೆಯಲ್ಲಿ ನಿಲ್ಲಿಸುವ ಧೈರ್ಯ ದೃಢತೆಗಳನ್ನು ನಮ್ಮ ತರುಣರಿಗೆ ಕಲಿಸಬೇಕು. ಯುವಕರೇ ಒಂದು ಕಡೆ ಸೇರಿ ಚರ್ಚೆ ಮಾಡಿ ಸ್ವತಂತ್ರ ನಿರ್ಣಯ ತೆಗೆದುಕೊಳ್ಳುವುಂತಾಗಬೇಕು. ಹಳೆಯಶಾಸ್ತ್ರ, ಬೂಸಲು ಧರ್ಮ, ಕೇಡಿ ಜಗದ್ಗುರು, ಸ್ವಾರ್ಥಶೀಲ ಆಚಾರ್ಯ ಇವರನ್ನೆಲ್ಲ ಮುಲಾಜಿಲ್ಲದೆ ದಿಕ್ಕರಿಸುವಂತಾಗಬೇಕು".[೧೨] ಈ ರೀತಿ ಕುವೆಂಪು ಪುರೋಹಿತಶಾಹಿಯ ವಿರುದ್ಧ ತಮ್ಮ ಸಾಹಿತ್ಯದ ಮೂಲಕ ಬಂಡೆದ್ದಿದ್ದಾರೆ. ಅವರ ಹೋರಾಟಕ್ಕೆ ಪೂರಕವಾಗಿ ಕ್ರಿಯಾತ್ಮಕವಾದ ಚಳುವಳಿಯೊಂದು ರೂಪುಗೊಂಡು ಸಮಷ್ಟಿಯ ಬೆಂಬಲ ದೊರೆಯದಿರುವುದು ವಿಷಾಧನೀಯ ಸಂಗತಿ. ಕುವೆಂಪು ಅವರ ವಿರೋಧ ಬ್ರಾಹ್ಮಣಶಾಹಿಯನ್ನು ಕುರಿತದ್ದೇ ಹೊರತು ವ್ಯಕ್ತಿಗತವಾಗಿ ಬ್ರಾಹ್ಮಣರನ್ನು ಕುರಿತು ಅಲ್ಲ ಎಂಬುದನು ಅರಿಯಬೇಕು. ಹುಟ್ಟಿನಿಂದ ಬ್ರಾಹ್ಮಣನಾಗಿದ್ದು ಉನ್ನತ ವ್ಯಕ್ತಿತ್ವ, ಗುಣ ಸ್ವಭಾವ ಹೊಂದಿದ್ದ ವ್ಯಕ್ತಿಗಳ ಬಗೆಗೆ ಅವರಿಗೆ ತುಂಬಾ ಗೌರವಭಾವ ಇತ್ತೆಂಬುದಕ್ಕೆ ನಿದರ್ಶನಗಳಿವೆ. ಹಾಗಾಗಿ ಕುವೆಂಪು ಅವರ ವಿಚಾರಗಳನ್ನು ವ್ಯಕ್ತಿಗತ ನೆಲೆಯಲ್ಲಿ ವಿಶ್ಲೇಷಿಸುವುದು ಅವರಿಗೆ ಬಗೆದ ಅಪಚಾರವಾಗುತ್ತದೆ.

ಹೀಗೆ ಕುವೆಂಪು ಸಾಲಿನವರೆಗೂ ಸಂಪ್ರದಾಯದ ಹೆಸರಿನಲಿ ಮೌಢ್ಯವನ್ನು ಭಿತ್ತಿ ಜನರ ಮೇಲೆ ಅನ್ಯಾಯವೆಸಗುವ ಪರಂಪರೆಯನ್ನು ಬುದ್ಧ, ಬಸವಣ್ಣ, ಅಂಬೇಡ್ಕರ್, ಪೆರಿಯಾರ್, ನಾರಾಯಣ ಗುರು, ಫುಲೆ ದಂಪತಿಗಳು, ಶಾಹೂ ಮಹಾರಾಜ ಮುಂತಾದವರು ಕಾಲಕಾಲಕ್ಕೆ ಖಂಡಿಸುತ್ತ ಬಂದಿದ್ದಾರೆ. ಇವರೆಲ್ಲರ ಆಲೋಚನೆಗಳು ಸಂಪೂರ್ಣವಾಗಿ ಜನರಿಗೆ ತಲುಪಿಸಲು ಯಶಸ್ವಿಯಾಗಿದಿದ್ದರೇ ಸಮಾಜ ಇಂದು ಬೇರೊಂದು ದಿಕ್ಕಿನಲ್ಲಿ ನಡೆಯುತ್ತಿತ್ತು. ಜನರಲ್ಲಿ ಬೇರುಬಿಟ್ಟ ಮೌಢ್ಯಗಳು ತೊಲಗಿ ವೈಜ್ಞಾನಿಕ ಮನೋವೃತ್ತಿ ಬೆಳೆಯಲ್ಲಿ ಎಂದು ಕುವೆಂಪು ಅವರಂತೆ ಸಮಾಜ ಸುಧಾರಕರು ಪ್ರಯತ್ನಿಸಿದ್ದಾರೆ. ಆದರೆ ಇವತ್ತಿಗೂ ಮೌಢ್ಯಗಳು ಮುಕ್ತವಾಗಿಲ್ಲದ ಕಾರಣ ಕುವೆಂಪು ಅವರ ವಿಚಾರಗಳು ಜನಮನದಲ್ಲಿ ಉಳಿಯುವಂತೆ ಮಾಡಬೇಕಾಗಿದೆ. ಇದಕ್ಕೆ ವಿಜ್ಞಾನದ ಕಡೆ ಮುಖ ಮಾಡಬೇಕಾಗಿದೆ. ಅದಕ್ಕಾಗಿ ಗೋಪಾಳ್ ಗಣೇಶ್ ಅಗರಕರ್ ಹೇಳುವಂತೆ "ವಿಜ್ಞಾನವನ್ನು ಮುನ್ನಡೆಸುವುದಷ್ಟೇ ಸಾಕಾಗುವುದಿಲ್ಲ. ನಾವು ಅದನ್ನು ನಿರ್ಭೀತಿಯನ್ನು ಜಾರಿಗೆ ತರಬೇಕು"[೧೩] ಎಂಬುದನ್ನು ಮರೆಯಬಾರದು. ಆದರೂ ಕುವೆಂಪು ಮತ್ತು ಸುಧಾರಕರ ಹೆಸರಿನಲ್ಲಿ ಸಂಘಟನೆಗಳು, ಪ್ರತಿಷ್ಠಾನಗಳು, ಚಟುವಟಿಕೆಗಳು ನಡೆಯುತ್ತಿವೆಯಾದರೂ ಸಮಾಜ ಮೌಢ್ಯ ಮುಕ್ತವಾಗದೇ ಇಂತಹ ಚಿಂತಕರ ವೈಚಾರಿಕ ಚಿಂತನೆ ಮೂಲೆಗುಂಪಾಗಿದ್ದು ಏಕೆ? ಎಂದು ಆಲೋಚಿಸಬೇಕಾಗಿದೆ. ನಮ್ಮ ಕ್ರಿಯೆ ಹಾಗೂ ಚಿಂತನೆ ಈ ದಿಕ್ಕಿನಲ್ಲಿ ಸಾಗಿದರೆ ಮಾತ್ರ ಕುವೆಂಪು ಮತ್ತು ವಿವಿಧ ಚಿಂತಕರು ಉಳಿಯುತ್ತಾರೆ; ಜೀವಂತವಾಗಿ ಕಣ್ಮುಂದಿರುತ್ತಾರೆ.

**ಅಡಿಟಿಪ್ಪಣಿಗಳು:**

೧. ಅಬ್ದುಲ್ ರೆಹಮಾನ್ ಪಾಷ, ವೈಜ್ಞಾನಿಕ ಮನೋವೃತ್ತಿ ಸ್ವತಂತ್ರ ಮಾನವನ ಚೇತನ, ಪುಟ-೦೩
೨. ಅದೇ, ಪುಟ-೦೫
೩. ರಾಜೇಂದ್ರ ಎಸ್, ಗಡಾದ, ಕುವೆಂಪು ಕೃತಿನೋಟ, ಪುಟ-೨೬
೪. ಕುವೆಂಪು, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪುಟ-೨೧, ೨೨
೫. ಬರಗೂರು ರಾಮಚಂದ್ರಪ್ಪ, ಸೌಹಾರ್ದ ಸಂಕೇತ ಸ್ವಾಮಿ ವಿವೇಕಾನಂದ, ಪುಟ-೧೨
೬. ಅಬ್ದುಲ್ ರೆಹಮಾನ್ ಪಾಷ, ವೈಜ್ಞಾನಿಕ ಮನೋವೃತ್ತಿ ಸ್ವತಂತ್ರ ಮಾನವನ ಚೇತನ, ಪುಟ-೦೩
೭. ಕುವೆಂಪು, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪುಟ-೨೩, ೨೪
೮. ಪ್ರಧಾನ ಗುರುದತ್ತ, ಕುವೆಂಪು ಸಂಚಯ, ಪುಟ-೭೦೯
೯. ಕುವೆಂಪು, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪುಟ-೫೫, ೫೬
೧೦. ಅದೇ, ಪುಟ-೫೭
೧೧. ಕುವೆಂಪು, ವಿಚಾರ ಕ್ರಾಂತಿಗೆ ಆಹ್ವಾನ, ಪುಟ-೭೩
೧೨. ಪ್ರಧಾನ ಗುರುದತ್ತ, ಕುವೆಂಪು ಸಂಚಯ, ಪುಟ-೭೩೩
೧೩. ಅಬ್ದುಲ್ ರೆಹಮಾನ್ ಪಾಷ, ವೈಜ್ಞಾನಿಕ ಮನೋವೃತ್ತಿ ಸ್ವತಂತ್ರ ಮಾನವನ ಚೇತನ, ಪುಟ-೧೯

**ಆಕರಸೂಚಿ:**

೧. ಕುವೆಂಪು, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪಬ್ಲಿಷಿಂಗ್ ಹೌಸ್, ಮೈಸೂರು, ೧೯೪೪
೨. ಕುವೆಂಪು, ವಿಚಾರ ಕ್ರಾಂತಿಗೆ ಆಹ್ವಾನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೭
೩. ಕುವೆಂಪು, ಪಾಂಚಜನ್ಯ, ಉದಯರವಿ ಪ್ರಕಾಶನ, ಮೈಸೂರು, ೧೯೯೯

**ಪರಾಮರ್ಶನ ಗ್ರಂಥಗಳು:**

೧. ಅಬ್ದುಲ್ ರೆಹಮಾನ್ ಪಾಷ, ವೈಜ್ಞಾನಿಕ ಮನೋವೃತ್ತಿ ಸ್ವತಂತ್ರ ಮಾನವನ ಚೇತನ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು, ೨೦೧೮
೨. ಕುವೆಂಪು, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪಬ್ಲಿಷಿಂಗ್ ಹೌಸ್, ಮೈಸೂರು, ೧೯೪೪
೩. ಕುವೆಂಪು, ವಿಚಾರ ಕ್ರಾಂತಿಗೆ ಆಹ್ವಾನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೭
೪. ಕುವೆಂಪು, ಪಾಂಚಜನ್ಯ, ಉದಯರವಿ ಪ್ರಕಾಶನ, ಮೈಸೂರು, ೧೯೯೯
೫. ಪ್ರಧಾನ ಗುರುದತ್ತ, ಕುವೆಂಪು ಸಂಚಯ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೦೯
೬. ಬರಗೂರು ರಾಮಚಂದ್ರಪ್ಪ, ಸೌಹಾರ್ದ ಸಂಕೇತ ಸ್ವಾಮಿ ವಿವೇಕಾನಂದ, ಜನ ಪ್ರಕಾಶನ, ಬೆಂಗಳೂರು, ೨೦೧೮
೭. ರಾಜೇಂದ್ರ ಎಸ್, ಗಡಾದ, ಕುವೆಂಪು ಕೃತಿನೋಟ, ಸಂಗಮ ಪ್ರಕಾಶನ, ಗದಗ, ೨೦೦೪
೮. ಹಳ್ಳಿ ನಾಗರಾಜ್, ಆರ್, ಜಿ., ಕುವೆಂಪು ಶತಮಾನದ ಶಿಖರ, ಅನ್ವೇಷಣೆ ಪ್ರಕಾಶನ, ಬೆಂಗಳೂರು, ೨೦೧೦

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಕುವೆಂಪು ಸಾಹಿತ್ಯದಲ್ಲಿ ರಾಷ್ಟ್ರೀಯತೆ

ಲೇ: ಡಾ.ಶೀಲಾಕುಮಾರಿ ದಾಸ
ಪ್ರಾಚಾರ್ಯರು, ಸಹಪ್ರಾಧ್ಯಾಪಕರು,
ಕನ್ನಡವಿಭಾಗ
ಬಿ. ಆರ್. ಬಿ. ವಾಣಿಜ್ಯಮಹಾವಿದ್ಯಾಲಯ
ರಾಯಚೂರು.

ಕನ್ನಡದ ಸಾಹಿತ್ಯ ಪರಂಪರೆಯನ್ನು ದೀರ್ಘವಾಗಿ ಅವಲೋಕಿಸಲಾಗಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ಕುವೆಂಪು ಅವರ ಕೊಡುಗೆ ಅನುಪಮವಾದದ್ದು. ಅವರು ಕವಿತೆ, ಕಾದಂಬರಿ, ನಾಟಕ, ವಿಮರ್ಶೆ, ಕಾದಂಬರಿ, ಮಹಾಕಾವ್ಯ ಮುಂತಾದ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿ ಕನ್ನಡ ಸಾರಸ್ವತ ಲೋಕಕ್ಕೆ ಅನುಪಮ ಕಾಣಿಕೆ ನೀಡಿದ್ದಾರೆ.

ತಾಯಿ, ಭೂಮಿತಾಯಿ ನಮಗೆ ಸ್ವರ್ಗಕ್ಕಿಂತ ಮಿಗಿಲು. ಯಾಕೆಂದರೆ ತಾಯಿ ಜನ್ಮ ನೀಡಿದರೆ ಭೂಮಿತಾಯಿ ಅನ್ನ ಮಾನ, ರಕ್ಷಣೆ ನೀಡುತ್ತಾಳೆ. ಆದ್ದರಿಂದ "ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎಂದು ಹೇಳಲಾಗಿದೆ. ಈ ತರಹದ ನೆಲದಲ್ಲಿ ಅನೇಕ ಜನಾಂಗಗಳು ಸುಖ ದುಃಖವನ್ನು ಸಮನ್ವಯಗೊಳಿಸಿಕೊಂಡು ಒಂದು ಎಲ್ಲೆಯಲ್ಲಿ ಬದುಕಿದಾಗ ಆ ಎಲ್ಲೆಯಲ್ಲಿ ಇರುವ ಪ್ರದೇಶವನ್ನು ರಾಜ್ಯ, ರಾಷ್ಟ್ರ ಎಂದು ಗುರುತಿಸಲಾಗುತ್ತದೆ. ಅವರೆಲ್ಲಾ ಒಂದೆ ಜನಾಂಗದವರಾಗಿರದಿದ್ದರೂ ಒಂದೇ ಸಂಸ್ಕೃತಿಯಲ್ಲಿ ಬಂಧಿಸಲ್ಪಡುತ್ತಾರೆ. ಈ ಬಂಧನದ ಮೂಲಕ ಅವರು ಏಕತೆಯನ್ನು ಸಾಧಿಸಿ ಕೊಳ್ಳುತ್ತಾರೆ. ಎಲ್ಲೆಯೊಳಗಿನ ಜನರೆಲ್ಲಾ ಒಂದು. ತಮ್ಮೆಲ್ಲರ ಭಾವನೆಗಳು ಒಂದು ಎಂದು ಭಾವಿಸುವುದೇ ಏಕತೆ ಮತ್ತು ರಾಷ್ಟ್ರಪ್ರೇಮ. ಈ ರಾಷ್ಟ್ರಪ್ರೇಮ ಎಲ್ಲಾರ ಭಾವವಾಗಿರಬೇಕು. ಏಕೆಂದರೆ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾಗಿರುತ್ತದೆ. ತಮ್ಮ ನಾಡು ನುಡಿ, ಜನಾಂಗ ಸಂಪನ್ಮೂಲ, ಸಂಸ್ಕೃತಿ, ರಾಜ್ಯವ್ಯವಸ್ಥೆ ಮುಂತಾದ ವಿಷಯಗಳ ಕುರುತಾಗಿ ಹೆಮ್ಮೆ ಪಡುವ, ಅಭಿಮಾನಪಡುವದರಿಂದ ರಾಷ್ಟ್ರದ ಏಳ್ಗೆಯಾಗುತ್ತದೆ.

ಕುವೆಂಪು ಅವರಿಗೆ ನಾಡಿನ ಬಗೆಗೆ ಅಪಾರ ಅಭಿಮಾನ ಗೌರವವಿದೆ. ಅಭಿಮಾನ ಎಲ್ಲರಿಗೂ ಇರಬೇಕು ಎಂಬುದು ಅವರ ಅಬಿಪ್ರಾಯ." ದೇಶ ನನ್ನದು ನನ್ನದು ನಾಡು, ಎನ್ನದ ಮಾನವನೆದೆ ಸುಡುಗಾಡು" ಎಂದು ಖಂಡಿಸುತ್ತಾರೆ. ಎಲ್ಲರೆದೆಯಲ್ಲಿ ಅಭಿಮಾನ ಉಕ್ಕಿ ಹರಿಯಬೇಕು ಎಂದು ಅಭಿಪ್ರಾಯ ಪಡುತ್ತಾರೆ.

"ತನ್ನ ನಾಡಿನ ನೀಲಿಯ ಬಾನು, ತನ್ನನಾಡಿನ ಹಸುರುನ ಕಾನು, ತನ್ನನಾಡಿನ ಹೊಳೆಕೆರೆಬೆಟ್ಟ, ತನ್ನ ನಾಡಿನ ಪಶ್ಚಿಮಘಟ್ಟ, ತನ್ನ ನಾಡಿನ ನಡೆನುಡಿ, ತನ್ನ ತಾಯ್ನುಡಿ, ಎಂದು ಹಿಗ್ಗದ ಮಾನವನಿದ್ದರೆ ತಾವಿಲ್ಲವನಿಗೆ ನಾಕದಲಿ, ವೀರಲೋಕದಲಿ'ಗ ಎಂದು. ತನ್ನ ಪರಿಸರವನ್ನು ಪ್ರೀತಿಸದವ, ಅನುಭವಿಸದವನು ಸತ್ತಾಗ ಎಲ್ಲಿ ಸುಡುತ್ತರೆಂದು ಖಾರವಾಗಿ ಪ್ರಶ್ನಿಸುತ್ತಾರೆ.

ಸರ್ವ ಸಂಗ ಪರಿತ್ಯಾಗ ಮಾಡಿದ ಸನ್ಯಾಸಿಗಳೂ ದೇಶ ಪ್ರೇಮದ ಕುರಿತು ಅಭಿಮಾನ ವ್ಯಕ್ತಪಡಿಸಿದ್ದಾರೆ. ಆದಿ ಶಂಕರಾಚಾರ್ಯರು ಸ್ವದೇಶೋ ಭುವನ ತ್ರಯಂ' ಎಂದಿದ್ದಾರೆ. ಸಾಮಾನ್ಯ ಜನರಲ್ಲೂ ಇಂತಹ ಭಾವನೆ ಉತ್ಕಟವಾಗಿರುತ್ತದೆ. ಕೃಷಿಕರಂತೂ ಭೂಮಿಯನ್ನು ಅನನ್ಯ ಭಕ್ತಿಯಿಂದ ನೋಡುತ್ತಾರೆ. ಇನ್ನು ಕವಿಗಳಂತೂ ತಾವುಕಂಡುಂಡ ಭಾವನೆಗಳನ್ನು ಸುಲಲಿತವಾಗಿ ವ್ಯಕ್ತಮಾಡುತ್ತಾರೆ. ಹೀಗೆ ಪ್ರತಿಯೊಬ್ಬರಲ್ಲಿಯೂ ಈ ಭಾವನೆ ಉತ್ಪತ್ತಿಯಾಗಲು ದೇಶ ಅಭಿವೃದ್ಧಿಗೊಳ್ಳುತ್ತದೆ. ಈ ಮಾತುಗಳು ವಿಶ್ವದಾದ್ಯಂತ ಕಂಡು ಬರುತ್ತವೆ.

ಭಾರತದಲ್ಲೂ, ಕರ್ನಾಟಕದಲ್ಲೂ ಈ ತರಹದ ಅಭಿಮಾನದ ಸಂದರ್ಭಗಳಿರಬಹುದು. ಆದರೆ ಅದಕ್ಕೆ ಸರಿಯಾದ ದಾಖಲೆಗಳಿಲ್ಲ. ಶಾಸನಗಳಲ್ಲಿ, ಕಾವ್ಯಗಳಲ್ಲಿ ಇದಕ್ಕೆ ಪೂರಕವಾಗಿ ಕೆಲವು ದಾಖಲೆಗಳನ್ನು ನೀಡಬಹುದು. ಕನ್ನಡದ ಮೊದಲ ಗ್ರಂಥದಲ್ಲಿ ಕನ್ನಡಿಗರ ವ್ಯಕ್ತಿತ್ವದ ಕುರಿತಾಗಿ 'ಗುಣಿಗಳು, ಗಂಭಿರಚಿತ್ತರು, ಅತಿಉಗ್ರರು, ಸಹನಶೀಲರು. ಕುರಿತುಓದದೆಯೂ ಕಾವ್ಯಪ್ರಯೋಗ ಮಾಡುವ ಪರಿಣಿತ ಮತಿಗಳು, ವಿವೇಕಿಗಳು, ಪುಣ್ಯಪಾಪಗಳ ಕುರಿತು ಚಿಂತನೆ ಮಾಡುವವರು" ಎಂದು ಬಣ್ಣಿಸಲಾಗಿದೆ. ಈ ತರಹದ ವಿಚಾರಗಳು ಕನ್ನಡದ ಮಹಾಕವಿಗಳೆಲ್ಲರ ಕಾವ್ಯಗಳಲ್ಲಿ ಮೂಡಿಬಂದಿವೆ.

ಪ್ರಸ್ತುತ ಆಧುನಿಕ ಕವಿಗಳಲ್ಲಿ ಜ್ಞಾನಪೀಠಪ್ರಶಸ್ತಿ ಪುರಸ್ಕೃತರಾದ ಕುವೆಂಪು ಅವರು ತಮ್ಮ ಸಾಹಿತ್ಯದಲ್ಲಿ ರಾಷ್ಟ್ರೀಯತೆಯ ಕುರಿತಾಗಿ ಧನಿ ಎತ್ತಿದ್ದಾರೆ. ಅನೇಕ ಮತಧರ್ಮವನ್ನು ಹೊಂದಿದ ಭಾರತದಲ್ಲಿ ಏಕತೆ ಮೂಡಿರುವುದು ನಮ್ಮ ಹೆಮ್ಮೆಯಾಗಿದೆ. ಹೀಗಾಗಿ ಎಲ್ಲಾ ದೇವತೆಗಳಿಗಿಂತ ಭಾರತಾಂಬೆ ನಮಗೆ ಪೂಜ್ಯಳು.

" ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರಾ
ಶತಮಾನಗಳು ಬರಿಯ ಜಡಶಿಲೆಯ ಪೂಜಿಸಾಯ್ತು

ಪಾಪ್ಗಳಿಗೆ ಪಾಲೆರೆದು ಪೋಷಿಸಾಯ್ತು
ಬಿಸಿಲು ಮಳೆ ಗಾಳಿ ಬೆಂಕಿಯನೆಲ್ಲಾ ಬೇಡಿಯಾಯ್ತು"

ಎಂದು ಇವುಗಳ ಪೂಜೆ ಸನಾತನವಾಗಿ ಬಂದ ಪರಂಪರೆ. ಆಗ ಭಾರತ ಯಾರ ದಾಸ್ಯದಲ್ಲಿ ಇರಲಿಲ್ಲ. ಆದರೆ ಬ್ರಿಟೀಷರು ಬಂದ ನಂತರ ದಾಸ್ಯದಲ್ಲಿಬಿದ್ದಾಗ ಈ ದೇವರುಗಳಿಗಿಂತ ಭಾರತಾಂಬೆ ದೊಡ್ಡವಳೆಂದು ಸೂಚಿಸುತ್ತಾರೆ.

ಬ್ರಿಟೀಷರು ಬಂದನಂತರ ನಿಧಾನವಾಗಿ ನಮ್ಮಲ್ಲಿ ಬದಲಾವಣೆಯ ಗಾಳಿ ಬೀಸತೊಡಗಿತು. ಸಂಸ್ಕೃತಿ ಸಂಪ್ರದಾಯಗಳಲ್ಲಿ ಹೊಸತನ ಕಂಡುಬಂದಿತು.ಹಳೆಯಕಾಲ ಮುಗಿಯಿತು. ಹೊಸಕಾಲ ಬಂದಿತು. ಕುವೆಂಪು ಅವರಿಗೆ ತರುಣರ ಮೇಲೆ ಅಭಿಮಾನ ಜಾಸ್ತಿ. ಅದಕ್ಕೆ

" ಹೋಗುತಿದೆ ಹಳೆಯಕಾಲ, ಹೊಸಕಾಲ ಬರುತಲಿದೆ
ಬರುತಲಿದೆ ಹೊಸ ದೃಷ್ಟಿ ಹೊಸಬಯಕೆಗಳಲಿ
ಹೋಗುತಿದೆ ಹಳೆಬಾಳು,ಹೊಸಬಾಳು ಬರುತಲಿದೆ
ಬರುತಲಿದೆ ಕುದಿಗೊಂಡು ತರುಣರೆದೆಗಳಲಿ
ತರುಣರಿರ, ಎದ್ದೇಳಿ ಎಚ್ಚರಗೊಳ್ಳಿ ಕೇಳಿ"

ಎಂದು ಯುವಕರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳಸುತ್ತಾರೆ. ಹಳತಿನ ಚರ್ವಿತ ಚರ್ವಣಕ್ಕೆ ಅವಕಾಶ ನೀಡುವುದಿಲ್ಲ. ಸಮಾನತೆ ಅವರ ಧೋರಣೆ ಮತ್ತು ದೂರ ದೃಷ್ಟಿಕೋನ. ಶತಮಾನಗಳಿಂದ ವರ್ಗ,ವರ್ಣ,ಲಿಂಗ ತಾರತಮ್ಯವಿದೆ. ಈ ಆದುನಿಕತೆ ಅವುಗಳನ್ನು ನಿವಾರಣೆ ಮಾಡಬೇಕು ಎಂಬುದು ಅವರ ಅಬಿಪ್ರಾಯ.

"ಸರ್ವರಿಗೆ ಸಮಬಾಳು,ಸರ್ವರಿಗು ಸಮಪಾಲು
ಎಂಬ ನವಯುಗ ವಾಣಿ ಘೋಷಿಸಿದೆ ಕೇಳಿ
ಯುಗಯುಗದ ದಾರಿದ್ರ್ಯ ಭಾರದಿಂ ಬೆನ್ ಬಾಗಿ
ಗೋಳಿಡವ ಬಡಜನರೆ, ಏಳಿರೈ ಏಳಿ" ಎಂದು ಜಾಗೃತಿ ಮೂಡಿಸುತ್ತಾರೆ. ಏನಾದರೂ ಬದಲಾವಣೆ ಬರಬೇಕಾದರೆ ಯುವಕರಲ್ಲಿ ಆಗಬೇಕು ಎಂಬುದು ಅವರ ಅಭಿಪ್ರಾಯವಾಗಿದೆ. ಇವರು ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಕಾವ್ಯ ರಚನೆಗೆ ತೊಡಗಿಕೊಂಡವರು. ಎಲ್ಲ ಯುವಕರು ಗಾಂಧಿಜಿಯವರ ಕರೆಗೆ ಓಗೊಟ್ಟು ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದರು. ಗಾಂಧಿಯಂತೆ ಕವಿಗಳೂ ತಮ್ಮ ಸಾಹಿತ್ಯದ ಮುಖಾಂತರ ಯುವಕರನ್ನು ಪ್ರೇರೇಪಿಸುತ್ತಿದ್ದರು. ತಮ್ಮ ಪ್ರತಾಪಸಿಂಹ ಎಂಬ ಕವನದಲ್ಲಿ

" ಪ್ರತಾಪಸಿಂಹನ ಕತೆಯನು ಕೇಳಿ
ದೇಶದ ಮೇಲಭಿಮಾನವ ತಾಳಿ
ಪರದೇಶಿಯರಾಟೋಪ ಸೀಳಿ
ಸ್ವತಂತ್ರಯಜ್ಞಕೆ ಬಾಳನು ಬೇಳಿ

ಭಾರತ ವೀರರಿಗುಚಿತದಿ ಬಾಳಿ." ಎಂದಿದ್ದಾರೆ. ಪರತಂತ್ರವನ್ನು ಅವರು ಎಂದೂ ಒಪ್ಪುವುದಿಲ್ಲ. "ಮಣಿದು ಬಾಳುವ ಪಾಳ್ದಲೆಯೇಕೆ, ಬೇಡುಗೂಳಿನ ಕೀಳ್ಬೊಡೆಯೇಕೆ, ತಿರುದುಂಬುವ ಬೀಳಳಿ ಬಾಳೇಕೆ ತೊತ್ತಿನ ಮಕ್ಕಳ ಜೀವನವೇಕೆ" ಎಂದು ಪ್ರಶ್ನಿಸುತ್ತಾರೆ. ಭಾರತೀಯರು ಸಿಂಹದ ಮರಿಯಿದ್ದಂತೆ. ಕೀಳಾಗಿ ಬಾಳಬಾರದು. ಆತ್ಮಸ್ಥೈರ್ಯದಿಂದ ಬಾಳಬೇಕು ಎಂದು ಸೂಚಿಸುತ್ತಾರೆ. "ನಡೆಮುಂದೆ ನಡೆಮುಂದೆ ನುಗ್ಗಿ ನಡೆಮುಂದೆ, ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆಮುಂದೆ"೨ ಎಂದು ಕರೆ ನೀಡುತ್ತಾರೆ. ಜೀವನ ಶಾಶ್ವತವಲ್ಲ.ಎಂದಾದರೂ ನಾವು ಸಾಯಲೇಬೇಕು. ದೇಸಕ್ಕಾಗಿ ಜೀವ ನೀಡಿದರೆ ಬದುಕು ಸಾರ್ಥಕವಾಗುತ್ತದೆ. ನಮ್ಮ ಎಲುಬುಗಳ ಮೇಲೆ ನವಭಾರತ ಬೆಳಗಲಿ ಎಂದು ಕರೆ ನೀಡುತ್ತಾರೆ. ಈ ತರಹದ ಮಾತಿಗೆ ಯುವಕರ ದಂಡೇ ಹರಿದು ಬರುತ್ತಿತ್ತು. ಜೈಲಿನಲ್ಲಿ ಸ್ಥಳವೇ ಇರುತ್ತಿರಲಿಲ್ಲ. ಅನೇಕರು ತಮ್ಮ ಜೀವದಾನ ಮಾಡಿದರು. ಆದರೆ ಕೆಲವರು ಬೇರೆಯವರ ಜೀವ ಹೋದರೆ ನಮಗೇನು ಎಂದು ಬೇಜವಬ್ದಾರಿಯಿಂದ ನಡೆದುಕೊಳ್ಳುತ್ತಾರೆ. ಅಂತವರಿಗೆ

" ಏಳಿರೈ ಸೋದರಿರ ನಿಮಗಾಗಿ ಮಡಿದೆಮ್ಮ
ಮರಿಯದಿರಿ, ನಿಮ್ಮಣ್ಣ ತಮ್ಮದಿರನು
ನಿಮ್ಮಂತೆ ನಾವಿದ್ದು ಉಸಿರೆಳೆದು ನಲಿದುಲಿದು
ಒಲಿದೊಲಿಸಿ ಬಾಳಿದೆವು ,ಮೊನ್ನೆಮೊನ್ನೆ
ಸ್ವಾತಂತ್ರ ಸಾಧನೆಗೆ ಸಂಗ್ರಾಮ ದೇವತೆಗೆ
ತಕ್ತತರ್ಪಣವಿಟ್ಟು ಎದೆಯ ಹರಿದು
ಹೊರಳಿದೆವು ನೆಲಕೆ. ಓ ಉರುಳಿ ಬಿದ್ದೆವು ನೆಲಕೆ"ಎಂದು ಅವರು ತಂದುಕೊಟ್ಟ ಸ್ವಾತಂತ್ರ್ಯವನ್ನು ಕಡೆಗಣಿಸಬಾರದು.ಇಂದೇ ಮುಂದೆಬನ್ನಿ ಮೀನಮೇಷ ಎಣಿಸದಿರಿ.

" ಬೀಳಲಿ ಮೈ ನೆತ್ತರ ಕಾರಿ
ಹೋದರೆ ಹೋಗಲಿ ತಲೆ ಹಾರಿ
ತಾಯ್ನಾಡಿನ ಮೇಲ್ಮೆಗೆ ಹೋರಿ

ಸ್ವಾತಂತ್ರದ ಸ್ವರ್ಗಕೆ ಏರಿ" ಎಂದು ಆತ್ಮವಿಶ್ವಾಸ ತುಂಬುತ್ತಾರೆ.

ಹೀಗೆ ಹೋರಾಟದ ಫಲವಾಗಿ ಅಗಷ್ಟ ಹದಿನೈದು ಸ್ವಾತಂತ್ರ್ಯದೊರಕುತ್ತದೆ. ಅದರ ಸವಿಯನ್ನು ಎಲ್ಲರಿಗೆ ಹಂಚಲು ಉತ್ಸುಕರಾಗಿದ್ದಾರೆ. ಸ್ವಾತಂತ್ರ್ಯ ಎಂಬುದು ಆತ್ಮದೊಳಗಿನ ಆನಂದ.

"ಏನು ಕಾಂತಿಇದು ಏನು ಶಾಂತಿ ಈ ತುಂಗಶೃಂಗದಲ್ಲಿ
ಆವ ಲೋಕದಾಲೋಕವಿದೋ ನಮ್ಮನೊಸಗೆ ಕರೆವುದಿಲ್ಲಿ

ಮರ್ತ್ಯವಲ್ಲವಿದು ದಿವ್ಯಧಾಮವೋ ನೋಡೋ ಬೆಳಗುಮೆಯ್ಯ" ಎಂದು ಸ್ವಾತಂತ್ರ್ಯದ ಕಳೆ ಚೇತನಾಚೇತನಗಳಲ್ಲಿ ಕಾಣುತ್ತಾರೆ. ಗಿಡಮರ, ಪಶುಪಕ್ಷಿಗಳ ದನಿಯಲ್ಲಿ ದೇವತೆಗಳೇ ಆಗಮಿಸಿ ದಿವ್ಯನಾದ ಮಾಡಿದಂತೆ ಅನುಭವಿಸುತ್ತಾರೆ. ಸ್ವಾತಂತ್ರ್ಯದ ದಿನ ಪುಣ್ಯೋದಯದದಿನ ಎಂದು ಸಂಭ್ರಮಿಸುತ್ತಾರೆ. ಈ ಸಂಭ್ರಮವನ್ನು ಸರ್ವರಿಗೂ ಸಾರಲು ಹೇಳುತ್ತಾರೆ. ಈ ಸ್ವಾತಂತ್ರ್ಯವು ಎಲ್ಲರಿಗೂ ಸಮಾಧಾನ ಸಮನ್ವಯತೆಯನ್ನು ತಂದುಕೊಡಲಿ ಎಂದು ಅಪೇಕ್ಷಿಸುತ್ತಾರೆ.

" ಸಾರಿ ಬಾ ಸರ್ವರ್ಗೆ ಸಾಮ್ಯತ್ವಮಂ
ಸಾರಿ ಬಾ ಸರ್ವರ್ಗೆ ಸೌಹಾರ್ದತಮಂ
ಸರ್ವಲೋಕದ ಸರ್ವ ಸಂತೋಷಮಂ

ಸರ್ವರಿಂ ಸರ್ವರಾ ಉದ್ಧಾರಮಂ" ಎಂದು ಸರ್ವರಿಗೂ ಶುಭವಾಗಲೆಂದು ಆಶಿಸುತ್ತಾರೆ. ಭಾರತಾಂಬೆಯ ಕುರಿತು ಮನದುಂಬಿ ಹಾಡಿ ಹೊಗಳುತ್ತಾರೆ. ಸ್ವಾಂತಂತ್ರ್ಯಕ್ಕಾಗಿ ನಾಯಕತ್ವ ವಹಿಸಿ ಹೋರಾಡಿದ ನೇತಾರರನ್ನು ಸ್ಮರಿಸಿಕೊಳ್ಳುತ್ತಾರೆ. ಬಿಶೇಷವಾಗಿ ಗಾಂಧೀಜಿಯವರನ್ನು ವಿಶೇಷವಾಗಿ ಸ್ಮರಿಸಿಕೊಳ್ಳುತ್ತಾರೆ."ಮರೆವುದೆಂತಾ ನಮ್ಮ ಸ್ವಾತಂತ್ರ್ಯಶಿಲ್ಪಿಯಂ" ಎಂದು ಉದ್ಘಾರ ತೆರೆಯುತ್ತಾರೆ. ಭಾರತದ ವಿಭಜನೆಯನ್ನು ನೆನೆದು ವಿಶಾದ ವ್ಯಕ್ತಪಡಿಸುತ್ತಾರೆ. ಭಾರತದಲ್ಲಿ ಜನಸಿ ಧನ್ಯರಾದೆವು ಎಂದು ಕೃತಾರ್ಥಭಾವ ತಾಳುತ್ತಾರೆ.

ಕುವೆಂಪು ಅವರ ಸಾಹಿತ್ಯದಲ್ಲಿ ಈ ರೀತಿಯ ವಿಚಾರಗಳು ನಮಗೆ ಪ್ರಸ್ತುತವಾಗಿವೆ. ಅಂದು ದಾಸ್ಯದಲ್ಲಿದ್ದೆವು ಅದಕ್ಕಾಗಿ ಹೋರಾಟಮಾಡಲು ರಾಷ್ಟ್ರಾಭಿಮಾನ ಬೇಕಾಗಿತ್ತು. ಇಂದು ಬೇಡವೇ? ಎಂದು ಕೇಳಿದರೆ ಹೌದು ಇಂದಿಗೂ ರಾಷ್ಟ್ರಾಭಿಮಾನ ಬೇಕು. ಎಂದೆಂದಿಗೂ ರಾಷ್ಟ್ರಾಭಿಮಾನ ಬೇಕು. ಸ್ವಲ್ಪ ಮೈ ಮರೆತರೂ ಜಾರುವ ಭಯವಿದೆ. ಕ್ಷಣಕ್ಷಣವೂ ನಮಗೆ ದೇಶಾಭಿಮಾನ ಬೇಕು ಎಂಬುದು ಅನಿವಾರ್ಯವಾಗಿದೆ. ಅವಶ್ಯವಾಗಿದೆ. ಭಾರತ ಆಧ್ಯಾತ್ಮದ ನೆಲೆಯಲ್ಲಿ ಬಂದದ್ದು. ನ್ಯಾಯನೀತಿ,ಸತ್ಯ ಧರ್ಮದ ತಳಹದಿಯ ಮೇಲೆ ನಿಂತಿರುವುದು. ಹೀಗಾಗಿ ನಮ್ಮ ರಾಷ್ಟ್ರದಲ್ಲಿ ಅಭಿಮಾನ ಸುಲಭವಾಗಿ ಮೂಡಿರುವುದು ಕಂಡುಬರುತ್ತದೆ.

**ಅಡಿಟಿಪ್ಪಣಿ:**

೧. ಗಂಗೋತ್ರಿ ಅಭಿನಂದನ ಗ್ರಂಥ. ಲೇ.ಮರಳುಸಿದ್ದಪ್ಪ ಪು.೬೪೮

೨. "ಪಾಂಚಜನ್ಯ" ಉದಯರವಿ ಪ್ರಕಾಶನ ೧೯೩೩ ಮೈಸೂರು.೧

**ಆಕರ ಗ್ರಂಥಗಳು:**

೧. ಗಂಗೋತ್ರಿ– ಕುವೆಂಪು ಅಭಿನಂದನಗ್ರಂಥ,ಕುವೆಂಪು ಅಭಿನಂದನ ಸಮಿತಿ,ಗೀತಾ ಬುಕ್ ಹೌಸ್ ಮೈಸೂರು, ೧,೧೯೬೮

೨. ಜ್ಞಾನಪೀಠ ಪ್ರಶಸ್ತಿ ವಿಜೇತರು ಪ್ರಸಾರಾಂಗ ಗುಲ್ಬರ್ಗವಿಶ್ವವಿದ್ಯಾಲಯ,ಕಲಬುರಗಿ ೧೯೯೬

೩. ಪಾಂಚಜನ್ಯ ಕವನ ಸಂಕಲನ ಕುವೆಂಪು, ಉದಯರವಿ ಪ್ರಕಾಶನ,ಮೈಸೂರು.

೪. ಜ್ಞಾನಪೀಠ ಪ್ರಶಸ್ತಿವಿಜೇತರು ಲೇ.ಡಾ.ಮೃತ್ಯುಂಜಯ ಹೊರಕೇರಿ,ಪ್ರಸಾರಾಂಗ ೧೯೯೬

# ಕುವೆಂಪುರವರ "ವಿಶ್ವಮಾನವ" ಸಂದೇಶ

**ಶ್ರೀಮತಿ ಸುಜಾತ ದೇವರಮನಿ**
**ಕನ್ನಡ ಸಹಾಯಕ ಪ್ರಾಧ್ಯಾಪಕರು**
**ಶ್ರೀಮತಿ ಜಿ.ಬಿ.ಅಂಕಲಕೋಟಿ ಸರ್ಕಾರಿ**
**ಪ್ರಥಮ ದರ್ಜೆ ಕಾಲೇಜು, ಶಿಗ್ಗಾಂವ**

"ಅದರರ್ಥಗಿರ್ಥಗಳು ಸೃಷ್ಟಿಕರ್ತನಿರಲಿ
ವ್ಯರ್ಥ ಜಿಜ್ಞಾಸೆಯಲಿ ಕಾಲಹರಣವದೇಕೆ
ಬಾರಯ್ಯ ಮಮಬಂಧು ಜೀವನಪಥದೊಳು
ಒಂದಾಗಿ ಮುಂದುವರೆಯುವಾ"

– ಕುವೆಂಪು

ಕುವೆಂಪು ಇಪ್ಪತ್ತನೆಯ ಶತಮಾನ ಕಂಡ ದೈತ್ಯ ಪ್ರತಿಭೆ. ವರಕವಿ ಬೇಂದ್ರೆಯವರಿಂದ "ಯುಗದ ಕವಿ ಜಗದ ಕವಿ" ಎನಿಸಿಕೊಂಡವರು. ಕನ್ನಡದ ಎರಡನೆಯ ರಾಷ್ಟ್ರಕವಿ. ಜ್ಞಾನಪೀಠ ಪ್ರಶಸ್ತಿಯನ್ನೂ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ಮೊದಲ ಬಾರಿಗೆ ಕನ್ನಡಕ್ಕೆ ತಂದುಕೊಟ್ಟವರು. ಕರ್ನಾಟಕ ಸರ್ಕಾರ ಕೊಡುವ "ಕರ್ನಾಟಕ ರತ್ನ" ಮತ್ತು "ಪಂಪ ಪ್ರಶಸ್ತಿ"ಯನ್ನು ಮೊದಲ ಬಾರಿಗೆ ಪಡೆದವರು. ಕುವೆಂಪು ಒಬ್ಬ ರಸಋಷಿ. ತಮ್ಮ ಮೇರು ಕೃತಿ "ಶ್ರೀ ರಾಮಾಯಣ ದರ್ಶನಂ"ನಲ್ಲಿ ಈ ಕಾಲಕ್ಕೆ ಅಗತ್ಯವಾದ ದರ್ಶನವನ್ನು ನೀಡಿದ್ದಾರೆ. ಅವರ ಎರಡು ಬೃಹತ್ ಕಾದಂಬರಿಗಳಾದ "ಕಾನೂರು ಹೆಗ್ಗಡತಿ" ಹಾಗೂ "ಮಲೆಗಳಲ್ಲಿ ಮದುಮಗಳು" ಅವರನ್ನು ಜಗತ್ತಿನ ಮಹಾನ್ ಕಾದಂಬರಿಕಾರರ ಸಾಲಿನಲ್ಲಿ ನಿಲ್ಲುವಂತೆ ಮಾಡಿವೆ. ಅವರು ರಚಿಸಿದ ಪ್ರತಿ ನಾಟಕಗಳಲ್ಲೂ ವೈಚಾರಿಕತೆಯ ಸ್ಪರ್ಶವಿದೆ. ದಾರ್ಶನಿಕ ಕವಿ ಕುವೆಂಪು ಸಾಹಿತ್ಯ ಕ್ಷೇತ್ರದಲ್ಲಿ ಆಧ್ಯಾತ್ಮಿಕ ಕಾಣ್ಕೆಯನ್ನೂ, ವೈಚಾರಿಕತೆಯನ್ನೂ ಬಿತ್ತಿದ ಮಹಾಚೇತನ. ಅವರು ರೂಪಿಸಿದ "ವಿಶ್ವಮಾನವ ಸಂದೇಶ" ಸಾಹಿತ್ಯ ಲೋಕದಲ್ಲಿಯೇ ಅನನ್ಯವಾದುದು. ಕರ್ನಾಟಕ ಸರ್ಕಾರವು ೨೦೧೫ ರ ಡಿಸೆಂಬರನಲ್ಲಿ ಕುವೆಂಪು ಅವರ ಜನ್ಮದಿನವಾದ ಡಿಸೆಂಬರ್ ೨೯ ನ್ನು "ವಿಶ್ವಮಾನವ ದಿನ"ವನ್ನಾಗಿ ಆಚರಿಸುವುದಾಗಿ ಆದೇಶ ಹೊರಡಿಸಿತು. ಈ ಮೂಲಕ ವಿಶ್ವಮಾನವ ಸಂದೇಶ ಸಾರಿದ ಕವಿಗೆ ಮತ್ತೊಂದು ಗೌರವ ದೊರೆತಂತಾಯಿತು

"ಮರ್ತ್ಯಜೀವನದ ತಾಟಸ್ಥ್ಯಮಂ ಕಡೆಕಡೆದು
ಶ್ರದ್ಧೆ ಸಂದೇಹಗಳನಿರದೆ ಹೊಡೆದೆಬ್ಬಿಸುವ,
ಮೇಣ್ ಜನತೆ ಜನತೆಯೊಳ್ ಪಕ್ಷಪಕ್ಷಗಳಂ
ಕೆರಳಿಸುವ ಶತಶತ ಮತಂಗಳಂ ತಾಮಲ್ಲಿ
ರಾರಾಜಿಸಿದುವಗ್ನಿವರ್ಣದ ವೃಕ್ಷಂಗಳೊಲ್,
ಜೋಲ್ವ ಜಿಹ್ವೆಯೊಳತಿ ಭಯಾನಕಂ"

– "ಶ್ರೀರಾಮಾಯಣದರ್ಶನಂ"

ಹುಟ್ಟುವ ಪ್ರತಿ ಮಗುವು ವಿಶ್ವಮಾನವನೇ! ಆ ನಂತರ ಆ ಮಗುವನ್ನು "ಜಾತಿ, ಮತ" ಕಟ್ಟುಪಾಡುಗಳಿಂದ ಬಂಧಿಸಲಾಗುತ್ತದೆ. ಹಾಗಾಗಬಾರದು. ಯಾವುದೇ ವ್ಯಕ್ತಿ ಜಾತಿಯಿಂದ ಮುಖ್ಯನಾಗಬಾರದು. ನೈತಿಕ ವ್ಯಕ್ತಿತ್ವದಿಂದ ಮುಖ್ಯನಾಗಬೇಕು ಎಂಬ ಪರಿಕಲ್ಪನೆ ಕುವೆಂಪು ಅವರದಾಗಿತ್ತು. ಹಾಗಾಗಿ ಕುವೆಂಪು ಅವರ ಜಾತ್ಯಾತೀತ ಮನೋಭಾವದಿಂದ ಮೂಡಿ ಬಂದ ಆಶಯವೇ ವಿಶ್ವಮಾನವ ಸಂದೇಶವಾಗಿದೆ. ಬುದ್ಧ, ಬಸವರ ಹಾಗೆ ಸಮಾಜದಲ್ಲಿ ವ್ಯಕ್ತಿ ಸ್ವತಂತ್ರವಾಗಿ, ವೈಚಾರಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕೆಂದು ಅವರು ಹೇಳುತ್ತಿದ್ದರು.

"ಓ ನನ್ನ ಚೇತನ
ಆಗು ನೀ ಅನಿಕೇತನ!
ರೂಪರೂಪಗಳನು ದಾಟಿ,

ನಾಮಕೋಟಿಗಳನು ಮೀಟಿ,
ಎದೆಯೆ ಬಿರಿಯೆ ಭಾವದೀಟಿ,
ಓ ನನ್ನ ಚೇತನ,
ಆಗು ನೀ ಅನಿಕೇತನ!

ನೂರು ಮತದ ಹೊಟ್ಟ ತೂರಿ,
ಎಲ್ಲ ತತ್ತ್ವದೆಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ,
ಓ ನನ್ನ ಚೇತನ,
ಆಗು ನೀ ಅನಿಕೇತನ!

ಎಲ್ಲಿಯೂ ನಿಲ್ಲದಿರು;
ಮನೆಯನೆಂದೂ ಕಟ್ಟದಿರು;
ಕೊನೆಯನೆಂದೂ ಮುಟ್ಟದಿರು;
ಓ ಅನಂತವಾಗಿರು!
ಓ ನನ್ನ ಚೇತನ,
ಆಗು ನೀ ಅನಿಕೇತನ!

ಅನಂತ ತಾನ್ ಅನಂತವಾಗಿ
ಆಗುತಿಹನೆ ನಿತ್ಯಯೋಗಿ;
ಅನಂತ ನೀ ಅನಂತವಾಗು;
ಆಗು, ಆಗು, ಆಗು, ಆಗು,
ಓ ನನ್ನ ಚೇತನ,
ಆಗು ನೀ ಅನಿಕೇತನ!

ಪ್ರತಿಯೊಂದು ಮಗುವು ಹುಟ್ಟುತ್ತಲೇ ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು. ಹುಟ್ಟುವಾಗ ವಿಶ್ವಮಾನವನಾಗಿಯೇ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ.....ಇತ್ಯಾದಿ ಉಪಾಧಿಗಳಿಂದ 'ಬದ್ಧ'ನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿ ಅವನನ್ನು 'ಬುದ್ಧ'ನನ್ನಾಗಿ ಅಂದರೆ ವಿಶ್ವಮಾನವನನ್ನಾಗಿ ಪರಿವರ್ತಿಸುವುದೇ ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆ ಎಲ್ಲದರ ಆದ್ಯ ಕರ್ತವ್ಯವಾಗಬೇಕು. ಲೋಕ ಉಳಿದು, ಬಾಳಿ ಬದುಕಬೇಕಾದರೆ ಪ್ರಪಂಚದ ಮಕ್ಕಳೆಲ್ಲ 'ಅನಿಕೇತನ'ರಾಗಬೇಕು.

ಮಾನವ ವಿಕಾಸದ ಹಾದಿಯಲ್ಲಿ ಆಯಾ ಕಾಲದ ಅಗತ್ಯವನ್ನು ಪೂರೈಸಲು ಮಹಾಪುರುಷರು ಸಂಭವಿಸಿ ಹೋಗಿದ್ದಾರೆ. ಅವರಲ್ಲಿ ಕೆಲವರ ವಾಣಿ ವಿಶಿಷ್ಟ ಧರ್ಮವಾಗಿ ರೂಪುಗೊಂಡು ಕಡೆಗೆ ಮತವಾಗಿ ಪರಿಮಿತವಾಯಿತು. ಮಾನವರನ್ನು ಕೂಡಿಸಿ ಬಾಳಿಸಬೇಕೆಂಬ ಸದುದ್ದೇಶದಿಂದ ಹುಟ್ಟಿಕೊಂಡ ಮಹಾತ್ಮರ ವಾಣಿ ಮತವಾಗಿ ಮಾದಕವಾಯಿತು. ಒಂದು ಯುಗಕ್ಕೆ ಅಗತ್ಯವೆನಿಸಿದ್ದ ಧರ್ಮ ಕಾಲಾನುಕಾಲಕ್ಕೆ ಮತವಾಗಿ ನಿರುಪಯುಕ್ತವೆನಿಸಿ, ಮತ್ತೊಂದು ಹೊಸ ಧರ್ಮಕ್ಕೆ ಎಡೆಗೊಟ್ಟುದೂ ಉಂಟು. ಹೀಗಾಗಿ ಅನೇಕ ಧರ್ಮಗಳು ಮತಗಳಾಗಿ ಜನತೆಯನ್ನು ಗುಂಪುಗುಂಪಾಗಿ ಒಡೆದಿವೆ; ಯುದ್ಧಗಳನ್ನು ಹೊತ್ತಿಸಿವೆ, ಜಗತ್ತಿನ ಕ್ಷೋಭೆಗಳಿಗೆಲ್ಲ ಮೂಲಕಾರಣವೆಂಬಂತೆ! ವಿಜ್ಞಾನಯುಗದ ಪ್ರಾಯೋಗಿಕ ದೃಷ್ಟಿಗೆ ಇನ್ನು ಮೇಲೆ ಮತಮೌಢ್ಯ ಒಪ್ಪಿಗೆಯಾಗದು. ವಿನೋಬಾ ಭಾವೆಯವರು–"ಮತ ಮತ್ತು ರಾಜಕೀಯದ ಕಾಲ ಆಗಿ ಹೋಯಿತು. ಇನ್ನೇನಿದ್ದರೂ ಆಧ್ಯಾತ್ಮ ಮತ್ತು ವಿಜ್ಞಾನದ ಕಾಲ ಬರಬೇಕಾಗಿದೆ" ಎಂದು ತುಂಬಾ ವರ್ಷಗಳ ಹಿಂದೆಯೇ ಹೇಳಿ ಹೋಗಿದ್ದಾರೆ.

**ವಿಶ್ವಮಾನವ ಸಂದೇಶದ ಪಂಚಮಂತ್ರಗಳು :**

೧. **ಮನುಜಮತ** : ಆ ಮತ ಈ ಮತ ಅಲ್ಲ ಮನುಜಮಥ.
೨. **ವಿಶ್ವಪಥ :** ಆ ಪಥ ಈ ಪಥ ಅಲ್ಲ ವಿಶ್ವಪಥ.

೩. **ಸರ್ವೋದಯ :** ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ ಅದುವೇ ಸರ್ವೋದಯ.
೪. **ಸಮನ್ವಯ :** ಪರಸ್ಪರ ವಿಮುಖವಾಗಿ ಸಿಡಿದುಹೋಗುವದಲ್ಲ, ಸಮನ್ವಗೊಳ್ಳುವುದು.
೫. **ಪೂರ್ಣದೃಷ್ಟಿ :** ಮಿತಮತದ ಆಂಶಿಕ ದೃಷ್ಟಿಯಲ್ಲ; ಭೌತಿಕ ಪಾರಮಾರ್ಥಿಕ ಎಂಬ ಭಿನ್ನ ದೃಷ್ಟಿಯಲ್ಲ; ಎಲ್ಲವನ್ನು ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ.

ಯಾವ ಭಾವನೆಗಳು ಜಗತ್ತಿನಲ್ಲಿ ಎಲ್ಲ ಮಾನವರಿಗೂ ಅನ್ವಯವಾಗಬಹುದೊ ಅಂತಹ ಭಾವನೆ ಅಂತಹ ದೃಷ್ಟಿ ಕೇವಲ ಯಾವುದೊ ಒಂದು ಜಾತಿಗೆ, ಮತಕ್ಕೆ, ಗುಂಪಿಗೆ, ಒಂದು ದೇಶಕ್ಕೆ ಮಾತ್ರ ಅನ್ವಯವಾಗುವುದಿಲ್ಲ. ಸರ್ವಕಾಲಕ್ಕೂ ಅನ್ವಯವಾಗುವ ಈ ಪಂಚಸೂತ್ರಗಳು ಮೂಲಮೌಲ್ಯಗಳು. ಈ ಮೌಲ್ಯಗಳು ಮಾನವರನ್ನು ಕೂಡಿಸಿ ಬಾಳುವತ್ತ ನಡೆಯುತ್ತವೆ. ಗುಂಪುಗಾರಿಕೆಗೆಂದೂ ಇವು ತೊಡಗುವುದಿಲ್ಲ. ವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿಯೂ ಸಮಷ್ಠಿ ಉದ್ಧಾರದ ದೃಷ್ಟಿ ಪಂಚಸೂತ್ರಗಳದ್ದು. ಈ ದೃಷ್ಟಿಗೆ ವ್ಯಕ್ತಿಗಳೆಷ್ಟೊ ಅಷ್ಟೂ ಸಂಖ್ಯೆಯ ಮತಗಳಿರುವುದು ಸಾಧ್ಯ; ಅಷ್ಟೂ ವ್ಯಕ್ತಿಗಳು ಸಮಷ್ಠಿಯ ವಿಕಾಸಕ್ಕೆ ಸಾಧಕವಾಗುವುದೂ ಸಾಧ್ಯ. ಈ ದರ್ಶನವನ್ನೇ **"**ವಿಶ್ವಮಾನವ ಗೀತೆ**"** ಸಾರುತ್ತದೆ.

**ವಿಶ್ವಮಾನವರಾಗಲು ನಾವು ಸಾಧಿಸಲೇಬೇಕಾದ ಮೂಲಭೂತ ಸ್ವರೂಪದ ತತ್ತ್ವ ಪ್ರಣಾಳಿಕೆ**

೧. **'**ಮನುಷ್ಯಜಾತಿ ತಾನೊಂದೆ ವಲಂ**"** ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು.
೨. ವರ್ಣಾಶ್ರಮವನ್ನು ತಿದ್ದುವುದಲ್ಲ, ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು. ಅಂದರೆ ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರ–ಅಂತ್ಯಜ, ಷಿಯಾ–ಸುನ್ನಿ, ಕ್ಯಾಥೊಲಿಕ್–ಪ್ರೊಟೆಸ್ಟಂಟ್.....ಇತ್ಯಾದಿ ವಿಭಜನೆಯನ್ನು ನಿರ್ನಾಮ ಮಾಡಬೇಕು.
೩. ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಲ್ಲಿರುವ ಜಾತಿಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ ವಿನಾಶಗೊಳಿಸಬೇಕು.
೪. **'**ಮತ**'** ತೊಲಗಿ **'**ಆಧ್ಯಾತ್ಮ**'** ಮಾತ್ರ ವೈಜ್ಞಾನಿಕ ತತ್ತ್ವವಾಗಿ ಮಾನ್ಯತೆ ಪಡೆಯಬೇಕು.
೫. ಮತ **'**ಮನುಜಮತ**'**ವಾಗಬೇಕು; ಪಥ **'**ವಿಶ್ವಪಥ**'**ವಾಗಬೇಕು; ಮನುಷ್ಯ **'**ವಿಶ್ವಮಾನವ**'**ನಾಗಬೇಕು.
೬. ಮತ ಗುಂಪು ಕಟ್ಟುವ ವಿಷಯವಾಗಬಾರದು. ಯಾರೂ ಯಾವ ಮತಕ್ಕೆ ಸೇರದೆ ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ ತನ್ನ ಮತಕ್ಕೆ ಮಾತ್ರ ಸೇರಬೇಕು.
೭. ಯಾವ ಒಂದು ಗ್ರಂಥವೂ **"**ಏಕೈಕ ಪರಮಪೂಜ್ಯ**"** ಧರ್ಮಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತಿಳಿದು ತನ್ನ ದರ್ಶನವನ್ನು ತಾನೇ ನಿರ್ಣಯಿಸಿಕೊಳ್ಳಬೇಕು.

ಹೀಗೆ ಕುವೆಂಪು ಸಾಹಿತ್ಯದಲ್ಲಿ ವಿಶ್ವಮಾನವ ಸಂದೇಶವನ್ನು ಕಾಣಬಹುದು. ವಿಶ್ವಕವಿಯಾದ ಕುವೆಂಪುವರಿಗೆ **'**ವಿಶ್ವಮಾನವ**'** ಕಲ್ಪನೆ ಕೇವಲ ಒಂದು ಪಾರಿಭಾಷಿಕ ಪರಿಕಲ್ಪನೆ ಆಗಿರಲಿಲ್ಲ. ಅದು ಅವರಿಗೆ ಒಂದು ಕನಸಾಗಿತ್ತು. ಅವರ ವಿಶ್ವಮಾನವ ಕನಸಿನ ತುಡಿತವನ್ನು ಕಾವ್ಯದಲ್ಲಿ, ಮಾತಿನಲ್ಲಿ ಸ್ಪಷ್ಟವಾಗಿ ಕಾಣುತ್ತೇವೆ. ನಿಸರ್ಗದ ಒಂದೊಂದು ಸಣ್ಣ ಅಂಶದಲ್ಲೂ ಜೀವನೋತ್ಸಾಹವನ್ನು ಕಾಣುವ ಕವಿ ಕುವೆಂಪು ಅವರು ಯುವ ಪ್ರತಿಭೆಗಳಿಗೆ ಆದರ್ಶ ಕವಿಯಾಗಿ ಇಂದಿಗೂ ಅವರ ಕೃತಿಗಳ ಮೂಲಕ ಜೀವಂತವಾಗಿ ಮಾರ್ಗದರ್ಶನ ನೀಡುತ್ತಿದ್ದಾರೆ.

**ಪರಾಮರ್ಶನ ಗ್ರಂಥಗಳು:**

೧. ಕುವೆಂಪು ದರ್ಶನ – ದೇಜಗೌ
೨. ಶ್ರೀ ರಾಮಾಯಣ ದರ್ಶನಂ – ಕುವೆಂಪು
೩. ಮನುಜಮತ ವಿಶ್ವಪಥ – ಕುವೆಂಪು ಅವರ ಭಾಷಣ
೪. ಯುಗದ ಕವಿ – ಡಾ. ಕೆ. ಸಿ. ಶಿವಾರೆಡ್ಡಿ
೫. ಹೀಗಿದ್ದರು ಕುವೆಂಪು – ಪ್ರಭುಶಂಕರ
೬. ಕುವೆಂಪು ನುಡಿತೋರಣ – ಬಿ. ಆರ್. ಸತ್ಯನಾರಾಯಣ (ಸಂ)

# ಕುವೆಂಪು–ಸಂಸ್ಕೃತಿ ಚಿಂತನೆ
## (ಮಲೆಗಳಲ್ಲಿ ಮದುಮಗಳು ಕಾದಂಬರಿ ಅನುಲಕ್ಷಿಸಿ)

**ಡಾ. ಮಹಾಂತೇಶ ದುರಗಣ್ಣವರ**
**ಸಹಾಯಕ ಪ್ರಾಧ್ಯಾಪಕರು**
**ಮಾತೋಶ್ರೀ ಹೊಳಿಯಮ್ಮ ಮಹಿಳಾ ಕಲಾ, ಪದವಿ**
**ಮಹಾವಿದ್ಯಾಲಯ, ಕುಷ್ಟಗಿ.**
**ತಾ.ಕುಷ್ಟಗಿ ಜಿ.ಕೊಪ್ಪಳ – ೫೮೩೨೭೭**

**“ಮನುಕುಲದ ಮನೋವಿಕಾಸವೇ ಸಂಸ್ಕೃತಿ”**
**–ದೇವುಡು**

ಸಂಸ್ಕೃತಿ ಪರಿಕಲ್ಪನೆ ಕುರಿತು ತಾತ್ವಿಕವಾಗಿ ಚಿಂತನೆ ಮಾಡುವುದು. ಅದರ ಅರ್ಥವನ್ನು ವಿವಿಧ ಉದಾಹರಣೆಗಳ ಮೂಲಕ ನಿರೂಪಿಸುವುದು, ಈ ಕುರಿತು ಪ್ರಕಟವಾಗಿರುವ ಇತರರ ಚಿಂತನೆಗಳ ಜೊತೆ ವಾಗ್ವಾದ ನೆಡೆಸುವುದು ಇವೆಲ್ಲವನ್ನು ವಿಶಾಲ ಅರ್ಥದಲ್ಲಿ ಸಂಸ್ಕೃತಿ ಚಿಂತನೆ ಎನ್ನಬಹುದು. ಸಂಸ್ಕೃತಿ ಎಂದರೆ ಸಮುದಾಯದ ಅಥವಾ ನಾಡಿನ ಒಂದು ಗುರುತು, ಧಾರ್ಮಿಕವಾಗಿರುವ ಅದು ಪವಿತ್ರವೂ, ಪ್ರಾಚೀನವೂ ಆದದ್ದು, ಹಿರೀಕರಿಂದ ಬಂದಿರುವ ಅದನ್ನು ಆಧರಿಸಬೇಕು, ಅನುಸರಿಸಬೇಕು ಮಾತ್ರವಲ್ಲ. ರಕ್ಷಿಸಬೇಕು ಎನ್ನುವ ಭಾಗವೇ ಪ್ರಧಾನವಾಗಿರುತ್ತದೆ. ಸಾಮಾನ್ಯವಾಗಿ ಸಂಸ್ಕೃತಿಯನ್ನು ಆಡುವ ಭಾಷೆ, ಹುಟ್ಟಿದ ಜಾತಿ, ಅನುಸರಿಸುವ ಧರ್ಮ, ವಾಸಿಸುವ ಪ್ರದೇಶದ ಆಧಾರಗಳಲ್ಲಿ ನೋಡಲಾಗುತ್ತದೆ. ಜಾತಿ, ಧರ್ಮಗಳ ಪ್ರದೇಶದ ಆಧಾರಗಳಲ್ಲಿ ನೋಡಲಾಗುತ್ತದೆ. ಜಾತಿ ಧರ್ಮಗಳ ಆಧಾರದಲ್ಲಿ ಸಂಘಟಿತವಾಗಿರುವ ಸಮುದಾಯಗಳನ್ನು ಗಮನಿಸಿದರೂ, ಅಲ್ಲಿ ವರ್ಗಭಿನ್ನತೆಗಳು, ಒಳಪಂಗಡಗಳು ಪ್ರಾದೇಶಿಕ ವ್ಯತ್ಯಾಸಗಳು ನಗರ ಗ್ರಾಮೀಣ ಅಂತರಗಳು ಮಾತಿನ ವ್ಯತ್ಯಾಸಗಳು ಇವೆ. ಭಾಷೆ, ಊಟ, ಉಡುಪು ದೈವ ಆಚರಣೆ, ನಂಬಿಕೆಗಳು ಸಮುದಾಯಗಳಲ್ಲಿ ಅಸಂಖ್ಯ ವೈವಿಧ್ಯವನ್ನು ಕುವೆಂಪುರವರು ತಮ್ಮ “ಮಲೆಗಳಲ್ಲಿ ಮದುಮಗಳು” ಕಾದಂಬರಿಯಲ್ಲಿ ಚಿಂತನೆ ಮಾಡಿರುವುದನ್ನು ಈ ಲೇಖನದ ಮೂಲಕ ತಿಳಿಯಲಾಗುವುದು.

ಗುತ್ತಿಯು ತಾನು ಪ್ರೀತಿಸಿದ ಹುಡುಗಿ ತಿಮ್ಮಿಯೂ ತನ್ನನ್ನೇ ಮದುವೆಯಾಗುಬೇಕೆಂಬ ಬಯಕೆಯಿಂದ ಅಂತ್ರ–ಮಂತ್ರದ ಮೊರೆಯಾಗಿ ಹೀಗೆ ಅಂಗಲಾಚುತ್ತಾನೆ “ನನಗೊಂದು ಅಂತ್ರ ಬೇಕಿತ್ತಲ್ಲೋ” ಎಂದನು.

“ಯಾವುದಕ್ಕೋ?”

“ಅದೇ ನೀವು ಹೇಳಿದ್ರಲ್ಲಾ ಅದಕ್ಕೆ”

“ಅಂದರೆ?”

“ಈಗ ನೋಡಿ ತಿಮ್ಮಿನ ನಾ ಮದುವೆಯಾಗಬೇಕು ಅಂತಾ ಸುಮಾರು ಕಾಲದಿಂದ ಕೇಳ್ತಿದ್ದೀನಿ. ಆ ಬಚ್ಚ ಮನ್ನೆ ಮನ್ನೆ ಸುರು ಮಾಡ್ಯಾನೆ. ತಿಮ್ಮಿ ಮನಸ್ಸು ನನ್ನ ಕಡೆ ಆಗಿ, ನಾ ಹೇಳ್ದ ಹಂಗೆ ಕೇಳಾಕೆ ಒಂದು ಅಂತ್ರ ಕೊಟ್ರೆ ನನ್ನ ಪರಾಣ ಇರೋತನಕ ನಿಮ್ಮ ಗುಲಾಮನಾಗಿರ್ತೀನಿ”[೧] ಗುತ್ತಿ ತಾನು ಇಷ್ಟ ಪಟ್ಟಿರುವ ಹುಡುಗಿಯನ್ನು ತಾನೇ ಮದುವೆಯಾಗಬೇಕೆಂದು ಅವನ ಮನಸ್ಸಿನ ಹೆಬ್ಬಯಕೆಯಾಗಿತ್ತು. ಲೋಕರೂಢಿಯಂತೆ ಕನ್ಯಾ ಇರುವ ಮನೆಗೆ ಕನ್ಯಾ ಕೇಳುವುದಕ್ಕೆ ಬರುವುದು ಸಹಜವಾದ ಸಂಗತಿ. ಅದರಂತೆ ಬಚ್ಚ ಎಂಬ ವ್ಯಕ್ತಿಯು ತಿಮ್ಮಿನ ಮದುವೆಯಾಗುವ ಸುದ್ದಿ ಹರಡುತ್ತದೆ. ಇದರಿಂದ ತಿಮ್ಮಿಗಾಗಿ ಅನಂತಕಾಲ ಬಕ ಪಕ್ಷಿಯಂತೆ ಕಾಯುತ್ತಿದ್ದ ಗುತ್ತಿಗೆ ತಳಮಳ ಉಂಟಾಗುತ್ತದೆ. ಗುತ್ತಿ ಅಂತ್ರ–ಮಂತ್ರದ ಮೊರೆ ಹೋಗಲು ತಿಮ್ಮಿಯನ್ನು ಇವನಿಗೆ ಕೊಡಲು ಅವರ ಮನೆಯಲ್ಲಿ ಬಹುಶಃ ವಿರೋಧ ಭಾವನೆ ಇತ್ತೆಂದು ಊಹಿಸಬಹುದು. ಗುತ್ತಿಗೆ ಅಂತ್ರ–ಮಂತ್ರ ಪದ್ಧತಿಯಲ್ಲಿ ಬಲವಾದ ನಂಬಿಕೆಯಿರುವುದರಿಂದ ಕಣ್ಣಾ ಪಂಡಿತರ ಹತ್ತಿರ ಅಂಗಲಾಚಿರುವನು.

ನಾಗತ್ತೆ ಎಂಬ ಮಹಿಳೆಯು ತನ್ನ ವಿಧವೆ ಸೊಸೆಯಾದ ನಾಗಕ್ಕನನ್ನು ದೊಡ್ಡ ದೊಡ್ಡ ಶ್ರೀಮಂತರೊಂದಿಗೆ ವೇಶ್ಯಾವೃತ್ತಿ ಕೈಗೊಳ್ಳುವಂತೆ ಪ್ರಚೋದಿಸುವಳು. ಹೋದ ವರುಷ ನಾಗಕ್ಕ ಮತ್ತು ಅವಳ ಅತ್ತೆ ಹೂವಳ್ಳಿಯಲ್ಲಿ ಸಸಿನೆಟ್ಟಿಯಿಂದ ಹಿಡಿದು ಗದ್ದೆಕೊಯ್ಲು ಮುಗಿಯುವವರೆಗೂ ಇದ್ದುದ್ದಕ್ಕೆ ನಾಗತ್ತೆಯ ಮೂಲೊದ್ದೇಶ ತನ್ನ ಸೊಸೆ ನಾಗಕ್ಕನ ಮನಸನ್ನು ವೆಂಕಟಣ್ಣನ

ಪರವಾಗಿ ಹಣ್ಣು ಮಾಡುವುದೇ ಆಗಿತ್ತು. ಅದಕ್ಕೆ ಅವಳು ಯಾರೊಬ್ಬರಿಗೂ ಸುಳಿವು ಸಿಗದಂತೆ ಅನೇಕ ವಾಮಾಚಾರದ ಉಪಾಯಗಳನ್ನು ಕೈಗೊಂಡು ನೆರವೇರಿಸಿದಳು."[೨] ಕುವೆಂಪುರವರು ಕೌಟುಂಬಿಕ ಮಹಿಳಾ ಸ್ಥಿತಿಗಳನ್ನು ಸೂಕ್ಷ್ಮವಾಗಿ ಗಮನಿಸಿ ವಿಕೃತ ಮನಸ್ಸಿನ ಅತ್ತೆಯಂದಿರನ್ನು, ಮುಗ್ಧ ಸ್ವಭಾವದ ಸೊಸೆಯಂದಿರ ಬದುಕನ್ನು ಕಟ್ಟಿಕೊಟ್ಟಿದ್ದಾರೆ. ನಾಗತ್ತೆ ಎಂಬುವವಳು ತನ್ನ ಆಡಂಬರದ ಬದುಕಾಗಿ ಸೊಸೆಯನ್ನು ಹೀನ ಪ್ರವೃತ್ತಿಗೆ ಒಗ್ಗೂಡಿಸುತ್ತಿರುವುದು ಗೋಚರಿಸಿದೆ. ನಾಗತ್ತೆ ಸೊಸೆ ಇನ್ನೂ ವಯಸ್ಕಳು, ಸುಂದರವಾಗಿರುವಂತವಳು. ಆದರೆ ನಾಗಕ್ಕ ಈ ಹೀನ ಪ್ರವೃತ್ತಿಗೆ ಹೊಂದಿಕೊಳ್ಳದಿದ್ದಾಗ ಅವಳಿಗೆ ಗೊತ್ತಿಲ್ಲದೆ ನಾಗತ್ತೆ ವಾಮಾಚಾರದ ತಂತ್ರವನ್ನು ಬಳಸುವಳು. ಹೂವಳ್ಳಿಯ ವೆಂಕಟಣ್ಣನ ಮನೆಯಲ್ಲಿ ನಾಗಕ್ಕ ಯಾವುದೇ ಸಿಡುಕಿನ ಸ್ವಭಾವ ತೋರದೆ ಇರುವುದರಿಂದ ನಾಗತ್ತೆ ತಾನು ಮಾಡಿಸಿರುವ ವಾಮಾಚಾರ ಯಶಸ್ವಿಯಾಗಿದೆ ಎಂದು ಹುಬ್ಬಿದ್ದಳು. ಆದರೆ ನಾಗತ್ತೆ ಊಹಿಸಿದಂತೆ ವಾಮಾಚಾರವೂ ಆಗಿರಲಿಲ್ಲ, ವೆಂಕಟಣ್ಣಾನೂ ಆಗಿರಲಿಲ್ಲ. ವೆಂಕಟಣ್ಣನ ಮಗಳಾದ ಚಿನ್ನಮ್ಮನ ಸೌಜನ್ಯ, ಸ್ನೇಹ, ವಿಶ್ವಾಸ, ಅನುಕಂಪ, ಸೋದರೀಯ ವಾತ್ಸಲ್ಯ ಇತ್ಯಾದಿಗಳೆಲ್ಲ ಒಂದುಗೂಡಿ ನಾಗಕ್ಕನ ಹೃದಯ ಸೂರೆಗೊಂಡಿದ್ದವು.

ಶಂಕ್ರಪ್ಪ ಹೆಗ್ಗಡೆಯವರ ಮಗ ರಾಮು ಪೂರ್ಣ ಸೊರಗಿ ಹೋಗಿರುವ ಸ್ಥಿತಿಯನ್ನು ಕಂಡು ವೆಂಕಟಣ್ಣ "ರಾಮು ಯಾಕೆ ಪೂರಾ ಲಾಚಾರಾಗಿ ಸೋತು ಹೋದ್ಹಾಂಗೆ ಕಾಣ್ತದಲ್ಲ?" ಎನ್ನುತ್ತಾ ಹರಿವಾಣದಲ್ಲಿದ್ದ ಒಂದು ವೀಳೆದೆಲೆಗೆ ಕೈ ಹಾಕಿದನು.

"ಹುಟ್ಟಿದಾರಂಭ್ಯ ಅದರ ಹಣೆ ಬರಾನೇ ಹಾಂಗೆ ಯಾವಾಗ್ಲೂ ರ್ರೋತೆ ತಪ್ಪದು"

"ದೋಯಿಸರ ಹತ್ರ ಒಂದು ಚೀಟಿಬೂತಿನಾದ್ರೂ ತರಿಸಿ ಕಟ್ಟಿನೋಡು"

"ಅಯ್ಯೋ ನೀನೊಬ್ಬ! ಜೋಯಿಸರ ಕೈಲಿ ಚೀಟಿಬೂತಿನ ತರಿಸಿ ಆಯ್ತು, ನಿಮಿತ್ತ ನೋಡಿಸಿ ಆಯ್ತು; ಕಡೆಗೆ ಕಲ್ಲೂರು ದೇವಸ್ಥಾನದಲ್ಲಿ ಅವರು ಹೇಳಿದ ಹಾಂಗೆ ಸತ್ಯನಾರಾಯಣ ವ್ರತಾನೂ ಮಾಡಿಸಿ ಆಯ್ತು"

"ಸಿದ್ದರ ಮಠಕ್ಕೆ?"

"ಅದೂ ಆಯ್ತು...... ಅದರ ಸೊಂಟದಾಗ್ ನೇತಾಡ್ತದಲ್ಲಾ, ಸಿದ್ದರ ಮಠದ ತಾಯಿತಾ!"

"ಹಾಂಗಾರೆ ಆ ಮೂಗೂರು ಗಣಮಗನ್ನಾದ್ರೂ ಕರೆಸಿ, ಮನೇಲಿ ಗಣ ಬರ್ಸಿ, ಕೇಳಿ ನೋಡಬೋದಲ್ಲಾ?"

"ಹ್ಞೂ ಅದೊಂದು ಬಾಕಿ!.... ಆದರ ನಮ್ಮ ಜೋಯಿಸರು ಏನೋ ಇನ್ನೊಂದು ಅನುಮಾನ ಪಡ್ತಾರೆ......ಯಾರೋ ನಮಗ ಆಗದವರು.........."

"ನಿನ್ನ ಮ್ಯಾಲ ಮಾಟ ಮಾಡ್ಲೋರು ಯಾರಂತಪ್ಪಾ....?"

"ಯಾರಂದ್ರೆ? ಹೊಟ್ಟೆಕಿಚ್ಚಿನವರಿಗೆ ಏನು ಬರಗಾಲವೇ?"

"ಬಸವನಂಥಾ ಮನುಷ್ಯ ದೇವರು ದಿಂಡಿರು ಪೂಜೆ–ಗೀಜೆ ಮಾಡ್ತಿಯಾ, ನಿನ್ನ ಮ್ಯಾಲೇನ ಹೊಟ್ಟೆಕಿಚ್ಚು?"[೩] ಈ ಸಂಭಾಷಣೆಯಲ್ಲಿ ವೆಂಕಣ್ಣ ಹಾಗೂ ಶಂಕ್ರಪ್ಪ ಹೆಗ್ಗಡೆಯವರು ಆರೋಗ್ಯ ಸಮಸ್ಯೆ ಪರಿಹಾರಕ್ಕಾಗಿ ಹಲವಾರು ಸಾಂಪ್ರದಾಯಿಕ ಆಚರಣೆ ಮೊರೆ ಹೋಗಿರುವುದು ತಿಳಿಯುತ್ತದೆ. ಶಂಕ್ರಪ್ಪ ಹೆಗ್ಗಡೆಯವರ ಮಗ ರಾಮು ಜನಿಸಿದ ದಿನದಿಂದಲೂ ಯಾವುದೋ ಕಾಯಿಲೆಗೆ ಈಡಾಗಿರುವುದು ತಿಳಿಯುತ್ತದೆ. ಆ ಮಗುವಿನ ಶೋಚನೀಯ ಪರಿಸ್ಥಿತಿ ಕಂಡು ವೆಂಕಣ್ಣನವರು ಆಗಿನ ಕಾಲಘಟ್ಟದ ಜೋಯಿಸರ ಅಂತ್ರ–ಮಂತ್ರ ಶಕ್ತಿಯಿಂದ ಪರಿಹಾರ ಕಂಡು ಕೊಳ್ಳುವುದಕ್ಕೆ ಸೂಚಿಸುವರು. ಇದಕ್ಕೆ ಪ್ರತಿಯಾಗಿ ಶಂಕ್ರಣ್ಣನವರು ಯಂತ್ರ– ಮಂತ್ರ ಹಾಗೂ ಆರಾಧ್ಯ ದೈವ ವ್ರತಾಚರಣೆ ಮಾಡಿರುವುದರ ಬಗ್ಗೆ ಜಿಗುಪ್ಸೆಯಿಂದ ತಿಳಿಸುವನು. ಇದರಿಂದ ಅಂದಿನ ಜನ ಸಮುದಾಯವು ಹೆಚ್ಚು ಧಾರ್ಮಿಕ ಭಕ್ತಿಗೆ ಒಳಗಾಗಿದ್ದರೆಂಬುದು ಗಮನಿಸಬಹುದು. ಪರಂಪರೆಯಿಂದ ಬಂದಿರುವ ಸಂಪ್ರದಾಯವನ್ನೇ ಅವಲಂಭಿಸಿರುವುದನ್ನು ತಿಳಿಯಬಹುದು. ಮನುಷ್ಯನಿಗೆ ಕಾಯಿಲೆ ಬರುವುದು ಸಹಜ. ಆದರೆ ಬಂದಿರುವ ಕಾಯಿಲೆ ಬಹು ಬೇಗನೆ ವಾಸಿಯಾಗದಿದ್ದರೆ ದೇವರು – ದಿಂಡಿರು, ಜೋಯಿಸರು ಶಕ್ತಿಯಿಂದ ವಾಸಿಯಾಗದಿದ್ದಾಗ ಬೇರೆ ಕಾರಣಗಳನ್ನು ತಿಳಿಯದೇ ತಮಗೆ ಯಾರೋ ಮಾಟ–ಮಂತ್ರ ಮಾಡಿದ್ದಾರೆಂದು ಮಾನಸಿಕ ಖಿನ್ನತೆಗೆ ಈಡಾಗುವುದು ತೋರುತ್ತದೆ. ಅವರಿಗೆ ಒದಗಿರುವ ಯಾವುದೇ ಸಂಕಷ್ಟಗಳ ದೋಷವನ್ನು ತಮಗಾಗದವರ ಮೇಲೆ ಮಾಟ–ಮಂತ್ರದ ಮೇಲೆ ಆರೋಪಿಸಿ ಪರಿಹಾರ ಕಂಡುಕೊಳ್ಳುವುದಕ್ಕೆ ಪ್ರಯತ್ನಿಸುವುದು ಮನಗಾಣಲಾಗಿದೆ.

ದೇವಯ್ಯನು ಕ್ರೈಸ್ತ ಪಾದ್ರಿಯ ಪ್ರಭಾವಕ್ಕೊಳಗಾಗಿ ಮನೆಗೆ ಬರುವನು. ತನ್ನ ಪತ್ನಿ ದೇವಮ್ಮ ಬಾಣಂತಿಯ ಸಮಯದಲ್ಲಿ ಅಂತ್ರ ಹಾಗೂ ಮಂತ್ರಿಸಿದ ಕಾಯಿಯನ್ನು ತೊಟ್ಟಲಿಗೆ ಕಟ್ಟಿರುವಳು. ಇದನ್ನು ಗಮನಿಸಿದ ದೇವಯ್ಯನು ಕಿತ್ತು ಮೂಲೆಯಲ್ಲಿ ಬಿಸಾಕಿರುವನು. ಇದನ್ನು ಕಂಡು ದೇವಮ್ಮ ಅತ್ತು ಕರ್ದು "ಹಾಗೆಯೇ ಮೆಲ್ಲನೆ ಎದ್ದು, ಬಾಗಿಲು ಸಂಧಿಯ ಕಸದ ಮೂಲೆಗೆ ನೆಡೆದು, ಬಾಗಿ, ತನ್ನ ಗಂಡ ಎಸೆದಿದ್ದು ತೆಂಗಿನಕಾಯಿ, ಅಂತ್ರ, ಕಾಣಿಕೆಗಳನ್ನೆಲ್ಲ ಎತ್ತಿ ಹಣೆಗೆ ಮುಟ್ಟಿಸಿಕೊಂಡು, ಅವನ್ನೆಲ್ಲ ಗೋಡೆಯ ಗೂಡಿನಲ್ಲಿಟ್ಟು ಬಾಗಿಲು ಮುಚ್ಚಿ, ಮತ್ತೆ ಬಂದು ಹಾಸಿಗೆಯ ಮೇಲೆ ಕುಳಿತಳು"[೪]. ದೇವಮ್ಮನ್ನು ಆಚಾರ– ವಿಚಾರದ ಬಗ್ಗೆ ಪತಿ ದೇವಯ್ಯ ಎಷ್ಟೋ ಪ್ರತಿರೋಧ ಒಡ್ಡಿದರೂ ಒಬ್ಬ ಸುಸಂಸ್ಕೃತ ಮಹಿಳೆಗೆ ಸಂಪ್ರದಾಯಗಳು ಮುಖ್ಯ ಎಂಬುದನ್ನು ವಿವೇಚಿಸಲಾಗಿದೆ. ತನ್ನ ತವರು ಮನೆಯಲ್ಲಿ ತನ್ನ ತಾಯಿ ಕಲಿಸಿರುವಂತ ಸಂಸ್ಕೃತಿ ತಮ್ಮ ಸಂಸ್ಕೃತಿ ಎಂದು

ದೇವಮ್ಮ ಅರಿತುಕೊಂಡಿರುವಳು. ಹರಿದು ಬಿಸಾಕಿರುವ ಅಂತ್ರ–ಮಂತ್ರದ ತೆಂಗಿನಕಾಯಿಗಳನ್ನು ಮರಳಿ ತರುವಾಗ ತನ್ನ ಹಣೆಗೆ ಒತ್ತಿಕೊಳ್ಳುವುದರಿಂದ ಧಾರ್ಮಿಕ ಭಕ್ತಿ ಹಾಗೂ ನಂಬಿಕೆ ಬಲವಾಗಿರುವುದು ತಿಳಿಯುತ್ತದೆ. ದೇವಯ್ಯನ ಪಾಲಿಗೆ ಆ ಅಂತ್ರ–ಮಂತ್ರ ತೆಂಗಿನಕಾಯಿ ಕಸವಾಗಿ ಕಂಡರೆ, ದೇವಮ್ಮಳಿಗೆ ಅವು ಭಕ್ತಿ ಭಾವದ ಪಾವಿತ್ರ್ಯವಾಗಿ ತೋರಿದ್ದವು.

ಗುತ್ತಿಯನ್ನು ಹೊಲೆಯ ಸಮುದಾಯದವನಾಗಿದ್ದರೂ ತಾನು ಪ್ರೀತಿಸಿದ ಹುಡುಗಿ ತಿಮ್ಮಿಯನ್ನು ಹಾರಿಸಿಕೊಂಡು ಬರುವುದಾಗಿ ತನ್ನ ಮನಸ್ಸಿನಲ್ಲಿ ತೀರ್ಮಾನಿಸಿದ್ದನು. ಅದಕ್ಕೆ ಸರಿಯಾದ ಉಡುಗೆ–ತೊಡುಗೆಗಳನ್ನು ಧರಿಸಿಕೊಂಡು ಹೋಗುತ್ತಿರುವನು. ಇದನ್ನು ಕಂಡು ಮಂಜನು “ಒಳ್ಳೆ ದರೋಬಸ್ತಾಗಿದ್ದೀಯಲ್ಲ” ಎಂಬುವುದಕ್ಕೆ ಕಾರಣ ಅವನ ಉಡುಪಿನಲ್ಲಾಗಿದ್ದ ಮಾರ್ಪಾಡು. ಸೊಂಟಕ್ಕೆ ಸುತ್ತಿದ್ದ ಮೋಟು ಪಂಜೆ ವಿನಾ ಬೆತ್ತಲೆಯಾಗಿದ್ದ ಮರಾಠಿಯವನ ಮುಂದೆ ಹೊಲೆಯನು ಕೊಳೆ ಸರ್ವವ್ಯಾಪಿಯಾಗಿದ್ದರೂ, ಷೋಕಿಯಾಗಿದ್ದನು. ತಲೆಗೆ ಒಂದು ಕೆಂಪು ವಸ್ತ್ರ ಸುತ್ತಿದ್ದನು. ಮೈಗೊಂದು ಕಸೆ ಅಂಗಿ ಹಾಕಿದ್ದನು. ಪಂಚೆಯ ತುದಿ ಮೊಳಕಾಲನ್ನು ದಾಟಿತ್ತು. ಕಿವಿಗೆ ಬೇರೆ ಒಂಟಿ! ಒಂಟಿಗಳನ್ನು ಹೊಸದಾಗಿ ಹಾಕಿರಲಿಲ್ಲವಾದರೂ ಹೊಸ ವೇಷದಿಂದ ಅವುಗಳಿಗೊಂದು ಹೊಸ ಷೋಕಿ ಬಂದಿತ್ತು. ಎಲ್ಲಕ್ಕೂ ತಿಲಕಪ್ರಾಯವಾಗಿ ಮುಖ ಕ್ಷೌರ. ಹೊಲೆಯನಾಗಿದ್ದರೂ ಬೆಳ್ಳಗಿದ್ದುದರಿಂದ ಮಲೆಯನಂತೆ ಕಾಣುತ್ತಿದ್ದನು. ಹೆಗಲ ಮೇಲೆ ಮಡಿಸಿ ಹಾಕಿಕೊಂಡಿದ್ದ ಕಂಬಳಿಕೊಪ್ಪೆ ಅವನು ಮಳೆಗೆ ತಯಾರಾಗಿ ಹೊರಟಿದ್ದನ್ನೂ, ಬಗಲಲ್ಲಿ ಇರುಕಿಕೊಂಡಿದ್ದ ಬಗನಿಯ ಮರದ ಕರಿಯ ದೊಣ್ಣೆ”[೫] ಗುತ್ತಿ ವೇಷಭೂಷಣವು ಮಾರಾಟಿಗ ಮಂಜನ ಮನಸ್ಸನ್ನು ಚಂಚಲಗೊಳಿಸಿದೆ. ಏಕೆಂದರೆ ಹೊಲೆಯ ಜಾತಿಯ ಗುತ್ತಿಯ ಉಡುಗೆ–ತೊಡುಗೆ ಅವನನ್ನು ಮೀರಿಸುವದಾಗಿರಬಹುದು. ಗುತ್ತಿಯು ಸರ್ವವ್ಯಾಪಿ ಕೊಳೆಯಾಗಿದ್ದರೂ ಲಕ್ಷಣವಾಗಿ ಕಾಣುತಿದ್ದನು. ಯಾವಾಗಲೂ ಕೆಲಸದಲ್ಲಿದ್ದು ಕೊಳೆಯಿಂದಿರುತ್ತಿರುವ ಗುತ್ತಿಯು ಯಾವಾಗೋ ಒಮ್ಮೆ ಶುಭ್ರವಾದ ಬಟ್ಟೆಗಳನ್ನು ಧರಿಸುವುದರಿಂದ ಆಕರ್ಷಕನಾಗಿ ಕಾಣುತ್ತಿದ್ದನು. ಹೊಲೆಯನಾಗಿರುವ ಗುತ್ತಿಯ ಉಡುಗೆ–ತೊಡುಗೆಗಳು ಇಂದಿನ ಕಾಲದ ಓದುಗರಿಗೆ ಪರಿಚಯವಾಗುವಂತಿವೆ. ಕಂಬಳಿಯು ಈ ದಲಿತ ಸಮುದಾಯದವರಿಗೆ ಕಡಿಮೆ ದರದಲ್ಲಿ ಲಭ್ಯವಾಗುತ್ತಿರುವುದು ತಿಳಿಯುತ್ತದೆ.

ಮಲೆನಾಡು ಭಾಗದ ಗಿಡಮೂಲಿಕೆಯ ಔಷಧಿಯ ವೈದ್ಯ ಪಂಡಿತರಾದ ಕಣ್ಣಾ ಪಂಡಿತರು “ಬೆಳ್ಳಗಿದ್ದ ತೆಳು ಪಂಜೆಯನ್ನುಟ್ಟು, ಅದೇ ತೆರನಾದ ಬಟ್ಟೆಯ ಒಂದು ಗೀರು ಗೀರಿನ ಶರ್ಟನ್ನು ಹಾಕಿ, ಮಲೆಯಾಳಿಗಳ ರೀತಿಯಲ್ಲಿ ತಲೆಯ ಹಿಂಭಾಗವನ್ನು ಬೋಳಿಸಿ, ಮುಂಭಾಗದಲ್ಲಿ ಉದ್ದವಾಗಿ ಬೆಳೆದಿದ್ದ ಕೂದಲನ್ನೆಲ್ಲಾ ಸೇರಿಸಿ ಮುಡಿ ಕಟ್ಟಿ, ಸ್ವಲ್ಪ ಕಪ್ರಗಿದ್ದರೂ ಆಪಾದಮಸ್ತಕವಾಗಿ ಚೊಕ್ಕಟವಾಗಿದ್ದ ಪಂಡಿತರು ನೆಗೆ ಮೊಗದಿಂದ ಬೆಳ್ಳಗೆ ಹಲ್ಲು ಬಿಟ್ಟು ಗುತ್ತಿಯನ್ನು ನೋಡಿ ಅರ್ಥಪೂರ್ಣವಾಗಿ ನಕ್ಕರು”[೬]. ವ್ಯಕ್ತಿಯು ಧರಿಸುವ ವಸ್ತ್ರಗಳು ಅವರವರ ವ್ಯಕ್ತಿತ್ವವನ್ನು ಸೂಚಿಸುತ್ತವೆ ಎನ್ನುತ್ತಾರೆ. ಅದರಂತೆ ಪಂಡಿತರಾದವರು ಎಂಥ ವಸ್ತ್ರಗಳನ್ನು ಧರಿಸಬೇಕೆಂಬುದು ಕಣ್ಣಾ ಪಂಡಿತರು ಅರಿತುಕೊಂಡಿದ್ದರು. ಅವರು ಧರಿಸುವಂತ ವಸ್ತ್ರಗಳು ಅವರ ವೇಷಭೂಷಣಗಳು ದಲಿತರಿಗೆ ಗೌರವ ಸೂಚಕವಾಗಿ ತೋರುತ್ತಿದ್ದವು. ಪಂಡಿತರು ಮಲೆಯಾಳಿಗಳಂತೆ ತಲೆಗೂದಲನ್ನು ಕಟ್ಟುವುದರಿಂದ ಮಲೆಯಾಳಿ ಪಂಡಿತರ ಪ್ರಭಾವಕ್ಕೆ ಒಳಗಾಗಿದ್ದರು ಎಂಬುದು ಸೂಚಿಸುತ್ತದೆ. ಕಣ್ಣಾ ಪಂಡಿತರು ಸಂಪೂರ್ಣವಾಗಿ ಸ್ವಚ್ಛತೆಯಿಂದ ಹಸನ್ಮುಖಿಗಳಾಗಿದ್ದು, ತಮ್ಮ ಕಡೆಗೆ ಬರುವಂತ ಜನರನ್ನು ಪ್ರೀತಿಯಿಂದ ಕಾಣುತ್ತಿರುವುದು ಗೋಚರಿಸುತ್ತದೆ. ಪಂಡಿತರಾದವರ ಆಚಾರ–ವಿಚಾರದ ಸಂಸ್ಕೃತಿಯನ್ನು ಕುವೆಂಪುರವರು ಚಿಂತನೆ ಮಾಡಿದ್ದಾರೆ.

ಸುಬ್ಬಣ್ಣ ಹೆಗ್ಗಡೆಯವರ ಮಗಳು ಮಂಜಮ್ಮ ಬಿರಾಂಬರುಡುಗೆಯ ಸಡಿಲ ಚೆಲುವು ಹಳೆ ಮನೆಯಂತಹ ಹಳೆತನದ ಮನೆತನಗಳಿಗೆ ಆಗಿನ್ನು ಸೋಂಕಿರಲಿಲ್ಲ. “ಮಂಜಮ್ಮ ಗೊಬ್ಬೆ ಸೆರಗು ಬಿಗಿದು ಕಟ್ಟಿ, ಸೀರೆಯ ಬಹುಭಾಗದ ವಿಸ್ತೀರ್ಣವನ್ನೆಲ್ಲಾ ಸೊಂಟಕ್ಕೆ ಸುತ್ತಿ, ಉಳಿದಿದ್ದನ್ನು ಆದಷ್ಟು ಕೃಪಣತೆಯಿಂದ ನಿರಿ ಮಾಡಿ ಹರಡಿಗೆ ಮೇಲೆ ಮೊಳಕಾಲಿನ ನಡುವರೆಗೆ ನೀಡಿ ಉಟ್ಟಿದ್ದಳು. ಮೀಯುವುದರಲ್ಲಿಯೂ, ಒಗೆಯುವುದರಲ್ಲಿಯೂ ಹೊತ್ತು ಕಳೆಯಬಾರದೆಂದು ಅಪ್ಪಯ್ಯ ಹೇಳುತ್ತಿದ್ದುದರಿಂದ ಆಕೆಯ ಸೀರೆ ಕೊಳಕಾಗಿತ್ತು. ಆ ಕೊಳಕನ್ನು ಯಾರು ಲೆಕ್ಕಿಸುತ್ತಿರಲಿಲ್ಲ. ತನ್ನ ಮೈಯ ಬಿಳಿ ಬಣ್ಣದಲ್ಲಿ ಮಾತ್ರ ಆಕೆಗೆ ಅಪಾರ ಅಭಿಮಾನವಿತ್ತು.”[೭] ಸುಬ್ಬಣ್ಣ ಹೆಗ್ಗಡೆಯವರ ಕುಟುಂಬ ಇನ್ನೂ ಸಂಪ್ರದಾಯಕ ಉಡುಗೆ ತೊಡುಗೆಗಳನ್ನು ಬಳಸುತ್ತಿರುವುದು ಗೋಚರಿಸುತ್ತದೆ. ಕುವೆಂಪುರವರ ಕಾಲಘಟ್ಟದಲ್ಲಿಯೂ ಆ ಮಲೆನಾಡಿನ ಭಾಗದ ಹೆಗ್ಗಡೆ ಕುಟುಂಬದ ಮಹಿಳೆಯರು ತಲೆಯ ಮೇಲೆ ಸೆರಗನ್ನು ಹಾಕಿಕೊಂಡು ಉಳಿದಿರುವ ಸೆರಗಿನ ಭಾಗವನ್ನು ತಮ್ಮ ಸೊಂಟದ ಭಾಗಕ್ಕೆ ಬಿಗಿದು ಕಟ್ಟುತ್ತಿದ್ದರೆಂದರೆ ಅವರು ಕೆಲಸಕಾರ್ಯಗಳನ್ನು ಮಾಡುವಾಗ ತೊಡರಾಗದಿರುವುದು ಒಳಿತೆಂದು ತಿಳಿದಿದ್ದರು. ಇವರು ಸೀರೆಯನ್ನು ಧರಿಸಿರುವ ರೀತಿಯನ್ನು ಗಮನಿಸಿದರೆ ಇವರು ಹೆಗ್ಗಡೆಯ ಮನೆತನದ ಮಹಿಳೆಯರೆಂದು ಸುಲಭವಾಗಿ ಸೂಚಿಸಬಹುದಾಗಿತ್ತು. ಮಂಜಮ್ಮ ತಂದೆಯವರು ಹೇಳಿರುವಂತೆ ಸ್ನಾನ ಮಾಡುವುದು ಹಾಗೂ ಬಟ್ಟೆ ತೊಳೆಯುವುದರಲ್ಲಿ ಹೆಚ್ಚು ಸಮಯ ಕಳೆಯಬಾರದು ಎಂಬುದಕ್ಕೆ ಅವಳು ಧರಿಸಿದ ಸೀರೆ ಕೊಳಕಾಗಿದ್ದರೂ ಅವಳ ಮೈಗೆಂಪು ಬಣ್ಣದಲ್ಲಿ ನೋಡುಗರಿಗೆ ಸೀರೆಯ ಸ್ವಚ್ಛತೆಯ ಕಡೆಗೆ ಗಮನವಿರುತ್ತಿರಲಿಲ್ಲ ಎಂಬುದನ್ನು ಅರಿಯಬಹುದು.

ಸುಬ್ಬಣ್ಣ ಹೆಗ್ಗಡೆಯವರ ಮಗಳು ಮಂಜಮ್ಮ ತನ್ನ ಪ್ರಾಯದ ವಯಸ್ಸಿನಲ್ಲಿ "ಮೂಗುತಿ, ಬುಗುಡಿ ಎಸಳ, ಸರಪಣಿ ಮೊದಲಾದ ಆಗಿನ ಕಾಲದ ಮೆಚ್ಚಿನ ಸ್ಥೂಲಾಭಿರುಚಿಯ ಭಾರಾಲಂಕಾಗಳನ್ನು ನೋಡುತ್ತಾ ಮುದುವುಕ್ಕಿ ಸುಬ್ಬಣ್ಣ ಹೆಗ್ಗಡೆಯವರು" ಲಚ್ಚಾಚಾರಿ ಬಂದಿದ್ದೇನೆ?" ಎಂದು ಕೊಟ್ಟಿದ ಅಡ್ಡಿಕೆಯ ನೆನಪಾಗಿ ಕೇಳಿದರು."[೮] ಮಂಜಮ್ಮ ತನ್ನ ತಂದೆಯ ಕಣ್ಬೆಳಕಿನಲ್ಲಿ ಬೆಳೆಯುತ್ತಾ ಬೆಳೆಯುತ್ತಾ ವಯಸ್ಕಳಾಗಿ ಬೆಳೆದು ನಿಂತಿದ್ದಾಳೆ. ಮಗಳು ಮಂಜಮ್ಮ ವಯಸ್ಸಿಗೆ ಅನುಗುಣವಾಗಿ ಹಾಕಿಕೊಂಡಿರುವ ಆಭರಣಗಳು ತಂದೆಗೆ ಪ್ರೀತಿ ಮಮತೆಯನ್ನುಟ್ಟಿಸಿದೆ. ಇದರಿಂದ ಹೆಣ್ಣು ಮೂಲತಃ ಸುಂದರವಾಗಿದ್ದರೂ ಆಸುಂದರತೆ ಹೆಚ್ಚು ಮೆರಗು ಬರಬೇಕಾದರೆ ಅವಳು ಆಭರಣಗಳನ್ನು ಧರಿಸುವುದು ಸೂಕ್ತವೆನಿಸುತ್ತದೆ. ಮಕ್ಕಳು ಧರಿಸುವಂತೆ ವಸ್ತ್ರ ಒಡವೆಗಳ ಮೂಲಕ ಮಕ್ಕಳು ಮದುವೆ ವಯಸ್ಸಿಗೆ ಬಂದಿದ್ದಾರೆ ಎಂಬುದು ಸೂಚಿಸುತ್ತದೆ.

ಕೋಣೂರಿನ ಕಾಗಿನಹಳ್ಳಿ ಅಮ್ಮ ತನ್ನ ಮೊಮ್ಮಗಳಾದ ಚಿನ್ನಮ್ಮನು ಮುಕುಂದ ಭಾವನ ಊರಿಗೆ ಹೋಗುವುದಕ್ಕೆ ಪ್ರತಿದಿನ ತನ್ನ ಅಜ್ಜಿಗೆ ಕೇಳುವುದರಿಂದ "ಅಂತೂ ಕೊನೆಗೆ ಒಂದು ದಿನ ಅಪರಾಹ್ನ ಅಜ್ಜಿ ಮೊಮ್ಮಗಳ ನೆತ್ತಿಗೆ ಅರಳೆಣ್ಣೆ ಹಾಕಿ, ತಲೆಬಾಚಿ, ಮೋಟು ಜಡೆ ಹಾಕಿ, ಗೊರಟೆ ಹೂ ಕಟ್ಟಿಮುಡಿಸಿ, ಇದ್ದುದರಲ್ಲಿ ಒಂದು ಅಚ್ಚುಕಟ್ಟಿನ ಪರಿಕಾರ ಹಾಕಿ, ನೆಂಟರ ಮನೆಗೆ ಅವಳನ್ನು ಕರೆದುಕೊಂಡು ಹೋಗಲು ಸಿದ್ಧಮಾಡಿದಳು"[೯] ಹೆಣ್ಣು ಮಕ್ಕಳನ್ನು ಒಂದೂರಿಂದ ಇನ್ನೊಂದು ಊರಿಗೆ ಕರೆದುಕೊಂಡು ಹೋಗುವಾಗ ಚನ್ನಾಗಿ ಶೃಂಗರಿಸಿಕೊಂಡು ಹೋಗುವುದು ಸಂಪ್ರದಾಯ. ಇವು ಮುಂದೆ ಕೊಡು ತೊಗೊಳುವ ಮಕ್ಕಳಾದ್ದರಿಂದ ನೋಡುಗರಿಗೆ ಲಕ್ಷಣವಾಗಿ ಕಾಣುವಂತಿರಬೇಕೆಂದು ಅಜ್ಜಿಯ ಮನಸ್ಥಿತಿಯೂ ಆಗಿತ್ತು. ಅರಳೆಣ್ಣೆ, ಗೊರಟೆ ಹೂವು ಮಲೆನಾಡು ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಲಂಕಾರಕ್ಕೆ ಬಳಸುತ್ತಿರುವುದನ್ನು ಊಹಿಸಲಾಗಿದೆ. ಯಾವ ವಯಸ್ಸಿಗೆ ಯಾವ ಉಡುಗೆ ಹಾಕಬೇಕೆಂಬುದು ಮನೆಯ ಹಿರಿಯರಾದಂತವರಿಗೆ ಜ್ಞಾನ ಇದ್ದಿದ್ದು ತಿಳಿಯುತ್ತದೆ.

ಕಾಗಿನ ಹಳ್ಳಿ ಅಮ್ಮ ಮೊಮ್ಮಗಳಾದ ಚಿನ್ನಮ್ಮಳಗೆ ವಯಸ್ಸಿನ ಕಾಲಘಟ್ಟ ತಿಳಿದು "ಇದ್ದಕ್ಕಿದ್ದಂತೆ ಒಂದು ದಿನ ಅಜ್ಜಿ ಚಿನ್ನಮ್ಮನಿಗೆ ಪರಿಕಾರ ಬಿಡಿಸಿ ಕಿರಿಗೆ ಉಡಿಸಿದ್ದಳು. ಚಿನ್ನಮ್ಮನಿಗೆ ಏನೋ ಒಂದು ತರಹದ ಕಿನಸಿಗೆಯಾಗಿ ಒಂದೆರಡು ಸಾರಿ ಕಿರಿಗೆಯಿಂದ ಪರಿಕಾರಕ್ಕೆ ಪುನಃ ದಾಟಿದ್ದಳು. ಆದರೆ ಅಜ್ಜಿ ತಾನಿನ್ನೂ ಚಿಕ್ಕ ಹುಡುಗಿಯಲ್ಲ, ಸಣ್ಣ ಹೆಂಗಸು ಎಂಬ ವಿಚಾರವನ್ನು ಸೂಕ್ಷ್ಮವಾಗಿ ತಿಳಿಸಿದ್ದಳು."[೧೦] ನಮ್ಮ ಪೂರ್ವಜರ ಕಾಲದಲ್ಲಿ ವಯಸ್ಸಿಗೆ ಅನುಗುಣವಾದ ಉಡುಗೆ – ತೊಡುಗೆಗಳನ್ನು ಧರಿಸುತ್ತಿದ್ದರು. ಆದ್ದರಿಂದ ಉಡುಪುಗಳು ನಮ್ಮ ವಯಸ್ಸಿನ ಸೂಚಕಗಳಾಗಿ ಪರಿಣಮಿಸಿವೆ. ಚಿನ್ನಮ್ಮನಿಗೆ ಪರಿಕಾವೇ ಇಷ್ಟವಾಗಿದ್ದರಿಂದ ಧರಿಸುವ ವಯಸ್ಸಿನ ಸೂಕ್ಷ್ಮತೆಯನ್ನು ತಿಳಿ ಹೇಳಿರುವುದನ್ನು ಗಮನಿಸಬಹುದಾಗಿದೆ.

ಕೋಣೂರು ರಂಗಪ್ಪಗೌಡರ ವೇಷ –ಭೂಷಣಗಳು ಆಗಿನ ಕಾಲದ ಗೌಡರ ಗತ್ತನ್ನು ಸೂಚಿಸುತ್ತವೆ. ಸುಪುಷ್ಟವಾದ ದೇಹ ಬಲಿಷ್ಠವಾದ ವ್ಯಕ್ತಿಯಾಗಿದ್ದರು. ಗೌರ ವರ್ಣದ ಅವರ ಮುಖದ ಮೇಲಿನ ಕರ್ರನೆಯ ಕೊಂಕುಮೀಸೆ, ಹೆಗಲ ಮೇಲೆ ಕೆಂಪು ಶಾಲು, ಎರೆಡೂ ಕಿವಿಗಳಲ್ಲಿಯೂ ಮೇಲೆ ಕೆಳಗೆ ಇದ್ದ ಎರೆಡೆರೆಡು ಚಿನ್ನದ ಒಂಟಿಗಳು ಬಿಸಿಲಿಗೆ ಆಗಾಗ ತಳಿಸುತ್ತಿದ್ದವು. ಆ ಕಾಲದ ನಾಡಿನ ಪದ್ಧತಿಯಂತೆ ಲಾಳಾಕಾರವಾಗಿ ಕ್ಷೌರ ಮಾಡಿಸಿಕೊಂಡಿದ್ದರು. ಸೊಂಟದ ಕಚ್ಚೆ ಪಂಚೆ ಮೊಣಕಾಲನ್ನು ಮುಚ್ಚಿತ್ತು. ಒಂದು ಚಿನ್ನದ ನೇವಳ ಉಡಿದಾರದಂತೆ ಸುತ್ತಿದ್ದ ಪಂಚೆಯ ಮೇಲೆ ಸೊಂಟದಲ್ಲಿ ಹಳದಿಯಾಗಿ ಹೊಳೆಯುತ್ತಿತ್ತು. ಅವರು ಕಾಲಿಗೆ ಹಾಕಿಕೊಂಡಿದ್ದ ಕೆಂಪು ಹೂ ಕೂರಿಸಿದ ಕನ್ನಡ ಜಿಲ್ಲೆಯ ಗಿರ್ಕಿಮೆಟ್ಟು ಗಿರಕು ಬರಕು ಸದ್ದು ಮಾಡುತ್ತಾ ಅವರ ಆಗಮನಕ್ಕೆ ಒಂದು ರೀತಿಯ ಪರಾಕು ಹೇಳುವಂತಿತ್ತು. ಕುವೆಂಪುರವರು ಮಲೆನಾಡಿನ ಭಾಗದ ಗೌಡರ ಉಡುಗೆ–ತೊಡುಗೆ ಸಂಸ್ಕೃತಿಯನ್ನು ವಿವೇಚಿಸಿದ್ದಾರೆ.

ಮಲೆನಾಡಿನ ಐಗಳಾದ ಅನಂತಯ್ಯನವರ ವೇಷ–ಭೂಷಣವನ್ನು ಹಿಡಿದಿಡುವ ಪ್ರಯತ್ನವನ್ನು ಕುವೆಂಪುರವರು ಪ್ರಯತ್ನಿಸಿದ್ದಾರೆ. ಅನಂತಯ್ಯನವರು ಹೆಂಗಸರಂತೆ ಪೂರ್ತಿ ಕೂದಲು ಬಿಟ್ಟಿದ್ದರು. ಬೈತಲೆ ತೆಗೆಯದೇ ಬಾಚಿ ಹಿಂದಕ್ಕೆ ಜುಟ್ಟು ಗಂಟು ಹಾಕಿದ್ದರು. ಇದರಿಂದ ಐಗಳು ಸಾಮಾನ್ಯ ಜನರಲ್ಲಿ ಭಿನ್ನತೆಯಾಗಿ, ತಮ್ಮ ಪೂಜಾ ಪುನಸ್ಕಾರಕ್ಕೆ ಇದರಿಂದ ಮೆರಗು ಬರುತ್ತದೆ ಎಂಬ ನಂಬಿಕೆ ಇತ್ತು ಎಂದು ತಿಳಿಯಬಹುದು. ಅವರ ಕಿವಿಯಲ್ಲಿಯೂ ಒಂಟಿ ಹೊಳೆಯುತ್ತಿದ್ದವು. ಒಂದು ಕಾಲಿನಲ್ಲಿ ಬೆಳ್ಳಿಯ ಸೆರಗೆಯೂ ಇತ್ತು. ಒಂದು ಜಾಳು ಪಂಜೆಯ ಕಚ್ಚೆ ಹಾಕಿ ಬನೀನು ತೊಟ್ಟಿದ್ದರು. ಇದರಿಂದ ಐಗಳ ಸರಳತೆಯ ಉಡುಗೆ–ತೊಡುಗೆಗಳನ್ನು ಗಮನಿಸಲಾಗಿದೆ.

ಶಂಕ್ರಪ್ಪ ಹೆಗ್ಗಡೆಯವರ ತುಳಸಿ ಪೂಜಾ ಪದ್ಧತಿಯನ್ನು ಗಮನಿಸಿದಾಗ "ಅಂಗಳದ ನಡುವೆ ಹೊಸದಾಗಿ ಹಾಕಿದ್ದ ಮಣ್ಣಿನ ತುಳಸಿ ಕಟ್ಟೆ ಕೆಮ್ಮಣ್ಣು ಬಳಿದಿದ್ದರಿಂದ ಕೆಂಪಗೆ ಕಾಣುತ್ತಿತ್ತು. ಅದರ ತಲೆಯ ಮೇಲೆ ಎಲ್ಲಿಯೋ ಕೆಲದಿನಗಳ ಹಿಂದೆ ನೆಟ್ಟಿದ್ದ ತುಳಸಿಯ ಪುಟ್ಟ ಸಸಿ ತನ್ನ ಹಸುರುತನದಿಂದ ಗಮನ ಸೆಳೆಯುವಷ್ಟೂ ಬೆಳೆದಿರಲಿಲ್ಲ. ಕೆಂಪು ನಾಮಗಳ ನಡುವೆ ಬಿಳಿಯ ನಾಮಗಳು ತುಳಸಿಯ ನಾಲ್ಕು ಮೈಗಳಲ್ಲಿ ಎದ್ದು ಕಾಣುವಂತಿದ್ದವು. ಮುಡಿಸಿದ್ದ ಗೊರಟೆ ಹೂಗಳ ಹಳದಿಯ ನಡುವೆ ಕೆಂಪು ಪರ್ವತ ಬಾಳೆಯ ಹೂಗಳೂ, ಭೂತಾಳಿಯ ರಕ್ತ ವರ್ಣದ ಎಲೆಯ ರೂಪದ ಹೂಗಳೂ ರಂಜಿಸಿದ್ದವು."[೧೧] ತುಳಸಿ ಕಟ್ಟೆಯ ಪೂಜಾ ಅಲಂಕಾರದ ಸ್ಥಿತಿಯನ್ನು ಕವಿಗಳು ವರ್ಣಿಸಿದ್ದಾರೆ. ಹೆಗ್ಗಡೆಯವರು ತುಳಸಿ ಆರಾಧನೆಯ ಸಂಪ್ರದಾಯಕ್ಕೆ ಹೆಚ್ಚು ಆಧ್ಯತೆ ನೀಡಿರುವುದನ್ನು ಗಮನಿಸಲಾಗಿದೆ. ಈ ತುಳಸಿಕಟ್ಟೆ ಅಲಂಕಾರಕ್ಕೆ ಪ್ರಾಕೃತಿಕವಾಗಿ ದೊರೆಯುವ ಕೆಮ್ಮಣ್ಣು, ಗೊರಟೆ

ಹೂ, ಪರ್ವತದ ಬಾಳೆಯ ಹೂವುಗಳು ಸದುಪಯೋಗ ಮಾಡಿಕೊಂಡಿದ್ದರು. ತುಳಸಿ ಗಿಡವು ಸುಪುಷ್ಟವಾಗಿ ಬೆಳೆಯದಿದ್ದರೂ ಪೂಜೆಗೆ ಮಹತ್ವ ನೀಡಿ ಆ ತುಳಸಿಕಟ್ಟೆಗೆ ವಿಭೂತಿ ಹಾಗೂ ಗಂಧ ಮಿಶ್ರಿತ ನಾಮವನ್ನು ಭಕ್ತಿ ಪೂರ್ವಕವಾಗಿ ಲೇಪಿಸಿದ್ದರು.

ಶಂಕ್ರಪ್ಪ ಹೆಗ್ಗಡೆಯವರ ತುಳಸಿ ಪೂಜಾ ಭಕ್ತಿಭಾವವನ್ನು ಗಮನಿಸಿದಾಗ "ಕೈಮುಗಿದುಕೊಂಡು ಬಾಯಲ್ಲಿ ಏನನ್ನೋ ಹೇಳಿಕೊಳ್ಳುತ್ತಾ ದೇವರಿಗೆ ಸುತ್ತು ಬರುತ್ತಿದ್ದ ಶಂಕ್ರಪ್ಪ ಹೆಗ್ಗಡೆಯವರು ಸೊಂಟಕ್ಕೆ ಸುತ್ತಿದ್ದ ಒಂದು ಅರೆ ಒದ್ದೆಯಾಗಿದ್ದ ಪಾಣಿ ಪಂಜೆ ವಿನಾ ಸಂಪೂರ್ಣವಾಗಿ ನಗ್ನರಾಗಿದ್ದರು. ಆ ಪಾಣಿಪಂಜೆ ಎಷ್ಟು ಜಾಳಾಗಿತ್ತೆಂದರೆ ಒಳಗೆ ಕಟ್ಟಿದ ಲಂಗೋಟಿಯ ರೂಪುರೇಖೆ ಸುಸ್ಪಷ್ಟವಾಗಿ ಕಾಣುತ್ತಿತ್ತು. ಅವರ ಹೊಕ್ಕುಳದ ಮೇಲ್ಭಾಗದಲ್ಲಿಯೂ, ಎದೆಯ ಇಕ್ಕೆಲಗಳಲ್ಲಿಯೂ, ತೋಳುಗಳ ಭುಜ ಪ್ರದೇಶದಲ್ಲಿಯೂ ತುಳಸಿಕಟ್ಟೆಗೆ ಬಳಿದಂತಹ ಬಿಳಿಯ ನಾಮಗಳ ನಡುವಣ ಕೆಂಪು ನಾಮಗಳ ತ್ರಿಪುಂಡ್ರಗಳು ಮೆರೆಯುತ್ತಿದ್ದವು. ಹಣೆಯ ಮೇಲೆ ಮಾತ್ರ ಕೆಂಪು ನಾಮವೊಂದೇ ವಿರಾಜಮಾನವಾಗಿತ್ತು. ಲಾಳಾಕಾರವಾಗಿ ನುಣ್ಣನೆ ಚೌರ ಮಾಡಿದ್ದ ಅವರ ಮುಂದೆಲೆಯ ಮೇಲೆಯೂ ನಾಮದ ಗುರುತು ಕಾಣುತ್ತಿತ್ತು. ಚಿನ್ನದ ಒಂಟಿಗಳಿಂದ ಕಿವಿಯ ಸಂಧಿಯಲ್ಲಿ ಸಿಕ್ಕಿಸಿಕೊಂಡಿದ್ದ ತುಳಸಿಯ ಕುಡಿಯ ಗೊಂಚಲು ಚೆನ್ನಾಗಿ ಕಾಣುವ ಪ್ರಮಾಣದಲ್ಲಿಯೇ ಇತ್ತು."[೧೨] ಮಲೆನಾಡಿನ ಪ್ರದೇಶದಲ್ಲಿ ಹೆಗ್ಗಡೆಯವರ ತುಳಸಿ ಪೂಜೆಯನ್ನು ನೆರವೇರಿಸಲು ಸಂಪ್ರದಾಯದ ಬದ್ಧತೆಯನ್ನು ಸೂಚಿಸುತ್ತದೆ. ಶಂಕ್ರಪ್ಪ ಹೆಗ್ಗಡೆಯವರು ಪಾರಂಪರಿಕವಾಗಿ ಬಂದಿರುವ ಸಂಪ್ರದಾಯವನ್ನು ಯಥಾವತ್ತಾಗಿ ಆಚರಿಸುವುದು ತಿಳಿಯುವುದು. ಪೂಜಾ ಸಂದರ್ಭದಲ್ಲಿ ಅವರು ತೊಡುವಂತ ಜಾಳವಾದ ಪಂಜೆಯು ದಿನನಿತ್ಯದಲ್ಲಿ ಧರಿಸುವ ಪಂಜೆಗಳಿಗೆ ಭಿನ್ನತೆ ತೋರುವುದರಲ್ಲಿ ಆರಾಧನೆ ಕಾರ್ಯಕ್ಕೆ ಚೈತನ್ಯತೆ ತೋರುವುದು. ದೇಹದ ವಿವಿಧ ಭಾಗಗಳಿಗೆ ವಿಭೂತಿ ನಾಮಗಳನ್ನು ಹಾಕಿಕೊಳ್ಳುವುದರಿಂದ ಅರೆಬೆತ್ತಲೆ ದೇಹ ನೋಡುಗರ ನೋಟಕ್ಕೆ ಒಳಗಾಗದಿರಲೆಂದು, ಅವರ ದೃಷ್ಟಿಯು ತಾವು ಪೂಜೆಗೋಸ್ಕರ ಮೆರಗುಗೊಂಡಿರುವ ಕಡೆಗೆ ಗಮನವಿರಲೆಂದು ಊಹಿಸಬಹುದು. ಈ ರೀತಿಯ ಆರಾಧನಾ ಪದ್ಧತಿಯು ಸಾಂಪ್ರದಾಯವಾಗಿ ಪರಿಣಮಿಸಿರುವುದು ಕುವೆಂಪುರವರು ವಿವೇಚಿಸಿದ್ದಾರೆ.

ಶಂಕ್ರಪ್ಪ ಹೆಗ್ಗಡೆಯವರು ತಮ್ಮ ತುಳಸಿಕಟ್ಟೆಯನ್ನು ಹೊಲೆಯರು ಹಾಗೂ ಹಂದಿಯಿಂದ ಮೈಲಿಗೆಯಾಗುತ್ತದೆ ಎಂಬ ನಂಬಿಕೆಯಿಂದ "ಅವರು ಸ್ನಾನ ಮಾಡಿ, ಕೆದರಿ ಬೆನ್ನ ಮೇಲೆ ಇಳಿಬಿಟ್ಟಿದ್ದ ತಮ್ಮ ಉದ್ದನೆಯ ಕೂದಲನ್ನು ಬೇಗ ಬೇಗನೇ ಒಟ್ಟು ಮಾಡಿ ಕಟ್ಟಿಕೊಳ್ಳುತ್ತಾ "ಅಯ್ಯಯ್ಯೋ! ಹೊಲೆ ಮಾದಿಗರ ಸಾವಾಸ, ತುಳಸಿ ಮೇಲೆ ನುಗ್ಗಿಸ್ತಾರಲ್ಲೋ, ಹೇಲ್ ತಿನ್ನ ಹಂದೀನ! ಥೂ!" ಎಂದು ಕೂಗುತ್ತಲೇ ಮೆಟ್ಟಿಲು ಹಾರಿ ಅಂಗಳಕ್ಕೆ ಧುಮುಕಿದರು."[೧೩] ಶಂಕ್ರಪ್ಪ ಹೆಗ್ಗಡೆಯವರು ಇಡೀ ಮಾನವ ಕುಲವನ್ನೇ ಭಿನ್ನತೆಯ ದೃಷ್ಟಿಯಿಂದ ಕಾಣುತ್ತಾರೆ. ಪ್ರಾಣಿ ಹಾಗೂ ಮನುಷ್ಯ ಜಾತಿಯಲ್ಲಿ ಮೇಲು–ಕೀಳು ಎಂಬ ಬೇಧ ಭಾವನೆ ಅವರ ಮನಸ್ಸಿನಲ್ಲಿ ಮನೆ ಮಾಡಿದೆ. ತಮ್ಮ ಧಾರ್ಮಿಕ ಭಾವದಲ್ಲಿ ನಿರ್ಜೀವಕ್ಕೆ ಅನುಕಂಪತೆ ತೋರಿ ಸಜೀವಿಗಳಾದ ಮನುಷ್ಯ ಹಾಗೂ ಪ್ರಾಣಿಗಳಿಗೆ ನಿಷ್ಕರಣೆತೆಯನ್ನು ತೋರಿರುವುದು ಗಮನಿಸಬಹುದು. ಕಣ್ಣಿಗೆ ಕಾಣದೇ ಇರುವ ದೇವರು ಹಾಗೂ ಜಾತಿಯ ಮಡಿ ಮೈಲಿಗೆಯಲ್ಲಿ ತಾರತಮ್ಯದ ಮನಸ್ಸಿನ ಭಾವನೆಗಳು ಎದ್ದು ಕಾಣುತ್ತವೆ.

ಒಟ್ಟಾರೆ ಕುವೆಂಪುರವರು ಮಲೆನಾಡಿನ ಜನರ ಉಡುಗೆ–ತೊಡುಗೆ ನಂಬಿಕೆಗಳನ್ನು ಸಾಮಾಜಿಕ ಸಂಸ್ಕೃತಿಯನ್ನು ಗುರುತಿಸಿದ್ದಾರೆ. ಕುವೆಂಪುರವರು ಪೂರ್ವಕಾಲದ ಹಾಗೂ ತಮ್ಮ ಸಮಕಾಲೀನ ಸಾಂಸ್ಕೃತಿಕ ವಿಚಾರಗಳನ್ನು ಚಿಂತನೆ ಮಾಡಿದ್ದಾರೆ. ದಲಿತ ಸಮುದಾಯದ ಬೇಟೆಯ ಸಂಸ್ಕೃತಿ ಮತ್ತು ಮಲೆನಾಡಿನ ಭಾಗದ ಜನಸಮುದಾಯವು ತಮಗೆ ಕಷ್ಟಗಳು ಒದಗಿದಾಗ ಅಂತ್ರ–ಮಂತ್ರ, ವಾಮಾಚಾರ, ಹರಕೆ ಬೇಡಿಕೆಗಳನ್ನು ಅನುಸರಿಸುತ್ತಿವದನ್ನು ಕಟ್ಟಿಕೊಟ್ಟಿದ್ದಾರೆ. ಹೆಗ್ಗಡೆ ಸಮುದಾಯದವರು ದಲಿತರನ್ನು ಬಳಸಿಕೊಳ್ಳುವ ಸಂಸ್ಕೃತಿ, ಮಡಿ ಮೈಲಿಗೆ ಸಂಸ್ಕೃತಿ, ಆರಾಧನಾ ವಿಧಾನವನ್ನು ಕಣ್ಮುಂದೆ ಕಟ್ಟುವಂತೆ ಚಿತ್ರಿಸಿದ್ದಾರೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಸಾಧ್ಯಾಂತವಾಗಿ ಅಧ್ಯಯನ ಮಾಡಿದಾಗ ಸಾಂಸ್ಕೃತಿಕ ಚಿಂತನೆಯ ನೆಲೆಗಳು ವಿವಿಧತೆಯಲ್ಲಿ ಕಂಡು ಬರುತ್ತವೆ.

**ಅಡಿ ಟಿಪ್ಪಣಿಗಳು:**

೧. ಕುವೆಂಪು, ಮಲೆಗಳಲ್ಲಿ ಮದುಮಗಳು, ೨೦೧೧, ಪು.ಸಂ.೨೬
೨. ಅದೇ, ಪು.ಸಂ.೮೧
೩. ಅದೇ, ಪು.ಸಂ.೮೫
೪. ಅದೇ, ಪು.ಸಂ.೨೦೬
೫. ಅದೇ, ಪು.ಸಂ.೨
೬. ಅದೇ, ಪು.ಸಂ.೨೪
೭. ಅದೇ, ಪು.ಸಂ.೪೧
೮. ಅದೇ, ಪು.ಸಂ.೪೨
೯. ಅದೇ, ಪು.ಸಂ.೭೫

೧೦. ಅದೇ, ಪು.ಸಂ.೮೦
೧೧. ಅದೇ, ಪು.ಸಂ.೮೩
೧೨.ಅದೇ, ಪು.ಸಂ.೮೩

**:ಪರಾಮರ್ಶನ ಗ್ರಂಥಗಳು:**


೧. ಕುವೆಂಪು, ೧೯೬೭, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ವಾಣಿವಿಲಾಸ ಪುರಂ, ಮೈಸೂರು–೦೨.
೨. ದೇವುಡು, ೨೦೧೫, ಕರ್ನಾಟಕ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ–ಬೆಂಗಳೂರು
೩. ರಹಮತ್ ತರಿಕೆರೆ, ೨೦೦೮, ಸಾಂಸ್ಕೃತಿಕ ಅಧ್ಯಯನ, ಧರಣಿ ಪ್ರಿಂಟರ್ಸ್–ಬೆಂಗಳೂರು.
೪. ವೆಂಕಟಸುಬ್ಬಯ್ಯ ಜಿ.(ಸಂ), ರಾಜ್ಯಶ್ರೀ ಸತೀಶ(ಸ.ಸಂ), ೨೦೦೬, ಕನ್ನಡ ಕ್ಲಿಷ್ಟ ಪದಕೋಶ, ಲಕ್ಷ್ಮಿ ಮುದ್ರಣಾಲಯ, ಬೆಂಗಳೂರು.
೫. ಶಿವರಾಂ ಕಾರಂತ ಕೆ., ೨೦೧೨, ಸಿರಿಗನ್ನಡ ಅರ್ಥಕೋಶ, ಪ್ರಕಾಶಕರು ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಕುಮಾರ ಪಾರ್ಕ ಈಸ್ಟ್, ಬೆಂಗಳೂರು–೦೧.
೬. ಹೆಬ್ಬಾಲೆ ಕೆ. ನಾಗೇಶ್, ೨೦೧೧, ಬಹುಸಂಸ್ಕೃತಿ ಮತ್ತು ದೇಶಿ ಜಾತ್ರೆಗಳ ಮಹಾ ಸಮನ್ವಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

# ಕುವೆಂಪು ವೈಚಾರಿಕತೆ

**ಡಾ. ಬಿ. ಎಸ್. ಗಂಗನಳ್ಳಿ**
**ಕನ್ನಡ ವಿಭಾಗದ ಮುಖ್ಯಸ್ಥರು,**
**ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜ,**
**ಬೆಳಗಾವಿ**

ಕುವೆಂಪು ೨೦ ನೇ ಶತಮಾನ ಕಂಡ ಅನರ್ಘ್ಯ "ರತ್ನ" ದಂತಹ ಕವಿ. ಅದ್ಭುತ ವೈಚಾರಿಕತೆಯ ಮಹಾನ ವಿಚಾರವಾದಿ. ಎಲ್ಲ ಸಂತ ಶರಣರ, ಮಹಾನುಭಾವಿಗಳ ತತ್ವ, ಸಂದೇಶಗಳನ್ನು ಕುವೆಂಪು ಅವರಲ್ಲಿಯೇ ಮೇಳವಿಸಿವೆ. ಜೀವ–ಆತ್ಮ, ಆಧ್ಯಾತ್ಮಕ ಅರಿವಿನ ಒಳದನಿಯನ್ನು ಅವರ ಒಂದೊಂದು ಮಾತು, ಬರಹಗಳು ಪ್ರಕಟಪಡಿಸುತ್ತವೆ. ಮತ–ಧರ್ಮ, ಪಂಥ–ಪಂಗಡ, ಗಂಡು–ಹೆಣ್ಣು, ಮೇಲು–ಕೀಳು ಎನ್ನುವ ಅಂಧಾನುಕರಣೆ ತುಂಬಿದ ಸಮಾಜದ ರೀತಿ–ನೀತಿಗಳನ್ನು ಭೇಧಿಸಿ ಅಲ್ಲಿರುವ ಕೊಳೆಯನ್ನು, ದೋಷವನ್ನು ಮತ್ತು ಕಲ್ಮಷವನ್ನು ಸ್ವಲ್ಪವೂ ಉಳಿಯದಂತೆ ತೊಳೆಯಲು ಮುಂದಾದವರು ಕುವೆಂಪು. ಅವರ ಬರಹ ಮತ್ತು ಭಾಷಣಗಳೆಂಬ ಸಾಧನೆಗಳ ಪರಿಣಾಮಕಾರಿಯಾದ ಕಾರ್ಯಗೈದಿವೆ. ಶತಮಾನಗಳಿಂದಲೂ ಬೇರೂರಿದ ಅನಿಷ್ಠ ಪದ್ಧತಿಗಳು, ಕುರುಡ ಆಚರಣೆ, ಮೂಢನಂಬಿಕೆ, ಮೌಢ್ಯತೆ ಅಜ್ಞಾನವೆಂಬ ಕತ್ತಲೆಯಲ್ಲಿ ಬದುಕುತ್ತಿರುವ ಭಾರತೀಯರಿಗೆ ಪ್ರಖರ ಬೆಳಕಿನ ಕಿರಣಗಳಂತಹ ಕುವೆಂಪು ಅವರ ವಿಚಾರಗಳು ಸಮಾಜದಲ್ಲಿ ಸಾಹಿತ್ಯದಲ್ಲಿ ಮತ್ತು ವೈದ್ಯಕೀಯ ಜೀವನಕ್ರಮದಲ್ಲಿ ಕ್ರಾಂತಿಕಾರವಾಗಿ ಲಗ್ಗೆ ಇಟ್ಟು ವೈಜ್ಞಾನಿಕ ಮತ್ತು ವೈಚಾರಿಕತೆಯ ಪ್ರಜ್ಞೆಯನ್ನು ಮೂಡಿಸಿದವು.

ಕುವೆಂಪು ಅವರು ನೀಡಿರುವ ಐದು ಸಂದೇಶಗಳು ಕೇವಲ ಭಾರತೀಯರಿಗೆ ಅಷ್ಟೇ ಅನ್ವಯಿಸದೆ, ವಿಶ್ವಕ್ಕೂ ಅನ್ವಯಿಸುವ ಅನನ್ಯ ತತ್ವಗಳಾಗಿವೆ. ಅವುಗಳೆಂದರೆ; ೧) **ಮನುಜಮತ** ೨) **ವಿಶ್ವಪಥ** ೩) **ಸರ್ವೋದಯ** ೪) **ಸಮನ್ವಯ** ೫) **ಪೂರ್ಣದೃಷ್ಟಿ.**

ಪ್ರಸ್ತುತ ಭಾರತ ಅತ್ಯಂತ ಅಪಾಯಕಾರಿಯಾಗಿ ಬೆಳೆಯುತ್ತಿರುವ ಸಂದರ್ಭದಲ್ಲಿ ಕುವೆಂಪು ಅವರ ಚಿಂತನೆಗಳು, ಬರಹಗಳು ಪ್ರಭುತ್ವ ಹಾಗೂ ಪುರೋಹಿತಶಾಹಿ ವರ್ಗದ ವಿರುದ್ಧ ಗಟ್ಟಿ ಆಕ್ರೋಶದ ಧ್ವನಿಯಾಗಿ, ಮೂಡಿಬಂದಿವೆ. ಮೌಢ್ಯದಲ್ಲಿ ಉಸಿರಾಡುವ ಜನತೆಯ ಮತದಭ್ರಮೆಯನ್ನು ಇಳಿಸುತ್ತವೆ. ಕುಲ, ಮತಧರ್ಮ–ಜಾತಿ ಮನೋಭಾವ ಎಷ್ಟು ಕಲುಷಿತವಾಗಿದೆಯೆಂದರೆ, ಮನುಷ್ಯತ್ವನ್ನೇ ಮರೆತು ಮಾನವೀಯತೆಯನ್ನೇ ಕಡೆಗಣಿಸುತ್ತಿರುವ ಸನ್ನಿವೇಶದಲ್ಲಿ ಕುವೆಂಪು ಹೇಳಿರುವುದು;

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ/ಮತಿಯಿಂದ ದುಡಿಯಿರೈ ಲೋಕಹಿತಕೆ
ಆ ಮತದ ಈ ಮತದ ಹಳೆಮತದ ಸಹವಾಸ/ ಸಾಕಿನ್ನು ಸೇರಿರೈ ಮನುಜ ಮತಕೆ;
ಓ ಬನ್ನಿ ಸೋದರರೆ ವಿಶ್ವಪಥಕೆ ಮತಭೇದದಿಂದ

ಮೌಢ್ಯತೆ, ಮೌಢ್ಯತೆಯಿಂದ ಅಂಧಾನುಕರಣೆ ಕಡೆ ಸಾಗಿದ ಜನತೆ, ಮನುಷ್ಯ–ಮನುಷ್ಯರ ನಡುವೆ ಬೇಲಿಹಾಕಿಕೊಂಡಿರುವುದು. ಸಮಾಜದ ಹಿತಕ್ಕೆ ಆಂತಕಕಾರಿ ಬೆಳವಣಿಗೆಯಾಗಿದೆ. ಮತವೆಂಬ ಮೋಹಕ್ಕೆ ಜೋತುಬಿದ್ದು, ಗೊಡ್ಡು ಸಂಪ್ರದಾಯಗಳಿಗೆ, ದಾಸರಾಗಿ ಅಜ್ಞಾನ ಅಂಧಕಾರದಲ್ಲಿ ಮುಳುಗಿದ ಜನತೆಗೆ 'ಹಳೆ'ಯದನ್ನು ಬಿಟ್ಟು ಹೊಸ ಬೆಳವಣಿಗೆಯತ್ತ ಸಾಗಿರಿ, ಆ ಮತ, ಈ ಮತ ಎನ್ನುವ ಗತ ಮೌಲ್ಯಕ್ಕೆ ಕಟ್ಟಿಬೀಳದೆ, ಹಳೆಮತದ ಸಹವಾಸ ಬಿಟ್ಟು, ಮನುಜ ಮತಕ್ಕೆ ಸೇರಲು ಕಳಕಳಿಯಿಂದ ಅವ್ಹಾನಿಸುತ್ತಾರೆ. ಹಳೆಮತದ ಕೊಳೆಯೆಲ್ಲ ಹೊಸಮತದ ಹೊಳೆಯಲ್ಲಿ ಕೊಚ್ಚಿ ಹೋಗಲಿ, ಬರಲಿ ವಿಜ್ಞಾನ ಬುದ್ಧಿ ಎಂದು ಜಾಗೃತಿ ಮೂಡಿಸಿದ್ದಾರೆ.

ಕುಲ ಕುಲ ಕುಲವೆಂದೊರಲುವೆ ಏತಕೆ?/ಮತಿಯಿಂದ ದುಡಿಯಿರೈ ಲೋಕಹಿತಕೆ
ಆ ಮತದ ಈ ಮತದ ಹಳೆಮತದ ಸಹವಾಸ/ ಸಾಕಿನ್ನು ಸೇರಿರೈ ಮನುಜ ಮತಕೆ;
(ಕುವೆಂಪು : ನವಿಲು"" – ಕವನ ಸಂಕಲನ ಪುಟ : ೨೭),

ಕುಲ, ಕುಲ, ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೊಬಲ್ಲಿರಾ? ಎಂಬ ಕನಕದಾಸರ ವಾಣಿಯ ಹೋಲಿಕೆಯನ್ನು ಕಾಣುತ್ತೇವೆ. ಪ್ರಕೃತಿಯಲ್ಲಿ ಮರ, ಪಕ್ಷಿ–ಪ್ರಾಣಿ, ಬೆಟ್ಟನದಿ, ಗಾಳಿ–ಬೆಳಕು, ಭಾನು–ಭೂಮಿ ಎಲ್ಲಿಯೂ ಕಾಣದ ಕುಲ, ಮತ, ಜಾತಿಭೇದ ಮನುಷ್ಯ ಕುಲದಲ್ಲಿ ಯಾಕೆ ಉಳಿದುಕೊಂಡಿದೆ? ಸಕಲ ಜೀವಿಗಳಲ್ಲಿ ಮನುಷ್ಯ

ಜೀವಿ ಶ್ರೇಷ್ಠ. ಆದರೂ ಮನುಷ್ಯಧರ್ಮ ಪಾಲಿಸುತ್ತಿಲ್ಲ. "ನಾವು ವೈಜ್ಞಾನಿಕ ದೃಷ್ಟಿಯ ಮತ್ತು ವೈಚಾರಿಕ ಬುದ್ಧಿಯ ನೆರವಿನಿಂದ ನಮ್ಮ ನಾಡಿನ ರಾಜಕೀಯ, ಸಾಮಾಜಿಕ ಮತ್ತು ಮತಧಾರ್ಮಿಕ ರಂಗಗಳಲ್ಲಿ ಪರಿಶೋಧಿಸದಿದ್ದರೆ, ನಮಗೆ ಕೇಡು ತಪ್ಪದು" ಎನ್ನುತ್ತಾರೆ. (ಕುವೆಂಪು : ನುಡಿತೋರಣ). (ಪುಟ : ೮೯). ತಂತ್ರಜ್ಞಾನದ ಇಂದಿನ ಯುಗದಲ್ಲಿಯೂ 'ಮತ'ದ ಕುರಿತಾಗಿ ನಮ್ಮ ಜನತೆ ಇನ್ನೂ ಹಿಂದೆ ಹೋಗುತ್ತಿದ್ದಾರೆ. ಮತೀಯ ಕಲಹಗಳು ಹೆಚ್ಚಿವೆ. ಪ್ರತಿನಿತ್ಯವೂ ಮತಧರ್ಮದ ಪ್ರತಿಷ್ಠೆ ದ್ವಿಗುಣವಾಗುತ್ತಿದೆ. ಈ ಕುರಿತು ಕುವೆಂಪು ಅವರು ವಿಚಾರಗಳು ಮತ್ತಷ್ಟು ನಮ್ಮೊಳಗೆ ಇಳಿಯುತ್ತದೆ, ಶೋಧಿಸುತ್ತವೆ.

ದುಷ್ಯಂತ ದಶರಥ ಶ್ರೀರಾಮಾನುಜನನಂ
ಕೌಶಿಕ ಪರಶುರಾಮ ಭೀಷ್ಮದ್ರೋಣಾಧ್ಯರಂ
ಬಣ್ಣಿಸಿದ ನೀನು ಕರಿಸಿದ್ಧ ಕಿಟ್ಟಯ್ಯರಂ
ದುರ್ದಮ ಕುರುಕ್ಷೇತ್ರಮಂ ಮೇಣಾ ಪುರಾಣದ
ಲಂಕೆಯನ್ನುಳಿದು ಹಾ! ಒಂಟಿಕೊಪ್ಪಲಿನಾಚೆ
ಬೋಡಾದ ಬೋರೆಯಂ ಮಲೆನಾಡ ಕೊಂಪೆಯಾ
ಕಾಡು ಮೇಡುಗಳಂ ಕುರಿತ್ತುಬಿವ ಗತಿಯಾಯ್ತೆ?

ಕಾಡು ಮೇಡುಗಳಂ ಕುರಿತ್ತುಬಿವ ಗತಿಯಾಯ್ತೆ? ನಾಗರೀಕತೆ ಬೆಳೆದ ಹಾಗೆ ನಮ್ಮ ಆತ್ಮಶ್ರೀಯೂ ಬೆಳೆಯಬೇಕು. ಚಲನಶೀಲತೆ ನಮ್ಮೊಳಗಿರಬೇಕು. ಚಲಿಸುವುದೇ ಬಾಳು, ನಿಲ್ಲುವುದೇ ಸಾವು, ಹಳೆಯದೆಲ್ಲವೂ ತಪ್ಪಲ್ಲ, ಹೊಸದೆಲ್ಲವೂ ಸರಿಯಲ್ಲ. ಇವುಗಳ ನಡುವಿನ ತಿಳುವಳಿಕೆ, ಅರಿವು ಜ್ಞಾನ, ಬೇಕು–ಬೇಡಗಳ ವಾಸ್ತವತೆಯ ಪ್ರಜ್ಞೆಯನ್ನು ಹೊಂದಿದಾಗಲೀ ಮನುಕುಲ ಉದ್ಧಾರವಾಗುವುದು. ಮನುಷ್ಯ ಜನ್ಮ ಶ್ರೇಷ್ಠವೆನಿಸುವುದು ಎಂಬುದನ್ನೇ ಕುವೆಂಪು ಅವರ ಚಿಂತನೆಯಾಗಿದೆ.

೧. ಒಂದು ರಾಷ್ಟ್ರದ ಇತಿಹಾಸದ ತಿರುಳು, ಸಾರಸತ್ವ ಕಾಣುವುದು, ಅಲ್ಲಿ ಬಾಳಿ–ಬದುಕುವ, ವಿವಿಧ ಜನಾಂಗಗಳು, ಸಮುದಾಯಗಳು ಕೂಡಿಬಾಳುವ ಸಾಂಸ್ಕೃತಿಕ ಹಿರಿಮೆಯಲ್ಲಿ ಭಾರತೀಯ ಸಂಸ್ಕೃತಿ ವಿಶ್ವಸಂಸ್ಕೃತಿಗೆ ಮಾದರಿಯಾಗಿದೆ. ವಿಶ್ವಕ್ಕೆ ಗುರುವಾದ ಭಾರತದ ಧ್ಯೇಯ, ಆದರ್ಶಗಳು ಸಾರ್ವಕಾಲಿಕವಾಗಿವೆ.

"ಭಾರತೀಯ ಸಂಸ್ಕೃತಿಕ ಬರೀ ವೈದಿಕವಲ್ಲ. ಅವೈದಿಕವೂ ಅದರ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಬೌದ್ಧ, ಜೈನಗಳಲ್ಲದೆ ನ್ಯಾಯ, ವೈಶೇಷಿಕ, ಸಾಂಖ್ಯಯೋಗ ದರ್ಶನಗಳೂ ವೇದದ ಪರಮ ಪ್ರಮಾಣ್ಯವನ್ನು ಅವಿಚಾರಕವಾಗಿ ಒಪ್ಪಬೇಕು ಎನ್ನುವುದಿಲ್ಲ. ನನ್ನದು ವಿಶ್ವಸಂಸ್ಕೃತಿ" ಎಂದಿದ್ದಾರೆ.

(ಕುವೆಂಪು – ನುಡಿತೋರಣ– ಪು : ೧೧೩)

ಮೌಢ್ಯತೆಯ ಮಾರಿಯನ್ನು ಹೊರದೂಡಿ, ವಿಜ್ಞಾನ ದೀವಿಗೆಯ ಹಚ್ಚಿಸಿಕೊಳ್ಳಬೇಕಿದೆ. ಪ್ರಜ್ವಲಿಸಿಕೊಳ್ಳುವ ಅನಿವಾರ್ಯ, ಅಗತ್ಯಕತೆಯು ಎಂದೆಂದಿಗೂ ಇದೆ, ಇರುತ್ತದೆ. "ವೇದ, ಶಾಸ್ತ್ರ, ಪುರಾಣಗಳೆಲ್ಲವು ಕೊಟ್ಟಣದಿ ಕುಟ್ಟಿದ ನುಚ್ಚು ತುಡುಕಾಣಿರೋ ವೇದಕ್ಕೆ ಬರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನ್ನಿಕ್ಕುವೆ" ಎನ್ನುವ ಶರಣರ ನುಡಿಗಳ ಸಂದೇಶದ ಸಾರವನ್ನು ಕುವೆಂಪು ಅವರ ವಿಚಾರಗಳಲ್ಲೂ ಕಾಣುತ್ತೇವೆ.

ಜಾತಿ, ಮತ, ಕುಲ, ಧರ್ಮ, ವರ್ಗಭೇದ, ಲಿಂಗಭೇದದಿಂದ "ಇಲ್ಲಿ ಯಾರೂ ಮುಖ್ಯರೂ, ಅಮೂಖ್ಯರೂ ಅಲ್ಲ. ಯಾವುದೂ ಯಃಕಶ್ಚಿತವಲ್ಲ" ಎಂದು ಅವರು ಮತಿಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಹೇಳುತ್ತಾರೆ.

"ಸೃಷ್ಟಿಯ ಮೋಹದಲ್ಲಿ ಮರದ ತುದಿಯ
ಹೂವೆಷ್ಟು ಮುಖ್ಯವೋ ಗೊಬ್ಬರವೂ ಅಷ್ಟೇ"

(ನುಡಿತೋರಣ–ಪುಟ:೨೮)

ಎನ್ನುತ್ತಾರೆ. ವೈಜ್ಞಾನಿಕ ದೃಷ್ಟಿ ಮತ್ತು ವಿಚಾರಬುದ್ಧಿ, ಇವು ವಿಜ್ಞಾನದಿಂದಲೇ ಸಾಧ್ಯ. ಜನತೆ ಜಾಗೃತರಾಗದ ಹೊರತು, ಹೊಸದರ ಕಡೆ ಮನಸ್ಸು, ಹೃದಯವನ್ನು ತೆರೆದುಕೊಳ್ಳದ ಹೊರತು, ಯಾವು ದೇಶವೂ, ಜನಾಂಗವೂ, ವ್ಯಕ್ತಿಯೂ ಬೆಳೆಯಲಾರರು, ವ್ಯಕ್ತಿತ್ವ ವಿಕಸನವಾಗದ ಹೊರತು ಸಮಾಜದ ಅಭಿವೃದ್ಧಿ ಸಾಧ್ಯವಿಲ್ಲ. ಹೊಸದರ ಕಡೆ ಉತ್ಸಾಹ ಹೆಚ್ಚಾಗಬೇಕು. ಅಲ್ಲಿನ ಒಳಿತಿನ ಪಾಠಗಳು ಭವಿಷ್ಯತ್ತಿಗೆ ದಾರಿದೀಪವಾಗಬೇಕು ಎಂದು ಕುವೆಂಪು ಅವರ ಅಭಿಮತ.

೨. ಸರ್ವರ ಉದಯವೇ ಸಮಾಜದ ಏಳಿಗೆ, ದೇಶದೊಳಗೆ ಎಲ್ಲರೂ, ಎಲ್ಲರ ಒಳಿತಿಗಾಗಿ ವಿಚಾರಿಸಿದಾಗಲೇ ವೈಚಾರಿಕತೆ ಜೀವಂತವಾಗಿರುತ್ತದೆ. ನಮ್ಮೊಳಗಿನ ಅಂತಃಶಕ್ತಿ ಕ್ಷುಲ್ಲಕವಾಗದೆ, ಅದ್ಭುತವಾಗಬೇಕು ಎನ್ನುವ ಕುವೆಂಪು ಅವರ ವಾಣಿಯನ್ನು ತಿಳಿಯುವುದು ಬಹುಮುಖ್ಯವೆನಿಸುತ್ತದೆ.

ನಮ್ಮ ಉತ್ಸಾಹ ಹುಲ್ಲಿನ
ಬೆಂಕಿಯಾಗಬಾರದು, ಕಲ್ಲಿದ್ದಲಕಾವಾಗಬೇಕು
(ಕುವೆಂಪು–ಆತ್ಮಶ್ರೀಗಾಗಿ ನಿರಂಕುಶವಂತಿಗಳಾಗಿ, ಪುಟ:೧೦)

ನಮ್ಮಲ್ಲಿನ ಅರಿವೇ ನಮಗೆ ಗುರುವಾಗಿ ಮಾರ್ಗದರ್ಶನ ನೀಡಬೇಕು. ಅಂತರಂಗದ ಮಾತಿಗೆ ಕಿವಿಗೊಡುವುದು ಮುಖ್ಯವೆನಿಸಬೇಕು. ಇದನ್ನೇ ಕುವೆಂಪು ಹೇಳುವುದು

ಎಷ್ಟು ದೇವರ ನೀನೆಷ್ಟು
ನಂಬಿದರೇನೊಂದಿಷ್ಟು ನೀ ನಂಬದಿರೆ ನಿನ್ನ ನೀನು?
(ಕುವೆಂಪು – ನುಡಿತೋರಣ–ಪು:೪೧)

ಎಂದು ಎಚ್ಚರಿಸುತ್ತಾರೆ. 'ನಿನ್ನ ನೀ ತಿಳದು ನೋಡಣ್ಣ' – ತತ್ವಪದಕಾರಕ ಸಂದೇಶ ಇಲ್ಲಿ ಮಿಳಿತವಾಗಿದೆ.

ದೇವರು ಧರ್ಮ, ಸ್ವರ್ಗ–ನಗರ, ಗುಡಿ–ಗುಂಡಾರ, ಚರ್ಚು–ಮಸೀದಿಗಳಲ್ಲಿ ದೇವರಿಲ್ಲ. ದೇವರು ಸರ್ವಾಂತರ್ಯಾಮಿ, ಜಗದ್ವ್ಯಾಪಿಯಾಗಿರುವನು. ಮನಶುದ್ಧಿಯಿಲ್ಲದೆ ಮಂತ್ರ–ಜಪ–ತಪಗಳಿಗೆ ದೇವನೊಲಿಯಲಾರ, ದೇಹವೇ ದೇಗುಲವೆಂಬುದನ್ನು ನಾವು ಶರಣರ ಸಂದೇಶದಿಮದ ಅರಿತಿದ್ದೇವೆ. ಆದರೂ ಉದ್ಧಾರವಾಗಲಿಲ್ಲ. ಕುವೆಂಪು ಅವರೂ ಹೇಳುವುದು ಮಾನವನ ಉದ್ಧಾರದ ಏಳಿಗೆಯ ತತ್ವವನ್ನೇ,

ದೇಗುಲದೊಳವಿತುಕೊಂಡಿಹನಂತೆ ಪರಶಿವನು!
ಜಗವೆಲ್ಲ ದೇವನಿಹ ಗುಂಡಿಯಲ್ಲವೇ ಗೆಳೆಯ!
ಮತದ ಮಧ್ಯದ ಕುಡಿದು ತಲೆಕೆಟ್ಟಿಹುದು ಮಂದಿ!
(ಕುವೆಂಪು–ಜಲಗಾರ ನಾಟಕ ಪು:೧೦)

ಶರಣರು ದೇಹವೇ ದೇವಾಲಯವೆಂದರೆ, ಕುವೆಂಪು ಜಗವೇ ಜೀವನಗುಡಿ ಎಂದಿರುವುದು ಮತದ ಅಮಲಿನಲ್ಲಿ ತೇಲಾಡುವುದನ್ನು ಬಿಟ್ಟು, ಭ್ರಾಂತಿ ಕಳೆದು ನಿಭ್ರಾಂತಿಯ ಕಡೆಗೆ ಸಾಗಬೇಕು. ಮತದಾಚೆಗೆ ಏನೆಲ್ಲ ಶಾಂತಿ ಇದೆ ಎನ್ನುವುದನ್ನು ಅರುಹುತ್ತಾರೆ. ಸರ್ವರೊಳು ಬೆರೆತು, ಸರ್ವರನ್ನೂ ಸಮಭಾವದಿಂದ ಕಂಡು ಎಲ್ಲರೊಳಗೊಂದಾಗುವುದೇ ಮನುಷ್ಯ ಬಾಳಿನ ಗುರಿಯಾಗಬೇಕು. ಯಾರೂ ದೊಡ್ಡವರೂ ಸಣ್ಣವರೂ, ಮೇಲು–ಕೀಳು ಅಲ್ಲ. ಎಲ್ಲರೂ ಮನುಷ್ಯರೇ. ಮನುಷ್ಯತ್ವದ ತತ್ವದಲ್ಲಿ ನಾವೆಲ್ಲ ಒಂದೇ ಜಾತಿ ಮತ, ಕುಲ, ಧರ್ಮದವರು ಸಮನ್ವಯತೆ, ಸಾಮರಸ್ಯತೆ ನಮ್ಮ ಗುರಿಯಾಗಬೇಕು. ಧನಿಕರೂ, ಶ್ರೀಮಂತರು, ದೊಡ್ಡ–ದೊಡ್ಡ ಹುದ್ದೆಯವರಾಗುವುದಿಲ್ಲ. ಉದಾರತೆ ಸೌಹಾರ್ದತೆ ಬದುಕಿನ ಮಂತ್ರವಾಗಬೇಕು ಎಂಬುದು ಕುವೆಂಪು ಅವರ ಸಮನ್ವಯತೆ ತತ್ವದಲ್ಲಿ ಕಂಡುಬರುವ ವಿಚಾರವಾಗಿದೆ. "ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರ/ದಡದಲ್ಲಿ ಮೀಯುತ್ತ ನಿಂತಿರುವ ನಾನು ಮುಟ್ಟಿದರೆ ಬ್ರಹ್ಮತ್ವ ಕೆಟ್ಟು ಹೋಗುವುದೆಂದು/ಸುಮ್ಮನಿದ್ದರೆ ಶಾಸ್ತ್ರ ಸಮ್ಮತವದೇನು?" ದಿಟ್ಟವಾಗಿ ಪ್ರಶ್ನಿಸಿ, ನಮ್ಮೊಳಗಣ್ಣನ್ನು ತೆರೆಸುವುದು ಕುಲ, ಜಾತಿ, ಮತ, ಪಂಥ, ಪಂಗಡ, ಸಮುದಾಯ ಹುದ್ದೆ, ಸಿರಿತನ, ಹಿರಿತನ ಇವೆಲ್ಲವುಗಳನ್ನು ಬಿಟ್ಟ ಸರಳತವನ್ನು ಅಳವಡಿಸಿಕೊಂಡು ಬದುಕುವ ಬದುಕೇ ಸಾರ್ಥಕ ಬದುಕು. ಶ್ರೇಷ್ಠ ಬದುಕು ಎಂಬ ಪ್ರಖರ ವೈಚಾರಿಕತೆಯನ್ನು ಅವರ ಬರಹಗಳಲ್ಲಿ ಕಾಣುತ್ತೇವೆ.

ಈ ಜಗತ್ತಿಗೆ ಬೇಕಿರುವುದು ಒಂದಿಷ್ಟು ಅಂತಃಕರುಣೆ, ಸ್ನೇಹ–ಸಹಕಾರ, ಪ್ರೇಮ ಭಾವನೆ, ಸಹಬಾಳ್ವೆಯ ಸವಿ, ಅಧಿಕಾರ–ಅಂತಸ್ತಿನ, ದರ್ಪವಲ್ಲ. ಧನಿಕತೆಯ ಅಹಂಕಾರವಲ್ಲ. ಮತದ ಅಹುಮಿಕೆಯಲ್ಲ. ಯಾರೂ ಅಲ್ಪರೂ ಅಲ್ಲ, ಯಾರೂ ಶ್ರೇಷ್ಠರೂ ಅಲ್ಲ, ಕೀಳನರಿಮೆಯನ್ನು ಬಿಟ್ಟು ಸ್ವಾಭಿಮಾನದಿ ಬದುಕು ನೀ ಮನುಜ, ಒಳಿತನ ಕಡೆ ನೀ ಸಾಗು ಮನುಜ ಎಂಬ ಸಂದೇಶ ಕುವೆಂಪು ಅವರದು. ಅಲ್ಪನಾನು ಎಂದು ಕುಗ್ಗಿ ಮುದುಗ/ಬೇಡವೋ! ಓ ಅಲ್ಪವೇ, ಅನಂತದಿಂದ/ ಗುಣಿಸಿಕೋ; ನೀನ್ ಅನಂತವಾಗುವೆ! ಎಂದು – ಕುವೆಂಪು ಮಂತ್ರಾಕ್ಷತೆಯಲ್ಲಿ' ಹೇಳುತ್ತಾರೆ.

"ಓ ನನ್ನ ಚೇತನ ಆ ನೀ, ಅನಿಕೇತನ, 'ಅನಂತತಾನಂತವಾಗಿ, ಆಗುತಿಹನು ನಿತ್ಯಾಯೋಗಿ" ಎಂಬ ಅವರ ಕವಿತೆಯೂ ನಮ್ಮೊಳಗಿ "ಚೇತನವನ್ನು' ಕುರಿತು ಹೇಳುತ್ತದೆ. ಪ್ರಸ್ತುತ ಆಧುನಿಕ ಭಾರತೀಯ. ಸಮಾಜದಲ್ಲಿ ಧರ್ಮ–ಜಾತಿಯಿಂದ ಒಡೆದು ಆಳುವ ನೀತಿಯನ್ನು ತಂದು ಸಮಾಜದ ನೆಮ್ಮದಿ ಹಾಳುಮಾಡುವ ಸನ್ನಿವೇಶಗಳು ನಿರ್ಮಾಣವಾಗುತ್ತಿವೆ. ಲಾಭಕೋರತರ, ಸ್ವಾರ್ಥತನ, ರಾಜಕೀಯ ಕುಟಿಲತೆಗಳು ಸಂವಿಧಾನದ ಮೂಲ ತತ್ವವಾದ ಜಾತ್ಯಾತೀತ ಕಲ್ಪನೆಗೆ ಭಂಗವುಂಟುಮಾಡುವ ಹುನ್ನಾರಗಳು ದಿನನಿತ್ಯವೂ ನಡೆಯುತ್ತವೆ. ಮಾನವೀಯತೆಯೆಡೆಗೆ ಸಾಗಿರಿ ಎಲ್ಲ ಸಣ್ಣತನ ಬಿಟ್ಟು ಎನ್ನುತ್ತಾರೆ ಹಾಗೆಯೇ,

"ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು?/ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?/ನೀರಡಿಸಿ ಬಂದ ಸೋದರಗೆ ನೀರನು ಕೊಡಲು
ಮನಧರ್ಮ ಶಾಸ್ತ್ರವೆನಗೊರೆಯ ಬೇಕೇನು?/ನೊಂದವರ ಕಂಬನಿಯನೊರಸಿ ಸಂತೈಸುವೊಡೆ
ಶಾಸ್ತ್ರ ಪ್ರಮಾಣವದಕಿರಲೇಬೇಕೆನು?"

ಅದ್ಭುತ! ಅಪಾಯಮಾನವಾದ ಮಾತುಗಳನ್ನು ಆಲಿಸಿದರೆ, ಓದಿದರೆ ಅಂತರಂಗ ಶುದ್ಧಿಯಾಗುವುದು. ಭ್ರಮೆಯೆಲ್ಲ ಕರಗಿ ಹೋಗುವುದು ಅಜ್ಞಾನ ತೊಲಗುವುದು. ಜ್ಞಾನದ ಹೊಳೆ ಉಕ್ಕಿ ಬರುವುದು. ಎಲ್ಲ ತತ್ವವನ್ನು ಮೀರಿದ ಮಾತುಗಳಿವು. ಮನುಷ್ಯತ್ವವೊಂದೇ ಸಾಕು ಈ ಜಗಕ್ಕೆ ಎಂಬ ದಿವ್ಯತೆಯ ಅನುಭೂತಿದಾಗುತ್ತದೆ.

ಕುವೆಂಪು ಅವರ ವೈಚಾರಿಕತೆಯ ಕುರಿತು ಅಧ್ಯಯನ ಮಾಡುತ್ತ ಹೋದಂತೆ, ಹೊಸ ನಮ್ಮ ಲೋಕ ತೆರೆದುಕೊಳ್ಳುತ್ತಾ, ಚಿಂತನಾಲೋಕದಲ್ಲಿ ಮುಳುಗಿಸಿ ಚಿರಂತನಗೊಳಿಸುತ್ತದೆ. ಅವರ ದಾರ್ಶನಿಕ ಅರಿವು ಇವತ್ತಿನ ಸಮಾಜಕ್ಕೆ ಬಹು ಅಗತ್ಯ ಹಾಗೂ ಅನಿವಾರ್ಯವೆನಿಸುತ್ತದೆ. ಎಲ್ಲರ ದೃಷ್ಟಿಯಲ್ಲಿ ಅದುವರೆಗೂ ಕನಿಷ್ಟಳಾದ ಮಂಥರೆ, ಶ್ರೀರಾಮಾಯಣ ದರ್ಶನಂ ದಲ್ಲಿ ಮಮತೆಯ ಝರಿಯಾಗಿ ಹರಿದಿದ್ದಾಳೆ. ಚಂದ್ರಮುಖಿಯಾಗಿ ಬೆಳಗಿದ್ದಾಳೆ.

ಸೀತೆಯ ಜೊತೆಗೆ ರಾಮನನ್ನು ಅಗ್ನಿ ಪ್ರವೇಶ ಮಾಡಿಸಿದ ಕುವೆಂಪು ಲಿಂಗ ಸಮಾನತೆಗೆ ಮುನ್ನುಡಿ ಬರೆದಿದ್ದಾರೆ. ಸೀತೆ ಪಾತ್ರ ಮತ್ತು ಚಿತ್ರಗಳು ಕಣ್ಮರೆಯಾಗಿವೆ. ಇವೆಲ್ಲವನ್ನು ನಾವು ಆಲೋಚಿಸಬೇಕಿದೆ. ಅವರ 'ನೇಗಿಲಯೋಗಿ' ರೈತಗೀತೆಯಲ್ಲಿ ರೈತ ಸಂಸ್ಕೃತಿಯ ಮಂದಾರವರಳಿ ನಿಂತಿದೆ. ರೈತರ ಬವಣೆಗಳು, ಕಷ್ಟಕಾರ್ಪಣ್ಯ, ದುಡಿಮೆ, ಶ್ರಮ, ಬೆವರಿನ ವಾಸನೆ, ತ್ಯಾಗ, ಸಹನೆ ನಿಷ್ಕಪಟತೆ, ಭಾವ್ಯಕತೆ, ಮುಗ್ಧತೆ ಎಲ್ಲವನ್ನು ಕಂಡರಿಸಿದ್ದಾರೆ. ಯಾರೂ ಅರಿಯದ ನೇಗಿಲ ಯೋಗಿ ದುಡಿಯವನು ಗೌರವಕಾಶಿಸದೆ. ಹೀಗೆ ರೈತರ ಜೀವನ ದರ್ಶನ ಮಾಡಿಸುತ್ತಾರೆ. ಅದ್ದೂರಿ ಮದುವೆಯನ್ನು ಕುವೆಂಪು ಅವರು ಖಂಡಿಸುವುದು, ಸರಳ–ಸುಂದರ ವಿವಾಹ ಕಲ್ಪನೆ ವಿವಾಹ ಕಲ್ಪನೆ ಅವರ ಮಂತ್ರಮಾಂಗಲ್ಯ ಎಂಬ ಕವಿತೆಯಲ್ಲಿ ಕಾಣಿಸಿಗುತ್ತದೆ.

ಯುದ್ಧದ ಭಯಾನಕತೆಯನ್ನು ಸ್ಮಶಾನ ಕುರುಕ್ಷೇತ್ರ ನಾಟಕದಲ್ಲಿ ವಸ್ತ ನಿಷ್ಠೆವಾಗಿ ಚರ್ಚಿಸಿದ್ದಾರೆ. ಶಾಂತಿ, ಸಹನೆಯ ಸಹಜೀವನದ ತಹಳದಿಯ ಮೇಲೆ ಸುಸಂಸ್ಕೃತಿಕ, ಸುಂದರ, ಸಹಜೀವನದತ್ತ ಮುನ್ನಡೆದು ದೈನಂದಿನ ಬದುಕನ್ನು ಸಹನಾಗಿ ಮಾಡಿಕೊಳ್ಳುವುದೇ ವೈಚಾರಿಕತೆ, ಅಜ್ಞಾನದಿಂದ ಬದುಕನ್ನು ಸಹನಾಗಿ ಮಾಡಿಕೊಳ್ಳುವುದೇ ವೈಚಾರಿಕತೆ, ಅಜ್ಞಾನದಿಂದ ಮುಕ್ತರಾಗಿ, ಜ್ಞಾನದೆಡೆಗೆ, ನಡೆಯುವುದು ವಿಚಾರಶೀಲತೆ.

ಕುವೆಂಪು ಬದುಕಿದಂತೆ ಬರೆದರು. ಬರೆದಂತೆ ಬದುಕಿದರು. ಸಮಾಜದಲ್ಲಿನ ಅನಿಷ್ಠ ಪದ್ಧತಿಗಳನ್ನು ನಿರ್ಮೂಲನೆಯಾಗಬೇಕೆಂದರೆ ಮೊದಲು ಪ್ರತಿಯೊಬ್ಬರೂ ಅಂತರಂಗದ–ಬಹಿರಂಗ ಶುದ್ಧಿಯಿಂದ ದುಡಿಯಬೇಕು. ಆರೋಗ್ಯಕರ ಚಿಂತನೆಗಳ ಮಿಡಿತ ತುಡಿತಗಳೂ ಅಷ್ಟೇ ಪ್ರಾಮುಖ್ಯವೆನಿಸುತ್ತವೆ. ನೂರು ಮತದ ಹೊಟ್ಟುತೂರಿ ಎಲ್ಲ ತತ್ವದೆಲ್ಲೆ ಮೀರಿ ನಿರ್ದಿಗಂತವಾಗಿ ಏರಿ" ಆಗು ನಿ ಅನಿಕೇತ, ಓ ನನ್ನ ಚೇತನ, ಎನ್ನುವ ಅವರ ಬದುಕಿನ ಈ ಅಹರ್ನಿಷ ಮನೋಗತ ಅಲ್ಪತೆಯಿಂದ ಮಹಾಮಾನವತೆಯ ಕಡೆ ನಡೆದಿರುವುದು ಅವರ ವೈಚಾರಿಕತೆ ಮತ್ತು ವೈಜ್ಞಾನಿಕ ಚಿಂತನೆಗಳ ಬರಹಗಳ ಮೂಲಕ ಅಭಿವ್ಯಕ್ತವಾಗಿದೆ. ಕುವೆಂಪು ಅವರ ಸಾಹಿತ್ಯ ಮತ್ತು ಓದುವ ಮೂಲಕ ನವ ಸಮಾಜದ ನಿರ್ಮಾಣದ ಕಾರ್ಯದಲ್ಲಿ ಸರ್ವರೂ ಕೈಗೂಡಿಸುವ ಮನವನ್ನು ಜೋಡಿಸುವ ತುರ್ತಿನ ಕೆಲಸವಾಗಿದೆ.

## ಆಕರ ಗ್ರಂಥಗಳು:

೧. ವಿಚಾರ ಕ್ರಾಂತಿಗೆ ಆಹ್ವಾನ ಕುವೆಂಪು:
೨. ಕುವೆಂಪು ಅವರ ಸಮಗ್ರ ಸಾಹಿತ್ಯ ಸಂಪುಟಗಳು:
೩. ಅಂತರ್ಜಾಲದಲ್ಲಿ ದೊರೆತ ಮಾಹಿತಿಗಳು:

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಕುವೆಂಪು ಸಾಹಿತ್ಯದ ಪುನರ್ಮನನ

**ಡಾ.ಪುಟ್ಟಸ್ವಾಮಿ ಹೆಚ್.ಬಿ**
**ಸಹಾಯಕ ಉಪನ್ಯಾಸಕರು**
**ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ**
**ಸ್ನಾತಕೋತ್ತರ ಕೇಂದ್ರ, ಹಾವೇರಿ – ೫೮೧೧೧೦.**

ರಾಷ್ಟ್ರಕವಿ ಕುವೆಂಪುರವರು ಕನ್ನಡ ಸಾಹಿತ್ಯ ಸಾರಸ್ವತ ಲೋಕದ ದೈತ್ಯ ಪ್ರತಿಭೆ.ಇವರ ಜೀವನವೇ ಬದುಕಿನಲ್ಲಿ ಸಾಮರಸ್ಯದಿಂದ ಕೂಡಿದೆ.ಇವರಿಗೆ ಅಕಾಲದಲ್ಲಿ ಇಂಗ್ಲೀಷ್ ಪ್ರಭಾವ ಬೀರಿದಾದರೂ ಇವರಲ್ಲಿ ಪ್ರಕೃತಿ, ನಿಸರ್ಗದತ್ತವಾದ ಆಧ್ಯಾತ್ಮಿಕತೆಯ ನೆಲೆಯಲ್ಲಿ ಪ್ರೇರಣೆಯಾಗಿ, ಅಲ್ಲಲ್ಲಿ ನಾಡು–ನುಡಿ ಚಿಂತನೆಗಾಗಿಯೇ ಅವಿರತ ಪ್ರಯತ್ನ ಪಟ್ಟವರೇ ಆಗಿದ್ದಾರೆ.ಕುವೆಂಪು ಸಾಹಿತ್ಯವೇ ಒಂದು ರೀತಿಯ ವೈಚಾರಿಕ ಪ್ರಭಾವತೆಗೆ ಒಳಗಾಗಿದ್ದವೆ ಆಗಿವೆ. ಸಂಸ್ಕೃತಿಯ ಕುರಿತಾದ ನಿಲುವುಗಳು ಬಹಳ ಅಗಾಧವಾಗಿದ್ದು ಇವು ವಿಶ್ವಮಾನವನ ಪ್ರಜ್ಞೆಗೂ ಸಹಿಷ್ಣುತೆಯನ್ನು ಬೆಳೆಸಿದಂತಹವರು.ಅದರಲ್ಲೂ ಆಧುನಿಕ ಸಾಹಿತ್ಯದ ಮೇಲೆ ಇವರ ಪ್ರಭಾವವು ಹೆಚ್ಚೇ ಎಂದು ಗುರುತಿಸಬಹುದು.ಕುವೆಂಪು ಮೇಲೆ ಅಂಬೇಡ್ಕರ್ ಮತ್ತು ಬುದ್ಧನ ಚಿಂತನೆಗಳು ಹಾಗೂ ಗಾಂಧೀಜಿ, ವಿವೇಕಾನಂದ, ಅರವಿಂದರ ಚಿಂತನೆಗಳು ಅಗಾಧವಾಗಿ ಬೇರೂರಿವೆ.ಇದಕ್ಕೆ ಕಾರಣವೇ ಇವರಲ್ಲಿರುವ ಬಹುಶಿಸ್ತೀಯ ಅಧ್ಯಯನತೆಯೇ ಸಾಕ್ಷಿ ಎಂದೂ ಹೇಳಬಹುದು.

ಸಂಸ್ಕೃತಗೊತ್ತಿಲ್ಲದ ಅನರ್ಹ ಶೂದ್ರರು ಎಂದೂ ಅಣಕವಾಡುವ ಕಾಲದಲ್ಲಿ ಪುರೋಹಿತಶಾಹಿ ವರ್ಗದವರಿಗೂ ಬೆರಗಾಗುವಂತೆ ಸಂಸ್ಕೃತವನ್ನು ಸಾಹಿತ್ಯದಲ್ಲಿ ಬಳಸಿಉತ್ತುಂಗಕ್ಕೆ ಹೇರಿದವರು.ಇಂಗ್ಲೀಷ್‌ನಲ್ಲಿ ಬರೆದ ಕವಿತೆಯಾದ ಬಿಗಿನರ್ಸ್ ಮೂಸ್‌ನಿಂದಹೊರಬಂದು ಐರಿಷ್ ಕವಿಯೇ ಪ್ರಭಾವತೆಗೆ ಒಳಗಾಗಿ ಅಮಲನ ಕಥೆ ಕಿಂದರಿಜೋಗಿಯಾಗಿ ಬಂದ ಕುವೆಂಪುರವರು ನವೋದಯದ ರಸಋಷಿಯಾಗಿದ್ದಾರೆ.ಸಾಹಿತ್ಯದ ಈ ಸಂದರ್ಭಕ್ಕೆ ದರ್ಶನದ ಕನ್ನಡಿ, ಸಂವಿಧಾನದ ಆಶೋತ್ತರಗಳಿಗೆ ಸಾಹಿತ್ಯದ ಮೂಲಕ ವಿಚಾರ ಕ್ರಾಂತಿಗೆ ಆಹ್ವಾನ ಕೊಟ್ಟಂತಹ ಕವಿ, ಲೇಖಕರಾಗಿದ್ದಾರೆ.ಕನ್ನಡ ಸಾಹಿತ್ಯದಲ್ಲಿ ಅದರಲ್ಲೂ ಆಧುನಿಕ ಸಾಹಿತ್ಯ ಲೋಕಕ್ಕೆ ಪುಟ್ಟಗನ್ನಡಿಯೇ. ಈ ಪುಟ್ಟಪ್ಪ, ಸಂಸ್ಕೃತಿಯ ಕುರಿತಾದ ವಿಶೇಷ ವೈಚಾರಿಕ ಪ್ರಜ್ಞೆಗೆ ಜಾಗೃತಿ ಮೂಡಿಸುವಂತಹ ಪರಂಪರೆಗೆ ಪ್ರಯೋಗಶೀಲತೆಯನ್ನು ಅನುಸಂಧಾನದಲ್ಲಿ ರೂಪುಗೊಳ್ಳುವುದಕ್ಕೆ ಕನ್ನಡ ಸಾಹಿತ್ಯದಲ್ಲಿ ಪ್ರಭುತ್ವ ಮತ್ತು ಧರ್ಮ ಕೇಂದ್ರದಿಂದ ದೂರ ಸರಿಯುವಂತಹ ಜನಸಾಮಾನ್ಯರ ಬದುಕು, ಬವಣೆಗಳಿಗೆ ದನಿಯಾಗಿ ಅಲೌಕಿಕ ಆದರ್ಶಗಳ ಪಾತಳಿಯಿಂದ ಲೋಕಜೀವನಕ್ಕೆ ವಾಸ್ತವತೆಯನ್ನು, ಮುನ್ನಲೆಗೆ ತಂದವರೇ ಕುವೆಂಪುರವರಾಗಿದ್ದಾರೆ. "ಸಂಸ್ಕೃತದ ವಿಚಾರದಲ್ಲಿ ಪಟ್ಟಭದ್ರ ಹಿತಾಸಕ್ತಿಯಿಂದ ಹೊರದೂಡಲ್ಪಟ್ಟ ಸಮುದಾಯಗಳಿಗೆ ಸಾಹಿತ್ಯದ ಮುಖೇನಾ ಬರವಣಿಗೆಯಲ್ಲಿ ಶೂದ್ರತೆಗೆ ಅಥವಾ ಶೂದ್ರಾತಿಶೂದ್ರರಿಗೆ ಸ್ವಾತಂತ್ರ್ಯ, ಪ್ರಜ್ಞೆ ಮತ್ತು ಜಾಗೃತಿಯನ್ನು ಸಮಕಾಲೀನ ಚಿಂತನೆಯಲ್ಲಿ ಸಾದರಪಡಿಸಿದವರೇ ನವೋದಯ ಯುಗದ ಕವಿಯಾಗಿದ್ದಾರೆ."[೧]

ಸಹ್ಯಾದ್ರಿ ಮಡಿಲ ಸಂದರ್ಭದಲ್ಲಿ ಕಾವ್ಯ, ಕಥೆ, ನಾಟಕ, ಕಾದಂಬರಿ, ಗದ್ಯ ವಿಮರ್ಶೆ, ಮೀಮಾಂಸೆ, ವೈಚಾರಿಕತೆ ಇವೆಲ್ಲವು ಸಾಂಸ್ಕೃತಿಕ ಮುಖಾಮುಖಿಯಾಗಿರುವವೇ.ಇಲ್ಲಿ ಧಾರ್ಮಿಕ, ಜನಾಂಗಿಕ, ಸಾಮಾಜಿಕ, ಸಾಂಸ್ಕೃತಿಕದ ಜೊತೆಗೆ ರಾಜಕೀಯ ಪ್ರಜ್ಞೆಯಲ್ಲಿಯೂ ಸರ್ವಜನಾಂಗದ ಶಾಂತಿಯ ತೋಟವನ್ನು ಬಯಸಿದವರೇ ಕೆಳವರ್ಗವಾದ ಶೂದ್ರ ಸಮುದಾಯದಲ್ಲಿ ಜನಿಸಿದ ಕುವೆಂಪು ಸ್ವಾತಂತ್ರ್ಯ, ವೈಚಾರಿಕತೆ ಇವು ಬರವಣಿಗೆಯ ಅಭಿವ್ಯಕ್ತಿಯ ಸೃಜನಶೀಲತೆಯಲ್ಲಿ ಮಿಳಿತಗೊಂಡು ರಾಷ್ಟ್ರೀಯತೆ ಪ್ರಜ್ಞೆ ಬೆಳೆಸುವಲ್ಲಿಸಹಕಾರಿಯಾಗಿವೆ. ಚರಿತ್ರೆ, ಪುರಾಣಗಳ ಸಮಕಾಲೀನ ಚಿಂತನೆಯಲ್ಲಿ ವಿಶ್ವಮಾನವ ಪರಿಕಲ್ಪನೆಯನ್ನು ಗ್ರಾಮ ಜಗತ್ತಿಗೂ ಕೊಂಡೊಯ್ಯುವಂತಹ ಕೀರ್ತಿ ಅಂಬೇಡ್ಕರ್‌ರವರನ್ನು ಬಿಟ್ಟರೆ ಕುವೆಂಪು ಮಾತ್ರ ಎಂದೇ ಹೇಳಬಹುದು.ಧರ್ಮಚಿಂತನೆಯಲ್ಲಿ ಪ್ರಕೃತಿಯ ನವವಸಂತದ ಸಾಹಿತ್ಯವನ್ನು ಮಕ್ಕಳ ಸಾಹಿತ್ಯದಿಂದ ಹಿಡಿದೂ, ನೈಸರ್ಗಿಕತೆಯ ಸಂಬಂಧದ ನಡುವಿನತೆಯಲ್ಲಿ ವೈವಿಧ್ಯಮಯ ಭಾರತದ ಪ್ರಜ್ಞೆಯನ್ನು ಪ್ರಭಾವಿಸಿದ ಆಧುನಿಕತೆ, ವೈಚಾರಿಕತೆ ಎತ್ತಿ ಹಿಡಿದವರಾಗಿದ್ದಾರೆ.ನಮ್ಮ ಸಾಹಿತ್ಯದ ಆಕೃತಿ–ಆಶಯಗಳನ್ನು ಪುನರ್ ನಿರ್ಮಿಸಿದ್ದು ನಿಜ. ಅಂದರೆ ನಮ್ಮ ಪರಂಪರೆಯ ಜೊತೆಗೆ ಮಾನವೀಯ ಗುಣಗಳನ್ನು ಆತ್ಯಂತಿಕ ಮಾದರಿಯನ್ನಾಗಿಸಿಕೊಂಡ ಆ ಕಾಲಘಟ್ಟದಲ್ಲಿ ಉಂಟಾದ ಪಲ್ಲಟಗಳನ್ನು ಹಾಗೂ ಸಂಘರ್ಷಗಳನ್ನು ಮತ್ತು ಅನುಸಂಧಾನವನ್ನು ಗುರುತಿಸುತ್ತಲೇ ಕುವೆಂಪುರವರ ಸಾಹಿತ್ಯ ಆಧುನಿಕ ಕನ್ನಡ ಸಾಹಿತ್ಯದ ವಸ್ತು ಮತ್ತು ಆಶಯಗಳನ್ನು ಇವರ ಕೃತಿಗಳಲ್ಲಿ ಚರ್ಚಿಸುವುದು ಇಲ್ಲಿಯ ಮೂಲ ಉದ್ದೇಶವಾಗಿದೆ. ಕುವೆಂಪು ಸಾಹಿತ್ಯದಲ್ಲಿ

ಪ್ರಮುಖ ಪ್ರೇರಣೆಗಳು ಮತ್ತು ಆಶಯಗಳು ಸಾಹಿತ್ಯದ ರೂಪಗಳಾಗಿ ಭಾವಗೀತೆ, ಕಾವ್ಯ, ಸಣ್ಣಕತೆ, ಕಾದಂಬರಿ, ನಾಟಕ, ವಿಮರ್ಶೆ, ಪ್ರಬಂಧ, ಲೇಖನ, ವೈಚಾರಿಕತೆ, ಮೀಮಾಂಸೆ, ಗದ್ಯಸಾಹಿತ್ಯ, ಸಂಪಾದನೆ, ಸಂಶೋಧನೆ ಇವೆಲ್ಲವು ನವೋದಯದ ಆಧ್ಯಾತ್ಮಿಕತೆಯ ನೆಲೆಯಲ್ಲಿ ಬರುವಂತಹವು ಆಗಿದ್ದರೂ, "೧೯ನೇ ಶತಮಾನದ ಕನ್ನಡ ಸಾಹಿತ್ಯದ ರೂಪಗಳಲ್ಲಿ ವಸಾಹತುಶಾಹೀ. ಪುನರುಜ್ಜೀವನ, ಸಮಾಜವಾದ, ಸಮತಾವಾದ, ಗಾಂಧಿ, ಬುದ್ಧ, ಅಂಬೇಡ್ಕರ್ ವಾದಗಳೊಂದಿಗೆ, ಸಮಕಾಲೀನ ದೃಷ್ಟಿಕೋನಗಳಿಗೆ ವಿಶಿಷ್ಟ ಅನನ್ಯತೆಯನ್ನು ಸಾಹಿತ್ಯ ಮತ್ತು ಜನಜೀವನದ ಜೊತೆಗಿನ ಸಂಬಂಧವನ್ನು ವಿಶ್ಲೇಷಿಸಿ ತಮ್ಮ ಕೃತಿಗಳ ಮೂಲಕವೇ ನಡೆಸಿದ ವಾರ್ಧ್ವಗಾಮಿತ್ವ ಮೌಲ್ಯ ಚಿಂತನೆಯನ್ನು ಗುರುತಿಸುತ್ತಾ ಹೊಸನೀತಿ ಧೋರಣೆಗಳನ್ನು ಸಾರುತ್ತವೆ."[೨]

ಕುವೆಂಪು ಸಾಹಿತ್ಯದಲ್ಲಿ ಸಂವೇದನೆಗಳೂ ಹರಡಿಕೊಂಡಿದ್ದು ಅವು ಸಮಕಾಲೀನತೆಗೆ ಸಾಹಿತ್ಯ ಧರ್ಮ ಪ್ರತಿಪಾದನೆ, ಪ್ರಭುತ್ವದ ಪರ–ವಿರೋಧ ನೆಲೆಗಳು, ದೇಶೀಯತೆ, ಸ್ತ್ರೀ ಪರ ಚಿಂತನೆ, ಮಾನವೀಯ ಮೌಲ್ಯಗಳು, ಜಾತಿ ವರ್ಗ ವ್ಯವಸ್ಥೆ, ಅಹಿಂಸಾತ್ಮಕ ಗುಣ, ಯುದ್ಧ ಮತ್ತು ಶಾಂತಿಯ ಲಕ್ಷಣಗಳು, ಲೋಕೋಪಚಾರಗಳನ್ನು ಪ್ರತಿಬಿಂಬಿಸುತ್ತವೆ. ಇವೆಲ್ಲವು ಮುಖ್ಯವಾಗಿ ಸಾಮಾಜಿಕ, ಧಾರ್ಮಿಕ, ವೈಚಾರಿಕತೆಯ ಮೌಲ್ಯನಿರೂಪಣೆಯನ್ನು ಹೊರಸೂಸುತ್ತವೆ. ಕುವೆಂಪುರವರಲ್ಲಿ ಕಂಡುಬರುವ ವಸ್ತುರೂಪತೆಯಲ್ಲಿ ವಿಭಿನ್ನ ಧೋರಣೆಗಳು ಕಂಡುಬಂದರು ಅವೆಲ್ಲವು ಸಮಾಜ ವಿಮರ್ಶೆಗೆ ವಿಡಂಬನೆಗೆ ಒಂದು ಗಟ್ಟಿ ಸ್ವರೂಪ ನೀಡಿದಂತಹುಗಳೆ ಆಗಿವೆ.

ಕಾವ್ಯ ಕೃತಿ– ಕಾದಂಬರಿ ನಾಟಕ ಕಲ್ಪನೆಗಳಲ್ಲಿ ವಸ್ತು ಭಾಷೆಯಲ್ಲಿ ವಿಚಾರಗಳೇ ಸಮಾಜ ಸಂಸ್ಕೃತಿ ಸಂಬಂಧತೆಯಲ್ಲಿ ಸಂಬಂಧಾಂತರದ ಪರಿಕಲ್ಪನೆಗಳನ್ನು ಪರಿಶೀಲಿಸಿರುವುದೆ ಹೆಚ್ಚಾಗಿ ಕಂಡುಬರುತ್ತದೆ. ಪ್ರತಿಕೃತಿಯ ಧೋರಣೆಗಳ ಮೂಲಕ ಅಧ್ಯಯನ ಮಾಡಿದ ನಿಲುವಿನಲ್ಲಿ ಸಾಹಿತ್ಯ ತತ್ವಗಳ ಬೆಳಕಿನಲ್ಲಿ ಹೆಚ್ಚಾಗಿ ಕಾಣುವುದೇ ಜನಪರ ಧೋರಣೆ.ಇದು ಪರಂಪರೆಯನ್ನು ಸಂಘರ್ಷಕ್ಕೆ ನೂಕಿ ಕೆದಕಿ ನೋಡುವ ನವೋದಯ ವಿಮರ್ಶೆಯಾಗಿದೆ.ಬೌದ್ಧಿಕ ಪ್ರಗತಿ, ಅಪಾರ ಶಕ್ತಿ ಸಾಧ್ಯತೆಯನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಬೇಕಾದರೆ ಕುವೆಂಪು ಸಾಹಿತ್ಯ ಅತ್ಯಗತ್ಯವೆನಿಸುತ್ತದೆ.ಕನ್ನಡ ನಾಡು ನುಡಿ ಚಿಂತನೆಯಲ್ಲಿ ಸಾಹಿತ್ಯದ ಬೆಳವಣಿಗೆ ಸ್ಥಳೀಯ ಸಂಸ್ಕೃತಿ ಮತ್ತು ಭಾಷೆಗಳ ಸಂವರ್ಧನೆಯಲ್ಲಿ ಸಾಹಿತ್ಯ ಕೃತಿಗಳ ಸಾಮಾಜಿಕ ಬದ್ಧತೆ ಎನ್ನುವುದು ಪ್ರಜಾಪ್ರಭುತ್ವದಲ್ಲಿ ಬಲು ಮುಖ್ಯವೆಂದು ತೋರಿಸಿಕೊಟ್ಟಿದ್ದಾರೆ. "ಸಾಮಾಜಿಕ ಬದ್ಧತೆ, ಸಾಮಾಜಿಕ ನ್ಯಾಯ, ಮಹಿಳಾ ಸಬಲೀಕರಣ, ಮಾನವ ಹಕ್ಕುಗಳ ರಕ್ಷಣೆ ಮತ್ತು ಪರಿಸರ ಪ್ರಜ್ಞೆ ಇವತ್ತಿನ ೨೧ನೇ

ಶತಮಾನದಲ್ಲಿ ಬಹಳ ಪ್ರಮುಖವು ಎಂದು ಹೇಳುತ್ತಾ ಬಹಳ ಹಿಂದಿನಿಂದ ಸಾಗಿ ಬಂದಿರುವ ಕನ್ನಡ ಸೃಜನ ಸಾಹಿತ್ಯ ಪರಂಪರೆಯಲ್ಲಿ ಕಾಣಿಸಿಕೊಂಡ ವೈಚಾರಿಕ ವಾಗ್ವಾದಗಳು ಇವತ್ತು ಕೂಡಾ ಚರಿತ್ರೆಯ ಪರಂಪರೆಯನ್ನು ಗತಿಶೀಲವಾಗಿಸಿವೆ."[೩]ಅಂದರೆಧರ್ಮನಿಷ್ಠೆಯ ಭಾರತೀಯ ಮನಸ್ಸಿಗೆ ವಾಸ್ತವವಾದದವೈಚಾರಿಕ ಧೋರಣೆಯ ತರ್ಕ ನಿಷ್ಠೂರ ಪ್ರವೃತ್ತಿಯ ವೈಚಾರಿಕತೆ ಪರಿಚಯವಾದದ್ದು ಆಂಗ್ಲ ಸಾಹಿತ್ಯದಿಂದ ವೈಚಾರಿಕ ಸಾಹಿತ್ಯ ಈ ಶತಮಾನದ ಸೃಷ್ಟಿ ಪಾರಂಪರಿಕ ಸತ್ಯಗಳನ್ನು ಸಾಂಪ್ರದಾಯಿಕ ವಿವೇಕವನ್ನು ವಸ್ತುನಿಷ್ಠ ತಾತ್ವಿಕತೆಯಲ್ಲಿ ಪ್ರಶ್ನಿಸಿ ಪರಿಶೀಲಿಸುತ್ತ ಮನುಷ್ಯನ ಸ್ವಾತಂತ್ರ್ಯ ಸ್ವಂತಿಕೆ ಬುದ್ಧಿ ಮತ್ತೆ ಸಾಹಸ ಪ್ರವೃತ್ತಿಯನ್ನು ಅನುಭವ ಪ್ರಾಮಾಣ್ಯತೆಯನ್ನು ಪುರಸ್ಕರಿಸುವ ವೈಚಾರಿಕ ಸಾಹಿತ್ಯ ರಚಿಸಿರುವ ಕನ್ನಡ ಲೇಖಕರ ವೈಚಾರಿಕತೆಯ ಸ್ವರೂಪವನ್ನು ಲೋಕ ಗ್ರಹಿಕೆಯ ವಿಶಿಷ್ಟತೆಯನ್ನು ಅಧ್ಯಯನಕ್ಕೊಳಪಡಿಸಿ ಇದರಿಂದ ಯಶಸ್ವಿಯನ್ನು ಕಂಡವರೆ ಕುವೆಂಪುರವರು. ಇವರ ಸೃಜನಶೀಲತೆ ಸಾಹಿತ್ಯ ಸಂಬಂಧ ಪ್ರಯೋಗಶೀಲತೆ ವಿಭಿನ್ನತೆಯಿಂದ ಕೂಡಿದ್ದು ಜಾಗತಿಕ ಮತ್ತು ಭಾರತೀಯ ಸಂದರ್ಭಕ್ಕೆ ಯೋಗ್ಯ ಮತ್ತು ಅನಿವಾರ್ಯವು ಆಗಿದೆ ಎಂದೆನಿಸಿದಿರದೂ.ಇದಕ್ಕೆಲ್ಲಾ ಸ್ಫೂರ್ತಿ, ಪ್ರತಿಭೆ ಮತ್ತು ಇದರ ವ್ಯುತ್ಪತ್ತಿ ಅನುಭವದಿಂದಲೇ ಸಾಧ್ಯ.

ಕುವೆಂಪು ಸಾಹಿತ್ಯವೇ ದೇವರು. ಧರ್ಮ, ತತ್ವಜ್ಞಾನ ವ್ಯವಸ್ಥೆಗೆ ಪರ–ವಿರೋಧತೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯದಲ್ಲಿಯೇ ಜಾತ್ಯಾತೀತ ನಿಲುವು ಧೋರಣೆಗಳನ್ನು ಪ್ರಶ್ನಿಸುವುದು. "ವಿಚಾರವಾದ ಸಮನ್ವಯ ಜೊತೆಗೆ ಲಿಂಗ ಸಮಾನತೆ ಇದರಲ್ಲಿ ಸ್ತ್ರೀ ಪರ ಚಿಂತನೆಯನ್ನು ಮಾಡಿ ಸಮಾಜವಾದವನ್ನು ಅಮೂಲ್ಯ ಇಲ್ಲಿ ಕಂಡುಬರುವ ಚಿಂತನೆಗಳು ದೇಶದ ಸಂಪತ್ತು ಆಗಿ ಹೊಸ ಸಂಗತಿಗಳ ತಿಳುವಳಿಕೆಗೆ ಆದರ್ಶಪ್ರಾಯವಾಗಬೇಕು ಅನ್ನುವುದಾಗಿದೆ.ಮನುಷ್ಯ ಗುಣ ಸ್ವಭಾವತೆಯಲ್ಲಿಯೂ ನಿಯುಕ್ತರಾಗದೇ ಉದಾರ ಮಾನವತಾವಾದವು ಕಂಡುಬರಬೇಕು ಎಂದೂ ಆಶಿಸುತ್ತಾರೆ."[೪] ಆಧುನಿಕ ಕನ್ನಡ ಸಾಹಿತ್ಯದ ಮೊದಲ ಘಟ್ಟ ಕುವೆಂಪು ಗುರುತಿಸಿದ ನವೋದಯ ಕನ್ನಡ ಸಾಹಿತ್ಯಕ್ಕೆ ನವೀನ ವಸ್ತು ವಿಷಯ ಆಶಯ ಬಂಧ ರೂಪ ಮಾತ್ರವಲ್ಲದೆ ನವ ಮಾನವತಾವಾದವನ್ನು ಆದರ್ಶ ವೈಜ್ಞಾನಿಕ – ವೈಚಾರಿಕ ಮನೋಧರ್ಮವನ್ನು ಪರಿಚಯಿಸಿದ ನವೋದಯ ಸಾಹಿತ್ಯಕ್ಕೆ ಪ್ರಯೋಗಶೀಲ ಹಿನ್ನೆಲೆಯನ್ನು ಸಜ್ಜುಗೊಳಿಸಿದ ಕರ್ನಾಟಕದ ಸಾಂಸ್ಕೃತಿಕ ಸಂದರ್ಭವನ್ನು ರಾಜಕೀಯ, ಶೈಕ್ಷಣಿಕ, ಸಾಹಿತ್ಯಿಕ ಪರಿಸರವನ್ನು ಅಭ್ಯಾಸಿಸಿದರೆ ಪಾಶ್ಚಾತ್ಯ ದೇಸಿ ವಿದ್ವಾಂಸರ ಸಾಹಿತಿಗಳ ಸೇವೆಯನ್ನು ತಿಳಿಯಬಹುದು ಅನ್ನುತ್ತಾರೇ ಜೊತೆಗೆ ವಸಾಹತು ಪ್ರಭುತ್ವದ ಪರಿಸರದಲ್ಲಿ ಪ್ರಾದೇಶಿಕ ಸಂಸ್ಕೃತಿ ಸಾಹಿತ್ಯದ ಅನನ್ಯತೆಯನ್ನು ಅನ್ವೇಷಿಸಿಕೊಂಡು ದೇಸಿ ಪ್ರಜ್ಞೆಯನ್ನು ಸದಾ ಎಚ್ಚರ ವಹಿಸುವುದು ಬಹಳ ಗಮನಾರ್ಹವೆಂಬುದಾಗಿಯೂ, ಹಳೆಯ ಸಂಪ್ರದಾಯಕ್ಕೆ ಹೊಸವರ್ಗ ಅನ್ನುವಂತೆ

"ಇತಿಹಾಸವನ್ನು ತಿರುವು ಹಾಕದೇ ಸ್ವತಂತ್ರ ಕೃತಿಗಳು ಹುಟ್ಟಲಾರವು" ಎಂದು ಸುಧಾರಣಾತಾವಾದಿಯಾಗಿ ಕುವೆಂಪು ಕಾಣಲಾರಂಭಿಸುತ್ತಾರೆ.

ಸಾಹಿತ್ಯದ ವಿಕಾಸತೆಯಲ್ಲಿ ಹೊಸ ಉದಯ ಕಾಲ ಬರಬೇಕು ಅದು ನಡೆದು ಬಂದ ದಾರಿಗಿಂತ ಮಿಗಿಲಾಗಿ ದರ್ಶನದ ಅರುಣೋದಯವು ಸುದರ್ಶನವಾಗಿ ಜನಸಾಮಾನ್ಯರ ಆಶೋತ್ತರಗಳಿಗೆ ದನಿಯಾಗಬೇಕು ಇದೇ ಸಾಹಿತ್ಯದ ಮಹತ್ವದ ಪಲ್ಲಟವೆಂದೂ ಹೇಳುತ್ತಾರೆ.ತಾತ್ವಿಕ ಮತ್ತು ಸಾಮಾಜಿಕ ಕಾಳಜಿಗಳನ್ನು ಅಧ್ಯಯನ ಮಾಡುವುದೇ ಆಧುನಿಕ ಕನ್ನಡ ಸಾಹಿತ್ಯದ ಸಂವೇದನೆಯಾಗಬೇಕು ಇದು ಪ್ರಭಾವಿಸಿದ ಪಾಶ್ಚಾತ್ಯ ಮತ್ತು ದೇಸಿ ನೆಲೆಗಳನ್ನು ಅರಿಯುವಂತಹವು ಆಗಬೇಕು ಎನ್ನುತ್ತಾರೆ. ಕಾದಂಬರಿಗಳಾದ ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮಧುಮಗಳು ಈ ಮೇಲೆ ಹೇಳಿದ ನೆಲೆಯಲ್ಲಿ ಸಮಕಾಲೀನತೆಯ ಗತ ತಾರ್ಕಿಕ ಸಂಬಂಧವನ್ನು ಮತ್ತು ಸಾಹಿತ್ಯೇತರ ವೈಚಾರಿಕತೆಯ ಸಂಗತಿಗಳು ಮತ್ತು ಪರಿಕಲ್ಪನೆಗಳಲ್ಲಿ ಅಭಿವ್ಯಕ್ತಿಯನ್ನು ಪ್ರಭಾವಿಸಿದ ಬಗೆಯನ್ನು ಹೊಸ ದೃಷ್ಟಿಕೋನತೆಯಲ್ಲಿತಿಳಿಯಬೇಕೆಂದು ಹೇಳುತ್ತಾರೆ ಮುಂದುವರೆದೂ ಇಂದಿನ ಯಾಂತ್ರಿಕ ಯುಗದಲ್ಲಿ "ನಮ್ಮ ಪರಂಪರೆಯ ಸಂಸ್ಕೃತಿಯ ಶ್ರೇಷ್ಠ ಅಂಶಗಳು ಕಣ್ಮರೆಯಾಗುತ್ತಿವೆ. ಇವೆಲ್ಲವು ಸಂಸ್ಕೃತಿಯಲ್ಲಿ ಕಂಡುಬರುವ ಶ್ರೇಷ್ಠ ಮೌಲ್ಯ ಮತ್ತು ಆದರ್ಶಗಳಾದರೂ ಈ ಸಂಗತಿಗಳನ್ನು ಯುವಜನಾಂಗಕ್ಕೆ ಪರಿಚಯಿಸಿ ತನ್ಮೂಲಕ ಸತ್ಪ್ರಜೆಗಳನ್ನಾಗಿ ರೂಪಿಸುವ ಉದ್ದೇಶ ಸಾಹಿತ್ಯಗಳಿಗೆ ಇದ್ದರೂ, ಇವತ್ತಿನ ದಿನಗಳಲ್ಲಿ ನಮ್ಮ ನಾಡು–ನುಡಿ ಚಿಂತನೆ ಸಂಸ್ಕೃತಿ ಇನ್ನಿತರ ಮುಂತಾದ ಮಾಹಿತಿಗಳನ್ನು ಕೊಡುವುದರಲ್ಲಿ ವಿಫಲರಾಗಿವೆ" ಎಂದು ನಿರಾಸೆಯನ್ನು ವ್ಯಕ್ತಪಡಿಸುತ್ತಾ ಧರ್ಮಸಮನ್ವಯ, ಸಾನ, ಸ್ವಾಭಿಮಾನ, ಶುಚಿತ್ವ, ಸಮಾನತೆ, ಲಿಂಗ ಸಮಾನತೆ ದೇಶದ ಬಗ್ಗೆ ಗೌರವ – ಅಭಿಮಾನ ಸ್ವನಿಷ್ಠೆ ವ್ಯಕ್ತಿಗೌರವ, ಸಹಬಾಳ್ವೆ, ಸ್ನೇಹಪರತೆ ಮಾನವೀಯ ಗುಣ ಮೌಲ್ಯಗಳು ಕಣ್ಮರೆಯಾಗುತ್ತಿವೆ. ಇವೆಲ್ಲವು ಕುವೆಂಪು ಸಾಹಿತ್ಯದ ಕೃತಿಗಳ ಮೂಲಕ ಯುವ ಸಮುದಾಯಗಳಿಗೆ ಪುನರ್ಮನನ ಮಾಡಬೇಕಾದ ಸಂದರ್ಭ ಬಂದೊದಗಿದೆ.

ಇವೆಲ್ಲವು ಮೂಲತಃ ನಮ್ಮ ಅನುಭವವೇದ್ಯದಿಂದ ಸಾಗಿ ಬರಬೇಕಾಗಿದ್ದು, ನಮ್ಮಲ್ಲೇ ಇರುವ ಜನಪದ ಸಾಹಿತ್ಯದಲ್ಲಿ ಅಡಕವಾಗಿರುವ ದೇಶಿಪ್ರಜ್ಞೆ ಸಮಾಜ– ಸಂಸ್ಕೃತಿ – ಸ್ವರೂಪ, ಲೋಕಜ್ಞಾನ, ಮಾನವೀಯ ಮೌಲ್ಯಗಳನ್ನು ನಂಬಿಕೆಯಾಗಿಸಿಯೇ ಜೀವಪರ ಮನೋಧರ್ಮವನ್ನು ಅರಿಯುವಂತಹದ್ದು ಆಗಬೇಕಾಗಿದೆ. ಅನ್ನುವಾ ಅರ್ಥದಲ್ಲಿ ಕುವೆಂಪು ಪರಂಪರೆಯ ಅಧ್ಯಯನತೆಯೊಂದಿಗೆ ಕೃತಿ ನಾಟಕಗಳಲ್ಲಿ ಅಭಿವ್ಯಕ್ತಪಡಿಸುತ್ತಾರೆ. ಶಿಷ್ಟ ಸಾಹಿತ್ಯದ ಮೂಲ ಬೇರೆ ಜನಪದವಾಗಿದ್ದು ಅದು ಮೌಲ್ಯ ಪ್ರತಿಪಾದನೆ, ಸಮಷ್ಠಿ ಸಂಸ್ಕೃತಿ, ಜೀವನ ಶ್ರದ್ಧೆ, ನೀತಿ ನಂಬಿಕೆ, ಪ್ರೀತಿ ಮಮಕಾರ, ಸ್ತ್ರೀ ಸಂವೇದನೆ ಜೊತೆಗೆ ಬಂಡಾಯವು ಇರಬೇಕೆಂದು ಸಮಗ್ರ ಕೃತಿಗಳಲ್ಲಿ ಅನಾವರಣಗೊಳಿಸುತ್ತಾರೆ. ಇದಕ್ಕೆ ಇವರು ಕೊಡುವ ಉದಾಹರಣೆ ಅಂದರೆ "ಸಾಹಿತ್ಯದ ಆಶಯ – ಆಕೃತಿಗಳ ಸಾವಯವ ಸಂಬಂಧ, ಇವುಗುಣ ಮೌಲ್ಯಗಳನ್ನು ವಿಶ್ಲೇಷಿಸುವುದರ ಜೊತೆಗೆ ಕಾಲಕಾಲಕ್ಕೆ ತನ್ನ ರೂಪ – ಸ್ವರೂಪ ಆದ್ಯತೆಗಳನ್ನು ಬದಲಾಯಿಸಿಕೊಳ್ಳಬೇಕು ಹೊಸ ಹೊಸ ಸಾಹಿತ್ಯದ ಪರಿಭಾವನೆಯಲ್ಲಿ ಲೋಕಗ್ರಹಿಕೆಯ ಸೂಕ್ಷ್ಮತೆಯನ್ನು ಸಾಮಾಜಿಕ ಪ್ರಜ್ಞೆಯ ವಿಸ್ತರಿಸುವ ಸೃಜನಶೀಲತೆಯನ್ನು ಚುರುಕುಗೊಳಿಸಿ ಹರಿತವಾಗಿಸುವ ತತ್ವಗಳು ಸಾಹಿತ್ಯ–ಸಮಾಜ–ಸಂಸ್ಕೃತಿಗೆ ಓದುಗರ ಸಂಬಂಧ ಬೆಸೆಯುವ ಚೌಕಟ್ಟು ಆಗಿ ಇರಬೇಕು ಅನ್ನುವ ಬಲವಾದ ವಾದವನ್ನು ಕುವೆಂಪುರವರ ಸಮಗ್ರ ಕೃತಿಗಳ ಅಧ್ಯಯನದಲ್ಲಿ ಮನನ ಮಾಡಿಕೊಳ್ಳಬಹುದು"[೬] ಭಾಷಿಕ ಮಹತ್ವಕ್ಕೆ ಹೊರತಾಗಿ ಚಾರಿತ್ರಿಕ ಸಾಮಾಜಿಕ ಧಾರ್ಮಿಕ ಜನಾಂಗಿಕ ಸಾಂಸ್ಕೃತಿಕ ಸಂಗತಿಗಳನ್ನು ತಿಳಿಯಬೇಕಾದ ಧರ್ಮ ಅಂದರೇ ವಿಷಯಗಳ ಅರ್ಥೈಸುವಿಕೆಗೆ ಅರಿವು, ತಿಳುವಳಿಕೆಗಳು ಗಾಢವಾಗಿ ಮೂಕ ಸಾಕ್ಷಿಗಳಂತೆ ಇರದೆ ಬಳಕೆಯ ಬೆಳವಣಿಗೆಯ ನಿತ್ಯ ಸಾಮಾಗ್ರಿಗಳಾಗಿ ಕಂಡುಬರಬೇಕು.ಸಾಮಾನ್ಯ ತಿಳುವಳಿಕೆ ಎನ್ನುವುದು ವಿವಿಧ ಅವಸ್ಥೆಗಳ ಪರಿಚಯದೊಂದಿಗೆ ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆಯ ಪ್ರಾಚೀನತೆ ಅದರ ಬೆಳವಣಿಗೆ ಈ ಹೊತ್ತಿನ ಸ್ಥಾನಮಾನಗಳ ಅರಿವು ಉಂಟಾಗಬೇಕು. ಹೀಗಾಗಿ ಕಾಲಕಾಲಕ್ಕೆ ಕನ್ನಡ ಆಧುನಿಕ ಸಾಹಿತ್ಯದ ವಿಷಯಗಳು ಬದಲಾವಣೆಗೆ ಒಳಪಡಿಸಬೇಕಾಗಿದೆ. ಕುವೆಂಪು ಮಹಾಕಾವ್ಯಗಳಲ್ಲಿಯೂ ಪ್ರಾಚೀನ ಕಾಲದಿಂದ ಸಾಗಿಬಂದ ಪ್ರಕೋಪಿತವಾದ ಉದ್ದೇಶಿತ ಮತ್ತು ಅನುದ್ದೇಶಿತ ಸಂಪಾದನೆಗೆ ವ್ಯವಸ್ಥಿತ ವಿಧಾನಗಳನ್ನು ಅವಲಂಬಿಸಿ ಈ ವಿರೂಪವನ್ನು ಹೋಗಲಾಡಿಸಿ ಕವಿಯ ಕೈಯಿಂದ' ಇಳಿದು ಬಂದಿರುವ ಪ್ರತಿಯನ್ನು ನಿರ್ಣಯಿಸುವುದು, ತರಬೇತುಗೊಳಿಸುವ ಉದ್ದೇಶದಿಂದ ಕಾವ್ಯ ಸಾಗತವನ್ನು ದಾಟುವವರಿಗೆ ಒಂದು ನೌಕೆಯಾಗಿ ಪರಿಣಮಿಸುತ್ತದೆ. ಕನ್ನಡ ಕಾವ್ಯದಲ್ಲಿ ಬಳಕೆಯಾಗಿರುವ ವರ್ಣವೃತ್ತಿಗಳ ಮಾತ್ರಾ, ಅಂಶಛಂದಸ್ಸಿನ ರಚನೆಯಾದಂತಹ ದೇಸಿ ಪದ್ಯಗಳ ಗುಣಲಕ್ಷಣಗಳನ್ನು ತಿಳಿದುಕೊಳ್ಳುವುದು ಅವಶ್ಯವೆಂದೂ ಹೇಳುತ್ತಾರೆ.

ಕುವೆಂಪು ಸಾಹಿತ್ಯದಲ್ಲಿ "ಮನುಷ್ಯ ಇಡೀ ಜೀವ ಸಂಕುಲದ ಪ್ರಭುವಾದದ್ದು ತನ್ನ ಬುದ್ಧಿವಂತಿಕೆ, ಭಾಷೆ ಸಾಹಿತ್ಯ ಮತ್ತು ಸಂಸ್ಕೃತಿಯಿಂದ ಮನುಷ್ಯ ಸಂಸ್ಕೃತಿಯು ದಿನನಿತ್ಯದ ಮಾತು, ರೀತಿ, ವ್ಯವಹಾರ, ವಿಚಾರ ಜೀವನ ಪದ್ಧತಿಗಳು ಆಹಾರ, ವಿಹಾರ, ವೇಷಭೂಷಣ ಹಬ್ಬ ಹರಿದಿನ ಗುಡಿಗುಂಡಾರ, ಧಾರ್ಮಿಕ ಸಾಮಾಜಿಕ ನಂಬಿಕೆ ಆಚರಣೆಗಳ ಮೂಲಕ ವ್ಯಕ್ತವಾಗುತ್ತಲೆ ಇರುತ್ತದೆ.ಆದರೂ ಸಾಹಿತ್ಯ ಕೃತಿಗಳು, ಸಾಹಿತ್ಯೇತರ ಸಾಮಾಜಿಕ ಸಾಂಸ್ಕೃತಿಕ ಗ್ರಹಿಕೆಗಳ ಮೂಲಕ ವಿಶ್ಲೇಷಿಸುವ ಆಧುನಿಕ ವಿಮರ್ಶಾ ವಿಧಾನವು ಸಾಹಿತ್ಯದ ಓದನ್ನು ಹೆಚ್ಚು ಜನಪರವಾಗಿಸಿವೆ."[೭]ಹಾಗಾಗಿ ಇವರ ಕೃತಿಗಳು ನಮ್ಮ ಸಾಂಸ್ಕೃತಿಕ

ದಾಖಲೆಗಳ ಜೊತೆಗೆ ಮಾನವತಾವಾದ ನೆಲೆಯಲ್ಲಿ ವ್ಯಕ್ತಪಡಿಸುತ್ತವೆ. ಇವುಗಳನ್ನು ಅಧ್ಯಯನದ ದೃಷ್ಟಿಯಿಂದ ಸಂಸ್ಕೃತಿಯ ಸ್ವರೂಪವನ್ನು ತಿಳಿದುಕೊಳ್ಳಲು ಮತ್ತು ಸಂಸ್ಕೃತಿಯ ಚರಿತ್ರೆಯನ್ನು ಪುನಾರಚಿಸಿಕೊಳ್ಳಲು ಸಾಧ್ಯವಾಗುತ್ತದೆ.ಈ ಎಲ್ಲಾ ದೃಷ್ಟಿಯಿಂದ ಇವರ ಪ್ರಮುಖ ಕಾವ್ಯ, ಕೃತಿ, ನಾಟಕ, ಕಾದಂಬರಿಗಳು ಸಾಂಸ್ಕೃತಿಕ ಅಧ್ಯಯನತೆಯಲ್ಲಿ ಪುನರ್ಮನನ ಮಾಡಿಕೊಳ್ಳಲು ಅವಕಾಶವಿದೆ.ಇಲ್ಲಿ ಮಾನವನ ಪರಿಸರ, ರಾಜಕೀಯ, ಧಾರ್ಮಿಕ, ಪರಿಸರ ನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳು ಜೀವನ ಮೌಲ್ಯಗಳನ್ನು ಪ್ರಕೃತಿ ಭಾಷೆ ನುಡಿಗಟ್ಟಿನ ಲೋಕೋಕ್ತಿಗಳ ಮೂಲಕ ಮಹತ್ವದ ಮಾದರಿಗಳಾಗಿ ತಿಳಿದುಕೊಳ್ಳಬೇಕಾಗಿದೆ ಎನ್ನುತ್ತಾರೆ. ಕನ್ನಡ ಸಾಹಿತ್ಯದ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸಾಹಿತ್ಯಾಸಕ್ತರಿಗೆ ನಮ್ಮ ನಾಡಿನ ಕನ್ನಡದ ಸರ್ವಾಂಗೀಣ ಪರಿಚಯ ಅಗತ್ಯವಾಗಿ ಇರಬೇಕು ಅದಕ್ಕಾಗಿ ಕುವೆಂಪುರವರ ಸಾಹಿತ್ಯ ಸಂಸ್ಕೃತಿ, ಇತಿಹಾಸದ ನಿಕಟ ಪರಿಚಯ ನಮಗಾಗಬೇಕು ಈ ದೃಷ್ಟಿಯಿಂದ ಶಾಸ್ತ್ರ ಕ್ಷೇತ್ರದ ಕುವೆಂಪು ವಿಶೇಷ ಅಧ್ಯಯನವು ಅಗತ್ಯವೆನಿಸುತ್ತದೆ. ಅದರಲ್ಲೂ ಈಗ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತಿರುವ ಈ ಸಂದರ್ಭದಲ್ಲಿ ಇದಕ್ಕೆ ಹಿನ್ನೆಲೆಯಾಗಿರುವ ಕುವೆಂಪು ಸಾಹಿತ್ಯ ಪರಂಪರೆಯ ಪ್ರಮುಖ ಘಟಕಗಳಾದ ವೈಚಾರಿಕತೆ,ವೈಜ್ಞಾನಿಕತೆ, ಆಧುನಿಕ ಪ್ರಗತಿ, ಗ್ರಾಮೋಭ್ಯುದಯ, ಸಮಾನತೆ, ಸ್ತ್ರೀ ಪರ ಚಿಂತನೆ, ಜನಪರತೆಯ ಕಾಳಜಿ, ಮಾನವತಾವಾದ, ಮಾನವೀಯತೆ, ರಾಷ್ಟ್ರೀಯತೆ ಪ್ರಜ್ಞೆ, ಸಮಕಾಲೀನ ಚಿಂತನೆ, ವಿಶ್ವಮಾನವ ಪರಿಕಲ್ಪನೆ, ಪ್ರಕೃತಿ ಆರಾಧನೆ, ಯುವ ಮಹಿಳಾ ಸಬಲೀಕರಣ, ಸಂಸ್ಕೃತಿಯ ಅನನ್ಯತೆ, ಅಭಿವ್ಯಕ್ತಿ ಸ್ವತಂತ್ರ ಹೀಗೆ ಅಧ್ಯಯನ ಪ್ರವೃತ್ತಿ ಕುಂಠಿತವಾಗುತ್ತಿರುವ ಈ ಸಂದರ್ಭದಲ್ಲಿ ಇವಕ್ಕೆ ಪುನರುಜ್ಜೀವನ, ಪುನಶ್ಚೇತನ ಮತ್ತು ಪುನರ್ಮನನ ನೀಡುವುದೇ ಈ ಲೇಖನದ ಮೂಲ ಉದ್ದೇಶವಾಗಿದೆ. ಇದು ಯಾವ ರೀತಿ ಅಂದರೆ ಶಾಸ್ತ್ರ– ವಿಜ್ಞಾನ, ಸಾಹಿತ್ಯ ಸಂಬಂಧಾಂತರದ ಮೂಲಕ ಕನ್ನಡ ಅಧ್ಯಯನದ ಸಂಶೋಧನೆಗಳು ಒಂದು ದೇಶದ ಜನಾಂಗ ಸಂಸ್ಕೃತಿಯನ್ನು ಇವುಗಳಲ್ಲಿರುವ ಅಂತಃಸತ್ವವನ್ನು ಅರಿಯುವ ಪ್ರಯತ್ನವಾಗಿ ಬರಬೇಕು.ಇಲ್ಲಿ ಸೈದ್ಧಾಂತಿಕ ನಿಲುವಿನಲ್ಲಿ ಬರುವ ಅಗತ್ಯತೆ ಇದೆ ಎಂದೂ ಕುವೆಂಪು ಬಯಸುತ್ತಾರೆ. ಅವರ ಶ್ರೀ ರಾಮಾಯಣ ದರ್ಶನಂವೆಂಬ ಮಹಾಕಾವ್ಯದಲ್ಲಿ ಇದನ್ನೇ ಅರಿಯುವ ಪ್ರಯತ್ನ ನಡೆಸಿದಂತೆ ಅಲ್ಲಲ್ಲಿ ಕಾಣಸಿಗುತ್ತದೆ.

ಇವು ಜಾಗತಿಕ ಮಟ್ಟದಲ್ಲಿ ಮನ್ನಣೆಗೊಳಿಸಿ ಜ್ಞಾನಾಧಾರಿತ ಸಮಾಜ ಸೃಷ್ಟಿಯಲ್ಲಿ ಸಾಹಿತ್ಯ ಭಾಷಾ ಕೌಶಲ್ಯತೆಯು ಮಹತ್ವದ ಸ್ಥಾನ ಪಡೆಯುತ್ತದೆ ಎಂಬುದನ್ನು ಸಾರಿ ಸಾರಿ ತಮ್ಮ ಕೃತಿಗಳಲ್ಲಿ ಕುವೆಂಪುರವರು ಅಭಿವ್ಯಕ್ತಪಡಿಸುತ್ತಾರೆ.ಇದಕ್ಕೆ ಓದುಗ ಬಳಗ ರಚನಾ ಕೌಶಲವನ್ನು ತಿಳಿದುಕೊಳ್ಳಬೇಕು ಎಂಬುದನ್ನು ಒತ್ತಿ ಹೇಳುತ್ತಾರೆ.ಇದರಲ್ಲಿ ಸಾಹಿತ್ಯಾಸಕ್ತರು ಭಾಷೆಯ ಸ್ಥೂಲ ಪರಿಚಯ ಮತ್ತು ಪ್ರಾದೇಶಿಕತೆಯೊಂದಿಗೆ ದೇಸಿ, ಆಧುನಿಕ ಸೃಷ್ಟಿಯೂ ಕನ್ನಡದಲ್ಲಿ ನಡೆದು ಬಂದದ್ದು ಹೇಗೆ ಎಂಬ ಅಭಿಪ್ರಾಯತೆಯ ದಾರಿಯನ್ನು ಹುಡುಕುವ ಪರಂಪರೆಯ ಪ್ರದರ್ಶಕ ಕಲೆಯಾಗಿರುವ ನಾಟಕದ ಮೂಲಕ ವಿಕಾಸ ಮಾರ್ಗವನ್ನು ಕವಲೊಡೆಯದೆ ಜ್ಞಾನ ತಿಳುವಳಿಕೆ ಮತ್ತು ಮೌಲ್ಯ ಪ್ರಸರಣೆಯು ನಟ ಮತ್ತುಪ್ರೇಕ್ಷಕವರ್ಗವನ್ನು ಆಶ್ರಯಿಸಿರುವ ಹಾಗೂ ಜೀವಂತವಾಗಿಸುವ ದೃಷ್ಟಿಯಲ್ಲಿ ತಿಳಿಯಬೇಕು ಎಂದು ತಮ್ಮ ನಾಟಕಗಳ ರಚನಾ ವಿನ್ಯಾಸದ ಮೂಲಕ ಅಭಿಪ್ರಾಯ ಪಡುತ್ತಾರೆ. ಅಂದರೆ ಸಾಹಿತ್ಯ ಪರಂಪರೆಯು ಸಂಸ್ಕೃತದ ಜೊತೆಗೆ ಸ್ತ್ರೀಯಾತ್ಮಕ ಮತ್ತು ಪುರುಷಾತ್ಮಕ ಅಭಿವ್ಯಕ್ತಿಯ ಮಾದರಿಗಳಾಗಿದ್ದು ದೇಸಿ ಸಾಹಿತ್ಯ ಪರಂಪರೆಗೆ ಸ್ತ್ರೀತ್ವ, ಮಹಿಳಾತ್ವ ಇವುಗಳ ಮೂಲಕ ಸಾಹಿತ್ಯಕ್ಕೆ ದಕ್ಕಿದ ಸ್ತ್ರೀ ಪರ ಆಯಾಮಗಳ ಪರಿಶೀಲನೆಯು ಸಮಾನ ಸಂಸ್ಕೃತಿಯ ಆಶಯಗಳಾಗಿ ವಿಮರ್ಶೆ, ಪರಾಮರ್ಶತೆ ಅನುಸಂಧಾನತೆಯಲ್ಲಿ ಒಡಮೂಡಬೇಕೆಂದು ಹೇಳುವ ಪ್ರಧಾನತೆಯನ್ನು ತಿಳಿಸಿಕೊಟ್ಟಿದ್ದಾರೆ.

"ಕುವೆಂಪುರವರು ಮಹಾಕಾವ್ಯ –೧, ಖಂಡಕಾವ್ಯಗಳು – ೨, ಕವನಸಂಕಲನಗಳು – ೨೮, ನಾಟಕಗಳು – ೧೪, ಕಥಾಸಂಕಲನಗಳು – ೨, ಕಾದಂಬರಿಗಳು – ೨, ಮಕ್ಕಳ ಕೃತಿಗಳು – ೭, ಇಂಗ್ಲೀಷ್ ಕೃತಿಗಳು – ೪, ವೈಚಾರಿಕ ಬರಹಗಳು – ೪, ವಿಮರ್ಶೆ – ೩, ಕಾವ್ಯಮೀಮಾಂಸೆ – ೧, ಅನುವಾದ ೨ ಆತ್ಮಕಥೆ ೧ ಹಾಗೂ ವಿಚಾರಸಂಕೀರ್ಣ –೧೨ ಹೀಗೆ ಬರೆದ ಕುವೆಂಪುರವರು ಕನ್ನಡದಲ್ಲಿ ೭೯ ಕೃತಿಗಳನ್ನು ರಚಿಸಿದ್ದಾರೆ"[೮]ನಾಟಕಗಳು ಅಷ್ಟೇ ಮಕ್ಕಳಿಗಾಗಿ ಮೋಡಣ್ಣನ ತಮ್ಮ, ನನ್ನ ಗೋಪಾಲ ಬರೆದರೆ, ರಾಮಾಯಣ–ಮಹಾಭಾರತ ಆಧಾರಿತವಾಗಿ ಶೂದ್ರ ತಪಸ್ವಿ, ವಾಲ್ಮೀಕಿಯ ಭಾಗ್ಯ, ಸ್ಮಶಾನ ಕುರುಕ್ಷೇತ್ರ, ಬೆರಳ್‌ಗೆ ಕೊರಳ್, ಕಾನೀನಗಳಾಗಿವೆ. ಇನ್ನೂ ಯಮನ ಸೋಲು,ಚಂದ್ರಹಾಸ ಹಾಗೂ ಮಹಾರಾತ್ರಿಗಳಂತೂ ಭಗವಾನ್ ಬುದ್ಧನನ್ನು ಕುರಿತವು ಪುರಾಣ ಆಧಾರಿತವಾಗಿವೆ. ಅಲ್ಲದೆ ರಕ್ತಾಕ್ಷಿ ಮತ್ತುಬಿರುಗಾಳಿ ಐತಿಹಾಸಿಕ ಹಿನ್ನೆಲೆಯ ಕಥಾವಸ್ತುಗಳು ಜೊತೆಗೆ ಜಲಗಾರ ಮತ್ತು ಬಲಿದಾನ ಸಾಮಾಜಿಕ ನಾಟಕಗಳು ಹೀಗೆ ನಾಟಕಗಳನ್ನು ಬರೆದಿದ್ದಾರೆ. ಕುವೆಂಪುರವರಿಗೆ ಇದ್ದ ದೇಶಪ್ರೇಮ, ದೇಶದ ಸಂಸ್ಕೃತಿ –ಇತಿಹಾಸ ಪರಂಪರೆ ಇವುಗಳ ಮೇಲಿನ ಅಭಿಮಾನವೇಇರುವುದರಿಂದ ಕನ್ನಡಾಂಬೆಯ ಹಿರಿಮೆಯನ್ನು ಸಾರಿದರೆ ಜನಪ್ರಿಯ ಗೀತೆಗಳನ್ನು ರಚಿಸಿ ಮಾನಸಿಕ ಸ್ಥೈರ್ಯ ವರ್ಧನೆಯನ್ನು ಮೂಡಿಸಿದ್ದಾರೆ. ಕವನಗಳಲ್ಲಿ ಆಧ್ಯಾತ್ಮಿಕ ವಿಚಾರಧಾರೆಯ ಸಮರ್ಥತೆಯನ್ನು ಸಾರಿರುವ ಕುವೆಂಪು ಯುವ ಜನಾಂಗಕ್ಕೆ ತ್ಯಾಗ–ಬಲಿದಾನಗಳಿಗೂ ಸಿದ್ಧರಾಗುವ ಕರೆಯನ್ನು ಕೊಟ್ಟಿದ್ದಾರೆ. ಇವರಿಗೆ ಸಹಜವಾಗಿ ಪ್ರಕೃತಿ, ಪ್ರೇಮ, ಸೂರ್ಯೋದಯ, ಸೂರ್ಯಾಸ್ತಮ, ಚಂದ್ರನ ಬೆಳದಿಂಗಳು,

ತಂಗಾಳಿ, ತಾರೆ–ನಕ್ಷತ್ರ, ಕಪ್ಪು–ಬಿಳುಪು, ಆಕಾಶ–ಭೂಮಿ, ಮೋಡ, ಮಳೆ, ಮಲೆನಾಡಿನ ನಿತ್ಯಹರಿದ್ವರ್ಣ ಕಾಡು, ಮಾಲೆ ಮಾಲೆ ಬೆಟ್ಟಗಳು, ಮೈಸೂರಿನ ಕುಕ್ಕರಹಳ್ಳಿ ಕೆರೆ ಈ ಎಲ್ಲವೂ ಲೇಖನ ಕುಂಚದಿಂದ ಬಿಡಿಸಿದ ವಿಸ್ಮಯ ವರ್ಣಚಿತ್ರಗಳೆ ಆಗಿವೆ. ಕಾದಂಬರಿಗಳಲ್ಲಿ ಮಲೆನಾಡು ಪರಿಸರದ ರುದ್ರ ರಮಣೀಯ ಚಿತ್ರವಿದ್ದೂ ಸದಾ ಜೀವಂತಿಕೆಯ ಪಾತ್ರಗಳಾಗಿದ್ದು ಸ್ತ್ರಿ ಪುರುಷ ಸಂಬಂಧಗಳು ನಿಸರ್ಗ ನಾಗರಿಕತೆಗಳ ನಡುವೆ ಬೇರೆ ಬೇರೆ ಸ್ತರಗಳಲ್ಲಿ ಮೂಡಿ ಬಂದಿವೆ. ಇಲ್ಲೂ ಮಲೆನಾಡಿನ ಜೀವಂತಿಕೆ ಇದ್ದರೂ ವಿವೇಕಾನಂದರ ಪ್ರಭಾವವೂ ಕಂಡುಬರುವುದರ ಜೊತೆಗೆ ಬುದ್ಧನ ತತ್ವ ಸಂದೇಶಗಳೆ ಮಹತ್ವದಾಗಿ ಕಾಣಿಸುತ್ತವೆ. ಮಕ್ಕಳ ಸಾಹಿತ್ಯವಂತೂ ಅಮಲನ ಕಥೆ, ಬೊಮ್ಮನಹಳ್ಳಿಯ ಕಿಂದರಿಜೋಗಿ, ಹಾಳೂರು, ನನ್ನ ಮನೆ,ಮೇಘಪುರ, ಮರಿವಿಜ್ಞಾನಿ ಈ ಆರು ಕೃತಿಗಳು ಚಿರನೂತನ ಚೇತನದುತ್ಸಾಹದಿ ನವೀನಜೀವನ ಚಿಮ್ಮುತಿದೆ. ಇಲ್ಲಿ ನಮ್ಮ ನಿತ್ಯ ಬದುಕಿಗೆ ಚೈತನ್ಯ ನೀಡೊ ಪ್ರಕೃತಿ ಎಂಬ ಮಾತಿನ ರೂಪದಲ್ಲಿ ಕಾಣಿಸುತ್ತವೆ. ನನ್ನ ದೇವರು ಮತ್ತು ಇತರ ಕಥೆಗಳು ಮತ್ತು ಸನ್ಯಾಸಿ ಮತ್ತು ಇತರ ಕಥೆಗಳು ಕಥಾಸಂಕಲನಗಳಾಗಿದ್ದರು, ವೈಚಾರಿಕ ಪ್ರಜ್ಞೆ, ಕಲ್ಯಾಣ ಕರ್ನಾಟಕದಜೊತೆಗೆ ಭಾರತದ ಸಮಗ್ರ ಕಲ್ಪನೆಯು ಇದೆ. ಇಲ್ಲೆಲ್ಲಾ ದೇವರು, ಸನ್ಯಾಸಿಗಳಿಗಿಂತ ದೇಶ ಮುಖ್ಯ ಅನ್ನುವಾ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಪ್ರಭಾವತೆಯೂ ಇಲ್ಲಿಕಾಣಸಿಗುತ್ತದೆ ಎಂಬುದನ್ನು ತೋರ್ಪಡಿಸುವ ಅಂಶ ಇವರ ಕೃತಿಗಳಲ್ಲಿ ಅಡಕ ಮಹಾಕಾವ್ಯ ರಚನೆಯಲ್ಲಿ ಮೌಲ್ಯ ದರ್ಶನದ ಕಾಂತಿಯನ್ನು ಸಮಾಜದಲ್ಲಿ ಮರ್ಯಾದೆ, ಕೀರ್ತಿ ಮತ್ತು ಧನಲಾಭ ಇವು ಕಾವ್ಯ ರಚನೆಗೆ ಉದ್ದೇಶಗಳಂತೆ ಇದ್ದರೆ ಈ ವಿಚಾರಧಾರೆಗಿಂತ ಕುವೆಂಪು ಶ್ರೀ ರಾಮಾಯಣ ದರ್ಶನಂನಲ್ಲಿ ಭಿನ್ನರಾಗಿಯೇ ಕಾಣುತ್ತಾರೆ. ಅದಕ್ಕೆ ಅವರೇ ಹೇಳುವಂತೆ 'ತೊಲಗಾಚೆ ಕೀರ್ತಿ ಶನಿ' ಎಂದು ಅಂದವರು ತಾನೆ ನುಡಿದಂತೆ ನಡೆದವರು ಕೂಡಾ ಕಾವ್ಯಫಲದ ವಿಷಯದಲ್ಲಿ ಯಾವಾಗಲೂ ದಿವ್ಯ ನಿರ್ಲಕ್ಷ್ಯ ಹೊಂದಿದ್ದರು ಇದಕ್ಕೆ ಜ್ಞಾನಪೀಠ, ರಾಷ್ಟ್ರಕವಿ, ಕರ್ನಾಟಕ ರತ್ನ ಪ್ರಶಸ್ತಿಗಳ ವಿಷಯದಲ್ಲಿ ಈ ಧೋರಣೆಗಳು ಕಾಣುತ್ತವೆ. ಸದಾ ಭಾರತ, ಭಾರತೀಯ, ಭಾರತಾಂಬೆ ಎಂಬುದರ ಜೊತೆಗೆ ಕರ್ನಾಟಕ, ಕನ್ನಡಿಗ, ಕನ್ನಡ ಮಾತೆ ಎಂಬುದನ್ನೇ ಬಳಸಿದ್ದಾರೆ. ಹಾಗಾಗಿ ಮಹಾಭಾರತಕ್ಕಿಂತ ರಾಮಾಯಣದ ಕಡೆಗೆ ಹೆಚ್ಚು ಅನ್ನೋದಕ್ಕೆ ಇವರು ಬರೆದ ಮಹಾಕಾವ್ಯ ಖಂಡಕಾವ್ಯ ನಾಟಕಗಳೇ ಸಾಕ್ಷಿ. ಇದಕ್ಕೆ ಬಹುಶಃ ಇವರಿಗೆ ಪವಾಡ, ಲೀಲಾವಿನೋದ, ತಂತ್ರ ಇವುಗಳ ಪ್ರತಿಸ್ವರೂಪವಾದ ಕೃಷ್ಣನಿಗಿಂತ ಪಿತೃಭಕ್ತಿ ಭ್ರಾತೃವಾತ್ಸಲ್ಯ, ಏಕಪತ್ನಿತ್ವ, ಶರಣಾಗತ ರಕ್ಷಣೆ, ಪ್ರಜಾಪಾಲನೆ, ಇದಕ್ಕೆ ಸಾಕಾರನಾದ ರಾಮನೆ ಹೆಚ್ಚು ಪ್ರಿಯವಾಗಿರಬೇಕು ಅಲ್ಲದೆ ಪಾಳಿ, ಪ್ರಾಕೃತ ಮೂಲಕದ ಬುದ್ಧ ಚರಿತೆ ಮತ್ತು ಜೈನ ರಾಮಾಯಣಗಳ ದಟ್ಟ ಪ್ರಭಾವವೂ ಇದರ ಮೇಲಾಗಿರಬಹುದು. ಜೊತೆಗೆಅಂಬೇಡ್ಕರ್– ಗಾಂಧೀಜೀ ಅವರಲ್ಲಿ ಗೌರವಾದರಗಳನ್ನು ಮನಸ್ಸಿನಲ್ಲಿ ಇರಿಸಿಕೊಂಡಿದ್ದರಿಂದ ಸಹಜವಾಗಿಯೇ ರಾಮಭಕ್ತಿ ಆಂತರಿಕವಾಗಿರಬೇಕು ಅಲ್ಲದೆಭಗವಾನ್ ಬುದ್ಧ, ಸ್ವಾಮಿ ವಿವೇಕಾನಂದ ಹಾಗೂ ಅರವಿಂದ ಘೋಷ್‌ರವರ ವಿಚಾರಧಾರೆ ಮತ್ತು ಸ್ವಾತಂತ್ರ್ಯ ಸಮರದ ನೆಲೆಯೂ ಇವರ ಮೇಲೆ ಪ್ರೇರಕವಾಗಿರಬಹುದು. ಹೀಗೆ ಒಟ್ಟಾರೆಯಾಗಿ ಕುವೆಂಪು ಸಾಹಿತ್ಯದಲ್ಲಿ **"**ಕನ್ನಡಕ್ಕಾಗಿ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ ಕನ್ನಡಕ್ಕಾಗಿ ಕೊರಳೆತ್ತು ಅಲ್ಲಿ ಪಾಂಚಜನ್ಯ ಮೊಳಗುತ್ತದೆ.ಕನ್ನಡಕ್ಕಾಗಿ ಕಿರುಬೆರಳೆತ್ತಿದರೂಸಾಕು, ಅದೇ ಗೋವರ್ಧನಗಿರಿಯಾಗುತ್ತದೆ**"** ಇಂತಹ ಅಮೃತವಾಣಿಯನ್ನು ಕನ್ನಡಿಗರ ಕರ್ಣಗಳಲ್ಲಿ ತುಂಬಿದವರು ಕವಿಶೈಲದ ತಪಸ್ವಿ ಕುವೆಂಪು.ಇವರು ಕನ್ನಡ ಡಿಂಡಿಮವನ್ನು ಬಾರಿಸಿದವರು ಸತ್ತಂತಿಹರನು ಬಡಿದೆಬ್ಬಿಸಿದವರು.ಹೊಟ್ಟೆಯ ಕಿಚ್ಚಿಗೆ ಕಣ್ಣೀರು ಸುರಿಸಿದವರು ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು ಎಂದು ನಿತ್ಯ ಪ್ರಾರ್ಥಿಸಿದವರು.ಹೀಗೆ ಹಲವಾರು ಪ್ರಭಾವಿತ ಅಂಶಗಳಿಂದ ರಾಷ್ಟ್ರಮಟ್ಟದಲ್ಲಿ ಹೆಸರುವಾಸಿಯಾದವರು.ಇವತ್ತಿಗೂ ಶಿಕ್ಷಣದಲ್ಲಿ ಕನ್ನಡಕ್ಕೇ ಕುತ್ತು ಬಂದಿರೋ ಈ ಸಂದರ್ಭದಲ್ಲಿ ಕುವೆಂಪು ವಿಚಾರಧಾರೆ ಪುನರ್ಮನನ ಮಾಡಿದರೆ ತುಂಬಾ ಪ್ರಸ್ತುತ ಅನಿಸುತ್ತಿದೆ. ಕುವೆಂಪುರವರದು ಎಲ್ಲರಿಗೂ ದಕ್ಕುವಂಥಾ ವ್ಯಕ್ತಿತ್ವ ಸಮಾಜದ ಎಲ್ಲಾ ವರ್ಗದ ಎಲ್ಲಾ ದರ್ಜೆಯ ಎಲ್ಲಾ ಮನೋಧರ್ಮದ ಜನರಿಗೂ ಪ್ರಿಯವಾಗುವ ಉದಾರ ಮಾನವತಾವಾದಿ ಸಾಹಿತ್ಯದ ಬರವಣಿಗೆಯಲ್ಲಿ ಯುಗಪುರುಷ ಜನದ ಕವಿಯಾಗಿ ಸರ್ವೋದಯ ತತ್ವವನ್ನು ಸಾರುವಂತಹರಾಗಿ ಕುವೆಂಪುರವರು ಇಂದಿಗೂ ಕಾಣಲಾರಂಭಿಸಿದ್ದಾರೆ.

### ಅಡಿಟಿಪ್ಪಣಿಗಳು


೧. ಭಾರತೀಯತೆ ಮತ್ತು ಕನ್ನಡ ಲೇಖಕ – ಡಾ.ಜಿ.ಎಸ್.ಶಿವರುದ್ರಪ್ಪ. ಪುಟಸಂಖ್ಯೆ –೧೦.

೨. ಎಸ್.ಅನಂತನಾರಾಯಣ – ಸಾಹಿತ್ಯ ಸಾಮಾಜಿಕ ಮೌಲ್ಯ – ಪುಟಸಂಖ್ಯೆ –೧೧೯.

೩. ಡಿ.ಕೆ.ಶಿವಣ್ಣ – ಸಾಮಾಜಿಕ ವಿಘಟನೆ – ಪುಟಸಂಖ್ಯೆ – ೩೧೩.

೪.ನ. ರವಿಕುಮಾರಚಂದ್ರ ಮಾಗಡಿ – ಗೊಂದಲಪುರ – ಪುಟಸಂಖ್ಯೆ – ೬೬.

೫. ಡಾ.ರಹಮತ್ ತರೀಕೆರೆ – ಕನ್ನಡ ಸಾಹಿತ್ಯ ವಾಗ್ವಾದಗಳು – ಪುಟಸಂಖ್ಯೆ – ೫೬.

೬. ಡಾ.ರಹಮತ್ ತರೀಕೆರೆ – ಕನ್ನಡ ಸಾಹಿತ್ಯ ವಾಗ್ವಾದಗಳು – ಪುಟಸಂಖ್ಯೆ – ೭೮.

೭. ಕುವೆಂಪುಗೆ ಪುಟ್ಟ ಕನ್ನಡಿ, ಕೆ.ವಿ.ಸುಬ್ಬಣ್ಣ – ಪುಟಸಂಖ್ಯೆ – ೨೦–೨೧.
೮. ರಾಜಪ್ಪ ದಳವಾಯಿ – ಕನ್ನಡ ಸಾಹಿತ್ಯಕೋಶ ಪುಟಸಂಖ್ಯೆ – ೧೦೭

**ಪರಾಮರ್ಶನ ಗ್ರಂಥಗಳು**


೧. ಗಂಗೋತ್ರಿ (ಅಭಿನಂದನಾ ಗ್ರಂಥ) – (ಸಂ) ದೇ ಜವರೇಗೌಡ.
೨. ಕುವೆಂಪು ಯುಗ – ಕೆ.ಎಸ್.ಭಗವಾನ್.
೩. ಕುವೆಂಪು ಕಾವ್ಯ ಮೀಮಾಂಸೆ (ಸಾಹಿತ್ಯ ವಿಮರ್ಶೆ) – (ಸಂ) ಎಂ. ವಸಂತಕುಮಾರ.
೪. ಕುವೆಂಪು ಕಾವ್ಯ – ನರಹಳ್ಳಿ ಬಾಲಸುಬ್ರಹ್ಮಣ್ಯ.
೫. ಕುವೆಂಪು ಸಾಹಿತ್ಯ ದರ್ಶನ – ಪಿ.ಎಸ್.ನಾಗಭೂಷಣ.
೬. ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು – ಎನ್. ಬೋರಲಿಂಗಯ್ಯ.
೭. ಕುವೆಂಪು ಕಾದಂಬರಿಗಳು – ಮರಿಗುದ್ದಿ ಗುರುಪಾದ.
೮. ಕುವೆಂಪು ಯುಗದಕವಿ – ಜಿ.ಎಸ್.ಅಮೂರ.
೯. ಶ್ರೀ ರಾಮಾಯಣ ದರ್ಶನಂ – ಕುವೆಂಪು.
೧೦. ಕುವೆಂಪುಗೆ ಪುಟ್ಟ ಕನ್ನಡಿ – ಕೆ.ವಿ.ಸುಬ್ಬಣ್ಣ.
೧೧. ಕುವೆಂಪು ಸಮಗ್ರ ಗದ್ಯ – ಡಾ.ಕೆ.ಸಿ.ಶಿವಾರೆಡ್ಡಿ.
೧೨. ಸಹ್ಯಾದ್ರಿ (ಅಭಿನಂದನಾ ಗ್ರಂಥ) – (ಸಂ)
ಜೀ ಶಂ ಪರಮಶಿವಯ್ಯ


ಸಿ.ಪಿ.ಕೃಷ್ಣಕುಮಾರ.

# ಕುವೆಂಪುರವರ ನಿಸರ್ಗ ಮತ್ತು ವೈಚಾರಿಕ ಪರಿಕಲ್ಪನೆ

**ರಾಘವೇಂದ್ರ ಪಂಡಿತ ಮಾಂಡವೆ**
**ಸಂಶೋಧನಾ ವಿದ್ಯಾರ್ಥಿ**
**ಭಾಷಾಂತರ ಅಧ್ಯಯನ ವಿಭಾಗ**
**ಕನ್ನಡ ವಿಶ್ವವಿದ್ಯಾಲಯ ಹಂಪಿ**

## ಪೀಠಿಕೆ

ಕುವೆಂಪು ಅವರನ್ನು ನವೋದಯ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ರಮ್ಯಕವಿ, ನಿಸರ್ಗಕವಿ ಎಂದೇ ಗುರುತಿಸಲಾಗಿದೆ. ತಮ್ಮ ವಿಶಿಷ್ಟವಾದ ಕಾವ್ಯ, ಕಾದಂಬರಿಗಳನ್ನು ರಚಿಸಿ, ಉನ್ನತವಾದ ದರ್ಶನದಿಂದ, ವೈವಿಧ್ಯ ಮತ್ತು ವಿಪುಲವಾದ ವಸ್ತುಗಳ ಆಯ್ಕೆಯಿಂದ, ಸಾಮಾಜಿಕ ಚಿಂತನೆಗಳ ಸತ್ವದಿಂದ ಕೂಡಿದ ಕವಿತೆ ಮತ್ತು ಕಾದಂಬರಿಗಳನ್ನು ಬರೆಯುವುದರ ಮೂಲಕ ಆಧುನಿಕ ಕನ್ನಡ ಸಾಹಿತ್ಯದ ಮಹತ್ವದ ಕವಿಯಾಗಿ, ಯುಗದ ಕವಿ, ಜಗದ ಕವಿ ಎಂದೇ ಹೆಸರಾಗಿದ್ದಾರೆ.

ಅವರಲ್ಲಿ ನಾವು ಕಂಡ ನಿಸರ್ಗಪ್ರೇಮ ಅತ್ಯಂತ ಮುಖ್ಯವಾದುದು. ನಿಸರ್ಗ ಎಂಬುದು ಸೃಷ್ಟಿಯ ಅಗಾಧಶಕ್ತಿ. ಅಪಾರ ಜೀವ ಸಂಕುಲಗಳ ಗಣಿ. ಪ್ರಾಣಿ ಪ್ರಪಂಚ, ಸಸ್ಯ ಪ್ರಪಂಚ, ಕೀಟ ಪ್ರಪಂಚಗಳ ವಿಭಿನ್ನ ಪ್ರಭೇದಗಳನ್ನು ಒಳಗೊಂಡ ನಿಧಿ. ಸಾಹಿತ್ಯದ ಉಗಮಕ್ಕೆ ಮೂಲ ಪ್ರೇರಣೆಯೇ ಪ್ರಕೃತಿ. ಕವಿಗಳಿಗೆ, ದಾರ್ಶನಿಕರಿಗೆ, ಸಹೃದಯರಿಗೆ ಸಾಹಿತ್ಯ ಸೃಷ್ಟಿ ಹಾಗೂ ನೆಮ್ಮದಿಯ ಜೀವನಕ್ಕೆ ಚೈತನ್ಯ ದೀಪ್ತಿ ನಿಸರ್ಗ. ಪ್ರಕೃತಿ ಸೌಂದರ್ಯಕ್ಕೆ ಮನಸೋಲದ ವ್ಯಕ್ತಿಯನ್ನು ನಾವು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.

ನಿಸರ್ಗವನ್ನು ನಾವು ನೋಡುವಿಕೆ ಕ್ರಮದಲ್ಲಿ ಬದಲಾವಣೆ ಆಗಬೇಕು. ಆಗ ಮಾತ್ರ ಪರ್ವತವಾಣಿ ಕೇಳಿಸುತ್ತದೆ. ಹಕ್ಕಿಗಳ ಹಾಡು ಅರ್ಥವಾಗುತ್ತದೆ. ದುಂಬಿಯ ಮೊರೆ ಅರಿವಾಗುತ್ತೆ. ಕಗ್ಗತ್ತಲಿನ ಸದ್ದು ಕೇಳಿಸುತ್ತದೆ. ದೇವರು ಮತ್ತು ನಿಸರ್ಗ ಬೇರೆ ಬೇರೆಯಲ್ಲ. ಹುಲ್ಲುಗರಿ, ಧೂಳಿನ ಕಣಗಳು ಕಿವಿಯಿರುವ ಮನುಜನಿಗೆ ಆ ಅಜ್ಞಾತ ಶಕ್ತಿಯ ಸಂದೇಶ ನೀಡುತ್ತವೆ. ಪ್ರತಿಯೊಂದು ಹೂವು ಪೂಜೆಯ ಸಂಕೇತವಾಗುತ್ತದೆ. ಪ್ರತಿಯೊಂದು ಕಾಡು ದೇವಾಲಯವಾಗಿ, ಪ್ರತಿಯೊಂದು ಬೆಟ್ಟವೂ ಪ್ರತಿಮೆಯಾಗುತ್ತದೆ. ಹೊಳೆಯ ಜುಳು ಜುಳು ಎಲೆಯ ಮರ್ಮರ ಎಲ್ಲವೂ ದೇವನನ್ನು ಕುರಿತ ಹಾಡಾಗುತ್ತದೆ. ಈ ಆಂತರಿಕ ಸೌಂದರ್ಯವನ್ನರಿಯುವವನೇ ನಿಜವಾದ ಕವಿ.

ಕುವೆಂಪು ಅವರು ಪ್ರಖರ ವೈಚಾರಿಕತೆ ಪ್ರಜ್ಞೆಗೆ ಹೆಸರಾದವರು. ಪ್ರಗತಿಪರ ನಿಲುವು. ವೈಜ್ಞಾನಿಕ ಮನೋಧರ್ಮ ಅವರದಾಗಿತ್ತು. ತಮ್ಮ ಕಾವ್ಯದಲ್ಲಿಯೂ ಅದೇ ಅಂಶಗಳನ್ನು ಗಟ್ಟಿಯಾಗಿ ಪ್ರತಿಪಾದಿಸಿದ್ದಾರೆ. “ಕುವೆಂಪುರವರ ವೈಚಾರಿಕತೆ ಶ್ರೀ ಸಾಮಾನ್ಯರ ಉದ್ಧಾರಕ್ಕೆ ಹೆದ್ದಾರಿಯಾಗುತ್ತದೆ. ಅವರ ಪ್ರಾರಂಭದ ಪದ್ಯ ಬರವಣಿಗೆಯಿಂದ, ಜೀವಿತದ ಕೊನೆಯ ಗದ್ಯ ಬರವಣಿಗೆಯವರೆಗೆ ವೈಚಾರಿಕತೆಯ ಧಾರೆಯನ್ನು ನಿಚ್ಚಳವಾಗಿ ಗುರುತಿಸಬಹುದು. ಕುವೆಂಪು ಸಾಹಿತ್ಯದ ಸಂಪರ್ಕಕ್ಕೆ ಬರುವ ಸರ್ವರಿಗೂ ವೈಚಾರಿಕತೆಯ ಸ್ಪರ್ಶವಾಗದೆ ಎಳಿಯುವುದಿಲ್ಲ. ಕನ್ನಡ ಸಾಹಿತ್ಯ ಲೋಕಕ್ಕೆ ನವನವೀನವಾದ ವೈಚಾರಿಕತೆಯ ಪ್ರಖರತೆಯನ್ನು ಪ್ರಚೋದಿಸಿದ್ದು ಕುವೆಂಪು ಸಾಹಿತ್ಯದ ವಿಶೇಷವಾಗಿದೆ. ಇಪ್ಪತ್ತನೆಯ ಶತಮಾನದ ಕನ್ನಡ ಮಹಾಸಾಹಿತಿಗಳಲ್ಲಿ ಕುವೆಂಪು ಹೆಮ್ಮರವಾಗಿ ಎದ್ದು ಕಾಣುವುದು. ಅವರ ವೈಚಾರಿಕತೆಯ ಅನನ್ಯತೆಯಿಂದಲೆ” ಎಂಬ ಪ್ರೊ.ಡಿ.ಲಿಂಗಯ್ಯನವರ ಮಾತುಗಳನ್ನಿಲ್ಲಿ ಗಮನಿಸಬಹುದಾಗಿದೆ.

## ಕುವೆಂಪು ಕಾದಂಬರಿಗಳಲ್ಲಿ ನಿಸರ್ಗದ ಪರಿಕಲ್ಪನೆ

ಕುವೆಂಪುರವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಭೌಗೋಳಿಕ ಪರಿಸರದ ಬಗ್ಗೆ ದೇ. ಜ. ಗೌ. ರವರು ಹೇಳುವ ಮಾತುಗಳು ಪ್ರಸ್ತುತವೆನಿಸುತ್ತವೆ: “ಮಲೆನಾಡೆಂದರೆ ಕರ್ನಾಟಕದ ಕಾಶ್ಮೀರ, ಪ್ರಕೃತಿಯ ಪರ್ಣ ಶಾಲೆ, ಅರಣ್ಯರಮಣೀಯ ವಿಲಾಸ ಕ್ಷೇತ್ರ, ದಿಗಂತದ ಮಹಾಸ್ವಪ್ನಗಳಂತೆ ಧೀರವಾಗಿ ಹಬ್ಬಿರುವ ಪರ್ವತ ಶ್ರೇಣಿಗಳು, ನಿಬಿಡ ನಿರಂತರ ತರುಚ್ಛಾಯಮಯವಾದ ಗಿರಿಶಿಖರಗಳಲ್ಲಿ ಆವಿರ್ಭವಿಸಿ ಅರೆ ಬಂಡೆಗಳ ವಕ್ರಪಥಗಳಲ್ಲಿ ಎಡೆಬಿಡದೆ ಪ್ರವಹಿಸುವ ಹೊಳೆತೊರೆಗಳು; ಗಿರಿಕಂದರಗಳಲ್ಲಿ ಕಂಗೊಳಿಸುವ ಅಡಕೆ ತೋಟಗಳು, ಬತ್ತದ ಗದ್ದೆಗಳು... ಪ್ರೇಮಲ ಸ್ವಭಾವದವರೂ

ಶಾಂತಜೀವಿಗಳು, ಉದಾರಿಗಳು ಆಗಿರುವ ಸರಳ ಹೃದಯದ ಒಕ್ಕಲು ಮಕ್ಕಳು; ಇವೆಲ್ಲದವರ ಸಾನ್ನಿಧ್ಯದಿಂದ ಮಲೆನಾಡು ಅತ್ಯಂತ ರಮಣಿಯವೂ ಆಗಿದೆ".

ಕುವೆಂಪುರವರ ಕಾದಂಬರಿಗಳ ಕಥಾನಕದ ಮುಖ್ಯ ಪ್ರದೇಶ ಮಲೆನಾಡು. ಕಾನೂರು ಹೆಗ್ಗಡತಿಯ ಕಥೆ ತೀರ್ಥಹಳ್ಳಿ ಮತ್ತು ಕೊಪ್ಪ ನಡುವಿನ ಕಾನೂರು ಹಾಗೂ ಅದರ ಸುತ್ತಮುತ್ತಲ ಊರುಗಳಾದ ಅಗ್ರಹಾರ, ಅತ್ತಿಗದ್ದೆ, ಆಗುಂಬೆ, ಕುರುವಳ್ಳಿ, ಕೂಳೂರು, ಬಾಳೂರು, ಮಂಡಗದ್ದೆ, ಮೇಗರವಳ್ಳಿ, ಸಿದ್ಧರಮಠ, ನೆಲ್ಲುವಳ್ಳಿ, ಮುತ್ತುಳ್ಳಿ, ಸೀತೆಮನೆ ಮುಂತಾದ ಸ್ಥಳಗಳಲ್ಲಿ ಜರಗುತ್ತದೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಕಥೆಯು ಆಗುಂಬೆಯಿಂದ ಮೇಗರವಳ್ಳಿ, ತೀರ್ಥಹಳ್ಳಿ, ಕೊಪ್ಪ, ಸಿಂಬಾವಿ, ಶೃಂಗೇರಿ, ಸಿಂಧುವಳ್ಳಿ, ಹಳೆಮನೆ, ಹೂವಳ್ಳಿ, ಹೊಸಕೇರಿ, ಮೂಗೂರು, ಕಾನೂರು ಬೆಟ್ಟಳ್ಳಿ, ಸೀತೆಮನೆ ಮುಂತಾದ ಊರುಗಳಿಗೆ ಹಬ್ಬಿರುವುದನ್ನು ಕಾಣಬಹುದು.

ಮಳೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಸುಮಾರು ಪಾತ್ರಗಳಿಂದ ಕೂಡಿದ ಈ ಕಾದಂಬರಿ ಸಿಂಭಾವಿ ಗುತ್ತಿಯಿಂದ ಶುರುವಾಗುತ್ತದೆ. ಬೆಟ್ಟಳ್ಳಿಯಲ್ಲಿರುವ ತನ್ನ ಅತ್ತೆಯ ಮಗಳು ತಿಮ್ಮಿಯನ್ನು ಪ್ರೀತಿಸುತ್ತಿದ್ದ ಗುತ್ತಿ, ತಿಮ್ಮಿಯ ತಂದೆ ಅವಳನ್ನು ಅದೇ ಊರಿನ ಬಚ್ಚನಿಗೆ ಮದುವೆ ಮಾಡಿ ಕೊಡಲು ಮುಂದಾದಾಗ, ಅವಳನ್ನು ಓಡಿಸಿಕೊಂಡು ಬರುವ ಯೋಜನೆ ಹಾಕಿಕೊಂಡು ಸಿಂಭಾವಿಯಿಂದ ಬೆಟ್ಟಳ್ಳಿಗೆ ಪಯಣ ಬೆಳೆಸುತ್ತಾನೆ. ಜೊತೆಯಲ್ಲಿ ಅವನ ನಾಯಿ ಹುಲಿಯ ಕೂಡ. ಸಿಂಭಾವಿಯಿಂದ ಹೊರಟು ಸೀತೂರು, ಮೇಗರವಳ್ಳಿ, ಹೂವಳ್ಳಿಯನ್ನು ದಾಟಿ ಬೆಟ್ಟಳ್ಳಿ ತಲುಪಬೇಕಾಗಿರುವುದರಿಂದ ಗುತ್ತಿಯದು ಸುದೀರ್ಘಪಯಣ. ಅವನ ಪಯಣದ ಜೊತೆ ಸಾಗುತ್ತದೆ ಕಾದಂಬರಿ. ಅವನು ಸೇರಿದ ಪ್ರತಿ ಊರಿನ ವಿವರಣೆಯಿದೆ, ಒಂದೊಂದು ಪಾತ್ರಕ್ಕೂ ಒಂದೊಂದು ಕತೆಯಿದೆ. ಅತ್ಯದ್ಭುತ ಸಂಗತಿ ಎಂದರೆ ಈ ಎಲ್ಲ ಪಾತ್ರಗಳನ್ನು ಒಂದಕ್ಕೊಂದು ಜೋಡಿಸಿರುವ ಪರಿ. ಪ್ರತಿಯೊಂದು ಪಾತ್ರಕ್ಕೂ ಸಂಬಂಧವಿದೆ ಹಾಗೆ ೧೯ನೆ ಶತಮಾನದಲ್ಲಿ ನಡೆಯುತ್ತಿದ್ದ ಜಾತಿ ಮತಾಂತರಗಳನ್ನು ಕಥೆ ಒಳಗೊಂಡಿದೆ. ಕ್ರೈಸ್ಟ್ ಮತದ ಪ್ರಚಾರ ಮಾಡುವ ಪಾದ್ರೀ ಜೀವರತ್ನಯ್ಯ, ಕ್ರೈಸ್ಟ್‌ಮತಕ್ಕೆ ಸೇರಬೇಕೆಂದು ಹಂಬಲಿಸುವ ದೇವಯ್ಯ ಹೀಗೆ ಮನುಷ್ಯರ ಮತ್ತು ಮನಸಿನ ನಡುವಿನ ಜಾತಿಯ ಬಗೆಗಿನ ತಿಕ್ಕಟಗಳನ್ನು ತೋರಿಸಿದ್ದಾರೆ. ಇಷ್ಟೆಲ್ಲಾ ಪಾತ್ರಗಳಲ್ಲಿ ಅತಿ ಮುಖ್ಯವಾದುವು ಎಂದರೆ ಗುತ್ತಿ, ಚಿನ್ನಮ್ಮ, ಮುಕುಂದಯ್ಯ, ಐತ ಮತ್ತು ಪಿಂಚಲು. ಕೋಣುರಿನ ಮುಕುಂದಯ್ಯನಿಗೆ ತನ್ನ ಅಕ್ಕನ ಮಗಳು ಚಿನ್ನಮ್ಮನ ಜೊತೆ ಬಾಲ್ಯದಿಂದಲೂ ಗೆಳೆತನ. ಅದೇ ಗೆಳೆತನ ಪ್ರೀತಿಯಾಗಿ ಬದಲಾಗಿರುತ್ತದೆ, ಆದರೆ ಹೂವಳ್ಳಿ ವೆಂಕಣ್ಣ ತನ್ನ ಮಗಳನ್ನು ತಿಮ್ಮಪ್ಪ ಹೆಗ್ಗಡೆಗೆ ಕೊಡುವ ಸಂಚು ಮಾಡಿದಾಗ ಇವರೆಲ್ಲರೂ ಸೇರಿಕೊಂಡು ಚಿನ್ನಮ್ಮನನ್ನು ಓಡಿಸಿಕೊಂಡು ಬರುವ ಯೋಜನೆ ಹಾಕಿಕೊಳ್ಳುತ್ತಾರೆ. ಹೀಗೆ ಕತೆಯ ಉದ್ದಗಲಕ್ಕೂ ಗುತ್ತು ಮತ್ತು ತಿಮ್ಮಿ, ಚಿನ್ನಮ್ಮ ಮತ್ತು ಮುಕುಂಯ್ಯ ಇವರ ಪರಿಪಾಟಲುಗಳು, ಯೋಜನೆಗಳು, ಸ್ಥಾನಮಾನಗಳನ್ನು ಮೀರಿ ಒಬ್ಬರಿಗೊಬ್ಬರು ಸಹಾಯ ಮಾಡುವ ಮನಸುಗಳ ಚಿತ್ರಣವಿದೆ. ಎರಡು ಸನ್ನಿವೇಶಗಳಲ್ಲೂ ಮದುಮಗಳು ಭಯಂಕರವಾದ ಕಾಡನ್ನು ದಾಟಿಕೊಂಡು ಬರುವುದರಿಂದ ಈ ಕಾದಂಬರಿಗೆ ಮಲೆಗಳಲ್ಲಿ ಮದುಮಗಳು ಎಂಬ ಶೀರ್ಷಿಕೆ ಕೊಟ್ಟಿರಬಹುದೆಂದು ನನ್ನ ಊಹೆ.

ಮನುಷ್ಯನು ನಿಸರ್ಗದೊಂದಿಗೆ ಪಡೆಯುವ ಅವಿನಾಭಾವ ಸಂಬಂದವು ಎರಡೂ ಕಾದಂಬರಿಗಳಲ್ಲಿ ಗಾಢವಾಗಿದೆ. ಕುವೆಂಪು ಅವರ ಕಾದಂಬರಿಯಿಂದ ಪ್ರಸ್ತುತತೆಯ ಪರಿಸರದ ದುರಂತ ಚಿತ್ರವೊಂದು ಇಲ್ಲಿ ಮೂಡುತ್ತದೆ. ಮದುಮಗಳು ಕಾದಂಬರಿಯ ಗುತ್ತಿಯ ಪಯಣವೊಂದರಲ್ಲಿಯೇ ಕಾಣಿಸಿಕೊಳ್ಳುವ ಜೀವವೈವಿಧ್ಯತೆಗಳು ಪರಿಸರದ ಸಮೃದ್ಧತೆಯನ್ನು ಸೂಚಿಸುತ್ತವೆ. ಪ್ರಸ್ತುತ ವಾಸ್ತವ ಪ್ರಪಂಚದಲ್ಲಿ ಆ ಮಟ್ಟದಲ್ಲಿ ಕಾಣಲಾರದ ನಿರ್ವಂಶದ ಹಾದಿ ಹಿಡಿದಿರುವ ಚಿತ್ರಗಳು ಮಲೆನಾಡಿನುದ್ದಕ್ಕೂ ಕಾಣಸಿಗುತ್ತವೆ. ಕಾಡಿನ ದಟ್ಟತೆಯಾಗಲಿ, ಅಲ್ಲಿ ಬರುವ ಜಲತಾಣಗಳಾಗಲಿ, ಹಸಿರಿನ ಸಮೃದ್ಧತೆಯ ಪರಿಸರವಾಗಲಿ, ಜೀವಜಾಲದ ವೈವಿದ್ಯತೆಯನ್ನಾಗಲಿ ಕಾಣಲಾರದ ಪ್ರಸ್ತುತ ಸಂದರ್ಭದಲ್ಲಿ ಕುವೆಂಪು ಅವರ ಕೃತಿಗಳ ಜೀವಕೇಂದ್ರೀತ ಅಧ್ಯಯನ ಹೆಚ್ಚು ಮಹತ್ವ ಪಡೆಯುತ್ತದೆ.

**ಕುವೆಂಪು ಕಾದಂಬರಿಗಳಲ್ಲಿ ವೈಚಾರಿಕತೆಯ ಪರಿಕಲ್ಪನೆ**

ಕುವೆಂಪು ಅವರು ಹೇಳಿರುವಂತೆ ನಾವು ವಿಮರ್ಶೆ ಮಾಡಲೇಬೇಕು. ವಿಮರ್ಶಿಸಲು ಹಿಂಜರಿಯಬಾರದು. ಯಾವನೋ ಒಬ್ಬ ಸಂದೇಹಾಸ್ಪದ ಗುರು ಲಕ್ಷಣಗಳುಳ್ಳ ನಮ್ಮಂತಹ ಮನುಷ್ಯ ಪ್ರಾಣಿಯನ್ನೇ ಗುರುವೆಂದು ಭಾವಿಸಿ. ಕಾಣಿಕೆ ತೆತ್ತು ಅಪಾತ್ರದಾನವೆಂಬ ಪಾಪಕ್ಕೆ ಭಾಜನರಾಗಬಾರದೆಂದು ಆ ಚಿಕ್ಕ ವಯಸ್ಸಿನಲ್ಲಿಯೇ ಎಚ್ಚರಿಕೆ ಕೊಟ್ಟಿದ್ದಾರೆ. ಈ ಮಾತುಗಳನ್ನು ಕುವೆಂಪು ಹೇಳಿದ ಸಂದರ್ಭ ಮಲೆನಾಡಿನ ಒಕ್ಕಲಿಗರು, ರೋಗ ಬಂದರೆ ಅದನ್ನು ಪರಿಹರಿಸಿಕೊಳ್ಳಲು ಔಷಧ ತೆಗೆದುಕೊಳ್ಳುವುದು ವೈಜ್ಞಾನಿಕ ವಿಧಾನ. ಅದನ್ನು ಬಿಟ್ಟು ನಾವು ಭೂತಗಳಿಗೂ, ಪಿಶಾಚಿಗಳಿಗೂ ಮೊರೆಯಿಡಲು ಹೋಗುತ್ತೇವೆ. ಕೋಳಿ ಕುರಿಗಳನ್ನು ಬಲಿ ಕೊಟ್ಟು ಲಂಚದಿಂದ ಅವುಗಳ ಮನಸ್ಸನ್ನು ಶಮನಮಾಡಲು ಪ್ರಯತ್ನಿಸುತ್ತೇವೆ. ಭಟ್ಟರು ಜೋಯಿಸರು ಇವರಲ್ಲಿಗೆ ಹೋಗಿ ನಿಮಿತ್ತ ಕೇಳಿಸುತ್ತೇವೆ. ಅವರು ಕೊಟ್ಟ ಚೀಟಿ ವಿಭೂತಿ ಮುಂತಾದವುಗಳನ್ನು ರೋಗಿಗಳಿಗೆ ಕಟ್ಟು, ಬಡವರು ಭೂತ, ಪಂಜ್ರೊಳ್ಳಿ, ಜಕ್ಕಿಣಿ, ರಣ ಮುಂತಾದ ಅಸಂಖ್ಯ ಅಂತರ ಬೆಂತರಗಳ ಪೂಜೆಗಾಗಿ ಸುಳ್ಳು

ಭಯದಿಂದ ಪ್ರೇರಿತರಾಗಿ, ವರ್ಷವರ್ಷವೂ ಮರಗಳ ಬುಡಗಳಲ್ಲಿರುವ ಕಲ್ಲುಗಳಿಗೆ ಕುರಿ ಕೋಣಗಳನ್ನು ಪೂಜೆಗಾಗಿ, ಭೂತಾರಾಧನೆಯಿಂದ ಧನನಷ್ಟವೊಂದೇ ಅಲ್ಲದೆ ಆತ್ಮನಾಶವೂ ಆಗುತ್ತದೆ.

"ಕುವೆಂಪುರವರ ತಮ್ಮ ಸಾಹಿತ್ಯ ಕೃತಿಗಳಲ್ಲಿ, ಹಿಂದಿನ ಸಿದ್ಧ ವಸ್ತುಗಳಲ್ಲಿದ್ದ ದೋಷವನ್ನು ನಿವಾರಿಸಿದ್ದಾರೆ. ಹೊಸ ವಸ್ತುಗಳನ್ನು ಕಲ್ಪಿಸಿಕೊಳ್ಳುವಾಗ ವೈಚಾರಿಕ ನೆಲೆಗಟ್ಟನ್ನು ಸಿದ್ಧಪಡಿಸಿದ್ದಾರೆ. ಅವರ ಪ್ರಜ್ವಲ ಪ್ರತಿಭೆ ಕಾವ್ಯ ಸೃಷ್ಟಿಯ ಅನೂಹ್ಯವಲಯದಲ್ಲಿ ಲೀಲಾಜಾಲವಾಗಿ ವಿಹರಿಸುವಂತೆ, ವೈಚಾರಿಕ ವಿಷಯ ಪ್ರತಿಪಾದನೆಯಲ್ಲೂ ವಿಸ್ಮಯಕಾರಿಯಾಗಿ ವ್ಯವಹರಿಸುತ್ತದೆ. ಅವರ ವೈಚಾರಿಕ ಗರುಡದೃಷ್ಟಿ ದೇವರು ಧರ್ಮ, ಜಾತಿ, ಮತ, ಮೇಲು–ಕೀಳು, ಬಡವ–ಬಲ್ಲಿದ, ಸಾಹಿತ್ಯ–ಶಿಕ್ಷಣ, ವಿಜ್ಞಾನ ವಿವೇಕ, ದೇಶ–ಭಾಷೆ, ಅರಮನೆ ಗುರುಮನೆ, ರಾಷ್ಟ್ರ ಅಂತರ್‌ರಾಷ್ಟ್ರ, ಸಂಪ್ರದಾಯ–ಮೌಢ್ಯ, ಸಾಮಾಜಿಕ ಆರ್ಥಿಕ, ರಾಜಕೀಯ ಮುಂತಾದ ಹಲವು ಹತ್ತು ವಿಷಯಗಳತ್ತ ಕ್ಷ–ಕಿರಣ ಬೀರುತ್ತದೆ ಎಲ್ಲಾ ಸಂದರ್ಭದಲ್ಲೂ ಪ್ರಸ್ತುತತೆಯನ್ನು ಕಾಪಾಡಿಕೊಳ್ಳುತ್ತದೆ" ಎಂಬುದು ಕುವೆಂಪು ಪ್ರಖರ ವೈಚಾರಿಕ ಪ್ರಜ್ಞೆಗೆ ಉಜ್ವಲ ಉದಾಹರಣೆಯಾಗಿದೆ.

**ಕುವೆಂಪುರವರ ಕವನಗಳಲ್ಲಿನ ವೈಚಾರಿಕ ವಿಚಾರಗಳನ್ನು ಹೀಗೆ ಸಂಗ್ರಹಿಸಬಹುದು.**

೧. ದೇವರು ದೇವಸ್ಥಾನವನ್ನು ಬಿಟ್ಟು, ನಿಸರ್ಗವೇ ದೇವರು, ಮಾನವ ಪ್ರೇಮವೇ ಪೂಜೆ ಎಂಬ ವಿಚಾರಗಳು, ಪ್ರಕೃತಿಯ ಆರಾಧನೆ, ಚರಾಚರಗಳ ಚೇತನದೊಂದಿಗೇ ಮಾನವನ ಬದುಕು ಎಂಬ ಅರಿವು ಮೂಡಿಸಲು ಪ್ರಯತ್ನ ಮಾಡಿದ್ದಾರೆ.
೨. ಸಾಮಾಜಿಕ ಅಸಮಾನತೆಯನ್ನು ಎತ್ತಿ ತೋರುತ್ತಾ ಸಮಾನತೆಗಾಗಿ ಹಾತೊರೆವ ವಿಚಾರಗಳು.
೩. ಸಮಾಜದಲ್ಲಿ ಕಡೆಗಣಿಸಲ್ಪಟ್ಟ, ಅಂಚಿನ ವ್ಯಕ್ತಿ, ವಸ್ತುವನ್ನು ಮುನ್ನೆಲೆಗೆ ತರುವುದು.
೪. ಯುವ ಜನತೆ ಆತ್ಮವಿಶ್ವಾಸ ಬೆಳೆಸಿಕೊಂಡು, ದುಡಿದರೆ ಮಾತ್ರ ಉದ್ಧಾರವೆಂಬ ಸೂತ್ರ.
೫. ಮೌಢ್ಯ, ಕಂದಾಚಾರ, ಸಾಮಾಜಿಕ ಪಿಡುಗುಗಳನ್ನು ಇಲ್ಲವಾಗಿಸಿ, ಹೊಸ ವೈಜ್ಞಾನಿಕ ಸಾಮಾಜಿಕ ಸಮಾಜದ ನಿರ್ಮಾಣದ ಕಡೆಗಿನ ತುಡಿತ ಇತ್ಯಾದಿ.

**ಉಪಸಂಹಾರ**

ಕುವೆಂಪು ಅವರ ನಿಸರ್ಗ ಪ್ರೇಮ, ನಿಸರ್ಗ ಸೌಂದರ್ಯದ ಪ್ರಭಾವವನ್ನು ನಾವು ಅವರ ಕಥೆ, ಕಾದಂಬರಿ, ನಾಟಕಗಳ ಮೂಲಕ ನೋಡಬಹುದು. ಅದೇರೀತಿ ಅವರು ವ್ಯಕ್ತಪಡಿಸಿರುವ ವೈಚಾರಿಕ ದೃಷ್ಟಿಕೋನವನ್ನೂ ನಾವು ತಿಳಿಯಬಹುದು.

**ಪರಾಮರ್ಶನ ಕೃತಿಗಳು**


೧. ಶ್ರೀನಿವಾಸಮೂರ್ತಿ ಕಾ.ವೆಂ. – ಕುವೆಂಪು ಸಾಹಿತ್ಯ ನಾಲ್ಕು ನೋಟ, ಸ್ನೇಹ ಬುಕ್ ಹೌಸ್, ಬೆಂಗಳೂರು ೨೦೧೮
೨. ಶಿವಾರೆಡ್ಡಿ ಕೆ.ಸಿ – ಕುವೆಂಪು ಚಿತ್ರ ಸಂಪುಟ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಬೆಂಗಳೂರು ೨೦೧೮
೩. ಚೆನ್ನಬಸಪ್ಪ ಕೋ. – ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ ಸಾಮಾಜಿಕ ನಿಷ್ಠೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು ೨೦೧೫
೪. ಚೆನ್ನಬಸಪ್ಪ ಕೋ.– ಕುವೆಂಪು ಶ್ರೀರಾಮಾಯಣ ದರ್ಶನಂ: ಕರ್ತೃ ಯಾರು? ದರ್ಶನ ಯಾವುದು?, ಲೋಹಿಯಾ ಪ್ರಕಾಶನ, ಬೆಂಗಳೂರು ೨೦೧೩
೫. ಗೋಪಾಲ್ ಟಿ.ಎಸ್ – ಕುವೆಂಪು (ವಿಶ್ವಮಾನ್ಯರು), ನವಕರ್ನಾಟಕ ಪ್ರಕಾಶನ, ಬೆಂಗಳೂರು ೨೦೧೫
೬. ಆಮೂರ ಜಿ.ಎಸ್ – ಕುವೆಂಪು: ಯುಗದ ಕವಿ, ಮನೋಹರ ಗ್ರಂಥಮಾಲೆ, ಧಾರವಾಡ ೨೦೧೫
೭. ಭಟ್ ಜಿ.ಎಸ್ – ಕುವೆಂಪು ಕೃತಿ ಶೈಲ, ಚೇತನ ಬುಕ್ ಹೌಸ್, ಮೈಸೂರು
೮. ಭಟ್ ಜಿ.ಎಸ್ – ಕುವೆಂಪು ಅವರ ಹತ್ತು ಕೃತಿಗಳು, ತನುಮನ ಪ್ರಕಾಶನ, ೨೦೧೬
೯. ಶಿವರುದ್ರಪ್ಪ ಜಿ.ಎಸ್ – ಕುವೆಂಪು ಪುನರಾಲೋಕನ, ಅಂಕಿತ ಪುಸ್ತಕ, ಬೆಂಗಳೂರು
೧೦.ಉಷಾದೇವಿ ಜೆ.ಎಸ್ – ಕುವೆಂಪು ಅವರ ಸ್ತ್ರೀಪಾತ್ರ ಸೃಷ್ಟಿ, ಅಭಿರುಚಿ ಪ್ರಕಾಶನ, ಮೈಸೂರು ೨೦೧೪
೧೧. ಅಶೋಕ ಟಿ.ಪಿ – ಕುವೆಂಪು ಕಾದಂಬರಿ ಎರಡು ಅಧ್ಯಯನಗಳು, ಅಕ್ಷರ ಪ್ರಕಾಶನ, ಶಿವಮೊಗ್ಗ
೧೨.ಅಶೋಕ ಟಿ.ಪಿ – ಕುವೆಂಪು ಕೆಲವು ಅಧ್ಯಯನಗಳು, ಕಣ್ಣ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ೨೦೧೩
೧೩.ನಾಗಭೂಷಣ ಡಿ.ಎಸ್ – ಕುವೆಂಪು ಒಂದು ಪುನರನ್ವೇಷಣೆ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ೨೦೧೧
೧೪.ನಾಗಭೂಷಣ ಡಿ.ಎಸ್ – ಕುವೆಂಪು ಸಾಹಿತ್ಯ ದರ್ಶನ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ೨೦೧೨
೧೫. ತಾರಿಣಿ ಚಿದಾನಂದ – ಮಗಳು ಕಂಡ ಕುವೆಂಪು, ಪುಸ್ತಕ ಪ್ರಕಾಶನ, ಮೈಸೂರು

೧೬.ದೇಜಗೌ – ವಿಚಾರ ಕ್ರಾಂತಿಗೆ ಕುವೆಂಪು ಕರೆ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು, ೨೦೧೫
೧೭.ದೇಜಗೌ – ಕುವೆಂಪು ಅವರ ಕೊನೆಯ ದಿನಗಳು, ಡಿವಿಕೆ ಮೂರ್ತಿ ಪ್ರಕಾಶನ, ಬೆಂಗಳೂರು, ೨೦೧೨
೧೮.ನರಹಳ್ಳಿ ಬಾಲಸುಬ್ರಹ್ಮಣ್ಯ – ಕುವೆಂಪು ನಾಟಕಗಳ ಅಧ್ಯಯನ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೬
೧೯.ನರಹಳ್ಳಿ ಬಾಲಸುಬ್ರಹ್ಮಣ್ಯ – ಕುವೆಂಪು ಕಾವ್ಯ – ಸಂಸ್ಕೃತಿ ಚರಿತ್ರೆಯ ರೂಪಕ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೨
೨೦.ರಾಜಶೇಖರ ನಿ – ಕುವೆಂಪು ಅವರ ಶ್ರೀರಾಮಾಯಣದರ್ಶನಂ– ಗದ್ಯಾನುವಾದ, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೧೭
೨೧.ನಿರೂಪ – ಎಲ್ಲೆ ದಾಟಿ: ಕುವೆಂಪು– ಭೈರಪ್ಪ– ಸೇರುವ ಮೀರುವ ಸ್ಥಾನ, ಸಾಹಿತ್ಯ ಭಂಡಾರ ಪ್ರಕಾಶನ, ಬೆಂಗಳೂರು, ೨೦೧೫
೨೨.ಪ್ರಧಾನ್ ಗುರುದತ್ತ – ಕುವೆಂಪು ಸಾಹಿತ್ಯ ಕೆಲವು ಅಧ್ಯಯನಗಳು, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೮
೨೩.ಪ್ರಭುಶಂಕರ – ಹೀಗಿದ್ದರು ಕುವೆಂಪು, ಡಿವಿಕೆ ಮೂರ್ತಿ ಪ್ರಕಾಶನ, ಬೆಂಗಳೂರು, ೨೦೧೦
೨೪.ಸತ್ಯನಾರಾಯಣ ಬಿ.ಆರ್ – ಕುವೆಂಪು ಕಾವ್ಯಯಾನ, ದೇಸಿ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೨
೨೫.ಅಂಬಳಿಕೆ ಹಿರಿಯಣ್ಣ – ಮಲೆನಾಡಿನ ಜನಪದ ಸಂಪ್ರದಾಯಗಳು, ಪುಸ್ತಕ ಚಿಲುಮೆ, ಮೈಸೂರು, ೧೯೭೮.
೨೬.ಅನಂತಮೂರ್ತಿ ಯು. ಆರ್. – ಭಾರತೀಪುರ, ಅಕ್ಷರ ಪ್ರಕಾಶನ, ಸಾಗರ, ೧೯೭೩.
೨೭.ಕುವೆಂಪು ಅಭಿನಂದನ ಗ್ರಂಥ, ಗಂಗೋತ್ರಿ, ಗೀತ ಬುಕ್ ಹೌಸ್ ಪ್ರಕಾಶನ, ೧೯೬೮
೨೮.ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ೧೯೯೮
೨೯.ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ೧೯೯೭

# ಕುವೆಂಪುರವರ ಕಾವ್ಯದಲ್ಲಿ ಕಂಡುಬಂದ ಮೂಡನಂಬಿಕೆ ಮತ್ತು ವಾಸ್ತವತೆಯ ಕುರಿತಾದ ಅಂಶಗಳು

ಶ್ರೀಮತಿ ಲಕ್ಷ್ಮೀ.ಪೂಜಾರಿ
ಕನ್ನಡ ಉಪನ್ಯಾಸಕಿ
ಎಸ್.ಎಸ್.ಎಮ್ ಮಹಾವಿದ್ಯಾಲಯ,
ಅಥಣಿ

ವೈಚಾರಿಕತೆ ಹಿನ್ನಲೆಯಲ್ಲಿ ಬರೆಯುವಂತ ರಾಷ್ಟ್ರಕವಿ ಕುವೆಂಪುರವರು ಬದುಕಿನಲ್ಲಿ ನಡೆಯುವಂತ ಹಲವಾರು ಧಾರ್ಮಿಕ ಆಚರಣೆಗಳನ್ನು, ಮೂಢನಂಬಿಕೆಗಳನ್ನು ತಮ್ಮ ಕವನಗಳ ಮೂಲಕ ವಿಶಿಷ್ಟವಾಗಿ ತಿಳಿಸಿದ್ದಾರೆ. ವಿಚಾರ ಸಾಹಿತ್ಯವೆಂದು ಕರೆಯಬಹುದಾದಂತ ಚರ್ಚೆ, ಶಾಸ್ತ್ರ, ಮೀಮಾಂಶೆಯ ಒಂದು ಸಾಹಿತ್ಯ ಪ್ರಕಾರ ಕನ್ನಡದಲ್ಲಿ ಬಹಳ ಹಿಂದಿನಿಂದಲೂ ಸಮೃದ್ಧವಾಗಿ ಬೆಳೆದು ಬಂದಿದೆ. ಆದರೆ ಶುದ್ಧ ವೈಚಾರಿಕತೆ ಕಂಡುಬಂದಿರುವುದು ೨೦ ನೇ ಶತಮಾದಲ್ಲಿನ ಕೃತಿ ಹಾಗೂ ಸಾಹಿತ್ಯದಲ್ಲಿ. ೨ನೇ ಶತಮಾನದಿಂದಲೂ ನಮಗೆ ಶಾಸನಗಳು ಸಿಕ್ಕಿದ್ದರೂ ಅವು ಸಾಹಿತ್ಯದ್ಧಲ್ಲಿ ಸೇರಿಕೊಳ್ಳುವುದಿಲ್ಲ. ೧೧ನೇ ಶತಮಾನದಲ್ಲಿ ಪ್ರಾರಂಭವಾದ ವಚನ ಸಾಹಿತ್ಯವು ಬದುಕಿನ ವಾಸ್ತವಿಕ ಅರಿವನ್ನು ಮೂಡಿಸಲು ಪ್ರಯತ್ನಿಸಿದರೂ ಜನ ಒಪ್ಪಲು ಸಿದ್ಧರಿರಲಿಲ್ಲ. ಬಸವಣ್ಣನವರ ವಚನಗಳು ನಿಜವಾದ ಬದುಕಿನ ತಿರುಳು. ಆದರೆ ಜನರಿಗೆ ಅದನ್ನು ಸ್ವೀಕರಿಸುವ ಬೌದ್ಧಿಕ ಸಾಮಾರ್ಥವಿರಲಿಲ್ಲ. ಬರಬರುತ್ತ ಶಿಕ್ಷಣ ಪಡೆದ ಜನ ವಾಸ್ತವವನ್ನು ಒಪ್ಪಿಕೊಳ್ಳಲು ಸಿದ್ಧರಾದರು. ನವೋದಯ ಸಾಹಿತ್ಯದ ಹರಿಕಾರರಾದಂತ ಕುವೆಂಪುರವರು ಧರ್ಮ ಮತ್ತು ಮೂಡನಂಬಿಕೆಗಳ ಬಗ್ಗೆ ತಮ್ಮ ಕವನಗಳ ಮೂಲಕ ತಿಳಿಸಿದ್ದಾರೆ ಜನರಿಗೆ ಸುಲಭವಾಗಿ ಅರ್ಥವಾಗುವಂತ ಕವನಗಳ ಮೂಲಕ ಸಂದೇಶ ನೀಡಿದ್ದಾರೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳಿ ಎಂಬ ಪ್ರದೇಶದಲ್ಲಿ ಜನಿಸಿದ ಇವರು ತಮ್ಮ ಸಾಹಿತ್ಯದಲ್ಲಿ ನಿಸರ್ಗದ ಬಗ್ಗೆ ಬಹಳ ಸುಂದರವಾಗಿ ಚಿತ್ರಿಸಿದ್ದಾರೆ. ಆದರಿಂದಲೆ ಇವರನ್ನು ನಿಸರ್ಗ ಕವಿ ಎಂದು ಕರೆದಿದ್ದಾರೆ. ಮಲೆನಾಡಿನ ಸುಂದರವಾದ ದೃಶ್ಯವನ್ನು ಸೆರೆಹಿಡಿದಂತ ಇವರು ವಾಸ್ತವತೆಯನ್ನು ತುಂಬಾ ವಿಶೇಷವಾಗಿ ತಿಳಿಸಿದ್ದಾರೆ. ಉನ್ನತ ವ್ಯಕ್ತಿಯಾದಂತ ಕುವೆಂಪುರವರು ಸಮಾಜಕ್ಕೆ ಸತ್ಯದ ದರ್ಶನ ಮಾಡಿಸಿದ್ದಾರೆ. ಅಷ್ಟೇ ಅಲ್ಲದೆ ಬದುಕಿಗೂ ಆಚರಣೆಗಳಿಗೂ ಇರುವ ವ್ಯತ್ಯಾಸವನ್ನು ತಿಳಿಸಿದ್ದಾರೆ. ಕಥೆ,ಕವನ,ಕಾದಂಬರಿ,ನಾಟಕ,ವಿಮರ್ಶೆ,ಹೀಗೆ ಸಾಹಿತ್ಯದ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಇವರು ನಾವು ದಿನನಿತ್ಯ ಜೀವನದಲ್ಲಿ ಆಚರಿಸುವ ಸಂಪ್ರದಾಯಗಳನ್ನು ಎಷ್ಟು ಸತ್ಯ ಎಷ್ಟು ಸುಳ್ಳು ಎಂಬ ಅಂಶಗಳನ್ನು ಕುರಿತು ಹಲವಾರು ನಿದರ್ಶನಗಳನ್ನು ಹೇಳುವ ಮೂಲಕ ಸುಲಭವಾಗಿ ಅರ್ಥಯಿಸಿದ್ದಾರೆ. ಕುವೆಂಪುರವರ ವೈಚಾರಿಕತೆಯಿಂದ ಕೂಡಿದ ಕವನಗಳನ್ನು ನೋಡಿದಾಗ ಅವರು ವಾಸ್ತವ, ಮೂಡನಂಬಿಕೆ, ದೇವರು ಅಥವಾ ಧರ್ಮ ಇವುಗಳ ಬಗ್ಗೆ ಸ್ಪಷ್ಟವಾದ ನಿಲುವನ್ನು ಹೊಂದಿದ್ದರು ಧರ್ಮ ಮತ್ತು ಜೀವನ ಇವೆರಡರ ನಡುವಿನ ಸ್ಪಷ್ಟತೆಯನ್ನು ತಿಳಿಸಿದ್ದಾರೆ.ಅವರು ನಾಸ್ಥಿಕರಲ್ಲ ಸ್ವತ: ಪೂಜೆ ಮಾಡುತ್ತಿದ್ದರು ಶಿವನನ್ನು ತಮ್ಮ ಸಾಹಿತ್ಯದಲ್ಲಿ ಪಾತ್ರಧಾರಿಯಾಗಿಸಿದ್ದಾರೆ ದೇವರು ಎಂದರೆ ನಮ್ಮ ಕಣ್ಣು ಮುಂದೆಯಿರುವುದು ಕಾಣದ ಕಲ್ಪನೆಗಿಂತ ಕಾಣುವ ವಾಸ್ತವತೆಗೆ ಬಲೆ ಕೊಡುವವರು ನಮಗೆ ಆಶ್ರಯ ಕೊಟ್ಟಂತ ಭಾರತಾಂಬೆಯನ್ನು ದೇವರು ಎಂದು ಕರೆದಿದ್ದಾರೆ. ಭಾರತಾಂಬೆಯನ್ನು ಕುರಿತು ಅವರ ಕವನದಲ್ಲಿ ಹೀಗೆ ಹೇಳಿದ್ದಾರೆ.

" ನೂರು ದೇವರನೆಲ್ಲಾ ನೂಕಾಚೆ ದೂರ
ಭಾರತಾಂಬೆಯ ದೇವಿ ನಮಗಿಂದು ಪೂಜಿಸಬಾರ"೧

ಎಂದು ನಮ್ಮ ನಾಡದೇವಿಯನ್ನು ಪೂಜಿಸಿ ಎಂದು ಹೇಳಿದ್ದಾರೆ ಎಷ್ಟೋ ವರ್ಷಗಳಿಂದ ಪೂಜಿಸುತ್ತ ಬಂದಂತ ಶಿಲೆಗಳನ್ನು ಪೂಜಿಸುವುದು ಸಾಕಿನ್ನು ಹಾವುಗಳಿಗೆ ಹಾಲೆರೆಯುವುದು ಬಿಸಿಲು, ಮಳೆ,ಗಾಳಿ, ಪೂಜಿಸುವುದು ಸಾಕಿನ್ನು ದಾಸರನ್ನು ಪೂಜಿಸಿಯೇ ದಾಸ್ಯವಾಗಿದೆ ಎಂದಿದ್ದಾರೆ ಗುಡಿಯೊಳಗೆ ಮಾತನಾಡದೆ ಕಣ್ಣು ಮುಚ್ಚಿ ಕುತಿದ್ದಾರೆ ದೇವರುಗಳು ಪೂಜೆ ಪುನಸ್ಕಾರಗಳಿಂದ ನೆಮ್ಮದಿಯಿಂದ ಇದ್ದಂತ ದೇವತೆಗಳ ನೆಮ್ಮದಿಯಲ್ಲಿ ನಮ್ಮ ನೆಮ್ಮದಿ ಹಾಳಾಯಿತು ನಮ್ಮ ನೆಮ್ಮದಿಗೆ ಸ್ಪಂದಿಸದ ಅವರನ್ನು ಬಿಟ್ಟು ನಮಗೆ ಬದುಕನ್ನು ಕೊಟ್ಟ ವಿಶ್ವರೂಪಿಣಿಯಾದ ಭಾರತಾಂಬೆಯಯನ್ನು ಪೂಜಿಸಿ " ಜನನಿ ಜನ್ಮ

ಭಮಿಶ್ಚ ಸ್ವರ್ಗಾದಪಿರಿ ಗರಿಯಶ್ಚ" ಎನ್ನುವ ಮಾತು ಅಕ್ಷರಶ: ಸತ್ಯ ಜನ್ಮ ಭೂಮಿ ಎಲ್ಲಕಿಂತಲೂ ಮಿಗಿಲು ಎಂಬ ಮಾತು ಕುವೆಂಪುರವರ ಕವನಗಳಲ್ಲಿ ಕಾಣುತ್ತೇವೆ.

ಭಾರತಾಂಬೆಯೆ ನಮ್ಮ ಜನನಿ, ಸರ್ವಸ್ವ. ನೂರಾರು ದೇವರನ್ನು ನಂಬುವಷ್ಟು ನಿನ್ನನ್ನು ನೀನು ಒಂದು ಘಳಿಗೆ ನಂಬಲು ತಯಾರಿಲ್ಲವಲ್ಲ ಎಂದಿದ್ದಾರೆ ನಿನ್ನ ಸುತ್ತಲೂ ಸಾವಿರಾರು ಜನರಿದ್ದರೂ ನಿಮ್ಮ ನಿಮ್ಮ ಮನಸ್ಸಿನ ನೋವುಗಳನ್ನು ನೀವೆ ಸರಿಮಾಡಿಕೊಳ್ಳಬೇಕು. ಅದಕ್ಕೆ ಬೇರೆ ಯಾರು ಬೇಕಿಲ್ಲ. ಶ್ರದ್ಧೆಯಿಂದ ಏನು ಬೇಕಾದರು ಸಾಧಿಸಬಹುದು. ಶ್ರದ್ಧೆಯಿಂದಲೆ ಆ ಸೂರ್ಯ ಇಡೀ ಜಗತ್ತನ್ನು ಬೆಳಗಿದ್ದಾನೆ. ಶ್ರದ್ಧಯೇ ದೇವರು. ಶ್ರದ್ಧೆಯಲ್ಲಿಯೇ ಕೋಡಿ ದೇವರಿದ್ದಾರೆ. ಮಾನವನೆ ದೇವತೆ. ನರನೆ ನಾರಾಯಣ ಎಂದಿದ್ದಾರೆ. 'ಅಹಂ ಬ್ರಹ್ಮಾಸಿ'[೨] ಎಂದು ತಿಳಿಸಿದ್ದಾರೆ. ನಮ್ಮ ಆತ್ಮವೇ ನಮಗೆ ನಿಜವಾದ ದೇವರು. ಬೇರೆ ದೇವರ್ಯಾಕೆ ಬೇಕು? ನಿನ್ನನ್ನು ನೀನು ಮೊದಲು ಅರ್ಥೈಸಿಕೊ. ಒಳ್ಳೆಯ ಕಾರ್ಯದಲ್ಲಿ ನಿರತನಾಗು. ನೀನೇ ದೇವರಾಗುತ್ತಿ ಎಂದು ಹೇಳಿರುವರು ಎದುರಾಳಿಗಳು ಬಂದಾಗ ಕೆಚ್ಚೆದೆಯಿಂದ ಹೋರಾಟ ಮಾಡಬೇಕು ಹೊರತು ಪೂಜೆ ಮಾಡುತ್ತಾ ಶಾಸ್ತ್ರ ಮತ್ತು ಮಂತ್ರಪಟನೆ ಮಾಡಿದರೆ ನಾವು ನಾಶವಾಗಬೇಕಾಗುತ್ತದೆ. ಅದರ ಬದಲಿಗೆ ಪರಿಸ್ಥಿತಿಯನ್ನು ತಿಳಿದುಕೊಂಡು ಚಾಣಾಕ್ಷತೆಯಿಂದ ಹೋರಾಡಿದರೆ ನಮ್ಮ ನಾಡನ್ನು ರಕ್ಷಿಸಬಹುದು. ಮೌಢ್ಯತೆಗೆ ಬಲಿಯಾಗಬೇಡಿ ನಿಜತ್ವ ಅರಿತುಕೊಳ್ಳಿ ಎಂದಿದ್ದಾರೆ. ಶಾಸ್ತ್ರ ಎಂದರೆ ಅದು ನಾವು ಮಾಡುಕೊಂಡದ್ದು ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು ನಿನ್ನ ಎದೆಯ ಧ್ವನಿಗೂ ಮಿಗಿಲಾದದ್ದು ಯಾವುದು ಇಲ್ಲ"[೩] ನೀರಡಿಸಿ ಬಂದ ಸೋದರರಿಗೆ ನೀರು ಕೊಡಬೇಕು. ನೀ ತೋರು ಮಾನವೀಯತೆ. ಅದೇ ಧರ್ಮ. ಅದನ್ನು ಬಿಟ್ಟು ಬೇರೆ ಧರ್ಮಶಾಸ್ತ್ರವಿಲ್ಲ ಎಂದಿದ್ದಾರೆ. ಸಾಯುತಿದ್ದ ಶಿಶುವನ್ನು ಕಣ್ಣಿಂದ ನೋಡುತ್ತಾ ನಾನು ಮುಟ್ಟಿದರೆ ನನ್ನ ಧರ್ಮ ಮೀರಿದಂತಾಗುತ್ತದೆ ಎಂದು ನಿಂತರೆ ಅದೇನು ಮನುಷ್ಯತ್ವವೇ? ನೋವಿಗೆ ಸ್ಪಂದಿಸದ ಹೃದಯ ಮತ್ತು ಆತ್ಮ ಧರ್ಮವಾಗುವುದಿಲ್ಲ. ಸ್ವರ್ಗ ನರಕಗಳು ಶಾಸ್ತ್ರದಲ್ಲಿಲ್ಲ, ಎದೆಯ ಧ್ವನಿಯೇ ಧರ್ಮದ ಕಣಿ. ಕರ್ತವ್ಯವೇ ವಿಧಿ. ಅದನ್ನು ಬಿಟ್ಟು ಯಾವ ಶಾಸ್ತ್ರವಿಲ್ಲ ಎಂದಿದ್ದಾರೆ. ಕುವೆಂಪುರವರ ಪ್ರಕಾರ ನಿನ್ನ ಆತ್ಮವೇ ನಿನಗೆ ದೇವರು. ಅದು ಕಾಲ ಪರಿಸ್ಥಿತಿಗೆ ತಕ್ಕಂತೆ ನಿನ್ನನ್ನು ಸಮರ್ಥನ್ನಾಗಿ ಮಾಡುತ್ತದೆ ಎಂದಿದ್ದಾರೆ.

ಸ್ನೇಹಿತರೆ ಬನ್ನಿ ನಿಜ ಸಮಾಜಕ್ಕೆ ಎಂದು "ಓ ಸೋದರರರೇ ಬೇಗ ಬನ್ನಿ"[೪] ಎಂದು ಕರೆಯುತ್ತಾರೆ. ನೀವು ನಂಬಿ ಬದುಕುತ್ತಿದ್ದ ಗುಡಿ ಚರ್ಚು, ಮಸೀದಿ, ಬಿಟ್ಟು ಬನ್ನಿರಿ ಬಡತನವನ್ನು ಬುಡ ಸಮೇತ ಕಿತ್ತು ಹಾಕಿರಿ ಜನರಲ್ಲಿ ಮೌಢ್ಯತೆ, ತಪ್ಪು ಕಲ್ಪನೆ, ಆಚರಣೆಗಳನ್ನು ಹೊಡೆದು ಹಾಕಿ ನಿಜವಾದ ಸತ್ಯದ ಅಂಶಗಳನ್ನು ವಿಜ್ಞಾನದ ಬೆಳಕಿನ ಪಂಜನ್ನು ಹಿಡಿಯ ಬನ್ನಿರೆಂದು ಕರೆ ನೀಡಿದ್ದಾರೆ. ನಮ್ಮಲ್ಲಿರುವಷ್ಟು ಧರ್ಮದ ಮೌಢ್ಯತೆಗಳು ಬೇರೆ ದೇಶದಲ್ಲಿಲ್ಲ, ರಷ್ಯಾ, ಜಪಾನ, ತುರ್ಕಿಗಳಲ್ಲಿ ತಮ್ಮ ಅಂಧಕಾರವನ್ನು ತೊರೆದು ಹೊಸ ಪಯಣಕ್ಕೆ ಸಿದ್ಧರಾಗಿದ್ದಾರೆ. ಕಷ್ಟಗಳ ದೂರ ತಳ್ಳಿ ಬೆಳಕಿನೆಡೆಗೆ ಹೊರತಿದ್ದಾರೆ. ಹಳೆಯ ಕೊಳಕುಗಳೆಂಬ ಒಣ ಹುಲ್ಲಿಗೆ ಬೆಂಕಿಯಿಟ್ಟು ಹೊಸತನವನ್ನು ಕೈ ಬಿಸಿ ಕರೆಯುತ್ತಿದ್ದಾರೆ. ನೀವು ಬನ್ನಿ ಈ ಹೊಸತನಕ್ಕೆ 'ಮತ' ಎಂಬ ಮೋಹದಲ್ಲಿ ಸಿಕ್ಕಿಹಾಕಿಕೊಂಡು ಜೀವನಪೂರ್ತಿ ಹಾಗೆ ಬದುಕಬೇಡಿ. ನಿಮ್ಮ ಜ್ಞಾನದಿಂದ ಲೋಕಕ್ಕೆ ದುಡಿಯಿರಿ. ಈ ಮತದ ಸಹವಾಸ ಸಾಕಿನ್ನು ನಡೆಯಿರಿ. ಈ "ಮನುಜಮತದ" ಅಭಿವೃದ್ಧಿಗಾಗಿ ನಿಮ್ಮಿಂದ ಏನಾದರು ಒಳ್ಳೆಯದಾಗಲಿ. ಈ ಜನತೆಗೆ ಅದಕ್ಕಾಗಿ ಎಲ್ಲರಿಗೂ ಬದುಕುವ ಹಕ್ಕಿದೆ. ಈ ಭೂಮಿಯಲ್ಲಿ ಪ್ರತಿಯೊಬ್ಬ ಜೀವಿಯೂ ಸ್ವತಂತರವಾಗಿ ಬದುಕುವ ಅವಕಾಶ ಪಡೆದು ಬಂದಿದ್ದಾನೆ. ಆದರಿಂದಲೇ

"ಸರ್ವರಿಗೂ ಸಮಬಾಳು ! ಸರ್ವರಿಗೆ ಸಮಪಾಲು!"

ನಾವು ಕೈಲಾಗದವರು, ನಾವು ಕೀಳು ಎಂಬ ಮತ್ತು ನಮ್ಮ ಹಣೆರಬರಹ ಎಂಬ ಮೂಡನಂಬಿಕೆಯನ್ನು ಬಿಟ್ಟು ಹೊರಬನ್ನಿರಿ. ವಾಸ್ತವತೆಯನ್ನು ತಿಳಿಯಿರಿ. ಕಾಲಚಕ್ರ ಬದಲಾಗುತ್ತದೆ. ಅದಕ್ಕೆ ಎಲ್ಲರೂ ಹೊಂದಿಕೊಳ್ಳಲೇಬೇಕು. ನಿಮ್ಮ ಮನಸ್ಸಿನಿಂದ ಜಗತ್ತನ್ನು ನೋಡಿ. ಆಗ ನಿಮಗೆ ಈ ಸುಂದರವಾದ ಬದುಕು ಕಾಣುತ್ತದೆ. ನೆಮ್ಮದಿಯ ಬದುಕು ಸಿಗುತ್ತದೆ. ಕಲ್ಪನಾತ್ಮಕ ಬದುಕಿನಿಂದ ಹೊರಬನ್ನಿ. ಸತ್ಯದ ಕಡೆಗೆ ನಡೆಯಿರಿ. ಆಗ ನೀವು ಮತ್ತು ನಿಮ್ಮ ಸುತ್ತಲಿನ ಜಗತ್ತು ಸುಂದರವಾಗುತ್ತದೆ ಎಂದು ತಿಳಿಸಿದ್ದಾರೆ.

ಸ್ವರ್ಗ ನರಕದ ಕಲ್ಪನೆಯನ್ನು ಕೂಡಾ ಹೇಳುತ್ತಾರೆ. ಸ್ವರ್ಗಯೆಲ್ಲಿದೆಯೆಂದರೆ ಪ್ರೀತಿಯಿಂದ ಕೈ ಚಾಚಿದಾಗ ಅದನ್ನು ಅಪ್ಪಿಕೊಂಡರೆ ಸ್ವಾರ್ಥತೆಯನ್ನು ಬಿಟ್ಟು ಎಲ್ಲವನ್ನು ನನ್ನದು ಎಂಬುದನ್ನು ಬೇಡಿದವರಿಗೆ ಪ್ರೀತಿಯಿಂದ ಕೊಟ್ಟು ಅವರ ಸುಖದಲ್ಲಿ ನೀವು ಭಾಗಿಯಾದರೆ ಅದೇ ಸ್ವರ್ಗ. ನಾನು ಎಂಬ ಅಹಂಕಾರವನ್ನು ತೊರೆದು ಎಲ್ಲರೊಳಗೊಬ್ಬರಾಗಿ ಆಗ ನಿಜವಾದ ಸ್ವರ್ಗ ನಿಮ್ಮ ಬೆನ್ನುಹತ್ತಿ ಬರುವುದು ಎಂದು ಹೇಳಿರುವ ಕುವೆಂಪು ಮಾತು ಅಕ್ಷರಶಹ ಸತ್ಯ. ದೇವರು ಪೂಜಾರಿ ಎಂಬ ಕವನದಲ್ಲಿ ಬಹಳ ವಿಶಿಷ್ಟವಾಗಿ ವ್ಯಕ್ತ ಪಡಿಸಿದ್ದಾರೆ. "ಈಡೀ ಜಗತ್ತೆ ಕತ್ತಲೆಯಲ್ಲಿ ಮುಳುಗಿದೆ ಬೇಳಕಿಲ್ಲ. ವಿಶಲವಾದ ಆಕಾಶದಲ್ಲಿ ಚಂದ್ರನಿಲ್ಲ. ಬೆಳಕಿನ ಕಣಗಳಿಲ್ಲ. ಅಂದರೆ ಅಜ್ಞಾನದ ಕತ್ತಲೆಯೇ ತುಂಬಿಹೋಗಿದೆ. ಜ್ಞಾನವಿಲ್ಲದೆ ಶವವಾಗಿ ಬಿದ್ದಿದೆ." ಜಗತ್ತು ಎಂದಿದ್ದಾರೆ ಮನುಷ್ಯರು ಯಾವ ರೀತಿ ಮೌಢ್ಯತೆಯಲ್ಲಿ ಸಿಲಿಕಿದ್ದಾನೆಂದೆರೆ ಸುಳ್ಳುನಂಬಿಕೆ,ಬರವಸೆ,ಪ್ರೀತಿಯಲ್ಲಿ ಮೌಢ್ಯತೆಯ ನೆಮ್ಮದಿಯಿಂದ ಅಜ್ಞಾನದ ಅಡಿಯಲ್ಲಿ ಬದುಕುತ್ತಿದ್ದಾರೆ. ಮುಕ್ತಿಯಿಲ್ಲ. ದೇವರಂಬ ಗುಡಿ ಕಟ್ಟಿ ಸ್ವಾತಂತ್ರದ ಹೆಸರಿನಲ್ಲಿ ನಕಲಿಯಾದ ವ್ಯವಸ್ಥೆ ಶಾಸ್ತ್ರವೆಂಬ ಆಚರಣೆಯ ಕಬ್ಬಿಣ ನೇಣಿನಲ್ಲಿ ಮನುಷ್ಯನು ಸಿಲುಕಿಹಾಕಿಕೊಂಡಿದ್ದಾನೆ. ಅದರಿಂದ ಹೊರಬರದೆ ಸಾಯುತ್ತಿದ್ದಾನೆ.

ಹೇಗೆ ತರಣಿಯ ಹುಳು ತಾನೇ ಕಟ್ಟಿದ ಬಲೆಯಲ್ಲಿ ಹೊರಬರಲಾದೆ ಸಿಕ್ಕಿಹಾಕಿಕೊಂಡು ಸಾಯುತ್ತದೆಯೋ ಅದೇ ರೀತಿ ಮನುಷ್ಯನು ತಾನು ಮಾಡಿದ ಆಚರಣೆಗಳಲ್ಲಿ ತಾನೆ ಸಿಕ್ಕಿಹಾಕಿಕೊಂಡು ಸಾಯುತ್ತಿದ್ದಾನೆ ಎಂಬುದನ್ನು ಕವನದಲ್ಲಿ ವಿವರಿಸಿದ್ದಾರೆ. ಉತ್ತರದಿಂದ ಬಂದಂತಹ ವೈದಿಕ ಅಮಾನವೀಯ ಆವರಣೆಗಳನ್ನು ಕುರಿತು ಹೇಳಿದ್ದಾರೆ ಅಷ್ಟೇ ಅಲ್ಲದೇ ಜನತೆಯಲ್ಲಿ ತುಂಬಿದ ಆಚರಣೇ ಗೊಡ್ಡು ಸಂಪ್ರದಾಯಗಳನ್ನು ಹೊಡೆದು ಹಾಕಲು ಸಾಮಾನ್ಯ ಜ್ಯೋತಿ ಸಾಕಾಗುವುದಿಲ್ಲ ಪ್ರಜ್ವಲಿಸುವ ಜ್ಯೋತಿಯೇ ಬೇಕು. ಆ ಜ್ಯೋತಿ ಒಂದು ಅವತಾರ ರೂಪದಲ್ಲಿ ಬಂದಾಗ ಅದನ್ನು ಜನ ಹಿಂಬಾಲಿಸಿದಾಗ ಅದನ್ನು ಕೂಡಾ ಪೂಜಾರಿ ಪಂಚಪಾತ್ರೆಯಲ್ಲಿ ಬಂಧಿಸಿ ಜ್ಯೋತಿ ಆರಿಸಿ ಬೂದಿಯನ್ನು ನೀಡುತ್ತಾನೆ. ಆದರಿಂದಲೇ ದೇವರು ಬಂಧನದಲ್ಲಿದ್ದಾನೆ. ಪೂಜಾರಿ ಸ್ವತಂತ್ರನಾಗಿದ್ದಾನೆ. ಜನತೆಯನ್ನು ಮತ್ತೆ ಕೆಟ್ಟಕತ್ತಲೆಗೆ ದೂಡುವುದು ಹೊರತು ಬೆಳಕಿನೆಡೆಗೆ ಅಲ್ಲ ಆದರಿಂದಲೇ ಕುವೆಂಪು "ನೂರು ದೇವರನೆಲ್ಲ ನೂಕಾಚೆ ದೂರ" ಎಂದಿದ್ದಾರೆ ದೇವರನ್ನು ಅವರು ವಿರೋಧಿಸಿಲ್ಲ. ಯಾವುದು ವಾಸ್ತವ ಯಾವುದು ಮೂಢನಂಬಿಕೆ ಎಂಬುದನ್ನು ಹಲವಾರು ದೃಷ್ಟಾಂತಗಳನ್ನು ನೀಡುವ ಮೂಲಕ ನಿಜವಾದದನ್ನು ನಂಬಿ. ಕಾಣದಕ್ಕಿಂತ ಕಾಣುವುದಕ್ಕೆ ಬೆಲೆ ಕೊಡಿ ಎಂಬ ಮಹತ್ವವಾದ ಸಂದೇಶವನ್ನು ಕೊಟ್ಟಿದ್ದಾರೆ.

**ಅಡಿಟಿಪ್ಪಣಿ:**

೦೧. "ನೂರು ದೇವರನೆಲ್ಲಾ ನೂಕಾಚೆ ದೂರ" –ಪಾಂಚ್ಯಜನ್ಯ ೩೪–೩೫

೦೨. "ಅಹ್ಮಂಬ್ರಹ್ಮಾಸ್ಮಿ "–ಪಾಂಚ್ಯಜನ್ಯ ೩೬

೦೩. ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು – ಕೋಗಿಲೆ ಮತ್ತು ಸೋವಿಯತ್ ರಷ್ಯಾ –೨೪–೨೫

೦೪. "ಓ ಸೋದರರೆ ಬನ್ನಿ"– ಕೋಗಿಲೆ ಮತ್ತು ಸೋವಿಯತ್ ರಷ್ಯಾ –೨೮

೦೫. ದೇವರು ಪೂಜಾರಿ– ಕೋಗಿಲೆ ಮತ್ತು ಸೋವಿಯತ್ ರಷ್ಯಾ ೭೨

**ಆಧಾರ ಗ್ರಂಥಗಳು :**

ಹೊಸಗನ್ನಡ ಸಾಹಿತ್ಯ ಚರಿತ್ರೆ –ಎಲ್.ಎಸ್. ಶೇಷಗಿರಿರಾವ್

ಕೋಗಿಲೆ ಮತ್ತು ಸೋವಿಯತ್ ರಷ್ಯಾ –ಕುವೆಂಪು

ಪಾಂಚ್ಯಜನ್ಯ –ಕುವೆಂಪು

# ಕುವೆಂಪು ಕಂಡ ಗೋಮಟೇಶ್ವರ

**ಶ್ರೀಮತಿ.ಮಲ್ಲಿಕಾ ಕುಮಾರಿ**
**ಸಂಶೋಧನ ವಿದ್ಯಾರ್ಥಿ**
**ಮಂಗಳೂರು ವಿ.ವಿ**

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ೨೦ನೇ ಶತಮಾನದ ನಂತರದ ಕಾಲಘಟ್ಟದಲ್ಲಿ ವೈವಿಧ್ಯಪೂರ್ಣವಾದ ಕವಿತಾ ರಚನೆಗಳು ಜನ್ಮವೆತ್ತಿರುವುದನ್ನು ಕಾಣಬಹುದು. ವಸ್ತು, ವರ್ಣನೆ, ಭಾಷೆ, ಛಂದಸ್ಸು ಇನ್ನಿತರೇ ಎಲ್ಲಾ ವಿಷಯಗಳಲ್ಲೂ ಕನ್ನಡ ಕವಿತೆ ರಂಗುರಂಗಿನ ಲೋಕವನ್ನೇ ಸೃಷ್ಟಿಸಿದೆ.ಕನ್ನಡದಲ್ಲಿ ಪ್ರಕೃತಿಗೀತೆಗಳು, ಧಾರ್ಮಿಕ ಗೀತೆಗಳು, ವ್ಯಕ್ತಿಗೀತೆಗಳು ಸಾಕಷ್ಟಿವೆ. ಆದರೆ ಕಲಾಜಗತ್ತಿಗೆ ಸಂಬಂಧಿಸಿದಂತೆ ಜಗತ್ಪ್ರಸಿದ್ಧ ಶಿಲ್ಪಕಲಾ ತಾಣಗಳ ಬಗ್ಗೆ ಹಾಗೂ ಶಿಲ್ಪ ಕಲಾಕೃತಿಗಳ ಬಗ್ಗೆ ರಚಿತವಾದ ಕವನ ಶಿಲ್ಪಗಳು ಸಾಕಷ್ಟಿಲ್ಲ. ಕನ್ನಡನಾಡು ಶಿಲ್ಪಕಲಾಕೃತಿಗಳ ಆಗರವಾಗಿದ್ದು, ಅನೇಕರಿಗೆ ಸ್ಫೂರ್ತಿ, ಆನಂದಗಳನ್ನು ನೀಡುತ್ತಿದ್ದರೂ ಹೆಚ್ಚು ಮಂದಿ ಕವಿಗಳ ಮನಸ್ಸು ಅತ್ತಕಡೆ ಹರಿಸದಿರಲು ಕಾರಣ ತಿಳಿಯದಾಗಿದೆ. ಆದರೂ ರಾಷ್ಟ್ರಕವಿ ಕುವೆಂಪು ಗೋಮಟೇಶ್ವರನನ್ನು ಕುರಿತು ಶ್ರೇಷ್ಠಮಟ್ಟದ ಕವಿತೆಗಳನ್ನು ರಚಿಸಿದ್ದಾರೆ.

ಕುವೆಂಪುರವರು ತಮ್ಮ ಪ್ರಗಾಥದಲ್ಲಿ ಕಥಾನುಸರಣಿಯನ್ನು 'ಭರತ– ಬಾಹುಬಲಿ' ಕಥೆಯ ಮುಖ್ಯ ಘಟನೆಗಳಿಗೆ ಸಂಬಂಧಿಸಿದ ಪಂಪನ ಪದ್ಯಗಳನ್ನು ಉದ್ಧರಿಸಿಕೊಳ್ಳುತ್ತಾ ತಮ್ಮ ಆಲೋಚನಾ ಬಳ್ಳಿಯ ಕುಡಿವಡೆಸುತ್ತಾರೆ. ಕವಿಯೊಬ್ಬನಿಗೆ ಶ್ರವಣಾನುಭವ ಆದಾಗ ಮೂಡಿಬರುವ ಕವಿತಾ ಕಲ್ಪನೆಗಳು ಹೇಗಿರುತ್ತವೆ? ಅದೇ ಅನುಭವ ದರ್ಶನಾನುಭವ ಆದಾಗ ಹೇಗೆ ಇರುತ್ತದೆ? ಎಂಬುದನ್ನು ತಿಳಿಯಲು ಅವರ ಮೂರು ಗೊಮ್ಮಟ ಗೀತೆಗಳು ಒಳ್ಳೆಯ ಸಾಮಾಗ್ರಿಯನ್ನು ಒದಗಿಸುತ್ತದೆ.ಗೊಮ್ಮಟನನ್ನು ಮತ್ತು ಮಹಾಮಸ್ತಕಾಭಿಷೇಕವನ್ನು ಕಾಣದಿದ್ದಾಗ, ಕೇಳಿದ ಸಂಗತಿಗಳು ತಮ್ಮ 'ಗೋಮ್ಮಟೇಶ್ವರ' ಕವನದಲ್ಲಿ:

ನಿನ್ನ ಪೂಜಿಪ ಭಕ್ತರೀಧರೆಯ ಬಡಜನಗಳಂ
ಬರದಿಂದ ಪೊರೆಯದೆಯೆ ಘೃತ ತೈಲ ವಾಹಿನಿಗಳಿಂ
ನಿನಗೆ ಜಳಕಂಗೈವುದಂ ಕಂಡು ಧರ್ಮಮುನಿನಂ
ಪರಿಹಾಸ್ಯ ಮಾಡಿ ನಸುನಗುತಲಿಹೆ ಗೋಮಟೇಶ್ವರ

ಎಂದು ಮಸ್ತಕಾಭಿಷೇಕದ ಬಗ್ಗೆ ಆಡಿರುವುದು ಹಾಗು ಅದೇ ಮಸ್ತಕಾಭಿಷೇಕವನ್ನು ಮತ್ತು ಗೊಮ್ಮಟನನ್ನು ಕಂಡಾಗ ಬರೆದ ಪ್ರಗಾಥದಲ್ಲಿ ಹೇಳಿದ ಮಾತುಗಳಿವು.

ಕೊಳೆತಳ್ತುದೆಮ್ಮ ಬಾಳ್ಗಿಂದಾಗುತಿದೆ ಮೀಹೆ
ದೊಲ್ ಮಸ್ತಕಾಭಿಷೇಕಂ
ಜ್ಞಾನ ಮೇಣ್ ಭಕ್ತಿ ಮೇಣ್ ವೈರಾಗ್ಯ
ಸಂಕೇತದಾ
ಅಮೃತ ಘೃತದಧ್ಯಾದಿ ಮಣ್ಯಾಭಿಷೇಕಂ!

ಎಷ್ಟೇ ಆದರೂ ದರ್ಶನಾನುಭವದಲ್ಲಿ ಸಿಗುವ ಸತ್ಯ– ಸುಖ ಶ್ರವಣಾನುಭವದಲ್ಲಿ ಅದರ ಅಭಿವ್ಯಕ್ತಿಯಲ್ಲಿ ಸಿಗಲಾರದು. ಗೊಮ್ಮಟನನ್ನು ಕಾಣದೆ ಕೇಳಿದ ಸುಖದಲ್ಲಿ ಕವಿತೆ ಬರೆದಾಗ ಹತ್ತಾರು ಪ್ರಶ್ನೆಗಳ ಸುರಿಮಳೆಗೆರೆದು 'ನಿರ್ಭೀತಿಯಿಂದ ತೊಂಬತ್ತಾರು ಮುಕ್ತಿಗಳಲ್ಲಿ ಗೊಮ್ಮಟನನ್ನು ಪರೋಕ್ಷವಾಗಿ ಮಾತನಾಡಿಸಿದವರು, ಅದೇ ಮೂರ್ತಿಯನ್ನು ಪ್ರತ್ಯಕ್ಷವಾಗಿ ಕಂಡಾಗ ಅವರಿಗೆ ಆದ ಅನುಭವ ಇದು:

ಆರೊ ತೆಕ್ಕನೆ ತುಡುಕಿ ಬಾಯಿ ಮುಚ್ಚಿ ಹಿಡಿದಂತೆ
ಮೌನ ಭಾರದಿ ಮಾತು ಮೂರ್ಛೆ ಹೋಗಿಹುದಿಲ್ಲಿ
ಶ್ರೀ ಗೊಮ್ಮಟೇಶ್ವರನ ಭವ್ಯ ಸನ್ನಿಧಿಯಲ್ಲಿ
ಗಾಂಭೀರ್ಯ ಗೌರವದ ಹೊನಲು ಚಿತ್ತವನೊತ್ತಿ

ಇನ್ನು ಮೂರ್ತಿಯನ್ನು ಕಂಡ ಕಾಲ್ಪನಿಕ ಅನುಭವದಲ್ಲಿ ಮೂಡಿಬಂದ ಮಾತು, "ಕಣ್ಗೆ ಭೀಮಾಕಾರ ವಾಂತೊಡಂ ಮನಕೆ ನೀಂ ರಾಮನಂತಭಿರಾಮತರ ಮಾವಗಂ ಗೊಮ್ಮಟನ ಭೀಮ– ರಾಮ ದರ್ಶನವನ್ನು ಲೀಲಾಜಾಲವಾಗಿ ಭಾವಿಸಿದ್ದಾರೆ".[೧] ಅದೇ ಮೂರ್ತಿಯನ್ನು ಕಂಡ ವಾಸ್ತವಿಕ ಅನುಭವದಲ್ಲಿ ಹೊರ ಹೊಮ್ಮಿದ ನುಡಿಗಳಿವು. ಭವ್ಯತೆಯ ಭಾವದಾವೇಶದಿಂ, ರೋಮಾಂಚಕವಾಗುತಿಹುದೆನ್ನ ಮೈ! ಅಮೃತದಲ್ಲಿ ಮುಳುಗಿ ಮೃತವಾಗುತಿದೆ ನಾನೆಂಬ ವ್ಯಕ್ತಿ ಕ್ರಿಮಿ.

ಕುವೆಂಪು ಅವರ ಮನಸ್ಸಿನ ಮೇಲೆ ಗೊಮ್ಮಟ ಶಿಲ್ಪ ಗಾಢ ಪ್ರಭಾವ ಬೀರಿದೆ. "ನಿನ್ನ ಸಿದ್ಧಿಗೆ ಪಿರಿದದಾವುದೈ ಶಿಲ್ಪಸಿದ್ಧ? ನೀನೆ ಜೀವನ್ಮುಕ್ತ! ನಿನ್ನ ದೈಬ್ರಹ್ಮಯೋಗಂ ಎಂದಿದ್ದಾರೆ. ಶಿಲ್ಪ ಕೃತಿಯಿಂದ ಶಿಲ್ಪಿ, ಶಿಲ್ಪಿಯಿಂದ ಜಗತ್ತಿನ ಶಿಲ್ಪಿ– ಶಿಲ್ಪಸಿದ್ಧನ ಕಡೆಗೆ ದೃಷ್ಟಿ ಬೆಳೆದಿದೆ".[೨] ಮೂರ್ತಿಯನ್ನು ಕವಿ ಹೃದಯದಿಂದ ಪ್ರತಿಭಾ ಚಕ್ಷುಗಳಿಂದ ಕಂಡ ಅವರು ಭಾವದಾವೇಶದಲಿ ಸಹೃದಯನಿಗೆ ಗೊಮ್ಮಟನ ಪರವಾಗಿ ಪ್ರಶ್ನೆಗಳ ಸವಾಲುಗಳ ಬಾಣಗಳನ್ನೇ ಎಸೆಯುತ್ತಾರೆ.

"ದೈತ್ಯಕಲೆಯಿದು; ದಿವ್ಯ ದೈತ್ಯ ಕಲೆ, ಕಲ್ಲಿನಲಿ ನಿರ್ಜೀವ
ಜಡತೆಯಲಿ ನಗೆಗೆಡೆಯ ನಗ್ನತೆಗೆ ಇಂಥ ಭೀಮಾಕೃತಿಗೆ
ಎದೆಯಿದ್ದರಿಲ್ಲಿ ನಗು ನೋಡುವಂ ಬತ್ತಲೆಗೆ ಕಿಲ ಕಿಲನೆ
ನಗುವ ಓ ಲಘು ಹೃದಯ! ಎನ್ನುತ್ತಾರೆ"

ಕುವೆಂಪು ಗೊಮ್ಮಟ ಶಿಲ್ಪದಲಿ ದೈತ್ಯಕಲೆ ಕಂಡಂತೆ ಇನ್ನೆರಡು ವಿಶೇಷಾಂಶಗಳನ್ನು ಅಪೂರ್ವ ರೀತಿಯಲ್ಲಿ ಕಂಡಿದ್ದಾರೆ. ಒಂದು ಮೌನದ ಬಗ್ಗೆ, ಮತ್ತೊಂದು ನಗ್ನತೆ ಬಗ್ಗೆ. ಗೊಮ್ಮಟನ ನಗ್ನತೆ ಅವರಿಗೆ ಅರಿವಾದ ಪರಿ ಅಭೂತಪೂರ್ವವಾದುದು. ಅವರು ನಗ್ನತಾ ಮೀಮಾಂಸೆಯನ್ನು ಹೀಗೆ ಸಾರಿದ್ದಾರೆ. "ಅಲ್ಪತಾ ಲವಲೇಶವಿಲ್ಲದೆಯೆ ಸರ್ವತ್ರ ಸರ್ವದರೋಳುಂ ಭೂಮನಾಗಿರುವ ಮಹಿತೋಮಹಿಮನಿಗೆ ಮುಚ್ಚುಮರೆ ತಾನೇಕೆ"?[೩] ಆದ್ದರಿಂದಲೇ ಗೊಮ್ಮಟಾ 'ನಗ್ನತೆಗೆ ನಾಚದಿಹೆ ಬತ್ತಲೆಗೆ ಬೆದರದಿಹೆ' ಆದರೆ ನಿನ್ನಂತೆ ಇರಲು ಉಳಿದವರು ಬಯಸಿದರೆ ಅವರು "ಬೋಳ್, ಕಾವಿ, ರುದ್ರಾಕ್ಷಿ, ವೈರಮುಡಿ, ಜರಿಯಮಡಿ, ಕತ್ತಲೆಯ ಗರ್ಭಗುಡಿ ಮೊದಲಾದುವೆಲ್ಲವಂ ತೊರೆದು, ಸತ್ಯದ ದಿಗಂಬರತೆಯೊಂದನೆ ಒಲಿದು ನಿನ್ನ ದಿವ್ಯ ನಿರ್ಲಕ್ಷ್ಯತಾ ಸ್ಥಿರತೆಯನ್ನು ಭೂಮಾತೆಯ, ಭವ್ಯತೆಯ ಬ್ರಹ್ಮಗಾಂಭಿರ್ಯಮಂ' ಪಡೆಯಬೇಕಾಗುತ್ತದೆ".[೩] ಅದಕ್ಕಾಗಿ ಕವಿಯು ನನಗೆ ಅವುಗಳನ್ನೆಲ್ಲಾ ಅನುಗ್ರಹಿಸಿ ಎಂದು ಪ್ರಾರ್ಥಿಸಿದ್ದಾರೆ.

ಮೌನವನ್ನು ಗೊಮ್ಮಟನಲ್ಲಿ ಅಸದೃಶ ರೀತಿಯಲ್ಲಿ ಕುವೆಂಪು ಕಂಡಿದ್ದಾರೆ. ಮೌನ ಸ್ಯೆರಣೆಯ ಲಕ್ಷಣವಾಗಿದೆ. ಆದ್ದರಿಂದಲೇ ಗೂಢತರ ಮೌನದಿಂದೇಕಾಂಗಿಯಾಗಿ ನೀನಿಂತು ನಿಂತು ಶತಮಾನಗಳನೆಷ್ಟು ದಣಿವ ಕಾಣದೆ ಕಳೆದೆ? ಎಂದು ಕೇಳಿದ್ದಾರೆ. ಮೌನಕ್ಕೆ ಕಾರಣವನ್ನು ಮತ್ತೊಂದೆಡೆ ಅವರು ಹೀಗೆ ಊಹಿಸಿದ್ದಾರೆ.

"ವಾದಿಸುವ ಬಣವೇದ ಪಂಡಿತರ ನೋಡಿ ನೋಡಿ
ದರ್ಶನಗಳಾಚಾರ್ಯ ರಾಟೋಪವನುಂ ಕಂಡು ನೀಂ
ನಿರ್ವಾಣ ತಾನನಿರ್ವ ಚನೀಯವೆಂಬ ನಿಜಮಂ
ತಿಳಿಸಲೇಂ ಮೌನವ್ರತವಾಂತೆಯೋ" ಮೌನಿವರ್ಯ?

ಗೊಮ್ಮಟನ ಮೌನ ಕಂಡವರಿಗೂ ಪರಿಣಾಮಕಾರಿ ಕವಿ ಗೊಮ್ಮಟನನ್ನು ಕಂಡಾಗ ಆದ ಪರಿಣಾಮವು ಮೌನದ ಸ್ವರೂಪದ ಅನುಭವವೇ. "ಆರೂ ತೆಕ್ಕನೆ ತುಡುಕಿ ಬಾಯ್ ಮುಚ್ಚಿ ಹಿಡಿದಂತೆ ಮೌನಭಾರದಿ ಮಾತು ಮೂರ್ಛೆ ಹೋಗಿಹುದಿಲ್ಲಿ".[೪] ಎಂಬ ಅನುಭವ ಅವರಿಗಾಗಿದೆ.

ಗೋವಿಂದ ಪೈ ಅವರ ಮುಕ್ತಿ, ಕುವೆಂಪು ಅವರ ಮೂರು ಗೊಮ್ಮಟಗೀತೆಗಳು ಪ್ರಗಾಥಗಳ ಗುಂಪಿಗೆ ಸೇರಿದ್ದು ಮೇಲೆ ವಿಚಾರವಾಹಿನಿ ಒಳಗೆ ಭಾವದ ಪ್ರವಾಹ; ಭಾವಗೀತೆಯ ಪ್ರಕಾರಗಳಲ್ಲಿ ಅತ್ಯಂತ ವಿಚಾರಯುತವಾದುದು, ಪ್ರಜ್ಞಾ ಪೂರ್ವಕ ಕಲೆಗಾರಿಕೆಯ ಸಿದ್ಧಿಯುಳ್ಳದ್ದು ಪ್ರಗಾಥ ಎಂಬ ಮಾತಿಗೆ ನಿದರ್ಶನಗಳಾಗಿವೆ. ಈ ಪ್ರಗಾಥಗಳಲ್ಲಿನ ಗಾಂಭೀರ್ಯ ಘನತೆಗಳು ಮನಮುಟ್ಟುತ್ತಿವೆ.

ಗೊಮ್ಮಟನನ್ನು ಕುರಿತು ಪೈ ಮತ್ತು ಕವಿತೆಗಳು ಹಾಗು ಇತರರ ಕವಿತೆಗಳನ್ನು ಶಿಲ್ಪಕಲಾ ಕವಿತೆಗಳು ಎಂಬ ವರ್ಗಕ್ಕೆ ಅಥವಾ ಮೂರ್ತಿಶಿಲ್ಪ ಗೀತೆಗಳು ಎಂಬ ವರ್ಗಕ್ಕೆ ಸೇರಿಸುವುದು ಉಚಿತ. ಪ್ರಭುಶಂಕರ್ ಅವರು ವ್ಯಕ್ತಿ ಗೀತೆಗಳಿಗೆ ಸೇರಿಸಿದ್ದಾರೆ. ನಿಜವಾಗಿ ಇವುಗಳ ರಚನೆಯ ಮೂಲ ಸ್ಫೂರ್ತಿ ಶಿಲ್ಪವೇ ಆಗಿರುವುದರಿಂದ ವ್ಯಕ್ತಿತ್ವ ಚಿತ್ರಣ ಅನಿವಾರ್ಯವಾದರೂ, ಇವು ಮೂರ್ತಿ ಶಿಲ್ಪಗೀತೆಗಳನೆನ್ನುವುದೇ ಹೆಚ್ಚು ಸೂಕ್ತ. ಇದೇನೇ ಇರಲಿ, ಒಟ್ಟಿನಲ್ಲಿ ಪೈ ಮತ್ತು ಕುವೆಂಪು ಅವರು ಇಬ್ಬರೂ ರಾಷ್ಟ್ರಕವಿಗಳಾಗಿದ್ದು ಗೊಮ್ಮಟ ಶಿಲ್ಪ ಸೌಂದರ್ಯ, ಗೊಮ್ಮಟಜಿನದರ್ಶನ, ಜೈನಧರ್ಮದ ಹಿರಿಮೆ, ಪ್ರಗಾಥಗಳ ಸೊಗಸು ಇವುಗಳನ್ನು ಅಪೂರ್ವವಾಗಿ ಮೂಡಿಸಿದ್ದಾರೆ. ನಾಡಿನ ಶಿಲ್ಪಕಲಾ ತಾಣಗಳ ಬಗ್ಗೆ ಶಿಲ್ಪಕಲಾ ಕೃತಿಗಳ ಬಗ್ಗೆ ಕವಿತೆ ರಚನೆ ಮಾಡುವವರಿಗೆ ಸ್ಫೂರ್ತಿದಾಯಕವಾಗಿದೆ.

**ಅಡಿ ಟಿಪ್ಪಣಿ:**

೧. 'ಜೈನ ಸಾಹಿತ್ಯ ಮತ್ತು ಸಂಸ್ಕೃತಿ', ಪು.ಸಂ ೭೦–೭೬
೨. 'ಆರೋಹಣ', ಪು.ಸಂ ೪೦–೪೭
೩. 'ಜೈನಾಗಮ', ಪು.ಸಂ ೨೦–೨೭
೪. ಭುವನವಾಹಿನಿ ತ್ರೈಮಾಸಿಕ ಪತ್ರಿಕೆ ಪು.ಸಂ ೩–೫

**ಪರಾಮರ್ಶನ ಗ್ರಂಥಗಳು**

೧. ಎಂ.ಎ. ಜಯಚಂದ್ರ 'ಜೈನಸಾಹಿತ್ಯ ಮತ್ತು ಸಂಸ್ಕೃತಿ' ೧೯೭೬
೨. ಭುವನವಾಹಿನಿ ತ್ರೈಮಾಸಿಕ ಪತ್ರಿಕೆ ೨೦೦೮, ವೇಣೂರು
೩. ತುಳುನಾಡಿನ ಜೈನಧರ್ಮ, ಒಂದು ಸಾಂಸ್ಕೃತಿಕ ಅಧ್ಯಯನ– ಡಾ. ಎಸ್.ಡಿ. ಶೆಟ್ಟಿ, ಎಸ್.ಡಿ.ಎಂ ಕಾಲೇಜ್, ಉಜಿರೆ, ದ.ಕ
೪. 'ಆರೋಹಣ' (ಶ್ರೀ ವೀರೇಂದ್ರ ಹೆಗ್ಗಡೆಯವರ ಅಭಿನಂದನ ಗ್ರಂಥ) ಸಂಪಾದಕರು: ಪ್ರೊ. ಎಸ್. ಪ್ರಭಾಕರ ಮತ್ತು ಪ್ರೊ. ಎನ್. ವಜ್ರಕುಮಾರ, ಪಟ್ಟಾಭಿಷೇಕ ದಶಮಾನೋತ್ಸವ ಸಮಿತಿ, ಧರ್ಮಸ್ಥಳ, ೧೯೭೮
೫. ಶಾಂತಿರಾಜ ಶಾಸ್ತ್ರಿಗಳ ಕೃತಿಗಳು: ಒಂದು ಅಧ್ಯಯನ, ಡಾ.ಸತ್ಯವತಿ, ಕ.ಸಾ.ಪ. ಬೆಂಗಳೂರು ೧೯೯೫

# ಶ್ಮಶಾನ ಕುರುಕ್ಷೇತ್ರಂ ನಾಟಕದಲ್ಲಿ ವಿಶ್ವಮಾನವ ಧರ್ಮ

**ಡಾ. ಶ್ರದ್ಧಾ ಬೆಳದಡಿ**
ಕನ್ನಡ ಅತಿಥಿ ಉಪನ್ಯಾಸಕರು
ಶ್ರೀಮತಿ ಜಿ.ಬಿ. ಅಂಕಲಕೋಟಿ
ಸ.ಪ್ರ. ದರ್ಜೆ ಕಾಲೇಜು, ಶಿಗ್ಗಾವಿ

ನವೋದಯ ಕಾಲಘಟ್ಟದ ಕನ್ನಡದ ಅಗ್ರಮಾನ್ಯ ಕವಿ, ಕಾದಂಬರಿಕಾರ, ನಾಟಕಕಾರ, ವಿಮರ್ಶಕರಾದ ಕುವೆಂಪು ಅವರು ನಾಡು, ನುಡಿ, ಪ್ರೇಮ, ದೇಶಪ್ರೇಮ, ಪ್ರಕೃತಿ, ಆಧ್ಯಾತ್ಮ ವಿಚಾರ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಸಾಹಿತ್ಯ ರಚಿಸಿದ್ದಾರೆ. ಕನ್ನಡದ ಎರಡನೆಯ ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ ಪಡೆದ ಖ್ಯಾತ ಸಾಹಿತಿ ಎಂದು ಸಾಹಿತ್ಯಲೋಕದಲ್ಲಿ ಗುರುತಿಸಿಕೊಂಡಿದ್ದಾರೆ. ಅವರು ರಚಿಸಿದ ಕೃತಿಗಳಲ್ಲಿ ನಾಟಕ ಕೃತಿಗಳ ಪಾತ್ರವು ಮಹತ್ವವಾಗಿದ್ದು, ವೈಚಾರಿಕತೆಯ ಹಿನ್ನೆಲೆಯಲ್ಲಿ ಸಮಕಾಲೀನ ನೆಲೆಯಲ್ಲಿ ಚಿಂತನೆ ಮಾಡಲು ಅವಕಾಶ ಕಲ್ಪಿಸುತ್ತವೆ. ಯಮನ ಸೋಲು, ಶೂದ್ರ ತಪಸ್ವಿ, ಬೆರಳ್ಗೆ ಕೊರಳ್, ಶ್ಮಶಾನ ಕುರುಕ್ಷೇತ್ರಂ ಇತ್ಯಾದಿ ನಾಟಕಗಳು ಮಹತ್ವಪೂರ್ಣವಾಗಿವೆ. ಅದರಲ್ಲೂ ಶ್ಮಶಾನ ಕುರುಕ್ಷೇತ್ರಂ ನಾಟಕವು ಯುದ್ಧ, ಯುದ್ಧ ಕಾರಣ, ಯುದ್ಧ ವೈಭವವನ್ನು ವಿವರಿಸದೇ ಮಹಾಭಾರತದ ಹದಿನೆಂಟು ದಿನಗಳ ಹೋರಾಟದ ಕೋಲಾಹಲದಿಂದ ಕೂಡಿದ ಕುರುಕ್ಷೇತ್ರ, ಸಂಗ್ರಾಮದ ಕೊನೆಯ ರಾತ್ರಿ ಶ್ಮಶಾನ ಮಾತ್ರ ಉಳಿದ ಘೋರ ಚಿತ್ರವನ್ನು ಕಟ್ಟಿಕೊಡುತ್ತ ಸಮಕಾಲೀನ ಚಿಂತನೆಯನ್ನು ಕೂಡ ಒಳಗೊಂಡ ಅದ್ಭುತವಾದ ನಾಟಕವಾಗಿದೆ. ಕೆಲವು ಪ್ರಮುಖ ಅಂಶಗಳ ಮೂಲಕ ಶ್ಮಶಾನಕುರುಕ್ಷೇತ್ರಂ ನಾಟಕದ ಮೂಲಕ ಸಮಕಾಲೀನತೆಯನ್ನು ಕಟ್ಟಿಕೊಟ್ಟ ಕುವೆಂಪು ಅವರ ಅನನ್ಯತೆಯನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ:

- ಪಾತ್ರಗಳ ವೈಶಿಷ್ಟ್ಯತೆ
- ಸಾಮಾಜಿಕ ಕಳಕಳಿಯ ದರ್ಶನ
- ವಿಶಿಷ್ಟ ಪಾತ್ರಗಳ ಮೂಲಕ ಸಮಾಜವನ್ನು ಎಚ್ಚರಿಸುವ ಬಗೆ
- ವಿಶ್ವಮಾನವ ಧರ್ಮ ಸಂದೇಶದ ಪ್ರಸಾರ

**ಪಾತ್ರಗಳ ವೈಶಿಷ್ಟ್ಯತೆ** :

ರಣರಂಗದ ಘೋರ ವರ್ಣನೆಯಿಂದ ನಾಟಕ ಪ್ರಾರಂಭವಾಗುವ ಶ್ಮಶಾನ ಕುರುಕ್ಷೇತ್ರಂ ನಾಟಕವು ಪೌರಾಣಿಕವಾಗಿದ್ದರೂ ಕುವೆಂಪು ಅವರ ಸ್ವಂತಿಕೆ ಎದ್ದು ಕಾಣುತ್ತದೆ. ಯುದ್ಧದ ಕ್ರೌರ್ಯಕ್ಕೆ ತುತ್ತಾದ ಜನಸಾಮಾನ್ಯರ ಗೋಳು, ತ್ಯಾಗ, ಮಾನಭಂಗ ಸ್ಥಿತಿಗತಿಯ ಬಗೆಗೆ ಪುರಾಣದ ಇತಿಹಾಸದಲ್ಲಿ ಕಂಡುಬರುವುದಿಲ್ಲ. ಅದನ್ನು ಸಮೀಕರಿಸಿ ಸಮಕಾಲೀನ ಸ್ಥಿತಿಗತಿಯನ್ನು ಕುರಿತು ಚಿಂತನೆ ಮಾಡಲು ಅವಕಾಶ ಕಲ್ಪಿಸಿದ ಸಾಹಿತಿಯ ವಿದ್ವತ್ತು ಅಪಾರ, ಅಪರೂಪ. ದ್ವಾಪರ, ಕಲಿದೇವ, ಚಾಣೂರ, ನೀಲಾಕ್ಷ, ಗೀರ್ವಾಣ, ಮಾತೆ, ಕಂದ, ಮುದುಕಿ ಮತ್ತು ರುದ್ರ ಪಾತ್ರಗಳನ್ನು ಸೃಷ್ಟಿಸುವಲ್ಲಿ ಕುವೆಂಪು ಪಂಪ, ರನ್ನ, ಕುಮಾರವ್ಯಾಸ ಇವರೆಲ್ಲರಿಗಿಂತಲೂ ಭಿನ್ನವಾಗಿ ಕಾಣುತ್ತಾರೆ. ಯುಗಪುರುಷರಾದ ದ್ವಾಪರದೇವ ಮತ್ತು ಕಲಿದೇವರು ಪಾತ್ರವನ್ನು ರಂಗದ ಮೇಲೆ ತರುವುದು ನಾಟಕದ ವಿಶೇಷತೆ. ಕಲಿದೇವನ ಪಾತ್ರವು ದ್ವಾಪರನ ಪಾತ್ರದ ಬೆಳವಣಿಗೆಗೆ ಪೋಷಕವಾಗಿದೆ. ಏಕೆಂದರೆ ದ್ವಾಪರವು ನಾಲ್ಕು ಯುಗದಲ್ಲಿ ಮೂರನೆಯ ಯುಗವಾಗಿದ್ದು, ಈ ಯುಗದಲ್ಲಿ ಆಗಿಹೋದ ಯುದ್ಧದ ಸನ್ನವೇಶವನ್ನು, ಯುದ್ಧದಿಂದ ಆಗುವಂತಹ ಪರಿಣಾಮವನ್ನು ತಿಳಿಸುತ್ತ ಕಲಿ ಎಂಬ ಪಾತ್ರದ ಮೂಲಕ ಸಮಾಜದಲ್ಲಿ ಆಶಯ ಭಾವವನ್ನು ಹುಟ್ಟು ಹಾಕುತ್ತದೆ. ಅಂದರೆ ಯುದ್ಧದ ಭೀಕರತೆಯನ್ನು ಜನಮಾನಸಕ್ಕೆ ಮುಟ್ಟಿಸಿ, ಯುದ್ಧದ ಬಗ್ಗೆ ಹತ್ತಾರು ಸಾರಿ ಯೋಚಿಸುವಂತೆ ಮಾಡುವಲ್ಲಿ ಈ ಪಾತ್ರಗಳು ಪ್ರಮುಖವಾಗಿವೆ.

**ಸಾಮಾಜಿಕ ಕಳಕಳಿಯ ದರ್ಶನ :**

ಶ್ಮಶಾನ ಕುರುಕ್ಷೇತ್ರಂ ನಾಟಕದಲ್ಲಿ ಬರುವ ಮಾತೆ, ಆಕೆಯ ಕಂದ ಮತ್ತು ಮುದುಕಿ ತೊಂದರೆಗೊಳಗಾದವರ ಪ್ರತಿನಿಧಿಯಾಗಿದ್ದಾರೆ. "ನಮ್ಮವೊಲಿಹ ಬಡಜನಂಗಳೆಲ್ಲ ಮಂಕುಗಳಮ್ಮಾ. ಪಾಂಡವರ್ ಕೌರವರ್ ನೆಲಕೆ ಪೊಯ್ದಾಡಿದರೆ ನಮ್ಮ ಮಕ್ಕಳ್ ಅವರಿವರಂ ಕೆಳೆಗೊಂಡು ನಿಂತು ಹೆಮ್ಮೆಗೆ ಬಡಿದಾಡಿ ಮಡಿವರ್"[೧] ಎಂದು ಮುದುಕಿ ಹೇಳುವಲ್ಲಿ ಜನಸಾಮಾನ್ಯ

ಬಡಜನರು ಮುಗ್ಧರು ಮತ್ತು ಅಮಾಯಕರು. ಪಾಂಡವರು, ಕೌರವರು ಭೂಮಿಗಾಗಿ ಹೊಡದಾಡಿದರೆ, ನಮ್ಮ ಜನಗಳು ತಮ್ಮ ಕುಟುಂಬದ ಸದಸ್ಯರನ್ನು ಕಳೆದುಕೊಂಡು ತಾವೂ ಮಡಿಯುತ್ತಾರೆ. ಹಾಗಾಗಿ ಅನಾಯಸವಾಗಿ ತಮ್ಮ ಜೀವವನ್ನು ಕಳೆದುಕೊಳ್ಳುತ್ತಿದ್ದ ಜನರ ಪರ ಕುವೆಂಪು ಅವರ ನಿಲುವು. ಅವರು ಅನ್ಯಾಯದ ವಿರುದ್ಧ ಕ್ರಾಂತಿಯನ್ನು ಬಯಸುತ್ತಾರೆಯೇ ಹೊರತು ಯುದ್ಧವನ್ನಲ್ಲ. ಸಾಮಾನ್ಯವಾಗಿ ಗೆದ್ದವರನ್ನು ಹೊಗಳುವುದು, ಸೋತವರನ್ನು ತೆಗಳುವುದು ವಾಡಿಕೆ. ಆದರೆ ಕುವೆಂಪು ಅವರು ಇವೆರಡೂ ಕುರಿತು ವಿಚಾರ ಮಾಡದೆ ಇವೆರಡೂ ಕಡೆಯಿಂದ ಹೋರಾಡಿ ಮಡಿದವರ, ಅವರ ಕುಟುಂಬದವರ ಸ್ಥಿತಿ–ಗತಿಯನ್ನು ಕುರಿತು ಪ್ರಮುಖವಾಗಿ ಗಮನಹರಿಸುತ್ತಾರೆ. ಇದರಿಂದ ಕುವೆಂಪು ಅವರಲ್ಲಿರುವ ಮಾನವೀಯ ವಿಚಾರಗಳು, ಸಾಮಾಜಿಕ ಕಳಕಳಿಯ ಚಿಂತನೆಗಳು ಎದ್ದು ಕಾಣುತ್ತವೆ.

**ವಿಶಿಷ್ಟ ಪಾತ್ರಗಳ ಮೂಲಕ ಸಮಾಜವನ್ನು ಎಚ್ಚರಿಸುವ ಬಗೆ :**

ರುದ್ರನ ಪಾತ್ರಸೃಷ್ಟಿ ಬಹಳ ವೈಶಿಷ್ಟ್ಯತೆಯಿಂದ ಕೂಡಿದೆ. ಸೃಷ್ಟಿ, ಸ್ಥಿತಿ, ಲಯ ಮೂರ್ತಿಗಳಲ್ಲಿ ಕೊನೆಯದು ಲಯ. ಇದರ ಕರ್ತೃ ರುದ್ರ. ಇಲ್ಲಿ ಲಯ ಎಂದರೆ ನಾಶವನ್ನುಂಟು ಮಾಡುವವನು ಅಥವಾ ಗತಿ, ಹಾಳು ಎಂಬರ್ಥ ಕೊಡುತ್ತದೆ. ಮನುಷ್ಯ ಹುಟ್ಟಿದ ಮೇಲೆ ಒಂದು ದಿನ ನಾಶವಾಗಲೇಬೇಕು. ಅಂದರೆ ಮರಣ ಹೊಂದಲೆಬೇಕು. ಇದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಸೋತವರಿಗೆ, ಸತ್ತವರಿಗೆ ಮಾತ್ರ ಸಾವು ಸಂಭವಿಸುತ್ತದೆ ಎಂದು ಯೋಚಿಸದೆ ಪ್ರತಿಯೊಬ್ಬರೂ ಲೀನವಾಗಲೇಬೇಕು ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಆದರೆ ಯುದ್ಧವಾಗುವುದನ್ನು, ಯುದ್ಧದ ಮೂಲಕ ಜನರು ಮರಣಹೊಂದುವುದನ್ನು ತಡೆಯಬಹುದು. ಆದ್ದರಿಂದ ಮಾನವ ಸಾಮಾಜಿಕ ಕಾಳಜಿ ಹೊತ್ತು ಬದುಕನ್ನು ಕಟ್ಟಿಕೊಳ್ಳುವ ಬಗೆಯನ್ನು ಕುವೆಂಪು ಅವರು ಲಯಮೂರ್ತಿಯಾದ ರುದ್ರನನ್ನು ರಂಗದ ಮೇಲೆ ತರುವುದರ ಮೂಲಕ ಅರ್ಥಪೂರ್ಣವಾದ ಅಂತ್ಯವನ್ನು ನಾಟಕದ ಮೂಲಕ ಕಟ್ಟಿಕೊಟ್ಟಿದ್ದಾರೆ.

ಶ್ಮಶಾನದ ದೃಶ್ಯವನ್ನು ಕಂಡು ದ್ವಾಪರನಿಗೆ ನೋವಾಗಿ, ಬೇಸರವಾಗಿ, ಹೆಣದ ರಾಶಿಗಳನ್ನು ಕಂಡು ಹೀಗೆ ಹೇಳುತ್ತಾನೆ:

"ನಿಚ್ಚಮಂ ನಾನಾಲಿಸಿರ್ದ ರಣಕಹಳೆಗಳ
ದೆಸೆದೆಸೆಗಳಂ ತಿವಿವ ದನಿಯಿಲ್ಲ, ಉರವಣಿಪ
ಬೀರರಟ್ಟಹಾಸದ ಕಾಕುಗಳ ಭೀಷಣ
ಸ್ವನಮಿಲ್ಲ, ಕಡುಗಿ ಕಾದುವ ಭಟರ ಖಡ್ಗಗಳ
ಸಂಘಟ್ಟನಾ ಧ್ವಾನಮಿಲ್ಲ. ಅತಿರಥರ
ಕಲಕಲ ನಿನಾದದಿಂದೊಡಗೂಡಿ ಪೊರಮಡುವ
ಕೋದಂಡಪಾಣಿಗಳ ಸಿಂಜಿನಿಯ ಟಂಕೃತಿಯ
ನಿರ್ಘೋಷಮಿಂದೆತ್ತ ಪೋಗಿಹುದು? ಕಿಡಿಗರೆವ
ಮಂತ್ರಾಸ್ತ್ರಶಸ್ತ್ರಗಳ ರೂಕ್ಷ ದೀಧಿತಿಯೆಲ್ಲಿ?"[೨]

ಯುದ್ಧದ ಸಂದರ್ಭದಲ್ಲಿ ಕೇಳಿದಂತ ರಣಕಹಳೆಗಳ ಶಬ್ಧ, ವೀರರ ಅಟ್ಟಹಾಸ, ಖಡ್ಗಗಳ ಧ್ವನಿ, ಬಿಲ್ಲು ಬಾಣಗಳು, ಮಂತ್ರಸ್ತ್ರಗಳು ಹೀಗೆ ಯುದ್ಧದ ಸಂದರ್ಭದಲ್ಲಿ ಜರಗುವ ಕ್ರೂರ, ಒರಟುತನದಿಂದ ಕೂಡಿದ ಯುದ್ಧಭೂಮಿ ನಿಶ್ಯಬ್ಧವಾದ ಶ್ಮಶಾನವಾಗಿ ನಿರ್ಮಾಣವಾದದ್ದರ ಬಗ್ಗೆ ದ್ವಾಪರ ಯುಗದಲ್ಲಿ ಮಹಾನ್ ವ್ಯಕ್ತಿಗಳೆಂದು ಖ್ಯಾತರಾಗಿದ್ದ ಬೀಷ್ಮ, ಕರ್ಣ, ದ್ರೋಣ, ಅಭಿಮನ್ಯು ಮುಂತಾದ ವೀರರು ಸುಟ್ಟು ಬೂದಿಯಾಗಿರುವರು ಎಂದು ಹೇಳುತ್ತಾ, ಯಾರೂ ಕೂಡ ಶಾಶ್ವತವಾಗಿ ಭೂಮಿಮೇಲೆ ನೆಲೆಯೂರಲು ಸಾಧ್ಯವಿಲ್ಲ ಎಂಬುದನ್ನು ಕುವೆಂಪು ಅವರು ದ್ವಾಪರನ ಪಾತ್ರದ ಮೂಲಕ ಸಮಾಜದ ಜನರು ಪ್ರಜ್ಞಾವಂತರಾಗುವ ಅವಶ್ಯಕತೆಯನ್ನು ತಿಳಿಸುತ್ತಾರೆ.

**ವಿಶ್ವಮಾನವ ಧರ್ಮ ಸಂದೇಶದ ಪ್ರಸಾರ :**

ಮನುಷ್ಯನಲ್ಲಿ ಒಳ್ಳೆಯ, ಕೆಟ್ಟ ಗುಣಗಳು ಸಹಜವಾಗಿಯೇ ಇರುತ್ತವೆ. ಈ ಸಮ್ಮಿಶ್ರಣದ ಒಟ್ಟು ಮೊತ್ತವೇ ಮನುಷ್ಯ ಎಂಬುದನ್ನು ಮರೆತು, ಒಬ್ಬ ವ್ಯಕ್ತಿಯನ್ನು ಕೊನೆಯವರೆಗೂ ಒಂದೇ ರೀತಿಯಲ್ಲಿ ಕಾಣುವುದು ಸರಿಯಲ್ಲ ಎಂಬ ನಿಲುವು ಕುವೆಂಪು ಅವರದು. ಮಹಾಭಾರತದಲ್ಲಿ ಕೌರವರನ್ನು ಕೆಟ್ಟವರು ಎನ್ನುವುದು, ಪಾಂಡವರನ್ನು ಒಳ್ಳೆಯವರೆನ್ನುವುದು ತಪ್ಪು. ಇಬ್ಬರಲ್ಲಿಯೂ ಒಳ್ಳೆಯ–ಕೆಟ್ಟಗುಣಗಳು ಇದ್ದವು. ಒಳ್ಳೆಯವರು, ಕೆಟ್ಟವರು ಆಗುವುದಕ್ಕೆ ಅವರಿಗೆ ಒದಗಿಬಂದ ಪರಿಸರ, ಶಿಕ್ಷಣ, ಸಂಸ್ಕಾರ ಇತ್ಯಾದಿ ಅಂಶಗಳು ಕಾರಣವಾಗಿರುತ್ತವೆ ಎಂದು ಮಾನವಸಹಜ ಗುಣಗಳನ್ನು ಅನಾವರಣಗೊಳಿಸುತ್ತಾರೆ. ಮನುಷ್ಯರನ್ನು ದೇವರಾಗಿ ವೈಭವೀಕರಿಸುವ ಬದಲಾಗಿ ಸಹಜ ಮಾನವನನ್ನಾಗಿ ಕಾಣುವುದು ಮಾನವೀಯತೆಗೆ ಕೊಟ್ಟ ಗೌರವವಾಗುತ್ತದೆ. ಇದುವೇ ಕುವೆಂಪು ಅವರ ಪ್ರಕಾರ ಮಾನವ ಧರ್ಮವಷ್ಟೇ ಅಲ್ಲ, ವಿಶ್ವಮಾನವ, ತತ್ತ್ವವಾಗಿದೆ.

ಹೀಗೆ ಈ ನಾಟಕದಲ್ಲಿ ವಸ್ತು, ಪಾತ್ರಸೃಷ್ಟಿ, ಕರ್ಣ–ಕೌರವರ ಸ್ನೇಹ, ಸೈನಿಕನೊಬ್ಬನ ಸ್ವಾಮಿನಿಷ್ಠೆ, ದ್ವಾಪರನ ಒಡಲುರಿ, ಅದನ್ನು ಕಲಿದೇವನಲ್ಲಿ ಅಭಿವ್ಯಕ್ತಪಡಿಸುವಿಕೆ, ಮುದುಕಿ–ತಾಯಿ–ಕಂದ ಇವರ ಪ್ರಸಂಗ ಇತ್ಯಾದಿ ದೃಶ್ಯಗಳು ಅನನ್ಯವಾಗಿ ಮೂಡಿಬಂದಿವೆ. ಕವಿಯ ದೃಷ್ಟಿ ಹಾಗೂ ಸೃಷ್ಟಿ ಕಾರ್ಯಗಳು ಸದಾ ಜಾಗೃತಾವಸ್ಥೆಯಲ್ಲಿ ಇರುತ್ತವೆ. ಇಂತಹ ಜಾಗೃತ ಪ್ರಜ್ಞೆಯಿಂದಾಗಿ ಕವಿ ಸಮಕಾಲೀನ ಸಂಗತಿಗಳನ್ನು ಹಾಗೂ ಅಭ್ಯಸಿಸಿದ ಸಾಹಿತ್ಯವನ್ನು ಜೀವ ಪ್ರಜ್ಞೆಯ ತಳಪಾಯದ ಅಡಿಯಲ್ಲಿ ವೀಕ್ಷಿಸಿ ವಿಮರ್ಶೆಗೊಳಪಡಿಸುತ್ತಾನೆ. ಹಾಗೆಯೇ ಕುವೆಂಪು ತಾನು ಕಂಡದ್ದು ಮತ್ತು ತನಗೆ ಸರಿ ಕಂಡದ್ದನ್ನು ಸಮಾಜಕ್ಕೆ ತಲುಪಿಸಬೇಕಾದಾಗ ಪಾತ್ರಗಳನ್ನು ಸೃಷ್ಟಿಸಿ, ಭಾಷಾ ಮಾಧ್ಯಮದ ಮೂಲಕ ಪ್ರಸ್ತುತಪಡಿಸುತ್ತ ವಿಶ್ವಮಾನವ ಧರ್ಮವನ್ನು ಪ್ರತಿಪಾದಿಸುವಲ್ಲಿ ಕುವೆಂಪು ಅಗ್ರಗಣ್ಯ ಸ್ಥಾನದಲ್ಲಿ ನಿಲ್ಲುತ್ತಾರೆ.

**ಅಡಿಟಿಪ್ಪಣಿ:**

೧. ವಿಮರ್ಶೆ–ಸಂಶೋಧನೆ–ಶಾಸನ– ಸಂಸ್ಕೃತಿ (ಸಂ):ಪ್ರೊ. ಶ್ರೀಧರ ಬಿ. ನಾಯಕ, ಪ್ರೊ. ಪ್ರಮೋದ ಆರ್. ನಾಯಕ, ಪು. ೧೭

೨. .ವಿಮರ್ಶೆ–ಸಂಶೋಧನೆ–ಶಾಸನ–ಸಂಸ್ಕೃತಿ(ಸಂ):ಪ್ರೊ. ಶ್ರೀಧರ ಬಿ. ನಾಯಕ, ಪ್ರೊ. ಪ್ರಮೋದ ಆರ್. ನಾಯಕ, ಪು. ೧೯

**ಆಕರ ಗ್ರಂಥಗಳು :**

೧. ಕುವೆಂಪು ಅವರ ನಾಟಕಗಳು: ಡಾ. ಎಚ್.ತಿಪ್ಪೆರುದ್ರಸ್ವಾಮಿ, ಕಾವ್ಯಶ್ರೀ ಪ್ರಕಾಶನ ಮೈಸೂರ, ೨೦೧೦

೨. ಕುವೆಂಪು ನಾಟಕಗಳ ಅಧ್ಯಯನ: ನರಹಳ್ಳಿ ಬಾಲಸುಬ್ರಹ್ಮಣ್ಯ, ಅಂಕಿತ ಪುಸ್ತಕ ಬೆಂಗಳೂರ, ೨೦೧೧

೩. ವಿಮರ್ಶೆ–ಸಂಶೋಧನೆ–ಶಾಸನ–ಸಂಸ್ಕೃತಿ: ಪ್ರೊ. ಶ್ರೀಧರ ಬಿ. ನಾಯಕ, ಪ್ರೊ. ಪ್ರಮೋದ ಆರ್. ನಾಯಕ (ಸಂ), ಪ್ರಸಾರಾಂಗ ಕ.ವಿ.ವಿ. ಧಾರವಾಡ, ೨೦೧೭.

# ದೆವ್ವದ ಕಾಟ ಮತ್ತು ಕುವೆಂಪು ಅವರ ವೈಚಾರಿಕತೆ

ಡಾ.ಸುಜಾತಾ.ಚಲವಾದಿ
ಸಹಾಯಕ ಪ್ರಾಧ್ಯಾಪಕರು
ಶ್ರೀ ಖಾಸ್ಗತೇಶ ಕಲಾ,ವಾಣಿಜ್ಯ ಮತ್ತು ವಿಜ್ಞಾನ
ಮಹಾವಿದ್ಯಾಲಯ, ತಾಳಿಕೋಟಿ

ಕನ್ನಡ ಸಾಹಿತ್ಯಲೋಕ ಕಂಡ ಮಹಾನದಾರ್ಶನಿಕ, ಮಹಾಕವಿ ಕುವೆಂಪು ಅವರು. ಅನೇಕ ವೈಚಾರಿಕ ಕೃತಿಗಳಿಂದ ಸಾಹಿತ್ಯದೊಡಲನ್ನು ತುಂಬಿದ್ದಾರೆ. ಅವರು ಬರೆದ ಎಲ್ಲ ಕೃತಿಗಳೂ ಇಂದಿಗೂ ಚರ್ಚೆಗೆ ಒಳಗಾಗಿವೆ ಹಾಗೂ ಒಳಗಾಗುತ್ತಲೇ ಇವೆ. ಅವರು ಬರೆದ ಸಣ್ಣಕತೆಗಳು ಬಹಳ ಕಡಿಮೆ. ಆದರೆ ಬರೆದದ್ದೆಲ್ಲವೂ ಇಂದಿಗೂ ಕೂಡಾ ಪ್ರಸ್ತುತವಾಗಿರುವಂಥವುಗಳು. ಕವಿ ಕಂಡುಂಡ ಚಿತ್ರಣವನ್ನು ಕತೆಯನ್ನಾಗಿಸಿ ಓದುಗರ ಹಾಗೂ ವಿಮರ್ಶಕರ ಮನವನ್ನು ಗೆದ್ದವರು ಕುವೆಂಪು ಅವರು. ಅವರು ಬರೆದ ಕತೆಗಳು ಹದಿನೇಳು. ಪ್ರಕಟಿತ ಕಥಾ ಸಂಕಲನ "ಸಂನ್ಯಾಸಿ ಮತ್ತು ಇತರ ಕಥೆಗಳು" ಮತ್ತು "ನನ್ನ ದೇವರು ಮತ್ತು ಇತರ ಕಥೆಗಳು". ಎಂಬ ಸಂಕಲನವನ್ನು ಹೊರತಂದಿದ್ದಾರೆ. ಕುವೆಂಪು ಅವರ ಕಥೆಗಳನ್ನು ಓದಿದಾಗ ವಿಮರ್ಶೆಗೆ ಒಳಪಡಿಸಿದಾಗ ಅವರಲ್ಲಿರುವ ಸಾಮರಸ್ಯ ಬದುಕಿನ ಬಗೆಗಿದ್ದ ಪ್ರೀತಿ ನಮಗೆ ಅನಾವರಣವಾಗುತ್ತಾ ಸಾಗುತ್ತದೆ. ಕಂದಾಚಾರ, ಅನಾಚಾರಗಳನ್ನು ಬಯಲಿಗೆಳೆಯುವ ಕಾರ್ಯದಲ್ಲಿ ನಿರತವಾಗುತ್ತವೆ. ಹಾಗೇ ಮೂಢತ್ವವನ್ನು ತೊಡೆದು ಹಾಕುವಂತೆ ಪ್ರಚೋದಿಸುತ್ತವೆ. ವೈಚಾರಿಕತೆಯನ್ನು ಸಾರುತ್ತವೆ. ಹೀಗಾಗಿ ನಾನು ಈ ಪ್ರಬಂಧದಲ್ಲಿ "ಸನ್ಯಾಸಿ ಮತ್ತು ಇತರ ಕತೆಯಲ್ಲಿನ "ದೆವ್ವದ ಕಾಟ"ವೆಂಬ ಕತೆಯನ್ನು ಎತ್ತಿಕೊಂಡು ಅಲ್ಲಿರುವ ಮೂಢನಂಬಿಕೆ ಮತ್ತು ಅಂಧಶ್ರದ್ಧೆಯನ್ನು ಕತೆಗಾರ ಹೇಗೆ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ ಎಂಬುದನ್ನು ವೈಚಾರಿಕತೆಯ ಹಿನ್ನಲೆಯಲ್ಲಿ ಚರ್ಚಿಸಲು ಬಯಸುತ್ತೇನೆ.

'ದೆವ್ವದ ಕಾಟ'ದಲ್ಲಿ ಬರುವ ಮುತ್ತಣ್ಣನ ವ್ಯಕ್ತಿತ್ವವು ಸಣ್ಣತನಕೆ ಇಳಿದುದರ ಪ್ರತಿತಿಯನ್ನು ಹಾಗೂ ಮನುಷ್ಯನ ಲೋಭ ಹಾಗೂ ಕೃತ್ನಜ್ಞತೆಯನ್ನು ಹೇಗೆ ಮರೆಯುತ್ತಾನೆ ಎಂಬುದನ್ನು ಅನಾವರಣಗೊಳಿಸುತ್ತದೆ. ಇಷ್ಟಕ್ಕೆ ನಿಲ್ಲದೆ ಅಲ್ಲಿ ಬರುವ ಪೋಲಿಸನವರ ಪಾತ್ರಗಳ ಮೂಲಕ ಜೋಯಿಸರವರೆಗೆ ನಮ್ಮ ಸಮಾಜದಲ್ಲಿ ಬೇರೂರಿದ್ದ ಅಂಧಶ್ರದ್ಧೆ ಮೂಢನಂಬಿಕೆಗಳ ಅನಾವರಣವನ್ನು ಪಾತ್ರಗಳಲ್ಲಿ ಹಿಡಿದಿಟ್ಟು ವೈಚಾರಿಕ ಹಿನ್ನಲೆಯಲ್ಲಿ ಚರ್ಚೆಗೆ ಒಳಪಡಿಸುವಂತೆ ಮಾಡುತ್ತಾರೆ. ಎಂಬುದನ್ನು ಈ ಎಲ್ಲ ಹಿನ್ನಲೆಯನ್ನು ಇಟ್ಟುಕೊಂಡು ನೋಡುವ ಉದ್ದೇಶ ಮತ್ತು ಮಹತ್ವ ಇದಾಗಿದೆ.

'ದೆವ್ವದ ಕಾಟ' ಕಥಾವಸ್ತು ಅಧಿಕಾರದ ಆಸೆಯಿಂದ ಮಾಡುವ ಅನಾಚಾರವನ್ನು ಮತ್ತು ಮೂಢನಂಬಿಕೆಗೆ ಬಲಿಯಾದ ಜನರ ಕುರಿತದ್ದಾಗಿದೆ. ಈ ಕಥೆಯಲ್ಲಿ ಬರುವ ರಂಗರಾಯರು ಯಜಮಾನನಾದರೆ ಅವರ ಆಳು ಮುತ್ತಣ್ಣ. ಮುತ್ತಣ್ಣ ನವಿಲೂರಿಗೆ ತಾನೇ ಯಜಮಾನನಾಗಬೇಕೆಂಬ ಹುಚ್ಚು ಹಂಬಲ ಅವನಿಗೆ. ಯಜಮಾನ ರಂಗರಾಯರು ಆಳುಗಳನ್ನು ಎಂದಿಗೂ ತನ್ನ ದರ್ಪದಿಂದ ನಡೆಸಿಕೊಂಡ ವ್ಯಕ್ತಿಯಲ್ಲ. ಆದರೆ ಮಂಜಣ್ಣ ಮಾತ್ರ ಯಜಮಾನ ನವಿಲೂರಿಗೆ ಬಂದು ಬಿಡಾರ ಹೂಡಿದರೆ ತನ್ನ ಅಧಿಕಾರಕ್ಕೆ ಕುತ್ತು ಬರುತ್ತದೆ ಎಂದು ವಿಚಾರದಲ್ಲಿ ಮಗ್ನನಾಗಿ ಯಜಮಾನನನ್ನೆ ಊರಿಂದ ಹೊರಹಾಕುವ ಸಂಚನ್ನು 'ದೆವ್ವದ ಕಾಟ'ವೆಂದು ಬಿಂಬಿಸುತ್ತಾನೆ. ದೆವ್ವದ ಕಾಟ ಕತೆಯ ನಿರೂಪಣಾ ಶೈಲಿ ಕತೆಯನ್ನು ಓದಿ ಮುಗಿಸುವವರೆಗೂ ಓದುವವನು ಕೂಡಾ ಪತ್ತೇದಾರಿ ಕೆಲಸವನ್ನು ಮಾಡುವಂತೆ ಕೂತೂಹಲಿಯಾಗುತ್ತಾ ಸಾಗುತ್ತಾನೆ.

ರಂಗರಾಯರು ಊರಿಗೆ ಬಂದ ಒಂದೆರಡು ದಿನದಲ್ಲಿ ರಂಗರಾಯರ ಮನೆಗೆ ನಿತ್ಯವೂ ರಾತ್ರಿ ಹೋತ್ತಲ್ಲಿ ಕಲ್ಲು ಬಿಳಲು ಪ್ರಾರಂಭವಾಗುತ್ತದೆ. ಇದು ದೆವ್ವದ ಕಾಟವೆಂದೇ ಎಲ್ಲರೂ ಅಂದುಕೊಳ್ಳುತ್ತಾರೆ. ಕಲ್ಲನ್ನು ಕಳ್ಳರು ಹೊಡೆಯುತ್ತಿದ್ದಾರೆ ಎಂತಲು ಗುಮಾನೆ ಪ್ರಾರಂಭವಾಗುತ್ತದೆ. ಕಳ್ಳರನ್ನು ಹಿಡಿಯಲು ನವಿಲೂರಿಗೆ ಪೋಲಿಸಿನವರ ಆಗಮನವಾಗುತ್ತದೆ. ಒಂದು ದಿನವಲ್ಲ, ಎರಡು ದಿನವಲ್ಲ, ಪ್ರತಿದಿನ ರಾತ್ರಿಯೆಲ್ಲಾ ರಂಗರಾಯರ ಮನೆಯ ಆಳುಗಳನ್ನು ಕರೆದುಕೊಂಡು ಪೋಲಿಸಿವನರು ಗಸ್ತು ತಿರುಗುತ್ತಾರೆ. ಕಳ್ಳ ಯಾರೆಂಬುದು ಗೊತ್ತಾಗುವುದೇ ಇಲ್ಲ. ಪೋಲಿಸನವರು ಕೂಡಾ ಸಾಕಾಗಿ ಒಂದು ನಿರ್ಧಾರಕ್ಕೆ ಬರುತ್ತಾರೆ. "ಕಲ್ಲೆಸೆಯುವವರು ದೆವ್ವಗಳಲ್ಲದೆ ಮನುಷ್ಯರಲ್ಲವೇ ಅಲ್ಲವೆಂದು ಸಾರಿ ಸಾರಿ ಹೇಳಿದರು. ಮನುಷ್ಯರಾಗಿದ್ದರೆ ಸರ್ವಾಂತರ್ಯಾಮಿಗಳಾದ ಪೋಲಿಸಿನವರಿಂದ ತಪ್ಪಸಿಕೊಳ್ಳುವರೆ? ಏನು ಮಾತು!"೧ ಎಂಬುದನ್ನು ಹೇಳುತ್ತಾರೆ. ಪೋಲಿಸಿನವರ ಈ ನಿರ್ಧಾರವನ್ನು ಗಮನಿಸಿದಾಗ ಕತೆಗಾರ ಅಕ್ಷರವನ್ನು ಕಲಿತ ಸರಕಾರಿ ನೌಕರಿಯಲ್ಲಿದ್ದ ಪೋಲಿಸಿನವರ ಮೂಢತ್ವಕ್ಕೆ ಹೇಗೆ ಒಳಗಾಗಿದ್ದಾನೆ ಎಂಬುದನ್ನು ಪ್ರಚುರಪಡಿಸುತ್ತಾರೆ. ಪೋಲಿಸ ಎಂದ ತಕ್ಷಣ ಅವನು

ಸರ್ವಾಂತರ್ಯಾಮಿಗಳಾಗಲು ಸಾಧ್ಯವೆ? ಎಲ್ಲವೂ ಅವರು ಬಲ್ಲವರೆ? ಎಂಬುದು ಕೂಡಾ ಅಪಹಾಸ್ಯವಾಗಬಹುದು. ಇಂತಹ ಸಣ್ಣ ಸಣ್ಣ ವಿಷಯಗಳು ಕೂಡಾ ಇಲ್ಲಿ ಮಹತ್ವವಾಗುತ್ತದೆ.

ಪೋಲಿಸಿನವರಿಗೆ ಮುತ್ತಣ್ಣ ಹಾಗೂ ಇನ್ನಿತರ ಆಳುಗಳ ಮೇಲೆ ಗುಮಾನೆ ಬಂದರು ಕೂಡಾ ಧಣಿಯಾದವನಿಗೆ ತನ್ನ ಆಳಿನ ಮೇಲೆ ವಿಶ್ವಾಸವಿರುವದರಿಂದ ಸಂಶಯ ಕೂಡಾ ಸುಳಿಯದಾಗುತ್ತದೆ. ಇಲ್ಲಿ ಯಜಮಾನ ಮತ್ತು ಆಳಿನ ನಡುವೆ ಇದ್ದ ಸಂಭಂಧವನ್ನು ಬಿಚ್ಚಿಡುತ್ತದೆ. ಅನೇಕ ಕತೆಗಳಲ್ಲಿ ಓದಿದ ಹಾಗೇ ಯಜಮಾನನೆಂದರೆ ದರ್ಪ, ದೌರ್ಜನ್ಯಗಳಿಗೆ ಆ ಪಾತ್ರ ಹೆಸರಾದವನು ಎನ್ನುವ ಮಟ್ಟಕ್ಕೆ ಆ ಪಾತ್ರಗಳು ತಮ್ಮ ಕಾರ್ಯವನ್ನು ನಿರ್ವಹಿಸುತ್ತವೆ. ಆದರೆ ದೆವ್ವದ ಕಾಟದ ಯಜಮಾನ ಇದಕ್ಕೆ ತದ್ವಿರುದ್ಧವಾಗಿರುವಂಥವನು. ಮಾನವೀಯ ಅಂತಃಕರಣವುಳ್ಳವನಾಗಿ ಹೊರಹೊಮ್ಮಿದ್ದಾನೆ. ಆಳು ಮಂಜಣ್ಣನ ಪಾತ್ರ ಕೂಡಾ ಅಷ್ಟೇ ಪ್ರತಿ ಕತೆಯಲ್ಲಿ ಆಳಾದವನು ಹಿಂಸೆಗೆ ಒಳಗಾದವನೇ ಆಗಿರುತ್ತಾನೆ ಆದರೆ ಇಲ್ಲಿ ಮಾತ್ರ ಸ್ವಾರ್ಥಕ್ಕಾಗಿ ಲಂಪಟನಾನಾಗಿದ್ದು ಕಾಣಿಸುತ್ತದೆ.

ಈ ಕತೆಯ ಇನ್ನೊಂದು ಮುಖ್ಯವಾದ ಭಾಗ ದೆವ್ವದ ಕಾಟವನ್ನು ತಡೆಯಲು ಜೋಯಿಸರ ಮೋರೆ ಹೋಗುವುದು. ಮಂಗನಹಳ್ಳಿಯ ಸಿಂಗಾ ಜೋಯಿಸರು ತಾವು ಮಂತ್ರ ಬಲದಿಂದ ಕಲ್ಲೆಸೆಯುವ ಕಳ್ಳರನ್ನು ನಿಂತಲ್ಲಿಂದ ಅಲುಗಾಡದಂತೆ ಮಾಡಬಲ್ಲೆನೆಂದು ತನ್ನ ಮಂತ್ರ ಶಕ್ತಿಗೆ ಅಷ್ಟೋಂದು ಪವಾಡ ಶಕ್ತಿ ಇದೆ ಎಂಬುದನ್ನು ತನ್ನ ಬಗೆಗೆ ತಾನೇ ಬಡಾಯಿಕೊಚ್ಚಿಕೊಳ್ಳುತ್ತಾನೆ. ಅವನು ಏನು ಮಾಡಿದರು ಕಳ್ಳ ಮಾತ್ರ ಸಿಗಲಿಲ್ಲ. ಅವನ ಮಂತ್ರ ತಂತ್ರಗಳಿಗೆ ಮಾವಿನ ಕಾಯಿ ಕೂಡ ಉದರಲಿಲ್ಲವೆಂಬುದನ್ನು ಇಲ್ಲಿ ಬಹಳ ಮಾರ್ಮಿಕವಾಗಿ ಕಟ್ಟಿಕೊಡುತ್ತಾರೆ. ರಾತ್ರಿ ಒಂಬತ್ತು ಗಂಟೆ "ಜೋಯಿಸರು ಎದ್ದು ನಿಂತು, ಸುತ್ತಲೂ ಕತ್ತಲು ಮುತ್ತಿದ ಬಾಂದಳವನ್ನು ನಿಟ್ಟಿಸಿ ನಾಲ್ದೆಸೆಗಳಿಗೂ ಕೈಮುಗಿದು, ಒಂದು ದೊಡ್ಡ ಮೊಳೆಯನ್ನು ತೆಗೆದುಕೊಂಡು ನೆಲದ ಮೇಲೆ ತಾವು ಬರೆದಿದ್ದ ಒಂದು ಮನುಷ್ಯನ ಎದೆಗೆ ಸರಿಯಾಗಿ ಹೊಡೆದಿಳಿಸಿದರು. ಬಾಯಲ್ಲಿ ತಮ್ಮಷ್ಟಕ್ಕೆ ತಾವೇ "ಹಾಗೆ! ಅಲ್ಲಿ ನಿಂತಿರು!" ಎಂದು ಹೇಳುತ್ತಿದ್ದರು" ಬೆಳಗಾಗಿ ಊರು ಕಾಡಿನ ತುಂಬೆಲ್ಲ ಹುಡುಕಾಡಲು ಪ್ರಾರಂಭ ಮಾಡಿದರು. "ಯಾರೋ ಒಂದಿಬ್ಬರು ಅವರಂತೆಯೇ ಹುಡುಕುತ್ತಿದ್ದ ಮತ್ತಿಬ್ಬರನ್ನು ಕಂಡು ಭ್ರಾಂತಿಯಿಂದ "ಸಿಕ್ಕಿದರು ಕಳ್ಳರು ಸಿಕ್ಕಿದರು?" ಎಂದು ಕೂಗಿಕೊಂಡರು. ಎಲ್ಲರೂ ಆಯೆಡೆಗೆ ನುಗ್ಗಿದರು, ಆದರೇನು? ನಿಷ್ಪ್ರಯೋಜನ! ಕೆಲವರು ಬೈದರು, ಕೆಲವರು ನಕ್ಕರು, ಕೆಲವರು ಕೈಚಪ್ಪಾಳೆ ಹೊಡೆದರು. ಮತ್ತೆ ಕೆಲವರು ತಮ್ಮ ತಮ್ಮಲ್ಲಿಯೆ ಜೋಯಿಸರು ಮೋಸಗಾರನೆಂದು ಗುಸುಗುಸು ಮಾತಾಡಿಕೊಂಡರು. ಮನುಷ್ಯರಂತೆಯೇ ಬೇಟೆಯನ್ನು ಹುಡುಕಿಹುಡುಕಿ ಬಳಲಿದ ಬೇಟೆಯ ನಾಯಿಗಳೂ ಜೋಯಿಸರನ್ನು ಬೈಯುವಂತೆ ಬೊಗಳಿದವು"೨ ಇಲ್ಲಿ ನಾಯಿಗಳು ಕೂಡಾ ಬಿಡಲಿಲ್ಲವೆಂಬ ವಿಡಂಬನೆ ಇದಾಗಿದೆ. ಮನುಷ್ಯನ ಕುತಂತ್ರ ಅಟ್ಟಹಾಸಕ್ಕೆ, ಜನರನ್ನು ಮೌಡ್ಯಕ್ಕೆ ತಳ್ಳುವ ಅನೇಕ ಬಗೆಗಳನ್ನು ಹೇಳ ಹೊರಡುತ್ತಾರೆ. ಹಿಂದೆ ಕೂಡಾ ನಡೆಯುತ್ತಿದ್ದವು ಅಂತಹ ಮೂಢನಂಬಿಕೆಗಳು ಇಂದಿಗೂ ಕೂಡಾ ನಡೆಯುತ್ತಲೇ ಇವೆ. ಮಕ್ಕಳಾಗಲಿಲ್ಲವೆಂಬ ಕಾರಣಕ್ಕೆ ಜೋಯಿಸರ ಮೊರ ಹೊದ ಹೆಣ್ಣಿನ ಮೇಲೆ ದೌರ್ಜನ್ಯಗಳು ನಡೆಯುತ್ತಲೇ ಇವೆ. ವಾಸ್ತು ದೋಷದ ಹೆಸರಲ್ಲಿ ಸುಲಿಗೆಗಳು ನಿರಂತರವಗಿವೆ. ಶ್ರೀಮಂತರಾಗುವ ಭರದಲ್ಲಿ ಕೈಖಾಯಿ ಮಾಡಿಕೊಂಡು ಬೀದಿಗೆ ಬಂದ ಜನರನ್ನು ಇಂದಿಗೂ ಕಾಣುತ್ತೇವೆ. ಲೋಕದಲ್ಲಿ ಇಂತಹ ಜಂಜಡಗಳನ್ನು ಸಾಹಿತ್ಯದ ಮೂಲಕ ಅಸಂಭದ್ಧ ಘಟನೆಗಳನ್ನು ತಡೆಯುವ ಪ್ರಯತ್ನ ಕೂಡಾ ಹೌದು. ಇಲ್ಲಿ ಮನುಷ್ಯನ ಬದುಕಿನೊಂದಿಗೆ ವೈಚಾರಿಕತೆ ಬಹಳ ಮುಖ್ಯವೆಂಬುದು ಜೋಯಿಸರ ಲಂಪಟತನವನ್ನು ಅತ್ಯಂತ ನವಿರಾಗಿ ಹೇಳುತ್ತಾರೆ, ಅಷ್ಟೇ ಅಲ್ಲದೆ ಜೋಯಿಸನನ್ನು ವ್ಯಂಗ್ಯವಾಗಿ ಚಿತ್ರಿಸಿದ್ದನ್ನು ನೋಡುತ್ತೇವೆ.

ಪೋಲಿಸ ಇನಸ್ಪೆಕ್ಟರ್ ಮಹಮದ್ ಹುಸೆ೯ ಸಾಹೇಬರೇ ಖುದ್ದಾಗಿ ತನಿಕೆ ಮಾಡಲು ಬರುತ್ತಾರೆ. ತನಿಖೆ ಮಾಡುವ ಸಮಯದಲ್ಲಿ ಆಳುಗಳ ಮೇಲೆ ಸಂಶಯ ಬಂದು ತಪಾಸಣೆಗೆ ಒಳಪಡಿಸುತ್ತಿದ್ದಾಗ "ಪಕ್ಕದಲ್ಲಿ ಲಾಟೀನು ಹಿಡಿದು ನಿಂತಿದ್ದ ಮುತ್ತಣ್ಣನ ಜೇಬಿಗೆ ಕೈ ಹಾಕಿದರು, ಮುತ್ತಣ್ಣನು ಬೆಚ್ಚಿಬಿದ್ದು ಬೆಳ್ಳಗಾಗಿ ಮೈ ಬೆವರಿ ನಡುಗತೊಡಗಿದನು"೩ ಮುತ್ತಣ್ಣ ತಾನು ಮಾಡುತ್ತಿರುವುದನ್ನು ಮುಗ್ದ ಊರಿನ ಜನತೆಗೆ, ಯಜಮಾನನಿಗೆ ತಿಳಿಯದಂತೆ ವಂಚಿಸುತ್ತಿದ್ದ. ತನ್ನ ಮೇಲೆ ಅನುಮಾನ ಯಾರಿಗೂ ಬರದೇ ಇರಲಿ ಎಂಬುದನ್ನು ಬಹಳ ಶಿಸ್ತಿನಿಂದ ಕಾಪಾಡಿಕೊಂಡು ಬಂದಿದ್ದ. "ರಕ್ತ! ಗುಂಡಿನ ಪಟ್ಟಿನಿಂದ ಸೋರಿದ ನೆತ್ತರು, ತೊಟ್ಟಿಕ್ಕುತ್ತಾ ಹೋಗಿತ್ತು. ಎಲ್ಲರೂ ಅದರ ಜಾಡನ್ನೇ ಹಿಡಿದು ಮುಂಬರಿದರು. ನೆತ್ತರು ಸುಮಾರು ಒಂದು ಫರ್ಲಾಂಗಿನವರೆಗೂ ಕಂಡು ಬಂದು, ಅಲ್ಲಿ ಹರಿಯುತ್ತಿದ್ದ ತೊರೆಯ ನೀರಿನಲ್ಲಿ ನಿಂತುಬಿಟ್ಟಿತು"೪ ಹೇಗೆ ತನ್ನ ಮೇಲೆ ಯಾರಿಗೂ ಸಂಶಯ ಬರದಂತೆ ತನ್ನನ್ನು ತಾನು ಕಾಪಾಡಿಕೊಂಡಿದ್ದ. ಇದೆಲ್ಲ ನಡೆದ ಆ ದಿನ ಮಂಜಣ್ಣ ಕೋಳಿ ಕೊಯ್ದು ಮನೆಯೆಡೆಯಿಂದ ಹಳ್ಳದ ದಂಡೆಯವರೆಗೆ ನೆತ್ತರು ತೊಟ್ಟಿಕ್ಕಿ ಚೆಲ್ಲುವಂತೆ ಮಾಡಿದ್ದರೂ ಆಶೆ ಕೈಗೂಡಲಿಲ್ಲ!. ಅವನದ್ದು ದುರಾಶೆಯಾಗಿತ್ತು. ರಾಯರು ಬರುವ ಸುದ್ದಿ ತಿಳಿದದ್ದೇ ತಡ ಅವನ ಯಜಮಾನಿಕೆಯ ಬದಲಾಗಿ ತಾನು ಊರಿನವರೊಂದಿಗೆ ಆಳಾಗಿ ದುಡಿಯುವುದು ಅವನಿಗೆ ಸಹ್ಯವಾಗಿರಲಿಲ್ಲ. ಹೀಗಾಗಿ ಅವನು ಇಂತಹ ಕೃತ್ಯಕ್ಕೆ ಇಳಿಯಬೇಕಾಯಿತು. ಇಲ್ಲಿ ಯಜಮಾನನಾಗುವ ಭರದಲ್ಲಿ ತನ್ನನ್ನೇ ತಾನು ಬೆತ್ತಲು ಗೊಳಿಸಿಕೊಂಡದ್ದು ಮಂಜಣ್ಣ ಮರೆತೆಬಿಟ್ಟಿದ್ದ. ಜನರಲ್ಲಿ ದೆವ್ವ ಎಂದರೆ

ಸಹಜವಾಗಿಯೆ ಭಯ ಭೀತಿಗಳು ಉಂಟೆಂದು ಗೊತ್ತಿದ್ದ ಮಂಜಣ್ಣನ ತಂತ್ರಗಾರಿಕೆ ಹೀಗೆಲ್ಲ ಅನಾಹುತಕ್ಕೆ ಕಾರಣವಾಯಿತು ಎಂಬುದನ್ನು ಕತೆಗಾರ ನಿರೂಪಿಸುತ್ತಾನೆ.

ಒಟ್ಟಾರೆ ಕುವೆಂಪುರವರ ಸಾಹಿತ್ಯ ಓದುವದೆಂದರೆ ಅದೊಂದು ವೈಚಾರಿಕ ಹೊಳಹುವೇ ಸರಿ. ಮೂಢನಂಬಿಕೆ, ಮಾಟ ಮಂತ್ರ, ತಂತ್ರಗಳಿಗೆ ಇಲ್ಲಿ ಜಾಗವಿಲ್ಲ. ಅವರ ಪ್ರತಿಯೊಂದು ಸಾಹಿತ್ಯದಲ್ಲಿಯೂ ಕೂಡಾ ವೈಚಾರಿಕ ಪ್ರಜ್ಞೆಯನ್ನು ಜಾಗೃತಗೊಳಿಸುವಂತೆ ಮಾಡುತ್ತದೆ ಎಂದೇ ಹೇಳಬಹುದು.

**ಅಡಿಟಿಪ್ಪಣಿಗಳು:**

೧. ಸನ್ಯಾಸಿ ಮತ್ತು ಇತರ ಕಥೆಗಳು ಪುಟ.ಸಂಖ್ಯೆ: ೭೩

೨. ಸನ್ಯಾಸಿ ಮತ್ತು ಇತರ ಕಥೆಗಳು ಪುಟ.ಸಂಖ್ಯೆ: ೭೪

೩. ಸನ್ಯಾಸಿ ಮತ್ತು ಇತರ ಕಥೆಗಳು ಪುಟ.ಸಂಖ್ಯೆ: ೭೭

೪ ಸನ್ಯಾಸಿ ಮತ್ತು ಇತರ ಕಥೆಗಳು ಪುಟ.ಸಂಖ್ಯೆ: ೭೨

**ಆಕರಗ್ರಂಥ:**

1. ಸನ್ಯಾಸಿ ಮತ್ತು ಇತರ ಕಥೆಗಳು, ಪುಸ್ತಕ ಪ್ರಕಟಣೆ: ೧೯೯೬ ಪ್ರಕಾಶಕರು: ಉದಯರವಿ ಪ್ರಕಾಶನ ವಾಣಿವಿಲಾಸ ಪುರಂ ಮೈಸೂರು

# ಕುವೆಂಪು ಪ್ರಕೃತಿ ಚಿಂತನೆ

**ಮಹೇಶ್ವರಿ ಎಸ್. ನಾಯ್ಕ**
**ಕನ್ನಡ ಉಪನ್ಯಾಸಕಿ**
**ಶಿವಾಜಿ ಕಲಾ ಮತ್ತು ಬಿಸಿಎ ಬಾಡ**
**ಕಾರವಾರ**

## ಪ್ರಸ್ತಾವನೆ.

ಕುವೆಂಪು ಕನ್ನಡದ ಮೇರು ಪ್ರತಿಭೆ, ೨೦ನೇ ಶತಮಾನದಲ್ಲಿ ಕಂಡ ಯುಗದ ಕವಿ. ಕುವೆಂಪುರವರನ್ನು ಮುಖ್ಯವಾಗಿ ಪ್ರಕೃತಿ ಕವಿ ಎಂದೇ ಕರೆಯಲಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿರುವ ಕವಿ. ಭಾವಗೀತೆ, ಕಥೆ, ಕಾದಂಬರಿ, ಕಥನ,ನಾಟಕ,ಜೀವನ ಚರಿತ್ರೆ, ವಿಮರ್ಶೆ ವೈಚಾರಿಕ, ಪ್ರಬಂಧ ಮೀಮಾಂಸೆ ಮಹಾಕಾವ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಕುವೆಂಪು ಬರಹಗಳು ಮುಂಚೂಣಿಯಲ್ಲಿವೆ.

ಪ್ರಕೃತಿ ಕವಿ ಎಂದೇ ಕರೆಸಿಕೊಳ್ಳುವ ಕುವೆಂಪು ಮಲೆನಾಡಿನ ಗಿಡ ಮರ ಪಕ್ಷಿ ಹೂ ಹಸಿರು ವನಗಳು ನದಿ ಗೊಬ್ಬರ ಹೀಗೆ ಎಲ್ಲವನ್ನು ಕಾವ್ಯದ ವಸ್ತುವಾಗಿ ತಂದು ಅದರ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ. ಪ್ರಕೃತಿಗೆ ಸೊಬಗನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ಕುವೆಂಪುರವರು ಬರೆದ ಕವನ ಓದಿದಾಗ ಪ್ರಕೃತಿಯೇ ಕಣ್ಣು ಎದುರಿಗೆ ನಿಂತ ಹಾಗೆ ಭಾಸವಾಗಿತ್ತದೆ. ಪಕ್ಷಿಕಾಶಿ, ಕೊಳಲು, ಕಲಾ ಸುಂದರಿ ಕವನಸಂಕಲನಗಳಲ್ಲಿ, ಕಾನೂರು ಹೆಗ್ಗಡತಿ ಮಲೆಗಳಲ್ಲಿ, ಮದುಮಗಳು ಕಾದಂಬರಿಗಳಲ್ಲಿ, ಅವರ ಬೆರಳಿಗೆ ಕೊರಳ್ ನಾಟಕದಲ್ಲಿ ಹಾಗೂ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯಗಳಲ್ಲಿ ಪ್ರಕೃತಿಯ ವರ್ಣನೆ ಮನೋಹರವಾಗಿದೆ. ಪ್ರಕೃತಿ ಕೂಡ ಅವರ ಕೆಲವೊಂದು ಕೃತಿಗಳಲ್ಲಿ ಒಂದು ಪಾತ್ರವಾಗಿ ಕಾರ್ಯ ನಿರ್ವಹಿಸುವ ನಿದರ್ಶನಗಳನ್ನು ಕಾಣಬಹುದು.

ಪ್ರಮುಖ ಪದಗಳು: ಪ್ರಕೃತಿ, ಮೇರು, ಮನೋಹರ, ನೇಸರ

## ಪರಿಚಯ

ಕುವೆಂಪುರವರಂತಹ ಅಸಾಮಾನ್ಯ ಪ್ರತಿಭೆಯ ಕವಿಗಳು ನಮ್ಮಲ್ಲಿ ಬಹಳವಿಲ್ಲ. ಒಬ್ಬ ಮಹಾಕವಿಯ ಜನ್ಮ ನಮ್ಮ ನಾಡಿನ ಪುಣ್ಯ ವಿಶೇಷ. ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು ಕರ್ನಾಟಕದ ಹೃದಯದಂತಿರುವ ರುದ್ರರಮಣೀಯ ಮಲಾನಾಡಿನ ಕುಪ್ಪಳ್ಳಿ ಗ್ರಾಮದವರು. ಶ್ರೀಯುತರ ತಂದೆ ವೆಂಕಪ್ಪನವರು. ತಾಯಿ ಹಿರಿಕೊಡಿಗೆ ಗ್ರಾಮದ ಸೀತಮ್ಮನವರು. ಸೂರ್ಯ ಸೌಂದರ್ಯವೇ ಎರಚಾಡುತ್ತಿರುವ ಗಿರಿವನಗಳ ನೆಲೆಯಾದ ಮಲೆನಾಡಿನ ಕುಪ್ಪಳ್ಳಿಯ ಉಪ್ಪರಿಗೆಯೇ ಕುವೆಂಪುರವರ ಪ್ರಾರಂಭದ ಪಾಠಶಾಲೆ. ಐಗಳ ಮರಳ ಮೇಲೆ ಅಕ್ಷರಗಳನ್ನು ತಿದ್ದಿಸಿ ಕಲಿಸಿದರು. ಮಾಧ್ಯಮಿಕ ಶಾಲಾ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲಿ ಪಡೆದರು. ಕುವೆಂಪು ಶಾಲೆಯಲ್ಲಿ ಕಲಿತದಕ್ಕಿಂತ ಹೊರಗೆ ಕಲಿತದ್ದೇ ಹೆಚ್ಚು. ಪ್ರಕೃತಿಯಿಂದ ಅಪಾರ

"ಸಿರಿ ಬನ ದೇವಿಯ ಬೊಕ್ಕಸದಿಂದ
ಕದ್ದವು ಕೆಲವು ಹಾಡುಗಳು;
ಸುಂದರ ಋತುಗಳ ಸಿರಿಗೈಯಿಂದ
ಸುಲಿದವು ಕೆಲವಿವು ಹಾಡುಗಳು:
ನೇಸರ ಚಂದಿರ ತಾರೆಗಳಿಂದ
ಕೆಲವರು ಭಿಕ್ಷೆಯ ಬೇಡಿದೆನೆ;
ಬೈಗಿನ ಹೆಣ್ಣನು, ಬೆಳಗಿನಹೆಣ್ಣನು
ಕಾಡಿಸಿ ಕೆಲವನು ಕುಡಿದೆನು."

ಈ ಕವನವನ್ನು ಓದಿದವರಿಗೆ ಕುವೆಂಪುರವರು ಪ್ರಕೃತಿಯ ಆರಾಧಕ, ಚಿಂತಕ ಎಂದು ತಿಳಿಯುವುದು, ಪ್ರಕೃತಿ ಸೌಂದರ್ಯೋಪಾಸಕರಾಗಿ, ಆಧ್ಯಾತ್ಮ ದೃಷ್ಟಿಯಿಂದ ಬದುಕನ್ನು ಚೊಕ್ಕ ಬಂಗಾರವಾಗಿಸಿ, ಮಲೆನಾಡಿನ ಸಹ್ಯಾದ್ರಿ ಉತ್ತುಂಗ ಶೃಂಗವಾಗಿ ಬೆಳೆದ ಕವಿ ನಿಸರ್ಗದ ಶಿಶು, ಪ್ರಕೃತಿಯ ದರ್ಶಕ, ರಸಯೋಗಿ ಕವಿಯಾಗಿದ್ದಾರೆ. ಪ್ರಕೃತಿ ಅವರ ಬಾಳಿನ ಹಾಗೂ ಕಾವ್ಯ ಜೀವನದ ಅವಿಭಾಜ್ಯ ಅಂಗವೇ ಆಗಿ ಪರಿಣಮಿಸಿದೆ. ಕುವೆಂಪುರವರ ಪ್ರಕೃತಿ ಪ್ರೇಮ ಅಪಾರವಾಗಿದೆ.

## ಉದ್ದೇಶಗಳು:–

೧. ಕುವೆಂಪುರವರಿಗೆ ಪ್ರಕೃತಿ ಬಗ್ಗೆ ಇರುವ ಆಸಕ್ತಿಯನ್ನು ಗಮನಿಸುವುದು.
೨. ಪ್ರಕೃತಿ ಮಹತ್ವ ಗುರುತಿಸುವುದು.
೩. ಕುವೆಂಪು ಮತ್ತು ಪ್ರಕೃತಿಗೆ ಇರುವ ನಂಟನ್ನು ಅರಿಯುವುದು.
೪. ಕುವೆಂಪುರವರ ಪ್ರಕೃತಿಯ ಸಮಗ್ರ ಚಿಂತನೆ ಅರಿಯುವುದು.
೫. ಕುವೆಂಪುರವರಿಗೆ ನಿಸರ್ಗದ ಮೇಲೆ ಇರುವ ಪ್ರೀತಿ, ಗೌರವ, ಕಾಳಜಿಯನ್ನು ತಿಳಿಯುವುದು.

**ಸಂಶೋಧನಾ ವಿಧಾನ:–**

ಈ ಲೇಖನವು ದ್ವಿತೀಯ ಮಾಹಿತಿಯನ್ನು ಆಧರಿಸಿದೆ, ಈ ಲೇಖನವು ಪ್ರಬಂಧ, ದಿನಪತ್ರಿಕೆ, ಮಂಡಿಸಿದ್ದ ಲೇಖನ ಇತ್ಯಾದಿಗಳನ್ನು ಆಧರಿಸಿದೆ.

**ಪ್ರಕೃತಿ ಚಿಂತನೆ**

ಕುವೆಂಪು ಅವರನ್ನು ಕಂಡ ವಿದೇಶಿ ಮಹಿಳೆಯೊಬ್ಬಳು "ಕುವೆಂಪು ಅವರನ್ನು ಕಂಡ ಮೇಲೆ ಬೇರೆ ಯಾರನ್ನು ನೋಡಬೇಕಾಗಿಲ್ಲ. ಅವರ ವಿಶ್ವಮಾನವ ಸಂದೇಶವನ್ನು ಓದಿದ ಮೇಲೆ ಬೇರೆ ಏನನ್ನು ಓದಬೇಕಾಗಿಲ್ಲ ಎಂದು ಉದ್ಗರಿಸಿದ್ದಾಗಿ ಹೇಳಲಾಗಿದೆ. ಮಲೆನಾಡಿನ ದುರ್ಗಮ ಅರಣ್ಯದಲ್ಲಿ ಸ್ವಚ್ಛಂದವಾಗಿ ಓಡಾಡಿ ಬೆಳೆದ 'ರಸಿಕ ಧೀರ' ಕುವೆಂಪು ಆಂಗ್ಲ ಕವಿ ವರ್ಡ್ಸ್ ವರ್ತ್ ನಂತೆ ಮುಖ್ಯವಾಗಿ ಪ್ರಕೃತಿ ಕವಿ. ಒಂದು ರೀತಿಯಲ್ಲಿ ಸಹ್ಯಾದ್ರಿ ಶೃಂಗದಿಂದ ಇಳಿದು ಬಂದ ಕಾವ್ಯಗಂಗೆ' ಯೇ ಅವರು. ಸ್ವರ್ಗದ ಅನಂತ ಮುಖಗಳನ್ನು ಕಂಡು ಆನಂದಿಸಿ ಅನುಭವಿಸಿ ದೀಪ್ತಗೊಂಡ ಅವರ ಪ್ರತಿಭೆಯಿಂದ ಹೊರಹೊಮ್ಮಿ ಬಂದಿರುವ ಗೀತಗಳಲ್ಲಿ ನಿಸರ್ಗಗೀತಗಳೇ ಹೆಚ್ಚು ಮಹತ್ವಪೂರ್ಣವಾಗಿವೆ. ಹೆಚ್ಚು ಕಡಿಮೆ ಅವರ ಎಲ್ಲಾ ಸೃಜನಾತ್ಮಕ ರಚನೆಗಳಲ್ಲಿ ನಿಸರ್ಗ ಪ್ರಧಾನವಾಗಿ ಕಾಣಿಸಿಕೊಳ್ಳುತ್ತದೆ. ಕುವೆಂಪುರವರ ನಿಸರ್ಗಗೀತೆಗಳನ್ನು ಓದಿದಾಗ ಪ್ರಕೃತಿಯ ಬಗ್ಗೆ ಅವರಿಗಿದ್ದ ಕಾಳಜಿ, ಚಿಂತನೆ ಗೊತ್ತಾಗುತ್ತದೆ.

**ಕುವೆಂಪು ದೃಷ್ಟಿಯಲ್ಲಿ ಪ್ರಕೃತಿ**

ನಿಸರ್ಗದ ಆವರಣ ಸಾಮಾಜಿಕ ವಿಷಮತೆಯಿಂದ ವಿಮುಕ್ತವಾಗಿರುವುದೇ ಅನನ್ಯವಾದ ಅವರ ನಿಸರ್ಗ ಪ್ರೀತಿ ಕಾರಣ. ಅಲ್ಲದೆ ಅವರ ದೃಷ್ಟಿಯಲ್ಲಿ ನಿಸರ್ಗ ಕಲಾ ಸುಂದರಿ. ಮಾನವನ ಜೀವನದ ಆಗುಹೋಗುಗಳ ಮೇಲೆ ಸರ್ವಾಧಿಕಾರವನ್ನಿಟ್ಟುಕೊಂಡಿರುವ ಚೈತನ್ಯಮೂರ್ತಿ. ಆಕೆಯ ವೈವಿಧ್ಯಮಯ ಸೌಂದರ್ಯದಿಂದ ಪ್ರಭಾವಿತರಾದ ಅವರು ತನ್ಮಯತೆಯಿಂದ ಆ ಚೆಲುವನ್ನು ಅಂತರಂಗದಲ್ಲಿ ಗುಪ್ತಗಾಮಿಯಾಗಿರುವ ನಿತ್ಯ ಚೈತನ್ಯವನ್ನು ಕಂಡ ಕವಿ.

**ಕುವೆಂಪುರವರ ಪ್ರಕೃತಿ ಪ್ರೇಮ.**

ಕುವೆಂಪುರವರಿಗೆ ಚಿಕ್ಕಂದಿನಿಂದಲೇ ಮಲೆನಾಡಿದ ಪರಿಸರದ ಮೇಲೆ ಅಪಾರವಾದ ಪ್ರೇಮ. ಅವರ ಪರಿಸರ ಪ್ರೀತಿಯೇ ಅವರ ಕಾವ್ಯದಲ್ಲಿ ಜೀವಂತವಾಗಿ ಮೇಳೈಸಿದೆ. ಕುವೆಂಪುರವರ ಎರಡು ಕಾದಂಬರಿಯಲ್ಲಿ ಮಲೆನಾಡಿನ ಬದುಕನ್ನು ಚಿತ್ರಿಸಿದ್ದಾರೆ. ಹೀಗೆ ಚಿತ್ರಿಸುವಾಗ ಇದು ಸೌಂದರ್ಯ ವರ್ಣನೆ, ಇದು ಕಾಡು ವರ್ಣನೆ, ಸಂಪ್ರದಾಯ ವರ್ಣನೆ ಎಂದು ವಿಭಾಗಿಸಿಲ್ಲ. ಕುವೆಂಪು ಸಾಹಿತ್ಯದಲ್ಲಿ ಪರಿಸರ ಎಂದ ಕೂಡಲೇ ನಮ್ಮ ಮನಸ್ಸಿನಲ್ಲಿ ಮೂಡುವುದು ಅಲ್ಲಿನ ಗಿಡಮರಬಳ್ಳಿಗಳು, ನದಿ ತೊರೆಗಳು, ಬೆಟ್ಟ ಗುಡ್ಡಗಳು, ಪ್ರಾಣಿ–ಪಕ್ಷಿಗಳು. "ಮಲೆಗಳಲ್ಲಿ ಮದುಮಗಳು" ಕಾದಂಬರಿಯಲ್ಲಂತೂ ಪ್ರಕೃತಿಯೇ ಒಂದು ಪಾತ್ರದ ರೀತಿಯಲ್ಲಿ ಮೂಡಿ ಬಂದಿದ್ದೆ. ಇವೆಲ್ಲವೂ ಕಾದಂಬರಿಕಾರನ ಪ್ರಕೃತಿ ಪ್ರೇಮವನ್ನು ಬಿಂಬಿಸುತ್ತವೆ. ಮಲೆನಾಡಿನ ಬನಗಳು ಕುವೆಂಪು ಅವರ ಸಾಹಿತ್ಯವನ್ನು ಇನ್ನು ಆಪ್ತವಾಗಿಸಿ ಬಿಡುತ್ತದೆ. ಮಲೆನಾಡಿನ ಸೌಂದರ್ಯಕ್ಕೂ ಕುವೆಂಪು ಅವರ ಸಾಹಿತ್ಯಕ್ಕೂ ಅದೇನು ಅವಿನಾಭಾವ ಸಂಭಂಧ ಇದೆ.

ಸದ್ದಿರದಪಸುರೊಡೆಯ ಮಲೆನಾಡ ಬನಗಳಲ್ಲಿ,
ಹರಿವ ತೊರೆಯೆಡೆಯಲ್ಲಿ ಗುಡಿಸಲೊಂದಿರಲಿ,
ಅಲ್ಲಿ ಗಿಳಿ ಗೊರವಂಕ ಕೋಗಿಲೆಗಳಿಂಚರವು,
ಕಲಿಯು ಅಲೆ ಅಲೆಯಾಗಿ ಕೇಳಿಬರುತರಲಿರಲಿ.

ಎಂಬ ಕವನದಲ್ಲಿ ಇಡೀ ಮಲೆನಾಡನ್ನೆ ಮುದ್ದಾಗಿ ಕಾಣಿಕೆಯಾಗಿ ನೀಡಿದ್ದಾರೆ. ಹೀಗೆ ಅವರ ಕವನಗಳಲ್ಲಿ ನಮ್ಮನ್ನು ಆ ಪ್ರಕೃತಿ ಮಡಿಲಿಗೆ ಬರೆದುಕೊಂಡು ಹೋಗಿ ಬಿಡುತ್ತಾರೆ. ಈ ಹಿನ್ನಲೆಯಲ್ಲಿ ನಿಷ್ಕಲ್ಮಶ ಪ್ರಕೃತಿಯಂತೆ ನಿಷ್ಕಲ್ಮಶ ವ್ಯಕ್ತಿತ್ವ ಅವರದ್ದಾಗಿದೆ. ಅವರ ಸಾಹಿತ್ಯದಲ್ಲಿ ಎಲ್ಲೂ ದೋಷ ಕಾಣದೆ 'ರಾಷ್ಟ್ರಕವಿ'ಯಾದರು. ಪರಿಸರ ಸಕಲ ಜೀವಿಗಳಿಗೂ ಆಸರೆ ನೀಡುವಂತೆ ಏನಾದರೂ ಆಗು ಮೊದಲು ಮಾನವನಾಗು ಎಂದು ಸಂದೇಶವನ್ನು ಸಾರಿದರು.

**ಕುವೆಂಪುರವರ ದೃಷ್ಟಿಯಲ್ಲಿ ಸೂರ್ಯೋದಯ**

ಕುವೆಂಪು ಸೂರ್ಯೋದಯ ವಿವಿಧ ಸ್ವರಗಳಲ್ಲಿ ವಿವಿಧ ಋತುಗಳಲ್ಲಿ ನೋಡಿ ಅದರ ಸೌಂದರ್ಯವನ್ನು ನಮಗೆ ತಮ್ಮ ಕಾವ್ಯದಲ್ಲಿ ದರ್ಶನ ಮಾಡಿದ್ದಾರೆ.

ಉದಾಹರಣೆ:– ಅದೆ ಅಮೃತ ಹಣ್ಣೋ
ಶಿವ ಕಾಣದ ಕವಿ ಕುರುಡನೋ
ಶಿವ ಕಾವ್ಯದ ಕಣ್ಣೋ

ಅಂದರೆ ಸೂರ್ಯೋದಯ ಮತ್ತು ಚಂದ್ರೋದಯ ಪ್ರಕೃತಿಯ ವ್ಯಾಪಾರವಲ್ಲ. ಅದೊಂದು ಅಸಾಧಾರಣ ಆನಂದಮಯ ಘಟನೆ. ಇದನ್ನು ಅರಿಯದವನು ಕಣ್ಣಿದ್ದು ಕುರುಡುನಂತೆ ಎನ್ನುತ್ತಾರೆ. ಪ್ರಕೃತಿಯಲ್ಲಿ ಭಗವಂತವನ್ನು ಕಂಡ ಮಹಾಕವಿಕುವೆಂಪು. ಆನಂದಮಯ ಈ ಜಗ ಹೃದಯಃಗೀತೆಯಲ್ಲಿ ಕವಿಗಳು ಈ ಜಗತ್ತಿನ ಎಲ್ಲಾ ಆಗು ಹೋಗುಗಳ ಮೂಲವು ಶಿವನೆಂದು ಭಾವಿಸುತ್ತಾರೆ. ಹಸುರಿನಿಂದ ನಳನಳಿಸುವ ಸಹ್ಯಾದ್ರಿಯಂತಹ ಬೆಟ್ಟಗಳು, ಅರಣ್ಯಗಳು ಭೋರ್ಗರೆವ ಸಾಗರ, ನೀಲಿ ಆಕಾಶ, ಧುಮ್ಮಿಕ್ಕುವ ಜಲಧಾರೆ, ಸೋನೆ ಮಳೆ, ಹಕ್ಕಿಗಳ ಚಿಲಿಪಿಲಿ, ಮೋಡಗಳ ಗರ್ಜನೆ, ಹಾಡುವ ಕೋಗಿಲೆಗಳ ಕಂಠಸಿರಿ– ಹೀಗೆ ಪ್ರಕೃತಿಯ ಪ್ರತಿ ಸೌಂದರ್ಯದಲ್ಲೂ ಶಿವನ ಹೃದಯ ವಿಸ್ತರಿಸಿದೆ ಎಂದು ಕವಿ ಉನ್ಮತ್ತನಾಗಿ ಹಾಡಿದ್ದಾನೆ. ಪ್ರಕೃತಿಯಲ್ಲಿ ಸಾಧಾರಣವಾಗಿ ಸಂಭವಿಸುವ ಸೂರ್ಯೋದಯ ಚಂದ್ರೋದಯವೂ ದೇವನ ದಯೆ ಎಂದಿದ್ದಾರೆ.

## ಉಪಸಂಹಾರ

ಕುವೆಂಪುರವರ ಜಡ ಚೈತನ್ಯಗಳ ನಡುವಿನ ವ್ಯತ್ಯಾಸವನ್ನು ಹೇಳುತ್ತಲೇ ಅವುಗಳ ನಡುವಿನ ಸೌಮ್ಯವನ್ನು ಹೇಳಬಲ್ಲವರು. ಹೀಗಾಗಿ ಅದ್ವೈತ ಕಲ್ಪನೆ ಏಕಕಾಲದಲ್ಲಿ ಎದ್ದು ಕಾಣುವ ಅಂಶವೆಂದರೆ ಸೌಂದರ್ಯ ಮತ್ತು ಚೈತನ್ಯ. ಪ್ರಕೃತಿ ಸೌಂದರ್ಯದಿಂದ ಆನಂದ ಮತ್ತು ಚೈತನ್ಯದಿಂದ ಶಕ್ತಿ ದೊರೆಯುತ್ತದೆ ಎನ್ನುವುದು ಕವಿಯ ನಂಬಿಕೆ. ಪ್ರಕೃತಿ ಸಾನ್ನಿಧ್ಯದಿಂದ ಸ್ಫೂರ್ತಿಯನ್ನು ಪಡೆದೇ ಅವರು ಕೃತಿ ರಚನೆ ಮಾಡಿದ್ದಾರೆ. ಕಾದಂಬರಿ ಕ್ಷೇತ್ರಕ್ಕೆ ಅವರು ನೀಡಿರುವ ಮಲೆನಾಡಿನ ಮಹತ್ತರ ಕಾಣಿಕೆಗಳಲ್ಲಿ ಮಲೆನಾಡು ನಿಜವಾಗಿಯೂ ನಮ್ಮ ಕಣ್ಣ ಮುಂದೆ ಕುಣಿಯುತ್ತದೆ. ಮಲೆನಾಡಿನ ಜೀವನದ ಎಲ್ಲಾ ಮುಖಗಳನ್ನು ಸುಂದರವಾಗಿ ಬಹು ಆಯಾಮಗಳಲ್ಲಿ ಸೆರೆಹಿಡಿದಿರುವ ಅವರ ಕಾದಂಬರಿಗಳು ಪ್ರಾದೇಶಿಕತೆಯ ಸೀಮಿತಗಳನ್ನು ಮೀರಿ ನಿಂತು ನಮ್ಮ ಗಮನವನ್ನು ಸೆಳೆಯುತ್ತವೆ.

## ಆಕರ ಗ್ರಂಥಗಳು

೧) ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಬಂಧ; ಎಸ್, ಅನಂತನಾರಾಯಣ
೨) ಕುವೆಂಪು ಸಮಗ್ರ ಕಾವ್ಯಃ ಕನ್ನಡ ವಿಶ್ವ ವಿದ್ಯಾಲಯ
೩) ಕುವೆಂಪು ದರ್ಶನ ಮತ್ತು ಸಂದೇಶ ದೇ.ಜೆ.ಗೌ
೪) ಉಡಿಂಣಿಠಿ ಂಜಿ ಏಟಿಣಜಡಿಟಿಚಿಣುಂಟಿಚಿಟ ರಿಂಣಡಿಟಿಚಿಟ

## ಪರಾಮರ್ಶನ ಗ್ರಂಥಗಳು

೧) ಕುವೆಂಪುಃ ಟಾ. ಪ್ರಧಾನ ಗುರುದತ್ತ ಮತ್ತು ಹಾ,ಮಾ,ನಾಯಕ.
ಪ್ರಕಾಶಕರುಃ ಕರ್ನಾಟಕ ಪಬ್ಲಿಕೇಶನ್ ಪ್ರೈವೇಟ್ ಲಿಮಿಟೆಡ್. ಮುದ್ರಣ ೨೦೦೧
೨) ಸಮಗ್ರ ವಿಮರ್ಶ ಸಾಹಿತ್ಯ ಸಂಪುಟ ೨ ಪ್ರೊ॥ ಎಲ್.ಎಸ್, ಶೇಷಗಿರಿರಾವ್
ಪ್ರಕಾಶಕರುಃ ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು
೩) ಕನ್ನಡ ಸಾಹಿತ್ಯ ಲೋಕದ ಸಾಕ್ಷಿ ಪ್ರಜ್ಞೆಗಳು : ಡಾ,ಬಿ,ಎಸ್, ತಲ್ವಾಡಿ.
ಪ್ರಕಾಶಕರು: ಶ್ರೀ ಅನ್ನಪೂರ್ಣ ಪ್ರಕಾಶನ.

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಜಲಗಾರ ನಾಟಕ ಮತ್ತು ವಿಶ್ವಮಾನವ ಪರಿಕಲ್ಪನೆ

**ಡಾ. ಶಿವಶರಣಪ್ಪ ಪಿ.ಹೆಚ್. ಕೋಡ್ಲಿ**
**ಕನ್ನಡ ಉಪನ್ಯಾಸಕರು**
**ಗು.ವಿ. ಸ್ನಾತಕೋತ್ತರ ಕೇಂದ್ರ**
**ಬಸವಕಲ್ಯಾಣ**

ಕನ್ನಡ ವರ್ಡ್ಸ್‌ವರ್ತ್ ಎಂದೇ ಹೆಸರಾದ ಕವಿ ಕುವೆಂಪುರವರು. ಹತ್ತನೆಯ ಶತಮಾನಕ್ಕೆ ಆದಿಕವಿ ಪಂಪ, ಹೊಸಗನ್ನಡ ಸಾಹಿತ್ಯಕ್ಕೆ ಆದಿಕವಿ ಕುವೆಂಪುರವರು. ಕುವೆಂಪುರವರ ಮೊಟ್ಟಮೊದಲ ನಾಟಕ ಜಲಗಾರ. ಎಂ.ಎ. ವಿದ್ಯಾರ್ಥಿಯಾಗಿದ್ದಾಗಲೇ ಬರೆದ ನಾಟಕವಿದು. ಈ ನಾಟಕ ಗಾತ್ರದಲ್ಲಿ ಚಿಕ್ಕದಾಗಿದ್ದರೂ, ವಸ್ತು ವಿಷಯದಲ್ಲಿ ಹಿರಿದಾಗಿದೆ.

ಜಲಗಾರ ನಾಟಕ ಕೇವಲ ೦೨ ದೃಶ್ಯಗಳ ೨೬ ಪುಟಗಳ ಒಂದು ಚಿಕ್ಕ ನಾಟಕ. ಆದರೆ ಇಲ್ಲಿರುವ ವಿಷಯ ದೇವರು–ಮಾನವ, ಕೆಳವರ್ಗ ಮತ್ತು ಮೇಲ್ವರ್ಗ ಎಂಬ ಭಿನ್ನಾಭಿಪ್ರಾಯಗಳ ಮೂಲಕ ನಾಟಕ ಪ್ರಾರಂಭವಾಗುತ್ತದೆ. ದಲಿತ, ಪಾರ್ವರರ ನಡುವೆ ನಡೆಯುವ ವಾಗ್ವಾದಗಳು ಮಾನವರೆಲ್ಲರೂ ಒಂದೇ ಎನ್ನುವ ವಿಶ್ವಪರಿಕಲ್ಪನೆಯನ್ನು ಜಗತ್ತಿಗೆ ಸಾರುತ್ತದೆ. ಜಲಗಾರ ನಾಟಕ ಕೇವಲ ಹನ್ನೆರಡು ಪಾತ್ರಗಳ ಪುಟ್ಟ ನಾಟಕ. ಜಲಗಾರ ಮತ್ತು ರೈತನ ನಡುವೆ ಮಾತಿನ ಅಂತರ್ಯದಲ್ಲಿ ಇಡೀ ಬ್ರಹ್ಮಾಂಡದ ಕುರಿತು ಚರ್ಚೆ ನಡೆಯುತ್ತದೆ. ದೇವರ ಕುರಿತು ಜಲಗಾರ ಕೇಳುವ ಪ್ರಶ್ನೆ ಇಡೀ ಮಾನವ ಸಮುದಾಯಕ್ಕೆ ಕೇಳುವ ಪ್ರಶ್ನೆಯಾಗಿ ಕಾಣುತ್ತದೆ. ದೇವರನ್ನು ನೀನು ನೋಡಿದಿಯಾ, ಗುಡಿಯಲ್ಲಿ ಕಂಡ್ಯೆಯಾ ಎಂದು ಕೇಳಿದರೆ ಅದಕ್ಕೆ ಘಂಟೆ, ಜಾಗಟೆ, ಡೋಲಿನ ವರ್ಣಗಳ ಬಗ್ಗೆ ವರ್ಣನೆ ಮಾಡಿ ನುಣುಚಿಕೊಳ್ಳಲು ಪ್ರಯತ್ನಿಸಿದರು. ಜಲಗಾರ ಮಾತ್ರ ನೇರವಾಗಿ, ದಿಟ್ಟವಾಗಿ ಪ್ರಶ್ನೆ ಮಾಡುತ್ತಾನೆ.

ಜಲಗಾರ ನಾಟಕ ಮಲೆನಾಡಿನ ಕಾಡಿನ ಪ್ರಕೃತಿ ವರ್ಣನೆಯ ಮೂಲಕ ಭೂದೇವಿ ರಂಗದ ಮೇಲೆ ಪ್ರವೇಶಿಕೆ ಪಡೆದುಕೊಳ್ಳುತ್ತಾಳೆ. ಸೂರ್ಯೋದಯ ಮತ್ತು ಸೂರ್ಯಾಸ್ತಮಾನದ ವರ್ಣನೆ ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ. ತದನಂತರ ರೈತನ ಪ್ರವೇಶದೊಂದಿಗೆ ನಾಟಕಕ್ಕೆ ಮೆರಗು ತಂದುಕೊಡುತ್ತದೆ. ರೈತನಿಂದಲೇ ಇಹವು ರೈತನಿಂದಲೇ ಜಗವು, ರೈತನೇ ದೇಶಕ್ಕೆ ಅನ್ನ ನೀಡುವವನು, ಆತನೇ ದೇಶದ ಬೆನ್ನೆಲುಬು ಎಂದು ವಿಶ್ವಕ್ಕೆ ಸಾರುತ್ತಾರೆ.

> "ತಿರೆಯ ಪೊರೆದವರೆನ್ನ ಸಹಕರ್ಮಿಗಳು, ಧರ್ಮಿಗಳು।
> ನನ್ನವರ ಬಲದಿಂದಲೇ ದೊರೆಗಳಾಳಿದರು
> ಬಾಳಿದರು, ರಣವೀರರರಿಗಳನು ಹೂಳಿದರು
> ಕಬ್ಬಿಗರು ನಲ್ಲಭ್ಯಗಳ ಬರೆದು ಹಾಡಿದರು
> ಶಿಲ್ಪಿಗಳು ಕಲ್ಲಿನಲಿ ಕತೆಗಳನ್ನು ಕೆತ್ತಿದರು
> ........................................ ರೈತರೇ
> ಭೂಮಿಗೊಳಿದಿಹ ಕಾಮದೇನುಗಳು, ರೈತರೇ
> ದರೆಯೊಳಿಹ ಜಂಗಮ ಕಲ್ಪವೃಕ್ಷಗಳು"[೧]

ನನ್ನಿಂದಲೇ ಈ ಜಗತ್ತು ನಡೆಯುತ್ತದೆ. ನನ್ನ ಬಲದಿಂದಲೇ ಈ ರಾಜ್ಯ ರಾಷ್ಟ್ರಗಳನ್ನು ಆಳ್ವಿಕೆ ಮಾಡಿದ್ದಾರೆ. ಕವಿಗಳು ಸಹ ದೊಡ್ಡ ದೊಡ್ಡ ಕಾವ್ಯಗಳನ್ನು ಬರೆದು ಹಾಡಿ ಹೊಗಳಿದರು. ಶಿಲ್ಪಿಗಳು ಕಲ್ಲಿನಲ್ಲಿ ಕತೆಗಳನ್ನು, ಹಾಡುಗಳನ್ನು, ಶಾಸನಗಳನ್ನು ಈ ದೇಶದ ಕತೆಯನ್ನು ಕೆತ್ತಿದರು. ಹೊಟ್ಟೆಗೆ ಅನ್ನವೇ ಇಲ್ಲವೆಂದರೆ ಏನು ಮಾಡಲು ಸಾಧ್ಯ? ಆದ್ದರಿಂದ, ಅವರೇ ಕಾಮಧೇನು, ಕಲ್ಪವೃಕ್ಷಗಳ ಜಂಗಮ ವೃಕ್ಷಗಳು ಎಂಬುದನ್ನು ವಿಶ್ವಕ್ಕೆ ಸಾರುತ್ತಾರೆ. ಅಷ್ಟರಲ್ಲಿ ಎದುರಿಗೆ ಬಂದ ಜಲಗಾರ ಪ್ರಶ್ನೆ ಮಾಡುತ್ತಾನೆ. ಎಲ್ಲಿಗೆ ಹೋಗುತ್ತಿರುವೆ ಎಂದು. ರೈತ ತನ್ನ ಊರಿನ ಶಿವಗುಡಿಯ ಜಾತ್ರೆ ಇದೆ. ನಿನಗೆ ತಿಳಿಯದು. ನೀನು ಬರಲಾರೆಯೆ? ಎಂದು ಕೇಳುತ್ತಾನೆ. ನಾನು ಬಂದರೆ ಜೋಯಿಸರು ನನ್ನನ್ನು ಗುಡಿಯಲ್ಲಿ ಸೇರಿಸುವುದಿಲ್ಲ ನಾನು ದಲಿತನಾಗಿರುವುದರಿಂದ. ಅದಕ್ಕೆ ಬಾ ನೀನು ದೂರದಿಂದ ಕೈ ಮುಗಿ ಎಂದು ಹೇಳಿದಾಗ ಜಲಗಾರ ವಿಶ್ವಮಾನವ ಸಂದೇಶವನ್ನು ನೀಡುತ್ತಾನೆ.

> "ಕರ್ಮವಾರಾಧನೆ, ಸೇವೆಯೇ ಪೂಜೆ
> ನನ್ನ ಭಾಗಕೆ ಪೊರಕೆ ಆರತಿ, ಗುಡಿಸುವುದೆ

ನನ್ನ ದೇವರ ಪೂಜೆ ನಿನ್ನ ದೇಗುಲದೆಡೆಗೆ
ಹೋದೆನ್ನ ಕಂದನಂ ಬೈದಿರಿದು ನೂಕಿದರು
........................... ನನ್ನ ಶಿವನೀ ಮಣ್ಣಿನಲ್ಲಿಹನು
ನನ್ನ ಶಿವ ಕೊಳೆತ ಕಸದೊಳಗಿಹನು ಕಪ್ಪುರದೊಳಿಲ್ಲ
ಮಂಗಳಾರತಿಯೊಳಿಲ್ಲ, ಹೂವುಗಳಲಿಲ್ಲ....................
ನಾನೆಲ್ಲಿ ಭಕ್ತಿಯಂ ಕೈಮುಗಿವೆನೋ ಅಲ್ಲಿ
ತಾನಿಹನು"[೨]

ತನಗೆ ಗುಡಿಯ ಒಳಗೆ ಅವಕಾಶವಿಲ್ಲವೆಂದು ಹೇಳಿ ತಾನು ಮಡುವ ಕರ್ಮ ಕಲಿಸಿದೆ ನಮಗೆ ಪೂಜೆ ನನ್ನ ಭಾಗಕ್ಕೆ ಈ ಪೊರಕೆಯೇ ಆರತಿ. ಗುಡಿಸುವುದೇ ದೇವರ ಪೂಜೆ ಎಂದು ಕಾಯಕ ಸಿದ್ಧಾಂತವನ್ನು ಕುವೆಂಪುರವರು ಎತ್ತಿ ಹಿಡಿಯುತ್ತಾರೆ. ಗುಡಿ, ಗುಂಡಾರ, ತೆಂಗು, ಹೂ, ಕರ್ಪೂರ ಇವುಗಳಲ್ಲಿ ದೇವರು ಇಲ್ಲ. ಪರಿಶುದ್ಧವಾಗಿ ತನು ಮನದಿಂದ, ಪ್ರೀತಿಯಿಂದ ಕೈಮುಗಿದರೆ ಅಲ್ಲಿಯೇ ದೇವರು ಇದ್ದಾನೆ ಎಂದು ಈ ಮನುಕುಲಕ್ಕೆ ತಿಳಿಸುತ್ತಾರೆ. ಅದಕ್ಕೆ ಉತ್ತರವಾಗಿ ಜಲಗಾರ ಅಭಿಪ್ರಾಯ ಪಡುತ್ತಾನೆ. ಈ ಭೂಮಿಯಲ್ಲಿ ಹುಟ್ಟುಗುರುಡರಿಗಿಂತ ಕಣ್ಣುಳ್ಳ ಕುರುಡರೆ ಹೆಚ್ಚಾಗಿದ್ದಾರೆ. ದೇವರು ಗುಡಿಯಲ್ಲಿ ಇದ್ದಾನೆ ಎಂದರೆ ಈ ಜಗತ್ತನ್ನು ಹೇಗೆ ಕಾಪಾಡುತ್ತಾನೆ. ಮೂರ್ತಿಯಲ್ಲಿ ರಾಮನಿದ್ದಾನೆ ಎಂದು ಹೇಳಿದರೆ ಪಡುವಣ, ಮೂಡಣದಲ್ಲಿರುವ ಹರಿ, ಅಲ್ಲಾ, ಕರೀಮ, ರಾಮ, ಕಬೀರ ಇವರೆಲ್ಲಾ ಯಾರು ಎಂದು ಜಲಗಾರ ತನ್ನಷ್ಟಕ್ಕೆ ತಾನು ಹಾಡುತ್ತಾ ಉತ್ತರ ಕೊಡುತ್ತಾನೆ. ಈ ಸುಮಧುರ ಹಾಡನ್ನು ಕೇಳಿದ ಪಾರ್ವರರು ಯಾರೋ ದಿವ್ಯಾತ್ಮನಿರಬೇಕು ಎನ್ನುತ್ತಾ ಜಲಗಾರನ ಹತ್ತಿರ ಬಂದು ನೋಡಿ ಈತ ಕೆಳವರ್ಗದವನು ಎಂದು ಅರಿತ ತಕ್ಷಣ ಪಾರ್ವರರು

"ಸಂಗೀತ ವನಿತೆಯೆನು ಮನಮೋಹಿತಂತೆ
ಇರಲಿಲ್ಲ ಗಾನದೇವಿಯು ಹಿನ ಜಲಗಾರನನ್
ಒಲಿಯುವಳೆ? ಎಂದಿಗೂ ಇಲ್ಲ
ಶೂದ್ರರೊಳ್ ಕವಿವರ್ಯರುದಿಸುವರೆ? ಹುಟ್ಟುವರೆ ಪಂಡಿತರ್?
ಜನಿಸುವರೆ ಶಿಲ್ಪಿಗಳು ಗಾಯಕರ್? ಯೋಗಿಗಳ್? ಅಸದಳಂ!"[೩]

ಜಲಗಾರ ಒಬ್ಬ ಶೂದ್ರನೆಂದು ಅರಿತ ಪಾರ್ವರರು ಅವರು ಹೊಗಳುವುದನ್ನು ಇಟ್ಟು ತೆಗಳಲು ಪ್ರಾರಂಭಿಸುತ್ತಾರೆ. ಶೂದ್ರರಲ್ಲಿ ಎಂದು ಪಂಡಿತರು, ಯೋಗಿಗಳು ಹುಟ್ಟಲು ಸಾಧ್ಯವಿಲ್ಲ ಎಂದು ಹೇಳಿ ಮುಂದೆ ನಡೆಯುತ್ತಾರೆ.

ಕಣ್ಣು ಕಾಣದ ತಿರುಕ (ಭಿಕ್ಷುಕ) ಬಂದು ಪಾರ್ವರರ ಭಟ್ಟನನ್ನು ಬಂದು ಮುಟ್ಟುತ್ತಾನೆ. ಅದಕ್ಕೆ ಕೋಪಗೊಂಡ ಭಟ್ಟ "ನೀ ಸತ್ತರೆನಗೇನು? ಮಡಿ ಬಟ್ಟೆ ಮುಟ್ಟುವೆಯಾ? ಅದಕ್ಕೆ ದೇವರು ನಿನ್ನ ಕಣ್ಣಿಂಗಿಸಿದ್ದು! ಅದಕ್ಕೆ ಭಿಕ್ಷಕ ಉತ್ತರವಾಗಿ

ನೀನೇಕೆ ಗುಡಿಯೊಳಗೆ ಸೇರಿರುವೆಯಪ್ಪಾ
ಪರಮಾತ್ಮ? ಗುಡಿಗಳಿವು ಪಾಪಿಗಳ ಭೋಗಿಗಳ
ಗೂಡುಗಳು! ಪೂಜೆಯೆಂಬುದೊ ಧರ್ಮಬುದ್ಧಿಯನೂ
ಜೋಗಳದಿ ಮಲಗಿಸುವ ಕಾಳಮಂತ್ರವು"[೪]

ದೇವರನ್ನು ಕುರಿತು ಗುಡಿಗಳು ಪಾಪಿಗಳ ಕಾರ್ಯಸ್ಥಾನವಾಗಿದೆ. ಪೂಜೆ ಎನ್ನುವುದು ತೋರಿಕೆ ಬೂಟಾಟಿಕೆಯಾಗಿದೆ. ದೇವರನ್ನು ಮಲಗಿಸುವ ಕಾಳ ಮಂತ್ರಗಳು ಎನ್ನುತ್ತಾರೆ. ಅದಕ್ಕೆ ಇನ್ನೊಬ್ಬ ತರುಣನ ಮೂಲಕ ದೇವರ ಇರುಹುವನ್ನು ಕುರಿತು ವಿಳ್ಯಕ್ಕೆ ಸಾರುತ್ತಾನೆ. ಪೂರ್ವಿಕರು ಹೇಳುವ ಸುಳ್ಳಿಗೆ ಆದಿಯಲ್ಲಿ ಅಂತ್ಯದಲ್ಲಿ ಅವರು ಹೇಳುವ ಸುಳ್ಳುಗಳಿಗೆ ಕೊನೆಯೆ ಇಲ್ಲ. ಹೇಳುವುದು ಒಂದು ರೀತಿ ಮಾಡುವುದು ಮತ್ತೊಂದು ರೀತಿ.

"ಜಗದೊಡೆಯನೆಲ್ಲಿಯುಂ ಇರುವನೆಂಬರು ಒಮ್ಮೆ
ಗುಡಿಯಲರಸುವರೊಮ್ಮೆ!
ನಿರಾಕಾರನವನೆಂದು ಸಾರುವರು ಒಮ್ಮೆ!
ಮೂರ್ತಿಗಳ ಮಾಡಿ ಆರಾಧಿಸುವರಿನ್ನೊಮ್ಮೆ!
ಒಂದು ಸಲ ಸವರೊಳು ಅವನಿರುವನೆನ್ನುವರು
ಹೊಲೆಯ ನೀ ದೂರವಿರು ಎಂದೆಂಬರಿನ್ನೊಮ್ಮೆ!
ನುಡಿಗೂ ನೆಗಳ್ತೆಗೂ ಸಂಬಂಧವೇ ಇಲ್ಲ!"[೫]

ಭಗವಂತ ಸವಾಂತರ್ಯಾಮಿ. ಅಣುರೇಣು ತೃಣಕಾಷ್ಟಗಳಲ್ಲಿ ದೇವರು ಇದ್ದಾನೆ ಎನ್ನುತ್ತಾರೆ. ಒಂದು ಸಲ ಮೂರ್ತಿಯಲ್ಲಿ, ಒಂದು ಗಾಳಿಯಲ್ಲಿ, ನೀರಿನಲ್ಲಿ, ಬೆಟ್ಟದಲ್ಲಿ, ಕಲ್ಲಿನಲ್ಲಿ ಹೀಗೆ ಒಂದೊಂದು ಸಲ ಒಂದೊಂದು ಸ್ಥಳ ಹೇಳುತ್ತಾರೆ.

ಎಲ್ಲಿ ನಂಬುವುದು, ಎಲ್ಲಿ ಬಿಡುವುದು ಎಂದು ಪ್ರಶ್ನೆ ಮಾಡುತ್ತಾರೆ. ಜಲಗಾರನ ಮಾತಿನಲ್ಲಿ ವಿಶ್ವಮಾನವ ಪರಿಕಲ್ಪನೆಯನ್ನು ಗುರುತಿಸಬಹುದಾಗಿದೆ.

"ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ?
ಲೋಕದಲ್ಲಿ ಕಂಬನಿಯ ನೊಂದನೊರಿಸಿದ ನರನೆ
ಧನ್ಯ ನಿಟ್ಟಿಸಿರ ನೊಂದ ಸಂತೈಸುವನೆ
ಮಾನ್ಯ ಹಸಿದ ಹೊಟ್ಟೆಗೆ ಮರುಗಿ ತುತ್ತೊಂದ
ನೀಡುವನೆ ಶಿವನಿಗೆಣೆ: ಹರರ ಗೋಳನು ಕಂಡು
ಎದೆ ಬೆಂದು"[೬]

ಬಡವನಿಗೆ ಬಡವರಲ್ಲದೆ ಮತ್ತೆ ಯಾರು ಸಹಾಯ ಮಾಡುತ್ತಾರೆ. ಲೋಕದಲ್ಲಿ ಕಷ್ಟಗಳಿಗೆ ಆಗುವವನೆ ಸಹಾಯ ಮಾಡುವವನೆ ಧನ್ಯ. ಹಸಿದ ಹೊಟ್ಟೆಗೆ ಒಂದು ತುತ್ತು ಅನ್ನ ನೀಡುವವನೆ ಶಿವನಿಗೆ ಪ್ರೀತಿ. ಅದುವೆ ಶಿವನಿಗೆ ನೈವೇದ್ಯ, ಪಾರ್ವರು ಅಂದರೆ ಗುಡಿಯ ಪೂಜಾರಿಗಳು.

"ಇಂದಾದ ಲಾಭವೇ ಲಾಭ
ಎರಡನೇಯ ಪಾರ್ವ
ನನಗಂತು ದಕ್ಷಿಣೆಯ ಹಬ್ಬ, ಹಣ್ಣು ಕಾಯಿಯ ದುಡ್ಡು
ತೀರ್ಥ ಮಾರಿದ ದುಡ್ಡು
ಮೊದಲನೆಯ ಪಾರ್ವ
ನಾನೊಬ್ಬ ಶೂದ್ರನನು
ಸುಲಿಗೆ ಮಾಡಿದ ದುಡ್ಡು
ಅಂತು ನಮಗೆಲ್ಲ ಶಿವಗುಡಿಯ ದೆಸೆಯಿಂದ
ಹಿಟ್ಟು ಹೊಟ್ಟೆಗೆ ದುಡ್ಡು ಬಟ್ಟೆಗೆ"[೭]

ದೇವರ ಸೇವೆ ಮಾಡುವ ಪೂಜಾರಿಗಳು ದುಡ್ಡಿಗೋಸ್ಕರ ಪೂಜೆ ಮಾಡುತ್ತಾರೆ ಎನ್ನುವುದನ್ನು ಖಂಡಿಸುತ್ತಾರೆ. ಪುರಾಣ, ವೇದ, ಯಾಗ, ದಾನ, ಮತಾಚಾರಾದಿ ಯೋಗ, ಚಾಗ, ಕರ್ಮ, ಅಕರ್ಮ, ಧರ್ಮ, ದಾಸ ದಾಸ ನನಗೆ ತಿಳಿಯದು ಎನ್ನುತ್ತಾರೆ. ಜಲಗಾರ, ಕಾಶಿ, ಶೃಂಗೇರಿ ಗಯಾ, ಇವು ಎಲ್ಲಾ ಯಾತ್ರೆಗಳು ಜಾತ್ರೆಗಳು ಎಲ್ಲಾ ಬರೀ ಭ್ರಮೆಗಳು, ಮನಸ್ಸಿನಲ್ಲಿ ಭಕ್ತಿ ಇರಬೇಕೆ ವಿನಃ ಆಡಂಬರದ ಬೂಟಾಟಿಕೆ ಇರಬಾರದು ಎನ್ನುತ್ತಾರೆ. ಜಲಗಾರನಿಗೆ ದೇವರು ಪ್ರತ್ಯಕ್ಷನಾಗಿ ದೇವರು ಆಡುವ ಮಾತುಗಳು ಕುವೆಂಪುರವರ ವಿಶ್ವಮಾನವ ಪರಿಕಲ್ಪನೆಗೆ ಸಾಕ್ಷಿ ಒದಗಿಸುತ್ತವೆ. ಜಲಗಾರನು ಶಿವನೇ ಎದುರಿಗೆ ಬಂದರೂ ನಂಬಲಾರನು. ಸಾಕ್ಷಿ ಕೇಳುತ್ತಾನೆ. ಪಂಡಿತರು ನನ್ನ ವಿನಃ ಕಾರಣ ಬಣ್ಣಿಸಿ ನನ್ನನ್ನು ವಿಕಾರವಾಗಿ ಮಾಡಿದ್ದಾರೆ. ನನಗೆ ಆಕೃತಿ ಇಲ್ಲ, ನಿರ್ವಿಕಾರ ಎನ್ನುತ್ತಾನೆ. ಶಿವನು ಶಾಸ್ತ್ರಿಗಳು, ಕಾವ್ಯಗಳ, ಕವಿತೆಗಳ, ಗಿರಿಜೆಯೊಡಗೂಡಿದ ಶಿವನಲ್ಲ. ಪಂಡಿತರು, ಪಾರ್ವರರು ನನಗೆ ಅಲ್ಲಿದ್ದಾನೆ ಇಲ್ಲಿದ್ದಾನೆ ಎಂದು ಹೇಳುವರು ಆದರೆ ನಾನು

"ಬೀದಿಗುಡಿಸುವ ಬಡವನೆದೆಯಲ್ಲಿ ನಾನಿರುವೆ
ಉಳುತಿರುವ ಒಕ್ಕಲಿಗನೆಡೆಯಲ್ಲಿ ನಾನಿರುವೆ
ಎಲ್ಲಿ ಹೊಲೆಯನು ನನ್ನ ಕಾರ್ಯದಲ್ಲಿ ತೊಡಗಿಹನೊ
ಅಲ್ಲಿ ನಾನವನ ಪಕ್ಕದೊಳಿರುವೆ ಕುಂಟರನೂ
ಕುರುಡರನು, ದೀನರನು ಅನಾಥರನು ಕೈಹಿಡಿದು
ಪೊರೆಯುತಿಹನೆಡೆಯಿರುವೆ. ಆ ನನ್ನ ಭಕ್ತರಿಗೆ
ನನ್ನ ನಿಜರೂಪದಿಂ ಮೈದೂರಿ ಸಲಹುವೆನು"[೮]

ಕಾರ್ಯ ಸಿದ್ಧಾಂತಕ್ಕೆ ಮಹತ್ವವನ್ನು ಕೊಡುತ್ತಾ, ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ. ರೈತನ ಹೃದಯದಲ್ಲಿ ಕುಂಟರನು, ಕುರುಡರನು, ದೀನರನು ನಾನು ಕಾಪಾಡುತ್ತಾನೆ ಎನ್ನುವ ಆಶ್ವಾಸನೆ ನೀಡುತ್ತಾನೆ. ಕೇವಲ ೧೨ ಪಾತ್ರಗಳ ಮೂಲಕ ಭೂದೇವಿ, ಶಿವ, ಜಲಗಾರ, ರೈತ, ಕಬ್ಬಿಗ, ಯುವಕ, ತಿರುಕ, ಭಟ್ಟ, ಬಾಲಕರು, ಹಳ್ಳಿಯ ಹುಡುಗಿ ಇಬ್ಬರು ಪಾರ್ವರು, ಇಬ್ಬರು ತರುಣರು ಈ ಪಾತ್ರಗಳ ಮೂಲಕ ನಾಟಕವನ್ನು ಸೃಷ್ಟಿಸಿದ್ದಾರೆ. ಈ ಎಲ್ಲಾ ಪಾತ್ರಗಳು ಇಡೀ ವಿಶ್ವಕ್ಕೆ ವಿಶ್ವಮಾನವ ಪರಿಕಲ್ಪನೆಯನ್ನು ಪಂಪನಂತೆ 'ಮಾನವಜಾತಿ ತಾನೊಂದೆ ವಲಂ' ಎನ್ನುವಂತೆ ಸರ್ವರು ಸಮಾನರು ಎನ್ನುವ ಕಲ್ಪನೆ ಈ ಜಲಗಾರ ನಾಟಕದಲ್ಲಿ ವಿಶ್ವಮಾನವ ಪರಿಕಲ್ಪನೆ ನೋಡಬಹುದಾಗಿದೆ.

**ಅಡಿ ಟಿಪ್ಪಣಿಗಳು:**

೧. ಕುವೆಂಪು; ಜಲಗಾರ, ಪುಟ–೪
೨. ಕುವೆಂಪು; ಜಲಗಾರ, ಪುಟ–೫
೩. ಕುವೆಂಪು; ಜಲಗಾರ, ಪುಟ–೮
೪. ಕುವೆಂಪು; ಜಲಗಾರ, ಪುಟ–೧೦
೫. ಕುವೆಂಪು; ಜಲಗಾರ, ಪುಟ–೧೧
೬. ಕುವೆಂಪು; ಜಲಗಾರ, ಪುಟ–೧೨
೭. ಕುವೆಂಪು; ಜಲಗಾರ, ಪುಟ–೧೮
೮. ಕುವೆಂಪು; ಜಲಗಾರ, ಪುಟ–೨೫

# ಕುವೆಂಪು ಕಾವ್ಯದಲ್ಲಿ ಸ್ತ್ರೀ

ಡಾ. ಭಾರತಿ ಎಸ್.ಗದ್ದಿ
ಮುಖ್ಯಸ್ಥರು, ಕನ್ನಡ ವಿಭಾಗ
ಕೆ.ಎಲ್.ಇ ಸಂಸ್ಥೆಯ
ಎಸ್.ಎಸ್.ಎಮ್.ಎಸ್. ಮಹಾವಿದ್ಯಾಲಯ,
ಅಥಣಿ.

ಕನ್ನಡ ಶ್ರೇಷ್ಠ ಕವಿಗಳಲ್ಲಿ ಒಬ್ಬರಾದ ಕುವೆಂಪುರವರ ವ್ಯಕ್ತಿತ್ವದಲ್ಲಿ ವೈಚಾರಿಕ ಹಾಗೂ ಅಧ್ಯಾತ್ಮಿಕಗಳೆರಡರ ಸಮ್ಮಿಳನವನ್ನು ಕಾಣುತ್ತೇವೆ. ಜಾತಿಪದ್ದತಿ, ವರ್ಣಾಶ್ರಮ, ಧರ್ಮಗಳನ್ನು ತೀವ್ರವಾಗಿ ಖಂಡಿಸಿದ ಕುವೆಂಪು ಭಾರತದ ಸನಾತನ ಧರ್ಮದ ಶಾಶ್ವತ ಅಂಶಗಳ ಬಗೆಗೆ ಅಷ್ಟೇ ಶ್ರದ್ದೆಯನ್ನು ಬೆಳೆಸಿಕೊಂಡವರು. ಕುವೆಂಪುರವರ ಈ ತಾತ್ವಿಕ ಹಿನ್ನಲೆಯು ಅವರ ಆಳವಾದ ಅಧ್ಯಯನ ಹಾಗೂ ಅಂತರಾಳದಿಂದ ಅಭಿವ್ಯಕ್ತಗೊಂಡಿದ್ದನ್ನು ಕಾಣುತ್ತೇವೆ. ನಮ್ಮ ದೇಶದ ಪರಂಪರೆಯಲ್ಲಿನ ಜೀವ ವಿರೋಧಿ ಸಂಗತಿಗಳನ್ನು ನಿರಾಕರಿಸಿ, ಮನುಷ್ಯನ ಜೀವನೋತ್ಕರ್ಷಕ್ಕೆ ಅಗತ್ಯವಾದ ಮೌಲ್ಯಗಳನ್ನು ಸ್ವೀಕರಿಸಿ ಆ ಮೂಲಕ ಮಾನವನನ್ನು ವಿಶ್ವಮಾನವನನ್ನಾಗಿ ಮಾಡುವುದು ಕುವೆಂಪುರವರ ತಾತ್ವಿಕ ನಿಲುವಾಗಿದೆ.

ನಮ್ಮ ನಾಡಿನ ಎಲ್ಲ ಕ್ಷೇತ್ರಗಳಲ್ಲಿ ಕಂಡು ಬರುವಂತೆ ಪುರುಷ ಪ್ರಾಧಾನ್ಯತೆ ನಮ್ಮ ಸಾಹಿತ್ಯ ಕ್ಷೇತ್ರದಲ್ಲೂ ಕಂಡು ಬರುತ್ತದೆ. ಈ ನಾಡಿನಲ್ಲಿ ಸಾಮಾಜಿಕವಾಗಿ ಎಷ್ಟೇ ಶೋಷಣೆಗೆ ಒಳಗಾಗಿದ್ದರೂ ತಾತ್ವಿಕವಾಗಿ ಅವಳನ್ನು ವೈಭವೀಕರಿಸುವ ಸಮಾನಾಂತರ ನೆಲೆಯೊಂದು ನಮ್ಮ ನಾಡಿನ ಇತಿಹಾಸ, ಸಾಹಿತ್ಯಗಳಲ್ಲಿಯೂ ಹಾಸು ಹೊಕ್ಕಾಗಿದೆ. ನಮ್ಮ ಪರಂಪರೆಯಲ್ಲಿ ಹೆಣ್ಣನ್ನು ನೋಡುವ ದೃಷ್ಟಿ ಮಾತ್ರ ಪ್ರಧಾನವಾದದ್ದು, ಹೆಣ್ಣು ತಾಯಿಯಾಗಿ, ದೇವಿಯಾಗಿ, ಶಕ್ತಿಸ್ವರೂಪಿಣಿಯಾಗಿ, ನಮ್ಮ ಪರಂಪರೆಯಲ್ಲಿ ಚಿತ್ರಿತಳಾಗಿದ್ದಾಳೆ. ಕನ್ನಡ ಸಾಹಿತ್ಯದಲ್ಲಿ ಹೆಣ್ಣಿನ ಪಾತ್ರವನ್ನು ಭೂಮಿತಾಯಿ, ಜನ್ಮಕೊಟ್ಟತಾಯಿ ಹೆಣ್ಣು ಪೂಜ್ಯನೀಯಳೇಂದು ಭಾವಿಸಲಾಗಿದೆ. ಮಹಾಕಾವ್ಯಗಳಲ್ಲಿ ಹೆಣ್ಣನ್ನು ಪತಿವೃತೆ ತ್ಯಾಗಮಯಿ, ತಪಸ್ವೀನಿ ಎಂದೇ ಚಿತ್ರಿಸಲಾಗಿದೆ. ಕುವೆಂಪು ರವರು ಕೂಡಾ ಹೆಣ್ಣನ್ನು ಕುರಿತು ತಮ್ಮ ಕಾವ್ಯಗಳಲ್ಲಿ ಭಾರತೀಯ ಪರಂಪರೆಯ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ಹೆಣ್ಣಿನ ವಿಚಾರಕ್ಕೆ ಬಂದಾಗ ಮಾತ್ರ ಅವರ ದೃಷ್ಟಿಕೋನ ಬಹಳ ಸಾಂಪ್ರದಾಯಿಕವಾದದ್ದು. ಹೆಣ್ಣಿನ ಬಗೆಗೆ ಅವರು ಪರಂಪರಾಗತ ವೈಭವೀಕೃತ ನೆಲೆಯನ್ನು ಒಪ್ಪುತ್ತಾರೆ.

ಈ ಹಿನ್ನೆಯಲ್ಲಿ ಅವರ "ಮನೆ ಮನೆಯ ತಪಸ್ವಿನಿ" ಎಂಬ ಕವನದಲ್ಲಿ ಕಾಣುತ್ತೇವೆ. ಈ ಕವನದಲ್ಲಿ ಕುವೆಂಪು ಭರತಖಂಡದ, ಮನೆ ಮನೆಯಲ್ಲೂ ತಪಸ್ವಿನಿಯರಿರುವುದನ್ನು ಕಂಡಿದ್ದಾರೆ. ಪ್ರತಿಯೊಬ್ಬ ಗೃಹಣಿಯೂ ಒಬ್ಬ ತಪಸ್ವಿನಿ, ಈ ಕಲ್ಪನೆಯೇ ಅಪೂರ್ವವಾಗಿದೆ. ಇದು ಬರಿ ಕಲ್ಪನೆಯಲ್ಲ ಯಾರಿಗೂ ಹೊಳೆಯದಿದ್ದ ಸತ್ಯದ ಅನಾವರಣ ಕವನದ ಶೀರ್ಷಿಕೆಯಲ್ಲೇ ಇರುವ "ತಪಸ್ವಿನಿ" ಎಂಬ ಸೂತ್ರಕ್ಕೆ ಇಡೀ ಕವನ ಬಂಧರ ಭಾಷ್ಯವಾಗಿದೆ. ಹೆಣ್ಣನ್ನು ಪೂಜಿಸುತ್ತಾರೆ ಮಾತ್ರವಲ್ಲ, ಮುಂದೆಯೂ ಅವಳು "ತಪಸ್ವಿನಿ" ಸ್ಥಾನವನ್ನು ಉಳಿಸಿಕೊಂಡು ಹೋಗಬೇಕೆಂದು ಕಳಕಳಿಯಿಂದ ಕೋರುತ್ತಾರೆ. ಇದು ಸ್ತ್ರೀ ಸ್ವಾತಂತ್ರ್ಯಹರಣದ ತಂತ್ರವಲ್ಲ. ಸ್ತ್ರೀ ಪುರುಷರಿಬ್ಬರ ಸುಖ ಶ್ರೇಷ್ಠಗಳಿಗೆ ಮಾರ್ಗದರ್ಶನ ಮಾತ್ರ. ಹೆಣ್ಣು ಮನೆಯೆಂಬ ಸೆರೆಮನೆಯಲ್ಲಿ ಗಂಡಸಿನ ತೊತ್ತಾಗಿ ಮೂಲೆಗುಂಪಾಗಿರಬೇಕೆಂಬುದಲ್ಲ. ಕವಿಯ ಅಭಿಪ್ರಾಯ "ಮನೆಯೆಂಬ ಅರಮನೆಯಲ್ಲಿ ರಾಣಿಯಾಗಿ", ಪತಿಗೆ ತಾರಿಣಿಯಾಗಿ, ಮೆರೆಯ ಬೇಕೆಂಬುದು ಅವರ ಆಶಯ ಆದರೂ ಒಟ್ಟಿನಲ್ಲಿ ಅವಳು ತಪಸ್ವಿನಿಯಾಗಿರಬೇಕು, ಬರಿ ಕಾಮಿನಿಯಾಗಿ ಅಲ್ಲ ವಿಲಾಸಿನಿಯಾಗಿ ಅಲ್ಲ. ಗೃಹಿಣಿ, ಗರತಿ, ದೇವಿ, ತಾಯಿ, ಎನ್ನುವ ಮಾತುಗಳಲ್ಲಿ ಹೆಣ್ಣನ್ನು ಕುರಿತು ಕವಿಯ ನಿಲುವು ಏನೆಂಬುದು ಅವರ ಕಾವ್ಯದಲ್ಲಿ ವ್ಯಕ್ತವಾಗಿದೆ.

'ಮನೆ ಮನೆಯಲಿ ನೀನಾಗಿಹೆ ಗೃಹಶ್ರೀ
ಹೆಸರಿಲ್ಲದ ಹೆಸರು ನಿನಗೆ ಗೃಹಶ್ರೀ'
ಹೇ ದಿವ್ಯ ಸಾಮಾನ್ಯೆ.
ಹೇ ಭವ್ಯೆ ದೇವಮಾನ್ಯೆ.
ಚಿರಂತನ ಆ ಕೀರ್ತಿ ಕನ್ಯೆ.
ಅನ್ನಪೂರ್ಣೆ, ಅಹಂಶೂನ್ಯೆ.
ನಮೋ ನಿನಗೆ ನಿತ್ಯಧನ್ಯೆ"

ಎಂದು "ಮನೆ ಮನೆಯ ತಪಸ್ವಿನಿ" ಹೆಣ್ಣಿನ ಜವಾಬ್ದಾರಿ ಮಹತ್ತರವಾದುದು. ಎಂಥ ಸ್ಥಿಯಲೂ ಕಂಗೆಡದ ಅವಳ ಒಡಲುರಿಯನ್ನು ಬಚ್ಚಿಟ್ಟು ಮೇಲೆ ನಗುನಗುತ್ತಾ ಅದೀನಾಸ್ಯೆಯಾಗುತ್ತಾಳೆ. ಹೆಣ್ಣೆಂದಲೇ ಗಂಡಿನ ಉದ್ದಾರ, ಲೋಕಕಲ್ಯಾಣ ಎಂದು ಕವಿ ಹೇಳುತ್ತಾನೆ.

ಕುವೆಂಪು ಪ್ರಮುಖವಾಗಿ ನಿಸರ್ಗದ ಕವಿ, ತಾನು ಕಾಡಿನ ಕವಿ ಎಂದು ಅವರು ತಮ್ಮನ್ನು ತಾವು ಕರೆದುಕೊಳ್ಳುತ್ತಾರೆ. ಕನ್ನಡದ ಎಲ್ಲ ಕವಿಗಳೂ ನಿಸರ್ಗವನ್ನು ಕುರಿತು ಬರೆದಿದ್ದಾರಾದರೂ ಕುವೆಂಪು ಅವರಂತೆ ಮಲೆನಾಡಿನ ರಮ್ಯತೆಯಿಂದ ಹಿಡಿದು ಭವ್ಯತೆಯವರೆಗಿನ ನಿಸರ್ಗಾನುಭವವನ್ನು ದಟ್ಟವಾಗಿ ಗ್ರಹಿಸಿ ಅಭಿವ್ಯಕ್ತಿಸಿದ ಬೇರೊಬ್ಬ ಕವಿ ಕನ್ನಡದಲ್ಲಿ ಇಲ್ಲ, "ಮಲೆನಾಡಿನ ತಾಯಿಮನ, ಕಾಡು ದೇವ ಬೀಡು," ಎನ್ನುವಲ್ಲಿ ಕವಿಗೆ ಮಲೆನಾಡು ತಾಯಿ ಮನೆಯಾಗಿದೆ, 'ತೀರ್ಥ ಹಳ್ಳಿಯ ಕಳೆದು ತಾಯಿ ತುಂಗೆಯ ದಾಟಿ' ಎಂದು 'ಕರಿಸಿದ್ದ' ಕವನದಲ್ಲಿ ಹೇಳುವಾಗ ಕವಿ ತುಂಗಾ ನದಿಯಲ್ಲಿ ತಾಯಿಯನ್ನು ಕಾಣುತ್ತಾರೆ. ಬೈಗು, ಬೆಳಗುಗಳು ಅವರಿಗೆ ಹೆಣ್ಣಾಗಿ ಕಂಡಿವೆ, ಕಾಮನಬಿಲ್ಲನ್ನು ಬಾನದೇವಿತೊಟ್ಟ ಮಣಿಹಾರ ಎನ್ನುತ್ತಾರೆ. ಕುವೆಂಪು ಕವಿ ಸೃಷ್ಟಿಯಲ್ಲಿ ಜಗನ್ಮಾತೆಯನ್ನು ಕಂಡು ಅವಳ ಕೃಪೆಗಾಗಿ ಸಾನಿಧ್ಯಕ್ಕಾಗಿ ಮೊರೆಯಿಡುವ ಅನೇಕ ಕವನಗಳು ಕುವೆಂಪುರವರಲ್ಲಿ ಕಂಡು ಬರುತ್ತವೆ. ಕವಿ ಮತ್ತು ಜಗನ್ಮಾತೆಯ ನಡುವೆ ಅನಾದಿಯಾದ ಅನಂತವಾದ ಆಟ ನಡೆಯುತ್ತದೆ. ಅಗಣಿತ ಪ್ರಳಯಿಗಳು ಜಾರಿದವು ತಾಯೆ, ಮುಗಿಯವಿದು ನಮ್ಮಾಟವಿದು ಯಾರ ಮಾಯೆ ಎಂದು ಕವಿ ಸೃಷ್ಟಿಮಾತೆಯನ್ನು ಬೆರಗಿನಿಂದ ಪ್ರಶ್ನಿಸುತ್ತಾರೆ. ಜಗನ್ಮಾತ ಕವಿಯ ಕಣ್ಣಿಗೆ ಒಮ್ಮೆ ಕರುಣಾಮಯಿಯಾಗಿ ಕಂಡರೆ ಮತ್ತೊಮ್ಮೆ ಬೈರವಿಯಾಗಿ, ಕಾಳಿಯಾಗಿ, ಭಯಂಕರಳಾಗಿ ಕಾಣುತ್ತಾಳೆ. ಭೂಮಿ ಆಕಾಶಗಳನ್ನೇ ಕೈಯ ತಾಳವನ್ನಾಗಿ ಮಾಡಿಕೊಂಡು ಜನನ ಮರಣಗಳ ಹೆಜ್ಜೆಯಿಟ್ಟು ಮಿಂಚು ಗುಡುಗುಗಳನ್ನೇ ಕೈಯಲ್ಲಿ ಹಿಡಿದು ಕಾಲವನ್ನೇ ಖಡ್ಗವನ್ನಾಗಿ ಮಾಡಿಕೊಂಡು ರುದ್ರಭದ್ರಕಾಳಿಯ ಪ್ರತೀಕದ ಮೂಲಕ ವರ್ಣಿಸುತ್ತಾರೆ.

"ಜೈ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ" ಎಂದು ಹಾಡಿ ಕನ್ನಡ ನಾಡು ನುಡಿಗಳಲ್ಲಿ ತಾಯಿಯನ್ನು ಕಂಡು ಕನ್ನಡ ನಾಡಿನ ವೈಭವವನ್ನು ಚಿತ್ರಿಸುವ ಮೂಲಕ ಕನ್ನಡಿಗರ ಆತ್ಮವಿಶ್ವಾಸವನ್ನು ಎಚ್ಚರಿಸುವ ಕೆಲಸ ಕುವೆಂಪುರವರು ಮಾಡಿದ್ದಾರೆ.

"ಕಲ್ಪನಾ ಸುಂದರಿ" ಎಂಬ ಕಾವ್ಯದಲ್ಲಿ ನಿನ್ನಿಂದಲೇ ಪ್ರಕೃತಿ ಚಿರನವೀನೆ, "ನಿನ್ನಿಂದಲೇ ಬದುಕಿಗೆ ಸಾರ್ಥಕತೆ, ನೀನಿಲ್ಲದಿದ್ದರೆ ಬದುಕೆಲ್ಲ ಕಗ್ಗತ್ತಲೆ" ಎನ್ನುವ ಕವಿ ತಮ್ಮ ಕಾವ್ಯವನ್ನು ನಲ್ಲೆಯೊಬ್ಬಳ ರೂಪಕದ ಮೂಲಕ ವರ್ಣಿಸಿ ಈ ಕಾವ್ಯದ ಹೆಣ್ಣು ಎಂದೆಂದಿಗೂ ನನ್ನವಳೆ ಎನ್ನುತ್ತಾರೆ. ಹೀಗೆ ಕವಿ ನಿಸರ್ಗದಲ್ಲಿ ಸೃಷ್ಟಿಯಲ್ಲಿ ದೇಶ ಮತ್ತು ಭಾಷೆಗಳಲ್ಲಿ ಕಾವ್ಯಕಲೆ ಮುಂತಾದ ಪ್ರತಿಭಾ ವಿಶೇಷಗಳಲ್ಲಿ ಸ್ತ್ರೀತ್ವದ ವಿವಿಧ ಮುಖಗಳನ್ನು ಕಾಣುತ್ತೇವೆ.

"ಕಲಾ ಸುಂದರಿ" ಕುವೆಂಪು ಅವರ ಒಂದು ಅದ್ಭುತ ಕವನ ಎಲ್ಲ ಕಲೆಗಳ ಅಧಿದೇವಿಯನ್ನು ಅವರು ಕಲಾಸುಂದರಿ ಎಂದು ಪ್ರತೀಕಗೊಳಿಸಿ ಈ ಸೃಷ್ಠಿಯ ಸಮಸ್ತ ಸೌಂದರ್ಯವು ಈ ಸುಂದರಿಯ ಬೇರೆ ಬೇರೆ ಅವಿಷ್ಕಾರಗಳು ಎನ್ನುತ್ತಾರೆ. "ನನ್ನನಂದು ಮಲೆಯಲಿ ನಿನ್ನ ಕಲೆಯ ಬಲೆಯಲಿ ಮೋಹದಿಂದ ಮುತ್ತಿದೆ" ಎಂದು ಮುಂತಾಗಿ ಕಲಾಸುಂದರಿಯನ್ನು ವರ್ಣಿಸುತ್ತಾರೆ.

ಕುವೆಂಪುರವರ "ಸಂಸಾರಿಕ ಗೀತೆಗಳಲ್ಲಿ ಮಾನವೀಯ ಸಂಘರ್ಷಗಳಾಗಲೀ ಸಹಜತೆಯಾಗಲೀ ಕಂಡು ಬರುವುದು ತೀರ ಕಡಿಮೆ ಪತ್ನಿಯನ್ನು ಕುರಿತು ಲೋಕರಂಗದಲ್ಲಿ ಸತಿ, ನಿತ್ಯದಲ್ಲಿ ಭಗವತಿ ಎನ್ನುವಲ್ಲಿ ನೀ ದೇವತಾ ವ್ಯಕ್ತಿ ಗುರು ಕರುಣೆಯ ಕೃಪೆ, ತಾಯಿ ಚರಣ ಕಿರಣವೊಂದು ನನ್ನನ್ನು ರಕ್ಷಿಸಲೆಂದು ನಿನ್ನ ರೂಪದಲ್ಲಿ ಬಂದು ನನ್ನನ್ನು ಸಲಹುತ್ತಿದೆ ಎಂದು ಭಗವತಿ ಎನ್ನುವಾಗ ಪತ್ನಿಗೆ ಭಗತಿಯ ಸ್ಥಾನ ನೀಡುತ್ತಾರೆ. ಯಾವ ದೇವತೆಯೊಲಿದರೇನು ಮನೆಯ ದೇವತೆ ಮುಳಿದರೆ, ಯಾವ ದೇವತೆ ಹೊಗಳಲೇನು ಮನೆಯ ದೇವತೆ ಹಳಿದರೆ ಎಂಬಲ್ಲಿ ದಾಂಪತ್ಯ ಜೀವನದ ಸಾಫಲ್ಯದ ರಹಸ್ಯವನ್ನು ಕುವೆಂಪು ಸಹಜವಾಗಿ, ಸರಳವಾಗಿ ಚಿತ್ರಿಸಿದ್ದಾರೆ. ಕೆಲವಡೆ ಪತ್ನಿಯನ್ನು ದೇವಿ, ಜಗನ್ಮಾತೆ, ಆದಿಶಕ್ತಿ ಮಹಾಮಾಯೆ ಎಂದು ಸ್ತುತಿಸುತ್ತಾರೆ. ಅವರ "ಸ್ವರ್ಗ ದ್ವಾರದ ಯಕ್ಷಪ್ರಶ್ನೆ" ಎನ್ನುವ ಕವನವಂತೂ ತುಂಬ ಸ್ವಾರಸ್ಯಕರವಾದದ್ದು, ಅಂತರಾತ್ಮದ ನಿಜನಾಮ, ನಿನ್ನ ಹೃದಯದಾತ್ಮನೊಲವಿನ ಹೆಸರು ಹೇಳಿದರೆ ಮಾತ್ರ ಸ್ವರ್ಗದ ಬಾಗಿಲು ತೆರೆಯುತ್ತದೆ ಎಂದಾಗ ಯಾವ ವಿವರಣೆಗೂ ತೆರೆಯದ ಸ್ವರ್ಗದ ಬಾಗಿಲು ಹೇಮೀ ಗಂಡ ಅಂದರೆ ಕವಿ ತನ್ನ ಹೆಂಡತಿಯ ಹೆಸರು ಹೇಳಿದಾಗ ಎಂದಾಗ ತೆರೆಯಿತು ಎಂದು ಕುವೆಂಪು ಹೇಳುವುದನ್ನು ನೋಡಿದಾಗ ಗಂಡು ಎಷ್ಟೇ ಉನ್ನತ ಸ್ಥಾನಕ್ಕೇರಿದರೂ ಹೆಂಡತಿಗೆ ಒಲವಿನ ಗಂಡನಾದಾಗ ಮಾತ್ರ ಜೀವನ ಸಫಲ ಎನ್ನುವುದು, ಮತ್ತು ಕುವೆಂಪು ಹೆಂಡತಿಗೆ ಎಂಥ ಉನ್ನತ ಸ್ಥಾನ ನೀಡಿದ್ದಾರೆ ಎನ್ನುವುದು ತಿಳಿಯುತ್ತದೆ.

ಕುವೆಂಪು ಅವರ ಮಹಾಕಾವ್ಯ "ರಾಮಾಯಣ ದರ್ಶನಂ" ಹಿಂದೆ ವಾಲ್ಮೀಕಿ ಹೇಳಿದ ಕಥೆಯಾದರೂ ಕನ್ನಡಕ್ಕೆ ಬೇರೆ ಕಥೆಯೆಂಬಂತೆ ಮರುಹುಟ್ಟು ಪಡೆದಂತೆ ಈ ಕಾವ್ಯ ರಚಿಸಿದ್ದೇನೆ, ಎನ್ನುತ್ತಾರೆ. ಪಾಶವೀಶಕ್ತಿ, ಆತ್ಮಶಕ್ತಿ, ಸತ್ಯ–ಅಸತ್ಯ, ಧರ್ಮ–ಅಧರ್ಮಗಳ ಹೋರಾಟವೇ ರಾಮಾಯಣ ದರ್ಶನದ ವಸ್ತು, ರಾವಣನಿಂದ ಅಪಹೃತಳಾದ ಸೀತೆಯನ್ನು ಮತ್ತೇ ಪಡೆಯುವ

ಹಾದಿಯಲ್ಲಿ ಮಾನವನಾದ ರಾಮದೇವನಾಗುವ ರಾವಣ ತನ್ನ ರಾವಣತ್ವವನ್ನು ಇಲ್ಲವಾಗಿಸಿಕೊಳ್ಳುವ ಕಥೆ ರಾಮಾಯಣ ದರ್ಶನದ್ದು ಪುರಾಣ ಕೃತಿಯೊಂದನ್ನು ತನ್ನ ಕಾವ್ಯಕ್ಕೆ ವಸ್ತುವನ್ನಾಗಿ ಮಾಡಿಕೊಳ್ಳುವ ಆಧುನಿಕ ಕವಿ, ಬದಲಾದ ಮೌಲ್ಯಗಳಿಗನುಗುಣವಾಗಿ ತನ್ನ ಕಾಲದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತಾರೆ. ಕೆಲವು ವೇಳೆ ಹೊಸ ಪಾತ್ರಗಳನ್ನು ಸೃಷಿಸಿಕೊಳ್ಳುತ್ತಾನೆ. ವಾಲ್ಮೀಕಿ ರಾಮಾಯಣದಲ್ಲಿ ಅನಾಧಾರಕ್ಕೆ ಒಳಗಾಗಿ ನೀರವಾಗಿ ಮೂಲೆಯಲ್ಲಿ ನಿಂತ ಉರ್ಮಿಳೆಯ ಬಗೆಗೆ ಒಂದು ಕೃತ್ತಿಕೆಯನ್ನೇ ರಚಿಸಿ, ಕುವೆಂಪು ಅವಳ ಬಗ್ಗೆ ತಮಗಿರುವ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ, ರಾಮ–ಸೀತೆ–ಲಕ್ಷ್ಮಣರಂಥ ಬೃಹನ್ಮೂರ್ತಿಗಳ ಛಾಯೆ ನಿನ್ನನ್ನು ಲೋಕದ ಕಣ್ಣಿನಿಂದ ಮರೆಸಿದೆ ಲಕ್ಷ್ಮಣ ಚಿರತವಶೀಲೆ, ನೀರವಧ್ಯಾನವಧು, ಹೇ ಉರ್ಮಿಳಾದೇವಿ ಹೆಣ್ಣೆಂಬ ತಪಸ್ಸಿಗೆ ನೀನು ನಿರುಪಮ ಪ್ರತಿಯೇ, ಸೀತೆಯ ತಪಸ್ಸಿಗಿಂತ ನಿನ್ನ ತಪಸ್ಸು ಮಿಗಿಲು ಎಂದು ಕುವೆಂಪು ಉರ್ಮಿಳೆಯನ್ನು ಪ್ರಶಂಶಿಸುತ್ತಾರೆ. ಲಕ್ಷ್ಮಣ ರಾಮನೊಡದೆ ವನವಾಸಕ್ಕೆ ಹೋಗುವ ಮೊದಲು ಉರ್ಮಿಳೆಯ ಒಪ್ಪಿಗೆ ಪಡೆದಿದ್ದ ಎನ್ನುವ ಹೊಸ ಅಂಶವೊಂದನ್ನು ಕುವೆಂಪು ರಾಮಾಯಣ ದರ್ಶನದಲ್ಲಿ ಸೇರಿಸಿದ್ದಾರೆ. ಸರಯೂ ನದಿತೀರದಲ್ಲಿ ಪರ್ಣಕುಟಿ ರಚಿಸಿ ೧೪ ವರ್ಷ ಕಾಲ ಚಿರತಪಸ್ವಿನಿಯಾಗಿ ನಿಂತು ರಾಮ–ಸೀತೆ–ಲಕ್ಷ್ಮಣರಿಗೆ ಚಿತ್ರವೋಮಂಗಳಾದೆ ರಕ್ಷೆ ಕಟ್ಟಿದಳು ಊರ್ಮಿಳೆ ಎನ್ನುತ್ತಾರೆ. ೧೪ ವರ್ಷ ಕಾಲ ವಿರಹಿಣಿಯಾಗಿ ನಿಂತು ಯಾವ ನೋವನ್ನು ಊರ್ಮಿಳೆ ಅನುಭವಿಸಿರಬಹುದು ಎನ್ನುವ ಅಂಶಕ್ಕಿಂತ ಹೆಚ್ಚಾಗಿ ಕುವೆಂಪು ಊರ್ಮಿಳೆಯಲ್ಲಿ ತಪಸ್ವಿನಿಯನ್ನೇ ಕಂಡಿದ್ದಾರೆ.

ರಾಮಾಯಣದ 'ಮಂಥರೆ' ಕುವೆಂಪುರ ಅದ್ಭುತ ಕಲಾಸೃಷ್ಟಿ ಮೂಲ ರಾಮಾಯಣದಲ್ಲಿ ಮಂಥರೆ ದುಷ್ಟೆ, ಹೃದಯ ಹೀನೆ, ಆದರೆ ಕುವೆಂಪು ಅವರ ಪಾಲಿಗೆ ಅವಳು 'ಮಮತೆಯ ಸುಳಿ' ಆ ಸುಳಿ ರಾಮಾಯಣದ ಪ್ರವಾಹದ, ದಿಕ್ಕನ್ನೇ ಬದಲಿಸಿತು. ಮಂಥರೆಯ ನಡವಳಿಕೆಗೆ ಕಾರಣವೇನು ಎಂಬುದರ ಬಗೆಗೆ ಮೂಲ ಕವಿ ಮೌನಿ, ಆದರೆ ಕುವೆಂಪು ಮಂಥರೆಯ ನಡುವಳಿಕೆಗೆ ಮನೋವೈಜ್ಞಾನಿಕ ಕಾರಣಗಳನ್ನು ಕೊಡುತ್ತಾರೆ. ಅವಳೊಬ್ಬ ಅನಾಥೆ, ಕುರೂಪಿ, ತನ್ನ ಕುರೂಪದಿಂದಾಗಿ ಸಮಾಜದ ತಿರಸ್ಕಾರಗಳಿಗೆ ಗುರಿಯಾದ ಮಂಥರೆಯ ಮನಸ್ಸು ಜನರ ನಡತೆಗೆ ಕನ್ನಡಿ ಹಿಡಿಯುವಂತೆ ವಿಕೃತಗೊಂಡಿತು. ವ್ಯಕ್ತಿ ಸಮಾಜಘಾತಕನಾಗಲು ಸಮಾಜದ ಹೃದಯಹೀನತೆ ಹಾಗೂ ತಿರಸ್ಕಾರಗಳೇ ಕಾರಣ ಎನ್ನುತ್ತಾರೆ ಕುವೆಂಪು, ಮಂಥರೆಯ ಹೃದಯದ ಪ್ರೇಮವೆಲ್ಲ ಕೈಕೇ ಭರತನಲ್ಲಿ ಮಡುಗೊಂಡಿತು. ಭರತನಿಗೆ ರಾಜ್ಯ ದೊರಕಿಸಿ ಕೊಡಲು ಮಂಥರೆ ಹಲವು ಕುತಂತ್ರ ಮಾಡಿದಳು, ನಂತರ ಭರತ ಹಿಂದುರಿಗಿ ಬಂದ ಮೇಲೆ ಅವನಿಂದ ತಿರಸ್ಕಾರಕ್ಕೆ ಒಳಗಾಗಿ, ರಾಮನನ್ನು ಕರೆತರಲು ಕಾಡಿಗೆ ಹೋಗಿ ಕಾಳ್ಗಿಚ್ಚಿನಲ್ಲಿ ಸಿಲುಕಿ ಭಸ್ಮವಾಗುತ್ತಾಳೆ. ರಾಮಾಯಣದ ಕೊನೆಯ ಭಾಗದಲ್ಲಿ ರಾಮ ಬರದೆಯಿದಾಗ ಭರತ ಅಗ್ನಿಪ್ರವೇಶ ಮಾಡಲು ಹೋದಾಗ ಯಜ್ಞಕುಂಡದಿಂದ ಸುಂದರ ಸೂಕ್ಷ್ಮತೇಜದ ಸುರಾಂಗನಾ ಮೂರ್ತಿಯಾಗಿ ಮಂಥರೆ ಕಾಣಿಸಿಕೊಳ್ಳುತ್ತಾಳೆ. ಮೂಲದಲ್ಲಿ ಗೂನಿಯಾಗಿ, ಹೃದಯಹೀನಳಾಗಿ, ದುಷ್ಟೇಯಾಗಿ ಕಾಣಿಸಿಕೊಳ್ಳುವ ಮಂಥರೆ ರಾಮಾಯಣ ದರ್ಶನದಲ್ಲಿ ರಾಮಾಯಣದ ಕಥೆಗೆ ಕಾರಣಳಾಗಿ ರಾಮಾನವತಾರದ ವಿಕಾಸಕ್ಕೆ ಆ ಮೂಲಕ ಅನೇಕ ಜೀವಿಗಳ ಉದ್ಧಾರಕ್ಕೆ ಸಾಧನವಾಗಿ ಪುಣ್ಯ ಲಕ್ಷ್ಮೀಯಾಗಿ ಕುವೆಂಪುರವರಿಗೆ ಕಂಡಿದ್ದಾಳೆ,

ಸೀತೆಯ ಪಾತ್ರ ಚಿತ್ರಣದಲ್ಲಿ ಕುವೆಂಪುರವರು ಮೂಲದಿಂದ ಹೆಚ್ಚೇನೂ ಬದಲಾವಣೆ ಮಾಡಿಕೊಂಡಿಲ್ಲ ಹದಿಬದೆಯ ರಥಿದೇವಿ ಎಂದ ಕವಿ ಅವಳಿಗೆ ರಾವಣನಿಂದಲೇ ಬಿರುದು ಕೊಡಿಸುತ್ತಾರೆ. ಅವಳ ದಿಟ್ಟತನ ವಿಚಾರವಂತಿಕೆಗಳನ್ನು ಚಿತ್ರಿಸುವ ಒಂದು ಸನ್ನಿವೇಶವನ್ನು ಕಾಣುತ್ತೇವೆ. ಅದು ಕುವೆಂಪು ಅವರ ಸ್ವಂತದ ಸೇರ್ಪಡೆ ವನವಾಸದ ಸಂದರ್ಭದಲ್ಲಿ ರಾಮ ರಾಕ್ಷಸ ಸಂಹಾರದಲ್ಲಿ ತೊಡಗಿದ್ದಾಗ ಸೀತೆ ರಾಮನನ್ನು ಕುರಿತು. ಹೀಗೆ ಹೇಳುತ್ತಾಳೆ ಒಬ್ಬ ರಾಕ್ಷಸ ಅನ್ಯಾಯವಾದರೆ ಎಲ್ಲ ರಾಕ್ಷಸರನ್ನೂ ಕೊಲ್ಲುವುದು ಎಷ್ಟರ ಮಟ್ಟಿಗೆ ಸರಿ? ಎಂದು ಪ್ರಶ್ನಿಸುತ್ತಾಳೆ. ಇಲ್ಲಿ ಹೆಣ್ಣಿನ ವಿಚಾರವಂತಿಕೆಯನ್ನು ದಿಟ್ಟತನವನ್ನು ಮೆಚ್ಚುವ ಕುವೆಂಪುರವರ ದೃಷ್ಟಿಕೋನವನ್ನು ಕಾಣುತ್ತೇವೆ. ಕುವೆಂಪು ಅವರ ಮಂಡೋದರಿ "ನನ್ನ ವೋಲತಿ ದುಃಖಿ ಲಂಕೆಯೊಳಗಂತಿರ್ಕೆ ಸೃಷ್ಟಿಯೊಳಗಿಲ್ಲ" ಎನ್ನುತ್ತಾಳೆ. ಜಗತ್ತಿನಲ್ಲಿ ಎಲ್ಲ ಸ್ತ್ರೀಯರೂ ಒಂದಲ್ಲ ಒಂದು ಸಾರಿ ಈ ಮಾತನ್ನು ತಮಗೆ ತಾವೇ ಹೇಳಿಕೊಂಡಿರಬಹುದು, ಹೆಣ್ಣಿನ ಈ ನೋವನ್ನು ಕುವೆಂಪು ಅರ್ಥ ಮಾಡಿಕೊಂಡಿದ್ದಾರೆ. ರಾಮಾಯಣ ದರ್ಶನದಲಿ ಸೀತೆ, ಮಡೋದರಿಯರಿಬ್ಬರೂ ರಾವಣನ ಆತ್ಮೋದ್ಧಾರಕ್ಕಾಗಿ ತಪಸ್ಸನ್ನು ಕೈಗೊಂಡರು ಎಂಬಂತೆ ಚಿತ್ರಿಸುತ್ತಾರೆ. ಕುವೆಂಪು ಅವರ ರಾಮಾಯಣ ದರ್ಶನದ ಸ್ತ್ರೀ ಪಾತ್ರಗಳೆಲ್ಲ ಒಂದಲ್ಲ ಒಂದು ರೀತಿಯಲ್ಲಿ ತಪಸ್ವಿಯರೇ ಅವರ 'ಚಿತ್ರಾಂಗದಾ' ಕಾವ್ಯದ ಚಿತ್ರಾಂಗದೆಯೂ ತಪಸ್ವಿನಿಯೇ.

ರಾಮಾಯಣ ದರ್ಶನದಲ್ಲಿ ನಮ್ಮ ಗಮನ ಸೆಳೆಯುವ ಮತ್ತೊಂದು ಪಾತ್ರವೆಂದರೆ ವಿಭೀಷಣನ ಮಗಳಾದ ಸುಂದರ ಸುಸಂಸ್ಕೃತ ಕನ್ಯೆ, 'ಅನಲೆ'ಯದು, ಈ ಪಾತ್ರ ಮೂಲ ರಾಮಾಯಣದಲ್ಲಿಲ್ಲ ಕುವೆಂಪುರವರ ಸ್ವಂತ ಸೃಷ್ಟಿ ಅನಲೆಯು ಸುಸಂಸ್ಕೃತ ನಡವಳಿಕೆಯನ್ನು ಅದೃಶ್ಯವಾಗಿ ನೋಡಿದ ಆಂಜನೇಯ ಇಂಥವರಿಂದಲೇ ಲಂಕಾ ಕನಕಲಕ್ಷ್ಮೀ ಕ್ಷೇಮವಾಗಿದ್ದಾಳೆ ಎಂದುಕೊಳ್ಳುತ್ತಾನೆ. ರಾವಣನಂಥ ಲೋಕ ಭಯಂಕರನೂ ಕೂಡ ಅನಲೆಯನ್ನು ಕುರಿತು 'ಇವಳೆನ್ನ ಕಾಪಾಡುವ ದೇವಿ' ಎನ್ನುತ್ತಾನೆ. ದೇಶ ಭ್ರಷ್ಟ ವಿಭೀಷಣನೊಡನೆ ರಾವಣನನ್ನು ಪ್ರತಿಭಟಿಸಿ ತಾನೂ ಹೊರಟುನಿಂತ ಅನಲೆಯನ್ನು ರಾವಣ ಹೋಗಬೇಡ ಮಗಳೆ ಎಂದು ಬೇಡಿಕೊಳ್ಳುತ್ತಾನೆ. ಹತಮಾರಿ ರಾವಣನ ಹೃದಯದಲ್ಲಿನ ಪ್ರೀತಿ ಮಾರ್ದವತೆ, ವಾತ್ಸಲ್ಯ ಇವುಗಳ

ಪ್ರತಿರೂಪವೇನೋ ಎಂಬಂತೆ ಅನಲೆಯ ಪಾತ್ರ ಚಿತ್ರಿತವಾಗಿದೆ. ಕುವೆಂಪುರವರು ಶತಮಾನದ ಬದಲಾದ ಮೌಲ್ಯಗಳಿಗೆ ಅನುಗುಣವಾಗಿ ರಾಮಾಯಣದ ಪುನಃ ಸೃಷ್ಟಿ ಮಾಡಿದ್ದಾರೆ.

ಒಟ್ಟಿನಲ್ಲಿ ಕುವೆಂಪು ಅವರ ಕಾವ್ಯದಲ್ಲಿ ಕಂಡುಬರುವ ಹೆಣ್ಣಿನ ಚಿತ್ರ ಪರಂಪರಾಗತವಾದದ್ದು, ಸನಾತನ ಭಾರತೀಯ ಮೌಲ್ಯಗಳಿಂದ ಪ್ರೇರಿತವಾದದ್ದು, ಆದರ್ಶ ಪರವಾದದ್ದು ಕುವೆಂಪುರವರ ಕಾವ್ಯದಲ್ಲಿ, ಹೆಣ್ಣು ನಿಸರ್ಗದಲ್ಲಿ ತಾಯಿಯಾಗಿ, ಕಾವ್ಯ ಶಿವೆಯಾಗಿ ಕಲ್ಪನೆಗಳಲ್ಲಿ ಸೌಂದರ್ಯದ ಪ್ರತೀಕವಾಗಿ, ಪತಿಯಲ್ಲಿ ಶಿವೆಯಾಗಿ ಆಧ್ಯಾತ್ಮದಲ್ಲಿ ಜಗನ್ಮಾತೆಯಾಗಿ, ರಾಮಾಯಣ ದರ್ಶನಂನಲ್ಲಿ ತಪಸ್ವಿನಿಯಾಗಿ ಕಾಣಿಸಿಕೊಂಡಿದ್ದಾಳೆ. ಕುವೆಂಪುರವರ ದೃಷ್ಟಿಯಲ್ಲಿ ಸ್ತ್ರೀ ಸ್ವಭಾವದ ಚಿತ್ರಣ ಅತ್ಯಂತ ಮಾನವೀಯವೂ ಮೌಲ್ಯಯೂತವು, ವಾಸ್ತವವು ಆದ ರೀತಿಯಲ್ಲಿ ವ್ಯಕ್ತವಾಗಿದೆ.

## ಗ್ರಂಥಸೂಚಿ

**೧.ಶ್ರೀ.ರಾಮಾಯಣ ದರ್ಶನಂ –ಕುವೆಂಪು**

**೨.ರಸಋಷಿ ಕುವೆಂಪು – ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಾಲೆ**

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಕುವೆಂಪು ಸಾಹಿತ್ಯದಲ್ಲಿ : ದಲಿತ ಸಾಂಸ್ಕೃತಿಕ ಚಿಂತನೆ.

ಪ್ರೊ, ಪುಂಡಲೀಕ ಮಾದರ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಶ್ರೀ ಅನ್ನದಾನೇಶ್ವರ ಕಲಾ ವಿಜ್ಞಾನ ವಾಣಿಜ್ಯ
ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಕೇಂದ್ರ ನರೇಗಲ್ಲ.
ತಾ. ಗಜೇಂದ್ರಗಡ ಜಿ. ಗದಗ, ಪಿನಕೋಡ್೫೮೨೧೧೯

ಆಧುನಿಕ ಕನ್ನಡ ಸಾಹಿತ್ಯ ಯುಗದ ಪ್ರಪ್ರಥಮ ನಿರ್ಭೀತ ಸುಸಮರ್ಥ ಬಂಡಾಯ ಅಥವಾ ಕ್ರಾಂತಿಕವಿಯೆಂದರೆ ಕುವೆಂಪು ಅವರು ಭರತಖಂಡದ ಸರ್ವಾವನತಿಗೆ ಕಾರಣವಾದ ಸಾಹಿತ್ಯ ಸಂಪ್ರದಾಯಗಳನ್ನು ಅವುಗಳನ್ನು ಸೃಷ್ಟಿಸಿದ ಸಮಾಜಘಾತಕ ದೇಶದ್ರೋಹಿಗಳನ್ನು ಉಗ್ರವಾಗಿ ನ್ಯಾಯಬದ್ಧವಾಗಿ ಜಗತ್ತಿನ ನ್ಯಾಯದೇವತೆಯ ಮುಂದೆ ತಂದು ಬಿಚ್ಚಿ ತೋರಿಸಿದ. ನಿಲ್ಲಿಸಿದ ಅವರಂಥ ಗಂಡು ಸಾಹಿತಿಗಳು ವಿರಳಾತಿ ವಿರಳ ಇಲ್ಲವೆಂದರೂ ಸಲ್ಲುತ್ತದೆ. ಅವರು ಪದ್ಯಗದ್ಯಗಳಲ್ಲಿ ಭಾಷಣ ಸಂಭಾಷಣೆಗಳಲ್ಲಿ. ಹೋದಲ್ಲಿ ಬಂದಲ್ಲಿ ಆ ಪೈಶಾಚಿಕ ಸಾಹಿತ್ಯ ಸಂಪ್ರದಾಯಗಳನ್ನು ಬಯಲಿಗೆಳೆಯುತ್ತಾರೆ.

ನಾವು ಮತವೆಂದು ಕರೆದುಕೊಳ್ಳುವ ಆಚಾರ ಸಮೂಹ ಬರಿಯ ಸಾಮಾಜಿಕವಾದ ಕಟ್ಟು ಕಟ್ಟಳೆಗಳ ಕಾಟವಾಗಿದೆ. ಒಬ್ಬರನ್ನೊಬ್ಬರ ಮುಟ್ಟದಿರುವುದು, ನೋಡದಿರುವುದು. ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು, ನಾವು ಹಾಕಿಕೊಳ್ಳುವುದು ವಿಭೂತಿ ಹಚ್ಚಿಕೊಳ್ಳುವುದು; ಮುದ್ರೆ ಹೊಡೆದುಕೊಳ್ಳುವುದು ಶಿಲುಭೆ ಧರಿಸಿಕೊಳ್ಳುವುದು; ಕೆಲವರನ್ನು ಸಾರ್ವಜನಿಕವಾದ ಬಾವಿ ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು, ಮತ್ತೆ ಕೆಲವರನ್ನು ಗುಡಿಯೊಳಗೆ ಹತ್ತು ಹೆಜ್ಜೆ ಮಾತ್ರ ಬರಗೂಡಿಸುವುದು: ಹಾಗೆ ಬರಗೂಡಿಸಬೇಕೇ ಬೇಡವೇ ಎಂದು ಚರ್ಚೆ ನಡೆಸುವುದು: ಇತ್ಯಾದಿ ಕೆಲಸಕ್ಕೂ ಬಾರದ ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ ವ್ಯವಹಾರಗಳ ಸಮಷ್ಟೀಯೇ ನಮ್ಮ ಮತದ ಹುರುಳಾಗಿ ಕುಳಿತಿದೆ! ಎಂಬುದು ಭರತಖಂಡದ ಪರಿಸ್ಥಿತಿ ಉಪನಿಷತ್ತು ಭಗವದ್ಗೀತೆ ಮತ್ತು ಮಹಾವಿಭೂತಿಗಳು ಸಾರಿದ ಅಮೃತ ಸಂದೇಶಕ್ಕೂ ಶೂದ್ರ ವರ್ಗಕ್ಕೂ ಬಹುದೂರ ಅವನ್ನು ಕೇಳಿಕೊಳ್ಳುವ ಕಿವಿಗೆ ಕಾದ ಸೀಸವನ್ನು ಸುರಿಯಬೇಕು: ಓದುವ ನಾಲಗೆಯನ್ನು ಸೀಳಬೇಕು ವೇದೋಪನಿಷತ್ತುಗಳು ಮುಗಿಯದ ಗ್ರಂಥಗಳ; ಋಷಿ ಪರಂಪರೆಯೂ ಮುಗಿದು ಹೋಗಿಲ್ಲ. ಹೊಸಋಷಿಗಳ ಹೊಸ ವೇದ ವಾಕ್ಯಗಳ ಕಡೆಗೂ ಗಮನಹರಿಸಬೇಕೆಂದು ಕುವೆಂಪು ಸಂಕುಚಿತ ಬುದ್ಧಿಯ ಆಚಾರ್ಯರ ರೋಗಕ್ಕೆ ಮದ್ದು ಸೂಚಿಸುತ್ತಾರೆ. ದಾಸ್ಯ ಬುದ್ಧಿ ತೊಲಗಿ, ನಿರಂಕುಶಮತಿಗಳಾಗದಿದ್ದರೆ ದೇಶಕ್ಕೆ ಒಳಿತಾಗುವುದಿಲ್ಲವೆಂದವರು ಸ್ಪಷ್ಟಪಡಿಸುತ್ತಾರೆ.

"ಸರ್ವರಿಗೆ ಸಮಬಾಳು! ಸರ್ವರಿಗೆ ಸಮಪಾಲು" ಎಂದು ಕುವೆಂಪು ಹೊಸ ಯುಗದ ಸಂದೇಶವನ್ನು ಘೋಷಿಸುತ್ತಾರೆ, ಸಮಾಜದಲ್ಲಿ ತಾರತಮ್ಯಗಳಿರಬಾರದೆಂದು ಸಾರುತ್ತಾರೆ, ಹೋಗುತಿದೆ ಹಳೆಕಾಲ ಬರುತಲಿದದೆ" ಯೆಂದು ಮೊಳಗುತ್ತಾರೆ.

ಹಳೆಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ
ಕೊಚ್ಚಿ ಹೋಗಲಿ: ಬರಲಿ ವಿಜ್ಞಾನ ಬುದ್ಧಿ,

ನಿರಂತರ ಪರಿವರ್ತನೆ ಜಗತ್ತಿನ ಲಕ್ಷಣ; ಜ್ಞಾನ ವಿಜ್ಞಾನಗಳು ಜಡ ವಸ್ತುಗಳೆಲ್ಲ, ನಿರಂತರ ಬದಲಾವಣೆ ಅಥವಾ ವಿಕಾಸವೆ ಅವುಗಳ ಧರ್ಮ ಆದ್ದರಿಂದ ಮಾನವ ಹೊಸಕಾಲದ ಅಗತ್ಯಗಳಿಗನುಗುಣವಾಗಿ ತನ್ನ ಬದುಕಿನ ಸ್ವರೂಪವನ್ನು ಬದಲಾಯಿಸಿಕೊಳ್ಳಬೇಕು.

ಹಳೆಯ ಹಾನಿಕಾರಕ ಗೊಡ್ಡು ಸಂಪ್ರದಾಯಗಳನ್ನು ಬಿಟ್ಟು ಹೊರಬರಬೇಕೆಂದು ಕವಿ ಕುವೆಂಪು ಜನರಿಗೆ ಕರೆಕೊಡುತ್ತಾರೆ

ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮುಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರಡೊಡಲೈತನ್ನಿ
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ
ಓ ಬನ್ನಿ ಸೋದರರೇ ಬೇಗ ಬನ್ನಿ
ಸಿಲುಕದಿರಿ ಮತವೆಂಬ ಮೋಹದ ಜ್ಞಾನಕ್ಕೆ
ಮತಿಯಿಂದ ದುಡಿಯಿರೈ ಲೋಕ ಹಿತಕ್ಕೆ
ಆ ಮತದ ಈ ಮತದ ಹಳೆಮತದ ಸಹವಾಸ

ಸಾಕಿನ್ನು ಸೇರಿರೈ, ಮನುಜ ಮತಕ್ಕೆ
ಓ ಬನ್ನಿ, ಸೋದರರೆ, ವಿಶ್ವಪಥಕೆ!

ಹಲವು ಮತ, ಹಲವು ಲಾಂಛನಗಳಿಂದಾಗಿ ಮಾನವ ಸಮಾಜ ಹಲವು ಚೂರುಗಳಾಗಿ ಒಡೆದು ಹೋಗಿದೆ. ಅದರಿಂದಾಗಿ ಒಬ್ಬನನ್ನು ಕಂಡರೆ ಮತ್ತೊಬ್ಬನಿಗಾಗುವುದಿಲ್ಲ. ಅವರ ಜೀವನದಲ್ಲಿ ಸುಖಶಾಂತಿಗಳಿಲ್ಲ ಮನುಜಮತ ಗುರಿಯಗಿ, ವಿಶ್ವಪಥ ಕ್ರಮಿಸುವ ಪಥವಾದರೆ ಜಗದ ಬದುಕು ಪ್ರಶಾಂತವಾಗಿರುತ್ತದೆ, ಮತಗಳು ತೊಲಗಿ, ಮನುಷ್ಯ ಅನಿಕೇತನನಾದಾಗ ಜನ ಶಾಂತಿಯಿಂದ ಬದುಕುತ್ತಾರೆ, ಇದು ಕವಿಯ ಮಹದಾಶಯ.

ಓ ನನ್ನ ಚೇತನ
ಆಗು ನೀ ಅನಿಕೇತನ
ರೂಪ ರೂಪಗಳನು ದಾಟಿ
ನಾಮ ಕೋಟಿಗಳನು ಮೀಟಿ
ಎದೆಯ ಬಿರಿಯ ಭಾವ ದೀಟಿ
ಓ ನನ್ನ ಚೇತನ
ಆಗು ನೀ ಅನಿಕೇತನ,
ನೂರು ದೇವರನೆಲ್ಲ ನೂಕಾಚೆದೂರ
ಭಾರತಾಂಬೆಯ ದೇವಿ ನಮಗಿಂದು ಪೂಜಿಸುವ ಬಾರ,

ಎಂದು ಕವಿ ಗುಡುಗುತ್ತಾರೆ.

ಅಸ್ಪೃಶ್ಯತೆಗೆ ಸಂಬಂಧಿಸಿದ ಪ್ರತಿಮಾ ರೂಪಕ ಜಲಗಾರ, ತಮ್ಮ ಇಪ್ಪತ್ತ ಮೂರು ಇಪ್ಪತ್ತ ನಾಲ್ಕರ ತಾರುಣ್ಯದಲ್ಲಿ ಕುವೆಂಪು ಅವರು ಸಮಷ್ಟಿ ಚೈತನ್ಯವನ್ನು ಪ್ರತಿಬಿಂಬಿಸಿ ಬರೆದ ನಾಟಕ, ಇಲ್ಲಿ ಯಾವ ಮಾನವ ಪಾತ್ರಗಳೂ ಇಲ್ಲ, ಸಮಾಜ ಜಾತೀಯತೆ ಅಸ್ಪೃಶ್ಯತೆಗಳ ರಣರಂಗವಾಗಿದ್ದ ಕಾಲ. ಈ ನಾಟಕದ ಪ್ರಮುಖ ಪಾತ್ರ ಜಲಗಾರ ಅವನ ಪಾತ್ರವನ್ನು ವೈಭವೀಕರಿಸುವ ಮೂಲಕ ಅಸ್ಪೃಶ್ಯತೆಯ ಅತಿರೇಕವನ್ನು ನಾಟಕಕಾರರು ಲೋಕದ ಗಮನಕ್ಕೆ ತರಲು ಮಾಡಿರುವ ಪ್ರಾಮಾಣಿಕ ಪ್ರಯತ್ನವಿದು ನಾಟಕಕಾರರಿಗೆ ಅಸ್ಪೃಶ್ಯರ ಬಗೆಗಿರುವ ಗೌರವ, ಅಸ್ಪೃಶ್ಯತೆ ಬೇಗ ತೊಲಗಬೇಕೆನ್ನುವ ಕಾತರತೆ ಈ ನಾಟಕದಲ್ಲಿ ವ್ಯಕ್ತವಾಗಿದೆ, ಇಲ್ಲಿಯ ಜಲಗಾರ ಬಹು ಸುಸಂಸ್ಕೃತ ವ್ಯಕ್ತಿ ನಡೆನುಡಿಗಳಲ್ಲಿ ಬುದ್ಧಿ ಭಾವಗಳಲ್ಲಿ, ಸಂಸ್ಕಾರದಲ್ಲಿ ನೀತಿ ಪ್ರೀತಿಗಳಲ್ಲಿ ಸಮಾಜದಲ್ಲಿಯೇ ತನ್ನ ಸುತ್ತಮುತ್ತಣವರಿಗಿಂತ ತುಂಬ ಔನ್ನತ್ತಕ್ಕೇರಿರುವ ವ್ಯಕ್ತಿ, ಕವಿ ಸಹಜವಾದ ನಿಸರ್ಗ ಪ್ರಿಯತೆ ಅವನ ನರನಾಡಿಗಳಲ್ಲಿ ಪ್ರವಹಿಸುತ್ತದೆ.

ಜಗದ ಕಣ್ಣೆ, ಬಾಬಾ!
ಮಲೆಯ ಹತ್ತಿ ಮುಸುಗನೆತ್ತಿ
ಹಸುರ ಮೇಲೆ ಮುತ್ತ ಬಿತ್ತಿ
ಜಗದೆವೆಗಳ ತೆರೆಯುತ
ಕಮಲಂಗಳ ಬಿರಿಯುತ
ತಿರೆಗೆ ಜೀವ ಕಳೆಯ ಗೀಡಿ
ಜನಗಳೆದೆಗಡ ರಸವಮಾಡಿ
ಮೂಡಿ ಬಾ, ಮೂಡಿ ಬಾ
ಬೇಗ ಬಾ, ಬಾ, ಬಾ,!

ರಮ್ಯಾರುಣೋದಯದಲ್ಲವನು ಸೃಷ್ಟಿಕರ್ತನನ್ನು ಕಾಣುತ್ತಾನೆ, ಅವನಿಗೆ ಕಂಡದ್ದು ನಾಟಕದ ಮತ್ತಾರಿಗೂ ಕಾಣಿಸದು.

"ಇಂದು ನಮ್ಮೂರು ಶಿವ ಗುಡಿಯ ಜಾತ್ರೆ! ಬರುವುದಿಲ್ಲವೆ ನೀನು? ಎಂದು ರೈತ ಕೇಳಿದಾಗ, 'ನನಗೇಕೆ ಶಿವಗುಡಿಯ ಜಾತ್ರೆ? ಜೋಯಿಸರು ದೇಗುಲದ ಬಳಿಗೆನ್ನ ಸೇರಿಸರು' ಎಂದು ಜಲಗಾರ ಉತ್ತರಿಸುತ್ತಾನೆ

"ದೂರದಲ್ಲಿಯೇ ನಿಂತು ಕೈ ಮುಗಿದು ಬಾ" ಎಂದು ರೈತ ಅವನಿಗೆ ಸಲಹ ಮಾಡುತ್ತಾನೆ ಅವನ ಸಲಹೆಗೆ ಜಲಗಾರ ಕೊಡುಗೆ ಎತ್ತರ ನಿತ್ಯಸತ್ಯದಿಂದ ಕೂಡಿದೆ.

ಕರ್ಮವಾರಾಧನೆ, ಸೇವೆಯೇ ಪೂಜೆ,
ನನ್ನ ಭಾಗಕ್ಕೆ ಪೂರಕ ಆರತಿ, ಗುಡಿಸುವುದೆ
ನನ್ನ ದೇವರ ಪೂಜೆ!– ನಿನ್ನೆ ದೇಗುಲದಡೆಗೆ
ಹೋದೆನ್ನ ಕಂದನಂ ಬೈದಿರಿದು ನೂಂಕಿದರು.

ಜಲಗಾರನ ಈ ಮಾತುಗಳಲ್ಲಿ ಗೀತೋಪನಿಷತ್ತುಗಳ ಸಂದೇಶವೇಹುದುಗಿದೆ. ಈ ಎತ್ತರಕ್ಕೇರಲು ಯಾವ ಪಂಡಿತನಿಗಾಗಲಿ ಸಾಧಕನಿಗಾಗಲಿ ಸಾಧ್ಯವಿಲ್ಲ. ಇಷ್ಟೇ ಅಲ್ಲ ಗುಡಿಗೆ ಹೋಗಬೇಕಾದ ಪ್ರಮೇಯವಿಲ್ಲವೆಂದು ರೈತನಿಗೂ ಉಪದೇಶ ನೀಡುವನು.

ಕರ್ಮವೆ ಪರಮನಾರಾಧನೆಯೆಂದು ತಿಳಿದ, ಕಸದಲ್ಲಿಯೇ ಭಗವಂತನನ್ನು ಕಂಡ ಸಮಾಜದ ಆದರ್ಶ ಪುರುಷನಾದ ಜಲಗಾರನಿಗೆ ಶಿವ ಪ್ರತ್ಯೆಕ್ಷನಾಗದಿರುತ್ತಾನೆಯೆ? ಆದರೆ ಊರ ಜಲಗಾರನ ಮುಂದೆ ಅವನು ಜಗದ ಜಲಗಾರನಾಗಿ ಪ್ರತ್ಯಕ್ಷನಾಗುತ್ತಾನೆ.

ತೊಳಗುತಿಹ, ಚುಕ್ಕಿಗಳು
ಬೆಳಗಿತಿಹ ಚಂದಿರನು, ದಿನದಿನವೂ ತಳತಳಸಿ
ಬಾಂದಳದಿ ಸುತ್ತುತಿಹ ದಿನಮಣಿಯು ಭೋರ್ಗರೆವ
ಕಡಲುಗಳು ತಿಳಿಯಾಗಿ ಹರಿಯುತಿಹ ಹೊಳೆಗಳು
ಮರೆಯುವ ಅರಣ್ಯಗಳು, ಎಲ್ಲವೂ ಎಲ್ಲೂ
ಜಲಗಾರನೊಬ್ಬನಿಗೆ ಋಣಿಯಾಗಿ ಬಾಳುತಿವೆ!

ಕಸವಿದ್ದರೆ ರಸವೂಸರದು, ಆದ್ದರಿಂದಲೇ ಕಸವನ್ನು ತಗೆಯುವ ಜಲಗಾರ ಅನಿವಾರ್ಯ.

ಕೊನೆಗೆ ಜಲಗಾರ ಭಾವವಶನಾಗು 'ಶಿವ ನಾನು; ಶಿವನಾನು! ಎಂದು ನುಡಿಯುತ್ತ ಶಿವನ ತೆಕ್ಕಗೊಳಗಾಗುತ್ತಾನೆ, ಅಂದರೆ ಕರ್ಮನಿರತರೆಲ್ಲರಿಗೂ ಮುಕ್ತಿ ತಪ್ಪದು ಎಂಬುದು ಈ ನಾಟಕದ ಉದ್ದೇಶ, ವೈಭವೀಕರಣದ ಮೂಲಕ ವಾಸ್ತವತೆಯನ್ನು ಪ್ರತಿಬಿಂಬಿಸುವ ನಾಟಕವಿದು, ಪುರಾಣದ ವಾತಾವರಣದಲ್ಲಿ ವಿಕಾಸಗೊಂಡಿರುವ ಈ ನಾಟಕ ನಾಡಿನ ಮಾನ ಸಾಮಾಜಿಕ ಕ್ರಾಂತಿಯನ್ನು ಪ್ರಚೋದಿಸುತ್ತದೆ.

ಶೂದ್ರನ ತಪೋ ಮಹಿಮೆಯನ್ನು ಹಾಗೂ ಕ್ಷಾತ್ರ ತೇಜಸ್ಸನ್ನು ಕಂಡರಾಗದ ಬ್ರಾಹ್ಮಣರ ಚಿತ್ರಣ 'ಶೂದ್ರ ತಪಸ್ವಿ' ಮತ್ತು "ಬೆರಳ್‌ಗೆ ಕೊರಳ್" ನಾಟಕಗಳಲ್ಲಿ ಪಡಿಮೂಡಿದಡ.

ಶೂದ್ರನ್ ತಪಂಗೆಯ್ವೊಂದು ಅಧರ್ಮಕ್ಕೆ
ವರ್ಣಾಶ್ರಮ ಧರ್ಮದುಲ್ಲಂಘನೆಯ ಪಾಪಕ್ಕೆ
ನಿನ್ನ ಬಾಲಪ್ರಜೆಯೊರ್ವನ್ ಬಲಿಯಾದನ್
ಮುಂದಾವ ಮಹತ್ಕಾರ್ಯಮಂ ಗೆಯ್ಯಲಿರ್ದನೋ?

ಎಂದು ಬ್ರಾಹ್ಮಣ ಶ್ರೀರಾಮನ ಮುಂದೆ ಅಳುತ್ತಾನೆ. ಶಂಬೂಕನು ಮಹಾತಪಸ್ವಿ ತಪಸ್ವಿಯ ತಿರಸ್ಕೃತಿಗೆ ಮುನಿದ ಧರ್ಮಂ ತಂದು ದೀತನ ಮುದ್ದು ಕಂದಂಗೆ. "ತನ್ನ ರಾಜ್ಯದೊಳುಂ ಅಕಾಲ ಮೃತ್ಯುವಂ" ಎಂದು ಶ್ರೀರಾಮ ನಿರ್ಣಯಿಸುತ್ತಾನೆ.

"ಬೆರಳ್‌ಗೆ ಕೊರಳ್" ನಾಟಕದ ಏಕಲವ್ಯ ವೃದ್ಧ ದ್ರೋಣಾಚಾರ್ಯರ ಕೀರ್ತಿಗೆ ಮರುಳಾದ ಆತ ಅವನ ಬಳಿ ಬಿಲ್ವಿದ್ಯೆ ಕಲಿಯಲು ಇಚ್ಚಿಸುತ್ತಾನೆ, ಆಗವನ ತಂದೆ ಹೇಳುವ ಬುದ್ಧಿವಾದವಿದು;

..........ಅವರ್ ಪಾರ್ವರ್
ಬಿಯದರ್ಗೆ ಒವಜುಗೆಯ್ಯಲ್ಕೆ ಒಪ್ಪರ್,
ನಿನ್ನನ್ ಗಹಗಹಿಸಿ ನಕ್ಕು ನೂಂಕುವರ್,

ಎಂದು ಹೇಳಿದರೂ ಏಕಲವ್ಯ ತನ್ನಾಸೆಯುರಿಯನ್ನು ತಂದೆಯ ಗಮನಕ್ಕೆ ತಂದಾಗ, ತಂದೆ ಒಪ್ಪಿಕೊಳ್ಳುತ್ತಾನೆ. ಏಕಲವ್ಯ ಹಸ್ತನಾಪುರಕ್ಕೆ ಹೋಗಿ ದ್ರೋಣನನ್ನು ಕಾಣುತ್ತಾನೆ ದ್ರೋಣ ಅವನನ್ನು ಅಡಿಯಿಂದ ಮುಡಿಯವರೆಗೆ ನೋಡಿ ಬಿಲ್ವಿದ್ಯೆ ಕಲಿಸಲು ಒಪ್ಪಿಕೊಳ್ಳುತ್ತಾನೆ. ಆದರೆ ಆತನ ಬಿಲ್ಲೇಳ್ಗೆಯನ್ನು ಕಂಡ ಅರ್ಜುನ ಕರುಬಿ

ಶೂದ್ರನೊಡನೆಮಗೆ ಸಮಚರ್ಯಸಲ್ಲದೆಂದಾಡಿ
ಸೆಡೆತನ್, ಮುನಿದನ್, ಕೀಳವೋಲಾಡಿದನ್.

ಆದರೆ ದ್ರೋಣಾಚಾರ್ಯರು ಏಕಲವ್ಯ ಹುಟ್ಟನ್ನು ಮರೆತು, ಅವನ ಯೋಗ್ಯತೆಯನ್ನು ಗುರುತಿಸಿ, ತಮ್ಮ ಮಗ ಅಶ್ವತ್ಥಾಮನೊಡನೆ ಅವನಿಗೆ ಬಿಲ್ವಿದ್ಯೆಯನ್ನು ಕಲಿಸುತ್ತಾರೆ. ಏಕಲವ್ಯ ತನ್ನೂರಿಗೆ ಹಿಂದಿರುಗಿದ ನಂತರವೂ ದ್ರೋಣನ ವಿಗ್ರಹವನ್ನು ಕಣ್ಮುಂದಿರಿಸಿಕೊಂಡು ತನ್ನ ಕಲಿಕೆಯನ್ನು ಮುಂದುವರಿಸುತ್ತಾನೆ.

ಕುವೆಂಪು ತಮ್ಮ ಜೀವಮಾನದಲ್ಲಿ ಯಾವ ವಿಧವಾದ ತಾರತಮ್ಯವನ್ನು ಸಹಿಸಿದವರಲ್ಲ ಅಂಥ ತಾರತಮ್ಮವನ್ನು ನಾಟಕಗಳಲ್ಲಿ ಉಗ್ರವಾಗಿ ಖಂಡಿಸುತ್ತಾರಲ್ಲದೆ ಕೆಳವರ್ಗದವರ ವಾಸ್ತವ ಜೀವನವನ್ನು ಕಾದಂಬರಿಗಳಲ್ಲಿ ಹಾಗೂ ಕಥನ ಕವನಗಳಲ್ಲಿ ತುಂಬ ಸಹಾನುಭೂತಿಯಿಂದ ಚಿತ್ರಿಸುತ್ತಾರೆ, ಅಂಥವುಗಳಲ್ಲಿ "ಕರಿಸಿದ್ಧ" ಪ್ರಸಿದ್ಧವಾದೊಂದು ಕಥನ ಕವನ.

ಬಡಜನರ ಜೀವನದಲ್ಲಿ ಉಬ್ಬೆಗವ

ಹುಟ್ಟಿಸುವ ಸಂಗತಿಗಳೇನಿಲ್ಲ ಎಂದೆಲ್ಲ.
ತಿಳಿದಿಹರು

ಅದರಿಂದಾಗಿ ವಾಲ್ಮೀಕಿ ಮೊದಲಾದ ಕಬ್ಬಿಗಳು ರಾಮನಂತಹ ರಾಜರನೆ ಕುರಿತು ಕೊಬ್ಬಿರುವ ಕಾವ್ಯಗಳ ಕಚಿಸಿದರು, ತಾವು ಪುಟ್ಟ ಕವಿಯಾದ್ದರಿಂದ ಪುಟ್ಟ ಕತೆ ಬರೆಯುದಾಗಿದೆ ಹೇಳುತ್ತ ಕರಿಸಿದ್ಧನ ಕತೆಯನ್ನು ಬರೆಯುತ್ತಾರೆ ಎಂಥ ಕಠಿಣ ಹೃದಯವನ್ನಾದರೂ ಕರಗಿಸುವ ಹೃದಯ ವಿದ್ರಾವಕವಾದ ಕತೆಯನ್ನು ಛಂದಸ್ಸಿನ ಚೌಕಟ್ಟಿನಲ್ಲಿ ರಚಿಸಿರುವ ಕವಿಯ ಸಾಮಾನ್ಯತೆ ಪ್ರಜ್ಞೆ ವಿಶಿಷ್ಟ ಹಾಗೂ ಅಪರೂಪ.

" ನಾಗಿ ಇಂದಿಗು ಅಂಬ ಅಂಬಾ ಎಂದು ತುಮಗೆಯ ಕರೆದು ಕರೆದೂ
ದೆವ್ವವಾಗಿ ಕತ್ತಲಲ್ಲಿ ತಿರುಗುತಿರುವಳು "ಎಂಬರು"
ಕೆಲರು" ಹುಣ್ಣಿಮೆಯ ರಾತ್ರಿಯಲ್ಲಿ ಅಪ್ಪಿದಸ್ಥಿಯ ಪಂಜರೆರಡು
ಕೇಕೆ ಹಾಕುತ ಮಾದಿಸಿಂಗರ ಅಟ್ಟುತಿರುವುದು "ಎಂಬರು!

ಮಹಾಕಾವ್ಯ ಮಹಾಕಾದಂಬರಿಗಳನ್ನು ರಚಿಸಿದ ಕುವೆಂಪು ಅವರು ಹಳ್ಳಿಯ ಬಡವರ ಜೀವನವನ್ನು ಕರುಣಾಜನಕವಾಗಿ ಆಧುನಿಕರಿಗೆ ಸೋಜಿಗವಾಗದಿರದು.

ಮಲೆನಾಡಿನ ಜನಜೀವನದ ಸಮಗ್ರ ಚಿತ್ರಣ ಕುವೆಂಪು ಅವರ ಎರಡು ಬೃಹತ್ ಮತ್ತು ಮಹತ್ವದ ಕಾದಂಬರಿಗಳಲ್ಲಿ ಜೀವಂತವಾಗಿ ಬರುತ್ತದೆ ಜನಜೀವನ ಎಂದರೆ ಯಾವುದೋ ಒಂದು ಜಾತಿಗೆ ಮಾತ್ರ ಸೀಮಿತವಾದದ್ದಲ್ಲ; ಆ ಪ್ರದೇಶದಲ್ಲಿ ಬಾಳು ನಡೆಸುವ ಎಲ್ಲ ಜನರ ಸಾಮೂಹಿಕ ಸಂಬಂಧ, ಅಲ್ಲಿಯ ಪುರೋಹಿತರ ಸಾಹುಕಾರರ ಒಕ್ಕಲಿಗರ ಕೂಲಿಗಳ ಬಾಳಿನ ಜತೆ ಜತೆಗೆ ಅನೇಕ ದಲಿತರ, ಅಸ್ಪೃಶ್ಯರ ಹಾಗೂ ಕೆಳವರ್ಗಗಳ ಬಾಳೂ ಹೆಣೆದುಕೊಂಡಿರುತ್ತದೆ. ಹಳೇ ಪೈಕ, ಬಿಲ್ಲವ ಹಸಲ, ಚೀಲ ಹೊಲೆಯ ಮೊದಲಾದ ಜಾತಿ ವರ್ಗಗಳು ಜೀತಗಾರರಾಗಿಯೋ ಕೂಲಿಗಳಾಗಿಯೋ ಜೀವನ ನಡೆಸುತ್ತಾರೆ ಕಾದಂಬರಿಕಾರರು ಅವೆಲ್ಲರ ವಾಸ್ತವ ಜೀವನವನ್ನು ಯಥಾವತ್ತಾಗಿ ಇದ್ದದ್ದಿದ್ದಂತೆ ಚಿತ್ರಿಸುತ್ತಾರೆ.

" ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು" ಎನ್ನುವ ಸೂಕ್ತಿಗೆ ಭಾಷ್ಯವೆನ್ನುವಂತೆ ರಚಿತವಾಗಿರುವ ಕುವೆಂಪು ಅವರ ಎರಡನೆಯ ಕಾದಂಬರಿ ಮಲೆಗಳಲ್ಲಿ ಮದುಮಗಳು" ಇಲ್ಲಿ ಯಾರೂ ಮುಖ್ಯರಲ್ಲ./ಯಾರೂ ಅಮುಖ್ಯರಲ್ಲ:/ಯಾವುದೂ ಯಃಕಶ್ಚಿವಲ್ಲ.

ಎಂಬ ವಿಶಿಷ್ಟ ಸಂದೇಶವನ್ನು ವಾಚಕರು ಗಮನಿಸಬೇಕಾದ್ದು ಅತ್ಯವಶ್ಯ ಇಲ್ಲಿ ಪ್ರಮುಖ ಘಟನೆಯೆಂಬುದಿಲ್ಲ. ಎಲ್ಲ ಪ್ರಮುಖ ಘಟನೆಗಳೇ ಪ್ರಧಾನ ಅಥವಾ ನಾಯಕ ಪಾತ್ರವೆಂಬುದಿಲ್ಲ ಎಲ್ಲ ಪ್ರಧಾನ ಪಾತ್ರಗಳೇ ಇಲ್ಲಿ ಅನೇಕ ಗೌಡರ ಮತ್ತು ಹೆಗ್ಗಡೆಗಳ. ಆಳುಕಾಳುಗಳ ಪ್ರಸಂಗವಿದ್ದರೂ, ಮುಕುಂದಯ್ಯ ಚಿನ್ನಮ್ಮ ಅವರು ಪ್ರಮುಖ ಪಾತ್ರಗಳಂತೆ ಕಂಡರೂ, ಗುತ್ತಿಯೇ ಕಾದಂಬರಿಯಲ್ಲಿ ಅವನೊಬ್ಬ ಕ್ರಿಯಾಶೀಲನಾದ ಎತ್ತರದ ವ್ಯಕ್ತಿ.

ಜಾತೀಯತೆ ಮತೀಯತೆ ಸ್ತ್ರೀಪುರುಷ ಮೊದಲಾದ ಸಾಮಾಜಿಕ ತಾರತಮ್ಯಗಳ ಕಡು ವಿರೋಧಿ ಕುವೆಂಪು, ಮನುಜಮತ, ವಿಶ್ವಪಥ ಸರ್ವೋದಯ ಸಮನ್ವಯ ಬ್ರಾಹ್ಮೀದೃಷ್ಟಿ ಎಂಬ ಪಂಚಮಂತ್ರಗಳನ್ನೊಳಗೊಂಡ ವಿಶ್ವಮಾನವ ಸಂದೇಶವನ್ನು ರೂಪಿಸಿದವರು ಹಾಗೂ ಅದರಂತೆ ನಡೆಯುವವರು ಅವರು ಅವರ ಎರಡು ಕಾದಂಬರಿಗಳಲ್ಲಿಯೂ ಅಸ್ಪೃಶ್ಯರನ್ನೊಳಗೊಂಡಂತೆ ಮಲೆನಾಡಿನ ಸಮಗ್ರ ಜನಜೀವನದ ವಾಸ್ತವ ಚಿತ್ರಣವಿದೆ. ಅಸ್ಪೃಶ್ಯರ ಜೀವನ ಚಿತ್ರಣ ವಾಸ್ತವವಾಗಿದ್ದರೂ ಅವರ ಜೀವನ ಸುಧಾರಣೆಯಾಗಬೇಕೆಂಬ ಕಾತರತೆ ವಾಸ್ತವತೆಯಲ್ಲಿ ಹುದುಗಿರುವಂತೆ ತೋರುತ್ತದೆ.

"ಮಲೆಗಳಲ್ಲಿ ಮದುಮಗಳು" ಕಾದಂಬರಿ ರಚಿತವಾದ ಸಮಯದಲ್ಲಿ ಶೂದ್ರ ಜನಾಂಗದ ಪರಿಸ್ಥಿತಿ ಹೇಗಿತ್ತೆಂಬುದನ್ನು ಲೇಕ್ ಹಿಲ್ ಪಾದ್ರಿ ವಿವರಿಸುತ್ತಾರೆ "ದೇವಯ್ಯನವರು... ಬ್ರಾಹ್ಮಣರ ಹಿಂದೂಧರ್ಮದ ಮೌಢ್ಯವಲಯದಿಂದ ಹೊರಬರಲು ಕಾತರರಾಗಿದ್ದಾರೆ ಬ್ರಾಹ್ಮಣರ ಜಗದ್ಗುರುಗಳು ಅವರ ಮಠಗಳೂ ಅವರ ಪುರೋಹಿತರೂ ನಾಮಧಾರಿಗೌಡರ ಜನಾಂಗವನ್ನು ಕೀಳುಭಾವನೆಯಿಂದ ಕಾಣುತ್ತಿರುವುದನ್ನು ಅವರ ವಿದ್ಯೆ ಕಲಿತು ಮುಂದಕ್ಕೆ ಬರದಂತೆ ಮಾಡಲು ವರ್ಣಾಶ್ರಮಧರ್ಮ ಸ್ವಧರ್ಮ ಪರಿಪಾಲನೆ ಮೊದಲಾದ ತತ್ವಗಳನ್ನು ತಂದೊಡ್ಡಿ ತಾವೇ ಬರೆದಿಟ್ಟಿರುವ ಸಂಸ್ಕೃತ ಶ್ಲೋಕಗಳನ್ನು ಉದ್ಧರಿಸಿ ಆ ಶಾಸ್ತ್ರೋಕ್ತಿಯನ್ನು ಉಲ್ಲಂಘಿಸಿದರೆ ದೇವರ ಕೋಪಕ್ಕೂ ಬ್ರಾಹ್ಮಣರ ಶಾಪಕ್ಕೂ ಗುರಿಯಾಗಿ ನರಕಕ್ಕೆ ಹೋಗುತ್ತಾರೆಂದು ಹೆದರಿಸುವುದನ್ನು ಸಹಿಸಿ ಸಹಿಸಿ, ಅವರಿಗೆ ಸಾಕಾಗಿದೆ, ಆದ್ದರಿಂದ ಈ ಬ್ರಾಹ್ಮಣರ ಹಿಡಿತದಿಂದ ಹೊರಬಂದು ತಮ್ಮ ಜನಾಂಗದ ಉದ್ಧಾರವನ್ನು ಸಾಧಿಸಬೇಕೆಂಬುದೇ ಅವರ ಅಭಿಲಾಸೆ,, ಇದು ಆಗಿನ ಕಾಲದ ಶೂದ್ರ ದುಸ್ಥಿತಿಯಾದರೆ ಅತಿ ಶೂದ್ರ ಸ್ಥಿತಿ ಚಿಂತಾಜನಕವಾದುದೆಂದೇ ಹೇಳಬೇಕಾಗಿದೆ ಕುವೆಂಪು ಅವರಂತೆ ನಿರ್ಭೀತರಾಗಿ ನಿರ್ದಾಕ್ಷಿಣ್ಯವಾಗಿ ಶೂದ್ರಾತಿ ಶೂದ್ರರ ದುಸ್ಥಿತಿಯನ್ನು ಬ್ರಾಹ್ಮಣರ ಅಹಮಹಮಿಕೆಯನ್ನು ಬಯಲು ಮಾಡಿದ ಸಾಹಿತಿಗಳೇ ಅಪರೂಪವೆಂದು ಹೇಳಬೇಕು.

ಶೂದ್ರತ್ವವಾಗಲಿ, ಅಸ್ಪೃಶ್ಯತೆಯಾಗಲಿ, ಜಾತೀಯತೆಯಾಗಲಿ, ಮತೀಯತೆಯಾಗಲಿ ಕುವೆಂಪು ಅವರಿಗೆ ಹಿಡಿಸುವುದಿಲ್ಲ ಅವರಷ್ಟು, ಖಾರವಾಗಿ ಅವುಗಳನ್ನು ಬೇರಾವ ಸಾಹಿತಿಯೂ ವಿರೋದಿಸಿಲ್ಲ ಯಾವ ಸಮಾಜದಲ್ಲಿಯೇ ಆಗಲಿ ತಾರತಮ್ಯಗಳು ಅಕ್ಷಮ್ಯ ಎಂಬುದು ಅವರ ನಿಶ್ಚಿತ ಮತ ಪ್ರತಿಯೊಬ್ಬ ಮಾನವನಲ್ಲಿಯೂ ಭಗವದಂಶವಿರುವುದರಿಂದ ಅವನು ತಿರಸ್ಕಾರ್ಯನಲ್ಲವೆಂದವರು ಒತ್ತಿ ಹೇಳುತ್ತಾರೆ.

" ಸರ್ವೋದಯ"ವೇ ಸ್ವಾತಂತ್ರೋತ್ತರ ಭಾರತದ ಗುರಿಯಾಗಬೇಕೆಂಬುದು ಅವರ ನಿರಂತರ ಕನಸು ಮತ್ತು ತಪಸ್ಸು.

ಸಾರಿ ಬಾ ಸರ್ವರ್ಗೆ ಸ್ವಾತಂತ್ರ್ಯಮಂ:
ಸಾರಿ ಬಾ ಸರ್ವರ್ಗೆ ಸಾಮ್ಯಮಂ
-------------------
ಆ ಜಾತಿಯ ಈ ವರ್ಣದ
ಭೇದದ ಭೂತವನಿಂದೇ
ಸಂಹರಿಸುವ ಸುರನೀತಿಯ
ಮೃತವಾಗಲಿ ಪಥವೊಂದೆ!

ಸ್ವತಂತ್ರ ಭಾರತದಲ್ಲಿ ಯಾವ ಭೇದವೂ ಇರಬಾರದೆಂಬುದೇ ಅವರ ವೃತ

ಸಾಮಾನ್ಯತೆ ಭಗವಂತನ ರೀತಿ:
ಸಾಮಾನ್ಯವೆ ದಿಟ ಭಗವಂತ್ ಪ್ರೀತಿ!
ಸಾಮಾನ್ಯರು ನಾವೂ!
ಓ ಬನ್ನಿಂ, ಬನ್ನಿಂ,
ಸಾಮಾನ್ಯರ ಪೂಜೆಗೆ ದೀಕ್ಷೆಯಕೊಳ್ಳಿಂ ನೀವೂ!
---------------------
ಕಮ್ಮಾರನೊ ಚಮ್ಮಾರನೊ
ಕಾಯಕವೆಲ್ಲವು ಪೂಜ್ಯ!

ಸಾಮನ್ಯತೆ ಹಾಗೂ ಸಾಮನ್ಯರು ಭಗವಂತನಿಗೆ ಮೆಚ್ಚು ಸರ್ವಾಧಿಕಾರಿಗಳ ರಾಜ ಮಹಾರಾಜರ ಕಾಲ ಮರೆಯಾಯಿತು, ಇದು ಪ್ರಜಾಭ್ಯುದಯದ ಕಾಲ ಎಂದವರು ಘೋಷಿಸುತ್ತಾರೆ. ಸಮಾಜದಲ್ಲಿನ ಕಾಯಕವೇ ಪೂಜ್ಯವಾದಾಗ ಶೂದ್ರತ್ವ ಅಸ್ಪೃಶ್ಯತೆಗಳು ಕಾಣೆಯಾಗುತ್ತವೆ! ಮೇಲು ಕೀಳುಗಳು ಅಳಿಸಿಹೋಗಿ ಸಮಾನತ್ವ ಪ್ರಾಪ್ತವಾಗುತ್ತವೆ ಸುಖ ಶಾಂತಿಗಳು ನೆಲೆಸುತ್ತವೆ.

**ಪರಾಮರ್ಶನ ಕೃತಿಗಳು**

೧. ಆತ್ಮ ಶ್ರೀಗಾಗಿ ನಿರಂಕುಶ ಮತಿಗಳಾಗಿ, ಕುವೆಂಪು
೨. ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ – ಕುವೆಂಪು
೩. ಜಲಗಾರ – ಕುವೆಂಪು
೪. ಶೂದ್ರ ತಪಸ್ವಿ – ಕುವೆಂಪು
೫. ಬೆರಳ್‌ಗೆ ಕೊರಳ್ – ಕುವೆಂಪು
೬. ನಿದಂಕುಶ ಮತಿಯ ಸರ್ವೋದಯ, ಕುವೆಂಪು ಕಾದಂಬರಿಗಳಲ್ಲಿ ದಲಿತರು
೭. ನಿರಂಕುಶ ಮತಿಯ ಸರ್ವೋದಯ, ಲೋಕ ಗುರುವಿನ ಹಾದಿಯಲ್ಲಿ
೮. ಇಕ್ಷು ಗಂಗೋತ್ರಿ ಶ್ರೀ ಸ್ವಾತಂತ್ರೋದಯ ಮಹಾಪ್ರಗಾಥ
೯. ಶ್ರೀ ಸಾಮಾನ್ಯ ದೀಕ್ಷಾಗೀತೆ – ಕುವೆಂಪು

# ಕುವೆಂಪು ಅವರ ಮಕ್ಕಳ ಸಾಹಿತ್ಯ

**ಡಾ.ಸಂಜೀವ.ಆರ್.ನಾಯಕ**
**ಕೆ.ಎಲ್.ಇ.ಸಂಸ್ಥೆ**
**ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯ**
**ಹಾವೇರಿ**

**ಕುವೆಂಪು ಕನ್ನಡ ಸಾಹಿತ್ಯದ ಶ್ರೀಮತಿಕೆಯನ್ನು ಹೆಚ್ಚಿಸಿದ ಮಹಾನ್ ಚೇತನ. ಅವರ ಸಾಹಿತ್ಯದ ಹರವು ಹಬ್ಬಿದ್ದು ಭಾವಗೀತೆಯಲ್ಲಿ, ಕಾದಂಬರಿಲೋಕದಲ್ಲಿ, ಸಣ್ಣಕಥೆಗಳ ರೂಪದಲ್ಲಿ ಜೀವನ ಚರಿತ್ರೆಗಳ ಹಿನ್ನಲೆಯಲ್ಲಿ, ನಾಟಕಗಳ ವೈವಿಧ್ಯತೆಯಲ್ಲಿ ವಿಮರ್ಶಾಗ್ರಂಥಗಳಲ್ಲಿ ಅಲ್ಲದೇ ಬೃಹತ್ ಕೃತಿಯಾದ "ಶ್ರೀರಾಮಾಯಣ ದರ್ಶನಂ" ಎಂಬ ಮಹಾ ಕಾವ್ಯಾದಲ್ಲಿ. ಹೀಗೆ ಪ್ರತಿಭೆಯ ಹಲವು ಮುಖಗಳನ್ನು ಕಾಣುವದು ಪುಟ್ಟಪ್ಪನವರಂಥ ಕೆಲವೇ ಜನರಲ್ಲಿ ಮಾತ್ರ ಸಾಧ್ಯ.ಈ ಲೇಖನದಲ್ಲಿ ನಾನು ಪ್ರಮುಖವಾಗಿ ಕೇವಲ** ಶ್ರೀಕವಿ ಕುವೆಂಪು ಮಕ್ಕಳ ಸಾಹಿತ್ಯ ಕುರಿತು ಮಾತ್ರ ಅವಲೋಕನ ಮಾಡಿರುತ್ತೇನೆ.ಕನ್ನಡದಲ್ಲಿ ಮಕ್ಕಳ ಸಾಹಿತ್ಯವನ್ನು ವಿಪುಲವಾಗಿ ನಿರ್ಮಾಣ ಮಾಡಿದವರಲ್ಲಿ ಶ್ರೀಕವಿ ಕುವೆಂಪು ಅವರು ಪ್ರಮುಖರಾಗಿದ್ದಾರೆ.

ಎಲ್ಲಾ ಭಾಷೆಯಲ್ಲಿ **ಮಕ್ಕಳ**ಸಾಹಿತ್ಯ ಪ್ರಕಾರವೊಂದು ಇರುವುದು ಅತ್ಯಂತ ಪ್ರಮುಖ ಎಂದು ಬೇರೆ ಹೇಳಬೇಕಾಗಿಲ್ಲ. ಇದು ಮಾನವ ಬಾಳಿನ ಮಂದಾರಗಳಂತಿರುವ ಮಕ್ಕಳ ಮಾನಸಿಕ ಬೆಳವಣಿಗೆಗೆ ತುಂಬ ನೆರವಾಗುತ್ತದೆ.'ಬೆಳೆಯುವ ಪೈರು ಮೊಳಕೆಯಲ್ಲಿಯೇ' ಎಂಬ ನಾಡ ಗಾದೆಯನ್ನು ಮನಗಂಡು ಮಕ್ಕಳನ್ನು ಶೈಶವದಿಂದಲೇ ಸದ್ಗುಣಗಳ ತೌರನ್ನಾಗಿ ಮಾಡಬೇಕು.ರಾಷ್ಟ್ರದ ಬಹುತೇಕ ಶಕ್ತಿಯಾಗಲಿರುವ ಇವರನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ಅದು ದೊಡ್ಡ ನಷ್ಟವೇ ಸರಿ, ಯಾವುದೇ ದೇಶದ ಭದ್ರಬುನಾದಿ ಈ ಮಕ್ಕಳು. ಅಂತಹವರ ಜೀವನವನ್ನು ವ್ಯವಸ್ಥಿತಗೊಳಿಸುವುದು ದೊಡ್ಡವರ ಹಾಗೂ ರಾಷ್ಟ್ರನಿರ್ಮಾಪಕರ ಆದ್ಯ ಕರ್ತವ್ಯ. ಇದಕ್ಕೆಲ್ಲ ಮೂಲ ಸಾಧನವಾಗಿ **ಮಕ್ಕಳ**ಜೀವನದ ರೂಪೀಕರಣದಲ್ಲಿ ಮಹತ್ತಾದ ಪಾತ್ರವನ್ನು ವಹಿಸುತ್ತದೆ ಸಾಹಿತ್ಯ, ನಮ್ಮ ರಾಷ್ಟ್ರ ಈ ದಿಶೆಯಲ್ಲಿ ಆಸಕ್ತಿ ವಹಿಸಿ **ಮಕ್ಕಳ**ಸಾಹಿತ್ಯದ ಸೃಜನೆ ಪಾಲನೆ ಬೆಳವಣಿಗೆಗೆ ಆಸ್ತಿ ತೋರಿಸಿ ಸಹಕರಿಸುತ್ತಿರುವುದು ಸ್ತುತ್ಯಾರ್ಹ ಸಂಗತಿ, ಸಾಹಿತಿಯಾದವನು ಈ ಬಗ್ಗೆ ರೂಪಿಸ ನಿರ್ಲಕ್ಷ್ಯವಹಿಸದೆ ನಾಟಕ, ಕಥೆ, ಕವನಗಳ ಮುಖಾಂತರ ಮಕ್ಕಳ ಮನಸ್ಸನ್ನು ಆಕರ್ಷಿಸಿ ತಿದ್ದಿ ಬೇಕಾದುದು ಮಾತ್ರವಲ್ಲದೆ ಉನ್ನತಾದರ್ಶಗಳ ಕಡೆಗೆ ಒಲಿಯುವಂತೆ ಮಾಡಬೇಕು. ಅಂತು ಅದರಿಂದ ಮನರಂಜನೆ ಹಾಗೂ ಮನೋವಿಕಾಸ ದೊರೆಯುವಂತಿದ್ದರೆ ಸಾಕು.ನಮ್ಮೆಲ್ಲ ಪ್ರಾದೇಶಿಕ ಭಾಷೆಗಳಲ್ಲಿ ಇಂತಹ ವಿಪುಲವಾದ ಸಾಹಿತ್ಯ ಬೆಳೆಯಬೇಕಾಗಿದೆ.ಕನ್ನಡದಲ್ಲಿ **ಮಕ್ಕಳ**ಸಾಹಿತ್ಯದ ವಿಪುಲ ಸೃಷ್ಟಿ ಕಾಣದಿದ್ದರೂ ಅಭಾವವಂತು ಇಲ್ಲವೆಂದು ಹೇಳಬಹುದಾಗಿದೆ.ಕನ್ನಡದಲ್ಲಿ ಕೆಲವು ಲೇಖಕರು ಕೆಲವರು ಈ ದಿಶೆಯಲ್ಲಿ ಕೆಲಸಮಾಡಿರುವುದು, ಮಾಡುತ್ತಿರುವುದು ಮತ್ತೊಂದು ಪ್ರಶಂಸನೀಯವಾದ ವಿಷಯ.ಈ ಹಿನ್ನಲೆಯಲ್ಲಿ ಕುವೆಂಪುರವರ ಮಕ್ಕಳ ಸಾಹಿತ್ಯ ಆಧ್ಯಯನ ಮಾಡಿದಾಗ ಶ್ರೀ ಕುವೆಂಪು ಅವರು ಭಾಷೆಯ ಹಾಗೂ ಅಭಿವ್ಯಕ್ತಿಸಾಧನದ ಸಾಧ್ಯತೆಗಳೆಲ್ಲವನ್ನೂ ಸೂರೆಗೊಂಡ ಮಹೋನ್ನತ ಪ್ರತಿಭೆಯ ಕವಿ, ಇಷ್ಟು ಆಳ ವೈಶಾಲ್ಯಗಳೆರಡರಲ್ಲಿಯೂ ವೈವಿಧ್ಯ ವೈಶಿಷ್ಟಗಳೆರಡರಲ್ಲಿಯೂ ಈ ಕವಿಯನ್ನು ಸರಿಗಟ್ಟಬಲ್ಲ ಇನ್ನೊಬ್ಬ ಕನ್ನಡದ ಕವಿ ಇಲ್ಲವೆಂದರೆ ಅದು ಅತ್ಯುಕ್ತಿಯಾಗಲಾರದು.ಈ ಯುಗದ ಯಾವ ಸಾಹಿತ್ಯ ಪ್ರಕಾರವೂ ಇವರಿಂದ ವಂಚಿತವಾಗಿಲ್ಲ. ಇದಕ್ಕೆ **ಮಕ್ಕಳ**ಸಾಹಿತ್ಯವೇ ನಿತಾಂತ ನಿದರ್ಶನವಾಗಿದೆ. ರಾಮಾಯಣದರ್ಶನ, ಕಾನೂರು ಹೆಗ್ಗಡಿತಿಯಂತಹ ಮಹಾಕೃತಿಗಳನ್ನು ರಚಿಸಿದ ಕುವೆಂಪು ಮಕ್ಕಳ ಸಾಹಿತ್ಯವನ್ನೂ ನಿರ್ಮಿಸಿತೆಂದರೆ ಆಶ್ಚರವಾಗದಿರದು.ಆ ದಿವ್ಯ ಪ್ರತಿಭೆಗೆ ಯಾವುದೂ ಹೊರತಲ್ಲ, ಅವಸ್ತುವಲ್ಲ, ಮಕ್ಕಳ ಹೃದಯದ ಅಂತರಾಳದಲ್ಲಿ ನಡೆಯುವ ಭಾವಭಾವನೆಗಳನ್ನೂ ಸ್ವಪ್ರಾತಿಶಯಗಳನ್ನೂ ಆನಂದೋತ್ಕರ್ಷಗಳನ್ನೂ ಅಭಿವ್ಯಕ್ತ ಪಡಿಸುವುದರ ಮೂಲಕ ಕುವೆಂಪು ಮಕ್ಕಳ ಬದುಕಿನ ಎಲ್ಲ ಕಡೆಗೂ ಗಮನ ಹರಿಸಿದ್ದಾರೆ ಎಂಬುದನ್ನು ಕಂಡುಕೊಳ್ಳಬಹುದಾಗಿದೆ. **ಮಕ್ಕಳ**ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಈ ಕವಿ ಒಟ್ಟು ೮ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಅಮಲನಕಥೆ, ಹಾಳೂರು, ಬೊಮ್ಮನ ಹಳ್ಳಿಯ ಕಿಂದರಿಜೋಗಿ ಇವು ಮೂರು ಕಥನ ಕವನಗಳು ; ನನ್ನ ಮನೆ, ಮೇಘಪುರ, ಮರಿ ವಿಜ್ಞಾನಿ–ಇವು ಮೂರು ಕವನ ಸಂಕಲನಗಳು ; ಮೋಡಣ್ಣನ ತಮ್ಮ, ನನ್ನ ಗೋಪಾಲ– ಇವೆರಡು ನಾಟಕಗಳು. ಇವರ ಈ **ಮಕ್ಕಳ**ಸಾಹಿತ್ಯ ಮಕ್ಕಳ ಮನೋವಿಕಾಸಕ್ಕೆ ಪುಷ್ಕಳವಾದ ಆಹಾರ. ಇದರಲ್ಲಿ ಮನರಂಜನೆಯಿದೆ, ಮನಸೆಳೆವ ರಮ್ಯ ಅಭಿವ್ಯಕ್ತಿಯಿದೆ; ಹಾಗೂ ಉನ್ನತ ದರ್ಶನವಿದೆ. ಇನ್ನು ಇವರ ಕೃತಿಗಳ ಅವಲೋಕನ ಮಾಡಿದಾಗ

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

ಅಮಲನ ಕಥೆ' ೧೯೨೪ರಲ್ಲಿ ಹೊರಬಿದ್ದ ಕವಿಯ ಮೊಟ್ಟ ಮೊದಲ ಪ್ರಕಟಿತ ಗ್ರಂಥ ಇದರಲ್ಲಿ ೧೯೦ ಚೌಪದಿಗಳಿವೆ. ಪ್ರತಿ ಪದ್ಯದಲ್ಲಿಯೂ ಸಾಮಾನ್ಯವಾಗಿ ಆದಿಪ್ರಾಸವನ್ನು ಕಾಣಬಹುದು.

ಆದರೆ ಮಾನೌಮಿಯ ಚೌಪದ ಇವೆರಡರಿಂದಲೂ ಭಿನ್ನ ಎನ್ನುವುದು ಇಲ್ಲಿ ಗಮನಾರ್ಹ ವಿಚಾರ, ಅಮಲನ ಕಥೆ ಗೋವಿನ ಕಥೆಯ ಮಟ್ಟಿನಲ್ಲೇ ರಚಿತವಾಗಿದ್ದು, ಅಂಥದೇ ದರೆ ಮಾನ್ ಕಥಾಸರಣಿಯನ್ನೊಳಗೊಂಡ ಕಥನ ಕವನ, ಭಾವ ಭಾಷೆಗಳ ಬಾಹು ಬಂಧನದ ಮೊದಲ ಅವಿ ರ್ಭಾವವನ್ನು ಇಲ್ಲಿ ಕಾಣಬಹುದಾಗಿದೆ. ಜಿಂಕೆಯೊಂದನ್ನು ಬದುಕಿಸಲು ಭಾಷೆ ಕೊಟ್ಟು, ಅದಕ್ಕಾಗಿ ತನ್ನ ಪ್ರಾಣವನ್ನೇ ಕೊಡಲು ಸಿದ್ಧನಾಗಿ ನುಡಿದ ಭಾಷೆಗೆ ಎರಡು ಬಗೆಯದೆ ಸತ್ಯವನ್ನು ಮೆರೆದು ಭಗವಂತನನ್ನು ಸಾಕ್ಷಾತ್ಕರಿಸಿಕೊಂಡ ಪುಣ್ಯಮೂರ್ತಿ ಮುಕ್ತಾತ್ಮ ಅಮಲನ ಕಥೆಯೇ ಇಲ್ಲಿನ ಕಥಾವಸ್ತು. ಕಥೆ ಸುತ್ತು ಬಳಸಿಲ್ಲದೆ ನೇರವಾಗಿ ಪ್ರಾರಂಭವಾಗುವುದು ಇದರ ಮತ್ತೊಂದು ವೈಶಿಷ್ಟ್ಯ.ನಮ್ಮ ಪ್ರಾಚೀನ ಕಥೆಗಳೆಲ್ಲವನ್ನೂ ಮನದಂದರೆ, ಅವುಗಳ ಜಾಡೆಲ್ಲ ಇದೇಯೆಂದು ಗೊತ್ತಾಗದಿರದು.ಮಕ್ಕಳಿಗೂ ಪ್ರಿಯವಾದದ್ದು ಇಂತಹ ಕಥನ ಶೈಲಿ.ಅದ್ಭುತ ಇಲ್ಲವೆ ಭಕ್ತಿಪರ ಕಥೆಗಳೆಂದರೆ ಮಕ್ಕಳಿಗೆ ಪಂಚಪ್ರಾಣ.ಈ ನಿಟ್ಟಿನಲ್ಲಿ ಅಮಲನ ಕಥೆ ಮಕ್ಕಳ ಮನಸ್ಸಿನ ಮೇಲೆ ಅದ್ಭುತವಾದ ಪರಿಣಾಮವನ್ನುಂಟು ಮಾಡುವುದರಲ್ಲಿ ಸಂದೇಹ ವಿಲ್ಲ. ಅಮಲನ ಕಥೆ ಭಕ್ತಿಪರವಾದರೂ ಒಂದು ರೀತಿಯಲ್ಲಿ ಅದ್ಭುತವೇ ಆಗುತ್ತದೆ.ವಸ್ತು, ಶೈಲಿ ಹಾಗೂ ಪರಿಣಾಮ ಈ ಮೂರರ ದೃಷ್ಟಿಯಿಂದಲೂ ಅಮಲನ ಕಥೆ ಮಕ್ಕಳ ಸಾಹಿತ್ಯಕ್ಕೆ ಒಂದು ಒಳ್ಳೆಯ ಕಾಣಿಕೆಯಾಗಿದೆ.

ಅಮಲನು ಹರಿಯ ನಾಮಸ್ಮರಣೆಯ ಬಲದಿಂದ ಭಕ್ತಿಯ ಶಕ್ತಿಯಿಂದ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡು ದೇವನಾದುದೇ ಇಲ್ಲಿಯ ಕಥೆ, ಬಾಲಕನಾದರೂ ತನ್ನ ನಿರ್ಮಲ ಭಾವದಿಂದ ಭಗವಂತನನ್ನು ದರ್ಶಿಸಿ ತಂದೆಯ ಸ್ಥಾನವನ್ನು ಪಡೆದ ವಿಮಲ ಮೂರ್ತಿ ಮಧುರನ ಕಥೆಯೂ ಇದರಲ್ಲಿ ಮಿಲನಗೊಂಡಿದೆ.ಭಕ್ತ–ಭಗವಂತರು ಬೇರೆ ಬೇರೆಯಲ್ಲ, ಅವರಿಬ್ಬರೂ ಒಬ್ಬರೇ ಎಂಬ ಭಾವ ಮೊದಲಿಂದ ಕೊನೆಯತನಕ ಒಡಮೂಡಿಬಂದಿದೆ.ಮಕ್ಕಳ ಮನಸ್ಸಿಗೆ ಅಳವಡುವಂತಹ ಚೊಕ್ಕ ಕಥೆ ಇದು. ಗಹನವಾದ ದರ್ಶನ ಅತ್ಯಂತ ಸರಳವಾಗಿ ನಿರೂಪಿತವಾಗಿರುವುದೊಂದು ಇದರ ಗುಣವಾದರೆ ; ತಾತ್ವಿಕ ಬೋಧೆ ಶುಷ್ಕ ವೇದಾಂತವಾಗದೆ ಹೂವಿನಲ್ಲಿರುವ ಪರಿಮಳದಂತೆ ಕಥೆಯ ನಿರೂಪಣೆಯಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿರುವುದು ಮತ್ತೊಂದು ವೈಶಿಷ್ಟ್ಯವಾಗುತ್ತದೆ. ಇಲ್ಲಿಯ ಭಾಷೆ ಸರಳ; ಭಾವ ಹೃದಯ ಗಮ್ಯ, ಕಥೆ ಮುಕ್ತಾಯಕ್ಕೆ ಸಾಗಿದಂತೆ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಮಕ್ಕಳ ಮನಸ್ಸನ್ನು ಸುಲಭವಾಗಿ ಕರಗಿಸುವಂತಹ ಶಕ್ತಿ ಇದರಲ್ಲಿ ಗೋಚರಿಸುವುದು ಮಾತ್ರವಲ್ಲದೆ ಅವರನ್ನು ಉನ್ನತಾದರ್ಶದಕಡೆಗೆ ಒಲಿಸುವ ಆಕರ್ಷಕಗುಣವನ್ನೂ ಕಾಣುತ್ತೇವೆ. ಎಲ್ಲ ವಿಧದಲ್ಲಿಯೂ ಮಕ್ಕಳ ಮನಮೋಹಕ ಕೃತಿ ಇದು, ಗೋವಿನ ಕತೆಯನ್ನು ಓದಿ ನಲಿದ ಬಾಲಕರು ಇದನ್ನೂ ಓದಿ ಆನಂದಿಸದಿರರು ; ಹಾಡಿ ತಣಿಯದಿರರು.

'ಬೊಮ್ಮನ ಹಳ್ಳಿಯ ಕಿಂದರಿಜೋಗಿ' ಕುವೆಂಪು ಅವರ ಮತ್ತೊಂದು ಮಕ್ಕಳ ಕಥನ ಕವನ, ಇದು ಇಂಗ್ಲಿಷ್ ಕವಿ ಬೌನಿಂಗನ 'ಖ್ಞಜ ಕುಜಜ ಖಿಣಿಜಡಿ ಠಜಿ ಣುಜ ಊಚಿಟಜಟುಟ' ಎಂಬ ಕಥನ ಕವನದ ಆಧಾರದ ಮೇಲೆ ರಚಿತವಾದದ್ದು ಇದು ೧೯೨೮ರಲ್ಲಿ ಮೊದಲ ಬಾರಿಗೆ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳು ಕರ್ಣಾಟಕ ಸಂಘದಿಂದ ಪ್ರಕಟಿಸಿದ 'ಕಿರಿಯಕಾಣಿಕೆ' ಎಂಬ ಕವನ ಸಂಕಲನದಲ್ಲಿ ಮುದ್ರಿತವಾಯಿತು. ಕುವೆಂಪು ಅವರಿಗೆ ಯಶಸ್ಸನ್ನು ತಂದುಕೊಟ್ಟ ಮೊಟ್ಟ ಮೊದಲ ಸುಪ್ರಸಿದ್ಧ ಕವನ ಇದು. ಇದನ್ನು ಓದಿ ತಣಿಯದ ಕನ್ನಡಿಗನಿಲ್ಲ ; ಹಾಡಿ ಕುಣಿಯದ ಮಕ್ಕಳಿಲ್ಲ. ಮಕ್ಕಳ ಮನವೊಪ್ಪುವಂತಹ ಕೃತಿ ಇದು. ಅವರ ಹೃದಯವನ್ನು ಸರ್ವವಿಧದಲ್ಲಿಯೂ ಸೂರೆಗೊಂಡಿರುವ ಈ ಕವನ **ಮಕ್ಕಳ**ಸಾಹಿತ್ಯಕ್ಕೆ ಅನರ್ಘ್ಯ ಕೊಡುಗೆ ಯಾಗಿದೆ.ಅಲ್ಲಿನ ಛಂದೋವಿಲಾಸವಾಗಲಿ, ಭಾವ ಮಾಧುರವಾಗಲಿ, ಭಾಷೆಯ ಬಳುಕಾಗಲಿ **ಮಕ್ಕಳ**ಶಿಶು ಮನಸ್ಸಿನ ಮೇಲೆ ಅದ್ಭುತ ಪರಿಣಾಮವನ್ನುಂಟುಮಾಡುವುದಲ್ಲದೆ, ಬಹುಕಾಲ ನಿಲ್ಲುವಂಥ ಮುದ್ರೆಯನ್ನೂ ಒತ್ತುತ್ತದೆ.ಭಾವ ಭಾಷೆಗಳ ಮಧುರ ಲೀಲೆಯನ್ನೇ ನೋಡುತ್ತೇವೆ. ಇಲ್ಲಿ ಕವಿ ಗಾರುಡಿಗನಾಗಿದ್ದಾನೆ ಎಂದೇ ಹೇಳಬೇಕು.ಅಲ್ಲದೆ ಕವಿಗೆ ಕಥನ ಕಲೆ ಒಗ್ಗಿ ಹೋಗಿರುವುದನ್ನು ಕೂಡ ಇಲ್ಲಿ ಕಾಣಬಹುದಾಗಿದೆ. ಕಥೆ ಅದ್ಭುತ ರಮ್ಯ ; ಸ್ವಪ್ನಸುಂದರ. ಮಕ್ಕಳ ಭಾವನಾ ಜೀವನಕ್ಕೆ ಕಲ್ಪನಾ ಲೋಕಕ್ಕೆ ಹೊಂದಿಕೊಳ್ಳು ವಂತಹ ಒಪ್ಪವಾದ ಕೃತಿ ಇದಾಗಿದೆ.ಕಥೆ ಎಡೆತಡೆಯಿಲ್ಲದೆ ಕಣ್ಣಿಗೆ ತಡೆಕಟ್ಟಿದ ತುರಗನಂತೆ ನಡೆದು ಕಡೆ ಯನ್ನು ಮುಟ್ಟುತ್ತದೆ.ಇಲ್ಲಿನ ಕಥಾವೈಖರಿ, ನೇರ ಕಥನ ಕ್ರಮ, ರಮ್ಯ ಅಭಿವ್ಯಕ್ತಿ–ಇವು ಮಕ್ಕಳ ಮನಸ್ಸನ್ನು ಅತ್ಯಂತ ಆಶ್ಚರ್ಯಕರವಾದ ರೀತಿಯಲ್ಲಿ ಆಕರ್ಷಿಸಿ ನಲಿಸುತ್ತವೆ.

'ಹಾಳೂರು' ಸರಳ ರಗಳೆಯಲ್ಲಿ ರಚಿತವಾಗಿರುವ ಒಂದು ನೀಳವನ, ಕಥನ ಸರಣಿಯ ರೂಪದಲ್ಲಿ ಇಲ್ಲಿನ ನಿರೂಪಣೆಯಿದೆ.ಇದು ಕತೆಯಲ್ಲದಿದ್ದರೂ, ಹಳ್ಳಿಯ ವ್ಯಥೆಯೇ ಇಲ್ಲಿಯ ಕಥೆಯಾಗಿದೆ. ನವ ನಾಗರಿಕತೆಯ ಬಿಸಿ ಸೋಂಕಿನಿಂದ ಹಳ್ಳಿಯ ಜನರೆಲ್ಲ ಪಟ್ಟಣಕ್ಕೆ ಮನಸೋತು ಸೇರಿದ ಮೇಲೆ, ಪಾಳಾದ ಹಾಳೂರನ್ನು ಕಂಡು ಬಿಸುಸುಯ್ದು ಕಂಬನಿ ದುಂಬಿ ಕವಿ ಕೊಡುವ ಗತವೈಭವದ ರಸಚಿತ್ರಗಳೇ ವರ್ಣನೆಗಳೇ ಇಲ್ಲಿಯ ವಸ್ತು, ಪಟ್ಟಣದ ಮಾರಿ ಬಂದು ಬಡಿದುಕೊಂಡು ಹೋದ ಮೇಲೆ ದುರಂತವೂ ಸ್ಮಶಾನ ಸದೃಶವೂ ಆದ ಹಳ್ಳಿಯನ್ನು ಪುರದ ಗೆಳೆಯನಿಗೆ ಪರಿಚಯ ಮಾಡಿಕೊಡುವುದರಿಂದ ಇದು ಪ್ರಾರಂಭವಾಗುತ್ತದೆ :

ಹಳ್ಳಿಯ ವಿವಿಧ ಜೀವನವನ್ನು ಪರಿಚಯಿಸುತ್ತಾ, ಗತಕಾಲದ ಗರ್ಭಕೋಶದಿಂದ ತೆಗೆದ ಕೆಲವು ಸ್ಮೃತಿ ಚಿತ್ರಗಳನ್ನು ಸವಿಯುತ್ತಾ ಮುಂದೆ ಮುಂದೆ ಬರುತ್ತಾರೆ. ಅಂದಿನ ಹಳ್ಳಿಯ ಪ್ರಶಾಂತ ಜೀವನವಾಗಲಿ,ಅದರ ಚೆಲುವಾಗಲಿ, ಉಳುವ ರೈತರಾಗಲಿ, ಸಂತಸದಿ ಮೆರೆವ ಬಾಲಕರಾಗಲಿ, ಪಂಚಾಯಿತರ ಕಟ್ಟೆ ಯಾಗಲಿ ಇಂದು ಕಾಣಬರುವುದಿಲ್ಲ. ಬಿದ್ದ ಗೋಡೆಗಳ ಮುರುಕುಲು ಗುಡಿಸಲುಗಳ ಹಾಳಾದ ಹಳ್ಳಿ ಇಂದು ನಗುವ ನಂದನವಲ್ಲ, ಅಳುವ ಕಂದರವಾಗಿದೆ.ಆದರೂ 'ಹಾಳಾದ ವೈಭವಕ ಮನ್ನಣೆಯಮಾಡು' ಎಂದು ಗೆಳೆಯನನ್ನು ಕೇಳಿಕೊಳ್ಳುವರು ಕವಿಗಳು, ಉದ್ದಕ್ಕೂ ಕರುಳು ಮಿಡಿಯುವಂತಹ ಚಿತ್ರಗಳನ್ನು ಒಂದಾದ ಮೇಲೊಂದರಂತೆ ತರುತ್ತಾ ಬರುತ್ತಾರೆ.ಅಂತಹ ಮಾಸದ ಚಿತ್ರಗಳಲ್ಲಿ ಬರಹಗಾರ ತಾತಯ್ಯನ ವ್ಯಕ್ತಿತ್ವವೂ ಒಂದು. ಕವಿ ಆತನ ವ್ಯಕ್ತಿತ್ವವನ್ನೂ ಮನಮುಟ್ಟುವಂತೆ ಕೊಟ್ಟು, ಆತನ ತಾಯುಡಿಯ ಪ್ರೀತಿಯನ್ನು ಶ್ಲಾಘಿಸಿ, ತಾಯನುಡಿಯೊಲುಮೆ ತಾತಯ್ಯಗಿದ್ದಂತೆ, ನಮಗಿದ್ದರೇನುಂಟು ತಾಯ್ನುಡಿಗೆ ಚಿಂತೆ ?' ಎಂದು ಕೊರಗುವರು. ಕವಿಯ ಕನ್ನಡ ಪ್ರೇಮ ಇಲ್ಲಿ ಮನನೀಯವಾಗಿ ವ್ಯಕ್ತವಾಗಿದೆ.

**'ಹಾಳೂರು'ಮಕ್ಕಳ**ಸಾಹಿತ್ಯಕ್ಕೆ ಕುವೆಂಪು ಅವರು ನೀಡಿದ ಮತ್ತೊಂದು ಅನನ್ಯ ಕಾಣಿಕೆ.ಇಂದಿನ ಹಳ್ಳಿ–ಪಟ್ಟಣಗಳ ಹಲವಾರು ಸಮಸ್ಯೆಗಳನ್ನು ಕನ್ನಡಿಸುತ್ತದೆ ಇದು. ಹಳ್ಳಿಯ ಜನರ ಉದ್ಧಾರಕ್ಕಾಗಿ ಕವಿ ಹೃದಯ ಹೇಗೆ ಮಿಡಿಯುತ್ತದೆ; ಹಾಳಾದ ಹಳ್ಳಿಯ ಮುರಿದ ಸೌಂದಯ್ಯಕ್ಕೆ ಹೇಗೆ ಅನುಕಂಪಿತವಾಗುತ್ತದೆಎಂಬುದನ್ನು ಇಲ್ಲಿ ನಿಚ್ಚಳವಾಗಿ ಕಾಣಬಹುದು. ಕವಿಯ ರಚನಾತ್ಮಕದೃಷ್ಟಿ ಈ ಕವನದ ಉದ್ದಗಲಗಳಲ್ಲಿ ಹರಡಿ ನಿಂತಿದೆ.ಕವಿಯೇ ಆದ್ರ ಹೃದಯದಿಂದ ಹಾಳಾದ ಹಳ್ಳಿಯ ಗತವೈಭವದ ಸ್ವರ್ಣ ಚಿತ್ರಗಳನ್ನು ವರ್ಣಿಸುತ್ತಾ ಬರುವುದು ಇದರ ಮತ್ತೊಂದು ವೈಶಿಷ್ಟ್ಯವಾಗಿದೆ.ಉನ್ನತ ಭಾವಗಳನ್ನು ರಮ್ಯ ಶೈಲಿಯಲ್ಲಿ ಅಭಿವ್ಯಕ್ತಗೊಳಿಸಿ ಮಕ್ಕಳ ಮನೋವಿಕಾಸಕ್ಕೆ ಅನುವು ಮಾಡಿಕೊಟ್ಟಿರುವುದು ಅಭಿನಂದನೀಯವಾದದ್ದು. ತುಳುತುಳುಕಿ ಬಳುಕಿ ಹರಿವ ನಿರ್ಝರದಂತೆ ಇಲ್ಲಿಯ ಛಂದಸ್ಸಿನ ಓಟವಿದೆ. ಇದರಲ್ಲಿ ಎರಡೆರಡು ಸಾಲು ಗಳು ಒಂದಾಗಿ ಅಂತ್ಯಪ್ರಾಸ ತಪ್ಪದೆ ಬರುತ್ತದೆ.ಇದು ಮಕ್ಕಳ ಮನಸ್ಸಿನ ಮೇಲೆ ತೀವ್ರವಾದ ಪರಿಣಾಮ ವನ್ನುಂಟು ಮಾಡುವುದರಲ್ಲಿ ಸಂದೇಹವಿರಲಾರದು.ಇಲ್ಲಿನ ಭಾವವಾಗಲಿ ಭಾಷೆಯಾಗಲಿ ಹಾಸು ಹೊಕ್ಕಾಗಿ ಸೇರಿಕೊಂಡು ಸಮಸ್ಯೆಗಳು ಕಥನದ ನಡಿಗೆಯಲ್ಲಿ ಕಲಾತ್ಮಕವಾಗಿ ನಿರೂಪಿತವಾಗಿರುವುದು ಮಕ್ಕ ಳಿಗೆ ಮತ್ತಷ್ಟು ಹಿತವೆನಿಸದಿರದು.

ಇನ್ನು ಭಾವಗೀತೆಗಳ ಕಡೆಗೆ ಹೊರಡಬಹುದು. ನನ್ನ ಮನೆ, ಮೇಘಪುರ, ಮರಿವಿಜ್ಞಾನಿ–ಇವು ಮೂರು ಕುವೆಂಪು ಅವರ ಶಿಶುಗೀತೆಗಳ ಸಂಕಲನಗಳು. ಇವುಗಳೆಲ್ಲದರಲ್ಲಿಯೂ ಸಾಮಾನ್ಯವಾಗಿ ಪ್ರಕೃತಿಯೆ ಪ್ರಧಾನ ಕಾಣಬರುತ್ತದೆ.ಅದರಲ್ಲಿ ಮಕ್ಕಳ ಮುಗ್ಧ ಪ್ರೇಮ ಹಾಗೂ ತಾಯಿಯ ವಾತ್ಸಲ್ಯ ಹಾಸುಹೊಕ್ಕಾಗಿ ಸೇರಿಕೊಂಡಿದೆ.'ನನ್ನ ಮನೆ ಮಕ್ಕಳ ಎಳೆಯ ಭಾವಭಾವನೆಗಳನ್ನೂ ಕವಿಯ ಅರಳುವ ಪ್ರತಿಭೆಯನ್ನೂ ಎತ್ತಿ ತೋರಿಸುವ ೧೫ ಭಾವಗೀತೆಗಳ ಸಂಗ್ರಹ.ಇಲ್ಲಿಯ ಎಲ್ಲ ಕವನ ಗಳಲ್ಲಿಯೂ ಮಕ್ಕಳ ಪ್ರಕೃತಿಪ್ರೇಮ ಮತ್ತು ಮಾತೃಪ್ರೇಮಗಳೇ ಮಡುಗಟ್ಟಿ ನಿಂತಿದೆ.ಅಲ್ಲದೆ ಕವಿಯ ಕನ್ನಡ ಪ್ರೇಮವನ್ನೂ ಪ್ರಕೃತಿಪ್ರೀತಿಯನ್ನೂ ಯಥಾವತ್ತಾಗಿ ಚಿತ್ರಿಸುತ್ತದೆ ಈ ಕೃತಿ.ಕವಿಯ ಕನ್ನಡ ಪ್ರೇಮಕ್ಕೆ ಒಂದು ನಿದರ್ಶನ.

ಕುವೆಂಪು ಅವರ ಬತ್ತದ ಪ್ರತಿಭಾ ಭಾಗೀರಥಿಗೆ ಪ್ರಕೃತಿಯೇ ಉಗಮಸ್ಥಾನ, ಚಿಕ್ಕಂದಿನಿಂದಲೂ ಅವರ ಮನಸ್ಸು ಪ್ರಕೃತಿಯ ಸಿರಿಸೌಂದಯ್ಯಕ್ಕೆ ಸೂರೆ ಹೋಯಿತು.ಶಿಶು ಸಹಜ ಹೃದಯದಿಂದ ಮುಗ್ಧ ಮೈತ್ರಿಯಲ್ಲಿ ಪ್ರಕೃತಿಯನ್ನು ದರ್ಶಿಸಿದುದು ಮಾತ್ರವಲ್ಲದೆ, ಅಲ್ಲಿಯ ಕೋಗಿಲೆಯ ದನಿಯೊಡನೆ ತಮ್ಮ ದನಿಯನ್ನೂ ಬೆರಸಿ ಹಾಡಲಾರಂಭಿಸಿ ಪ್ರಕೃತಿಯ ಪ್ರತಿಯೊಂದು ಕಾರ್ಯಚಟುವಟಿಕೆಗಳಲ್ಲಿಯೂ ಆಸಕ್ತ ರಾದರು.'ಬಣ್ಣದ ಚುಕ್ಕಿ' ಎಂಬ ಕವನದಲ್ಲಿ ಅದರ ಮೊದಲ ಹೆಜ್ಜೆ ಮೊದಲ ಹಜ್ಜೆಯನ್ನು ಕಾಣುತ್ತೇವೆ.

ಇಲ್ಲಿ ಕವಿಗೆ ತನ್ನಲ್ಲಿ ಹಕ್ಕಿಯೊಂದು ಇದೆ ಎಂಬುದು ಹೊರ ಪ್ರಪಂಚದ ಹಕ್ಕಿಯ ಹಾಡಿನಲ್ಲಿ ಗೊತ್ತಾಯಿತು.ಆ ಪೊದೆಯ ಹಕ್ಕಿಯನ್ನು ಒಲಿದುದೂ ಕೂಡ ತನ್ನಲ್ಲಿರುವ ಹಕ್ಕಿಗಾಗಿಯೇ, ಇನ್ನೊಂದು ಹೃದಯವನ್ನು ಕಂಡು ಅದರಲ್ಲಿರುವ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಕವಿ ಅದಾಗಬೇಕು, ಅದರಲ್ಲಿ ತಾದಾತ್ಮಗೊಳ್ಳಬೇಕು.ಇದು ಈ ಕವನದಲ್ಲಿ ಸ್ಪಷ್ಟವಾಗಿ ಚೆನ್ನಾಗಿ ವ್ಯಕ್ತವಾಗುತ್ತದೆ.

ಮಕ್ಕಳು ಕನಸಿನ ಗೋಪುರಕಟ್ಟಿ ಮುಗಿಲಯಾನದಲ್ಲಿ ನಲಿಯುವ ನಕ್ಷತ್ರಯಾತ್ರಿಕರಾದ್ದರಿಂದ, ಅವರನ್ನು ಪ್ರಕೃತಿ ಸಹಜವಾಗಿಯೇ ಆಕರ್ಷಿಸುತ್ತದೆ. ಹಾಗೆಯೇ ಕವಿ ಕೂಡ ನಮ್ಮನ್ನು ಪ್ರಕೃತಿಯ ಚೆಲುವಿನಲ್ಲಿ ಕಣ್ಮಣಿಸಿ, ಬಾಂದೊರೆಯಲ್ಲಿ ಮಾಯಿಸಿ, ಮುಗಿಲಯಾನದಲ್ಲಿ ಕರೆದುಕೊಂಡು ಹೋಗುವ ಮಾಂತ್ರಿಕನಾಗುತ್ತಾನೆ ; ಭಾವಜೀವಿಯಾಗುತ್ತಾನೆ. ಮಕ್ಕಳ ಸಹಜವಾದ ಭಾವನೆಗೆ ನಿಲುಕುವಂತೆ ಕವಿ ತಂದಿರುವ ನಾಲ್ಕಾರು ಶ್ರೇಷ್ಠತಮ ಪ್ರಕೃತಿ ಚಿತ್ರಗಳನ್ನಿಲ್ಲಿ ನೋಡಬಹುದು. ಮಗು ಚಂದ್ರನನ್ನು ಕಂಡು ಆನಂದಿಸಿ, ಅದು ತನಗಾಗಿ ಮತ್ತು ತನ್ನ ತಾಯಿಗಾಗಿ ಇದೆ ಎಂದು ಭಾವಿಸುವ ಸೊಗಸಾದ ಕಲ್ಪನೆ ಯನ್ನು 'ಅರ್ಧಚಂದ್ರ' ಮತ್ತು 'ಮೂರ್ತಿಯ ಚಂದ್ರ' ಎಂಬ ಕವನಗಳಲ್ಲಿ ಕಾಣಬಹುದಾಗಿದೆ.

ಕವಿ ತಾನು ಹುಟ್ಟಿ ಬೆಳೆದುದು, ನುಡಿ ಕಲಿತುದು, ಅಂಬೆಗಾಲಿಟ್ಟು ಪ್ರಕೃತಿಯೊಡನೆ ಆಟವನ್ನು ಕಲಿತುದು, ಮೊದಲ ಮಳೆ ಗುಡುಗುಗಳನ್ನು ಕೇಳಿದುದು, ಹಕ್ಕಿಯೊಡನೆ ದನಿ ಬೆರಸಿ ಹಾಡನ್ನು ಕಲಿತುದು ಮೊದಲು ತನ್ನ ಮನೆಯಲ್ಲಿಯೇ ಇದು

'ನನ್ನ ಮನೆ' ಎಂಬ ಕವನದಲ್ಲಿ ಚಿತ್ರಿತವಾಗಿದೆ. ಉಳಿದ 'ಸಂಜೆರವಿ', "ಒಡವೆಗಳು', 'ತಿಂಗಳಮಾವ', 'ಹಣ', 'ಕಾಮನಬಿಲ್ಲು ಕಮಾನುಕಟ್ಟಿದೆ' ಮುಂತಾದ ಕವನಗಳಲ್ಲಿ ಮಕ್ಕಳ ಆಸೆ ಆಕಾಂಕ್ಷೆಗಳ ಬೆಳೆಯುವ ಹೃದಯದ ಬೇಡಿಕೆಗಳ ಭಾವಮುದ್ರಿಕೆಯಿದೆ. 'ಮೂರ್ತಿ'ಯ ಬೆಳ್ಳುಗಿಲು ಮಕ್ಕಳ ಮನಸ್ಸನ್ನು ಸೆರೆಹಿಡಿಯುವ ಸಹಜ ಕಲ್ಪನೆಗಳಿಗೆ ಸರಿಹೋಗುವ ಸುಂದರ ಉಪಮೆಗಳನ್ನೊಳಗೊಂಡ ಒಂದು ಮನನೀಯ ಗೀತಿಕೆ :

ತಿಳಿ ಬೆಳುದಿಂಗಳ ಸವಿನೂರ ಹಾಲೊಳು
ತೇ ಚಿರೋಟಿಗಳೇನಮ್ಮಾ?
ನೀಲಿಯ ನೀರೊಳು ಬಾನಮ್ಮನಿಟ್ಟಿಹ
ಬೆಣ್ಣೆಯ ಮುದ್ದೆಗಳೇನಮ್ಮಾ?

ಎಂದು ಮುಗಿಲನ್ನು ಕಲ್ಪಿಸಿರುವುದು ಪರಿಣಾಮಕಾರಿಯಾಗಿದೆ.ಇಲ್ಲೆಲ್ಲ ಮಕ್ಕಳ ಅನುಭವ ಪ್ರಪಂಚಕ್ಕೆಬರುವಂತಹ ದೃಷ್ಟಾಂತ, ಪ್ರತಿಮೆ, ಉಪಮೆ ರೂಪಕಗಳನ್ನು ತಂದು ಮೂಲಭಾವನೆಯನ್ನು ಮತ್ತಷ್ಟು ರಮ್ಯವಾಗುವಂತೆ ಮಾಡಿರುವುದು ಶ್ಲಾಘನೀಯ ಸಂಗತಿ.ಮಕ್ಕಳಿಗೆ ಪರಿಚಿತ ಸಾಧನ ಸಾಮಗ್ರಿಗಳನ್ನು ಬಳಸಿಕೊಂಡು, ಅದರ ಮೂಲಕ ಭಾವವನ್ನು ಬೆಳಸಿಕೊಂಡು ಹೋಗಿರುವುದು ಇವುಗಳೆಲ್ಲದರ ಮತ್ತೊಂದು ವೈಶಿಷ್ಟ್ಯ, ಅಂತು 'ನನ್ನ ಮನೆ' ಒಂದು ಉತ್ತಮ **ಮಕ್ಕಳ**ಗೀತೆಗಳ ಸಂಕಲನವಾಗಿದೆ.

**'ಮೇಘಪುರ'** ಹೆಸರೇ ಸೂಚಿಸುವಂತೆ ಕಲ್ಪನಾ ಪ್ರಧಾನವಾದ ಗೀತೆಗಳ ಸಂಕಲನವಾಗಿದೆ.ಇದರಲ್ಲಿ ೧೧ ಮಕ್ಕಳ ಗೀತೆಗಳಿವೆ. ಹಕ್ಕಿಗಳೊಡನೆ, ನದಿಗಳೊಡನೆ, ಮುಗಿಲಿನೊಡನೆ ಸಂಬಂಧಪಟ್ಟ ಮಕ್ಕಳ ಸ್ವಪ್ರಾತಿಶಯಗಳ ಚಿತ್ರಣವೇ ಈ ಎಲ್ಲ ಗೀತೆಗಳ ವಸ್ತುವಾಗಿದೆ.ಇಲ್ಲಿನ ಛಂದಸ್ಸಿನ ಓಟವಾಗಲಿ, ಭಾವದ ಸರಳತೆಯಾಗಲಿ, ಸಹಜಶೈಲಿಯಾಗಲಿ ಮಕ್ಕಳ ಮನಸ್ಸನ್ನು ಅದ್ಭುತವಾಗಿ ಒಲಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದಿವೆ. ಇದಕ್ಕೆ 'ತೊರೆಯಬಳಿ' ಎಂಬ ಕವನವನ್ನೆ ನಿದರ್ಶನವಾಗಿ ನೀಡಬಹುದು.

'ಮರಿವಿಜ್ಞಾನಿ' ಅರಳುತ್ತಿರುವ ಮಕ್ಕಳ ಮನಸ್ಸು ತಾಳುವ ವೈಜ್ಞಾನಿಕ ದೃಷ್ಟಿಯ ಕವನಗಳ ಸಂಕಲನವಾಗಿದೆ.ಇದರಲ್ಲಿ ಒಟ್ಟು ಹದಿಮೂರು ಗೀತೆಗಳಿವೆ. ಸೃಷ್ಟಿಯ ರಹಸ್ಯವನ್ನು ಮಕ್ಕಳ ಮನಸ್ಸು ಭೇದಿಸಲು ಹೊರಟಾಗ ಅದಕ್ಕೆ ಕಾರಣಗಳನ್ನು ಹುಡುಕುವುದು ಸಹಜವೇ ಆಗಿದೆ. ಲೋಕದ ಅದ್ಭುತ ಗಳಿಗೆ ಮಗುವಿನ ಸ್ಪಂದನವಾಗಲಿ ದೃಷ್ಟಿಯಾಗಲಿ ಹೇಗಿರುತ್ತದೆ ಎಂಬುದೆ ಇಲ್ಲಿನ ಮುಖ್ಯ ಉದ್ದೇಶ. ಮಳೆಯೆಂದರೇನು ? ಗುಡುಗೆಂದರೇನು ? ಮಿಂಚೆಂದರೇನು ? ಮುಗಿಲೆಂದರೇನು ?ಎಂಬುದರ ಅರ್ಥವನ್ನು ಹುಡುಕಲು ಹೊರಟ ಮಗುವಿನ ಮನಸ್ಸು ತನ್ನದೇ ಆದ ತಿಳಿವಳಿಕೆಯ ಮೇರೆಯಲ್ಲಿ ಅರ್ಥೈಸಲು ಯತ್ನಿಸು ಇದೆ.ಇದು 'ಮೂರ್ತಿಯ ವಿಜ್ಞಾನ' ದಲ್ಲಿ ಸೊಗಸಾಗಿ ವ್ಯಕ್ತವಾಗಿದೆ.

ದೇವರ ಲೋಕದ ಬಾಲಕರಾಡುವ
ಉಕ್ಕಿನ ಚೆಂಡದು, ಕೇಳಮ್ಮಾ!

ಉಕ್ಕಿನ ಚೆಂಡೆದ್ದು ಬೀಳಲು ಕಿಡಿಯದ್ದು
ಮಿಂಚಾಗಿ ತೋರುವುದೆಮಗಮ್ಮಾ!

ಹೀಗೆ ಮುಂದುವರಿಯುತ್ತದೆ ಅವನ ಭಾವನಾ ಲಹರಿ! ಇದಕ್ಕೆ ಅಣ್ಣ, ಅಕ್ಕತಮ್ಮಂದಿರನ್ನು ಸಾಕ್ಷಿ ಬೇರೆ ತರುತ್ತಾನೆ! ಇಲ್ಲೆಲ್ಲ ಮಗುವಿನ ವಿಚಾರಜಗತ್ತನ್ನೇ ನೋಡುತ್ತೇವೆ. ಅಲ್ಲಿ ಅವನದೇ ದೃಷ್ಟಿ ಹಾಗೂ ಅವನದೇ ಸೃಷ್ಟಿ. ಅಂತು ಮಕ್ಕಳ ಮನವೊಲಿಸುವಂತೆ ತಲೆದೂಗಿಸುವಂತೆ ನಿರೂಪಿತವಾಗಿವೆ. ಈ ಎಲ್ಲ ಗೀತೆಗಳು, ಇಲ್ಲೆಲ್ಲ ಮನರಂಜನೆಯೇ ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡಿರುವಂತೆ ಕಾಣಬರುತ್ತದೆ. ಹೀಗೆಯೇ 'ತಿಂಡಿ', 'ಹಿರೇತನ', 'ಆಟಮುಗಿಯುವ ಮುನ್ನ', 'ಹೂವಿನಬೇಲಿ', 'ಕೈಮುಚ್ಚಾಟ' ಮುಂತಾದ ಕವನಗಳಲ್ಲಿ ಮಕ್ಕಳ ಭಾವನೆಯ ಸಾರ್ಥಕ ನಿರೂಪಣೆ ಇದೆ. ಈ ಎಲ್ಲ ಕವನಗಳಲ್ಲಿ ಮಕ್ಕಳ ವೈಜ್ಞಾನಿಕ ದೃಷ್ಟಿ ಒಂದು ಕಡೆ ಕಂಡುಬಂದರೆ ; ಮತ್ತೊಂದು ಕಡೆ ತಾಯಿ–ಮಗುವಿನ ನಿರ್ಮಲಾಂತಃಕರಣದ ಪ್ರೀತಿವಾತ್ಸಲ್ಯಗಳನ್ನು ಕಾಣುತ್ತೇವೆ. **ಮಕ್ಕಳ**ಗೀತೆಗಳೆಲ್ಲದರಲ್ಲಿಯೂ ತಾಯಿ–ಮಗುವಿನ ಪ್ರೀತಿವಾತ್ಸಲ್ಯದ ಮಧುರ ಬಂಧನದ ನಿರೂಪಣೆಯ ಪ್ರಧಾನ ವಸ್ತು ಎಂಬುದನ್ನು ಮರೆಯಬಾರದು. ಇದು ಅಸಹಜವೇನಲ್ಲ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದ **ಮಕ್ಕಳ**ಗೀತೆಗಳೆಲ್ಲದರ ಮೂಲ ಸೆಲೆಯೇ ಇದಾಗಿದೆ.ಭಾಷೆ ಭಾವ, ಪರಿಣಾಮ–ಈ ಎಲ್ಲದರ ದೃಷ್ಟಿಯಿಂದಲೂ ಮಕ್ಕಳ ಮನಸ್ಸಿಗೆ ಹಿತವಾದ ಗೀತೆಗಳು ಇವು.

ಮಕ್ಕಳಿಗೆ ಅನುಕರಣ ಕಲೆ ಅದ್ಭುತವಾಗಿ ಸಿದ್ಧಿಸಿರುವುದರಿಂದ ಅವರಿಗೆ ನಾಟಕಗಳು ಹೆಚ್ಚು ಪ್ರಿಯವಾಗುವುದರಲ್ಲಿ ಸಂಶಯವಿಲ್ಲ. ಶ್ರೀ ಕುವೆಂಪು ಅವರ ಮೋಡಣ್ಣನ ತಮ್ಮ ಮತ್ತು ನನ್ನ ಗೋಪಾಲ್ ಎಂಬೆರಡು ನಾಟಕಗಳು **ಮಕ್ಕಳ**ಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಗಳಾಗಿವೆ. ಮಕ್ಕಳಿಗೆ ಪ್ರಿಯವಾದ ಪ್ರಕೃತಿ ಹಾಗೂ ಭಕ್ತಿಯೇ ಈ ನಾಟಕಗಳ ಮುಖ್ಯ ವಸ್ತುವಾಗಿದೆ.

'ಮೋಡಣ್ಣನ ತಮ್ಮ ಸುಲಭ ಶೈಲಿಯಲ್ಲಿ ರಚಿತವಾಗಿರುವ ಮಕ್ಕಳ ಮನೋಹರ ರಮ್ಯನಾಟಕ, ಕಲ್ಪನೆಯೇ ಇಲ್ಲಿ ಪ್ರಧಾನ, ನಾವು ಚಿಕ್ಕಂದಿನಲ್ಲಿ ಎಷ್ಟೋ ಸಲ ಮೋಡದ ಮೇಲೆ ಕುಳಿತು ಪ್ರಪಂಚವನ್ನೆಲ್ಲ ನೋಡಿ ಬರಬೇಕೆಂದು ಬಯಸಿದ್ದೇವೆ ; ಎಷ್ಟೋ ಸ್ವಪ್ನಗಳನ್ನು ಕಟ್ಟಿ ಬಲೂನಿನಂತೆ ಹಾರಲು ಬಿಟ್ಟಿದ್ದೇವೆ; ಮೋಡದ ರೂಪಾಂತರಗಳನ್ನು ಕಂಡು ನಲಿದಿದ್ದೇವೆ ; ತಾಯಿಯ ಮಮತೆಯ ಕರೆ ಕಿವಿದಾಗಿದಾಗ ಸ್ವಪ್ನ ಪ್ರಪಂಚದಿಂದ ಹಿಂದಿರುಗಿದ್ದೇವೆ.

ಮಕ್ಕಳ ನಾಟಕಗಳು ಆದಷ್ಟು ಪುಟ್ಟವಾಗಿದ್ದು ಸರಳ ಭಾಷೆಯ ಸುಲಭ ಭಾವಗಳ ರಮ್ಯ ಅಭಿವ್ಯಕ್ತಿಯನ್ನು ಪಡೆದುಕೊಂಡಿರಬೇಕು. ಮಕ್ಕಳ ಮುಗ್ಧತೆಯ ಜೊತೆಗೆ ಭಕ್ತಿ ಶ್ರೀಮಂತಿಕೆಯನ್ನೂ ಮಾನವಪ್ರೇಮವನ್ನೂ ಬೆಳೆಸಿಕೊಳ್ಳಲು ಬೇಕಾದ ಉನ್ನತಾದರ್ಶ ದರ್ಶನಗಳನ್ನು ಪ್ರತಿಬಿಂಬಿಸುವಂತಿರ ಬೇಕು.ಇದಕ್ಕೆ ಅಪೂರ್ವ ನಿದರ್ಶನವಾಗುತ್ತದೆ 'ನನ್ನ ಗೋಪಾಲ' ಎಂಬ ಗದ್ಯನಾಟಕ.ಇದು ಅತ್ಯಂತ ಮೃದುಭಾವಗಳಿಂದ ತುಂಬಿತುಳುಕುತ್ತಿರುವ ಹೃದಯಸ್ಪರ್ಶಿಯಾದ ಮಧುರಕೃತಿ.ಇದು ಮಕ್ಕಳನಾಟಕ ವಾದರೂ ಆಳವಾಗಿ ಇಳಿದು ನೋಡಬಲ್ಲವರಿಗೆ ಇಲ್ಲಿ ಸಾಮಗ್ರಿ ದೊರಕುತ್ತದೆ.

ಇಲ್ಲಿಯವರೆಗಿನ ಸಂಕ್ಷಿಪ್ತ ಸಮೀಕ್ಷೆಯಿಂದ **ಮಕ್ಕಳ**ಸಾಹಿತ್ಯದ ಸ್ವರೂಪ ಲಕ್ಷಣಗಳೇನು ಎಂಬುದು ಗೊತ್ತಾಗದಿರದು.ಅದರ ಪ್ರಧಾನಗುಣ ಹಾಗೂ ಲಕ್ಷಣವೆಂದರೆ ಸರಳತೆ, ಕ್ಲಿಷ್ಟತೆಯಾಗಲಿ ಭಾವ ಸಂಘರ್ಷತೆ ಯಾಗಲಿ ಎಲ್ಲಿಯೂ ತಲೆದೋರಬಾರದು.ಮಾತೆ ಮಕ್ಕಳ ಮಧುರ ಸಂಬಂಧದ ಕಥನವೇ ಇಲ್ಲಿನ ವಸ್ತುವಾಗಿರುತ್ತದೆ.ಅಲ್ಲಿ ಪ್ರಕೃತಿ, ಭಕ್ತಿ, ಕಲ್ಪನೆ–ಇವೇ ಸಾಮಾನ್ಯವಾಗಿ ಪಾತ್ರವಹಿಸುವ ಪ್ರಧಾನ ಸಾಧನಗಳು, ಮಕ್ಕಳ ಅನುಭವ ಪ್ರಪಂಚವೇ ಇಲ್ಲಿ ಅಭಿವ್ಯಕ್ತವಾಗಬೇಕು.ಮಕ್ಕಳಮನಸ್ಸನ್ನು ಸೆರೆಹಿಡಿಯುವಂತಹ ಛಂದೋ ವೈವಿಧ್ಯಗಳನ್ನು ಬಳಸಿಕೊಳ್ಳುವುದರ ಮೂಲಕ ಉದ್ದೇಶವನ್ನು ಸಾರ್ಥಕ ಗೊಳಿಸಿಕೊಳ್ಳಬಹುದು.ಅಂತು ಮಕ್ಕಳ ಸಾಹಿತ್ಯದ ಮೂಲ ಉದ್ದೇಶ ಮನೋರಂಜನೆ ಮತ್ತು ಮನೋವಿಕಾಸ ಎಂಬುದನ್ನು ಮರೆಯ ಬಾರದು.ಈ ಎಲ್ಲ ದೃಷ್ಟಿಯಿಂದ ನೋಡಿದರೆ ಕುವೆಂಪು ಅವರ **ಮಕ್ಕಳ**ಸಾಹಿತ್ಯ ಸೃಷ್ಟಿ ಗಮನಾರ್ಹಸಾಧನೆ ಎಂಬುದು ಗೊತ್ತಾಗದಿರದು.ಅವರ ಸಾಹಿತ್ಯದಲ್ಲಿ ವೈವಿಧ್ಯ ಹಾಗೂ ವೈಶಿಷ್ಟ ಎರಡೂ ಇವೆ. ಅವರ **ಮಕ್ಕಳ**ಸಾಹಿತ್ಯ ಗಾತ್ರದಲ್ಲಿ ಮಾತ್ರವಲ್ಲದೆ ಗುಣದಲ್ಲಿಯೂ ಹಿರಿದಾಗಿದೆ.ಮಕ್ಕಳ ಮನಸ್ಸನ್ನು ತಣಿಸುವುದು ಮಾತ್ರವಲ್ಲದೆ ಅವರ ಬಾಳನ್ನು ರೂಪಿಸುವುದರಲ್ಲಿಯೂ ಇವರ ಈ **ಮಕ್ಕಳ**ಸಾಹಿತ್ಯ ಮಹದುಪಕಾರವನ್ನು ಮಾಡುತ್ತದೆ. ನನ್ನ ಮನೆ,' 'ನನ್ನ ಗೋಪಾಲ,' 'ಬೊಮ್ಮನ ಹಳ್ಳಿಯ ಕಿಂದರಿಜೋಗಿ' ಎಂಬ ಗ್ರಂಥ ಗಳು **ಮಕ್ಕಳ**ಸಾಹಿತ್ಯದ ಇತಿಹಾಸದಲ್ಲಿ ಶ್ಲಾಘನೀಯ ಸ್ಥಾನವನ್ನು ಪಡೆದುಕೊಳ್ಳುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ.

## ಗ್ರಂಥಯಣ


೧. ರಾಷ್ಟ್ರಕವಿ ಕುವೆಂಪು ಕೃತಿ.

೨. ಹಲವು ಪುಸ್ತಕ ಲೇಖನಗಳು

೩. ಗಂಗೋತ್ರಿಸಹ್ಯಾದ್ರಿ –ಕುವೆಂಪು ಆಭಿನಂದನ ಗ್ರಂಥ

೪. ಪತ್ರಿಕೆ ಲೇಖನಗಳು

೫. ಕನ್ನಡ ನಾಟಕ– ತ.ಸು.ಶಾಮರಾಯ

೬. ನಡೆದು ಬಂದ ದಾರಿ– ಮನೋಹರ ಗ್ರಂಥಮಾಲೆ

೭. ಕನ್ನಡ ನಾಟ್ಯ ಸೃಷ್ಟಿ

# ಅಂತರ್ ತಲೆಮಾರುಗಳ ಸಂಘರ್ಷ

**ಡಾ. ಎನ್. ಆರ್. ಸವತೀಕರ**
**ಸಹ ಪ್ರಾಧ್ಯಾಪಕರು,ಸಮಾಜಶಾಸ್ತ್ರ ವಿಭಾಗ**
**ಕೆಎಲ್ಇ ಸಂಸ್ಥೆಯ ಎಸ್. ವಿ.ಎಸ್. ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಕಾಲೇಜು,**
**ಸವದತ್ತಿ, ಬೆಳಗಾವಿ, ಕರ್ನಾಟಕ**

ಪ್ರಸ್ತಾವನೆ:

ಕಿಶೋರಾವಸ್ಥೆ ಅವಧಿಯಲ್ಲಿ ಬಾಲಕರ ಹಾಗೂ ಬಾಲಕಿಯರ ಎಲ್ಲಾ ಬಗೆಯ ವರ್ತನೆಗಳು ಸಹಿಸುವಂತವುಗಳಲ್ಲ. ಮಗು ಐದು ವರ್ಷದ ವಯಸ್ಸಿನಲ್ಲಿ ಮಾಡಿದ ವರ್ತನೆಗಳನ್ನು ತನ್ನ ಹದಿನಾರನೇ ವಯಸ್ಸಿನಲ್ಲಿ ಮಾಡಿದರೆ ಅದನ್ನು ಸಮಾಜ ಒಪ್ಪಿಕೊಳ್ಳುವುದಿಲ್ಲ. ಇಂದು ಯುವಜನತೆ ಅನೇಕ ಬಗೆಯ ವೈವಿಧ್ಯಮಯ ಆಸಕ್ತಿ, ಅಭಿರುಚಿ, ಆಕಾಂಕ್ಷೆ ಹಾಗೂ ಮನರಂಜನಾತ್ಮಕ ಮಾರ್ಗಗಳನ್ನು ಹೊಂದಿದ್ದಾರೆ. ಬೃಹತ್ ನಗರಗಳಲ್ಲಿ ಕ್ಲಬ್‌ಗಳಿಗೆ ಹೋಗುವುದು, ಡಿಸ್ಕೊ ಥೆಕ್‌ಗಳಿಗೆ ಹೋಗುವುದು ಸಾಮಾನ್ಯವಾಗಿತ್ತು. ಆದರೆ ಇಂದು ಇದು ಚಿಕ್ಕಪುಟ್ಟ ನಗರಗಳಿಗೂ ಹಬ್ಬಿದೆ. ಇದಕ್ಕೆ ಸಮವಯಸ್ಕರ ಸಮೂಹದ ಪ್ರಭಾವವೇ ಕಾರಣ. ಇಂದು ಜಾಗತೀಕರಣದ ಪರಿಣಾಮವಾಗಿ ವೈವಿಧ್ಯಮಯ ಮನೊರಂಜನೆ ನೀಡುವ ಮಾಧ್ಯಮಗಳು, ಪಾಶ್ಚಾತ್ಯ ಸಂಸ್ಕೃತಿ ಆಚರಣೆಗಳು ನಮ್ಮ ಯುವಜನಾಂಗದ ಮನಸ್ಸನ್ನು ಆಕರ್ಷಿಸಿವೆ ಎಂದರೆ ಅತೀಶಯೋಕ್ತಿಯೆನಲ್ಲ. ಈ ವಯೋಮಾನದಲ್ಲಿರುವವರು ಸರಿ ತಪ್ಪುಗಳ ನಡುವಿನ ಅಂತರವನ್ನು ಗುರುತಿಸುವ ಬದಲು ತಮ್ಮ ಬಯಕೆಯನ್ನು ಈಡೇರಿಸಿಕೊಳ್ಳುವುದರ ಕಡೆಗೆ ಹೆಚ್ಚಿನ ಗಮನ ಹರಿಸುತ್ತಾರೆ. ಆಧುನಿಕತೆ, ನವ್ಯತೆಯ ಹೆಸರಿನಲ್ಲಿ ಹೊಸ ಜೀವನ ಶೈಲಿಯನ್ನು ತಂದೆ–ತಾಯಿಯರ ವಿರೋಧದ ನಡುವೆಯೂ ಅಳವಡಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಈ ಹಂತದಲ್ಲಿ ಪಾಲಕರ ಗಮನ, ಕಾಳಜಿ, ಮಾರ್ಗದರ್ಶನ ಹಾಗೂ ನಿಯಂತ್ರಣವಿರದಿದ್ದರೆ ಅವರು ದಾರಿ ಬಿಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಅವರ ವಿಚಾರಗಳಲ್ಲಿ ಭಾವನೆಗಳಲ್ಲಿ ಏಕರೂಪತೆಗಿಂತ ವೈರುದ್ಧತೆಯೇ ಹೆಚ್ಚಾಗಿರುತ್ತದೆ. ಕಿಶೋರಾವಸ್ಥೆಯ ಆರಂಭಿಕ ಹಂತದಲ್ಲಿ ಇವರು ಯಾವಾಗಲೂ ಮುನ್ನಡೆಯುವವರಾಗಿದ್ದರೆ, ಪಾಲಕರು ಹಾಗೂ ಹಿರಿಯರು ಅವರ ನಾಗಾಲೋಟಕ್ಕೆ ತಡೆ ಒಡ್ಡುತ್ತಿರುತ್ತಾರೆ. ಯುವಕರು ತಮ್ಮತನವನ್ನು ವ್ಯಕ್ತಿವಾದವನ್ನು ತೋರ್ಪಡಿಸಬಯಸಿದರೆ ಅದನ್ನು ಹಿರಿಯರು ಒಪ್ಪದೇ ಅವರನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಾರೆ. ಯುವಕರು ಸ್ವತಂತ್ರವಾಗಿ ಸ್ವಚ್ಛಂದವಾಗಿ ಬದುಕುವ ಆಸೆ ವ್ಯಕ್ತಪಡಿಸುತ್ತಿರುತ್ತಾರೆ; ಆದರೆ ಪಾಲಕರಿಂದ ಹಾಗೂ ಹಿರಿಯರಿಂದ ಅದು ಒಪ್ಪಿತವಾಗುವುದಿಲ್ಲ. ಇಂತಹ ಸಂದರ್ಭಗಳು ಪರಸ್ಪರ ಸಂಘರ್ಷಕ್ಕೆ ಕಾರಣವಾಗುತ್ತದೆ. ಇದೇ ಅಂತರ್ ತಲೆಮಾರುಗಳ ಸಂಘರ್ಷ.

ಅಂತರ್‌ತಲೆಮಾರುಗಳ ನಡುವಿನ ಸಂಘರ್ಷ ಅತ್ಯಂತ ಪುರಾತನವಾದುದು ಹಾಗೂ ಸಾಮಾನ್ಯವಾಗಿ ಸಾರ್ವತ್ರಿಕವಾದುದು. ಭಾರತದಂತಹ ರಾಷ್ಟ್ರಗಳನ್ನು ಗಮನಿಸಿದರೆ ಇದು ತೀರಾ ಇತ್ತೀಚಿನ ಹಾಗೂ ನಗರಗಳಲ್ಲಿ ಹೆಚ್ಚಾಗಿ ಕಾಣಬರುವ ವಿದ್ಯಮಾನವಾಗಿದೆ. ನಮ್ಮ ಸಮಾಜದಲ್ಲಿ ಅಂತರ್‌ತಲೆಮಾರುಗಳ ಸಂಘರ್ಷ ಎಂದರೆ ಯುನಜನತೆಯ ಮೌಲ್ಯಗಳಲ್ಲಾಗುತ್ತಿರುವ ಆಂತರಿಕ ಸಂಘರ್ಷಗಳ ವಿಶ್ಲೇಷಣೆಯಾಗಿದೆ. ಮಕ್ಕಳಲ್ಲಿ ಮೌಲ್ಯಗಳನ್ನು ಬೆಳಸುವಲ್ಲಿ ಪಾಲಕರ ಪ್ರಭಾವ ಕಡಿಮೆಯಾಗುತ್ತಿರುವುದು ಪಾಲಕರ ನಿಯಂತ್ರಣ ಅಂತರ್‌ತಲೆಮಾರುಗಳ ನಡುವೆ ಸಂಘರ್ಷ ಸಂಭವಿಸಲು ಪ್ರಮುಖ ಕಾರಣವಾಗಿದೆ ಎನ್ನಬಹುದು. ಅಂತರ್‌ತಲೆಮಾರುಗಳ ನಡುವಿನ ಸಂಘರ್ಷವು ಕಿರಿಯರ ಮತ್ತು ಹಿರಿಯರ ಪರಸ್ಪರ ಅಂತಃಕ್ರಿಯೆಯ ಫಲಿಶೃತಿಯಾಗಿದೆ ಎನ್ನಬಹುದು. ಪ್ರತಿಯೊಂದು ತಲೆಮಾರಿನ ಜನತೆ ತಮ್ಮ ಕಾಲದಲ್ಲಿ ಅಸ್ತಿತ್ವದಲ್ಲಿರುವ ಮೌಲ್ಯಗಳು ಮತ್ತು ಮನೋವೃತ್ತಿಗಳಿಂದ ಪ್ರಭಾವಿತರಾಗಿರುತ್ತಾರೆ. ಮತ್ತು ಅದಕ್ಕನುಗುಣವಾಗಿ ತಮ್ಮ ವರ್ತನಾಮಾದರಿ ಬೆಳೆಸಿಕೊಂಡಿರುತ್ತಾರೆ. ಅವು ಎಷ್ಟೋ ಸಾರಿ ಪರಸ್ಪರ ವಿರೋಧಾತ್ಮಕವೂ ಆಗಿರುವುದುರಿಂದಲೇ ಅಂತರ್‌ತಲೆಮಾರುಗಳ ನಡುವೆ ಸಂಘರ್ಷ್ ಕಾಣಬರುತ್ತದೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳು ಬದಲಾಗದಂತೆ ಈ ಸಂಘರ್ಷದ ತೀವ್ರತೆಯಲ್ಲಿಯೂ ಬದಲಾವಣೆಯುಂಟಾಗುತ್ತದೆ. ಹೀಗಾಗಿ ಬದಲಾವಣೆಗಳಿಗೆ ಒಳಗಾಗುವ ಪ್ರತಿಯೊಂದು ಸಮಾಜಗಳಲ್ಲಿ ಯುವಜನತೆಯ ಮೌಲ್ಯಗಳು, ನೈತಿಕ ನಿಯಮಗಳು, ವರ್ತನಾ ವಿಧಾನಗಳು ಹಿರಿಯರ ಮೌಲ್ಯಗಳು, ನೈತಿಕ ನಿಯಮಗಳು ಮತ್ತು ವರ್ತನಾ ಮಾದರಿಗಳು ಭಿನ್ನವಾಗಿರುತ್ತವೆ. ಹೀಗಾಗಿ ಯುವಜನತೆಯ ಮಾನಸಿಕ ಉದ್ವಿಗ್ನತೆ ಹಾಗೂ ತುಮುಲಗಳು ಬಹಿರಂಗವಾಗಿ ಪಾಲಕರೊಂದಿಗಿನ ಅಥವಾ ಹಿರಿಯರೊಂದಿಗಿನ ಸಂಘರ್ಷಗಳಲ್ಲಿ ಮೇಲಿಂದ ಮೇಲೆ ವಿಶೇಷವಾಗಿ ಸುಶಿಕ್ಷಿತ ನಗರ ಕುಟುಂಬಗಳಲ್ಲಿ ಪ್ರಕಟವಾಗಿರುತ್ತಿರುತ್ತವೆ.

ತಲೆಮಾರುಗಳ ನಡುವಿನ ಬಹಿರಂಗ ಸಂಘರ್ಷವು ತಲೆಮಾರುಗಳ ನಡುವಿನ ಅಭಿಪ್ರಾಯಗಲ ಭಿನ್ನತೆಯಿಂದಲೇ ಸಂಭವಿಸುತ್ತದೆ ಎಂದಲ್ಲ. ಅಂತರ್ ತಲೆಮಾರುಗಳ ನಡುವಿನ ಪ್ರಸಕ್ತ ಸಂಘರ್ಷವು ಯುವಜನತೆಯ ಅಭಿವೃತ್ತಿಗಳನ್ನೊಳಗೊಂಡಂತೆ ಮಾನವೀಯ ಮನೋವೃತ್ತಿಗಳ ನಡುವಿನ ಅಪಹೊಂದಾಣಿಕೆಯ ಫಲಶೃತಿಯಾಗಿದೆ. ಕುಟುಂಬದ ಅಧಿಕಾರ ಚಲಾವಣೆಯ ಮನೋವೃತ್ತಿ ಹಾಗೂ ಸ್ವತಂತ್ರವಾಗಿ ವ್ಯಕ್ತಿವಾದವನ್ನು ಪ್ರತಿಪಾದಿಸುವ ಯುವಜನತೆಯ ಅಭಿವೃತ್ತಿ ಪರಸ್ಪರ ಸಂಘರ್ಷಮಯ ಸ್ಥಿತಿಗೆ ಕಾರಣವಾಗುತ್ತವೆ. ಈ ಹಂತದಲ್ಲಿ ಸಮಾಧಾನದಿಂದ ಯುವಜನತೆಯ ಮನೋಸ್ಥಿತಿಯನ್ನು ಅರ್ಥೈಸಿಕೊಂಡು ಅವರಿಗೆ ಮಾರ್ಗದರ್ಶನ ಮಾಡಿ ಪರಿಹಾರ ಕಂಡುಕೊಳ್ಳುವಲ್ಲಿ ಪಾಲಕರು ವಿಫಲರಾದಾಗ ಅದು ಅಂತರ್‌ತಲೆಮಾರುಗಳ ಸಂಘರ್ಷದಲ್ಲಿ ಪರ್ಯಾವಸನಗೊಳ್ಳುತ್ತದೆ.

ಹಿಂದಿನ ಪ್ರಸ್ತಾಪಿತ ಪ್ರಮಾಣೀಕೃತ ನಿಯಮಗಳನ್ನು ಪ್ರತಿನಿಧಿಸುವ ಪಾಲಕರ ನಿಯಮಗಳು ಹಾಗೂ ವರ್ತಮಾನ ಸಮಾಜದ ನಿಯಮಗಳನ್ನು ಪ್ರತಿನಿಧಿಸುವ ಯುವಜನತೆಯ ನಿಯಮಗಳ ನಡುವೆ ತೀವ್ರವಾಗಿ ಬದಲಾಗುತ್ತಿರುವ ಸಾಂಸ್ಕೃತಿಕ ಸನ್ನೀವೇಶಗಳಲ್ಲಿ ಪರಸ್ಪರ ವಿರೋದಾಭಾಸದಿಂದ ಕೂಡಿರುವುದರಿಂದ ಅವರ ನಡುವೆ ಸಂಘರ್ಷವೇರ್ಪಡುತ್ತದೆ. ಈ ತೆರನಾದ ಬದಲಾಗುತ್ತಿರುವ ಸನ್ನಿವೇಶಗಳಲ್ಲಿ ಯುವಜನತೆ ಪಾಲಕರ ಬಿಗಿ ಬಂಧನದಿಂದ ಹೊರಬರುವ ಆಶಯ ಹೊಂದಿರುತ್ತಾರೆ. ಈ ಬಗೆಯ ಕಪಿಮುಷ್ಟಿಯಿಂದ ಹೊರಬರಲು ಅವರು ಬಯಸುವ ಸ್ವಾತಂತ್ರ ಹಾಗೂ ಹೊಸ ಜವಾಬ್ದಾರಿಗಳನ್ನು ನಿಭಾಯಿಸುವ ತವಕ ಮತ್ತು ಸಾಮರ್ಥ್ಯವೇ ಕಾರಣವಾಗಿರುತ್ತದೆ. ಹೀಗೆ ಸ್ವತಂತ್ರ ಬಯಸುವ ಯುವಜನತೆ ಪಾಲಕರ ಸಲಹೆ ಸೂಚನೆಗಳನ್ನು ಬಯಸುತ್ತಾರೆಯೇ ವಿನಃ ಪಾಲಕರ ನಿರಂಕುಶ ಹಿಡಿತವನ್ನು ವಿರೋಧಿಸುತ್ತಾರೆ. ಈ ಸಂದರ್ಭದಲ್ಲಿ ಯುವಜನತೆ ತಾವು ಬಾಲ್ಯಾವಸ್ಥೆಯಲ್ಲಿ ಹೊಂದಿದ್ದ ವರ್ತನಾ ಮಾದರಿಗೆ ವಿರುದ್ಧವಾದ ವರ್ತನೆಯನ್ನು ಕ್ರಮೇಣವಾಗಿ ಬೆಳೆಸಿಕೊಳ್ಳುತ್ತಾರೆ.

ಕಿಶೋರರ ಬಿಡುಗಡೆ ಬಯಸುವ ಹಾಗೂ ಸ್ವತಂತ್ರವಾಗಬೇಕೆಂಬ ಬಯಕೆಯು ಪಾಲಕರಿಗೆ ಹಾಗೂ ಯುವಜನತೆ ಇಬ್ಬರಿಗೂ ಸಮಸ್ಯೆಯನ್ನು ತಂದೊಡ್ಡುತ್ತದೆ. ಯಾಕೆಂದರೆ ಪಾಲಕರು ತಮ್ಮ ಬೆಳೆಯುತ್ತಿರುವ ಮಗುವನ್ನು ಶೈಶಾವಸ್ಥೆಯಿಂದ ತಮ್ಮ ನಿಯಂತ್ರಣದಲ್ಲಿಟ್ಟುಕೊಂಡು ಕಾಳಜಿಪೂರ್ವಕವಾಗಿ ಬೆಳೆಸಿರುತ್ತಾರೆ. ಆತನ ಎಲ್ಲಾ ಚಲನವಲನಗಳನ್ನು ಪ್ರಭಾವಶಾಲಿಯಾಗಿ ಗಮನಿಸುತ್ತಾ ಬಂದಿರುವುದರಿಂದ ಅದನ್ನೇ ಈ ವಯಸ್ಸಿನಲ್ಲಿ ಮುಂದುವರೆಸಬಯಸಿರುತ್ತಾರೆ. ಹೀಗಾಗಿ ಕಿಶೋರಾವಸ್ಥೆಯ ತಮ್ಮ ಮಗು ಹೆಚ್ಚೆಚ್ಚು ಸ್ವಾತಂತ್ರ ಅನುಭವಿಸುವುದಕ್ಕೆ ಹಾಗೂ ಸ್ವಯಂ ನಿರ್ಧಾರ ತೆಗೆದುಕೊಳ್ಳಲು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಡುವಲ್ಲಿ ವಿಫಲರಾಗುತ್ತಾರೆ. ಇದರ ಪರಿಣಾಮವಾಗಿ ಅಂತರ್ ತಲೆಮಾರುಗಳ ನಡುವೆ ಸಂಘರ್ಷವುಂಟಾಗುತ್ತದೆ. ಈ ಸಂಘರ್ಷದಿಂದಾಗಿ ಕುಟುಂಬದ ಬೇರೆ ಬೇರೆ ಸದಸ್ಯರ ನಡುವೆ ಪರಸ್ಪರ ಸಂಪರ್ಕವೇರ್ಪಡಲು ಮತ್ತು ಅರ್ಥ ಮಾಡಿಕೊಳ್ಳಲು ದೊಡ್ಡ ತಡೆಯನ್ನೊಡ್ಡುತ್ತದೆ. ಹೀಗಾಗಿ ತೀವ್ರವಾಗಿ ಬದಲಾಗುತ್ತಿರುವ ಆಧುನಿಕ ನಾಗರೀಕತೆ ಈ ಎರಡು ತಲೆಮಾರುಗಳ ನಡುವೆ ಹೊಂದಾಣಿಕೆಯ ಕೊರತೆಯನ್ನು ಸೃಷ್ಟಿಸುತ್ತದೆ. ಹೀಗಾಗಿ ಪಾಲಕರು ಹಳೆಯ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತಾ ಸಾಗುತ್ತಾರೆ. ಆದರೆ ಇದನ್ನು ಸಹಿಸದ ಯುವಜನಾಂಗ ತಮ್ಮ ಪಾಲಕರ/ಹಿರಿಯರ ವಿರುದ್ಧ ಬಂಡೇಳುವುದರಿಂದ ಸಂಘರ್ಷಗಳು ಉಲ್ಬಣಗೊಳ್ಳುತ್ತವೆ.

ತಲೆಮಾರುಗಳ ನಡುವಿನ ವೈರುದ್ಧತೆಗಳು ಮಾನವನ ಜೀವನ ಚಕ್ರದ ಜೈವಿಕ ಅಂಶಗಳನ್ನು ಅವಲಂಬಿಸಿರುತ್ತದೆ. ಯುವಜನತೆ ಬೆಳವಣಿಗೆ ಹೊಂದುತ್ತಿರುವ ಪರಿಸರ ಅವರ ಪಾಲಕರು ಬೆಳವಣಿಗೆ ಹೊಂದಿದ್ದ ಪರಿಸರಕ್ಕಿಂತ ತೀರಾ ಭಿನ್ನವಾಗಿರುತ್ತದೆ. ದುರ್ದೈವದ ಸಂಗತಿ ಎಂದರೆ ಸಮಾಜದ ಪರಿಸರ ಹಾಗೂ ಸಾಂಸ್ಕೃತಿಕ ವಿದ್ಯಮಾನಗಳು ತೀವ್ರವಾಗಿ ಬದಲಾಗುತ್ತಿರುವ ವಿಷಯವನ್ನು ಅರಿತಿರುವ ಪಾಲಕರು, ತಮ್ಮ ಬೆಳೆಯುತ್ತಿರುವ ಮಕ್ಕಳೊಂದಿಗೆ ವ್ಯವಹರಿಸುವಾಗ ಅವುಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಕಾಲ ಬದಲಾಗಿದೆ ಎಂಬುದನ್ನು ಮರೆತು ಬಿಡುತ್ತಾರೆ. ಲಿಂಗಭೇದದ ಹೊರತಾಗಿಯೂ ಕಾಲೇಜಿಗೆ ಹೊಗುವ ಯುವಜನತೆ ಯಾವಾಗಲೂ ಸ್ನೇಹಿತರ ಮಧ್ಯೆಯೇ ಹೆಚ್ಚಿನ ಸಮಯ ಕಳೆಯ ಬಯಸುತ್ತಾರೆ. ಈ ಹಂತದಲ್ಲಿ ಕೆಲವು ಸಂದರ್ಭಗಳಲ್ಲಿ ಸ್ನೇಹಕೂಟಗಳಲ್ಲಿ ಭಾಗವಹಿಸಿ ಮನೆಗೆ ರಾತ್ರಿ ತಡವಾಗಿ ಬರುವುದು ಸಾಮಾನ್ಯವಾಗಿರುತ್ತದೆ. ಇದನ್ನು ಅರ್ಥೈಸಿಕೊಳ್ಳದ ಪಾಲಕರು ತಮ್ಮ ಮಾತಿನಂತೆಯೇ ತಮ್ಮ ಮಕ್ಕಳು ನಡೆದುಕೊಳ್ಳಬೇಕೆಂದು ಒತ್ತಾಯಿಸುತ್ತಾರೆ. ಇದರಿಂದಾಗಿ ಪಾಲಕರೆ ಅಂತರ್ ತಲೆಮಾರುಗಳ ನಡುವಿನ ಸಂಘರ್ಷ ಉಲ್ಬಣಗೊಳ್ಳುವುದಕ್ಕೆ ಕಾರಣರಾಗುತ್ತಾರೆ.

ಕಿಶೋರರು ಮತ್ತು ಪಾಲಕರು ವಿಭಿನ್ನ ಸಾಮಾಜಿಕ ಸಾಂಸ್ಕೃತಿಕ ಪರಿಸರವನ್ನು ಪ್ರತಿನಿಧಿಸುತ್ತಾರೆ. ಹಾಗೂ ಅನುಭವಿಸುತ್ತಿರುತ್ತಾರೆ. ವಿಭಿನ್ನ ಕಾಲಘಟ್ಟಗಳಲ್ಲಿ ಜನಿಸಿರುವ ಪಾಲಕರು ಮತ್ತು ಮಕ್ಕಳು ತಮ್ಮ ಕಾಲದಲ್ಲಿ ಅಸ್ತಿತ್ವದಲ್ಲಿರುವ ಜೀವನಶೈಲಿ, ಸಾಮಾಜಿಕ ಸಂಗತಿ, ತಂತ್ರಜ್ಞಾನ, ಮಾಧ್ಯಮ, ನಂಬುಗೆಗಳು, ಮನೋವೃತ್ತಿಗಳು ಹಾಗೂ ಮೌಲ್ಯಗಳ ಪ್ರಭಾವಕ್ಕೊಳಗಾಗಿ ಸಾಮಾಜಿಕರಣಗೊಂಡಿರುತ್ತಾರೆ. ಹೀಗಾಗಿ ಇಂದು ಅಂತರ್ ತಲೆಮಾರುಗಳ ಸಂಘರ್ಷವೆಂದರೆ ಅದು ಸಾಂಸ್ಕೃತಿಕ ಕಂದರ ಎನ್ನುವಂತಾಗಿದೆ. ಇಂದಿನ ಗಣಕಯಂತ್ರಗಳು, ಅಂತರ್ಜಾಲ, ಹಾಗೂ ಇನ್ನಿತರ ತಂತ್ರಜ್ಞಾನಗಳು ನಮ್ಮ ಜಗತ್ತನ್ನು ವಿಭಿನ್ನವಾಗಿಸಿವೆ. ಆದರೆ ಇದರ ಅರಿವು ಹಾಗೂ ಬಳಕೆ ಹಿರಿಯರಿಗೆ ಅರ್ಥವಾಗುವುದಿಲ್ಲ. ಹೀಗಾಗಿ ಯುವಜನತೆಯ ವರ್ತನೆ ಪಾಲಕರನ್ನು ಭಯಭೀತರನ್ನಾಗಿಸಿದೆ. ಅದಕ್ಕಿಂತ ಹೆಚ್ಚಾಗಿ ಮಾದಕ ವಸ್ತುಗಳ ಸೇವನೆ, ಮಧ್ಯಪಾನ, ಲೈಂಗಿಕ

ಚಟುವಟಿಕೆಗಳು ಹಾಗೂ ಸಮವಯಸ್ಕ ಸಮೂಹಗಳ ಹಾನಿಕಾರಕ ಒತ್ತಡಗಳ ಬಗ್ಗೆ ಪಾಲಕರು ಹೆಚ್ಚು ಚಿಂತಿಸುವಂತಾಗಿದೆ ಹಾಗೂ ಭಯಭೀತರನ್ನಾಗಿಸಿದೆ. ಆದ್ದರಿಂದಲೇ ಕೆಲವು ಪಾಲಕರು ಮಕ್ಕಳಿಗೆ ಹಣ ಕೊಡದೇ ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಬಯಸುತ್ತಾರೆ. ಹೀಗೆ ಬದಲಾಗುತ್ತಿರುವ ಸನ್ನಿವೇಶಕ್ಕನುಗುಣವಾಗಿ ಬೆಳೆಯುವಂತೆ ಮಕ್ಕಳನ್ನು ಪ್ರೋತ್ಸಾಹಿಸುವುದರ ಬದಲಾಗಿ ಅವರ ವಿಚಾರಗಳನ್ನು, ಭಾವನೆಗಳನ್ನು ಹತ್ತಿಕ್ಕಬಯಸುತ್ತಾರೆ. ಇದು ಕಿಶೋರರ ಬೆಳವಣಿಗೆಗೆ ಅಡೆತಡೆಯಾಗಿರುತ್ತದೆ. ಹೀಗೆ ಕಿಶೋರಾವಸ್ಥೆಯಲ್ಲಿರುವ ತಮ್ಮ ಮಕ್ಕಳು ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತ ಪ್ರೌಢರಾಗುವುದನ್ನು ಉದ್ದೇಶಪೂರ್ವಕವಾಗಿ ಮುಂದೂಡಿದಂತಾಗುತ್ತದೆ.

ಕಿಶೋರರು ತಮ್ಮ ವೈಯಕ್ತಿಕ ಜೀವನದ ಕುರಿತು ತಮ್ಮದೇ ಆದ ಅರಿವನ್ನು ಬೆಳೆಸಿಕೊಂಡಿರುತ್ತಾರೆ. ಆದರೆ ಇದಕ್ಕೆ ವಿರುದ್ಧವಾಗಿ ಮಕ್ಕಳ ನಿರ್ಣಯಗಳನ್ನು ಮತ್ತು ಆಶೋತ್ತರಗಳನ್ನು ಗಣನೆಗೆ ತೆಗೆದುಕೊಳ್ಳದೇ ತಮ್ಮ ನಿರ್ಧಾಗಳಂತೆಯೇ ನಡೆದುಕೊಳ್ಳಬೇಕೆನ್ನುವ ಗೀಳನ್ನು ಒತ್ತಾಯಪೂರ್ವಕವಾಗಿ ತಮ್ಮ ಮಕ್ಕಳ ಮೇಲೆ ಹೇರುತ್ತಿರುತ್ತಾರೆ. ಇದಕ್ಕೆ ಮಕ್ಕಳು ದಾರಿ ಬಿಟ್ಟರೆ ಹೇಗೆ ಎಂಬ ಭಯವೇ ಕಾರಣ. ಇಂದಿನ ಸನ್ನಿವೇಶಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಮಾರಕವಾಗಿವೆ ಎಂಬ ಆತಂಕ ಪಾಲಕರಲ್ಲಿರುತ್ತದೆ. ಇಂದಿನ ಎಲ್ಲ ಪಾಲಕರೂ ಒಂದು ಕಾಲದಲ್ಲಿ ಹದಿವಯಸ್ಸನ್ನು ದಾಟಿ ಬಂದವರೇ, ಹಾಗಾಗಿ ಪ್ರಾಯಶಃ ತಾವು ಮಾಡಿದ್ದ ತಪ್ಪುಗಳನ್ನು ತಮ್ಮ ಮಕ್ಕಳೂ ಮಾಡಿಯಾರು ಎಂಬ ಭಯದಿಂದಾಗಿ ತಮ್ಮ ಮಕ್ಕಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬಯಸುತ್ತಾರೆ ಎನ್ನಬಹುದು.

ಸಂಘರ್ಷದ ಕ್ಷೇತ್ರಗಳು:

ಗಂಡು ಹೆಣ್ಣು ಎಂಬ ಲಿಂಗಬೇಧವಿಲ್ಲದೇ ಆಹಾರ, ಉಡುಪು, ಮೊದಲಾದ ವಿಷಯಗಳಲ್ಲಿ ತಮ್ಮ ಪಾಲಕರೊಂದಿಗೆ ಗಂಭೀರ ಅಪಹೊಂದಾಣಿಕೆ ಇರುತ್ತದೆ. ಭಿನ್ನ ಲಿಂಗದವರ ನಡುವಿನ ಸ್ನೇಹ ಸಂದಿಗ್ದ ಪರಿಸ್ಥಿತಿಯನ್ನು ತಂದೊಡ್ಡುತ್ತದೆ. ವಿಶ್ರಾಂತಿ ಕಾಲದ ಚಟುವಟಿಕೆಗಳು ಮತ್ತು ಧೂಮ್ರಪಾನಕ್ಕೆ ಸಂಬಂಧಿಸಿದಂತೆ ಸಹಮತವಿಲ್ಲ, ರಾತ್ರಿ ಬಹಳ ಹೊತ್ತಿನವರೆಗೆ ಮಲಗದಿರುವುದು, ಬೆಳಿಗ್ಗೆ ಬೇಗ ಏಳದಿರುವುದು, ಮೊದಲಾದವುಗಳನ್ನೊಳಗೊಂಡಂತೆ ಸಮಯ ಪರಿಪಾಲನೆ ಸರಿಯಾಗಿ ಮಾಡದಿರುವುದು ವಿದ್ಯಾಥಿಗಳು ಮತ್ತು ಅವರ ಪಾಲಕರ ನಡುವೆ ಗಂಭೀರ ಸಂಘರ್ಷಗಳನ್ನು ತಂದೊಡ್ಡುತ್ತವೆ. ಹುಡುಗಿಯರ ಮಟ್ಟಿಗಂತೂ ಸಾಯಂಕಾಲ ತಡವಾಗಿ ಮನೆಗೆ ಬರುವುದು ಸಾಮಾಜಿಕ ನಿಷೇಧವಾಗಿದೆ. ಅಲ್ಲದೇ ಬಹುತೇಕ ಯುವಜನರು ಅಪಹೊಂದಾಣಿಕೆ ಮತ್ತು ಅನಗತ್ಯ ಮಾತುಕತೆಗಳಿಂದಾಗಿಯೇ ಪಾಲಕರ ಜೊತೆ ಕುಳಿತುಕೊಂಡು ಊಟ ಮಾಡುವುದಕ್ಕೂ ಹಿಂದೇಟು ಹಾಕುತ್ತಾರೆ. ಎಲ್ಲ ಪಾಲಕರು ಮಕ್ಕಳ ವರ್ತನೆಗಳ ಕುರಿತು ಹೆಚ್ಚು ಕಟ್ಟುನಿಟ್ಟಾಗಿರುತ್ತಾರೆಯೋ ಅಲ್ಲಿ ಸಂಘರ್ಷ ಹೆಚ್ಚಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ಯಾವ ಕೋರ್ಸ್ ತೆಗೆದುಕೊಳ್ಳಬೇಕು, ಯಾವ ಉದ್ಯೋಗ ಮಾಡಬೇಕು, ಯಾವ ಕಾಲೇಜಿಗೆ ಸೇರಬೇಕು, ಎಂಬಿತ್ಯಾದಿ ವಿಷಯಗಳ ಬಗ್ಗೆಯೂ ವಿಭಿನ್ನ ಅಭಿಪ್ರಾಯಗಳು ಸಾಮಾನ್ಯವಾಗಿರುತ್ತವೆ. ಇಂತಹ ವಿಷಯಗಳಿಂದಾಗಿಯೇ ಯುವಕರ ಮತ್ತು ಪಾಲಕರ ನಡುವೆ ಅಪಾಯಕಾರಿಯಾಗುವ ಸಂಘರ್ಷಗಳು ಏರ್ಪಡುತ್ತವೆ. ಮಕ್ಕಳ ಅಗತ್ಯತೆಗನುಗುಣವಾಗಿ ಖರ್ಚಿಗೆ ಹಣವನ್ನು ಕೊಡದಿರುವುದು ಹಾಗೂ ಸಮಯದ ಕುರಿತು ನಿರ್ಬಂಧ ಹೇರುವುದು ಸಂಘರ್ಷದ ಮತ್ತೊಂದು ಕ್ಷೇತ್ರವಾಗಿದೆ. ಮನೆಯಲ್ಲಿ ಪಾಲಕರು ಪ್ರತಿಯೊಂದಕ್ಕೂ ಎಲ್ಲಿ ಹೋಗಿದ್ದಿ, ಏನು ಮಾಡಿದೆ, ಹಣ ಯಾಕೆ ಬೇಕು, ಯಾವುದಕ್ಕೆ ಖರ್ಚು ಮಾಡಿದೆ ಎಂಬಿತ್ಯಾದಿ ಪ್ರಶ್ನೆಗಳನ್ನು ಮೇಲಿಂದ ಮೇಲಿ ಪ್ರಶ್ನಿಸುವುದನ್ನು ಸಹಿಸುವುದಿಲ್ಲ. ಇದರ ಪರಿಣಾಮವಾಗಿಯೇ, ಮಕ್ಕಳು ಪಾಲಕರ ಜೊತೆ ಅಂತರ ಕಾಯ್ದುಕೊಳ್ಳಬಯಸುತ್ತಾರೆ.

ನಮ್ಮ ಸಾಮಾಜಿಕ ಜೀವನದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆಯೂ ಸಹ ಸಂಘರ್ಷ ಕಂಡು ಬರುತ್ತದೆ. ಬಾಳಸಂಗಾತಿ ಆಯ್ಕೆ, ಉದ್ಯೋಗದ ಆಯ್ಕೆ, ವಿರಾಮದ ಸಮಯ ಬಳಕೆ, ಅಂತರ್ ಜಾತಿ, ಅಂತರ್‌ಧರ್ಮಿಯ ಹಾಗೂ ಅಂತರ್ ವರ್ಗಗಳ ಸ್ನೇಹಿತರನ್ನು ಹೊಂದುವುದು ಕುರಿತು, ಹಾಗೂ ಅನ್ಯಲಿಂಗದವರ ತರಹ ವರ್ತಿಸುವುದರ ಕುರಿತು ಎರಡೂ ತಲೆಮಾರುಗಳ ನಡುವೆ ಸಂಘರ್ಷ ಇದ್ದೆ ಇರುತ್ತದೆ.. ಅಲ್ಲದೇ ಬಹುತೇಕ ಯುವಕರು ಬಯಸುವುದೇನೆಂದರೆ ಪಾಲಕರು ಅವರ ಖರ್ಚಿಗೆ ದುಡ್ಡು ಕೊಡಬೇಕು, ಆದರೆ ಅದಕ್ಕೆ ಯಾವುದೇ ಲೆಕ್ಕ ಕೇಳಬಾರದು, ಹೀಗೆ ಆಗುವುದು ಕಷ್ಟ. ಆದ್ದರಿಂದ ತಲೆಮಾರುಗಳ ನಡುವೆ ಸಂಘರ್ಷ ಸಾಮಾನ್ಯ.

ಬಹುತೇಕ ಸಂಘರ್ಷಗಳಿಗೆ ಪರಸ್ಪರ ಸಂಪರ್ಕದ ಕೊರತೆಯೇ ಕಾರಣ ವಾಗಿರುತ್ತದೆ. ಸಂಘರ್ಷಕ್ಕೆ ಲೈಂಗಿಕತೆ ಮತ್ತು ಧರ್ಮದ ಕುರಿತಾಗಿ ಯುವಜನತೆಯಲ್ಲಿ ಬದಲಾಗುತ್ತಿರುವ ಮನೋಭಾವನೆಗಳೂ ಸಹ ಕಾರಣವಾಗುತ್ತಿವೆ. ಆದರೆ ಇಂದಿನ ಪ್ರಸ್ತುತ ಜಾತಿ ವ್ಯವಸ್ಥೆಯಿಂದ ನಿರ್ದೇಶಿಸಲ್ಪಡುವ ಸಂಪ್ರದಾಯಶೀಲ ಭಾರತದಂತಹ ರಾಷ್ಟ್ರಗಳಲ್ಲಿ ಪಾಲಕರು ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಸಾಮಾಜಿಕ ಪ್ರತಿಷ್ಠೆ, ಸ್ಥಾನಮಾನ, ಘನತೆ ಗೌರವಗಳಿಗೆ ಒಳಗಾಗಿ ಬದುಕು ನಡೆಸುತ್ತಿರುವುದು ಕೂಡ ಅಂತರ್ ತಲೆಮಾರುಗಲ ಸಂಘರ್ಷಕ್ಕೆ ಕಾರಣ. ಅಲ್ಲದೇ ಪ್ರತಿನಿತ್ಯ ನಡೆಯುವ ಅತ್ಯಾಚಾರ, ಅಪಹರಣ, ಕೊಲೆ ಮೊದಲಾದ ಘಟನೆಗಳೂ ಸಹ ತಮ್ಮ ಯುವಜನತೆಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಕಾರಣ. ಇದಕ್ಕೆ ಪಾಲಕರು ಸಂಪೂರ್ಣವಾಗಿ ತಮ್ಮ ಮಕ್ಕಳ ಸ್ವಭಾವ ನಡುವಳಿಕೆ ಕುರಿತು ಸಮರ್ಪಕವಾಗಿ ತಿಳಿದುಕೊಳ್ಳದಿರುವುದೇ ಕಾರಣ.

## ಆಧಾರ ಗ್ರಂಥಗಳು :


- Adams, B.N. "*The Family : A Sociological Interpretation*". Rand Menally College Publishing Company, Chicago, 1975.
- Bossard, J. "*Family Behaviour and Child Development*". Agro Botanical Publishers, India, 1996.
- Chitnis, S. "*Parents and Students* : *A Study in Value Orientation*". In : Sinha and Gangrade, Intergenerational Conflict in India, Nichiketa, Bombay, 1971.
- Crow Lester D. and Crow Alice. "*Adolescent Development and Adjustment*". MacGraw Hill Company, New York, 1965.
- Davis, K. "The Sociology of Parent-Youth Conflict". *American Sociological Review*, Vol. 05, 1940, pp. 523-535.
- Dube, S. "*Violence of Younger Generation Towards Old*". In : Marriage, Family and Socialization. Good, Sushma and J.N. Choudhary (Eds.). Arihant Publishing House, Jaipur, 1994.
- Feuer, L.S. "*The Conflict of Generations*". Basic Books, New York, 1969.
- Gangrade, K.D. "*Crisis of Values : A Study in Generation Gap*". Chetana Publications, New Delhi, 1975.
- Gangrade, K.D. "Intergeneration Conflict : A Study in Generation Gap". *Social Change* Vol. 4 (1) 1974, pp. 18-27.
- Halyal, P.S. "*Generation Gap : Comparison of Attitudinal Modernity of College Students and Their Parents*". Unpublished Ph.D. Thesis. Karnatak University, Dharwad, 1984.
- Halyal, P.S. and Mallappa, K.R. "Generation Gap : Attitudinal Comparison of Young and Old Parents with their Children". *Journal of Social Sciences*, Karnatak University, Vol. 22, 1986.
- Halyal, P.S. and Mallappa, K.R. "Generation Gap : Differences in Attitudinal Modernity". *Journal of Indian Academy of Applied Psychology* Vol. 12 (1) 1986 pp. 6-15.
- Halyal, P.S. and Mallappa, K.R. "Generation Gap : Influence of SES on Attitudinal Discontinuities". *Indian Journal of Community Guidance Service*. Vol. 3 (2) : 1986, pp. 30-40.
- Halyal, P.S. and Mallappa, K.R. "Influence of SES on Individual Modernity". *Indian Journal of Community Guidance Service*, Vol. 2 (3) : 1985, p. 1-6.
- Halyal, P.S. and Mallappa, K.R. "Intergenerational Differences in Urban and Rural Settings". *Indian Journal of Community Guidance Service*, Vol. 2 (1) 1985, p. 1-15.
- Landis, P.H. "*Adolescence and Youth : A Process of Maturity*", MacGraw Hill Book Company Inc. New York, 1952.
- Mahantesh H.B. "Intergenerational Conflict : A Sociological Study Of Generation Gap". Unpublished Ph.D. Thesis. Karnatak University, Dharwad, 2005.

- Reddy, S.K. "Generation Gap : Attitudes of Youth and Adults Towards Authoritarianism". *Journal of Psychological Researches*. Vol. 27 (1) 1983, pp. 45-47.
- Singh, V.K. "Adolescent – A State of Problems". *Educational Review*, 1972, Vol. 78, p. 100-102.
- Sinha, M.P. and K.G. Gangrade (Eds.) "*Intergenerational Conflict in India*", Nachiketa Publications Limited, Bombay, 1971.

# ತಾರುಣ್ಯಾವಸ್ಥೆಯಲ್ಲಿ ಕಂಡು ಬರುವ ಹೊಂದಾಣಿಕೆಯ ಸಮಸ್ಯೆಗಳು

ಡಾ. ಎಚ್. ಬಿ. ಮಹಾಂತೇಶ
ಸಹಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ
ಶ್ರೀಮತಿ ಐ. ಎಸ್. ಯಾದವಾಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ರಾಮದುರ್ಗ ಜಿಲ್ಲೆ: ಬೆಳಗಾವಿ

## ಪ್ರಸ್ತಾವನೆ:

ತಾರುಣ್ಯಾವಸ್ಥೆಯಲ್ಲಿ ಕಂಡು ಬರುವ ಹೊಂದಾಣಿಕೆಯ ಸಮಸ್ಯೆಗಳನ್ನು ತಿಳಿದುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ. ಮಾನವನ ಜೀವನದಲ್ಲಿ ತಾರುಣ್ಯ ವ್ಯವಸ್ಥೆಯು ಸಾಮಾನ್ಯವಾಗಿ ಸಮಸ್ಯೆಗಳ ಅವಧಿಯಿಂದ ಪರಿಗಣಿಸಲ್ಪಡುವದು. ಮಾನವನ ಜೀವನದಲ್ಲಿ ಹೊಂದಾಣಿಕೆಯು ನಿರಂತರವಾದ ಪ್ರಕ್ರಿಯೆಯಾಗಿದ್ದು ಅದು ಬಾಲ್ಯಾವಸ್ಥೆಯಿಂದಲೇ ಪ್ರಾರಂಭವಾಗುವದು. ಪ್ರತಿಯೊಂದು ಸನ್ನಿವೇಶಕ್ಕೆ ತಕ್ಕಂತೆ ಹೊಂದಾಣಿಕೆಯು ಅವಶ್ಯಕವಾಗಿರುವುದು. ವ್ಯಕ್ತಿಯು ಸನ್ನಿವೇಶಕ್ಕೆ ತಕ್ಕಂತೆ ಹೊಂದಾಣಿಕೆಯಾಗದಿದ್ದಾಗ ಸಮಸ್ಯೆಗಳು ಉದ್ಭವಿಸುವವು. ತಾರುಣ್ಯಾವಸ್ಥೆಯ ಮಕ್ಕಳು ಪರಿಸರಕ್ಕೆ ತಕ್ಕಂತೆ ಹೊಂದಾಣಿಕೆಯಾಗದಿದ್ದಾಗ ಹಲವಾರು ಸಮಸ್ಯೆಗಳು ಉಂಟಾಗುವದರೊಂದಿಗೆ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುವುದು.

ಪ್ರಮುಖ ಶಬ್ದಗಳು: ಹೊಂದಾಣಿಕೆ, ತಾರುಣ್ಯಾವಸ್ಥೆ, ಪರಿಸರ, ಸಮಸ್ಯೆಗಳು

ಮಾನವನು ಸಮಾಜದಲ್ಲಿ ಒಳ್ಳೆಯ ನಾಗರಿಕನಾಗಿ ಬದುಕಿ ಬಾಳಲು ಹೊಂದಾಣಿಕೆಯೂ ಅತ್ಯಂತ ಅವಶ್ಯಕವಾಗಿದೆ. ಪ್ರತಿಯೊಂದು ಜೀವವಿರುವ ಪ್ರಾಣಿ ಅಥವಾ ಮಾನವನೇ ಆಗಿರಬಹುದು. ಇವುಗಳೆಲ್ಲವೂ ಸಮಾಜದ ಒಂದಲ್ಲ ಒಂದು ಹಂತದಲ್ಲಿ ಹೊಂದಾಣಿಕೆ ಮಾಡಿಕೊಂಡು ಬಾಳಬೇಕಾಗುತ್ತದ. ತಾರುಣ್ಯಾವಸ್ಥೆಯು ಬಾಲ್ಯ ಹಾಗೂ ಮುಪ್ಪಿನಾವಸ್ಥೆಯ ಮಧ್ಯದಲ್ಲಿ ಕಂಡು ಬರುವ ಅವಧಿಯಾಗಿದೆ. ಈ ಅವಧಿಯಲ್ಲಿ ವ್ಯಕ್ತಿಯು ತೀವ್ರತೆರನಾಗಿ ಭೌತಿಕ ಬದಲಾವಣೆ ಮತ್ತು ಬೇಡಿಕೆಗಳೊಂದಿಗೆ ಹೊಸ ರೀತಿಯ ಸಾಮಾಜಿಕ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ಈ ತೆರನಾದ ಬದಲಾವಣೆಯಲ್ಲಿ ಕಿಶೋರರು ಹಲವಾರು ದ್ವಂದ್ವ ಹಾಗೂ ಆತಂಕಗಳಿಗೆ ಒಳಗಾಗುತ್ತಾರೆ. ಸಾಮಾನ್ಯವಾಗಿ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಈ ಎರಡು ಅಂಶಗಳು ಸುಗಮವಾಗಿ ಸಾಗಿದರೆ ಆ ವ್ಯಕ್ತಿ ಜೀವನದಲ್ಲಿ ಯಶಸ್ವಿಯಾಗುವನು. ಆದರೆ ಪ್ರಸ್ತುತ ಸನ್ನಿವೇಶದಲ್ಲಿ ಹಲವಾರು ತರುಣರು ಭಾವನಾತ್ಮಕ ಬೆಳವಣಿಗೆ ಸನ್ನಿವೇಶಕ್ಕೆ ಹೊಂದಾಣಿಕೆ ಮಾಡಿಕೊಳ್ಳದೇ ಜೀವನದಲ್ಲಿ ಆತಂಕ ಹಾಗೂ ನಿರಾಶೆಗಳಿಗೆ ಒಳಗಾಗುವದನ್ನು ಕಾಣುತ್ತೇವೆ. ಹೀಗಾಗಿ ತಾರುಣ್ಯಾವಸ್ಥೆಯಲ್ಲಿ ಸಂಘರ್ಷ ಹಾಗೂ ಅಪಹೊಂದಾಣಿಕೆ ಕಂಡು ಬರುವುದು.

ಹೊಂದಾಣಿಕೆಯು ವ್ಯಕ್ತಿಗಳು ಸನ್ನಿವೇಶಕ್ಕೆ ತಕ್ಕಂತೆ ವರ್ತಿಸುವುದನ್ನು ಸೂಚಿಸುವದಾಗಿದೆ. ಜೀವನದಲ್ಲಿ ಹಲವಾರು ರೀತಿಯ ಸನ್ನೀವೇಶಗಳು ಎದುರಾಗುವವು ಅವುಗಳೆಲ್ಲ ವಿಭಿನ್ನತೆಯಿಂದ ಕೂಡಿರುವವು. ಆ ಸನ್ನಿವೇಶಗಳ ಹೊಂದಾಣಿಕೆಯ ಕೊರತೆ ಉಂಟಾದಾಗ ಸಮಸ್ಯೆಗಳು ಅಸ್ತಿತ್ವ ಹೊಂದಿವವು. ಹೀಗಾಗಿ ಕಿಶೋರಾವಸ್ಥೆಯಲ್ಲಿ ಭಾವನಾತ್ಮಕ ಅಪಹೊಂದಾಣಿಕೆ ಹೆಚ್ಚಾಗಿ ಕಂಡು ಬರುವುದು. ಇದರಿಂದಾಗಿ ಹಲವಾರು ಕಿಶೋರ, ಕಿಶೋರಿಯರು ಮನೆಯಿಂದ ಓಡಿ ಹೋಗುವದು, ಶಾಲೆಯಿಂದ ದೂರ ಉಳಿಯುವುದನ್ನು ಕಾಣುತ್ತೇವೆ. ಪ್ರತಿದಿನ ದೂರದರ್ಶನ ವಾರ್ತೆಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ಮೂರರಿಂದ ನಾಲ್ಕು ತಾರುಣ್ಯಾವಸ್ಥೆಯ ಮಕ್ಕಳು ತಮ್ಮ ಮನೆಗಳಿಂದ ಕಾಣೆಯಾಗಿರುವ ಪ್ರಕರಣಗಳನ್ನು ಕಾಣುತ್ತೇವೆ. ಹೀಗಾಗಿ ತಾರುಣ್ಯಾವಸ್ಥೆಯು ವ್ಯಕ್ತಿಯ ಜೀವನದಲ್ಲಿ ತುಂಬಾ ಜಟಿಲಮಯವಾದ ಅವಧಿಯಾಗಿದೆ.

### ಹೊಂದಾಣಿಕೆಯ ಪರಿಕಲ್ಪನೆ:

ಹೊಂದಾಣಿಕೆ ಎಂಬುದು ಸಾಮಾನ್ಯವಾದ ಶಬ್ದವಾಗಿದೆ. ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಹೊಂದಾಣಿಕೆಯಿಂದ ಜೀವನ ಸಾಗಿಸಬೇಕಾಗುತ್ತದೆ. ಹೀಗಾಗಿ ನಾವು ಹೊಂದಾಣಿಕೆ ಮತ್ತು ಅಪಹೊಂದಾಣಿಕೆ ಎಂಬ ಪದಗಳನ್ನು ಉಪಯೋಗಿಸುತ್ತೇವೆ. ಇದನ್ನು ಮನೋವಿಜ್ಞಾನದಲ್ಲಿ ಸಾಮಾನ್ಯ ಮತ್ತು ಅಸಾಮಾನ್ಯ ಹೊಂದಾಣಿಕೆಯೆಂದು ಉಪಯೋಗಿಸುವುದನ್ನು ಕಾಣುತ್ತೇವೆ. ಹಲವಾರು ವ್ಯಕ್ತಿಗಳು ಹೊಂದಾಣಿಕೆಯ ಕಲೆಯನ್ನು ಅಳವಡಿಸಿಕೊಂಡು ಯಶಸ್ವಿಯಾಗಿರುವುದನ್ನು ಕಾಣುತ್ತೇವೆ.

ಖಿಛಿಟಿಜುಜಜಡಿ’ (೧೯೬೦) ಹೊಂದಾಣಿಕೆಯು ಮಾನವ ಜೀವನದಲ್ಲಿ ನಿರಂತರವಾದ ಪ್ರಕ್ರಿಯೆಯಾಗಿದ್ದು ಪ್ರತಿಯೊಂದು ಸನ್ನಿವೇಶದಲ್ಲಿ ವಾಸ್ತವಿಕೆಯೊಂದಿಗೆ ಹೊಂದಾಣಿಕೆಯಾವುದರ ಜೊತೆಗೆ ತನ್ನ ಬೇಡಿಕೆಗಳನ್ನು ತೃಪ್ತಿಪಡಿಸಿಕೊಳ್ಳುವ ಕ್ರಿಯೆಯಾಗಿದೆ.

ಇಥಿಜಟಿಜಇ & ಂಟಂಟಜಇವರು ವ್ಯಕ್ತಿಯು ತನ್ನ ಬೇಡಿಕೆಗಳನ್ನು ಸಾಮಾಜಿಕ ಪರಿಸರದೊಂದಿಗೆ ಹೊಂದಾಣಿಕೆಯಾವುದರ ಮುಖಾಂತರ ಈಡೇರಿಸಿಕೊಳ್ಳುವದಾಗಿದೆ.

ಃಂಡಿಟಿಂ ರ ಪ್ರಕಾರ ಹೊಂದಾಣಿಕೆಯ ಪ್ರಕ್ರಿಯೆಯು ಜೀವಿಸುವ ಪ್ರತಿಯೊಬ್ಬರು ಸನ್ನಿವೇಶಗಳಿಗೆ ಅನುಸಾರವಾಗಿ ಹೊಂದಾಣಿಕೆಯ ಮೂಲಕ ಬೇಡಿಕೆಗಳನ್ನು ತೃಪ್ತಿಪಡಿಸಿಕೊಳ್ಳುವದಾಗಿದೆ. ಹೀಗೆ ಹೊಂದಾಣಿಕೆ ಎಂಬುದು ೧೯೩೦ ರಲ್ಲಿ ಮನೋವಿಜ್ಞಾನದ ಅಧ್ಯಯನದಲ್ಲಿ ತುಂಬಾ ಪ್ರಸಿದ್ಧಿಯಾಗಿರುವುದು ತಿಳಿದು ಬರುತ್ತದೆ.

ಅಧ್ಯಯನದ ಮಹತ್ವ:

ಆಧುನಿಕ ಯುಗದಲ್ಲಿ ಹೊಂದಾಣಿಕೆಯು ಅವಶ್ಯಕವಾಗಿವೆ. ಪ್ರಸ್ತುತ ಸನ್ನಿವೇಶದಲ್ಲಿ ಜನರು ಹೊಂದಾಣಿಕೆಯ ಸಮಸ್ಯೆಗಳಿಂದ ಹೊರಬರಬೇಕಾಗಿದೆ. ಅದರಲ್ಲಿಯೂ ೧೦ ರಿಂದ ೧೯ ನೇ ವರ್ಷದ ವಯಸ್ಸಿನಲ್ಲಿ ಅಂದರೆ ತಾರುಣ್ಯಾವಸ್ಥೆಯಲ್ಲಿ ಕಂಡು ಬರುವ ಹೊಂದಾಣಿಕೆಯ ಸಮಸ್ಯೆಗಳನ್ನು ಅರಿತುಕೊಂಡು ಅವುಗಳನ್ನು ಪರಿಹರಿಸುವುದು ಅವಶ್ಯಕ ಹಾಗೂ ಅನಿವಾರ್ಯವಾಗಿದೆ.

ಹೊಂದಾಣಿಕೆಯ ಸಮಸ್ಯೆಗಳ ಮೇಲೆ ಪ್ರಭಾವ ಬೀರುವ ಅಂಶಗಳು:

ಕಿಶೋರಾವಸ್ಥೆಯಲ್ಲಿ ಹೊಂದಾಣಿಕೆಯ ಸಮಸ್ಯೆಗಳ ಮೇಲೆ ಪ್ರಭಾವ ಬೀರುವ ಅಂಶಗಳ ಕುರಿತು ಸಾಕಷ್ಟು ಮನೋವೈಜ್ಞಾನಿಕ ಸಂಶೋಧನೆಗಳು ನಡೆದಿರುವುದನ್ನು ಕಾಣುತ್ತೇವೆ. ಅದರಲ್ಲಿಯೂ ಸಾಮಾಜಿಕ–ಮನೋವೈಜ್ಞಾನಿಕ ಅಂಶಗಳ ಪ್ರಭಾಗ ಕಿಶೋರರ ಮೇಲೆ ಹೆಚ್ಚಾಗಿ ಕಂಡು ಬರುವುದು. ಹೀಗಾಗಿ ಹಲವಾರು ಭಾರತೀಯ ಅಧ್ಯಯನಗಳು ಕಿಶೋರರ ಹೊಂದಾಣಿಕೆಯ ಸಮಸ್ಯೆಗಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಪ್ರಕಟಪಡಿಸಿರುವವು ಅವುಗಳು ಈ ಕೆಳಗಿನಂತಿವೆ.

ಹೊಂದಾಣಿಕೆ ಮತ್ತು ಶೈಕ್ಷಣಿಕ ಸಾಧನೆ:

ಹೊಂದಾಣಿಕೆ ಮತ್ತು ಶೈಕ್ಷಣಿಕ ಸಾಧನೆ ಕಿಶೋರಾವಸ್ಥೆಯಲ್ಲಿಯ ಅಂತರ ಸಂಬಂಧಿತವಾದ ಅಂಶವಾಗಿದೆ. ಖಚಿರಿಚಿಟಚಿಟುಥಿಇಚಿಟ ಹಾಗೂ ಗಿಚಿಚಿಟಣುಚಿಟ (೧೯೯೩)ಅಧ್ಯಯನವು ಹಲವಾರು ಆಸಕ್ತಿಯುತವಾದ ಫಲಿತಾಂಶಗಳನ್ನು ಪ್ರಕಟಿಸಿರುವುದು ಅವರ ಅಧ್ಯಯನದಂತೆ ಸರಿಯಾದ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಅತಿ ಉತ್ತಮವಾದ ಸಾಧನೆ ಮಾಡಿರುವವರು. ಅದೇ ತೆರನಾಗಿ ಸರಿಯಾಗಿ ಹೊಂದಾಣಿಕೆಯಾಗದಿರುವ ವಿದ್ಯಾರ್ಥಿಗಳು ಶೈಕ್ಷಣಿಕ ಸಾಧನೆಯಲ್ಲಿ ಹಿಂದಿರುವುದನ್ನು ತಿಳಿಸಿರುವರು. ಆದ್ದರಿಂದ ಕಿಶೋರಾವಸ್ಥೆಯಲ್ಲಿ ಹೊಂದಾಣಿಕೆಯು ಅತಿ ಅವಶ್ಯಕವಾಗಿರುವದು. ಏಕೆಂದರೆ ಮಾನವ ಜೀವನದಲ್ಲಿ ಈ ಅವಧಿಯು ಬದಲಾವಣೆ ಹಾಗೂ ತಿರುವು ಪಡೆಯುವ ಹಂತವಾಗಿರುವುದು.

ಹೊಂದಾಣಿಕೆ ಮತ್ತು ಸೃಜನಾತ್ಮಕ ಸಾಮರ್ಥ್ಯಗಳು:

ಝಚಿ (೧೯೮೮): ಅಧ್ಯಯನದಂತೆ, ಹೊಂದಾಣಿಕೆಯ ಸಮಸ್ಯೆಗಳು ಕಿಶೋರರ ಸೃಜನಾತ್ಮಕ ಸಾಮರ್ಥ್ಯಗಳ ಮೇಲೆ ಪ್ರಭಾವಬೀರುವವು. ಉತ್ತಮ ರೀತಿಯ ಹೊಂದಾಣಿಕೆಯ ಬಾಲಕ–ಬಾಲಕೀಯರ ಅತ್ಯುತ್ತಮವಾದ ಸೃಜನಾತ್ಮಕ ಸಾಮರ್ಥ್ಯಗಳನ್ನು ಪಡೆದಿರುವದು ತಿಳಿದು ಬರುತ್ತದೆ. ಕುಟುಂಬದಲ್ಲಿ ಹಾಗೂ ಸಮವಯಸ್ಕರರ ಜೊತೆ ಉತ್ತಮ ರೀತಿಯಲ್ಲಿ ಹೊಂದಾಣಿಕೆಯಿದ್ದರೆ ಸೃಜನಾತ್ಮಕ ಸಾಮರ್ಥ್ಯಗಳು ಬೆಳದು ಬರುವವು. ಹೀಗಾಗಿ ಹೊಂದಾಣಿಕೆಯು ವ್ಯಕ್ತಿಯಲ್ಲಿ ಸೃಜನಾತ್ಮಕತೆ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸುವದು.

ಹೊಂದಾಣಿಕೆ ಮತ್ತು ಆಕಾಂಕ್ಷೆಗಳು:

ಸಾಮಾನ್ಯವಾಗಿ ಕಿಶೋರಾವಸ್ಥೆಯಲ್ಲಿ ಉನ್ನತವಾದ ಆಕಾಂಕ್ಷೆ ಹಾಗೂ ಆಶೆಗಳನ್ನು ಹೊಂದಿರುವದು ಕಂಡು ಬರುತ್ತದೆ. ಖಚಿತು ಖಚಿಟಿಜ್ಞಣ(೧೯೯೭) ಅಧ್ಯಯನದಂತೆ, ಹೊಂದಾಣಿಕೆಯ ಸಮಸ್ಯೆಗಳು ಅತಿ ಉನ್ನತ ಹಾಗೂ ಅತಿ ಕೆಳಮಟ್ಟದ ಆಕಾಂಕ್ಷೆಗಳಲ್ಲಿ ಕಂಡು ಬರುತ್ತದೆ. ಅತಿಯಾದ ಆಶೆ ಆಕಾಂಕ್ಷೆಗಳನ್ನು ಹೊಂದಿರುವರು ತಮ್ಮ ಅಹಂನಿಂದಾಗಿ ಸಾಧನೆ ಮಾಡುವಲ್ಲಿ ಹೊಂದಾಣಿಕೆ ಸಮಸ್ಯೆಗಳನ್ನು ಎದುರಿಸುವರು ಹಾಗೂ ಸಾಮಾಜಿಕ ಸ್ಥಿತಿಗತಿಗಳಿಗೆ ಹೊಂದಿಕೊಳ್ಳುವಲ್ಲಿ ವಿಫಲರಾಗುವರು ಅದರಂತೆ ಕೆಳಮಟ್ಟದ ಆಕಾಂಕ್ಷೆಗಳನ್ನು ಹೊಂದಿರುವವರು ತಮ್ಮ ಕೀಳರಿಮೆ ಭಾವನೆಯಿಂದಾಗಿ ಸಾಮಾಜಿಕ ಪರಿಸರಕ್ಕೆ ಹೊಂದಾಣಿಕೆ ಮಾಡಿಕೊಳ್ಳುವಲ್ಲಿ ವಿಫಲರಾಗುವರು. ಕಿಶೋರಾವಸ್ಥೆಯಲ್ಲಿ ಸರಿ ತಪ್ಪುಗಳ ಹಾಗೂ ತಮ್ಮ ಸಾಮರ್ಥ್ಯಗಳ ಬಗ್ಗೆ ಸರಿಯಾದ ತಿಳುವಳಿಕೆಯ ಕೊರತೆಯಿಂದಾಗಿ ಅತಿಯಾದ ಆಸೆಗಳನ್ನು ಉನ್ನತವಾದ ಗುರಿಗಳನ್ನು ಹೊಂದಿರುವರು. ಅವುಗಳ ಈಡೇರಿಸಿಕೊಳ್ಳುವಲ್ಲಿ ವಿಫಲರಾದಾಗ ಹೊಂದಾಣಿಕೆಯಾಗದೇ ಆತ್ಮಹತ್ಯೆಗೆ ಶರಣಾದ

ಉದಾಹರಣೆಗಳು ಕಂಡುಬರುತ್ತವೆ. ಕುಟುಂಬದ ಪರಿಸರಕ್ಕೆ ಸರಿಯಾದ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಂಡ ಕಿಶೋರರು ತಮ್ಮ ಗುರಿಗಳನ್ನು ಹಾಗೂ ಆಶೆ–ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವುದನ್ನು ಕಾಣುತ್ತೇವೆ.

ಹೊಂದಾಣಿಕೆ ಮತ್ತು ಅಪರಾಧ:

ಸಮಾಜದಲ್ಲಿ ಅಪಹೊಂದಾಣಿಕೆಗೆ ಒಳಗಾದ ಕಿಶೋರರು ಕಳ್ಳತನ, ಹಿಂಸೆ ಹಾಗೂ ಬಾಲಾಪರಾಧ ಮುಂತಾದ ಸಮಾಜಕ್ಕೆ ಮಾರಕವಾದ ಅಪರಾಧ ಚಟುವಟಿಕೆಗಳಲ್ಲಿ ತೊಡಗುವರು. ಹಲವಾರು ಮನೋವಿಜ್ಞಾನಗಳ ಸಂಶೋಧನೆಯಲ್ಲಿ ತಿಳಿದುಬಂದಿರುವಂತೆ, ಮನೋ–ಸಾಮಾಜಿಕ ಕಾರಣಗಳು ಅಪರಾಧ ಹಾಗೂ ಸಮಾಜಕ್ಕೆ ಮಾರಕವಾದ ವರ್ತನೆಯಲ್ಲಿ ತೊಡಗಲು ಸಹಾಯ ಮಾಡುವವು. ಗಿುರಿಚಿಥಿಚಿಟಚಿಥಟು ಂಟಟುಟಚಿಬ್ಖುಚಿತು(೧೯೯೭) ತಿಳಿಸಿರುವಂತೆ ಕಿಶೋರರಲ್ಲಿ ಕಂಡುಬರುವ ಹೊಂದಾಣಿಕೆಯ ಸಮಸ್ಯೆಗಳು ಅಪರಾಧಿ ಸ್ವಭಾವವನ್ನು ಉಂಟುಮಾಡುವದು. ಯಾರು ಅಪಹೊಂದಾಣಿಕೆಗೆ ಒಳಗಾಗಿರುವರೋ ಅವರು ಅತಿಯಾದ ಅಪರಾಧಿ ಸ್ವಭಾವವನ್ನು ಹೊಂದಿರುವರು. ಭಾವನಾತ್ಮಕ ಹೊಂದಾಣಿಕೆಯ ಕೊರತೆ ಮತ್ತು ಕುಟುಂಬದಲ್ಲಿಯ ಅಪಹೊಂದಾಣಿಕೆಯು ಕಿಶೋರರನ್ನು ಅಪರಾಧ ಚಟುವಟಿಕೆಗಳಲ್ಲಿ ತೊಡಗಲು ಕಾರಣವಾಗುವದು.

ಹೊಂದಾಣಿಕೆ ಮತ್ತು ಲಿಂಗತ್ವ:

ಭಾರತೀಯ ಸಂಸ್ಕೃತಿಯಲ್ಲಿ ಪಾಲಕರು ಲಿಂಗತ್ವದ ಬಗ್ಗೆ ವಿಭಿನ್ನವಾದ ಭಾವನೆಗಳನ್ನು ಹೊಂದಿರುವರು ತಿಳಿದು ಬರುತ್ತದೆ. ಗಂಡು ಮಕ್ಕಳಿಗೆ ಪ್ರಥಮ ಆದ್ಯತೆ ನೀಡಲಾಗುವುದು. ಅಲ್ಲದೇ ಗಂಡು ಹೆಣ್ಣು ಮಕ್ಕಳಲ್ಲಿ ಅಸಮಾನತೆ ಕಂಡುಬರುವದು. ಹೀಗಾಗಿ ಕಿಶೋರಿಯರಲ್ಲಿ ವಿಭಿನ್ನ ರೀತಿನೀತಿಗಳು, ನಿಯಮಗಳು, ಪಕ್ಷಪಾತ, ಅಸಮಾನತೆಯ ಅಂಶಗಳು ಅವರಲ್ಲಿ ಅಸಹಾಯಕತೆ ಹಾಗೂ ಅಭದ್ರತೆಯ ಭಾವನೆಗಳಿಂದಾಗಿ ಹೊಂದಾಣಿಕೆಯ ಸಮಸ್ಯೆಗಳಿಗೆ ಬಲಿಯಾಗುವರು. ೨೧ ನೇ ಶತಮಾನದಲ್ಲಿಯೂ ಪಾಲಕರು ಮಗನಂತೆ, ಮಗಳನ್ನು ಸರಿಸಮಾನವಾಗಿ ಕಾಣಲಾರದ ಉದಾಹರಣೆಗಳು ಕಂಡು ಬರುತ್ತವೆ. ಹೀಗಾಗಿ ಕಿಶೋರಿಯರು ತಮಗೆ ತಾವೇ ಪ್ರಶ್ನೆ ಕೇಳಿಕೊಂಡು ಉತ್ತರ ಪಡೆಯುವಲ್ಲಿ ಗೊಂದಲಗಳಿಗೆ ಒಳಗಾಗುವರು. ಅಲ್ಲದೇ ಮಾನಸಿಕ ಆತಂಕಗಳಿಗೆ ಒಳಗಾಗುವದರೊಂದಿಗೆ ಅಪಹೊಂದಾಣಿಕೆ ಸಮಸ್ಯೆಗೆ ಬಲಿಯಾಗುವರು. ಖತಿಚಿಣಚಿಟಣಡಿಚಿ ಎಚುಟಿ ಕಚಿಡಿಚಿಟುಣಡಿಚಿ(೧೯೯೫) ೩೦೦ ಕಿಶೋರಿಯರ ಹೊಂದಾಣಿಕೆ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿರುವರು. ಅವರಿಗೆ ಸರಿಯಾದ ಆಧ್ಯತೆ ಹಾಗೂ ಸಮಾನತೆಯ ಅವಶ್ಯತೆಯಿರುವುದನ್ನು ಅಧ್ಯಯನದಲ್ಲಿ ತಿಳಿಸಿರುವದು. ಃಡಿಚಿಜಜಿಚಿಡಿಥಿ ಚಿಟಿಜ ಎಚಿಥಿಚಿಣು ಃಚಿಣ (೧೯೯೮) ಪ್ರಕಟಿಸಿದಂತೆ, ಪಾಲಕ–ಮಕ್ಕಳ ಸಂಬಂಧವು ಹೊಂದಾಣಿಕೆಯಲ್ಲಿ ಪ್ರಮುಖಪಾತ್ರ ವಹಿಸುವದು ಎಂದಿರುವರು. ತಾಯಿ–ಮಕ್ಕಳ ಸುಮಧುರ ಸಂಬಂಧಗಳು ಮಕ್ಕಳ ಶೈಕ್ಷಣಿಕ ಸಾಧನೆಯ ಮೇಲೆ ಪ್ರಭಾವ ಬೀರುವದು ಎಂದಿರುವರು.

ಹೊಂದಾಣಿಕೆ ಮತ್ತು ಸಾಮಾಜಿಕ–ಆರ್ಥಿಕ ಅಂತಸ್ತು:

ಮಿಚಿಟಿ & ಖಿಘಿಚಿಟಿ ಎಜಟಭಜಥಿ(೨೦೦೨)ರ ಅಧ್ಯಯನದಂತೆ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳು ಹೊಂದಾಣಿಕೆಯ ಸಮಸ್ಯೆಗಳ ಮೇಲೆ ಪ್ರಭಾವಬೀರುವವು. ಅವರು ಹಲವಾರು ಕಿಶೋರಾವಸ್ಥೆಯ ಮಕ್ಕಳ ಕುಟುಂಬದ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಅವಿಭಕ್ತ ಕುಟುಂಬದಲ್ಲಿ ಹೊಂದಾಣಿಕೆ ಹೆಚ್ಚಾಗಿ ಕಂಡು ಬರುವದು ಎಂದಿರುವರು. ಆದರೆ ಅವಿಭಕ್ತ ಕುಟುಂಬ ಮಕ್ಕಳಿಗಿಂತ ವಿಭಕ್ತ ಕುಟುಂಬದ ಮಕ್ಕಳು ಶೈಕ್ಷಣಿಕ ಸಾಧನೆ ಉತ್ತಮವಾಗಿರುವದು ತಿಳಿದು ಬರುತ್ತದೆ. ಪಾಲಕರ ಶೈಕ್ಷಣಿಕ ಅಂತಸ್ತು ಮತ್ತು ಕುಟುಂಬದ ಸಾಮಾಜಿಕ–ಆರ್ಥಿಕ ಅಂತಸ್ತುಗಳು ಉತ್ತಮ ರೀತಿಯ ಹೊಂದಾಣಿಕೆಗೆ ಪ್ರೇರಣೆಯಾಗುವುದನ್ನು ತಿಳಿಸಿರುವರು.

ಹೊಂದಾಣಿಕೆ ಮತ್ತು ಕುಟುಂಬ:

ಕುಟುಂಬವು ಪ್ರತಿಯೊಂದು ಸಾಂಸ್ಕೃತಿಕ ಕಾರ್ಯಗಳ ಪ್ರಾಥಮಿಕ ಸಂಸ್ಥೆಯಾಗಿದೆ. ಪ್ರತಿಯೊಬ್ಬರು ಕುಟುಂಬದ ಮೂಲಕವಾಗಿಯೇ ಸಾಮಾಜಿಕ–ಸಾಂಸ್ಕೃತಿಕ ಅಂಶಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಅಳವಡಿಸಿಕೊಳ್ಳುವರು. ಮಗುವಿಗೆ ಸಾಮಾಜೀಕರಣದ ಮೂಲಕವಾಗಿ ಉತ್ತಮ ನಾಗಕರಿಕರನ್ನಾಗಿ ಮಾಡುವಲ್ಲಿ ತಂದೆ–ತಾಯಿ ಹಾಗೂ ಕುಟುಂಬದ ಪಾತ್ರ ಪ್ರಮುಖವಾಗಿದೆ. ಆದಾಗ್ಯೂ ಮಗು ಬೆಳೆಯುತ್ತಾ ಕಿಶೋರಾವಸ್ಥೆಗೆ ಬಂದಾಗ ಹಲವಾರು ರೀತಿಯ ಹೊಂದಾಣಿಕೆಯ ಸಮಸ್ಯೆಗಳಿಗೆ ಬಲಿಯಾಗುವುದು ಕಂಡು ಬರುತ್ತದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ತಂದೆ–ತಾಯಿಯರ ಮಾರ್ಗದರ್ಶನದ ಕೊರತೆಯಿಂದಾಗಿ ಕಿಶೋರರು ಹೊಂದಾಣಿಕೆಯಲ್ಲಿ ವಿಫಲತೆ ಎದುರಿಸುವರು. ಖಚಿಜ್ಞುಚಿಟಿಚಿ ಒಣಣಚಿಟ (೧೯೯೭)ರಲ್ಲಿ ಕಿಶೋರಿಯರ ಕೆಲಸ ಮಾಡುತ್ತಿರುವ ತಾಯಂದಿರರನ್ನು ಹಾಗೂ ಮನೆಯಲ್ಲಿರುವ ತಾಯಂದಿರರನ್ನು ಅಧ್ಯಯನ ಮಾಡಿರುವರು. ಅವರ ಅಧ್ಯಯನಂತೆ ಕೆಲಸಕ್ಕೆ ಹೋಗುತ್ತಿರುವ ತಾಯಂದಿರ ಮಕ್ಕಳು ಹೆಚ್ಚು ಆತ್ಮ ವಿಶ್ವಾಸದಿಂದ ಇರುವದು ಹಾಗೂ ತಮ್ಮ ಗುರಿಸಾಧನೆಗಾಗಿ ಪ್ರಯತ್ನಿಸುತ್ತಿರುವುದು ತಿಳಿದು ಬಂದಿದೆ. ಅಲ್ಲದೇ ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಿರುವದು ತಿಳಿದು ಬಂದಿದೆ. ಆದ್ದರಿಂದ ಆತ್ಮ ವಿಶ್ವಾಸವು ಹೊಂದಾಣಿಕೆಯಲ್ಲಿ ಪ್ರಮುಖ ಪಾತ್ರ ವಹಿಸುವದಾಗಿದೆ.

ಸಮಾರೋಪ:

ಹೀಗೆ, ಮೇಲಿನ ಎಲ್ಲ ಅಂಶಗಳಿಂದ ತಾರುಣ್ಯಾವಸ್ಥೆಯ ಮಕ್ಕಳ ಹೊಂದಾಣಿಕೆಯ ಸಮಸ್ಯೆಗಳಿಗೆ ಕಾರಣವಾಗುವವು. ಕಿಶೋರಾವಸ್ಥೆಯಲ್ಲಿ ಮಕ್ಕಳು ಅತಿಯಾದ ಸಂವೇದನಾಶೀಲರಾಗಿರುವರು. ಜೊತೆಗೆ ಸ್ವ–ಪ್ರತಿಷ್ಠೆಗಾಗಿ, ಸ್ವಾಭಿಮಾನದ ಬಗ್ಗೆ ಅತಿಯಾದ ಭಾವನೆ ಬೆಳೆಸಿಕೊಂಡಿರುತ್ತಾರೆ. ಸರಿ–ತಪ್ಪುಗಳ ಬಗ್ಗೆ ಸರಿಯಾಗಿ ನಿರ್ಣಯಿಸುವಲ್ಲಿ ಅನುಭವದ ಕೊರತೆ ಉಂಟಾಗುವದು. ಹೀಗಾಗಿ ಕಿಶೋರಾವಸ್ಥೆಯಲ್ಲಿ ಮಕ್ಕಳು ನಿರಾಸೆ, ಆತಂಕಗಳಿಗೆ ಬಲಿಯಾಗಿ ಅಪಹೊಂದಾಣಿಕೆಗೆ ಒಳಗಾಗುವರು. ಇದರಿಂದಾಗಿ ಖಿನ್ನತೆ, ಅಪರಾಧಿ ಮನೋಭಾವನೆ, ಹಿಂಸಾತ್ಮಕವಾದ ಕಾರ್ಯಗಳಲ್ಲಿ ತೊಡಗುವದು ಕಂಡು ಬರುತ್ತದೆ. ಆದ್ದರಿಂದ ತಾರುಣ್ಯಾವಸ್ಥೆಯಲ್ಲಿ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಹೊಂದಾಣಿಕೆಯು ಪ್ರಮುಖವಾದುದಾಗಿದೆ.

**ಆಧಾರ ಗ್ರಂಥಗಳು:**


೧. ಆಶಾ ಸಿ.ಬಿ. ಅಡಜೆಸ್ಟಮೆಂಟ್ ಆ್ಯಂಡ್ ಕ್ರಿಯೇಟಿವಿಟಿ ಅಮಂಗ್ ಅಡೋಲೆಸೆಂಟ್ಸ್ ಥ್ರೂ ಹೈ ಸ್ಕೂಲ್ ಇಯರ್ಸ್. ಜರ್ನಲ್ ಆಫ್ ಕಮ್ಯೂನಿಟಿ ಗೈಡನ್ಸ್ ಆ್ಯಂಡ್ ರಿಸರ್ಚ. ೧೯೮೫, ೧:೩೯–೫೦

೨. ಬೊರಿಂಗ್ ಇಟಿ. ಅಲ್. ಫೌಂಡೆಶನ್ಸ್ ಆಪ್ ಸೈಕಾಲಜಿ (೩ ಇಜಟಿ.) ನ್ಯೂ ದೆಹಲಿ, ಆಕ್ಸಫರ್ಡ್ ಆ್ಯಂಡ್ಖಃಊ, ೧೯೭೫, ಪುಟ. ೪೯೭–೪೯೮.

೩. ಇಸೆನ್ಕ ಎಚ್.ಎಸ್ ಆ್ಯಂಡ್ ಅರ್ನಾಲ್ಡೊ ಡಬ್ಲ್ಯು (ಇಜ). ಎನ್‌ಸೆಕ್ಲೊಪಿಡಿಯಾ ಆಫ್ ಸೈಕಾಲಜಿ, ವಾಲ್ಯೂಮ್ ೧, ಲಂಡನ್–ಸರ್ಚ್ ಪ್ರೆಸ್, ೧೯೭೨ ಪುಟ–೨೫.

೪. ಲಾಜರಸ್ ಆರ್. ಎಸ್ ಪ್ಯಾಟರ್ನ್ಸ್ ಆಫ್ ಅಡ್ಜಸ್ಟಮೆಂಟ್, ೩ ಇಜಟಿ. ಇಂಟರ್‌ನ್ಯಾಶನಲ್ ಸ್ಟುಡೆಂಟ್ ಎಡಿಶನ್. ಟೊಕ್ಯಾ– ಮ್ಯಾಕ್ ಗ್ರಾವ್ ಹಿಲ್ ಲಿ. ೧೯೭೬.

೫. ಮಹಾಂತೇಶ ಎಚ್.ಬಿ "ಇಂಟರ್‌ಜನರೇಶನ್ ಕಾನ್ಫ್ಲಿಕ್ಟ್" ರಿಗಾರ್ಡಿಂಗ್ ದಿ ಪರ್ಸನಲ್ ಹ್ಯಾಬಿಟ್ ಆಫ್ ಅಡೋಲೆಸೆಂಟ್ಸ್" ರಿಸರ್ಚ್ ಜರ್ನಲ್ಸ್. ಜರ್ನಲ್ ಆಫ್ ಸೊಶಿಯಾಜಿಕಲ್. ವಾಲ್ಯೂಮ್ ೨ ಇಶ್ಯೂ ೩ ಮಾರ್ಚ, ೨೦೧೪.

೬. ಮಹಾಂತೇಶ ಎಚ್.ಬಿ. "ಇಂಟರ್‌ಜನರೇಶನ್ ಕಾನ್‌ಫ್ಲಿಕ್ಟ್" ದಿ ಇಂಟರ್‌ನಾಶನಲ್ ಜರ್ನಲ್ ಆಫ್ ಹ್ಯೂಮ್ಯಾನಿಟಿಸ್ ಆ್ಯಂಡ್ ಸೊಶೀಯಲ್ ಸ್ಟಡಿಸ್. ವಾಲ್ಯೂಮ್ ೨ ಇಶ್ಯೂ ೩ ಮಾರ್ಚ, ೨೦೧೪.

೭. ಮನ್ನ್ ಎನ್,ಎಲ್. ಇಂಟ್ರಡಕ್ಷನ್ ಟು ಸೈಕಾಲಜಿ (೩ ಇಜಟಿ.) ನ್ಯೂ ದೆಹಲಿ, ಆಕ್ಸಫರ್ಡ್ ಆ್ಯಂಡ್ ಖಃಊ೧೯೭೫, ಪುಟ. ೪೯೭–೪೯೮.

೮. ರಾಜಾಮಾನಿಕಮ್. ಎಂ. ಆ್ಯಂಡ್ ವಸಂತಲ್ ಆರ್. ಅಡ್ಜೆಸ್ಟಮೆಂಟ್ ಪ್ರೋಬ್ಲೆಮ್ ಆಫ್ ಅಡೋಲೆಸೆಂಟ್ ಸ್ಟುಡೆಂಟ್ಸ ಇನ್ ರಿಲೆಶನ್ ಟು ದೆರ್ ಅಚಿವ್‌ಮೆಂಟ್ಸ್. ಜರ್ನಲ್ ಆಫ್ ಕಮ್ಯೂನಿಟಿ ಗೈಡನ್ಸ್ ಆ್ಯಂಡ್ ರಿಸರ್ಚ್, ೧೯೯೩, ೧೦,೨, ೧೫೩–೧೩೩.

೯. ರವಿ ಸಂಧು, ಅಡಜೆಸ್ಟ್‌ಮೆಂಟ್ ಪ್ರೋಬ್ಲೇಮ್ಸ್ ಆಫ್ ಹೈ ಆ್ಯಂಡ್ ಲೊ ಅಸ್ಪಿರೆಂಟ್ ಅಡೆಲೊಸೆಂಟ್ ಸ್ಟುಡೆಂಟ್. ಜರ್ನಲ್ ಆಫ್ ಕಮ್ಯೂನಿಟಿ ಗೈಡನ್ಸ್ ಆ್ಯಂಡ್ ರಿಸರ್ಚ್, ೧೯೯೨, ೯,೨,೧೫೧–೧೭೯.

೧೦.ಸಾಧನಾ ಮಿಥಲ್, ಸೆಲ್ಫ್ ಕಾನ್ಸೆಪ್ಟ್ ಆ್ಯಂಡ್ ಸ್ಕೊಲ್ಯಾಸ್ಟಿಕ್ ಅಚಿವ್‌ಮೆಂಟ್ಸ್ ಇನ್ ಗರ್ಲ್ಸ್ ಆಫ್ ವರ್ಕಿಂಗ್ ಆ್ಯಂಡ್ ನಾನ್–ವರ್ಕಿಂಗ್ ಮದರ್ಸ್ ಜರ್ನಲ್ ಆಫ್ ಕಮ್ಯೂನಿಟಿ ಗೈಡನ್ಸ್ ಆ್ಯಂಡ್ ರಿಸರ್ಚ್, ೧೯೯೭, ೧೪,೧,೪೭–೫೨.

೧೧.ಸ್ಕೆನಿಡರ್ಸ್ ಎ.ಎ.– ಪರ್ಸನಾಲಿಟಿ ಅಡಜೆಸ್ಟ್‌ಮೆಂಟ್ ಆ್ಯಂಡ್ ಮೆಂಟಲ್ ಹೆಲ್ತ್, ನ್ಯೂಯಾರ್ಕ್, ಹಾಲ್ಟ್ ರೈನ್‌ಹಾರ್ಟ್ ಆ್ಯಂಡ್ ವಿನ್‌ಸ್ಟನ್, ೧೯೬೦.

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಕುವೆಂಪುರವರ 'ಮತ–ಮತಿ' ವೈಚಾರಿಕವಿಚಾರಧಾರೆಗಳು

**ಭಾಗ್ಯಜ್ಯೋತಿ ಬಿರಾದಾರ**
**ಅತಿಥಿ ಪ್ರಾಧ್ಯಾಪಕಿ, ಕನ್ನಡ ವಿಭಾಗ,**
**ಬಿ.ಎಲ್.ಡಿ.ಇ ಸಂಸ್ಥೆ,**
**ವಾಣಿಜ್ಯ ಬಿ.ಎಚ್.ಎಸ್.ಕಲೆ ಮತ್ತು ಟಿ.ಜಿ.ಪಿ. ವಿಜ್ಞಾನ,**
**ಮಹಾವಿದ್ಯಾಲಯ–ಜಮಖಂಡಿ**

## ಪ್ರಸ್ತಾವನೆ:

ಇಪ್ಪತ್ತನೇ ಶತಮಾನದಲ್ಲಿಕನ್ನಡ ನಾಡುಕಂಡ ಕೆಲವು ದೈತ್ಯ ಪ್ರತಿಭೆಗಳಲ್ಲಿ ಕುವೆಂಪುರವರುಒಬ್ಬರು.ಅಧುನಿಕಕನ್ನಡ ಸಾಹಿತ್ಯದಎಲ್ಲಾ ಪ್ರಕಾರಗಳಲ್ಲಿ ಸಾಹಿತ್ಯಕೃಷಿಯನ್ನು ಮಾಡಿದವರು ಕುವೆಂಪು ಅವರು "ಕನ್ನಡ ಭಾಷೆಯ ಮೂಲಕ ಇಪ್ಪತ್ತನೇ ಶತಮಾನದಲ್ಲಿ ಸಂಭವಿಸಿದ ಸೃಜನಶೀಲತೆ ಮತ್ತು ವೈಚಾರಿಕತೆಯಉತ್ಕರ್ಷದ ಪ್ರತಿನಿಧಿಯಂತೆ ಕಾಣುತ್ತಾರೆ"[೧] ಎಂಬ ಕವಿ ಡಾ.ಜಿ.ಎಸ್.ಎಸ್. ಅವರ ಅಭಿಪ್ರಾಯ. ಕುವೆಂಪು ಅವರವ್ಯಕ್ತಿತ್ವ ಮತ್ತು ಬರಹದ ಸಾಧನೆಗೆ ಸಮಂಜಸವಾಗಿದೆ. ಅವರ ಸಾಹಿತ್ಯದಲ್ಲಿಹೆಚ್ಚಾಗಿ ಪ್ರಕೃತಿ ವರ್ಣನೆ, ಮಾನವ ಸಂಬಂಧಗಳು ಮತ್ತುಆಧ್ಯಾತ್ಮದೃಷ್ಟಿಕೋನ ಪ್ರಧಾನವಾಗಿದ್ದರೂಅವರಎಲ್ಲ ಸಾಹಿತ್ಯದಲ್ಲೂಅಂತಸ್ರೋತವಾಗಿ ಹರಿಯುವುದು ವ್ಯಚಾರಿಕತೆಯೇ. ಕುವೆಂಪು ಅವರ ವೈಚಾರಿಕ ತಳಹದಿಯು ಸಮಾನತೆಯನ್ನು ಕಾಣುವ ಮತ್ತುಅದನ್ನುಕಟ್ಟುವ ಮನೋಧರ್ಮವೇಆಗಿದೆ. ಅವರೇಒಂದೆಡೆ ಹೇಳುವಂತೆ ಅವರ "ಜೀವನದೃಷ್ಟಿ ಒಂದು ರೀತಿಯಲ್ಲಿ ಸಮಾನತಾವಾದಿ ದೃಷ್ಟೀ"೨. ಅಸಮನತೆ ಶೋಷಣೆಯ ಹುಟ್ಟಿಗೆ ಕಾರಣವಾದ ಮತ, ಜಾತಿ, ಅಂದಶ್ರದ್ಧೆಯ ವಿರುದ್ಧಧ್ವನಿ ಎತ್ತಿದವರು ಕುವೆಂಪು.ಅವುಗಳ ನಿರ್ಮೂಲನೆಗಾಗಿ ಅವರುಇಪ್ಪತ್ತನೇ ಶತಮಾನದಲ್ಲಿ ಹೆಚ್ಚು ವೈಚಾರಿಕ ಅಕೃತಿಗಳನ್ನ ರೂಪಿಸಿದವರು. ತಾರತಮ್ಯವನ್ನು ಬದುಕಿನೆಲ್ಲಾ ಸ್ತರಗಳಲ್ಲಿ ತಳಹದಿಯಾಗಿಸಿಕೊಂಡಿರುವ ಭಾರತೀಯ ಸಮಾಜವನ್ನು ಅಧುನಿಕವು, ವೈಜ್ಞಾನಿಕವೂ ಹಾಗೂ ಪ್ರಜಾಸತ್ತಾತ್ಮಕವೂಆದ ನೆಲೆಯಲ್ಲಿ ಮಾನವೀಕರಿಸಿದ ಮಾರ್ಗವನ್ನು ದಿಟ್ಟವಾಗಿ ಮಂಡಿಸಿ ಕನ್ನಡದಲ್ಲಿ ವಿಚಾರಕ್ರಾಂತಿಯನ್ನು ಆಹ್ವಾನಿಸಿದವರು.

ಕುವೆಂಪುರವರು ವೈಚಾರಿಕ ವಿಚಾರಧಾರೆಗಳು ಅಕ್ಷರಸ್ತ–ಅನಕ್ಷರಸ್ತ ಮತ್ತು ಯುವಕರ ಮೇಲೆ ಹೆಚ್ಚು ಪ್ರಭಾವ ಬೀರಿದವು.ಬಾಳಬಂಧನಕಾರಿಯಾದ, ಶ್ರೇಷ್ಠ–ಕನಿಷ್ಠ ಎಂಬ ಶ್ರೇಣಿಕೃತ ಸಮಾಜಕ್ಕೆಕಾರಣವಾದಜಾತಿ,ಮತ, ಮೌಡ್ಯಗಳನ್ನು ಬುಡಸಮೇತಕಿತ್ತೊಗೆಯಲುಇವರು ಮಾರ್ಗಗಳನ್ನು ಸೂಚಿಸಿದರು.ಅದು ಮತಿಯಿಂದ ಸಾಧ್ಯಎಂದು ನಿರೂಪಿಸಿದರು.ಆದರೆ ಮತಿಗೆಇಲ್ಲಿ ಮತ, ಮೌಡ್ಯ, ಪುರೋಹಿತಶಾಹಿ ವ್ಯವಸ್ಥೆ ಅಂಕುಶ ಹಾಕಿವೆ. ಆ ಅಂಕುಶದಿಂದ ಮತಿ ಹೇಗೆ ನಿರಂಕುಶಮತಿ ಆಗಬೇಕು ಎನ್ನುವುದನ್ನು 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ'ಎಂಬ ಲೇಖನದಲ್ಲಿ 'ಮತ–ಮತಿ'ಗಳ ಪರಿಕಲ್ಪನೆಗಳನ್ನು ಮುಂದಿಟ್ಟುಚರ್ಚಿಸುತ್ತಾರೆ.

"ಯುವಕರು ನಿರಂಕುಶಮತಿಗಳಾಗಬೇಕು.ಸಂಯಮ ಪೂರ್ಣವಾದ ಬುದ್ದಿ ಸ್ವಾಂತಂತ್ರವೆ ನಿರಂಕುಶಮತಿ.ಮತಿ ಮಾನವನ ಸರ್ವೋತ್ಕೃಷ್ಟವಾದಆಯುಧ.ಆದ್ದರಿಂದಯುವಕರಿಗೆ ಮತಿಯೇಕತ್ತಲಲ್ಲಿ ದಾರಿತೋರುವರತ್ನದ ಕೈದೀವಿಗೆ ಆಗಬೇಕು.ಆದರೆ ಈಗ ಮನುಷ್ಯರಲ್ಲಿರುವ ಮತಿಯಗತಿಏನಾಗಿದೇ?ಅಂದ್ರೆ ಮತಿ ಮೌಡ್ಯದಿಂದಲೂ, ಮತಚಾರಗಳಿಂದಲೂ, ಸಮಾಜ ಭೀತಿಯಿಂದಲೂ, ರಾಜಭಯದಿಂದಲೂ, ಸ್ವರ್ಗನರಕ ದೇವಾನುದೇವತೆಗಳ ಮೋಹ ಮಾಯೆಯಿಂದಲೂ ಅದು ಸತ್ವರಹಿತವಾಗಿದೆ, ಕಾಂತಿಹೀನವಾಗಿದೆ. ಮತಿಗೆ ಅಂಕುಶಗಳು ಅತಿಯಾಗಿಜೀವವೆ ನಿಸ್ತೇಜವಾಗಿದೆ.ಯುವಕರಾದ ಅದೋಗತಿಗಿಳಿದಿರುವ ನಮ್ಮ ಮತಿಯನ್ನು ಮತ್ತೆ ಆಕಾಶಕ್ಕೆತ್ತಬೇಕು"[೩]ಎಂದು ಹೇಳುತ್ತಾರೆ.ಮತ ನಮಗೊಂದುದೊಡ್ಡ ಬಂಧನವಾಗಿದೆ.ಒಬ್ಬರನ್ನೊಬ್ಬರು ಮುಟ್ಟದಿರುವುದು, ಧಾರ್ಮಿಕ ಸಂಕೇತಗಳ ಧಾರಣೆ, ಸಾರ್ವಜನಿಕವಾದ ಬಾವಿ ಕರೆಗಳ ಹತ್ತಿರ ದೇವಸ್ಥಾನದೊಳಗೆ ಸೇರಿಸದರುವಂತ ಸಾಮಾಜಿಕ ನಿಷೇಧಗಳ ಮೂಲಕ ತರತಮವನ್ನು ಸೃಷ್ಟಿಸುವ ಮತ ವಿಕಾರಗಳನ್ನು ಒರಗೆ ಹಚ್ಚುತ್ತಾರೆ.

ಕುವೆಂಪು ಅವರು ಮುಂದುವರೆದು ಹೇಳುತ್ತಾರೆ– ಹಲವಾರು ಕೆಲಸಕ್ಕೆ ಬಾರದ ಶ್ರೇಯಸ್ಕರವೂಅಲ್ಲದಕುರಿತುಚರ್ಚೆ ಮಾಡುವುದೇ ಮತದ ಹುರಳಾಗಿ ಕುಳಿತಿದೆ. ಉದಾಹರಣೆಗೆ: ಅಸ್ಪೃಶ್ಯರಿಗೆ ಕೆಲವು ಕಡೆದೇವಾಲಯ ಪ್ರವೇಶವಿಲ್ಲ; ಉನ್ನತಜಾತಿಯಜನರ ಮನೆ ಒಳಗಡೆ ಸೇರಿಸುವುದಿಲ್ಲ. ಆದರೆ ಸಮಾಜದಲ್ಲಿ ಸ್ವಚ್ಚತಾ ಕೆಲಗಳಗಬೇಕಾದರೆ, ದೇವಾಲಯಗಳು

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

ಮನೆಗಳು ನಿರ್ಮಾಣ ಮಾಡುವಾಗ ಮೈಲಿಗೆ ಆಗಲಿಲ್ಲವೇ ?ಅಂದರೆ ಮತಿಯಒರಗಲ್ಲಗೆ ಹಚ್ಚಿ ನೋಡಬೇಕು. ಅಷ್ಟಕ್ಕೂ ಗುಡಿಯಕಲ್ಲಿನಲ್ಲಿದೇವರಿದ್ದನೆ ಎಂಬ ಭ್ರಾಂತಿ ನಿಮಗೇಕೆ? ಎದೆಯದೇಗುಲದಲ್ಲಿಯೇಈಶ್ವರನನ್ನು ಭಕ್ತಿಯಿಂದ ಪೂಜಿಬಾರದೇಕೆ?ಅಲ್ಲದೆ ನಮ್ಮ ಸುತ್ತಮುತ್ತಲೀನಲ್ಲಿರುವ ಸುಂದರ ಪ್ರಕೃತಿಯನ್ನು ಪೂಜಿಸಬಾರದೇಕೆ?ಎಂದು ಕೇಳುತ್ತಾರೆ.ಈ ಸಂದರ್ಭದಲ್ಲಿಜಿ.ಎಸ್.ಎಸ್. ಅವರಕವಿತೆ ನೆನಪಾಗುತ್ತೆ. “ಎಲ್ಲೊ ಹುಡುಕಿದೆಇಲ್ಲದದೇವರ, ಕಲ್ಲು ಮಣ್ಣುಗಳ ಗುಡಿ ಒಳಗೆ....”[೪]ದೇವರಿಗಾಗಿ ದೇವಾಲಯಗಳಿಗೆ ಹೋಗುವುದನ್ನು ಬಿಟ್ಟು ಪ್ರಕೃತಿಸೌಂದರ್ಯದಲ್ಲಿ, ಸಾಹಿತ್ಯದಲ್ಲಿ, ಪ್ರೀತಿ ಸ್ನೇಹಗಳಲ್ಲಿ ದೇವರನ್ನುಕಾಣಬೇಕು.ಎಲ್ಲರಿಗೂ ಸುಲಭವಾಗಿ ಸಿಗುವಮಹಾಪುರುಷರ ಕೃತಿಗಳಲ್ಲಿರುವ ಮಹದಾಲೋಚನೆಗಳು ನಮಗೆ ದೇವಸ್ಥಾನ, ಪೂಜೆ, ಮಂತ್ರ,ದೇವರೆಂದು ತಿಳಿಯೋಣ.ಆಗ ‘ದರ್ಶನ’ ಲಭಿಸುತ್ತದೆಂದು ಪ್ರತಿಪಾದಿಸುತ್ತಾರೆ.

ನಮ್ಮಲ್ಲಿ ಸಂಸ್ಕೃತಿಯ ಹೆಸರಿನಲ್ಲಿ, ಮತದ ಹೆಸರಿನಲ್ಲಿ, ಧರ್ಮದ ಸೋಗಿನಲ್ಲಿ ಪೂರ್ವಿಕರ ಪ್ರಾಚೀನ ಮೌಢ್ಯಗಳ ಕರ್ಮಕಾಂಡವನ್ನ ಮತ್ತೆ ಪ್ರತಿಷ್ಟಾಪಿಸುತ್ತೇವೆಕುರುಡು ನೆಪದಲ್ಲಿ.ಅವಿವೇಕ ಮೌಢ್ಯಗಳಿಗೆವೈಜ್ಞಾನಿಕತೆಯಮತ್ತು ವಿಚಾರದಚಿನ್ನದ ಮುಲಾಮು ಹಚ್ಚಿಜನರನ್ನು ದಿಕ್ಕು ತಪ್ಪಿಸಿ ವಂಚಿಸುವ ಮಹೋದ್ಯೋಗ ನಿರ್ಲಜ್ಜೆಯಿಂದಸಾಗುತ್ತಿರುವುದನ್ನು ದಿನವು ನೋಡತ್ತಿದ್ದೇವೆ. ಉದಾಹರಣೆಗೆ: ಗ್ರಹಣಗಳು ಸಂಭವಿಸಿದಾಗಜ್ಯೋತಿಷಿಗಳು ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲು ಇಲ್ಲದ ಹೇಳಿಕೆಗಳನ್ನುಹೇಳಿ ಜನರನ್ನು ದಿಕ್ಕು ತಪ್ಪಿಸಿ ವಂಚಿಸುತಿದ್ದಾರೆ. ದೇವರ ಹೆಸರುಗಳಲ್ಲಿ ಪ್ರಾಣಿಬಲಿ, ನರಬಲಿಗಳನ್ನು ಕೊಡುವುದುಇವೆಲ್ಲ ಕಾರ್ಯಗಳು ನಿರ್ಲಜ್ಜೆಯಿಂದ ನಡೆಯಲುಕಾರಣ ‘ಮತಿ’ಯು ಮತದಅಂಕುಶದಲ್ಲಿ ಸಿಲುಕಿಕೊಂಡಿದೆ.ಮತ ಭ್ರಾಂತಿಯು ಮೌಢ್ಯವು ವೈಜ್ಞಾನಿಕ ಪ್ರಗತಿಗೆ ಹೇಗೆ ಮಹಾಕಂಟಕಗಳಾದವು ಎಂಬುದಕ್ಕೆ ಕುವೆಂಪು ರವರು ಪಾಶ್ಚಿಮಾತ್ಯ ಮತ್ತು ಪೌರಾತ್ಯದಕೆಲವು ನಿದರ್ಶನಗಳನ್ನು ತೆಗೆದುಕೊಂಡು ಹೇಳುತ್ತರೆ.ಪ್ರರ್ಜನ್ಯಜಪ ಮಾಡಿ ಮಳೆ ಭರಿಸುವಂತಹ ಮೌಢ್ಯಚಾರಣೆಗಳ ನಿದರ್ಶನಗಳನ್ನು ನೀಡುತ್ತಾರೆ ಈ ಪಾರ್ಥನೆಯಿಂದ ಪ್ರಕೃತಿ ನಿಯಮ ಬದಲಾಗುತಿದೆಯೇ? ಈ ರೀತಿಯಾಗಿಯುವಜನಾಂಗ ಪ್ರಶ್ನೆಯನ್ನುಧೈರ್ಯವಾಗಿ ಕೇಳಿಕೊಂಡು ಉತ್ತರಗಳನ್ನು ಕಂಡು ಹಿಡಿಯಬೇಕು.ಏಕೆಂದರೆಇಂದು ಪರ್ಜನ್ಯಜಪ ಮಾಡಿ ಮಳೆ ಬರಿಸಿದವರು ಮುಂದೆಪ್ರಾರ್ಥನೆಯಿಂದ ಈಗ ಬಂದಿರುವಇಡಿಜಗತ್ತನ್ನೆ ವಕ್ಕರಿಸಿಕೊಂಡಿರುವ ‘ಕರೋನ’ ಎಂಬ ಮಹಾ ರುಜಿನವನ್ನುಓಡಿಸಲಾರರೆ? ಎಂದು ಮೂಢರುಆರೋಗ್ಯ ಕಾರ್ಯಗಳನ್ನು ಮಾಡದೇ ನಾಶವಾಗಬಹುದು.ಉದ್ದೇಶ ಎಷ್ಠೇ ಶ್ಲಾಘ್ಯವಾಗಲಿ, ಅದು ತಿಳುವಳಿಕೆಯಿಂದ ಕೂಡಿರದಿದ್ದರೆತೊಂದರೆಆಗುತ್ತದೆ.ಇಂತಹ ಅನಾಹುತಗಳಿಂದ ಜನರನ್ನು ಪಾರು ಮಾಡಬೇಕಾದರೆಯುವಕರ ಕೈಗೆ ಮತಿಯದೀವಿಗೆಯನ್ನುಕೊಡಬೇಕುಎನ್ನುತ್ತಾರೆ .ಆಗ ‘ದರ್ಶನ’ ಪ್ರಾಪ್ತಿಯಾಗುತ್ತದೆ.ದರ್ಶನ ಸಿದ್ಧಿಸುವವರೆಗೂ ನಮಗಾಗಲಿ, ನಮ್ಮದೇಶಕ್ಕಾಗಲಿ ಮೊಕ್ಷವಿಲ್ಲ, ಶಾಂತಿಯಿಲ್ಲ, ದಾಸ್ಯದಿಂದ ಬಿಡುಗಡೆಯಿಲ್ಲ. “ದಿವ್ಯದರ್ಶನದ ಪ್ರಾಪ್ತಿಗಾಗಿ ನಮಗೆ ಬೇಕಾಗುವ ದೀರ, ಸ್ವಾತಂತ್ರ್ಯ, ಪ್ರತೀಭಾ ಪೂರ್ಣವಾದ ಬುದ್ದಿಯನ್ನೆಕುವೆಂಪುಅವರು ‘ನಿರಂಕುಶಮತಿ’ ಎಂದು ಕರೆದಿದ್ದಾರೆ.”[೫]

ಉಪಸಂಹಾರ : ‘ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ’ ಲೇಖನದಲ್ಲಿಕುವೆಂಪುರವರು ಮತದ ಮೂಲಕ ಪುರೋಹಿತಶಾಹಿ ಹೇರಿರುವಅವೈಜ್ಞಾನಿಕವಾದ ಸಾಮಾಜಿಕ ಕಟುಕಟ್ಟಳೆ, ಜಾತಿಆಚರಣೆ, ಅಸ್ಪೃತೆಯಂತಹಅಮಾನವಿಯ ಪದ್ದತಿಗಳು, ಅಂಧಾನುಕರಣೆ ಮುಂತಾದ ಅವಿಚಾರಗಳು ಮತಿಯನ್ನು ನಿಸ್ತೆಜಗೊಳಿಸಿ ಮನುಷ್ಯನ ವೈಚಾರಿಕಚಿಂತನೆಗೆ ಮತ್ತು ಬೌದ್ಧಿಕ ವಿಕಾಸಕ್ಕೆ ಅಡ್ಡಿಯಾಗಿರುವುದನ್ನು ಗುರುತಿಸಿದ್ದಾರೆ. ಮತ ಮತ್ತು ಮೌಢ್ಯದ ನಡುವಣ ಸಾವಯವ ಸಂಬಂಧವನ್ನುವಿವರಿಸಿದ್ದಾರೆ. ಮತಿಎನ್ನುವುದು ಮತದಅಂಕುಶದಿಂದ ಸತ್ವರಹಿತವಾಗಿ ಅನಿಷ್ಠ ಪದ್ದತಿಗಳ ಆಚರಣೆಗೆದಾರಿಮಾಡಿಕೊಡುವುದನ್ನು ಹಲವು ಉದಾಹರಣೆಗಳ ಮೂಲಕ ನಿರೂಪಿಸುತ್ತಾರೆ. ಮನುಷ್ಯರಆತ್ಮೋನ್ನತಿಯುಅವರ ಸ್ವತಂತ್ರಚಿಂತನೆ, ವಿಜ್ಞಾನ ಬುದ್ದಿ ಮತ್ತು ವೈಚಾರಿಕದೃಷ್ಠಿಯನ್ನು ಅವಲಂಬಿಸಿದೆ.ಯಾವಾಗ ಮತಿಗೆಜ್ಞಾನದದರ್ಶನ ಸಿದ್ದಿಸುತ್ತದೆಯೋಅಂದುಅದುದಾಸ್ಯದಿಂದ ಬಿಡುಗಡೆಯಾಗಿಯಾರಅಧಿನದಲ್ಲಿಯೂಇರದೇ ಸ್ವತಂತ್ರವಾಗಿಜೀವಿಸಲೂ ಆರಂಭಿಸುತ್ತದೆ.ಹಾಗಾಗಿ ಯುವಕರುಆತ್ಮೊನ್ನತೆಗಾಗಿ ನಿರಕುಂಶಮತಿಗಳಾಗಬೇಕು. ನಮ್ಮ ಪರಂಪರೆಯಲ್ಲಿ ಎಷ್ಟೂ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣಾವಾದಿಗಳು ಸಮಾನತೆಯನ್ನುಬೋಧಿಸಿದರೂ, ಸಾಮಾಜಿಕತರತಮ, ಅನಿಷ್ಠ ಆಚಾರಗಳು ಇನ್ನೂಚಾಲ್ತಯಲ್ಲಿವೆ. ಜಾತಿ, ಮತ ಮೌಢ್ಯಗಳಲ್ಲಿ ಮತ್ತು ಪುರೊಹೀತಶಾಹಿ ವ್ಯೆವಸ್ಥೆಯ ಹಿಡಿತದಲ್ಲಿ ಸಮಾಜ ಬಂಧಿಯಾಗಿದೆ.ಇತ್ತಿಚೀಗೆ ಪತ್ರಿಕೆಗಳಲ್ಲಿ ವರಿದಿಯಾಗಿರುವ ಅನೇಕ ಧಾರುಣ ಘಟನೆಗಳು ಇದನ್ನುರುಜುವಾತ ಪಡಿಸುತ್ತವೆ. ದೇವಾಲಯದ ಮೆಟ್ಟಿಲನ್ನು ಸ್ಪರ್ಶಿಸಿದ ಕಾರಣಕ್ಕಾಗಿಅಸ್ಪೃಶರೊಬ್ಬರ ಮೇಲೆ ಮಾರಣಾಂತಿಕ ಹಲ್ಲೆಯನ್ನು ಮಾಡಲಾಯಿತು.ಸೂರ್ಯಗ್ರಹಣ ಸಮಯದಲ್ಲಿಗುಣಮುಖರಾಗುತ್ತರೆಂದು ನಂಬಿ ಅಂಗವಿಕಲ ಮಕ್ಕಳನ್ನು ಮಣ್ಣಿನಲ್ಲಿ ಹುಗಿದಘಟನೆ ಸಂಭವಿಸಿದೆ.ಇನ್ನೂ ಕೆಲವೂಕಡೆ ದೇವದಾಸಿ ಪದ್ದತಿಗಳು ಚಾಲ್ತಿಯಲ್ಲವೇ.ಈ ಎಲ್ಲಾ ಅನಿಷ್ಠ ಆಚರಣೆಗಳು ಧಾರ್ಮಿಕ ಸುಧಾರಣೆಯಿಂದ ಮಾತ್ರ ಸಾಧ್ಯವಾಗದು.ಜನರಿಗೆ, ವಿಶೇಷವಾಗಿ ಯುವಕರಲ್ಲಿಚಿಂತನಾ ಸಾಮರ್ಥವನ್ನು ಹುಟ್ಟುಹಾಕಿ ವಿಚಾರ ಸಾಮರ್ಥ್ಯ ಬೆಳೆಸಬೇಕು. ಮತಿಯನ್ನುಎಲ್ಲಾ ಸಂಕೋಲೆಗಳಿಂದ ವಿಮುಕ್ತಿಗೊಳಿಸಿ ಕುವೆಂಪುರವರಆಶಯದಂತೆ ನಿರಕುಂಶಮತಿಗಳನ್ನಾಗಿಸಿದಾಗ ಸಮಾನತ ಸಮಾಜ ಸೃಷ್ಟಿಯಾಗಿ ಮತದಅಂಧಕಾರದಿಂದ ಮತೀಯಕ್ರಾಂತಿಯತ್ತ ಸಾಗುವಂತಾಗುತ್ತದೆಎಂದು ನನ್ನಅಭಿಪ್ರಾಯ .

**ಕೊನೆ ಟಿಪ್ಪಣಿಗಳು :**

೧. ಕುವೆಂಪು: ವೈಚಾರಿಕ ಮುಖ ( ಕುವೆಂಪು : ಪುನರಾಲೋಕನ) – ಜಿ. ಎಸ. ಶಿವರುದ್ರಪ್ಪ
೨. ಸಮಗ್ರ ಸಾಹಿತ್ಯ (ಕುವೆಂಪುರವರಜೊತೆ ನಡೆಸಸಿದ ಸಂಭಾಷಣೆ)–ಜಿ.ಎಸ್, ಶಿವರುದ್ರಪ್ಪ
೩. ಕುವೆಂಪು: ನಾಡು–ನುಡಿ ಮತ್ತು ವೈಚಾರಿಕತೆ–ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಪು.೭.೮.
೪. ಗೋಡೆ( ಕವನ ಸಂಕಲನ ) ಜಿ.ಎಸ್. ಶೀವರುದ್ರಪ್ಪ
೫. ಕುವೆಂಪು:ನಾಡು–ನುಡಿಮತ್ತು ವೈಚಾರಿಕತೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪು.೧೪

**ಆಕಾರ ಗ್ರಂಥಗಳು :**

೧. ಕುವೆಂಪು ಸಮಗ್ರ ಸಾಹಿತ್ಯರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳ್ಳಿ
೨. ಕುವೆಂಪು ನಾಡು–ನುಡಿಮತ್ತು ವೈಚಾರಿಕತೆ–ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಹಾಗೂ ಕನ್ನಡ ಮತ್ತುಸಂಸ್ಕೃತಿ ಇಲಾಖೆ
೩. ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ–ಕುವೆಂಪು ( ಇದುಕುವೆಂಪುರವರು ಶ್ರೀರಂಗಪಟ್ಟಣದಲ್ಲಿ ಯುವಜನ ಸಮ್ಮೇಳನದಲ್ಲಿ ೧೯೩೫ ರಲ್ಲಿ ಮಾಡಿದ ಬಾಷಣ)
೪. ಗೋಡೆ( ಕವನ ಸಂಕಲನ ) ಜಿ.ಎಸ್. ಶೀವರುದ್ರಪ್ಪ
೫. ಕುವೆಂಪು: ವೈಚಾರಿಕ ಮುಖ ( ಕುವೆಂಪು : ಪುನರಾಲೋಕನ) – ಜಿ. ಎಸ. ಶಿವರುದ್ರಪ್ಪ

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಕುವೆಂಪು ಪ್ರಕೃತಿ ಚಿಂತನೆ

**ಡಾ. ಪ್ರಭಾವತಿ ಎಸ್. ಚಿತಕೋಟಿ,**
**ಕನ್ನಡ ಸಹಾಯಕ ಪ್ರಾಧ್ಯಾಪಕರು,**
**ಶರಣಬಸವ ವಿಶ್ವವಿದ್ಯಾಲಯ, ಕಲಬುರ್ಗಿ.**

ಯುಗದ ಕವಿ ಜಗದ ಕವಿ ಎಂದೇ ಖ್ಯಾತನಾಮವೆತ್ತ ಕುವೆಂಪು ಕನ್ನಡ ನಾಡು ಕಂಡ ಮಹಾನ್ ಕವಿಗಳಲ್ಲಿ ಒಬ್ಬರು. ಮಲೆನಾಡಿನ ಮಡಿಲಲ್ಲಿ ಹುಟ್ಟಿಬೆಳೆದದ್ದರಿಂದ ಸಹಜವಾಗಿಯೇ ಪ್ರಕೃತಿಯ ಆರಾಧನೆಗೆ ತಮ್ಮನ್ನು ಅರ್ಪಿಸಿಕೊಂಡವರು. ಅದಕ್ಕಾಗಿಯೇ ಅವರನ್ನು ಮಲೆನಾಡಿನ ಕವಿ ಎಂದೇ ಹೇಳುವರು. ಭಾರತದ ಸಮಕಾಲೀನ ಸೃಜನಶೀಲತೆಯ ಉತ್ಕರ್ಷದ ನಿಜವಾದ ಪ್ರತಿನಿಧಿ ಕುವೆಂಪು. ಅವರಿಂದ ರಚಿಸಲ್ಪಟ್ಟ ಸಾಹಿತ್ಯದ ವಿಸ್ತಾರ, ವೈವಿಧ್ಯ ಮತ್ತು ಬೆಳವಣಿಗೆಗಳು ಉನ್ನತ ಶಿಖರಗಳಷ್ಟು ಎತ್ತರವಾಗಿವೆ. ಅವರು ಬರೆದ ಮಹಾಕಾವ್ಯ, ಕಾದಂಬರಿ, ಕವಿತೆಗಳ ವಸ್ತುಗಳಲ್ಲಿ ಹೆಚ್ಚಿನ ಭಾಗ ಪ್ರಕೃತಿಯ ಬಗೆಗೆ ಹೊಂದಿದ್ದ ಅನುಭವಗಳು ದಾಖಲಾಗಿವೆ. ತಮ್ಮ ಬರವಣಿಗೆಯಲ್ಲಿ ಮೂಡಿ ಬಂದ ಕೃತಿಗಳ ಬಹುತೇಕ ಎಲ್ಲ ಪಾತ್ರಗಳು ಪ್ರಾಕೃತಿಕ ಸಂಸ್ಕೃತಿಯ ಪ್ರತಿಕಗಳೇ ಆಗಿವೆ. ಅವರಲ್ಲಿ ಪ್ರಕಟವಾಗುವ ಆದಮ್ಯವಾದ ನಿಸರ್ಗ ಪ್ರೀತಿ ಮೂಲತಃ ಜೀವನ ಪ್ರೀತಿಯ ವಿಸ್ತರಣೆಯಾಗಿದೆ. ಅವರ ಈ ನಿಸರ್ಗದ ಕುರಿತ ಉತ್ಕಟವಾದ ಹಂಬಲ ಕೇವಲ 'ಸೌಂದರ್ಯ ನಿಷ್ಠವಾದುದು' ಮಾತ್ರವಲ್ಲ, ಅದನ್ನು ಮೀರಿದ 'ಅಧ್ಯಾತ್ಮಿಕ ಅನ್ವೇಷಣೆಯ' ಪರಿಣಾಮ ಕೂಡ ಆಗಿದೆ.

ಕುವೆಂಪು ಅವರು ತಮ್ಮ ಬರವಣಿಗೆಯಲ್ಲಿ ರಮ್ಯವಾದದ ಹಿನ್ನೆಲೆಯನ್ನು ಅಳವಡಿಸಿಕೊಂಡವರು. ಪ್ರಕೃತಿಯ ಚೆಲುವನ್ನು ಸಮೀಪದಿಂದಲೆ ಕಂಡು, ಅದನ್ನು ಅನುಭವಿಸಿ ಅನುಭಾವಿಯಾದವರು. ಕೇವಲ ಮಲೆನಾಡಿನ ಪ್ರಕೃತಿಯ ಸೌಂದರ್ಯವನ್ನು ಮಾತ್ರ ಹೇಳದೇ ಅದರ ಜೊತೆಗೆ ಪ್ರಕೃತಿಯ ಒಡಲಿನ ಸಾಮಾಜಿಕ ಬದುಕನ್ನು, ಅದರ ಸ್ಥಿತ್ಯಂತರಗಳನ್ನು ದಾಖಲಿಸಿದರು. ಈ ನಿಸರ್ಗ ಕೇಂದ್ರಿತ ಸಾಮಾಜಿಕ ಬದುಕಿನ ಮೂಲಕ ಇಡೀ ಭಾರತೀಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದ ಪಲ್ಲಟಗಳನ್ನು, ತಲ್ಲಣಗಳನ್ನು ಗ್ರಹಿಸಿದ್ದಾರೆ. ಅವರ ಸೃಜನಶೀಲ ಪ್ರತಿಭೆ ಶ್ರೀಮಂತವಾದುದು. ವಿಶ್ವ ಸಾಹಿತ್ಯದಲ್ಲಿ ಕನ್ನಡಕ್ಕೆ ಗೌರವ ಸ್ಥಾನವನ್ನು ತಂದು ಕೊಟ್ಟು 'ವಿಶ್ವ ಮಾನವ ಕವಿ' ಬಿರುದಿಗೆ ಭಾಜನರಾದವರು. ಅಧ್ಯಾತ್ಮ, ವೈಚಾರಿಕತೆ, ಗಾಢವಾದ ನಿಸರ್ಗ ಪ್ರೀತಿಗಳಲ್ಲಿ ಬೇರೂರಿರುವ ಕುವೇಂಪು ಸಾಹಿತ್ಯ ನಮ್ಮ ಪರಂಪರೆಯನ್ನು ಜನರ ಬದುಕನ್ನು ನಿರ್ದೇಶಿಸಿದಂತೆಯೇ ಶೋಷಣೆಗೂ ಒಳಗು ಮಾಡಿದ ಪರಂಪರೆಯನ್ನು ತೀಕ್ಷ್ಣ ಹಾಗೂ ಚಿಕಿತ್ಸಕ ದೃಷ್ಟಿಯಿಂದ ಕಂಡಿದೆ.

ಕುವೆಂಪು ಅವರ ಪ್ರಕೃತಿ ಚಿಂತನೆಯ ಬರವಣಿಗೆಯ ಮಹೋನ್ನತಕ್ಕೆ ಒಂದು ಉದಾಹರಣೆ 'ಪಕ್ಷಿಕಾಶಿ' ಕವನ ಸಂಕಲನ. ಪ್ರಕೃತಿ ಒಡಲಲ್ಲಿ ನಡೆಯುವ ದಿನನಿತ್ಯದ ಚಮತ್ಕಾರಗಳಿಗೆ ಪಕ್ಷಿಕಾಶಿ ಕವನ ಸಂಕಲನದಲ್ಲಿ ದಾಖಲಾಗಿರುವ ಕವಿತೆಗಳೇ ಸಾಕ್ಷಿಯಾಗಿದೆ. ಕುವೆಂಪು ಅವರನ್ನು ರಾಷ್ಟ್ರಕವಿ ಸ್ಥಾನಕ್ಕೆ ಏರಿಸಿದ ಕೀರ್ತಿ ಈ ಕವನ ಸಂಕಲನಕ್ಕೆ ಸಲ್ಲುತ್ತದೆ. ಈ ಸಂಕಲನದಲ್ಲಿ ನಲವತ್ತೇಳು ಕವನಗಳಿವೆ. ಅವುಗಳಲ್ಲಿ ಸೂರ್ಯೋದಯ, ಸೂರ್ಯಾಸ್ತಮಾನ, ಮಳೆ–ಚಳಿ–ಹಿಮ, ಹೂವು–ಬಳ್ಳಿಗಳು, ಪಕ್ಷಿಗಳು, ಕವಿ ಕಾವ್ಯ ಕಲಾಸಾಕ್ತಿ ಕುರಿತು ಬರೆದಿರುವ ಕವಿತೆಗಳೂ ಸೇರಿವೆ.

ಕುವೆಂಪುರವರ ಸೂರ್ಯೋದದ ಕವಿತೆಗಳಲ್ಲಿ ಪ್ರಮುಖವಾದವುಗಳೆಂದರೆ 'ಆನಂದಮಯ ಈ ಜಗಹೃದಯ', 'ಬಾ ಫಾಲ್ಗುಣ ರವಿ ದರ್ಶನಕ್ಕೆ', 'ಭಾದ್ರಪದದ ಸುಪ್ರಭಾತ', 'ಇಂತಹ ಸುಂದರ ಪ್ರಾತಃಕಾಲದಿ' ಮುಂತಾದವುಗಳು. ಅವರ ಸೂರ್ಯಗಿತೆಗಳಲ್ಲಿ ಪ್ರಸಿದ್ಧವಾದ "ಆನಂದಮಯ ಈ ಜಗಹೃದಯ ಏತಕೆ ಭಯ ಮಾಣೋ!.."[೧] ಈ ಗೀತೆಯಲ್ಲಿ ವಿಶ್ವದ ಎಲ್ಲಾ ವ್ಯವಹಾರಗಳಿಗೆ ಮೂಲ ಶಿವನೆಂದು ಭಾವಿಸುತ್ತಾರೆ. ಪ್ರಕೃತಿಯ ಪ್ರತೀ ಸೌಂದರ್ಯದಲ್ಲೂ ಶಿವನ ಹೃದಯವು ವಿಸ್ತರಿಸಿದೆ ಎಂಬುದು ಈ ಕವಿತೆಯ ಆಶಯವಾಗಿದೆ. "ಸೂರ್ಯೋದಯ ಚಂದ್ರೋದಯ ದೇವರ ದಯೆ ಕಾಣೋ!"[೨] ಹೀಗೆ ಪ್ರಕೃತಿಯಲ್ಲಿ ಸಾಧಾರಣವಾಗಿ ಸಂಭವಿಸುವ ಸೂರ್ಯೋದಯ, ಚಂದ್ರೋದಯವೂ ದೇವನ ದಯೆ ಎಂದು ಉನ್ಮಾದ ಪಡುತ್ತಾರೆ. ಇಲ್ಲಿ ಕವಿ ಹೃದಯಕ್ಕೂ ವಿಜ್ಞಾನಿ ಹೃದಯಕ್ಕೂ ಒಂದು ಅಂತರ್ ಸಂಬಂಧವನ್ನು ಗಮನಿಸಬಹುದು. ಅದಕ್ಕಾಗಿಯೇ ರವಿ ಕಾಣದನ್ನು ಕವಿ ಕಂಡ ಎನ್ನುವಂತೆ ಕವಿಯ ಮನಸು ಹುಡುಕಾಡುವ ಚಮತ್ಕಾರಗಳಿಗೆ ವಿಜ್ಞಾನ ಉತ್ತರಿಸುವುದು ಕಷ್ಟವಾದೀತು. ಸೂರ್ಯ, ಚಂದ್ರ, ನಕ್ಷತ್ರ ಇವುಗಳೆಲ್ಲ ಸೌರಮಂಡಲದ ಗ್ರಹ –ನಕ್ಷತ್ರಗಳು. ಇವುಗಳ ಕ್ರಿಯೆ ಸಹಜವಾಗಿಯೇ ನಡೆಯುವುದು. ಆದರೆ ಕವಿಯ ಬಗೆಗಣ್ಣಿಗೆ ಇವೆಲ್ಲ ದೇವರ ಸೃಷ್ಟಿಯ ವೈವಿಧ್ಯಗಳು.

ಕುವೆಂಪು ಅವರು ಮಲೆನಾಡಿನ ಸಹ್ಯಾದ್ರಿಗಳ ಸಾಲುಗಳಲ್ಲಿ, ನದಿ, ಕಡಲುಗಳ ದಂಡೆಗಳಲ್ಲಿ ವಿಹರಿಸಿದ್ದರಿಂದ ತಾವು ಪ್ರತಿನಿತ್ಯವೂ ಕಂಡಂತ ಪ್ರಕೃತಿಯ ರೋಮಾಂಚನ ಭರಿತ ದೃಶ್ಯಗಳನ್ನು ದಾಖಲಿಸುತ್ತಾ ಹೋದದ್ದು ಕವನಗಳಾಗಿ ಮಾರ್ಪಟ್ಟಿವೆ.

"ಬಿಸಿಲಿದು ಬರಿ ಬಿಸಿಲಲ್ಲವೊ, ಸೂರ್ಯನ ಕೃಪೆ ಕಾಣೋ! ಸೂರ್ಯನು ಬರಿ ರವಿಯಲ್ಲವೊ; ಆ ಭ್ರಾಂತಿಯ ಮಾಣೊ!"[೩] ಎಂದು ಸೂರ್ಯನ ಬೆಳಕಿನ ಬಗೆಗೆ ವರ್ಣಿಸಿದ್ದಾರೆ. ರವಿಯ ಬೆಳಕಿಲ್ಲದಿದ್ದರೆ ಹಗಲು–ರಾತ್ರಿಗಳಿಲ್ಲ, ಸಸ್ಯ, ಪ್ರಾಣಿ, ಪಕ್ಷಿ ಸಂಕುಲಕ್ಕೆ ಆಹಾರವಿಲ್ಲದೆ ಹೋಗುತ್ತಿತ್ತು. ಹಾಗಾಗಿ ಸೂರ್ಯನು ಕೃಪೆ ತೋರಿ ಬಿಸಿಲನ್ನು ಧರೆಗೆ ನೀಡಿದ್ದಾನೆಂದು ಕವಿ ತನ್ನ ವಿಚಾರವಂತಿಕೆಯನ್ನು ಮೆರೆದಿದ್ದಾನೆ. "ರವಿವದನವೆ ಶಿವಸದನವೊ; ಬರಿ ಕಣ್ಣದು ಮಣ್ಣೊ! ಶಿವನಿಲ್ಲದೆ ಸೌಂದರ್ಯವೆ? ಶವಮುಖದಾ ಕಣ್ಣೊ!"[೪] ಎಂದು ಹೇಳುವ ಮೂಲಕ ರವಿಯ ತೇಜಸ್ಸಿನ ಖಜಾನೆಯ ಪ್ರಾಮುಖ್ಯತೆ ಹಾಗೂ ಶಿವನ ಮಹಾ ತೇಜಸ್ಸಿನ ಕಳೆಯು ಜಗತ್ತಿನ ಜೀವಾಳವೆಂದು ಬಣ್ಣಿಸಿದ್ದಾರೆ. ಶಿವನಿಲ್ಲದಿದ್ದರೆ ಜಗತ್ತಿನ ಸೌದಂರ್ಯ ಇರುತ್ತಿರಲಿಲ್ಲವೆಂದು ಕವಿ ಹೇಳುವ ಮಾತು ಪರೋಕ್ಷವಾಗಿ ಪ್ರಕೃತಿಯನ್ನು ಪ್ರತಿನಿಧಿಸುತ್ತದೆ. ರವಿಯ ವದನದ ಕಾಂತಿಯು ಶಿವನ ಸದನವೆಂದು ಹೇಳುವ ಮುಖಾಂತರ "ಶಿವ ಕಾಣದೆ ಕವಿ ಕುರುಡನೊ; ಶಿವ ಕಾವ್ಯದ ಕಣ್ಣೊ!"[೫] ಎಂದು ಉದಯಗಳಲ್ಲಿ ಹೃದಯವನ್ನು ಕಾವ್ಯದಲ್ಲಿ ಶಿವನನ್ನು ಕಾಣಬೇಕು ಎಂದು ಹೇಳುತ್ತಾರೆ. ಸೂರ್ಯೋದಯ ಮತ್ತು ಚಂದ್ರೋದಯ ಪ್ರಕೃತಿಯ ವ್ಯಾಪಾರವಲ್ಲ. ಅದೊಂದು ಅಸಾಧಾರಣ ಆನಂದಮಯ ಘಟನೆ. ಅವುಗಳನ್ನು ಕಾಣಲಾರದ ನಮ್ಮ ಕಣ್ಣು ನಿಷ್ಪ್ರಯೋಜಕವೆಂದು ತಿಳಿಸುತ್ತಾರೆ.

ಹೀಗೆ ಕುವೆಂಪು ಅವರ ಕವಿತೆಗಳಲ್ಲಿ ಸೂರ್ಯೋದಯ ಗೀತೆಗಳು ಸಾಕಷ್ಟಿವೆ. ಒಂದೊಂದರಲ್ಲಿಯೂ ಕಂಡ ದೃಶ್ಯಗಳು ಬೇರೆ. ಅವರು ಜಡ – ಚೈತನ್ಯಗಳ ನಡುವಿನ ವ್ಯತ್ಯಾಸವನ್ನು ಹೇಳುತ್ತಲೇ ಅವುಗಳ ನಡುವಿನ ಸಾಮ್ಯವನ್ನೂ ಹೇಳಬಲ್ಲರು. ಅವರ ಕವನಗಳಲ್ಲಿ ಎದ್ದು ಕಾಣುವ ಅಂಶವೆಂದರೆ ಸೌಂದರ್ಯ ಮತ್ತು ಪ್ರಕೃತಿಯ ಆನಂದ. ಸೂರ್ಯೋದಯವೆಂದರೆ ಬೆಳಗಿನ ಹೊತ್ತಿನಲ್ಲಿ ಸೂರ್ಯನ ಮೇಲಿನ ಶಾಖೆಯು ಕ್ಷಿತಿಜದಲ್ಲಿ ಕಾಣಿಸಿಕೊಳ್ಳುವ ಕ್ಷಣ. ಲೋಕವನ್ನು ಮುತ್ತಿದ ಅಂಧಕಾರವನ್ನು ತನ್ನ ಕಿರಣಗಳಿಂದ ಓಡಿಸುವ ಸೂರ್ಯ ನಮ್ಮ ಕಣ್ಣಿಗೆ ಕಾಣಿಸುವ ದೇವರು. ಆಸ್ತಿಕರು ಸೂರ್ಯೋದಯ, ಸೂರ್ಯಾಸ್ತಗಳಲ್ಲಿ ತಮ್ಮೆರಡು ಕೈಗಳಿಂದ ಅರ್ಘ್ಯ ಪ್ರಧಾನ ಮಾಡುವ ದೃಶ್ಯ ಸರ್ವೆಸಾಮಾನ್ಯ. ಈ ಸೂರ್ಯೋದಯದ ಕ್ಷಣವನ್ನು ಕುವೆಂಪು ತಮ್ಮದೇ ಶೈಲಿಯಲ್ಲಿ ವರ್ಣನೆ ಮಾಡಿದ್ದನ್ನು ಅವರ ಕವನಗಳಲ್ಲಿ ಕಾಣಬಹುದು.

**ಅಡಿಟಿಪ್ಪಣಿ:**

೧. ಕುವೆಂಪು – ಪಕ್ಷಿಕಾಶಿ (೦೯–೦೧–೧೯೩೯) – ಉದಯರವಿ ಪ್ರಕಾಶನ, ಮೈಸೂರು. ಪುಟ ಸಂಖ್ಯೆ–೨

೨. ಅದೇ. ಪುಟ–೨

೩. ಅದೇ. ಪುಟ–೨

೪. ಅದೇ. ಪುಟ–೨

೫. ಅದೇ. ಪುಟ–೨

ಆಕರ ಗ್ರಂಥ:

ಕುವೆಂಪು – ಪಕ್ಷಿಕಾಶಿ (ಕವನ ಸಂಕಲನ) – ಉದಯರವಿ ಪ್ರಕಾಶನ, ಮೈಸೂರು. ೨೦೧೩

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಕುವೆಂಪು ಕಾವ್ಯಗಳಲ್ಲಿ ಪ್ರಕೃತಿ ಚಿಂತನೆ

**ಗಾಯತ್ರಿ ಆರ್ ಅಂಟೀನ**
**ಕನ್ನಡ ಉಪನ್ಯಾಸಕಿ**
**ಶ್ರೀ ಮಳಿಯಪ್ಪಯ್ಯ ಸ್ವಾಮಿ ಶಿಕ್ಷಣ ಮಹಾವಿದ್ಯಾಲಯ**
**(ಬಿಇಡಿ ಗದ್ದನಕೇರಿ)**

ಪೀಠಿಕೆ – ಕುಪ್ಪಳ್ಳಿ ಎಂಬ ಹೊರಜಗತ್ತಿಗೆ ಪರಿಚಯವೇ ಇಲ್ಲದಿದ್ದ ಕುಗ್ರಾಮದಲ್ಲಿ ಹುಟ್ಟಿ ಮುಂದೆ ರಸ ಋಷಿಯಾಗಿ ಕಥೆ, ಕಾದಂಬರಿ, ಕವನ ಮಹಾಕಾವ್ಯ, ನಾಟಕ ಮಕ್ಕಳ ಕವನ, ವಿಮರ್ಶೆ ಹೀಗೆ ಸಾಹಿತ್ಯ ಕ್ಷೇತ್ರದ ಎಲ್ಲ ವಿಭಾಗಗಳಲ್ಲೂ, ಅತ್ಯುತ್ಕೃಷ್ಠ ಸಾಧನೆ ಮಾಡಿದವರು. ಮತ್ತು ಇಡೀ ವಿಶ್ವವೇ ತೀರ್ಥ ಹಳ್ಳಿ ತಾಲೂಕಿನ ಸಣ್ಣ ಗ್ರಾಮ ಕುಪ್ಪಳ್ಳಿಯ ಕಡೆ ಕನ್ನಡ ಸಾಹಿತ್ಯದ ಕಡೆ ತಿರುಗಿ ನೋಡುವಂತೆ ಮಾಡಿದ ಮೇರು ಸಾಹಿತಿ, ನಮ್ಮ ಕುವೆಂಪು. ಕನ್ನಡ ಸಾಹಿತ್ಯ ಮತ್ತುಭಾರತೀಯ ಸಾಹಿತ್ಯಕ್ಕೆ ಅಷ್ಟೇ ಅಲ್ಲದೇ ವಿಶ್ವಸಾಹಿತ್ಯಕ್ಕೆ ವಿಚಾರ ಕ್ರಾಂತಿಯ ಮಹಾಬೆಳಕು ನೀಡಿದ ಮಹಾನ್ ಯುಗಪುರುಷ.

ಕವಿ ಎಂದರೇ ಕಲ್ಪನಾ ವಿಚಾರ ಮನುಷ್ಯ ಭಾವನೆಗಳನ್ನು ವ್ಯಕ್ತಪಡಿಸುವ ಪರಿಯೇ ಕವಿತ್ವ. ಮನಸ್ಸು ಪ್ರಶಾಂತವಾಗಿ ಇರುವಲ್ಲಿ , ಸಾಹಿತ್ಯ ಉತ್ತಮವಾಗಿ, ಹೊರಹೊಮ್ಮುತ್ತದೆ. ನೈಸರ್ಗಿಕವಾಗಿ ಇರುವಂತಹ ಪ್ರಕೃತಿಯ ಸೊಬಗನ್ನು ಹಲವಾರು ರೀತಿಯಲ್ಲಿ ವ್ಯಕ್ತಪಡಿಸಲಾಗುತ್ತದೆ. ಆದಿ ಕವಿ ಪಂಪನಿಂದ, ಇತ್ತೀಚಿನ ವರೆಗಿನ ಬರಹಗಾರರು ಪ್ರಕೃತಿ ವೈಭವವನ್ನು ಬಣ್ಣಿಸಿದ್ದಾರೆ.ನಿಷ್ಕಲ್ಮಶ ಪ್ರಕೃತಿಯಂತೆ ಭಾವ ಲಹರಿಗಳು, ಕಾವ್ಯ ಗೀತೆ, ಲೇಖನಗಳು, ಹೊರಹೊಮ್ಮುತ್ತವೆ.

## ಕುವೆಂಪು ಕಾವ್ಯಗಳಲ್ಲಿ ಪ್ರಕೃತಿ

ಸಾಹಿತ್ಯದಮೂಲಕವೇ ಇಡೀ ಸಮಾಜದ ಚಿಂತನೆಯನ್ನು ಸಂಪೂರ್ಣವಾಗಿ ಬದಲಾಯಿಸಿಬಿಡಬಹುದು ಎಂಬುದನ್ನು, ಕುವೆಂಪು ಸಾಹಿತ್ಯ ಪ್ರಸ್ತುತ ಪಡಿಸುತ್ತದೆ. ತಮ್ಮ ಸಾಹಿತ್ಯದ ಮೂಲಕ ವೈಚಾರಿಕತೆ , ನಾಡು ನುಡಿ, ದೇಶಪ್ರೇಮ, ಭ್ರಾತೃತ್ವ, ವಿಶ್ವ ಮಾನವತೆ, ಪ್ರಕೃತಿ ಸೌಂದರ್ಯ, ಜೀವನ ಪ್ರೀತಿ, ಮತ್ತು ಆಧ್ಯಾತ್ಮಿಕತೆಯನ್ನು, ಎಲ್ಲರೆದೆಯೊಗಳು ತುಂಬಿಸುತ್ತಾ, ಅಂದಾಚಾರ ಮೂಢತೆ, ದುರುಳತೆಯನ್ನು ಸರ್ವರ ಮನಸ್ಸಿನಿಂದ ಬಡಿದೊಡಿಸುವ ಎಲ್ಲ ಪ್ರಯತ್ನ ಮಾಡಿದ ಶತಮಾನದ ಶ್ರೇಷ್ಠ ವ್ಯಕ್ತಿ ಕುವೆಂಪು.

ಶ್ರೀ ರಾಮಾಯಣ ದರ್ಶನಂ ಎಂಬ ಮಹಾಕಾವ್ಯವನ್ನು ಕೊಟ್ಟ ಕುವೆಂಪು ಅವರು, ತಮ್ಮ ಇದೊಂದೇ ಕೃತಿಯಿಂದ ತಮ್ಮ ಸಾಹಿತ್ಯದ ಶಕ್ತಿ ಏನು ಎಂಬುದನ್ನು ಜಗಜಾಹೀರು ಮಾಡಿದ್ದಾರೆ. **ನೂರು ದೇವರನ್ನೆಲ್ಲಾ ನೂಕಾಚೆ ದೂರ! ಭಾರತಾಂಬೆಯ ದೇವಿ, ನಮಗಿಂದು ಪೂಜಿಸುವ ಭಾರ! ಎನ್ನುತ್ತಾ** ಕುರುಡ ಭಕ್ತಿಯನ್ನು ಕಿತ್ತೆಸೆದು ದೇಶಭಕ್ತಿಯನ್ನು ಬಿತ್ತುವ ಪ್ರಯತ್ನ ಮಾಡಿದ್ದಾರೆ.

ಇದು ಸಸ್ಯ ಕಾಶಿ ಎನ್ನುವಂತೆ, ಪ್ರಕೃತಿ ಎಲ್ಲರನ್ನು ಕೈಬೀಸಿ ಕರೆಯುತ್ತದೆ. ಮಲೆನಾಡಿನ ಗಿರಿಶಿಖರಗಳು, ಸಾಲುಮರದ ಕೊಂಬೆಗಳು, ಬೆಟ್ಟ ಗುಡ್ಡಗಳು, ಬಾನೆತ್ತರಕ್ಕೆ ನಿಂತಿರುವ ಗಿಡಮರಗಳು, ಎಲ್ಲರನ್ನು ಆಕರ್ಷಿಸುತ್ತವೆ. ಕವಿ ಮನ, ಕವಿ ಶೈಲ, ಮಾರ್ಗದ ಪಯಣ, ಮೈನವಿರೇಳಿಸುತ್ತದೆ. ಈ ಸೌಂದರ್ಯದ ನೋಟ, ಕಾವ್ಯದಲ್ಲಿ ಎಲ್ಲರಿಗೂ ಮನಸ್ಸಿಗೆ ಮುದ ನೀಡುತ್ತದೆ. ಸಹ್ಯಾರ್ಧಿಯ ತಪ್ಪಲಲ್ಲಿಕಾವ್ಯ ಮೇಲೈಸುತ್ತದೆ.

ಅಂದಿನ ಬ್ರಿಟೀಷ ಆಳ್ವಿಕೆಯಲ್ಲಿ ನಿಸರ್ಗವನ್ನು ಆಂಗ್ಲಭಾಷೆಯ ಮೂಲಕ ಮೊದಲಾದ ಪಸರಿಸಿದ ಶ್ರೀಯುತರು ಕನ್ನಡಿಗರಿಗೆ ಅರ್ಥೈಸುವಂತೆ ತಾಯ್ನಾಡ ಭಾಷೆ ಕನ್ನಡದಲ್ಲಿ ರಚಿಸಿದ್ದಾರೆ. ವಿಹಂಗಮ ರಮಣೀಯ ನೋಟದ ಪರಿಸರವನ್ನು ಶ್ರೀಯುತರು, ಸಾಧ್ಯವಾದಷ್ಟು ಹರಡಿದ್ದಾರೆ. ಕಾಡಿನಲ್ಲಿ ತಪಸ್ಸು ಮಾಡುವದು ವೃತವಿದ್ದಂತೆ ಋಷಿಮುನಿಗಳು ಸರ್ವರ ಒಳಿತಿಗಾಗಿ ಈ ರೀತಿ ಮಾಡುತ್ತಿದ್ದರಂತೆ. ಅದೇ ರೀತಿ ಕುವೆಂಪು ರವರು, ಪರಿಸರದೊಡನೆ ಸಾಹಿತ್ಯದಲ್ಲಿ ರಸಋಷಿಯಾಗಿದ್ದಾರೆ. ಸಾಹಿತ್ಯದಲ್ಲಿ ಋಷಿ ಆಗದವನು, ಕವಿ ಅಗಲಾರ ಎಂಬ ಮತಿಗೆ ಕುವೆಂಪುರವರು, ಉಪಮೇಯ ಪರಿಸರ, ದೈವದತ್ತವಾಗಿರುವದನ್ನು ಅರ್ಥವರ್ಣನೆ ಎಲ್ಲರನ್ನು ಮನಸೂರೆಗೊಳಿಸುತ್ತದೆ. ಮಲೆ ನಾಡಿನ ಬನಗಳು, ಕುವೆಂಪುರವರ ಸಾಹಿತ್ಯವನ್ನು ಇನ್ನೂ ಆಪ್ತವಾಗಿಸಿಬಿಡುತ್ತವೆ. ಮಲೆ ನಾಡಿನ ಸೌಂದರ್ಯಕ್ಕೂ , ಕುವೆಂಪು ಅವರ ಸಾಹಿತ್ಯಕ್ಕೂ, ಅದೇನೋ ಅವಿನಾಭಾವ ಸಂಬಂಧವಿದೆ.

ಸದ್ದಿರದ ಪಸರೊಡೆಯ ಮಲೆ ನಾಡಿನ ಬನಗಳಲ್ಲಿ ಹರಿವ ತೊರೆಯೆಡೆಯಲ್ಲಿ ಗುಡಿಸೊಂದಿರಲಿ, ಅಲ್ಲಿ ಗಿಳಿ ಗೊರವಂಕ, ಕೋಗಿಲೆಗಳ ಇಂಚರವು ಕಲೆಯುವ ತಲೆ ಎಲೆಯಾಗಿ, ಕೇಳಿ ಬರುತಿರಲಿ ಎಂಬ ಕವನದಲ್ಲಿ ಇಡೀ ಮಲೆನಾಡನ್ನೇ ಮುದ್ದಾಗಿ ಕಾಣಿಕೆಯಾಗಿ ನೀಡಿದ್ದಾರೆ . ಯೋಜನೆ ಹಾಕಿಕೊಂಡು, ಹೋಗಲಾಗದೇ ಇದ್ದಾಗ, ಈ ಹಾಡು ಕೇಳಿ, ಸಹ್ಯಾರ್ಧಿ ಬೆಟ್ಟಗಳಿಗೆ ಕವಿಭಾವದಲ್ಲಿ ಕಣ್ಮುಚ್ಚಿಕೊಂಡು ಕೇಳುತ್ತಲಿದ್ದರೆ ಹಾಗೇ ಒಂದು ಟೂರ್ ಹೋಗಿ ಬಂದು ಬಿಡಬಹುದು. ಉದಯ ಗಗನದಲ್ಲಿ

ಅರುಣನ ಛಾಯೆ. ಜಗದ ಜೀವನಕ್ಕೆ ಚೇತನವೇ ಕವನ ಹಸಿರಿನುಯ್ಯಾಲೆಯಲ್ಲಿ ಬಿಸಿಲು ತೂಗಾಡುತಿದೆ. ಚುಕ್ಕಿಯು ತ್ಯಾಗದಲ್ಲಿ ಹಕ್ಕಿ ಹಾರಾಡುತಿದೆ. ಹೀಗೆ ಅವರ ಕವನಗಳಿಂದ ನಮ್ಮನ್ನು ಆಪ್ರಕೃತಿ ಮಡಿಲಿಗೆ ಕರೆದುಕೊಂಡು ಹೋಗಿ ಬಿಡುತ್ತಾರೆ. ಈ ಹಿನ್ನೇಲೆಯಲ್ಲಿ ನಿಷ್ಕಲ್ಮಶ ಪ್ರಕೃತಿಯಂತೆ ನಿಷ್ಕಲ್ಮಶ ವ್ಯಕ್ತಿತ್ವ ಅವರದ್ದಾಗಿದೆ. ಅವರ ಸಾಹಿತ್ಯದಲ್ಲಿ ಎಲ್ಲೂ ದೋಷ ಕಾಣದೇ ರಾಷ್ಟ್ರಕವಿ ಆದರು. ಪರಿಸರ ಸಕಲ ಜೀವಿಗಳಿಗೂ ಆಸರೆ ನೀಡುವಂತೆ ಏನಾದರೂ ಆಗು ಮೊದಲು ಮಾನವನಾಗು ಎಂಬ ದಿವ್ಯ ಸಂದೇಶವನ್ನು ಸಾರಿದ ಈ ಕವಿ ಶೂದ್ರಕವಿ, ಶೂದ್ರ ತಪಸ್ವಿ ಎಂದುಕೊಂಡರೂ ವಿಶ್ವಮಾನವರೆನಿಸಿದರು. ಕೇಳಿದ್ದನ್ನು ಕೊಡುವ ಕಲ್ಪವೃಕ್ಷ ಮರದಂತೆ ಕುವೆಂಪು ರವರು. ಕನ್ನಡಕ್ಕಾಗಿ, ಕೈ ಎತ್ತು. ನಿನ್ನ ಕೈ ಕಲ್ಪವೃಕ್ಷವಾಗುತ್ತದೆ ಎಂದು, ವ್ಯಾಖ್ಯಾನಿಸಿದ್ದಾರೆ. ವಿಶ್ವಮಾನವನನ್ನು ಸಾರಿ ಎಲ್ಲರಿಗೂ ಗೊತ್ತಿರುವಂತೆ ಅವರ ಸುಪುತ್ರರಾದ ಶ್ರೀಯುತರು, ಪೂರ್ಣಚಂದ್ರ ತೇಜಸ್ವಿಯವರು ಸಹಿತ ಪ್ರಕೃತಿ ಪ್ರೀಯರು, ಪ್ರಕೃತಿ ಪ್ರಾಣಿ ಪಕ್ಷಿಗಳ ಮಡಿಲಲ್ಲಿಯೇ ಅವರ ಒಡನಾಟ, ಕುವೆಂಪು ಅವರದು ಸಸ್ಯಕಾಶಿ ಆದರೇ ಇವರದು ಪಕ್ಷಿಕಾಶಿ, ಕುವೆಂಪುರವರು ಇಂಗ್ಲೀಷನಲ್ಲಿ ಬರವಣಿಗೆ ಆರಂಭಿಸಿದರೂ ಕನ್ನಡದ ಸೊಬಗಿಗೆ ಮನಸೋತು ಕನ್ನಡದಲ್ಲಿಯೇ ಬರೆದು ಜ್ಞಾನಪೀಠ ತಂದುಕೊಟ್ಟ ರಾಷ್ಟ್ರಕವಿ,ಮಲೆನಾಡ ಕವಿ, ನಮ್ಮ ಹೆಮ್ಮೆಯ ಕುವೆಂಪು. ಮನುಜ ಉತ್ತಮ ಸಂಸ್ಕಾರದಿಂದ ನಿಸ್ವಾರ್ಥ ಮನೋಭಾದಿಂದ ಇದ್ದಾಗ ಸಾಧನೆಗೆ ಪೂರಕ, ಆನಂದ ಮಯ ಈ ಜಗ ಹೃದಯ ಎಂಬ ರಸಋಷಿ ಮಾತು ಎಂದೆಂದಿಗೂ ಅಮರ.

### ಕನ್ನಡ ಸಾಹಿತ್ಯದ ಶಕ್ತಿ

ಕೇವಲ ಒಬ್ಬವ್ಯಕ್ತಿಯಾಗಿ ಅಲ್ಲದೇ ಕನ್ನಡ ನಾಡಿನ ಸಾಹಿತ್ಯದ ಶಕ್ತಿಯಾಗಿ ಎವರೆಸ್ಟಿನೆತ್ತರಕ್ಕೇರಿದರೂ ಸರಳವಾಗಿಯೇ ಬದುಕುತ್ತಾ. ಹಮ್ಮು ಬಿಮ್ಮುಗಳಿಂದ ದೂರ ಉಳಿದು. ಒಬ್ಬ ಮಹಾನ್ ಋಷಿ ಆಗಿ ವರಕವಿ ಬೇಂದ್ರೆ ಅವರಿಂದ ಜಗದ ಕವಿ, ಯುಗದ ಕವಿ ಎಂದು ಹೊಗಳಿಸಿಕೊಂಡ ಮಹಾನ ಸಂತ. ಮನುಜ ಮತ ವಿಶ್ವಪಥ, ಸರ್ವೋದಯ, ಸಮನ್ವಯ, ಮತ್ತು ಪೂರ್ಣದೃಷ್ಟಿ, ಎಂಬ ಐದು ಸರ್ವಕಾಲಿಕ ಶ್ರೇಷ್ಠ ಸೂತ್ರಗಳನ್ನು ಕೊಟ್ಟು ಪ್ರತಿಯೊಬ್ಬ ಮನುಷ್ಯನ ಹೊಂದಬೇಕಾದ ಉದ್ದೇಶವನ್ನು ಉದ್ದೀಪಿಸಿದ ಶಕ್ತಿ ಎಂದರೇ ಶ್ರೇಷ್ಠಾತೀಶ್ರೇಷ್ಠ ಕುವೆಂಪು.

ಸಾಹಿತ್ಯಲೋಕಕ್ಕೆ ತಮ್ಮನ್ನು ಅರ್ಪಿಸಿಕೊಂಡ ಕುವೆಂಪು. ಎಲ್ಲಾ ವಯೋಮಾನದವರು ಓದುವ ಮಾದರಿಯಲ್ಲಿ, ಕಾವ್ಯ ರಚನೆ ಮಾಡಿರುವದು. ಅವರು ರಾಷ್ಟ್ರ ಆಗಲು ಸಾಧ್ಯವಾಯಿತು. ಶಿಶುಸಾಹಿತ್ಯದಿಂದ ಆರಂಭವಾದ ಅವರ ಸಾಹಿತ್ಯ ಧಾರ್ಮಿಕ ಕಾದಂಬರಿ ವರೆಗೂ ಪಸರಿಸಿತು.

ಅವರು ರಚಿಸಿರುವ ಸಾಹಿತ್ಯದಿಂದ ಕನ್ನಡ ನಾಡು ಶ್ರಿಮಂತಿಕೆಯ ನೆಲೆಯಾಗಿ ರೂಪಗೊಂಡಿತು. ಅವರು ತಮ್ಮ ಸಾಹಿತ್ಯದಲ್ಲಿ ಒಂದೇ ಧರ್ಮವನ್ನು ಆಧಾರವಾಗಿಟ್ಟುಕೊಂಡು ಬರೆಯುತ್ತಿರಲಿಲ್ಲ. ಅವರದು ಪರಮತ ಸಹೀಷ್ಣುತೆಯ ರೂಪ. ಇದಕ್ಕೆ ಅವರು ರಚನೆ ಮಾಡಿರುವ ಜಲಗಾರ ಸಾಕ್ಷಿ. ಪ್ರಸಿದ್ಧ ಕಾದಂಬರಿಗಳಾದ ಕಾನೂರು ಸುಬ್ಬಮ್ಮ ಹೆಗ್ಗಡತಿ, ಮಲೆಗಳಲ್ಲಿ ಮಧುಮಗಳು, ಶ್ರೀ ರಾಮಾಯಣ ದರ್ಶನಂ, ಕಾದಂಬರಿ ಕಾವ್ಯಗಳಲ್ಲಿ ಪ್ರಕೃತಿಯ ಜೊತೆಗೆ ಸಾಹಿತ್ಯದ ಮೂಲಕ ಬದುಕಿನ, ಸಾರವನ್ನು ವಿವರಿಸುತ್ತಾ ಹೋಗುತ್ತಾರೆ. ಋಗ್ವೇದದ ಕಾಲದಿಂದಲೂ ಕಾವ್ಯಸೃಷ್ಟಿಗೆ ಪ್ರಕೃತಿಯೇ ಕಾರಣವಾಗಿದೆ . ಪ್ರಕೃತಿಯನ್ನು ಆಸ್ವಾಧಿಸಿ ಬದುಕಿಗೆ ಹತ್ತಿರವಾದ ಸಾರ್ವಕಾಲಿಕಾವಾದ ಸಾಹಿತ್ಯ ಸೃಷ್ಠಿ ಮಾಡಿದ್ದಾರೆ. ಕಾಳಿದಾಸನ ಕಾವ್ಯಸೃಷ್ಠಿಗೂ ಪ್ರಕೃತಿಯೇ ಆಧಾರವಾಗಿತ್ತು. ಆತ ಪ್ರಕೃತಿಯನ್ನು ದೇವರು ಎಂಬ ಸಂದೇಶ ಕೊಟ್ಟಿದ್ದಾನೆ. ಸಾಹಿತ್ಯವೆಂದರೇ ಕೇವಲ, ಪದಗಳ ಜೋಡಣೆ ಆಗಬಾರದು. ಅದು ಬದುಕಿಗೆ ಹತ್ತಿರವಾಗಬೇಕು.

ಕಾನೂರು ಹೆಗ್ಗಡತಿಯಲ್ಲಿ ಹೂವಯ್ಯನಂತಹ ಪಾತ್ರಗಳ ಮೂಲಕ ಪ್ರಕಟವಾಗಿರುವ ತತ್ವವೆಂದರೆ ಪ್ರಕೃತಿಯು ಸತ್ಯದ, ಸೌಂದರ್ಯದ ಶಿವಮಮತೆಯ ಇನ್ನೊಂದು ರೂಪವಾಗಿದೆ ಎಂಬುದು ವ್ಯಕ್ತವಾಗುತ್ತದೆ. ಪ್ರಕೃತಿ ಭೂಮಿ ಶಕ್ತಿಯಲ್ಲಿ ದೇವರಿಗೆ ಸಮಾನವಾಗಿದೆ. ದೇವರು ಈ ಜಗತ್ತನ್ನೇಲ್ಲಾ ಸೃಷ್ಠಿ ಮಾಡಿದ್ದಾನೆ. ಅವನು ಎಲ್ಲೆಲ್ಲಿಯೂ ಇದ್ದಾನೆ. ಬೆಳಿಗ್ಗೆ ಸೂರ್ಯನಾಗಿ ಮೂಡಿಬರುತ್ತಾನೆ. ರಾತ್ರಿ ಕತ್ತಲೆಯ ರೂಪದಿಂದ ಬರುತ್ತಾನೆ, ಅವನೇ ಗಾಳಿಯಾಗಿ ಬೀಸುತ್ತಾನೆ. ಮಳೆಯಾಗಿ ಸುರಿಯುತ್ತಾನೆ. ಮಿಂಚಾಗಿ ಹೊಳೆಯುತ್ತಾನೆ. ಎಂದು ಹೂವಯ್ಯ ಸೀತೆಗೆ ತಿಳಿಸುತ್ತಾ ಮುಂದು ವರೆದು ದೊಡ್ಡದ್ದೆಲ್ಲಾ ದೇವರೇ ಎಂದು ಬಿಡುವನು.ಪ್ರಕೃತಿಗೂ ದೇವರಿಗೂ ಅಭಿನ್ನವಾಗಿ ಕಾಣುವ ತತ್ವವು ಕಾದಂಬರಿಯಲ್ಲಿ ತುಂಬಿಕೊಂಡಿದೆ. ಪ್ರಕೃತಿ ಚಿತ್ರಣದ ಹಿಂದೆ ಈ ತತ್ವವೇ ಕೆಲಸ ಮಾಡಿದೆ.

### ಕುವೆಂಪು ಸಾಹಿತ್ಯ ಸೃಷ್ಠಿಗೆ ಈ ಮಲೆನಾಡ ಸೃಷ್ಠಿಯೇ ಕಾರಣ

ಕಾದಂಬರಿಗಳಲ್ಲಿಯ ಪರಿಸರ ತನ್ನ ಅಸ್ತಿತ್ವದಿಂದ , ಶಕ್ತಿ ಸಾಮರ್ಥ್ಯದಿಂದ, ನದಿ ಪ್ರವಾಹ, ಗಾಳಿ, ಮಳೆ, ಬೆಂಕಿ, ಬಿಸಿಲು, ಮಿಂಚು, ಗಿಡಮರ ಬಳ್ಳಿ, ಪಕ್ಷಿ ಪ್ರಾಣಿಗಳ ಮೂಲಕ, ಮತ್ತು ಇತರ ಕಾಡಿನ ಉತ್ಪತ್ತಿಗಳಿಗೆ ಬೆಲೆ ಕಟ್ಟುವಂತಿಲ್ಲ. ಅಷ್ಟು ಅಪೂರ್ವ ಅಮೂಲ್ಯವಾದವುಗಳು, ಇಂಬಳದಿಂದ ಹುಲಿಯವರೆಗೆ ಅಪಾಯಗಳ ಸಾಲು ಸಾಲು ಬಾಯಿ ತೆರೆದದ್ದು, ಇರುವದರಿಂದ ಸಾವು ಕ್ರೌರ್ಯ ಹಿಂಸೆಗಳು, ಪ್ರಚನ್ನವಾಗಿವೆ.ಮಲೆ ನಾಡು ಇಲ್ಲಿ ನಿಜಕ್ಕೂ ಮಲೆತುಕೊಂಡದ್ದು, ಮಲೆ ಮತ್ತು

ನಾಡುಗಳು ಒಂದಾಗಿಬಿಟ್ಟಿವೆ. ಆದರೇ ಆತ್ಮಶ್ರೀ ದೊರೆಯುದಿಲ್ಲಿ, ಭವ್ಯತೆ ತೋರುವದಿಲ್ಲಿ. ಒಂದು ಹಕ್ಕಿ ಧನಿಯು ಈ ಲೋಕದ ಸೇತು ಬಂಧವಾಗುವದಿಲ್ಲಿಯೇ. ಈ ಕಾಮದಂಬರಿಗಳಲ್ಲಿಯೇ ಹಸಿರು ಕಣ್ಣಿಗೆ ಮೆತ್ತಕೊಳ್ಳುತ್ತದೆ. ಮನಸ್ಸಿಗೆ ತುಂಬಿಕೊಳ್ಳುತ್ತದೆ.

ಮನೆಯಹೊರೆಗೆ ಕಾಲಿಟ್ಟರೆ , ತಲೆ ಎತ್ತಿ ದೃಷ್ಟಿಸಿದರೇ ಪ್ರಕೃತಿಯ ಬಣ್ಣ ಬೆಡಗು ರಾರಾಜಿಸುತ್ತದೆ. ಪಕ್ಷಿ ಕಾಶಿಯ ಹಸುರು ಕವನದ ಹೇಳಿಕೆ, ಸತ್ಯವೆನಿಸುತ್ತದೆ. ಈ ಅನುಭವ ಅನುಭೂತಿ ಎಲ್ಲರಿಗೂ ಲಭಿಸುತ್ತದೆ.

ಹಸುರತ್ತಲ್ ! ಹಸುರಿತ್ತಲ್!
ಹಸುರೆತ್ತಲ್! ಕಡಲಿನಲಿ!
ಹಸುರ್ಗಟ್ಟಿತ್ತೋ ಕವಿಯಾತ್ಮಂ!
ಹಸುರ್ನೆತ್ತರ್ ಒಡಲಿನಲ್ಲ!
(ಪಕ್ಷಿಕಾಶಿಹಸುರು ಪದ್ಯ ೨೦)

ಡಾ ಅಬ್ದುಲ್ ಕಲಾಂ ಅವರು ಒಂದು ಸಂದರ್ಭದಲ್ಲಿ ಕನ್ನಡ ಕವಿಗಳು , ಸಾಹಿತಿಗಳು, ರಚಿಸಿಕೊಂಡು ಬಂದ ಕವನ , ಲೇಖನಗಳಲ್ಲಿ ಬಹು ಹಿಂದಿನಿಂದಲೂ ಪರಿಸರದ ಕುರಿತಾದ ಒಲವು ಕಾಳಜಿ, ಪ್ರೀತಿ ಇದ್ದುದ್ದನ್ನು ಕಾಣುತ್ತೇವೆ. ಕೆಲವುಳು ದಶಕಗಳ ಹಿಂದೆ. ಪರಿಸರ ರಕ್ಷಣೆಯು ಒಂದು ಅಭಿಯಾನದ ಸ್ವರೂಪ ಪಡೆದಿರಲಿಲ್ಲ. ಆದರೇ ಅಂತಹ ದಿನಗಳಲ್ಲಿ ನಮ್ಮ ಹಿರಿಯ ಸಾಹಿತಿಗಳು ಪರಿಸರ ಪ್ರೀತಿಯ ಬರಹಗಳನ್ನು ಬರೆದದ್ದು, ವಿಶೇಷ ಎನಿಸುತ್ತದೆ ಎಂದಿದ್ದಾರೆ.

ಕುವೆಂಪು ಅವರು ಬರೆದ ಮೊದಲ ಕನ್ನಡ ಸಂಕಲನ, ಅಮಲನಕಥೆ, ಚಿಕ್ಕಂದಿನಿಂದಲೇ ಮಲೆ ನಾಡಿನ ಪರಿಸರದಲ್ಲಿ ಬೆಳೆದ ಕುವೆಂಪು ರವರಿಗೆ ಅಪಾರವಾದ, ಪರಿಸರ ಪ್ರೇಮ, ಅವರ ಪರಿಸರ ಪ್ರೀತಿಯೇ ಅವರ ಕಾವ್ಯದಲ್ಲಿ ಜೀವಂತವಾಗಿ, ಮೇಲೈಸಿದೆ. ಕಂಠಸಿರಿ ಹೀಗೆ ಪ್ರಕೃತಿಯ ಪ್ರತಿ ಸೌಂದರ್ಯದಲ್ಲಿಯೂ ಶಿವನ ಹೃದಯವು ವಿಸ್ತರಿಸಿದೆ ಎಂದು ಕವಿ ಉನ್ಮತ್ತವಾಗಿ ಹಾಡಿದ್ದಾರೆ. ಪ್ರಕೃತಿಯಲ್ಲಿ ಸಾಧಾರಣವಾಗಿ ಸಂಭವಿಸುವ ಸೂರ್ಯೋದಯ , ಚಂದ್ರೋದಯವು, ದೇವನ ದಯೆ ಎಂದಿದ್ದಾರೆ. ಕುವೆಂಪುರವರ ಕಾವ್ಯದಲ್ಲಿ ಕಾದಂಬರಿಗಳಲ್ಲಿ ಪರಿಸರ ಪ್ರಕೃತಿ ನಿಸರ್ಗದುದ್ದಕ್ಕೂ, ಹರಿದು ಬಂದಿದೆ. ಕುವೆಂಪುರವರ ಪರಿಸರ ಪ್ರೇಮವೂ ಅವರ ಸಾಹಿತ್ಯದಲ್ಲಿ ಕೆಲವು ಕಡೆ ಪ್ರವಾಹದ ಸ್ವರೂಪವನ್ನು ಪಡೆದಿದೆ.

**ಸಮಾನತೆಯ ಪ್ರತಿಪಾಧನೆ**

ಇಲ್ಲಿ ಯಾರು ಮುಖ್ಯರಲ್ಲ , ಯಾರೂ ಅಮುಖ್ಯರಲ್ಲ ಎನ್ನುತ್ತಾ ಭೂಮಿಯ ಮೇಲೆ ಪ್ರತಿಯೊಬ್ಬರಿಗೂ ಸಮಾನ ಪ್ರಾಮುಖ್ಯತೆ ಸಿಗಬೇಕೆಂದು ಪ್ರತಿಪಾಧಿಸುತ್ತಾ ಇಡಿ ಸಮಾಜದ ಮೇಲು, ಕೀಳು, ಮುಖ್ಯ ಅಮುಖ್ಯಗಳ ಎಂಬ ತಾರತಮ್ಯಗಳನ್ನು ಕುವೆಂಪುರವರು ತಮ್ಮ ಬರಹದ ಮೂಲಕವೇ ಬಡೆದಟ್ಟುತ್ತಾರೆ. ಮಲೆಗಳಲ್ಲಿ ಮದುಮಗಳು ಮತ್ತು ಕಾನೂರು ಸುಬ್ಬಮ್ಮ ಹೆಗ್ಗಡತಿ ಎಂಬ ಎರಡು ಮಹಾನ್ ಕಾದಂಬರಿಗಳನ್ನು ನೀಡಿ ಮಲೆ ನಾಡು ಅಲ್ಲಿಯ ಪರಿಸರ ಸಂಸ್ಕೃತಿ ಅಚಾರ ವಿಚಾರಗಳೇನು ಎಂಬುದನ್ನು ನಾಯುಗುತ್ತಿ ಹೂವಯ್ಯರಾಮಯ್ಯ ಸುಬ್ಬಮ್ಮ ಹೆಗ್ಗಡತಿಯವರ ಮೂಲಕ ಕಟ್ಟಕೊಟ್ಟರೆ ಕುವೆಂಪುರವರಿಗೆ ಮಾತ್ರ ಸಾಧ್ಯವೇನೋ ಎನ್ನವ ಅಚ್ಚರಿ ಹುಟ್ಟಿಸುವಂಥದ್ದು ಶೂದ್ರನೆಂಬ ಕಾರಣಕ್ಕೆ ರಾಮಾಯಣದಲ್ಲಿ ಶಂಬೂಕ ವಧಿಸಿದ್ದ ರಾಮನನ್ನು ಬದಲಿಸಿ ಸಮಾಜದ ಎಲ್ಲ ವಿರೋಧಗಳನ್ನು ಮೀರಿ ರಾಮನಿಂದ ಶಂಬೂಕನನ್ನು ಉಳಿಸಿ, ತಮ್ಮ ಶೂದ್ರ ತಪಸ್ವಿಯಲ್ಲಿ, ರಾಮನಿಗೊಂದು ಹೊಸ ಆಯಾಮ ನೀಡುತ್ತಾರೆ. ಮರ್ಯಾದಾ ಪುರುಷೋತ್ತಮ ಎಂಬ ಅವನ ಹೆಸರಿಗೆ ಕಳಶವಿಡುತ್ತಾರೆ.

ಮಲೆಗಳಲ್ಲಿ ಮಧುಮಗಳು ಕಾದಂಬರಿಯಲ್ಲಂತೂ ಪ್ರಕೃತಿಯ ಒಂದು ಪಾತ್ರದ ರೀತಿಯಲ್ಲಿ ಮೂಡಿಬಂದಿದ್ದು ಇವೆಲ್ಲವೂ ಕಾದಂಬರಿಕಾರರ ಪ್ರಕೃತಿ ಪ್ರೇಮವನ್ನು ಪ್ರತಿಬಿಂಬಿಸುತ್ತವೆ. ಕುವೆಂಪುರವರ ಎರಡೂ ಕಾದಂರಿಗಳಲ್ಲಿ ಕಾಡು, ಕಾನನ, ದಟ್ಟವಾಗಿ ಚಿತ್ರಣಗೊಂಡಿದೆ. ಸ್ವಾಮಿ ಇವರ ಪರಿಸರ ಪ್ರೇಮ, ಸಸ್ಯ ವಿಜ್ಞಾನಿಯಾಗಿದ್ದರೂ ಅವರ ಸಂಶೋಧನೆಯ ಸಾಕಷ್ಟು ಭಾಗ ಸಾಹಿತ್ಯ ಸಂಸ್ಕೃತಿಗಳೊಂದಿಗೆ, ಸಂಬಂಧವಿದ್ದುದ್ದು ಉಪನಿಷತ್ತುಗಳಲ್ಲಿ ಪ್ರಸ್ತಾಪವಾದ ಸಸ್ಯಗಳು ಕನ್ನಡ ಕವಿಗಳು ವರ್ಣಿಸಿರುವ ಸಸ್ಯಗಳು ಇವುಗಳನ್ನು ಅಧ್ಯಯನ ಮಡುತ್ತಿದ್ದರು. ತೇಜಸ್ವಿ ಬಹುದೊಡ್ಡ ಪರಿಸರ ತಜ್ಞರು, ಸಾಹಿತ್ಯ ಆರಾಧಕರು, ಸೂಕ್ಷವಾಗಿ ಗಮನಿಸಿ, ಪರಿಸರದ ವ್ಯಾಪಾರಗಳನ್ನು ಲೇಖನಗಳಲ್ಲಿ ಹಿಡಿದಿಟ್ಟ, ಉತ್ತಮ ಸಾಹಿತಿ ಆ ಪಥ , ಈ ಪಥ ಅಲ್ಲ, ಸರ್ವರ ಸರ್ವಸ್ಥರ ಬದುಕು ಎನ್ನುತ್ತಾರೆ ಕುವೆಂಪು.

ನಮ್ಮ ಹಳೆಯ ಶಾಸ್ತ್ರ ಪುರಾಣಗಳನ್ನು ಹೊಸಬೆಳಕಿನಲ್ಲಿಟ್ಟು ನೋಡಿ ಅದರೊಳಗಿನ, ಕಸ ಕೊಳೆಗಳನ್ನು ತೆಗೆಸಿದ್ದು ಅಲ್ಲಿ ಹೊಸ ದೃಷ್ಟಿಕೋನವನ್ನು ಇಟ್ಟು, ಕಸಿ ಮಾಡಿದರು. ಜಾತಿ ವ್ಯವಸ್ಥೆ ಅಸ್ಪೃಷತೆ ಮತ್ತು ಮೌಢ್ಯಗಳಿಂದ ಮುಕ್ತವಾದ ಸನಾತನ ಧರ್ಮ , ಅವರ ಕನಸಾಗಿತ್ತು. ಕುವೆಂಪುರವರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಅಪಾರ. ರಾಷ್ಟ್ರಕವಿ ಬಿರುದು ಪಡೆದ ಮಹಾನ್ ಕವಿ. ಕನ್ನಡ,ಕರ್ನಾಟಕದ ಬಗ್ಗೆ ಅವರು ಬರೆದಿರುವ ಭಾವ ಗೀತಿಗಳು ನಿತ್ಯ ನೂತನ. ಮನುಜಮತ ವಿಶ್ವಪಥವನ್ನು ಸಾರಿದ ಶ್ರೇಷ್ಠ ವಿಶ್ವಮಾನವರೆನಿಸಿದರು. ಮಹಾಕಾವ್ಯ, ನಾಟಕ,ಖಂಡ ಕಾವ್ಯ, ಕಥನಕಾವ್ಯ, ಭಾವಗೀತೆ, ಮೊದಲಾದ ಹಲವು ಪ್ರಕಾರಗಳಲ್ಲಿ ಅತ್ಯುತ್ತಮ ಕೃತಿಗಳನ್ನು ನೀಡಿದ ಅದ್ವೀತಿಯ . ಕುವೆಂಪುಅವರಂತೆ ಸರ್ವ

ಪ್ರಕಾರಗಳಲ್ಲೂ ಏಕ ಪ್ರಕಾರದ ಸಿದ್ಧಿ ಪಡೆದ ನುಡಿಗಳು ಅತೀ ವಿರಳ, ಕುವೆಂಪು ಆ ಹೆಸರಲ್ಲೇನೋ ಒಂದು ವಿಧವಾದ ಇಂಪು ಇದೆ. ಅದೇ ಕನ್ನಡದ ಕಂಪು,

**ಉಪಸಂಹಾರ–**

ಇಪ್ಪತ್ತನೇಯ ಶತಮಾನದ ಕನ್ನಡ ಸಾಹಿತ್ಯ ಏರುಗತಿಯಲ್ಲಿ ಸಾಗಲು ಕುವೆಂಪು ಕಾರಣೀಕರ್ತರು ಎಂದರೇ ತಪ್ಪಾಗಲಾರದು. ಕವನ, ಕಾವ್ಯ, ಸಣ್ಣ, ಕತೆಗಳು, ನಾಟಕ, ಕಾದಂಬರಿ, ಮಹಾಕಾವ್ಯ, ವಿಮರ್ಶೆ, ಖಂಡಕಾವ್ಯ, ಹೀಗೇ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಹಾಗೂ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವ ಮೂಲಕ ಅಜರಾಮರಾಗಿ ಉಳಿದಿದ್ದಾರೆ. ತಮ್ಮ ಸಾಹಿತ್ಯದ ಮೂಲಕ ವೈಚಾರಿಕತೆ ನಾಡು ನುಡಿ, ದೇಶಪ್ರೇಮ, ಭ್ರಾತೃತ್ವ , ವಿಶ್ವಮಾನವತೆ, ಪ್ರಕೃತಿ ಸೌಂದರ್ಯ, ಜೀವನ ಪ್ರೀತಿ, ಮತ್ತು ಆಧ್ಯಾತ್ಮಕತೆಯನ್ನು ಎಲ್ಲರೆದೆಯೊಳಗೂ ತುಂಬಿಸುತ್ತಾ,ಅಂಧಾಚಾರ, ಮೂಢತೆ, ದುರುಳತೆಯನ್ನು, ಸರ್ವರ ಮನಸ್ಸಿನಿಂದಲೂ ಬಡಿದೊಡಿಸುವ, ಎಲ್ಲ ಪ್ರಯತ್ನ ಮಾಡಿದ ಶತಮಾನದ ಶ್ರೇಷ್ಠ ವ್ಯಕ್ತಿ, ಸಾಹಿತಿ, ಕುವೆಂಪು.ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ರಾಷ್ಟ್ರ ಮತ್ತು ಅಂತರಾಷ್ಟ್ರೀಯಮಟ್ಟದ ಖ್ಯಾತಿಯನ್ನು ತಂದುಕೊಟ್ಟಿದ್ದಾರೆ.

**ಅಡಿ ಟಿಪ್ಪಣಿಗಳು**

೧ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆ–" ಕುವೆಂಪು ಸಂಚಯ" ಪು ಸಂ–೨೬,೪೬೫,೪೭೮.
೨ ಕುವೆಂಪು–"ಕೊಳಲು" ಪು ಸಂ–೧,೧೦
೩. ಕುವೆಂಪು–"ಶ್ರೀ ರಾಮಾಯಣ ದರ್ಶನಂ"ಪು ಸಂ–೨,೬,೧೦
೪. ಗುರುಪಾದ ಮರಿಗುದ್ದಿ–"ಕುವೆಂಪು ಕಾದಂಬರಿಗಳಲ್ಲಿ ಪರಿಸರ"– ಪುಸಂ ೧೨–೧೫.
೫. ಕುವೆಂಪು–"ಹೊನಲು"–ಪು ಸಂ –೧೦,೧೧.
೬. ಕಾನೂರು ಹೆಗ್ಗಡತಿ–"ಕುವೆಂಪು"–ಪುಸಂ ೧೭೭–೮.
೭. ಕುವೆಂಪು–"ಮನುಜ ಮತ ವಿಶ್ವಪಥ"–ಪು ಸಂ ೧–೧೫.
೮. ಕುವೆಂಪು–" ಪಕ್ಷಿಕಾಶಿ"– ಪು ಸಂ ೧,೬.
೯. ಕುವೆಂಪು–"ಮಲೆಗಳಲ್ಲಿ ಮಧುಮಗಳು"– ಪು ಸಂ ೧,೨, ೩

**ಆಕರ ಗ್ರಂಥಗಳು:**

೧. ಪ್ರಧಾನ ಗುರುದತ್ತ– "ಕುವೆಂಪು ಸಾಹಿತ್ಯ ಕೆಲವು ಅಧ್ಯಯನಗಳು"
೨. ಡಿ ಎಸ್ ನಾಗಭೂಷಣ– ಕುವೆಂಪು ಸಾಹಿತ್ಯ ದರ್ಶನ"
೩. ಮಲೆನಾಡು–"ಇ ಬುಕ್"
೪. ಡಾ ಬಿ ಆರ್ ಸತ್ಯನಾರಾಯಣ್–"ಕುವೆಂಪು ಕಾವ್ಯಯಾನ"
೫. ಡಾ ಡಿ ಕೆ ರಾಜೇಂದ್ರ–"ಕುವೆಂಪು ಕಾವ್ಯಸ್ವಾದ"
೬. ಕುವೆಂಪು–"ಮಲೆಗಳಲ್ಲಿ ಮಧುಮಗಳು"
೭. ಡಾ ಪ್ರಧಾನ ಗುರುದತ್ತ–"ಕುವೆಂಪು"
೮. ಕುವೆಂಪು–"ನೆನಪಿನ ದೋಣಿಯಲ್ಲಿ"
೯. ಇಚಿಟಿಟಿಚಿಜಚಿಟಿಣಾಜು.ತಿಇು.ಛಿಠಟ
೧೦. https: //kannadadeevige.in

# ಕುವೆಂಪು: ಮನುಜಮತ ವಿಶ್ವಪಥ

**ಡಾ. ಶಶಿಕಲಾ ದಂಡಿಗಿಮಠ**
**ಕನ್ನಡ ಉಪನ್ಯಾಸಕರು**
**ಕರ್ನಾಟಕ ಕಾಲೇಜ ಧಾರವಾಡ**

ಕುವೆಂಪು ಕನ್ನಡ ಸಾರಸ್ವತ ಲೋಕದ ಮಹಾಪ್ರತಿಭೆ ದಿಗ್ಗಜ. ಪದ್ಮಭೂಷಣ ಪದ್ಮವಿಭೂಷಣ ಪ್ರಶಸ್ತಿಗಳಿಂದ ಸನ್ಮಾನಿತರು. ರಾಷ್ಟ್ರೀಯಅಂತರರಾಷ್ಟ್ರೀಯಗೌರವ ಪ್ರಶಸ್ತಿಗಳು ಅಂವರನ್ನು ಆರಿಸಿ ಬಂದವುಕೀರ್ತಿಯನ್ನು 'ಶನಿ' ಎಂದು ದೂರಿಕರಿಸಿದ ಸರಳ ಜೀವನಅವರದು. ಪ್ರಾಧ್ಯಾಪಕರಾಗಿ ಕುಲಪತಿಗಳಾಗಿ 'ಮಾನಸಗಂಗೋತ್ರಿ'ಯನ್ನು ರೂಪಿಸಿದ ರೂವಾರಿಗಳು ಮಕ್ಕಳಿಂದ ವೃದ್ಧರವರಿಗೆ ಸಾಹಿತ್ಯರಚನೆ ಮಾಡಿ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಲೋಕದ ನಯಕರೆನಿಸಿಕೊಂಡರು. ಅರವಿಂದರಜ್ಞಾನದರ್ಶನವನ್ನು ಶ್ರೀ ಪರಮಹಂಸರ ಮಹಾಮಹಿಮೆಯನ್ನು ಸ್ವಾಮಿವಿವೇಕಾನಂದರತತ್ವಜ್ಞಾನದ ಸರ್ವಶಕ್ತಿಯನ್ನು ಶ್ರೀ ರಮಣಮಹರ್ಶಿಗಳ ಆಧ್ಯಾತ್ಮದಇಂಗಿತವನ್ನುಅರಿತವರು. ಪ್ರಪಂಚಜ್ಞಾನವನ್ನು ಬಲ್ಲವರು. ಅನ್ನಮಯವಾದ ಲೌಕಿಕ ಜೀವನದಿಂದಆನಂದ ಮಯವಾದಆಧ್ಯಾತ್ಮಜೀವನದವರೆಗೆ ಬದುಕಿದ ಹಿರಿಮೆಅವರದು.

ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು ಎಂಬುದು ಕೆವೆಂಪು ಅವರು ನವಯುಗಕ್ಕೆಕೊಟ್ಟಘೋಷಣೆಯಾಗಿದೆ. ಶ್ರೀಮಂತರ ಶೋಷಣೆಗೆ ಒಳಗಾಗಿ ದುಡಿಮೆಯ ಫಲವನ್ನುಅನ್ಯರಿಗೆಕೊಟ್ಟು ಬಡತನದ ಬದುಕಿನಲ್ಲಿಕಣ್ಣೀರು ಹಾಕುತ್ತಾ ಕುಸಿದು ಕಿಗ್ಗಿ ಸತ್ತಂತೆ ಬದುಕುತ್ತಿದರುವ ಸಹೋದರರಿಗೆ 'ಏಳಿರಿ' ಎಂದು ಶ್ರೀಮಂತರ ಶೋಷಣೆ ವಿರುದ್ಧಧ್ವನಿ ಎತ್ತಲುಕರೆಕೊಟ್ಟಿದ್ದಾರೆ. ಹೋರಾಟದಕ್ರಾಂತಿಯಿಂದ ಬದಲಾವಣೆ ಆಗಿ ಶ್ರೀಮಂತರ ಅಟ್ಟಹಾಸದೌರ್ಜನ್ಯದರ್ಪಕೊನೆಯಾಗುವುದು. ವರ್ಗ ವರ್ಣ ಮೇಲು ಕೀಳು ಶ್ರೀಮಂತ ಬಡವ ಎಂಬ ಭಿನ್ನತೆ ಭಾವಗಳು ಅಳಿಯುವವು. ಪ್ರಜಾಪ್ರಭುತ್ವದ ಸಮಾನತೆಯ ಮೌಲ್ಯಾದರ್ಶಗಳನ್ನು ಅಳವಡಿಸಿ ಕೊಳ್ಳಲು ಸೂಚಿಸಿದ್ದಾರೆ. ಹೊಟ್ಟೆಗೆಅನ್ನ ಮೈಗೆ ಬಟ್ಟೆ ನೀಡಿ ಬಾಳು ಹಸನಾಗಲು ಸಂತೋಷದಿಂದಿರಲುಧ್ವನಿ ಎತ್ತಿ. ಮೌನಿಗಳಾಗಿ ಹೇಡಿಗಳಾಗದೆ ಸಾವಿಗೆ ಹೆದರದೇಕೆಚ್ಚದೆಯಿಂದ ಹೋರಾಡಿ "ಇಂದುರಕ್ತದ ನಿಂದು ಮುಂದೆ ಸೌಖ್ಯದ ಸಿಂದು!' ಯುಗಚಕ್ರದ ಪರಿವರ್ತನೆಗೆ ಸರ್ವರೂಒಮ್ಮನಸ್ಸನ್ನು ಮಾಡಿ ಹೆಗಲು ಕೊಡಲು ಹುರಿದುಂಬಿಸಿದ್ದಾರೆ. 'ಹೊಸ ಬಾಳಿನ ಗೀತೆ,ಯಲ್ಲಿ ಮನುಕುಲ ಒಂದುಎಂದು ಘೋಷಿಸಿದ್ದಾರೆ.

ಕನ್ನಡಿಗರ ಹೃದಯದಲ್ಲಿಕನ್ನಡಡಿಂಡಿಂಮವನ್ನು ಬಾರಿಸಿ ಜಾಗೃತಿಯನ್ನು ಮೂಡಿಸಿದ ಕವಿ

ನಡೆ ಮುಂದೆ ನಡೆ ಮುಂದೆ
ನುಗ್ಗಿ ನಡೆ ಮುಂದೆ
ಜಗ್ಗದೆಯೆಕುಗ್ಗದೆಯೆ
ಹಿಗಿ ನಡೆ ಮುಂದೆ' ಎಂದು ಈ ನುಡಿಗಳ ಮೂಲಕ ಸ್ವಾತಂತ್ರ್ಯ ಹೋರಾಟಗಾರರನ್ನು ಮಾತ್ರ ಹುರಿದುಂಬಿಸಲಿಲ್ಲ ಎಲ್ಲಾ ಶೋಷಿತರ ನೊಂದವರ ವಿರುದ್ಧಧ್ವನಿ ಎತ್ತಲು ಪ್ರೇರಕವಾದವು.

ಶ್ರೀ ರಾಮಾಯಣದರ್ಶನಂ ಸ್ಮಶಾನಕುರುಕ್ಷೇತ್ರ ನಾಟಕಗಳ ಮೂಲಕ ಯುದ್ಧದದಾರುಣತೆಯನ್ನುಅದರದುಷ್ಪ ಪರಿಣಾಮಗಳನ್ನು ಸ್ಪಷ್ಟವಾಗಿ ಮೂಡಿಸಿದ್ದಾರೆ. ಅವಿವೇಕದಯುದ್ಧದಿಂದಅನ್ಯಾಯಕ್ರೌರ್ಯ ವಿನಾಶ ಸಂಸ್ಕೃತಿಯ ಸಾವು ಸಾಮಾನ್ಯರಆಹುತಿಯಾಗುತ್ತದೆ.

ಬಲಿಗೊಡುವೆಯೇನ ಲಂಕಾ ಪ್ರಜಾಸಂಖ್ಯೆಯಂ ?
ಸಾಲದೇನಾದ ಬಲಿ ?ತಾಯ್ ಸಂಕಟವನೇಕೆ
ಪರ್ಚಿಪೀ ಪೇಡಿತನಮಯ್ ? ನಿನ್ನ ಬಿಂಕಕ್ಕೆ
ಬೆಳೆಯವೇಳ್ಕುಮೆ ವಿಧವೆಯರ ಸಂಖ್ಯೆ ? ಮಕ್ಕಳಂ
ಕಳೆದುಕೊಳ್ವಬ್ಬೆಯರ ಸಂಖ್ಯೆ ? ಕೂಳ್ ಕೊಡುವರಂ
ಬಲಿಗೊಡವನಾಥ ಶಿಶುಸಂಖ್ಯೆ ?ಯುದ್ಧ ಭೀಕರತೆಯನ್ನು ಮನಗಾಣಿಸಿದ್ದಾರೆ.

ಎರಡು ಮಹಾಯುದ್ಧಗಳನ್ನು ಎರಡು ಮಹಾಕ್ರಾಂತಿಗಳನ್ನು ಭಾರತ ಸ್ವಾತಂತ್ರ್ಯ ಹೋರಾಟವನ್ನು ವಿಭಜನೆಯ ತಳಹದಿಯ ಮೇಲೆ ನಿರ್ಮಿತವಾದ ಭಾರತವನ್ನುಕರ್ನಾಟಕದಏಕೀಕರಣವನ್ನು ನೋಡಿದ ಕವಿಗೆ

ಲೋಕಕೆ ಶಾಂತಿ ಮೈದೋರಲಿ ! ಸರ್ವರಿಗೆ

ತಾರತಮ್ಯಗಳಳಿದು ಸ್ವಾತಂತ್ರ್ಯ ಸಮತೆಗಳ್
ಸಿದ್ಧಿಯಾಲಿ ಸಾಧಿದಲ್ ಪರಮಪುರುಷಾರ್ಥಮಂ! ಎಂದು ಹಾರೈಸಿದ್ದಾರೆ.

ವಿಶ್ವಶಾಂತಿ ಮೊಳಗುವಲ್ಲಿ ಭಾರತದಕಾಣಿಕೆ ಏನು ಎನ್ನುವುದನ್ನು

ಪೊಡವಿಯಾಳು !ಕಡಲ ಸೀಳು !ಗೆಲ್ಲು ಬಾಳು ಹೋಗು !
ಗ್ಲಾನಿಯೆಲ್ಲಿ ಹಾನಿಯೆಲ್ಲಿಅಲ್ಲಿರಕ್ಷೆಯಾಗು:
ಕ್ರೌರವೆಲ್ಲಿ ಪಾಪವೆಲ್ಲಿಅಲ್ಲಿ ಶಿಕ್ಷೆಯಾಗು:
ಕ್ಷಾಮ ಕಷ್ಟ ನಷ್ಟಗಳಲ್ಲಿ ನೀ ಸುಭಿಕ್ಷೆಯಾಗು:
ಅಣ್ಣ ನಿಹನೋ ಕನ್ನಡದಾ ಭುಜದ್ವಜೋದ್ದಂಡ !
ಚಿಣ್ಣ ನಿನಗೆ ಬೆಂಬಲಮಿರೆಗಂಡ ಭೇರುಂಡ
ಶಂಕೆ ಬೇಡ: ಬಿಂಕದಿಂದ ನುಗ್ಗು ನಡೆ ಹೋಗು:
ಸದಾಕಾಲಕ್ಕೂ ಸರ್ವದೇಶಗಳಿಗೂ ಮಿತ್ರನಾಗು

ಎಂದು ಹಾರೈಸಿದ ಕವಿ ಇಪ್ಪತ್ತನೆ ಶತಮಾನದಲ್ಲಿ ಮನುಜ ಪಥವನ್ನು ಸೃಷ್ಟಿಸಿ ವಿಶ್ವ ಪಥಕ್ಕೆದಾರಿ ತೋರಿಸಿದರು. ವಿಶ್ವಭಾತೃತ್ವ ಕುವೆಂಪು ಅವರಜೀವನದ ಉಸಿರಾಗಿತ್ತು. ಇಂದುಇಪ್ಪತ್ತೊಂದನೆ ಶತಮಾನದಲ್ಲಿಅದರ ಸಾಕಾರಕ್ಕಾಗಿ ವಿಶ್ವಕಾರ್ಯೋನ್ಮುಖವಾಗುತ್ತಿದೆ.

ಸಾಮಾನ್ಯರಿಗೆತಮ್ಮ ಸುತ್ತಮುತ್ತಲಿನ ಸತ್ಯಅರಿವಿಗೆ ಬರುವುದಿಲ್ಲ. ಅದನ್ನುಅವಜ್ಞೆ ಮಾಡುತ್ತಾರೆ. ಕವಿಯಾದರೋ ಸತ್ಯದಅನ್ವೇಶಕ ಮತ್ತುಆರಾಧಕ.ಕಠಜಣ ು ಋಜ ಠಟಟಥಿ ಣಜಟಟಜಡಿ ಠಜ ಋಜ ಣಡಿಣಾಋ ಇದನ್ನು ಕುವೆಂಪು ಅವರ 'ಮನೆ ಮನೆಯತಪಸ್ವನಿ'ಯಲ್ಲಿಗುರುತಿಸಬಹುದಾಗಿದೆ. ಸೀತೆ ಸಾವಿತ್ರಿದಮಯಂತಿಚಂದ್ರಮತಿ ಊರ್ಮಿಳೆ ಸಕುಂತಲೆ ವಾಸವದತ್ತೆ ಮೂದಲಾದವರುಕಾವ್ಯ ಭೂಮಿಕೆಯಲ್ಲಿಉಲ್ಲೇಖಗೊಂಡುಜನರಆರಾಧನೆಗೆ ಪಾತ್ರರಾಗಿದ್ದಾರೆ. ಶ್ರೇಯಸ್ಸಿಗೆ ಮಾದರಿಯಾಗಿದ್ದಾರೆ. ಸಾಧನೆಗೆ ಪ್ರೇರಕರಾಗಿದ್ದಾರೆ. ಚಿರಕಾಲವುಸ್ಪೂರ್ತಿದಾತರಾಗಿದ್ದಾರೆ. ಕುವೆಂಪು ಅವರದೃಷ್ಟಿಯಲ್ಲಿ ಈ ತಪಸ್ವಿನಿಯರಿಗೆ ಕಡಿಮೆಇಲ್ಲದತಪಸವಿನಿಯರು ಲೋಕ ಭೂಮಿಕೆಯಲ್ಲಿದ್ದಾರೆಎನ್ನುವುದನ್ನು 'ಮೆ ಮನೆಯ ತಪಸ್ವಿನಿ'ಯಲ್ಲಿ ಮನಗಾಣಿಸಿದ್ದಾರೆ. ಈ ಕಾವ್ಯದಲ್ಲಿ ಸ್ತ್ರೀಯರ ಆದರ್ಶ ಹಿರಿಮೆ ಗರಿಮೆಗಳನ್ನು ಸಹನೆ ಶಾಂತಿ ತ್ಯಾಗಗಳನ್ನು ಹೊಗಳಿದ್ದಾರೆ.

ಭಾರತಿಯ ಸ್ತ್ರೀಯರು ಶಾಂತಿ ಸಹಿಷ್ಣುತೆಗಳಿಂದ ಎಲ್ಲಾಅನ್ಯಾಯ ಅಪಮಾನಗಳನ್ನು ಸಹಿಸಿಕೊಳ್ಳುವರು. ಕುಟುಂಬದ ಹಿತದಲ್ಲಿಯೇತಮ್ಮ ಹಿತವನ್ನು ಕಂಡುಕೊಳ್ಳುವರು ಪರಿವಾರದ ಸಂತೋಷದಲ್ಲಿ ಬದುಕಿನ ಸಾರ್ಥಕತೆಯನ್ನುಕಂಡವರು. ಗಂಡು ಹೆಣ್ಣುಗಳಲ್ಲಿ ಮೇಲು ಕೀಳುಗಳಿಲ್ಲ. ಇಬ್ಬರು ಸಂಸಾರದಎರಡು ಕಣ್ಣುಗಳದ್ದಂತೆ. ದ್ವಿಷಕ್ರ ವಾಹನದಎರಡು ಗಾಲಿಗಳಿದ್ದಂತೆ. ಪರಸ್ಪರ ಪೂರಕ ಪೋಷಕ ಇವರದು ಪರಸ್ಪರ ಅವಿನಾಭಾವ ಸಂಭಂಧ ಹೆಣ್ಣು ಮನೆಯಲ್ಲಿ ಕಾರ್ಯೋನ್ಮುಖಳಾಗಿ ನಲಿಯುತಿದ್ದರೆ ಆ ಮನೆ ನಂದನವನ. ದಾಂಪತ್ಯ ಪರಿವಾರ ಸಂಸಾರದ ನೆಮ್ಮದಿಗೆ ಮನೆಯೊಡತಿಯೇಕಾರಣ. ಹೀಗೆಂದ ಮಾತ್ರಕ್ಕೆ ಮಹಿಳೆ ಮನೆಯಲ್ಲಿ ಭಂದಿತಳಾಗಬೇಕು ದಾಸಿಯಾಗಿರಬೇಕೆಂಬುದು ಕುವೆಂಪು ಅವರಆಶಯವಾಗಿರಲಿಲ್ಲ ಮನೆಯೆಂಬ ಅರಮನೆಯಲ್ಲಿರಾಣಿಯಾಗಿ ಪತಿಗೆತಾರಿಣಿಯಾಗಿ ಮನೆಯವರಿಗೆ ಮಮತೆಯ ವಾತ್ಸಲ್ಯಧಾರಿಣಿಯಾಗಿಕುಟುಂಬದ ಶ್ರೇಯಸ್ಸಿಗೆ ಕಾರಂಳು ಅಂತೆಯೇ ಕುವೆಂಪು ಅವರು ಮೆ ಮನೆಯ ತಪಸ್ವಿಗೆ ಶರಣು ಹೋಗಿದ್ದಾರೆ.

ಮನೆಮನೆಯಲ್ಲಿ ನೀನಾಗಿಹೆ ಗೃಹಸ್ತ್ರೀ
ಹೇ ದಿವ್ಯ ಸಾಮಾನ್ಯೆ
ಹೇ ಭವ್ಯದೇವಮಾನ್ಯೆ
ಅನ್ನಪೂರ್ಣೆ ಅಹಂ ಶೂನ್ಯೆ
ಚಿರಂತನಅಕೀರ್ತಿಕನ್ಯೆ
ನಮೋ ನಿನಗೆನಿತ್ಯಧನ್ಯೆ

ಹೆಣ್ಣಿನಿಂದಲೇ ಗಂಡಸಿನ ದುಷ್ಟಗುಣಗಳು ಅಳಿಯುತ್ತವೆ. ಶಿಲೆಯನ್ನು ವಿಗ್ರಹ ಮಾಡುವ ಶಿಲ್ಪಿ ಅವಳು ಸಂಸಾರ ತ್ಯಜಿಸಿ ಕಾಡಿನಲ್ಲಿ ನಿಶ್ಚಿಂತವಾಗಿತಪಸ್ಸು ಮಾಡುವುದು ಸುಲಭವೇನೋಆದರೆ ಸಂಸಾರದಲ್ಲಿದುಕೊಂಡು ಪರಿವಾರವನ್ನು ನಿಭಾಯಿಸುವುದುಕಟುತಪಸ್ಸೆ. ಆದ್ದರಿಂದ ಕುವೆಂಪು ಅವರು

ನೀನೆ ರತಿ ನೀನೇ ಗತಿ
ಎದೆದೆಗೂ ಹೂವಾರತಿ

ನೀನಿರದಿರೆ ಲೋಕದಗತಿ

ದುರ್ಗತಿ ಮೃತಿದೇವರೇಗತಿ  ಹೆಣ್ಣೀನ ಬಹುಮುಖ ಸ್ವರೂಪವನ್ನುರತಿಗರತಿರತಿಎಂದು ಅವಳ ಅನಿವಾರ್ಯತೆಯನ್ನು ಮನಗಾಣೀಸಿದ್ದಾರೆ. ತಾಳುತ್ತದೆ ಬಾಳುತ್ತಿದೆ ನಿನ್ನಿಂದೆಮ್ಮ ಇಳೆ ಎಂದುಕೃತಜ್ಞತೆಯನ್ನು ಸೂಚಿಸುತಾರೆ.

ಹಿಡಿಯದಿರಲಿ ನಿನಗವರಾ
ಹೊಗಳಿಕೆಯಾ ಕೀರ್ತಿಯ ಶನಿ ಎಂದುಆಶಿಸುತ್ತಲೇ
...........................
..........................
ಹೇ ಜನನೀ
ಒಪ್ಪಾಗಿರು ಒಲವಾಗಿರು
ನಿಜಮತದಲಿ ಋಜುಪಥದಲಿ
ನಡೆಸೆಮ್ಮನು ಋತುದರ್ಶಿನಿ
ಹೇ ಮನುಕುಲ ಕಲ್ಯಾಣೀ ಎಂಬ ಕೋರಿಕೆ ಮನನಿಯವಾದುದು.

ಲೋಕ ರಂಗದಲ್ಲಿಯಾವುದು ಅಲಕ್ಷಕ್ಕೊಳಗಾಗಿರುತ್ತದೆಯೋ ಅದನ್ನು ಕವಿ ಕಾವ್ಯರಂದಲ್ಲಿಉದ್ಧರಿಸುತ್ತಾನೆ. ಕವಿ ಪ್ರತಿಭೆಯಿಂದಅಣು ವಿಭುವಾಗುತ್ತದೆ. ಅಲ್ಪ ಭೂಮವಾಗುತ್ತದೆ. ಮನೆ ಮನೆಯಗೃಹಣಿಯರನ್ನು ಕುವೆಂಪು ಅವರುಕಾವ್ಯದಲ್ಲಿ ಉದ್ಧರಿಸಿದ್ದಾರೆ. ಪ್ರತಿ ಮನೆಯಗೃಹಣೀಯರುಉದ್ಧಾರಕರುಎಂದು ಗುರುತಿಸಿ ಅವಳ ಮಹತ್ವವನ್ನು ಹೇಳಿರುವುದು ಗಮನಾರ್ಹವಾದುದು. ಖಿಚಿಔಫಿ ಟಜಚಿಟಿ ಟುಣಜಡಿಚಿಟಟಥಿ ಣಠ ಛಿಣಡಿಟ ಎಂದಿದ್ದಾರೆ ಸ್ವಾಮಿ ವಿವೇಕಾನಂದರು. ಸ್ವತ: ಬೇಯುವುದರೊಂದಿಗೆಕೆಡ್ಡದ್ದನ್ನು ಸುಟ್ಟು ಹಾಕುವುದು. ಹಾಗೆ ಗೃಹಣೀಯರುತಮ್ಮ ಶಾಂತಿ ಸಹನೆ ಸಹಿಷ್ಣುತೆಯಿಂದ ಮನೆಯ ದುಷ್ಟಶಕ್ತಿಗಳನ್ನು ಕೆಟ್ಟ ಗುಣಗಳನ್ನು ನಾಶ ಮಾಡುತ್ತಾರೆ.

ಇಂದುಆಧುನಿಕತೆಯ ಸೂಗಿನಲ್ಲಿ ಸ್ವಾತಂತ್ರ್ಯದ ಹೆಸರಿನಲ್ಲಿ ವಿಚಾರಧಾರೆದಾರಿತಪ್ಪುತ್ತಿದೆ. ಸ್ವಾತಂತ್ರ್ಯದ ಸಮರ್ಪಕಅರಿವೆಇಲ್ಲವಾಗಿದೆ. ಪರಂಪರೆಎಂದರೆ ಅನಿಷ್ಟ ಸಂಪ್ರದಾಯಗಳೆಂದು ಸಿಡಿದು ನಿಲ್ಲುವಂತಾಗಿದೆ. ಇಂತಹ ಸಂದರ್ಭದಲಲ್ಲಿ ಕುವೆಂಪು ಅವರ ಸಲಹೆ ಮನನೀಯವಾಗಿದೆ. ಗೃಹಣೀಯರು ಲಕ್ಷಿಸಿದ್ದೇ ಆದರೆಗೃಹಭಂಗವಾಗದಂತೆಉದಾತ್ತವಾದ ಭಾರತಿಯ ಸಂಸ್ಕ್ರತಿಗೆಚ್ಯುತಿ ಬಾರದ ಹಾಗೆ ನಡೆಯಲು ಸಾಧ್ಯವಾಗುತ್ತದೆ.

ವಿಜ್ಞಾನದ ಮುನ್ನಡೆಯಿಂದಏನೆಲ್ಲ ಸಾಧಿಸಿದರು ಮನಸ್ಸಿನ ನೆಮ್ಮದಿಗೆ ಸುಖ: ಶಾಂತಿಗೆ ಮನೆಯ ಸಾಧನ. ಸಂತೃಪ್ತಿಯ ಬಾಳನ್ನು ಮನದಏಕಾಗ್ರತೆಗೆ ನೆಮ್ಮದಿಗೆಜೀವನದಲ್ಲಿ ಸಾಧನೆಯತ್ತದಾಪುಗಾಲು ಹಾಕಲು ಮನೆಯೇ ಮೂಲವಾಗಿದೆ. ಅದಕ್ಕೆ ನಗುಮುಖದ ಮನೆಯೊಡತಿಯೆಕಾರಣ. ಕುಟುಂಬ ಜೀವನದ ತಳಹದಿಯೆ ಮದುವೆ.

ಒಲುಮೆ ಒಂದು ದಿವ್ಯರಕ್ಷೆ
ಇಹ ಸಮಸ್ಯಗೆ
ಮದುವೆಅದಕೆ ಮಧುರ ದೀಕ್ಷೆ
ಗೃಹ ತಪಸ್ಸಿಗೆ ಎಂದು ಸಿಂದರ ಬದುಕಿಗೆ ಮಾರ್ಗತೋರಿದ್ದಾರೆ.
ಗೃಹಣಿಗರತಿದೇವಿ ತಾಯಿ
......................
ಮಣಿವೆನುಇದೊನಿನ್ನಡಗೀ
....................................
ಸೌಖ್ಯದ ನೆಲೆ ಶಾಂತಿಯ ಮನೆ
ಸೌಂದರ್ಯದ ಶಿವ ಮಂದಿರೆ
ಸಾಮಾನ್ಯನ ಸಿರಿತವರೆ

ಗೃಹ ಗೃಹಗೃಹ ತಪಸ್ವಿನೀ ಕುವೆಂಪು ಅವರ ಕವಿ ಚೈತನ್ಯಯುಗದ ವಾಣಿಯರೂಪದಲ್ಲಿ ಹೊರಹೊಮ್ಮಿದೆ. ಯುಗದಕಾವ್ಯದಾರ್ಶನಿಕ ಮಹಾಕಾವ್ಯ 'ಶ್ರೀ ರಾಮಾಯಣದರ್ಶನಂ' ಸೃಷ್ಟಿ ಆಗಿದ್ದುಉದಯರವಿ ಮನೆಯಲ್ಲಿ ಹತ್ತು ವರ್ಷದ ತಪಸ್ಸಿನ ಫಲ.

ಕುವೆಂಪು ಅವರಏಕಾಂತಜೀವಿ. ಧ್ಯಾನಾಸಕ್ತರು. ಭಾವ ಸಮಾಧಿಯಲ್ಲಿ ವಿರಮಿಸುವರು. ಜನಸಂಪರ್ಕ ದಿಂದ ದೂರವುಳಿದರೂ ಜನಹಿತಕಾರ್ಯದಿಂದ ವಿಮುಖರಾದವರಲ್ಲ. ಕನ್ನಡ ನಾಡು ನುಡಿಗಳ ಹಿತರಕ್ಷಣೆಗಾಗಿ ಸತತವೂ ಹೋರಾಟದಲವಲಿ ತೊಡಗಿದವರು. ಸ್ನೇಹಪರರುಕುಟುಂಬ ವತ್ಸಲರು. ಬಾಳಿನ ಸೊಬಗು ಸೊಗಸು ಅರ್ಥ ವಿಷಮತೆ

ಮೌಲ್ಯಗಳನ್ನು ಹೃದಯಂಗಮವಾಗಿ ಪಡಿಮೂಡಿಸಿದ ವಿಶಾಲ ಸಾಹಿತ್ಯದೃಷ್ಟಿಅವರದಾಗಿದೆ.ಯುಗಧರ್ಮದ ಸಾಹಿತ್ಯಅವರಎಲ್ಲ ಬರಹಗಳಲ್ಲಿ ಬಿಂಬಿತವಾಗಿದೆ. ಶ್ರೀ ಸಾಮಾನ್ಯರ ದೀಕ್ಷೆಗಿತೆಯ ಮೂಲಕ ಮನುಜ ಮತ ವಶ್ವಪಥಕ್ಕೆ ನಾಂದಿ ಹಾಡಿದಾರೆ. ದ್ವಿಜರಿಂದ ಅಂತ್ಯಜರವರೆಗೆ ಗಟಣಠ ಣಖು ಟಢಣ ಎಲ್ಲರ ಸುಖ: ಶಾಂತಿಯನ್ನು ಸರ್ವೋದಯಅನ್ನುವಒಂದು ಶಬ್ಧದಲ್ಲಿ ಹೇಳಿದ್ದಾರೆ ಕುವೆಂಪು ಅವರುಇಪ್ಪತ್ತನೇ ಶತಮಾನದಲ್ಲೇಜಾಗತಿಕ ಪ್ರಜ್ಞೆಯನ್ನುತಮ್ಮ ಕಾವ್ಯಗಳಲ್ಲಿ ಬಿಂಬಿಸಿದ್ದಾರೆ. ಸರ್ವರಿಗೂ ಸಮಬಾಳು ಇನ್ನೂ ಪೂರ್ಣವಾಗಿ ಸಾಧಿತವಾಗದಿದ್ದರೂ ವಿಶ್ವ ಆ ಗುರಿಯನ್ನು ಸಾಧಿಸಲು ಹೋರಾಡುತ್ತಿದೆ. ಪ್ರಜಾಪ್ರಭುತ್ವತತ್ತ್ವದ ಸ್ವಾತಂತ್ರ್ಯ ಸಮಾನತೆ ವಿಶ್ವಶಾಂತಿ ಬಾಯಿಮಾತಲ್ಲಿವುಳಯದೆ ಕಾರ್ಯರೂಪದಲ್ಲಿತರಬೇಕಾಗಿದೆ.

ಓ ನನ್ನಚೇತನ
ಆಗು ನೀ ಅನಿಕೇತನ ! ....
ಆ ಮತ ಈ ಮತ ಹಳೆಮತದ ಸಹವಾಸ
ಸಾಕಿನ್ನು ಸೇರಿರ್ರ್ಯ ಮನುಜ ಮತಕ್ಕೆ
ಓ ಬನ್ನಿ ಸಹೋದರರೆ ವಿಶ್ವಪಥಕೆಎಂದುಕರೆ ನೀಡಿದ್ದಾರೆ.

**ಕುವೆಂಪು ಅವರು ನೀಡಿದ ವಿಶ್ವ ಮಾನವ ಸಂದೇಶದ ಸೂಕ್ತಿಗಳು:**

- 'ಮತಿ' ಮಾನವನ ಸರ್ವೋತ್ಕೃಷ್ಟವಾದಆಯುಧ 'ಮತಿ'ಯೇಕತ್ತಲಲ್ಲಿ ದಾರಿತೋರುವರತ್ನದ ಕೈ ದೀವಿಗೆ.
- ವಿದ್ಯಾರ್ಥಿಜೀವನವುಒಂದುತಪಸ್ಸಾಧನೆ ಪ್ರತಿಯೊಬ್ಬ ವಿದ್ಯಾರ್ಥಿಯೂಒಬ್ಬಗೌರವ ತಪಸ್ವಿ.
- ವಿದ್ಯಾರ್ಥಿ ಪಠ್ಯ ಪುಸ್ತಕಗಳ ಮಿತವಲಯದಲ್ಲಿ ವಾಙ್ಮಯಜಗತ್ತಿನ ವಿಶಾಲತೆಯಲ್ಲಿರಸಯಾತ್ರೀಯಾಗಬೇಕು.
- ವಿದ್ಯೆಯಗುರಿಅನ್ನ ಬಟ್ಟೆಗಳನ್ನು ಮಾತ್ರ ಸಂಪಾದಿಸುವುದಲ್ಲ ವಿದ್ಯೆ ಸಾಮಾನ್ಯ ಮನುಷ್ಯನನ್ನು ಮೃಗತ್ವದಿಂದದೇವತ್ವಕ್ಕೆಎತ್ತುವ ಸಾಧನವಾಗಬೇಕಾಗಿದೆ.
- ಬದುಕಿನಗುರಿಶಾಂತಿ ಬದುಕನ್ನು ವಿಷಯವಾಗುಳ್ಳ ಸಾಹಿತ್ಯದಗುರಿಯೂ ಶಾಂತರಸ ಸ್ವಾದನೆಯೇ
- ಸಾಮರಸ್ಯಸಮನ್ವಯ ಸಹಾನುಭೂತಿ ಸರ್ವೋದಯ ಭಾವನೆ ಇವುಗಳನ್ನು ಪ್ರಚೋದಿಸುವುದೆ ಸಾಹಿತ್ಯದ ಲಕ್ಷಣವಾಗಿದೆ.
- ಸಮರಸವೇಜೀವನದ ತಿರುಳು ಹೋರಾಟವೇಜೀವನದ ಉಸಿರು ಆದರ್ಶ ಪ್ರಾಪ್ತಿಯೆಜೀವನದ ಪರಿಸಮಾಪ್ತಿ.
- 'ಮತ' ತೊಲಗಿಆಧ್ಯಾತ್ಮ ವೈಜ್ಞಾನಿಕತತ್ತ್ವವಾಗಿ ಮಾನ್ಯತೆ ಪಡೆಯಬೇಕು.
- ಮತ ಮನುಜಮತವಾಗಬೇಕು ಪಥ ವಿಶ್ವಪಥವಾಗಬೇಕು ಮನುಷ್ಯ ವಿಶ್ವಮಾನವನಾಗಬೇಕು

ಹಸನಾದ ಮನಸ್ಸು ಹೊಸನಾದದ ಪ್ರೀತಿಯನ್ನು ಹರಿಸಬಲ್ಲದು. ಪ್ರಜ್ಞೆ ಸದಾಎಚ್ಚರದಲ್ಲಿದ್ದರೆ ಅಮಂಗಳಕ್ಕೆ ಆಸ್ಪದವೆಇರುವುದಿಲ್ಲ.ಕವಿ ಋಷಿ ಸಂತರ ಮಾದರಿಗಳು ನಮ್ಮೆದುರಿಗಿವೆ ಹೀಗಾಗಿ ಕಷ್ಟದ ಸಂದರ್ಭದಲ್ಲೂ ಸ್ಥೈರ್ಯ ಕಳೆದುಕೊಳ್ಳದ ಪ್ರಮೆಯೇಇಲ್ಲ

ಡಿಸಂಬರ೨೯ ಕುವೆಂಪು ಅವರಜನ್ಮ ದಿನವನ್ನು ವಿಶ್ವ ಮಾನವ ದಿನವನ್ನಾಗಿಆಚರಿಸಲಾಗುತ್ತದೆ. ಸರ್ವರು ವಿಶ್ವ ಮಾನವತ್ವದಕಲ್ಪನೆಗೆ ನಮ್ಮೆದೆಗಳಲ್ಲಿ ನೆಲೆ ಕೊಡಬೇಕಾದ ದಿನ. ಮನುಜಮತ ವಿಶ್ವಪಥ ಸರ್ವೋದಯ ಸಮನ್ವಯ ಪೂರ್ಣದೃಷ್ಟಿ ಈ ಪಂಚಮಂತ್ರಗಳು ಇಂದಿನ ದೃಷ್ಟಿಯಾಗಬೇಕಾಗಿದೆ. ವಿಶ್ವ ಮಾನವರಾಗುವುದೆಂದರೆ ಪ್ರತಿಯೊಬ್ಬರ ವ್ಯಕ್ತಿತ್ವವುಎಲ್ಲ ಬಗೆಯಜಾತಿ ಮತ ಪಂಥ ವರ್ಣ ವರ್ಗದೇಶ ಭಾಷೆಇತ್ಯಾದಿ ಉಪಾದಿಗಳಿಂದ ಮುಕ್ತಗೊಂಡುಅನಿಕೇತನ ಪ್ರಜ್ಞೆಯಲ್ಲಿ ಅರಳಿಕೊಳ್ಳಬೇಕು ಎಂಬುದು ಕುವೆಂಪು ಅವರ ಮನುಜ ಮತದಧ್ಯೇಯವಾಗಿದೆ. ಇದನ್ನುಎಲ್ಲರು ಸಾಕ್ಷಾತ್ಕರಿಸಿಕೊಂಡಾಗ 'ವಿಶ್ವ ಮಾನವ ದಿನದ' ಸಾರ್ಥಕ್ಯ ವಾಗುತ್ತದೆ.

**ಕೊನೆಗೆ ಟಿಪ್ಪಣಿ**

(೧) ಇಕ್ಷುಗಂಗೋತ್ರಿ, (೨) ಕೋಗಿಲೆ ಮತ್ತು ಸೋವಿಯಟ್‌ರಷ್ಯಾ ಪು. (೩) ಇಕ್ಷುಗಂಗೋತ್ರಿ, (೪) ಶ್ರೀ ರಾಮಾಯಣದರ್ಶನಂ ಸಂಚಿಕೆ , (೫) ಗೃಹ ಗೃಹ ತಪಸ್ವಿನಿ , (೬)ಗೃಹ ಗೃಹ ತಪಸ್ವಿನಿ ೭.ಅನಿಕೇತನ

**ಆಕರ ಗ್ರಂಥಗಳು:**


1. ಪ್ರೇಮ ಕಾಶ್ಮೀರ
2. ಕೋಗಿಲೆ ಮತ್ತು ಸೋವಿಯಟ್‌ರಷ್ಯಾ
3. ಅನಿಕೇತನ

4. ಬೆರಳ್ಗೆ ಕೊರಳು
5. ಶ್ರೀ ರಾಮಾಯಣದರ್ಶನಂ
6. ತಪೋನಂದನ
7. ಮನೆ ಮನೆಯ ತಪಸ್ವಿನಿ

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಕುವೆಂಪು ಪ್ರಕೃತಿ ಚಿಂತನೆ

**ದೀಪ್ತಿ.ಡಿ.ಬಿ**
**ಕನ್ನಡ ಸಹಾಯಕ ಪ್ರಾಧ್ಯಾಪಕರು**
**ಎ.ಐ.ಬಿ.ಎಂ.ಕಾಲೇಜು**
**ಎ.ಐ.ಟಿ. ಕ್ಯಾಂಪಸ್**
**ಚಿಕ್ಕಮಗಳೂರು-೫೭೭೧೦೨**

'ಕುವೆಂಪು' ಎಂಬ ಕಂಪು ಮಲೆನಾಡ ಪಸರಿಸಿದೆ ಗಂಧದ ಸುಗಂಧವ ಬೀರುತ್ತಾ ಜಗತ್ತನ್ನು ಮುಟ್ಟಿದೆ ಓ ಚೇತನ ಕುಪ್ಪಳ್ಳಿಯ ಕುವರ...........

ಕನ್ನಡ ಸಾಹಿತ್ಯ ಲೋಕದ 'ನವ ನವೋನ್ಮೇಶ ಶಾಲಿನಿ' ಕುವೆಂಪು ಕೇವಲ ನಾಮವಲ್ಲ ಕರ್ನಾಟಕ ಚರಿತ್ರೆಯ ವಿರಾಟ ಪ್ರಜ್ಞೆ ಎಂದರೆ ತಪ್ಪಾಗಲಾರದು.

ರನ್ನ, ಪಂಪ, ಬಸವಣ್ಣ, ಕುಮಾರವ್ಯಾಸ, ಕನಕದಾಸ, ಹೀಗೆ ಮಹಾನ್ ವ್ಯಕ್ತಿಗಳ ಪ್ರವರ್ತಕರ ಸಾಲಿಗೆ ಸೇರುವ ಮಾನವದರ್ಶ ವ್ಯಕ್ತಿ ಮಹಾಕವಿ ಕುವೆಂಪು.

ಇಪ್ಪತ್ತನೆಯ ಶತಮಾನ ನಮ್ಮ ದೇಶಕ್ಕೆ ನೀಡಿದ ಮಹತ್ವದ ಕೊಡುಗೆಗಳಲ್ಲಿ ಕುವೆಂಪು ಕೂಡ ಒಬ್ಬರು ನಮ್ಮ ಕರ್ನಾಟಕ ಬದುಕಿನ ಭಾಗವಾಗಿರುವ ಕುವೆಂಪು ಭೂತ, ವರ್ತಮಾನ, ಭವಿಷ್ಯತ್ತಿನ ನಾಯಕರಾಗಿದ್ದಾರೆ. ಭಾರತದ ಕಲೆ, ಸಾಂಸ್ಕೃತಿಕ ಚರಿತ್ರೆಯನ್ನು ರೂಪಿಸಿದ ಈ ಕವಿಯ ಪ್ರಾಕೃತಿಕ ಕೊಡುಗೆ ಅಪಾರವಾದದು.

ಡಿಸೇಬರ್ ೨೯, ೧೯೦೪ರಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದ ಇವರು ನಿಜಕ್ಕೂ ಪುಣ್ಯವಂತರು. ಪ್ರಕೃತಿಯ ಮಡಿನಲ್ಲಿಯೇ ಬಾಲ್ಯವನ್ನು ಕಳೆದು ವಿದ್ಯಾಭ್ಯಾಸ ಮಾಡಿದ ಕುವೆಂಪುರವರಿಗೆ ಪ್ರಕೃತಿಯೇ ವರದಾನವಾಯಿತು. ಪ್ರಕೃತಿ, ಮಲೆನಾಡು ಅವರ ಜೀವನದ ಭಾಗವಾಗಿತ್ತು. ಎಷ್ಟರ ಮಟ್ಟಿಗೆ ಎಂದರೆ ಕಥೆ, ಕಾದಂಬರಿ, ಕವಿತೆಗಳು ಪ್ರಕೃತಿಯ ಒಡನಾಟದಲ್ಲಿಯೇ ಮೂಡಿಬಂದವು.

ತಮ್ಮ ಕವಿತೆಯೊಂದರಲ್ಲಿ ಕುವೆಂಪುರವರು ತಾವು ಹುಟ್ಟಿ ಬೆಳೆದ ಊರನ್ನು ಈ ರೀತಿಯಾಗಿ ಪರಿಚಯಿಸಿಕೊಳ್ಳುತ್ತಾರೆ. ತೀರ್ಥಹಳ್ಳಿಯ ಕಳೆದು ತಾಯಿ ತುಂಗೆಯ ದಾಟಿ ಒಂಭತ್ತು ಮೈಲಿಗಳ ದೂರದಲ್ಲಿ ನಮ್ಮೂರು ಕುಪ್ಪಳ್ಳಿ, ಈ ಸಾಲುಗಳನ್ನು ಗಮನಿಸಿದರೆ ತಾವು ಹುಟ್ಟಿರುವ ಮಲೆನಾಡಿನ ಬಗ್ಗೆ ಅವರಿಗಿರುವ ಅಭಿಮಾನವನ್ನು ಕಾಣಬಹುದು.

ಕುವೆಂಪುರವರು ಕರ್ನಾಟಕ, ಕನ್ನಡ ಮಣ್ಣನ್ನು ವಿವರಿಸುವಾಗ ಹೇಳುವ ಮಾತುಗಳು ಎಂತಹ ಕನ್ನಡಿಗನ ಎದೆಯನ್ನು ಕೂಡ ಝಲ್ಲೆನಿಸುತ್ತದೆ. ಕರ್ನಾಟಕವೆಂಬುದು ಬರಿ ಹೆಸರೆ ಮಣ್ಣಿಗೆ ಇದು ಮಂತ್ರ ಕಣ, ಶಕ್ತಿ ಕಣಾ, ಎಂದಿದ್ದಾರೆ. ಕುವೆಂಪು ಎನ್ನುವ ಹೆಸರು ಕೂಡಾ ಇಂದು ನಮ್ಮ ಕನ್ನಡಿಗರಿಗೆ ಮಂತ್ರವೂ ಹೌದು ಶಕ್ತಿಯು ಹೌದು.

ನೂರು ವರ್ಷಗಳ ಹಿಂದೆ ನಿಜಕ್ಕೂ ಮಲೆನಾಡು ಸ್ವರ್ಗವಾಗಿತ್ತು, ನಂದನವಾಗಿತ್ತು, ರಮಣೀಯವಾದ ಸೌಂದರ್ಯವಿತ್ತು, ನಿತ್ಯಹರಿದ್ವರ್ಣದ ಕಾಡುಗಳು ಸುತ್ತಲೂ ಮನೆಗಳು, ಹರಿಯುವ ನದಿಗಳು, ವಿವಿಧ ಜಾತಿಯ ಪಕ್ಷಿ ಸಂಕುಲಗಳು, ಇಂಥಹ ಪ್ರಕೃತಿಯ ಮಡಿಲಲ್ಲಿ ಬಾಲ್ಯವನ್ನು ಕಳೆದ ಅವರಿಗೆ ಮಲೆನಾಡು ತಪೋಭೂಮಿಯಾಯಿತು. ಪ್ರಕೃತಿ ಕುರಿತ ಅವರ ಆರಾಧನಾ ದೃಷ್ಟಿ ಕುವೆಂಪು ಅವರ ಪ್ರಜ್ಞೆಯ ಅವಿಚ್ಛಿನ್ನ ಭಾಗವೇ ಆಗಿತ್ತು.

ಎಲ್ಲಿ ನೋಡಿದರೂ ಕಾಡು ದಟ್ಟವಾದ ಅರಣ್ಯ ಶ್ರೇಣಿ ಕಾಡುಗಳ ಮಧ್ಯೆ ಬದುಕನ್ನು ಕಳೆಯುತ್ತಾ ಬಂದ ಅವರಿಗೆ ಪ್ರಕೃತಿಯು ರಕ್ತಗತವಾಗಿ ಬಂತು. ತನ್ನ ಸುತ್ತಮುತ್ತಲಿನ ಪ್ರಕೃತಿಯ ಸೌಂದರ್ಯಕ್ಕೆ ಮನ ಸೋಲುತ್ತಿದ್ದ ಕುವೆಂಪು ಅವರ ಮನಸ್ಸು ಪ್ರಕೃತಿ ಚಿಂತನೆ ಯತ್ತ ಹರಿಯಿತು.

ಬಿ.ಎ ಪದವಿ ವ್ಯಾಸಂಗವನ್ನು ಮೈಸೂರು ಮಹಾರಾಜ ಕಾಲೇಜಿನಲ್ಲಿ ಕಲಿಯುತ್ತಿರುವಾಗ ೧೯೨೪ರಲ್ಲಿ ಇದ್ದ ಐರಿಷ್ ದೇಶದ ಪ್ರಸಿದ್ಧ ಇಂಗ್ಲಿಷ್ ಕವಿ ಹೆಚ್ಚ್.ಜಿ.ಕಸ್ಸಿನ್ಸ್ ಮೈಸೂರಿಗೆ ಭೇಟಿ ನೀಡಿದರು. ತಾವು ಬರೆದ ಕವಿತೆಯನ್ನು ಕಸ್ಸಿನ್ಸ್ ಬಳಿಯಲ್ಲಿ ಓದಿದಾಗ ಅವರು ಹೀಗೆ ಹೇಳಿದರು ನಿಮ್ಮದಲ್ಲದ ಭಾಷೆಯಲ್ಲಿ ಅಭಿವ್ಯಕ್ತಿಗೊಳಿಸಲು ಸಾಧ್ಯವೇ? ನಿಮ್ಮದಲ್ಲದ ಪರಕೀಯ ಭಾಷೆಯಲ್ಲಿ ನೀವು ಸಾಧಿಸಲಾರಿರಿ ಎಂದು ತಿಳಿ ಹೇಳಿದಾಗ ನಿರಾಶೆಗೊಂಡ ಯುವ ಕವಿಯನ್ನ ಕನ್ನಡದ ಸರಸ್ವತಿ ದೇವಿ ತನ್ನತ್ತ ಬರ ಮಾಡಿ ಕೊಂಡಳು.

ಅಂದೇ ಅವರ ಸಾಹಿತ್ಯ ಸಾಧನೆಗೆ ಅಡಿಪಾಯವಾಯಿತು. ಪ್ರಕೃತಿಯೇ ವರದಾನವಾದಳು. ಕುವೆಂಪು ಅವರು ಬರೆದ ಇಂಗ್ಲಿಷ್ ಪದ್ಯಗಳು ಕಸ್ಸಿನ್ಸ್‌ರವರಿಂದ ಟೀಕೆಗೆ ಒಳಗಾದ ಬಳಿಕ ಕುವೆಂಪು ಕನ್ನಡದಲ್ಲಿ ಬರೆಯ ತೊಡಗಿದರು ಅವರ ಮೊದಲ ಕಾವ್ಯ ಸಂಕಲನ '**ಕೊಳಲು**'. ಈ ಪುಸ್ತಕವನ್ನು ಓದಿದಾಗ ಇಲ್ಲೂ ಪ್ರಕೃತಿಯ ನವ ಚೇತನ ಹೊರ ಹೊಮ್ಮಿದೆ ದಟ್ಟವಾದ ಕಾಡಿನಲ್ಲಿ ಬದುಕಿದ ಅವರ ಕಾವ್ಯಗಳಿಗೆ ಪ್ರಕೃತಿಯೇ ದಾರಿ ದೀಪವಾಯಿತು.

'ಕಾಡಿನ ಕೊಳಲಿದು ಕಾಡು ಕವಿಯುನಾ
ನಾಡಿನ ಜನರೊಲಿದು ಆಲಿಪುದು
ಬೃಂದೆಯ ನಮದನ ಕಂದನು ಬಂದು
ಗೊಲ್ಲನ ಕೊಳಲಲಿ ನಿಂದಿಹನೆಂದು
ಭಾವಿಸಿ ಮನ್ನಿಸಿ ಆಲಿಪುದು'

ಹೀಗೆ ಪ್ರಕೃತಿ ಸೌಂದರ್ಯದ ಸನ್ನಿಧಿಯಲ್ಲಿ ಮೈಮರೆತು ಹೊರ ಹೊಮ್ಮಿದ ವಿರಾಟ್ ಪ್ರತಿಭೆಯೇ ನಮ್ಮ ಕುವೆಂಪು. ಈ ಮೇಲಿನ ಸಾಲುಗಳನ್ನು ಗಮನಿಸಿದಾಗ ಪ್ರಕೃತಿಯ ಮಡಿಲು ಕುವೆಂಪುರವರಿಗೆ ಎಷ್ಟೊಂದು ಒಡನಾಡಿಯಾಗಿತ್ತು ಎಂಬುದು ತಿಳಿದು ಬರುತ್ತದೆ.

ಕುವೆಂಪುರವರು ಬರೆದ ಮೊದಲ ನಾಟಕ 'ಜಲಗಾರ' ಇಲ್ಲಿ ರೈತ ತನ್ನ ನೇಗಿಲ ಗರಿಯಲ್ಲಿ ಜೀವನ ಕಾಣುತ್ತಾನೆ. ಇಲ್ಲಿ ಬರುವ ಜಲಗಾರ ಮತ್ತು ರೈತನ ನಡುವಿನ ಸಂಭಾಷಣೆಯಲ್ಲಿಯೂ ಪ್ರಕೃತಿಯ ಮಡಿಲಿನಲ್ಲಿ ನೇಗಿಲನ್ನು ಹಿಡಿದು ರೈತನು ಉಳುವುದರಲ್ಲಿಯೇ ದೇವರನ್ನು ಕಾಣಬಹುದು ಎಂದು ಜಲಗಾರ ಹೇಳಿರುವುದರಲ್ಲಿ ಪ್ರಕೃತಿಯ ಪ್ರೀತಿಯನ್ನು ಗಮನಿಸಬಹುದು. ಇಷ್ಟಕ್ಕೆ ನಿಲ್ಲದ ಈ ನಾಟಕದಲ್ಲಿ ಪ್ರಕೃತಿಯ ಚಿಂತನೆಯ ಮುಂದುವರಿದ ಭಾಗವನ್ನು ಗಮನಿಸಬಹುದು.

ಬನದ ಕೆಂದಳಿರಲ್ಲಿ ಬಗ್ಗಿಸುವ ಕೋಗಿಲೆಯೇ, ನಿನ್ನ ಪುಗಲಿಂಚರದಿ ಪರಮವಾಣಿಯ ಕೇಳದವಗೆ ಕಿವಿಯಿದ್ದರೇನು? ಎಲೆ ರಮ್ಯಾವನಗಳಿರ ನಿಮ್ಮ ಸೌಂದರ್ಯದಲ್ಲಿ ಪರಮಾತ್ಮನಂ ಕಾಣದವರಿದ್ದರೇಂ ಕಣ್ಣೆರಡು ಜಗದ ದೇಗುಲದಲ್ಲಿ ಜಗದುದಯ ಕಾರಣನ ಕಾಣದವನೆಂತು ಕಾಣ್ಬನು ಶಿವನ ಗುಡಿಯಲ್ಲಿ?

ಪ್ರಕೃತಿಯಲ್ಲಿಯೇ ದೇವರನ್ನು ಕಾಣದ ರೈತ ಶಿವನ ದೇವಾಲಯದಲ್ಲಿ ದೇವರನ್ನು ಕಾಣುವನೆ? ಎಂಬುದು ಇಲ್ಲಿ 'ಜಲಗಾರ'ನ ಪ್ರಶ್ನೆಯಾಗಿದೆ. ಇಷ್ಟಕ್ಕೆ ನಿಲ್ಲದ ಪ್ರಕೃತಿಯ ಸೌಂದರ್ಯ ಜಲಗಾರನ ಮಾತುಗಳೊಂದಿಗೆ ಮುಂದುವರೆದಿದೆ. ನಿಜಕ್ಕೂ ಕವಿಯ ಶೈಲಿ ಮೆಚ್ಚಬೇಕು ವಿಶೇಷವಾದ ಕಾವ್ಯ ರಚನೆ ಎಂಥವರನ್ನು ಬೆರವುಗೊಳಿಸುತ್ತದೆ ಅದಕ್ಕೆ ಸಂಬಂಧಿಸಿದಂತೆ ಈ ಸಾಲುಗಳನ್ನು ಗಮನಿಸಬಹುದು.

ತಣ್ಗದಿರ ಬೆಂಗದಿರನರಿಲುಗಳೆ ಸೊಡರುಗಳು ಸುಮಮಾಲೆ ಅಲರುಗಳ ಚೆಲ್ಲುತ್ತಿರುವಡವಿಗಳು ಮುನ್ನೀರು ತೊರೆ ಕೆರೆಗಳೇ ಪಂಚಪಾತ್ರೆ ಬಿತ್ತರದ ಬಾಂಧಳವೇ ಗೋಪುರಂ! ಹೊಳೆಗಳಲ್ಲಿ ಹರಿವ ಸಲಿಲವೇ ತೀರ್ಥ। ಸುವಗಂಧವೇ ಧೂಪ.

ಭಗವಂತನನ್ನು ಪ್ರಕೃತಿಯಲ್ಲೇ ಕಾಣಬಹುದು ದೇವಾಲಯದಲ್ಲಿ ಶಿವನಿಲ್ಲ ಪ್ರಕೃತಿಯ ಮಡಿಲಿನಲ್ಲೇ ಶಿವನಿದ್ದಾನೆ. ಪ್ರಕೃತಿಯಲ್ಲೇ ಶಿವನ ಪೂಜೆ ನಡೆಯುತ್ತದೆ ಎಂದು ಜಲಗಾರ ಹೇಳುವುದರಲ್ಲಿ ಕುವೆಂಪುರವರ ಪ್ರಾಕೃತಿಕ ದೈವವನ್ನು ಗಮನಿಸಬಹುದು.

ಕುವೆಂಪು ಅವರನ್ನು ಕುರಿತು ಕನ್ನಡದ ಮಹತ್ವದ ಲೇಖಕರಾದ ಪಿ ಲಂಕೇಶ್ ರವರು ಹೇಳುವಂತೆ "ಈ ಶತಮಾನದ ಆದಿ ಭಾಗದಲ್ಲಿ ಗೋಂಡಾರಣ್ಯದ ನಡುವಿನ ಜನ ಸಮುದಾಯದಲ್ಲಿ ಹುಬ್ಬಿದ ಕುವೆಂಪು ಬದುಕಿದ ರೀತಿ ಕುತೂಹಲಕಾರಿಯಾಗಿದೆ" ಇಲ್ಲಿಯ ಅರಣ್ಯ ಸುತ್ತಣ ಜಗತ್ತು ಸಸ್ಯ ಜೀವರಾಶಿಗಳು ಮೂಡಿ ಮುಳುಗುವ ಸೂರ್ಯ ಹಗಲು ರಾತ್ರಿಗಳ ಉಯ್ಯಾಲೆಯಲ್ಲಿ ತೂಗುವ ಜಗತ್ತು ಇವೆಲ್ಲಾ ನಿಜಕ್ಕೂ ಇಷ್ಟವಾದದ್ದು.

ಕುವೆಂಪು ಅವರು ರಚಿಸಿರುವ ಎರಡು ಮಹಾ ಕಾದಂಬರಿಗಳು "ಕಾನೂರು ಹೆಗ್ಗಡತಿ" ಹಾಗೂ "ಮಲೆಗಳಲ್ಲಿ ಮದುಮಗಳು" ಇವುಗಳಲ್ಲಿಯೂ ಪ್ರಕೃತಿಯ ವೈಶಿಷ್ಟತೆಯನ್ನು ಗಮನಿಸಬಹುದು.

ಕುವೆಂಪುರವರು ರಚಿಸಿರುವ "ಕಾನೂರು ಹೆಗ್ಗಡತಿ" ಕೃತಿಯನ್ನು ರಾಮಾಯಣಕ್ಕೂ "ಮಲೆಗಳಲ್ಲಿ ಮದುಮಗಳು" ಕಥನವನ್ನು ಮಹಾಭಾರತಕ್ಕೂ ಹೋಲಿಸಿದ್ದಾರೆ. ಈ ಎರಡು ಕೃತಿಗಳು ಸಾಹಿತ್ಯದ ಮೌಲ್ಯವನ್ನು ಸಾರುವುದರ ಜೊತೆಗೆ ಮಲೆನಾಡಿನಲ್ಲಿ ನಡೆಯುವ ಈ ಕಥನಗಳು ಕುವೆಂಪುರವರ ಪ್ರಕೃತಿಯ ಪ್ರೀತಿಗೆ ಉದಾಹರಣೆಗಳಾಗಿವೆ.

ಇಪ್ಪತ್ತನೇಯ ಶತಮಾನದಲ್ಲಿ ಹಳ್ಳಿಗಳಲ್ಲಿ ಉಂಟಾದ ಸವಾಲುಗಳನ್ನು ಕಾದಂಬರಿಗಳು ಸೂಕ್ಷ್ಮವಾಗಿ ತಿಳಿಸುವುದರ ಜೊತೆಗೆ ಹಳ್ಳಿಯ ಪರಿಸರ ಅಲ್ಲಿನ ಮಣ್ಣಿನ ವಾಸನೆ ಪ್ರಕೃತಿಯ ಸೊಬಗನ್ನು ಮನೋಹರವಾಗಿ ವರ್ಣಿಸಲಾಗಿದೆ. ಪ್ರಕೃತಿಯ ಮಡಿನೊಳಗಿನ ಪ್ರಮಾಣದಂತಿದೆ. ಈ ಕಾದಂಬರಿಗಳು ಮಾನವ ಜಗತ್ತಿನ ಬೆಳವಣಿಗೆಯಲ್ಲಿ ಪ್ರಕೃತಿಯ ವಿರುದ್ಧವಾಗಿ ಮೇಲು–ಕೀಳು, ಶ್ರೇಷ್ಠ–ಕನಿಷ್ಠ ಎಂಬ ಅಮಾನವೀಯವಾಗಿ ರೂಪುಗೊಂಡ ವ್ಯವಸ್ಥೆಯನ್ನು ಕಿತ್ತೊಗೆಯಬೇಕು ಎಂಬುದು ಕುವೆಂಪುರವರ ನಂಬಿಕೆಯಾಗಿತ್ತು.

ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ, ಇವು ಕುವೆಂಪುರವರ ಪಂಚತಂತ್ರಗಳು. ಈ ಪಂಚತಂತ್ರಗಳನ್ನು ಯಾವ ಪ್ರಜೆಯು ಮೇರೆಯೋ ಹಾಗಿಲ್ಲ. ಒಂದು ಕಡೆ ಸಮಾಜದ ಏಕತೆಯನ್ನು ದೃಷ್ಟಿಕೋನವಾಗಿರಿಸಿಕೊಂಡರೆ ಮತ್ತೊಂದೆಡೆ ತಾವು ಹುಟ್ಟಿರುವ ಪ್ರಕೃತಿಯ ಮಡಿಲಿಗಾಗಿ ಹಂಬಲಿಸುವ ಜೀವ ಕುವೆಂಪುರವರದಾಗಿತ್ತು.

ಕುವೆಂಪು ಕನ್ನಡದ ಅಪ್ಪಟ ನೆಲದ ವಿವೇಕದ ಬರಹಗಾರ. ಇಡೀ ಶತಮಾನದ ನಿಸರ್ಗ ವಿವೇಕದ ಪ್ರತೀಕವಾಗಿ ಬರೆದ ಕುವೆಂಪು ಈ ಕಾಲದ ಯುಗ ಪ್ರಜ್ಞೆಯಾಗಿದ್ದಾರೆ. ನಿಜವಾದ 'ನವನವೋನ್ಮೇಷ' ಶಾಲಿನಿ ಪ್ರತಿಭೆ ಕುವೆಂಪು.

ಕೆಲಸವಿಲ್ಲದೆ ಬಿಡುವಾಗಿ ಕುಳಿತಾಗ ಒಮ್ಮೆ ಅವರು ಬರೆದ ಕವಿತೆಯೂ ನಿಸರ್ಗದ್ದೆ ಆಗಿದೆ. ಕುವೆಂಪುರವರ 'ಹಿರೇಯಹೂವು' ಕವಿತೆಯನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ಮಾಡಲು ಏನೂ ಕೆಲಸವೇ ಇಲ್ಲ; ಓದಲು ಮನಸ್ಸಿಲ್ಲ............................ಎಂದು ಹೇಳುತ್ತಾ ಅವರ ದೃಷ್ಟಿ ಹರಿಯುವುದೇ 'ಹಿರಿಯ ಹೂವಿನ ಕಡೆಗೆ. ಹಿರಿಯ ಹೂವಿನ ಸೌಂದರ್ಯಕ್ಕೆ ಮನಸೋತ ಕವಿ ಹೇಳುವ ಸಾಲುಗಳು ನಿಜಕ್ಕೂ ವಿಶೇಷವಾದದ್ದು.

ಕಾಮನಬಿಲ್ಲಿನ ಮಗಳೆನಲೇನು
ಹೇಳೈ ಎಲೆ ಹೂವೆ?
ಪ್ರೇಮದ ಬಳ್ಳಿಯ ಮುಗುಳೆನಲೇನು,
ನೆಲಿದೊಲೆಯುವ ಹೂವೆ?
ಹೋಲಿಸಲೆಳಸುವುದೇತಕೆ ನಾನು?
ಅನುಪಮವಾಗಿಹೆ ಕುಸುಮವೇ ನೀನು!

ಕುವೆಂಪುರವರ ನಿಸರ್ಗದ ವರ್ಣನೆ ರಮಣೀಯವಾದದು, ಭೂತಾಯಿಯ ಮಡಿಲಿನಲ್ಲಿ ಕುಳಿತು ಆಕಾಶದವರೆಗೂ ಯೋಚಿಸುವ ಆ ಪದಗಟ್ಟುಗಳು ಕಾವ್ಯದ ಸಾಲುಗಳು, ರಮಣೀಯ ವರ್ಣನೆಗಳು ಎಂತಹ ಮನೋಹರ ಇಂತಹ ಮಹಾನ್ ಕವಿ ಪಡೆದ ಸಹೃದಯರಾದರಾದ ನಾವುಗಳೇ ಧನ್ಯರು.

ಕುವೆಂಪುರವರ ಬಗೆಗೆ ಎಷ್ಟೇ ಹೇಳಿದರೂ ನನ್ನ ದಾಹ ತೀರುತ್ತಿಲ್ಲ. ಬಾಯಾರಿಕೆ ಕಡಿಮೆ ಯಾಗಬಹುದೇ ಹೊರತು ದಾಹವಲ್ಲ. ಮತ್ತೊಮ್ಮೆ ನಾನು 'ಜಲಗಾರ' ನಾಟಕಕ್ಕೆ ಮರಳಿ ಬರುವೆ ಸಾಯಂಕಾಲದ ವೇಳೆ ಭೂದೇವಿ ಬಂದು ಹಾಡುತ್ತಿದ್ದಾಳೆ. ಆಹಾ! ಎಂತಹ ಸಾಲುಗಳು ನಿಜಕ್ಕೂ ಇಂತಹ ನಿಸರ್ಗದ ವರ್ಣನೆ ಒಬ್ಬ ಮಹಾನ್ ಕವಿಯಿಂದ ಮಾತ್ರ ಸಾಧ್ಯ ಅಲ್ಲವೇ? ಹಾಗಾದರೆ ಆ ಸಾಲುಗಳ ನಡುವೆ ಬನ್ನಿ ವಿಹರಿಸೋಣ;

ದೂರದಿಂದ ಮೇಲು ನಡೆಯಲಿ
ಸಂಜೆವೆಣ್ಣು ಬರುವಳು–ಬಹು
ದೂರದಿಂದ ಬರುವಳು,
ನೀಲಗಗನದಾಚೆಯಿಂದ
ನಲಿದು ತೇಲಿ ಬರುವಳು
ತವರೂರಿನಿಂದ ಬರುವಳು
ಸರಸದಿಂದ ಬರುವಳು
ಸರಸದಿಂದ ತೊರೆಯ ತಡಿಯ
ಮೇಲೆ ನಡೆದು ಬರುವಳು.

ಕುವೆಂಪು ಹುಟ್ಟಿ ಬೆಳೆದ ಮಲೆನಾಡಿನಲ್ಲಿ ಮಳೆ ನಿರಂತರ. ಮಳೆಯ ಅನುಭವವನ್ನು ಸವಿದ ಕವಿ ಕುವೆಂಪು ಮಲೆನಾಡಿನಲ್ಲಿ ಕಾಣುವ ಮಲೆಗಾಲದಲ್ಲಿನ ವೈಭವದ ಸವಿಯೂಟವನ್ನು ಕೂಡ ನಮಗೆ ಬಡಿಸಿದ್ದಾರೆ. ಕುವೆಂಪುರವರ 'ವರ್ಷ ವೈಭವ' ಕವಿತೆಯನ್ನು ಒಮ್ಮೆ ಓದಿ ನೋಡಿ ನಿಜಕ್ಕೂ ಮಳೆಗಾಲವು ಹೀಗಿರುತ್ತದೆ ಎಂಬ ಅನುಭವವನ್ನು ತಿಳಿಸಿದ್ದಾರೆ.

'ವರ್ಷ ವೈಭವ' ಕವಿತೆಯಲ್ಲಿ ಮಳೆಗಾಲದ ಅಮಾವಾಸ್ಯೆಯ ರಾತ್ರಿಯನ್ನು ಮನೋಜ್ಞವಾಗಿ ವರ್ಣಿಸಿದ್ದಾರೆ. ಮಳೆಗಾಲದ ರುದ್ರ ರಮಣೀಯ ಸೌಂದರ್ಯವನ್ನು ತಮ್ಮದೇ ಆದ ಶೈಲಿಯಲ್ಲಿ ಅನಾವರಣಗೊಳಿಸಿದ್ದಾರೆ. ಕೋಮಲ ಸಂಗತಿಗಳಲ್ಲಿ ಸೌಂದರ್ಯ ಇರುತ್ತದೆ ಎಂಬ ಮಾತನ್ನು ತಿರಸ್ಕರಿಸಿ ಭೀಕರತೆಯ ಭಯದ ವಾತಾವರಣದಲ್ಲಿಯೂ ಸೌಂದರ್ಯವಿರುತ್ತದೆ ಎನ್ನುವ ವಿಶ್ವಸತ್ಯ ತತ್ವವನ್ನು ಕುವೆಂಪುರವರು ಸಾದರ ಪಡಿಸಿದ್ದಾರೆ.

ಕದ್ದಿಂಗಳು; ಕಗ್ಗತ್ತಲು;
ಕಾರ್ಗಾಲದ ರಾತ್ರಿ

ಸಿಡಿಲ್ಮಿಂಚಿಗೆ ನಡುಗುತ್ತಿದೆ
ಪರ್ವತ ವನ ಧಾತ್ರಿ....................

ಕಾರ್ಗಾಲದ ರಾತ್ರಿಯ ಸಿಡಿಲು ಮಿಂಚು ಹಾಗೂ ಬಿರುಗಾಳಿಯೊಂದಿಗೆ ಲಯ ಭೀಷಣವಾಗಿದೆ. ಇದು ಮಳೆಯ ವೈಭವವಲ್ಲ, ಮಳೆ ಭೈರವವಾಗಿದೆ ಎಂದು ಕವಿ ಕೊನೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಒಟ್ಟಾರೆ ಕನ್ನಡದ ಸಾರಸತ್ವ ಲೋಕವನ್ನು ಶ್ರೀಮಂತಗೊಳಿಸಿದ ಕವಿ ಕುವೆಂಪು. ಇವರ ಸಾಹಿತ್ಯ ಎಂತವರನ್ನು ಬೆರಗುಗೊಳಿಸುವಂತದ್ದು. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಅವರ ಪ್ರತಿಭೆ, ಪಾಂಡಿತ್ಯ ಗಹನವಾಗಿ ಮೂಡಿದೆ. ಜೀವನದ ಹೊಸ ಅರ್ಥಗಳನ್ನು ಹೊಮ್ಮಿಸಿದೆ. ಇಂತಹ ಮಹಾನ್ ಕವಿ ಕನ್ನಡದ ಸಾಹಿತ್ಯ ಲೋಕಕ್ಕೆ ಸದಾ ಮಿನುಗುವ ನಕ್ಷತ್ರವಿದ್ದಂತೆ:

### ಆಕರ ಗ್ರಂಥಗಳು

೧. ಕನ್ನಡ ನುಡಿ ಪಠ್ಯ– ಬಿ.ಕಾಂ. ನುಡಿ ಸ್ಪಂದನ –೨

೨. ವಿಶ್ವ ಮಾನವ – ಕುವೆಂಪು. ಪ್ರಕಾಶಕರು– ಕೆ.ವೈ ನಾರಾಯಣ ಸ್ವಾಮಿ.

೩. ವಿಶ್ವಪಥ– ೨. ಬಿ.ಬಿ.ಎ ಕನ್ನಡ ಭಾಷಾ ಪಠ್ಯ. ಪ್ರಧಾನ ಸಂಪಾದಕರು.

ಪ್ರೋ.ಜಿ.ಪ್ರಶಾಂತ ನಾಯಕ

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಕುವೆಂಪು ಕಂಡಂತೆ ಪ್ರಕೃತಿ ಮತ್ತು ಆಧ್ಯಾತ್ಮಿಕೆ

ಡಾ.ಮಂಜುಳಾಕ್ಷಿ ಎಲ್.
ಸಹಾಯಕ ಪ್ರಾಧ್ಯಾಪಕಿ (ಮುಖ್ಯಸ್ಥೆ)
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಯ,ಕಲಬುರಗಿ

ಕುವೆಂಪು ಎಂಬ ಕಾವ್ಯನಾಮದಿಂದ ಪ್ರಸಿದ್ದರಾದ ಕುಪ್ಪಳ್ಳಿ ವೆಂಕಟ್ಟ ಪುಟ್ಟಪ್ಪನವರು ಒಬ್ಬ ಶ್ರೇಷ್ಠ ಕವಿ. ಆಧುನಿಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದಷ್ಟೇ ಅಲ್ಲದೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಯಶಸ್ಸನ್ನು ಗಳಿಸಿದ ಧೀಮಂತ ಕವಿ. ಕುವೆಂಪುರವರ ಕಾವ್ಯದ ಶ್ರೇಷ್ಠತೆಯಿರುವುದು ಸಮಕಾಲೀನ ಜೀವನದ ಅಂಶಗಳಾದ ನಿಸರ್ಗದ ಚೆಲುವು, ದೇಶ ಪ್ರೇಮ, ಆದರ್ಶಪ್ರಿಯತೆ, ಕ್ರಾಂತಿಯ ಮನೋಭಾವ ಹಾಗೂ ಆಧ್ಯಾತ್ಮಿಕತೆಯಲ್ಲಿ. ಕುವೆಂಪು ಅವರು ಮೂಲತಃ ಕ್ರಾಂತಿಕವಿ. ಸಾಮಾಜಿಕ ಅನ್ಯಾಯಗಳ ಬಗ್ಗೆ ನಿರ್ಭಯವಾಗಿ ಪ್ರತಿಭಟಿಸಿದವರು. ಸಾವಿರಾರು ವರ್ಷಗಳಿಂದ ಭಾರತೀಯ ಧರ್ಮದಲ್ಲಿದ್ದ ಮೌಢ್ಯತೆ, ಕಂದಾಚಾರ, ಸಂಪ್ರದಾಯ, ಜಾತೀಯತೆಯನ್ನು ತೊಡೆಯುವಲ್ಲಿ ಹಾಗೂ ಪುರೋಹಿತ ಮತ್ತು ಸಾಮ್ರಾಜ್ಯಶಾಹಿಯನ್ನು ಅಂತ್ಯಗೊಳಿಸುವಲ್ಲಿ ಶ್ರಮಿಸಿದವರು. ಅವರ 'ರಾಮಾಯಣ ದರ್ಶನಂ' ಆಧುನಿಕ ಭಾರತೀಯ ಸಾಹಿತ್ಯದ ಶ್ರೇಷ್ಠ ಕೃತಿ. ಎಲ್ಲೆಡೆ ಮಹಿಳೆಯ ಮೇಲೆ ದೌರ್ಜನ್ಯ, ಹಿಂಸೆಗಳು ನಡೆಯುತ್ತಿರುವ ಈ ಹೊತ್ತಿನಲ್ಲಿ ಕುವೆಂಪು ಕಟ್ಟಿಕೊಟ್ಟ ಈ ಚಿತ್ರಣ ಪ್ರಸ್ತುತ ಮತ್ತು ಆದರ್ಶ. ಅವರ ಶೂದ್ರ ತಪಸ್ವಿ ನಾಟಕ, ಶೋಷಣೆ ಮತ್ತು ತಾರತಮ್ಯದ ವರ್ಣ ನೀತಿಗೆ ಮುಖಾಮುಖಿಯಾದ ನಾಟಕ. ತಾವು ನಂಬಿದ ಕಾವ್ಯ ತತ್ವವನ್ನು ತಮ್ಮ 'ರಸೋ ವೈ ಸಃ'ದಲ್ಲಿ ಹೇಳಿದ್ದಾರೆ. ಕನ್ನಡಕ್ಕೆ ಹೊಸ ನುಡಿಗಟ್ಟು ಮತ್ತು ಹೊಸ ಕಲ್ಪನೆಗಳನ್ನು ನೀಡಿದವರು ಕುವೆಂಪುರವರು. ಕಲ್ಪನಾಶಕ್ತಿಯೊಂದಿಗೆ, ಬೌದ್ಧಿಕ ಸಾಮರ್ಥ್ಯವನ್ನು ಮೇಳೈಸಿ, ನೈತಿಕ ಮತ್ತು ಸೌಂದರ್ಯ ಮೀಮಾಂಸೆಯನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ದವರು. ಇಂಥ ಅವರ ಜೀವನೋದ್ದೇಶಕ್ಕೆ ನೆರವಾದುದು ಅವರ ಕಾವ್ಯಶಕ್ತಿ.ಪ್ರಸ್ತುತ ಲೇಖನವುಕುವೆಂಪುರವರ ಸಾಹಿತ್ಯದಲ್ಲಿ ಪ್ರಕೃತಿ ಮತ್ತು ಆಧ್ಯಾತ್ಮಿಕತೆಗೆ ಸೀಮೀತಗೊಳಿಸಲಾಗಿದೆ.

ಕುವೆಂಪು ಹಿಂದಿಗಿಂತ ಇಂದುಮುಖ್ಯವಾಗುತ್ತಾರೆ. ಕಾರಣ ಪ್ರಕೃತಿಯ ಅಗಾಧತೆಯ ಎದುರಿಗೆ ಮನುಷ್ಯನ ಸುಖ ದುಃಖದಂತಹ ವಯಕ್ತಿಕ ವಿಚಾರಗಳು ಮುಖ್ಯವಲ್ಲ ಎನಿಸುತ್ತವೆ ಎಂದವರು ಕುವೆಂಪು. ಕಾವ್ಯ ಎಂಬುವುದು ಪ್ರಕೃತಿಯಿಂದ ಹುಟ್ಟಿರುವ ಅನುಭೂತಿ. ಪ್ರಕೃತಿ ಎಂದರೆ ನಮ್ಮ ಅಂತರಂಗದ ವಿಕಾಸಕ್ಕೆ ಸಂಬಂಧಪಟ್ಟಿದ್ದೂಅದರ ಮಹತ್ವವನ್ನು ಅರಿತುಕೊಳ್ಳುವುದು ಪ್ರತಿಯೊಬ್ಬರಿಗೂ ಅಗತ್ಯವಿದೆ.ಕಾವ್ಯ ಮರದಲ್ಲಿ ಎಲೆ ಚಿಗುರಿದಂತೆ ಸಹಜವಾಗಿ ಬರುವಂತಹುದು. ಕುವೆಂಪುರವರಂತೆ ಬೇಂದ್ರೆಯವರು ಸಹ ಪ್ರಕೃತಿಯನ್ನು ಮಾತೃಸ್ವರೂಪಿಯಾಗಿ ಕಂಡವರು. ಮನುಷ್ಯ ಅಸ್ವಾಭಾವಿಕ ಶಿಶುವಿನಂತೆ ಪ್ರಕೃತಿಯ ನಾಶದಲ್ಲಿ ತೊಡಗಿದ್ದಾನೆ. ಯಾವ ಮನುಷ್ಯ ಪ್ರಯತ್ನವೂ ಇಲ್ಲದೆ ಪ್ರಕೃತಿಗೆ ತನ್ನದೇ ಆದ ಲಯವಿದೆ ಎನ್ನುತ್ತಾ ಬೇಂದ್ರೆಯವರು ತಮ್ಮ ಕಾವ್ಯದಲ್ಲಿ ಪ್ರಕೃತಿಯ ವಿವರಗಳನ್ನು ಕಲಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ.

ಕುವೆಂಪು ಅವರನ್ನು ಪ್ರಕೃತಿ ಕವಿ ಎನ್ನುವುದು ರೂಢಿ. ಮೂಲತಃ ಮಲೆನಾಡಿನ ಪ್ರಕೃತಿಯ ಮಡಿಲಿನಲ್ಲಿ ಬೆಳೆದ ಇವರು. ಸೂರ್ಯೋದಯದಿಂದ ಸೂರ್ಯಸ್ತದಯವರೆಗಿನ ಸಮಸ್ತ ಚಟುವಟಿಗಳನ್ನು, ಕಾಲಾಮಾನಕ್ಕೆ ತಕ್ಕಂತೆ ಪ್ರಕೃತಿಯಲ್ಲಾಗುವ ಬದಲಾವಣೆ ಮತ್ತು ವಿಕೋಪಗಳ ಸವಿಯುಂಡವರು. ಪ್ರಕೃತಿಯಲ್ಲಿಯೇ ದೈವತ್ವವನನ್ನು ಕಂಡವರು. ಕುವೆಂಪುರವರು ಪ್ರಕೃತಿ ಋತುಗಳಲ್ಲಿ ನೋಡಿ ಅದರ ಸೌಂದರ್ಯವನ್ನು ಕಾವ್ಯಗಳಲ್ಲಿ ದರ್ಶನ ಮಾಡಿಸಿದ್ದಾರೆ. ಬಾ ಫಲ್ಗುಣ ರವಿ ದರ್ಶನಕೆ" ಕವನದಲ್ಲಿ ಯಜ್ಞದ ಕಲ್ಪನೆ ಸ್ಫುಟವಾಗಿದೆ. ಯಜ್ಞವೆಂದರೆ ಲೋಕಕಲ್ಯಾಣಕ್ಕಾಗಿ ನಡೆಯುವ ಮಹಾನ್ ಕ್ರಿಯೆ. ಲೋಕಹಿತರತನಾದ ಸೂರ್ಯನಿಗಿಂತ ಬೇರೆ ಮಿತ್ರರುಂಟೇ. ಯಜ್ಞದಿಂದಲೇ ಸೃಷ್ಟಿ ಹೊಮ್ಮಿತೆಂಬ ಮಾತು ವೇದಗಳಲ್ಲಿ ಬರುತ್ತದೆ. ಸೂರ್ಯೋದಯದಿಂದ ಪ್ರತೀನಿತ್ಯವೂ ಪ್ರಪಂಚ ಮರುಸೃಷ್ಟಿಗೊಳ್ಳುವುದರಿಂದ ಇದು ಅನ್ವರ್ಥವಾಗುತ್ತದೆ. ಸಾಂಪ್ರದಾಯಿಕವಾದ ಪೂಜೆ, ದೇವರು, ಯಜ್ಞಗಳನ್ನು ನಿರಾಕರಿಸುವ ಕುವೆಂಪು ಅದರ ಜಾಗದಲ್ಲಿ ನಿಸರ್ಗಾರಾಧನೆಯನ್ನು ಇದ್ದು ಅವರ ಕ್ರಾಂತಿಕಾರಕ ಮನೋಭಾವವನ್ನು ತೋರಿಸುತ್ತದೆ. ಕುವೆಂಪು ನಿಸರ್ಗ ಕವಿ ಎಂಬುದಕ್ಕೆ ಸಂಜೆ–ಸೂರ್ಯಾಸ್ತ–ರಾತ್ರಿ ಕುರಿತ ಗೀತೆಗಳು ಸೂರ್ಯೋದಯ ಕುರಿತ ಗೀತೆಗಳು ಸಾಕ್ಷಿಯಾಗಿ ನಿಲ್ಲುತ್ತವೆ– ಸೂರ್ಯೋದಯ ಮತ್ತು ಚಂದ್ರೋದಯ ಪ್ರಕೃತಿಯ ವ್ಯಾಪಾರವಲ್ಲ. ಅದೊಂದು ಅಸಾಧಾರಣ ಆನಂದಮಯ ಘಟನೆ.

ಅದನ್ನು ಅರಿಯದವನು ಕಣ್ಣಿದ್ದೂ ಕುರುಡನಂತೆ ಎನ್ನುವುದು ಅವರ ವಾದ. ಲಲಿತಾದ್ರಿ ಕವನದಲ್ಲಿ ಲಲಿತಾದ್ರಿ ಬೆಟ್ಟವನ್ನು ಸ್ವರ್ಗಕ್ಕೆ ಹೋಲಿಸಿದ್ದಾರೆ. ಲಲಿತಾದ್ರಿ ಭಕ್ತರಿಗೆದೇಗುಲ,ಲೌಕಿಕರಿಗೆ ಸ್ವರ್ಗ, ವೈದಿಕರಿಗೆ ಮುಕ್ತಿ ಎನ್ನುತ್ತಾರೆ

ಮಾತಿಗೊಂದು ಅರ್ಥವೇಕೆ
ಅರ್ಥವಿದ್ದರಷ್ಟೇ ಸಾಕೆ
ಮೋಡಗಳನು ನೋಡಿರಲಿ
ಮಾತು ಅಲ್ಪ ಎಂದು ತಿಳಿ
ಮಾತು–ಅರ್ಥ ಎರಡೂ ವ್ಯತ್ಯಾಸ

ಸ್ವ–ಅರ್ಥವಿರದಿರೆ ಸೌಂದರ್ಯಾರಾಧನೆ ಸಹ ಧರ್ಮದ ದಾರಿ. ಅದರಿಂದಲೂ ಸತ್ಯದ ಸಾಕ್ಷಾತ್ಕಾರ ಸಾಧ್ಯ.ಅದರ ಚೆಲುವು ಊರ್ವಶಿಯನ್ನು ಮೀರಿಸಿದ್ದು 'ಸತ್ತಳೋ ಊರ್ವಶಿ ಸ್ವರ್ಗದಲಿ'ಎನ್ನುತ್ತಾರೆ. ಕವಿ ಮಳೆ–ಚಳಿ ಕುರಿತ ಗೀತೆಗಳು ಮಲೆನಾಡೆಂದರೆ ಮಳೆಯ ನಾಡೂ ಹೌದು. ವರ್ಷವಿಡೀ ಸುರಿಯುವ ಮಳೆ ಕವಿಯನ್ನು ಆಕರ್ಷಿಸಿದೆ. ಮಳೆಗಾಲದಲ್ಲಿಜನರ ಜಡ ಪ್ರವೃತ್ತಿಯಲ್ಲೂ ಪ್ರಕೃತಿ ಎಂದರೆ ಆನಂದಿಸುವ ವಿಷಯ ಎಂದು ಅವರಿಗೆ ಅನ್ನಿಸುತ್ತಿರಲಿಲ್ಲ. ಅವರು ನಿಸರ್ಗದಲ್ಲಿ ಪ್ರತಿದಿನವೂ ಹೊಸತನ್ನು ಕಾಣುತ್ತಿದ್ದರು. ಪ್ರಕೃತಿಯ ವಸ್ತುವಿನೊಂದಿಗೆ ರಸಸಮಾಧಿ ಹೊಂದುತ್ತಿದ್ದರು.ಕುವೆಂಪು ಒಂದೆಡೆ

ನೋಡು ನೋಡು ಕುಳಿರ ಬೀಡು
ಮಾಗಿ ಬರುತಿದೆ
ಹಲ್ಲು ಕಡಿದು ಮುಷ್ಠಿ ಹಿಡಿದುಸೆಟೆದು ಬರುತಿದೆ.

ಇಲ್ಲಿ ಚಳಿಯನ್ನು ಮುದಿಕುರುಬನಿಗೆಹೋಲಿಸಲಾಗಿದೆ. ವಸಂತವನ್ನು ನಿಸರ್ಗದಯೌವ್ವನ ಎನ್ನುವುದಾದರೆ, ಶಿಶಿರವನ್ನು ವೃದ್ಧಾಪ್ಯವಾಗಿದೆ. ಕಾರಣ ಮನುಷ್ಯ ಮತ್ತು ನಿಸರ್ಗ ಇಬ್ಬರಿಗೂ ಮಾಗಿಯು ಚಳಿ, ನಡುಕ ಮತ್ತು ನಿರುತ್ಸಾಹವನ್ನು ಹುಟ್ಟಿಸುತ್ತದೆ. ವಸಂತವನ್ನು ನಿಸರ್ಗದ ಯೌವ್ವನ ಹೋಲಿಸಿದರೆ, ಶಿಶಿರವನ್ನು ವೃದ್ಧಾಪ್ಯ ಎಂದಿದ್ದಾರೆ. ಏಕೆಂದರೆ ಮನುಷ್ಯ ಮತ್ತು ನಿಸರ್ಗ ಇಬ್ಬರಿಗೂ ಮಾಗಿಯು ಚಳಿ, ನಡುಕ ಮತ್ತು ನಿರುತ್ಸಾಹವನ್ನು ಹುಟ್ಟಿಸುತ್ತದೆ. ಪ್ರಕೃತಿಯ ಸಣ್ಣ–ಪುಟ್ಟ ವಸ್ತುಗಳನ್ನೂ ಬಿಡದೇ ಕವಿತೆಯಾಗಿಸಿದ್ದಾರೆ ಎನ್ನುವುದಕ್ಕೆ ಲತೆ–ಹೂವುಗಳನ್ನು ಕುರಿತ ಕವನಗಳೇ ಸಾಕ್ಷಿ. ಮನುಷ್ಯಲೋಕದ ನಟಿ ಮತ್ತು ಲತೆಯನ್ನು ಸೇರಿಸಿ 'ಲತಾನಟಿ' ಎಂಬ ಅದ್ಭುತ ರೂಪಕ ಮಾಡಿದ್ದಾರೆ ಅವರು ಪ್ರಕೃತಿಯಲ್ಲಿ ಚೈತನ್ಯವನ್ನು ಕಾಣುತ್ತಾರೆ. ಆ ಚೈತನ್ಯ ಅವರಿಂದ ಹೊರಹರಿದು ಪ್ರಕೃತಿಯನ್ನು ಆಧ್ಯಾತ್ಮೀಕರಿಸುತ್ತದೆ. ಹೀಗೆ ರೂಪಾಂತರಗೊಂಡ ಪ್ರಕೃತಿ ಮತ್ತೆ ಕವಿಯ ಹೃದಯ ಪ್ರವೇಶಿಸುತ್ತದೆ. ಇಂತಹ ಪ್ರಕೃತಿಯ ಸೌಂದರ್ಯವನ್ನು ಆರಾಧಿಸುವ ಮನಸ್ಸು ಬೇಕಾಗಿದೆ. ಇಂದಿನ ಬದುಕು ಕೇವಲ ಬೃಹತ್ ಕಟ್ಟಡಗಳ ನಿರ್ಣಾ ಆಧುನಿಕ ಸವಲತ್ತನ್ನು ಪಡೆಯುವುದಕ್ಕಾಗಿ ಬದುಕಿನ ಸೆಣಸಾಟದಲ್ಲಿ ಮನುಷ್ಯ ಅಂತ್ಯಗಾಣುತ್ತಿದ್ದಾನೆ. ಕಾಡು ಕಡಿದು ನಾಡು ನಿರ್ಮಾಣದಲ್ಲೇ ಸಾಧನೆ ಹಾದಿ ಹಿಡಿದಿರುವ ಆಧುನಿಕ ಪ್ರಪಂಚಕ್ಕೆ ಕುವೆಂಪುರವರ ಸಾಹಿತ್ಯಸಾರ್ಥಕ ಬದುಕಿನ ಕೈಗನ್ನಡಿಯಾಗಿ ನಿಂತಿದೆ.

ಅಧ್ಯಾತ್ಮ ಎಂದರೆ **'ಖಟಟಜಜುಚಿಣಜ ಜಿಜಜಟುಟಿರಿ ಡಜಿ ಣಟುಣಥಿ ಡಜಿ ಣುಜ ̧ಜಟಜಿ ತಿಣು ಉಡಜ'** ಎಂಬುದಾಗಿದೆ ಅಂದರೆ ದೇವರದೊಂದಿಗಿನ ಆತ್ಮದ ಐಕ್ಯವೇ ಅಧ್ಯಾತ್ಮ. ಕಾಯಕ, ನಿಸರ್ಗ, ಅಣುಜೀವ ಪ್ರೇಮ, ಹೀಗೆ ಯಾವುದೇ ಶಾಶ್ವತ ಮೌಲ್ಯವೂ ದೇವರಾಗಬಹುದು. ಇವು ವ್ಯಕ್ತಿಯಲ್ಲಿ ಲೀನವಾಗುವ ಬಗೆ ಅಧ್ಯಾತ್ಮದ ಹಂತಕ್ಕೆ ಒಯ್ಯುತ್ತದೆ.ಕುವೆಂಪುರವರು ತೀವ್ರ ವಿಚಾರವಾದಿ, ಅಧ್ಯಾತ್ಮವಾದಿ, ಆದರೆ ಭೌತವಾದಿಯಲ್ಲ.

ಅಧ್ಯಾತ್ಮವೆಂದರೆ ವೈಚಾರಿಕತೆಗೆ ವಿರುದ್ಧವಾದುದು. ಆಧ್ಯಾತ್ಮಿಕತೆಯನ್ನು ವಿರೋಧಿಸುವಿಕೆಯೇ ವಿಚಾರವಾದವೆಂದು ತಿಳಿಯಲಾಗುತ್ತದೆ. ಆದರೆ ವಿಚಾರ–ತರ್ಕಗಳಿಗೆ ಮೀರಿದ ನಿತ್ಯ ಸತ್ಯಗಳು ಎದುರಾದಾಗ ಇಂಥ ತಿಳಿವಳಿಕೆ ಗೊಂದಲಕೀಡುಮಾಡಬಹುದು. ಆದರೆ ಕುವೆಂಪುರವರು ವಿಚಾರವಾದಿಯಾದರೂ ಅವರೊಬ್ಬ ಆಧ್ಯಾತ್ಮಿಕ ಶ್ರದ್ಧಾಳು, ಅನುಭಾವಿ. ಆದುದರಿಂದಲೇ ಅವರ ವಿಚಾರಗಳಲ್ಲಿ ಗೊಂದಲವಿಲ್ಲ. ಧರ್ಮ, ಸಂಪ್ರದಾಯ–ವೈಚಾರಿಕತೆಗಳಲ್ಲಿ ಅವರಿಗೆ ಯಾವ ದ್ವಂದ್ವ ನಿಲುವು ಗೋಚರಿಸುವುದಿಲ್ಲ. ಪರಂಪರೆಯ ಭವ್ಯತೆ, ಉಜ್ವಲತೆಯನ್ನು ಎತ್ತಿ ಹಿಡಿಯುವ ಅವರು ಅದರ ಮೇಲೆ ಮುಸುಕಿದ ಮೌಢ್ಯವನ್ನು ತೊಡೆದು ಹಾಕುವಲ್ಲಿ ಶ್ರಮಿಸಿದವರು. ಕುವೆಂಪು ಅವರು ಭಾರತೀಯ ಸಮಾಜದ ಜಾತಿ ಪದ್ಧತಿ, ವರ್ಣಾಶ್ರಮ ಧರ್ಮವನ್ನು ಉಗ್ರವಾಗಿ ಖಂಡಿಸುತ್ತಾ, ಈ ಅರ್ಥಹೀನ ಪೊರೆಗಳ ಆಚೆ ಇರುವ ಶಾಶ್ವತ

ಮೌಲ್ಯಗಳನ್ನು ಸ್ವಾನುಭವವಾಗಿ ಮಾಡಿಕೊಳ್ಳುತ್ತಾರೆ. ಮತ, ಜಾತಿಗಳಿಂದಲೂ ಧರ್ಮ ಬೇರೆಯಾದುದು. ಅಧ್ಯಾತ್ಮ ಇವೆಲ್ಲವನ್ನು ಮೀರಿದ್ದು ಎಂಬುದು ಅವರ ವಾದ.

ಕುವೆಂಪು ಅವರನ್ನು ಅರಿತುಕೊಳ್ಳಬೇಕಾದರೆ ತತ್ವಜ್ಞಾನದ ಅರಿವು ಅತ್ಯವಿದೆ. ಕುವೆಂಪು ಯಾವುದೇ ತತ್ವ ಸಿದ್ಧಾಂತಗಳನ್ನು ಹುಟ್ಟಿನಿಂದ ಬಳುವಳಿ ಪಡೆದವರಲ್ಲ. ಓದು ಹಾಗೂ ಅನುಭವದಿಂದರಾಮಕೃಷ್ಣ ಪರಮಹಂಸರ ಸಿದ್ಧಿ, ಸ್ವಾಮಿ ವಿವೇಕಾನಂದರ ಬುದ್ಧಿ, ಶ್ರೀ ಅರವಿಂದರ ಪೂರ್ಣ ದೃಷ್ಟಿ ಹಾಗೂ ಗಾಂಧೀಜಿಯವರ ಸರ್ವೋದಯ ಸೂತ್ರಗಳ ಜ್ಞಾನಪಡೆದವರು. ಹಾಗಾಗಿ ಕುವೆಂಪು ಅವರನ್ನು ರೊಮ್ಯಾಂಟಿಕ್ ಕವಿ, ನಿಸರ್ಗ ಕವಿ, ತೀವ್ರ ವಿಚಾರವಾದಿ, ವಿಚಾರ ಶೀಲ ಸಂಪ್ರದಾಯವಾದಿ, ವಾಸ್ತವವಾದಿ, ಅಧ್ಯಾತ್ಮವಾದಿ ಎಂಬುದಾಗಿ ನೋಡುವಂತಿಲ್ಲ.

ಕುವೆಂಪು ಅವರ ಕವಿತೆಗಳಲ್ಲಿ ಆದರ್ಶೀಕೃತ ಮಾನವನಿದ್ದರೆ, ಕಥೆ – ಕಾದಂಬರಿಗಳಲ್ಲಿಮಾನವಸ್ವಭಾವ – ಅನುಭವಗಳನಿಷ್ಠುರ ಚಿತ್ರಣವಿದೆ. ಕುವೆಂಪು ಅವರುನಿಸರ್ಗದಶಿಶು. ಪ್ರಕೃತಿಯಮಾಯೆ, ಭವ್ಯತೆ, ರುದ್ರ ರಮಣೀಯತೆ ಇವು ಅವರನ್ನು ಕಾಡಿದಂತವು. ಅವರ ಆಧ್ಯಾತ್ಮಿಕನಿಲುವುನಿಸರ್ಗದಷ್ಟೇಸರಳ, ಸಂಕೀರ್ಣಮತ್ತುನಿಚ್ಚಳ, ಸಾಮಾನ್ಯ ತಾತ್ವಿಕರಿಗೆಪ್ರಕೃತಿ ಜಡವಾದುದಾಗಿ ಕಂಡರೆ, ಕುವೆಂಪುರವರಿಗೆ ಚೇತನದ ನಟನೆಯ ಲೀಲೆ'ಯಾಗಿ ಕಾಣುತ್ತದೆ. ಭಗವದ್ಗೀತೆಯ ಕರ್ಮಯೋಗದ ಸಾರ ಅವರ ಕೃತಿಗಳಲ್ಲಿ ಕಾಣಿಸುತ್ತದೆ. ಜೀವ ಪ್ರೇಮ, ಜೀವ ಗೌರವ ಅಲ್ಲಿ ಗೌಣವಾಗಿರಬಹುದು. ಆದುದರಿಂದಲೇ ಅವರು 'ಜೀವ ರಥೋತ್ಸವವಿದನಣಕಿಸದಿರು ಎಲೈ ಸಂನ್ಯಾಸಿ' ಅನ್ನುತ್ತಾರೆ. ಪ್ರಕೃತಿ –ಪುರುಷರಲ್ಲಿ, ಜೀವ ಜಗತ್ತಿನ ಆಗುಹೋಗುಗಳಲ್ಲಿ ಕರ್ಮವ್ಯಾಪಾರವಿದೆ ಎಂಬುದು ಅವರನಂಬಿಕೆ. ಬೆರಳ್‌ಗೆ ಕೊರಳ್ ನಾಟಕದಲ್ಲಿ 'ಕರ್ಮದ ಪಾಂಗು, ಮರಿಗೆ ಮರಿ, ಮರಿಗೆ ಮರಿ, ಬೆರಳ್‌ಗೆ ಕೊರಳ್' ಅನ್ನುತ್ತಾರೆ. ಏಕಲವ್ಯನ ಬೆರಳು ಕೇಳಬೇಕಾದ ಧರ್ಮಸಂಕಟ ದ್ರೋಣನನ್ನು ಕಾಡುತ್ತದೆ. ಆತ, 'ಕೂಳ್ ಮಿಣಿಯ ಪಿಡದಿರ್ಪುದಾ ಬದಿಯ ಕಯ್। ನೂಂಕುತಿಹುದನಿಬರಂ ತನ್ನ ಲೀಲಾರ್ಥಂ, ಅಂತಲ್ಲದಿರೆ, ನಮ್ಮ ನೆತ್ತಲಿಂದಲೊ ಕರೆದು ಒಯ್ದು ತಂದೀನ್ಯಪಾಲರೂಳಿಗಕೆ ತಳ್ಳು ತಿರ್ದುದೆ ಈಶ್ವರೇಚ್ಛಾರೂಪದೆಮ್ಮ ಕರ್ಮ ಪಾಶಂ" ಎಂದು ಹಳಹಳಿಸುತ್ತಾನೆ.

ಜನ್ಮಾಂತರ ಪರಿಕಲ್ಪನೆಯನ್ನು ಕುವೆಂಪು ನಿರಾಕರಿಸುವುದಿಲ್ಲ. ಅವರ 'ಯಾವ ಜನ್ಮದ ಮೈತ್ರಿ' ಸಾಲುಗಳಲ್ಲಿ, ಬೆರಳ್‌ಗೆ ಕೊರಳ್ ನಾಟಕದಲ್ಲಿ ದ್ರೋಣರು ಅರ್ಜುನನ ಹೆಸರಾಸೆಯನ್ನು ಹೆಕ್ಕುತ್ತ, "ಈ ಜನ್ಮದೊಳ್ ಈ ಪೆಸರ್ ಮರುವುಟ್ಟೊಳಿನ್ನೊಂದು ಪೆಸರ್, ಭರತ ಖಂಡದೊಳಿಂದು ದ್ರೋಣನ್! ಬರ್ಪ ಜನ್ಮದೊಳಾವ ದೇಶದೊಳ್ ಅದಾವ ಪೆಸರೊ" ಎಂದು ಹೇಳಿರುವಲ್ಲಿ, ಶ್ರೀ ರಾಮಾಯಣದರ್ಶನಂ ಕಾವ್ಯದಲ್ಲಿ ರಾವಣ–ಕುಂಭಕರ್ಣರು ಈ ಜನ್ಮದಲ್ಲಿ ಗೆಲ್ಲಲಾಗದ ರಾಮನನ್ನು ಲವ–ಕುಶರಾಗಿ ಮುಂದಿನ ಜನ್ಮದಲ್ಲಿ ಗೆಲ್ಲುವುದು, ಸೀತೆಯ ಪ್ರೇಮವನ್ನು ಶಿಶುಗಳಾಗಿ ಪಡೆಯುವುದು ಚಿತ್ರಿತಗೊಂಡಿರುವಲ್ಲಿ ಕುವೆಂಪು ಅವರ ಜನ್ಮಾಂತರ ಪರಿಕಲ್ಪನೆ ಗೋಚರಿಸುತ್ತದೆ.

ಶ್ರೀ ಅರವಿಂದರ 'ಂಟಟ ಟುಜಿಜ ಏ ಙಠರಿಚ' ಎಂಬ ಮಾತು ಕುವೆಂಪು ಅವರಲ್ಲಿ ಅಖಂಡವಾಗಿದೆ. ನಿಷ್ಕಾಮ ಕರ್ಮಗಳೆಲ್ಲವೂ ಯೋಗವೇ ಎಂಬುದು ಅವರ 'ಉಳುವಾ ಯೋಗಿಯ ನೋಡಲ್ಲಿ' ಕವಿತೆಯಲ್ಲಿ ಒಡಮೂಡಿರುವುದನ್ನು ಗುರುತಿಸಬಹುದು. ವ್ಯಕ್ತಿಯ ಯೌಗಿಕ ಸ್ಥಿತಿಯ ಬಗ್ಗೆ 'ವಿಭೂತಿ ಪೂಜೆ'ಯಲ್ಲಿ ಅವರು ವಿವರಿಸಿದ್ದಾರೆ. "ಸಚ್ಚಿದಾನಂದ ಲೀಲಾರ್ಥವಾಗಿ ಮಾಯೆಗವತರಿಸಿದ ಜೀವ, ತನ್ನ ಸ್ವಸ್ಥಾನ ಸಂಸ್ಥಾಪನ ಸಾಧನೆಯಲ್ಲಿ ತೊಡಗುತ್ತದೆ –ಸ್ವಾಭಾವಿಕವಾಗಿ, ಪ್ರಕೃತಿ ಸಿದ್ಧವಾಗಿ. ಆ ಸಾಧನೆಬೇರೆಬೇರೆಯ ಕೋಶಗಳಲ್ಲಿ ಆಯಾ ಕೋಶಗಳಿಗೆ ಅನುಗುಣವಾದ ರೀತಿಗಳಲ್ಲಿ, ರೂಪಗಳಲ್ಲಿ ಸಾಗುತ್ತದೆ. ಅದು ಅನ್ನಮಯದಲ್ಲಿ ವಿಕಾಸಗೊಳ್ಳುವಾಗ ನಿದ್ರಿತವೆಂಬಂತೆ ಸಾಗುತ್ತದೆ. ಪ್ರಾಣಮಯದಲ್ಲಿ ಸ್ವಪ್ನಮಯವೆಂಬಂತೆ, ಮನೋಮಯದಲ್ಲಿ ಜಾಗೃತವಾಗಿ, ಪ್ರಜ್ಞಾಪೂರ್ವಕವಾಗಿ, ಸ್ವ–ಸ್ವಪ್ರಯತ್ನಶೀಲವಾಗಿ, ತನ್ನರಿವಿಗೆ ತಾನೇ ವಿಷಯವಾಗಿ, ಆರಾಧ್ಯವಾಗಿ, ಆದರ್ಶವಾಗಿ, ಕರೆಯಾಗಿ, ಕೋರಿಕೆಯಾಗಿ, ಪ್ರಿಯವಾಗಿ, ಪೂಜ್ಯವಾಗಿ ಗೋಚರವಾಗುತ್ತದೆ. ಹಾಗೆಯೇ ತಾನಿರುವ ಮಟ್ಟಕ್ಕೆ ಆ ಮೇಲಿರುವ ಮಟ್ಟ ವಿಭೂತಿ ಸ್ಥಾನವಾಗಿ ಪರಿಣಮಿಸುತ್ತದೆ",ವ್ಯಕ್ತಿಯು ತನ್ನ ಮುಕ್ತಿಯನ್ನು ತನ್ನ ಜೀವಿತೋದ್ದೇಶದ ಮೂಲಕವೇ ಸಾಧಿಸಿಕೊಳ್ಳಬೇಕೆಂಬ ಕಾಣ್ಕೆಯನ್ನು ತೋರಿಸುವ ಆಂಜನೇಯನ ಪರ್ವತ ಯಾತ್ರೆಯ ಸಂದರ್ಭದಲ್ಲಿ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಈ ಯೌಗಿಕ ದರ್ಶನವನ್ನು ಅವರು ಮಾಡಿಸಿದ್ದಾರೆ.

ಕುವೆಂಪು ಅವರ ದಾಂಪತ್ಯ ಗೀತೆಗಳಲ್ಲಿಯೂ ಸಂಕೀರ್ಣವಾದ ಅಧ್ಯಾತ್ಮದ ಎಳೆಯಿದೆ. ವಾಸ್ತವ ಬದುಕಿನ ಚಿತ್ರಣ ನೀಡುವ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಅತೀಂದ್ರಿಯ ಜಗತ್ತಿನ ಹೊಳಹುಗಳಿವೆ. ಗಡ್ಡದಯ್ಯ ಅದರ ಪ್ರತಿನಿಧಿಯಾಗಿದ್ದಾನೆ. ಇಲ್ಲಿನ ಯಾವ ಪಾತ್ರವೂ ತಾನು ವಿಶೇಷವಾದುದಾಗಬೇಕೆಂದು ತುಡಿಯುವುದಿಲ್ಲ. ಇದ್ದುದನ್ನು

ಇರುವ ಹಾಗೆ ನೇರವಾಗಿ ಅವು ಅನುಭವಿಸುತ್ತವೆ. ಕುವೆಂಪು ಅವರ ಕಾವ್ಯಧೋರಣೆ ಆಧ್ಯಾತ್ಮಿಕ ನೆಲೆಯುಳ್ಳದ್ದು. ಅವರ ದೃಷ್ಟಿಯಲ್ಲಿ ಆತ್ಮಸಂಸ್ಕಾರ ಹಾಗೂ ಸಾಕ್ಷಾತ್ಕಾರಗಳಿಗಾಗಿ ಕಾವ್ಯ ಕಲೆ ಇದೆ. ಜೀವನದ

ಉನ್ನತಿಗೆ ಅದೊಂದು ಸಾಧನ. ಹಾಗಾಗಿಯೇ ಅವರು –

"ನನ್ನ ಕೃತಿ ಕಲೆಯಲ್ಲ
ನಾನು ಕವಿಯಲ್ಲ
ಕಲೆಗಾಗಿ ಕಲೆಯೆಂಬ
ಹೊಳ್ಳು ನೆಲೆಯಿಲ್ಲ
ಸಾಧನೆಯ ಛಾಯೆ ಕಲೆ
ವಿಶ್ವಾತ್ಮವದಕೆ ನೆಲೆ
ನಿನಗದು ಚಮತ್ಕಾರ
ನನಗೊ ಸಾಕ್ಷಾತ್ಕಾರ!" ಎಂದಿದ್ದಾರೆ.

ಕುವೆಂಪು ಕಾವ್ಯದ ಬಹುಭಾಗ ಅಧ್ಯಾತ್ಮದ ಹೊಳಹಿನಿಂದ ತುಂಬಿದೆ. ಅವರ ಕಾವ್ಯದಲ್ಲಿ ಭಕ್ತಿ, ಶ್ರದ್ಧೆ, ಸಮರ್ಪಣೆ, ಶರಣಾಗತಿಗಳ ಭಾವಗಳಿವೆ.

'ತನುವು ನಿನ್ನದು ಮನವು ನಿನ್ನದು
ಎನ್ನ ಜೀವನ ಧನವು ನಿನ್ನದು
ನಾನು ನಿನ್ನವನೆಂಬ ಹೆಮ್ಮೆಯ
ಋಣವು ಮಾತ್ರವೆ ನನ್ನದು! ಎಂಬ ಸಾಲುಗಳಲ್ಲಿ
ಅಥವಾ,
'ಇದುವರೆಗೆ ನೀನೆನ್ನ ಕೈ ಹಿಡಿದು ನಡೆಸಿರುವೆ
ಇನ್ನಾದರೂ ನನ್ನ ಕೈ ಬಿಡದಿರು
ಅಂದಿನಂತೆಯೆ ಇಂದು ನಾನೊಂದು ಶಿಶು ಎಂದು
ಎಂದಿಗೂ ಕೈ ಬಿಡದೆ ಸಲಹೈ ಗುರೂ ।'

ಎಂಬ ಮಾತುಗಳಲ್ಲಿನ ಸಮರ್ಪಣೆ,ಶರಣಾಗತಿಯ ಭಾವಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.

ವಿಶ್ವ ವ್ಯಾಪಾರದ ಅನಂತತೆಗೆ ಕುವೆಂಪು ಬೆರಗಾಗಿದ್ದಾರೆ. ಜೀವಾತ್ಮ ತನ್ನನ್ನು ಅಳಿಸಿಕೊಂಡು ಪೂರ್ಣವಾಗುವ ಪರಿ 'ಆಕ್ರಮಿಸು' ಕವನದಲ್ಲಿದೆ. 'ಆಕ್ರಮಿಸು ಬಂದೆನ್ನ ಅಲ್ಪತ್ವಮಂ, ಓ ಅನಂತ' ಎಂದು ಆಹ್ವಾನಿಸುತ್ತಾರೆ. 'ಕವಿಶೈಲದಲ್ಲಿ ಸಂಧ್ಯೆ' ಕವಿತೆಯಲ್ಲಿ.

'ಮನವೇ, ಧ್ಯಾನದಿ ಮುಳುಗು ನಿಧಾನದಿ
ನುಂಗಲಿ ನಿನ್ನನು ತಪಃ ಸುಷುಪ್ತಿ

ಅನಂತ ತೃಪ್ತಿ' ಎಂದಿದ್ದಾರೆ. ಜೀವಾತ್ಮದ ಮಹತ್ತು ಎಲ್ಲರಲ್ಲೂ ಒಂದೇ. ವ್ಯಕ್ತಿಗೆ ಕೀಳರಿಮೆ ಸಲ್ಲದು.

ಅನಂತತೆಯ ಪ್ರಜ್ಞೆ ಅಲ್ಪವನ್ನೂ ಭವ್ಯವನ್ನಾಗಿ ಮಾಡುತ್ತದೆ. ಈ ಆಶಯ 'ಮಂತ್ರಾಕ್ಷತೆ' ಕವಿತೆಯಲ್ಲಿದೆ.

'ಅಲ್ಪ ನಾನು ಎಂದು ಕುಗ್ಗಿ
ಮುದುಗ ಬೇಡವೊ
ಓ ಅಲ್ಲವೆ,
ಅನಂತದಿಂದ ಗುಣಿಸಿಕೊ
ನೀನ್ ಅನಂತವಾಗುವೆ!' ಎಂಬ ಮಾತನ್ನು ಇಲ್ಲಿ ಲಕ್ಷಿಸಬಹುದು.

'ಜನ್ಮೋತ್ಸವ' ಕವಿತೆಯಲ್ಲಿನ –

ಇಲ್ಲಿ ಬಾ ಸಂಭವಿಸು ಇಂದೆನ್ನ ಹೃದಯದಲಿ

ನಿತ್ಯವೂ ಅವತರಿಪ ಸತ್ಯಾವತಾರ' ಎಂಬ ಸಾಲುಗಳೂ ಇದೇ ಆಶಯವನ್ನು ಹೊಂದಿವೆ. ಪ್ರಕೃತಿ ಒಂದು ವಿಸ್ಮಯ. "ಪ್ರಕೃತಿಯಾರಾಧನೆಯ ಪರಮನಾರಾಧನೆ. ಪ್ರಕೃತಿಯೊಲ್ಮೆಯೆ ಮುಕ್ತಿಯಾನಂದ ಸಾಧನೆ" ಎಂಬುದು ಅವರ ನಿಲುವು.

ಪ್ರಕೃತಿ ಅಭೇದ್ಯವಾದುದಾದರೂ ಅಲ್ಲಿ ಅಭೇದವಿದೆ.ಹಾಗಾಗಿಯೇ "ಶರತ್ಕಾಲದ ಸೂರ್ಯೋದಯದಲಿ" ಎಂಬ ಕವನದಲ್ಲಿ –

'ಕಲ್ಲಲಿ, ಮಣ್ಣಲಿ, ಹುಲ್ಲಲಿ, ಹುಡಿಯಲಿ
ನೀರಿನ ಹನಿಯಲಿ ಬೆಂಕಿಯ ಕಿಡಿಯಲಿ

ನನ್ನಲಿ – ಎಲ್ಲಿಯೂ ಚೈತನ್ಯ! ಅನ್ನುತ್ತಾರೆ. ಇಲ್ಲಿರುವಸಮೀಕರಣ ದೃಷ್ಟಿಯನ್ನು ಗುರುತಿಸಬೇಕು. ಕುವೆಂಪು ಅವರ ಆಧ್ಯಾತ್ಮಿಕ ದೃಷ್ಟಿಸಂಬಂಧವಾದ ಒಂದು ಕವನಸಂಕಲನ'ಅಗ್ನಿಹಂಸ'. ಇದನ್ನು ಕುರಿತು"ಅಗ್ನಿಹಂಸ' ಎನ್ನುವುದು ಕುವೆಂಪು ಅವರವ್ಯಕ್ತಿತ್ವದ ಆಧ್ಯಾತ್ಮಿಕ, ಅನುಭಾವಿಕ ಮುಖವನ್ನು ಸಂಕೇತಿಸುವ ಮಾತು. ಹಂಸ ಆತ್ಮದ ಪ್ರತೀಕವೆಂದು ಪ್ರಸಿದ್ಧವೇ; ಅದು ಕುವೆಂಪು ಅವರಲ್ಲಿ ಕವಿತೆಯ ಸಂಸರ್ಗವನ್ನು ಪಡೆದು ಅಗ್ನಿಹಂಸವಾಗಿದೆ" ಎಂದು ಸಿ.ಪಿ.ಕೆ.ಯವರು ಸಮಂಜಸವಾಗಿ ಗುರುತಿಸಿದ್ದಾರೆ.

ಅಧ್ಯಾತ್ಮ ಜೀವಿಯಾದ ಕುವೆಂಪು, ವಾಸ್ತವ ಬದುಕಿನ ಕರ್ತವ್ಯ ಪ್ರಜ್ಞೆಯಿಂದ ಪಲಾಯನ ಮಾಡುವ ಸಂನ್ಯಾಸಿಯಾಗುವುದಿಲ್ಲ. ಯಾವ ಯಾವ ಸಂದರ್ಭಗಳಲ್ಲಿ ಆತ್ಮಘಾತುಕ ಪರಿಸ್ಥಿತಿ ಉಂಟಾಗುತ್ತದೆಯೋ ಅಂಥ ಕಡೆ ಧ್ಯಾನ ತಪಸ್ಸುಗಳ ಭಂಗಿ ಭಂಡತನವಾಗುತ್ತದೆ. ಕರ್ತವ್ಯ ಪಾರಾಯಣವೇ ಆ ಕ್ಷಣದ ತಪಸ್ಸು. ಇದಕ್ಕೊಂದು ಸನ್ನಿವೇಶವನ್ನು ಅವರು 'ಧ್ರಾಂಧ್ರೀಂಧ್ರೂಂ' ಕವಿತೆಯಲ್ಲಿ ನಿದರ್ಶನವಾಗಿ ನೀಡಿದ್ದಾರೆ. ಪರಕೀಯರ ಆಕ್ರಮಣ, ಸನಾತನ ಪರಂಪರೆಯ ಮೇಲೆ ನಡೆಯುತ್ತಿದ್ದಾಗ ಜಪ ಮಾಡುತ್ತ ನಿಂತವರು ಅಸಂಖ್ಯ ಜನ. ದಾಳಿ ಮಾಡಿದವರು ಬೆರಳೆಣಿಕೆ ಜನ. ಜಪ ಮಾಡುತ್ತಿದ್ದ ಜನರ ನಿಜವಾದ ತಪಸ್ಸು, ಆಗ ಕರ್ತವ್ಯಕ್ಕಾಗಿ ಹೋರಾಡುವುದು ಆಗಬೇಕಾಗಿತ್ತು. ಹೀಗಾಗಲಿಲ್ಲ. ಜಪ ಮಾಡಿದರೂ ಲೂಟಿ ಆಗಿ ಹೋಯಿತೆಂಬುದು ಮೌಢ್ಯದ ಪರಮಾವಧಿ. ಸ್ವಂತಿಕೆ, ಸ್ವಧರ್ಮ, ಸ್ವಾತಂತ್ರ್ಯಗಳಿಗೆ ಧಕ್ಕೆ ಒದಗಿದಾಗ ಕೈಕಟ್ಟಿ ಕೂತು ಧ್ಯಾನ ಮಾಡಬೇಕೆಂದು ಯಾವ ಧರ್ಮವೂ ಬೋಧಿಸಿಲ್ಲ. ಗೀತೆಯಲ್ಲಿ ಶ್ರೀಕೃಷ್ಣ ಎಷ್ಟೇ ಉಪದೇಶ ಮಾಡಿದರೂ ಯುದ್ಧ ಕ್ರಿಯೆಯಿಂದ ಹಿಂದೆ ಸರಿಯುವಂತೆ ಮಾಡುವುದು ಅದರ ಉದ್ದೇಶವಲ್ಲ ಎಂಬುದನ್ನು ಮನಗಾಣಬೇಕು. ಈ ಸತ್ಯವನ್ನು ಕುವೆಂಪು ದರ್ಶಿಸಿದಾರೆ. ಇಂಥ ಸಂದರ್ಭಗಳಲ್ಲಿ ಅವರು ಸನಾತನ ಮೌಢ್ಯಗಳ ಮೇಲೆ ದೊಡ್ಡಪ್ರಹಾರವನ್ನೇ ಮಾಡುತ್ತಾರೆ. ಆದರೆ ಅದೇ ಸಂದರ್ಭದಲ್ಲಿ ಶಾಶ್ವತಾಂಶಗಳನ್ನು ಉಳಿಸುವ ಕಾಳಜಿ, ಕಳಕಳಿ, ಅವರ ವಿನೂತನಗೊಳಿಸುವ ಕಲಾಶಕ್ತಿಯಲ್ಲಿ ಅಡಗಿರುತ್ತದೆ. ಇದು ಇಂದಿನ ಸಮಾಜಕ್ಕೆ ಬಹು ಪ್ರಸ್ತುತವಾಗಿದೆ.ಅದನ್ನು ಅರಿತು ಬಾಳುವ ಮನಸ್ಸುಗಳು ಬೇಕಾಗಿದೆ.

ಮೇಲ್ನೋಟದಲ್ಲಿ ಗೊಡ್ಡು ಸಂಪ್ರದಾಯ, ಮೌಢ್ಯಗಳ ಮೇಲೆ ಕುವೆಂಪು ಅವರು ತೀವ್ರವಾಗಿ ಮಾಡುವ ದಾಳಿಯನ್ನು ಮಾತ್ರ ಗಮನಿಸುವ ವಿಚಾರವಾದಿಗಳಿಗೆ ಆಂತರ್ಯದ ಕಾಳಜಿ ಕಾಣಿಸುವುದಿಲ್ಲ. ತಲೆಮಾರುಗಳಿಂದ ಹರಿದು ಬಂದ ಜಾಡ್ಯಗಳನ್ನೂ 'ಪರಂಪರೆ' ಎಂದು ತಿಳಿದವರಿಗೆ ಮತ–ಜಾತಿ–ಧರ್ಮಗಳ ಒಳಗಿರುವ ಸಣ್ಣತನವನ್ನು ಅವರು ಖಂಡಿಸುವ ಪರಿ ನಿಷ್ಠೂರವಾಗಿ ಕಾಣಬಹುದು. ಆದರೆ ಅವರು ಚಿತ್ರಿಸುವ ಕಟುವಾದ, ನಿಷ್ಠುರವಾದ ಸಂಗತಿಗಳ ಹಿಂದಿನ ಆಶಯ, ಕಾಳಜಿಗಳು ಎಂದಿಗೂ ಪ್ರಶ್ನಾತೀತವಾದವು ಹಾಗೂ ನಿಜವಾದ ಅಧ್ಯಾತ್ಮ ತಿಳಿದವರು ನಡೆದುಕೊಳ್ಳಬೇಕಾದ ರೀತಿಯವು ಎಂಬುದನ್ನು ಮನಗಾಣಬೇಕು.

ಅಧ್ಯಾತ್ಮವನ್ನು ಜಾತಿ, ಮತ, ಧರ್ಮಗಳ ಬಂಧನದಲ್ಲಿ ಸಾಮಾನ್ಯವಾಗಿ ಕಾಣಲಾಗುತ್ತದೆ. ಇವುಗಳ ಅನುಸರಣೆಯೇ ಅಧ್ಯಾತ್ಮ ಎಂಬ ಭ್ರಮೆಯೂ ಸಾಮಾನ್ಯವಾಗಿದೆ. ಇನ್ನೊಂದು ಜೀವದಲ್ಲಿ ತನ್ನನ್ನು ಕಾಣುವುದು ಅಧ್ಯಾತ್ಮದ ಒಂದು ಸೂತ್ರ. ಇಂದಿನ ದಿನಗಳಲ್ಲಿ ಇನ್ನೊಬ್ಬರ ಬಗ್ಗೆ ಚಿಂತಿಸಲು ಯಾರಿಗೂ ಪುರುಸೊತ್ತಿಲ್ಲ. ಹಾಗಾದರೆ ಮಾಡುತ್ತಿರುವಾದಾದರೂ ಏನು? ತನ್ನ ಜಾತಿ, ಒಳಜಾತಿ, ಪಂಗಡ, ಉಪಪಂಗಡ, ಮತ, ಧರ್ಮ ಯಾವುದು? ಯಾವುದರಲ್ಲಿ ತನ್ನನ್ನು ತಾನು ಗುರುತಿಸಿಕೊಂಡರೆ ಕ್ಷೇಮ ಎಂಬ ಜಿಜ್ಞಾಸೆ ಇದೀಗ ತೀವ್ರವಾಗಿದೆ. ಸಾಮಾಜಿಕ–ಧಾರ್ಮಿಕ ಕಾರಣಗಳ ಸಮಸ್ಯೆಗಳಾಗಿರುವ ಜಾತಿ, ಲಿಂಗ, ಅಸಮಾನತೆ ಮುಂತಾದವುಗಳಿಗೆ ರಾಜಕೀಯ–ಆರ್ಥಿಕ ಹಿನ್ನಲೆಯಲ್ಲಿ ಉತ್ತರ ಹುಡುಕುತ್ತಿರುವುದು ಪ್ರಾಯಃ ಇಂದಿನ ಗೊಂದಲಗಳಿಗೆ ಕಾರಣವಿರಬಹುದು. ಯಾವ ಸಮಸ್ಯೆ ಎಲ್ಲಿಂದ ಹುಟ್ಟುರುತ್ತದೆಯೋ ಅಲ್ಲಿಂದಲೇ ಪರಿಹಾರವನ್ನು ಆರಂಭಿಸಬೇಕು. ಮತ, ಜಾತಿ, ಅಸ್ಪೃಶ್ಯತೆಗಳು ಸಮಾಜ–ಪರಂಪರೆಯಲ್ಲಿವೆ. ಇವುಗಳನ್ನು ಆ ಮೂಲಕವೇ ಪರಿಹರಿಸುವ ಯತ್ನ ಕುವೆಂಪು ಅವರ ಬೆರಳ್‌ಗೆ ಕೊರಳ್‌ನಲ್ಲಿ, ಶಂಬೂಕವಧೆಯಂಥಶ್ರೀ ರಾಮಾಯಣ ದರ್ಶನಂ ಕಾವ್ಯದ ಭಾಗಗಳಲ್ಲಿ ಸಮರ್ಥವೂ ಉಚಿತವೂ ಆಗಿ ಮೂಡಿದೆ. 'ಶೂದ್ರ ತಪಸ್ವಿ' ಇಂಥ ಸಮನ್ವಯಕ್ಕೆ ಒಂದು ಉತ್ತಮ ನಿದರ್ಶನ.

ಅಧ್ಯಾತ್ಮವು ವಾಸ್ತವವಾಗಿ ಧರ್ಮ, ಜಾತಿ, ಮತ ನಿರಪೇಕ್ಷ. ಹಾಗಾಗಿಯೇ ಅಧ್ಯಾತ್ಮವನ್ನು ಪ್ರತಿಪಾದಿಸುವ ಕುವೆಂಪು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ, ಸುನ್ನಿ, ಷಿಯಾ, ಕ್ಯಾಥೋಲಿಕ್, ಪ್ರಾಟೆಸ್ಟಂಟ್, ಸಿಖ್, ನಿರಂಕಾರಿ ಮುಂತಾದ

ವಿಭಜನೆಗಳ ನಿರ್ನಾಮಕ್ಕೆ ಕರೆ ಕೊಡುತ್ತಾರೆ. ಅವರ ದೃಷ್ಟಿಯಲ್ಲಿ ಮತವೆಂದರೆ ಮನುಜ ಮತ, ಪಥವೆಂದರೆ ವಿಶ್ವಪಥ. 'ಮತ' ಪ್ರಜ್ಞೆ ಎಂಬುದಾಗಿದೆ. ಮೌಢ್ಯ, ಜಾತೀಯತೆ, ಕಂದಾಚಾರಗಳಿಗೆ ಉಗ್ರ ಆಘಾತ ನೀಡಿದ ಸನಾತನ ಪರಂಪರೆಯ ಮಹಾನ್ ಹರಿಕಾರ ವಿವೇಕಾನಂದರ ಅಧ್ಯಾತ್ಮ ಶುದ್ಧಿ, ಪ್ರಖರತೆ, ಓಜಸ್ಸು ಕುವೆಂಪು ಅವರಲ್ಲಿವೆ. ಸರ್ವಸಮಾನ ದೃಷ್ಟಿಯಲ್ಲಿ ಮುಖ್ಯ ಅಮುಖ್ಯಗಳ ಮಾತು ಅಮುಖ್ಯ. ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಒಂದು ದಿಕ್ಸೂಚೀ ಮಾತಿದೆ –"ಯಾರೂಮುಖ್ಯರಲ್ಲ ; ಯಾವುದೂ ಅಮುಖ್ಯವಲ್ಲ!"ನಿಸರ್ಗದಲ್ಲಿ ಯಾವುದೇವಸ್ತುವಿಷಯಮಾತ್ರಮುಖ್ಯವಲ್ಲ. ಅದೇ ಅನಿವಾರ್ಯವಲ್ಲ. ಆದರೆ, ನಿಸರ್ಗವ್ಯವಹಾರಕ್ಕೆಸಗಣಿ ಹುಳವೂ ಮುಖ್ಯವಾಗುತ್ತದೆ. ಇದೇ ರೀತಿ 'ಸ್ಮಶಾನ ಕುರುಕ್ಷೇತ್ರಂ' ಕೃತಿಯಲ್ಲಿ ಬರುವ 'ಎಲ್ಲಕ್ಕೂ ಇವೆ ಅರ್ಥ: ಯಾವುದೂ ಅಲ್ಲ ವ್ಯರ್ಥ; ನೀರೆಲ್ಲವೂ ತೀರ್ಥ" ಎಂಬ ಮಾತನ್ನೂ ಲಕ್ಷಿಸಬಹುದು.

ಕುವೆಂಪು ಅವರು ತಮ್ಮ ಸಾಹಿತ್ಯ ಸರ್ವಸ್ವದ ಆಧ್ಯಾತ್ಮಿಕ ಸಾರ ಸಂಗ್ರಹವನ್ನು ವಿಶ್ವಮಾನವ ಸಂದೇಶದ ಸಪ್ತ ಸೂತ್ರಗಳಲ್ಲಿ ಹಾಗೂ 'ಓ ನನ್ನ ಚೇತನ, ಆಗು ನೀ ಅನಿಕೇತನ' ಎಂಬ ಪದ್ಯ ಸಾಲುಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಇದು ಶ್ರೀ ಸಾಮಾನ್ಯರಿಗೆ ಅವರು ನೀಡಿರುವ ಮಹಾಮಂತ್ರ. ಚಿರಂತನ ಸತ್ಯಗಳನ್ನು, ಶಾಶ್ವತ ಮೌಲ್ಯಗಳನ್ನು ಮಾತ್ರ ಪ್ರತಿಪಾದಿಸುವ, ಕಾಲ ದೇಶಾತೀತವಾಗಿ ಮಾನವನ ಅಂತಃಕರಣವನ್ನು ಕಟ್ಟುವ ಆಧ್ಯಾತ್ಮಿಕ ಶಕ್ತಿ ಇರುವುದರಿಂದಲೇ ಕುವೆಂಪು ಅವರ ಸಾಹಿತ್ಯ ಮನುಷ್ಯರಿಗೆ ಅನಿವಾರ್ಯವಾಗುತ್ತದೆ.ಒಂದು ಜೀವ ಇನ್ನೊಂದು ಜೀವವನ್ನು ವ್ಯಾವಹಾರಿಕ ದೃಷ್ಟಿಯಲ್ಲಿ ಅಲ್ಲದಿದ್ದರೆ ತಮಗೂ ಅದಕ್ಕೂ ಸಂಬಂಧವೇ ಇಲ್ಲವೆಂಬ ಹಾಗೂ ಕ್ಷುಲ್ಲಕವಾದ ಜಾತಿ, ಮತ, ಭ್ರಷ್ಟತೆಗಳಲ್ಲಿ ಕಳೆದುಹೋಗುತ್ತಿರುವ ಇಂದಿನ ಮಾನವ ಜನಾಂಗಕ್ಕೆ ಕುವೆಂಪು ಅವರು ತೋರಿಸಿದ ಆಧ್ಯಾತ್ಮಿಕ ಮಾರ್ಗ, ಸಮತೋಲಿತ ಬದುಕಿನ ಸ್ಪಷ್ಟ ದೃಷ್ಟಿಗಳು ಅಗತ್ಯವಾಗಿವೆ. ಎಲ್ಲವನ್ನೂ ಅರಗಿಸಿಕೊಂಡು ತಮ್ಮ ದರ್ಶನವನ್ನು ತಾವೇ ಕಂಡುಕೊಳ್ಳುವ ಅವರ ಕಾವ್ಯ–ಬದುಕಿನ ರೀತಿ ಆದರ್ಶವಾಗಬೇಕಿದೆ.

ಮೂಲ ಆಕರ–

ಕುವೆಂಪುರವರ ಸಮಗ್ರ ಸಾಹಿತ್ಯದ ಪುಟಗಳು

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಕುವೆಂಪು ಅವರ ಸಾಹಿತ್ಯ: ನಿಸರ್ಗದ ಉಲಿ ಚಿಂತನೆಯ ಸೆಲೆ

ಲೇ: ಡಾ॥ ಸವಿತಾ ಕೊಟಬಾಗಿ
ಮುಖ್ಯಸ್ಥರು
ಕನ್ನಡ ವಿಭಾಗ
ಶ್ರೀ ಶರಣ ನುಲಿಯಚಂದಯ್ಯ
ಡಾ॥ ಬಿ.ಆರ್.ಅಂಬೇಡ್ಕರ ಸ್ಮಾರಕ ಎಕೆಕೆ ಶಿಕ್ಷಣ ಸಂಸ್ಥೆಯ
ಕಲೆ ಮತ್ತು ವಾಣಿಜ್ಯ ಮಹಾವಿದ್ಯಾಲಯ
ಗಂಗಾಧರನಗರ, ಹುಬ್ಬಳ್ಳಿ–೨೦

"ಸತ್ಯಂ ಶಿವಂ ಸುಂದರಂ" ಎಂಬುದು ಭಾರತೀಯ ತತ್ವಶಾಸ್ತ್ರದ ಮಹತ್ವದ .ಚಿಂತನೆಯಾಗಿದೆ ಹಲವು ದಾರ್ಶನಿಕರು ಇದರ ಅರ್ಥಗಳನ್ನು ವಿಭಿನ್ನವಾಗಿ ಅರ್ಥೈಯಿಸಿದ್ದಾರೆ.ಒಟ್ಟಿಗೆ ಮಾನವನು ಸೌಂದರ್ಯನುಭೂತಿ ಪಡೆಯಬೇಕೆಂದರೆ ಸತ್ಯ ಶೋಧಕನಾಗಿ ನಿರ್ಲಿಪ್ತ ಭಾವದಿಂದ ಶ್ರಮದಲ್ಲಿ ನಿರತರಾಗಬೇಕು.ತ್ರಿತ್ವಗಳಿಂದುಂಟಾದ ಭಾವ–ರೂಪಗಳಿಂದ ಮುಕ್ತತೆ ಪಡೆದು; ನಿರ್ಮಲ ಮನಸ್ಸಿನಿಂದ ಶ್ರಮದಲ್ಲಿ ತಲ್ಲೀನರಾಗಿರುವದು.ಅಲ್ಲಿ ನಿತ್ಯ ಸೌಂದರ್ಯ ಆವಿರ್ಭಸುತ್ತದೆ. [ಸತ್ಯ–ತ್ರಿತ್ವಗಳಿಂದುಂಟಾದ ಭಾವ ರೂಪಗಳಿಂದ ಮುಕ್ತತೆ ಪಡೆದ ಸ್ಥಿತಿ, ಶಿವಂ–ಪರಿಶುದ್ಧವಾದ ಶ್ರಮ, ಕಾಯಕ, ಸೌಂದರ್ಯ–ಆನಂದದೇವರು ಸಂತೋಷ] ಇಂತಹ ಸೌಂದರ್ಯದರ್ಶನ ಕವಿ ಪ್ರಕೃತಿ ಮೂಲಕ ಪಡೆದಿದ್ದಾರೆ.ಪ್ರಕೃತಿಯ ಎಲ್ಲ ಚೆಲುವನ್ನು ಅದರ ಸಹಜ ವ್ಯಾಪಾರಗಳನ್ನು ನೋಡಿ ಕವಿ ಮನ ವಿಸ್ಮಯಗೊಂಡಿದೆ. ಹೀಗೆ ಅರಣ್ಯದ್ರವ್ಯವಾಗಿ ವಿಸ್ಮಯಕಂಡು ಅನುಭವಿಸಿ ಆನಂದನಭೂತಿ ಪಡೆದ ದಾರ್ಶನಿಕ ಕನ್ನಡದ ಮಹಾನ್ ಕವಿ ಕುವೆಂಪು ಅವರು.ಕಾಡಿನ ಕವಿಯೆಂದೇ ಪ್ರಖ್ಯಾತರಾಗಿದ್ದಾರೆ. ಕವಿಗೆ ನಿಸರ್ಗದ ಚೆಲವು–ಒಲವು–ಬೆರಗುಗಳು ಅವರ ಪ್ರತಿ ಚರಾಚರಗಳ ವ್ಯಾಪಾರಗಳು ಕವಿ ಅಂತಃಸ್ಫುರಣೆಗೆ ಕಾರಣವಾಗಿವೆ. ಹೀಗೆ ನಿಸರ್ಗ ಕಂಡು, ನಿಸರ್ಗವನ್ನೇ ಉಂಡ, ನಿಸರ್ಗದ ಕುರಿತು ಪ್ರತಿಮಿಸಿದ ಕವಿ ಕುವೆಂಪು ಅವರ ಕವನಗಳಲ್ಲಿ ಹೊಸ ಚಿಂತನೆಯ [ವಿದ್ಯುತ್ ಪ್ರವಹಿಸಿದೆ] ಸೂರ್ಯತೇಜ ಪ್ರಕಾಶಿಸಿದೆ; ಪ್ರಖರ ವೈಚಾರಿಕಕಾಂತಿ ಕಂಗೊಳಿಸಿದೆ. ಅವರ ಸೈದ್ಧಾಂತಿಕ ನಿಲವುಗಳು, ಹೊಸ ಚಿಂತನೆಯ ಮಾದರಿಗಳು, ನಿಸರ್ಗವೆಂಬ ಪ್ರತಿಮೆ ರೂಪಕಗಳ ಮೂಲಕ ಸೃಷ್ಟಿಗೊಂಡಿವೆ. ಹೀಗಾಗಿ ಬೇಂದ್ರೆ ಅವರು ಕುವೆಂಪು ಅವರನ್ನ"ಯುಗದ ಕವಿ ಜಗದ ಕವಿ" ಎಂದು ಕರೆದಿದ್ದಾರೆಂದು ತೋರುತ್ತದೆ. 'ಮನುಜಮತ', ವಿಶ್ವಪಥ, ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ–ಪ್ರತಿ ಮನುಷ್ಯನಲ್ಲಿ ಉದಯವಾಗಬೇಕೆಂಬುದು ಕವಿ ಕುವೆಂಪು ಅವರ ಸಾಹಿತ್ಯದ ಆಶಯ. ಪ್ರಸ್ತುತ ಲೇಖನದ ಉದ್ದೇಶ ನಿಸರ್ಗದ ಪ್ರತಿಮೆಗಳಿಂದ ಕಟ್ಟಿದ ಕಾವ್ಯದಲ್ಲಿ (ಸಾಹಿತ್ಯದಲ್ಲಿ) ಚಿಂತನೆಯ ಸೆಲೆ ಅಭಿವ್ಯಕ್ತಗೊಂಡ ಸ್ವರೂಪವನ್ನ ತಿಳಿಸುವದಾಗಿದೆ.

"ಸಗ್ಗದ ಬಾಗಿಲು ಅಲ್ಲಿಹುದಣ್ಣಾ
ನುಗ್ಗಿದರಲ್ಲೇತೆರೆಯುವುದಣ್ಣಾ
ಹಕ್ಕಿಯ ಟುವ್ವಿಯೊಳವಿತಿದೆಯಣ್ಣಾ
ಹೂವಿನ ಬಣ್ಣದೊಳಡಗಿದೆಯಣ್ಣಾ
ದುಡಿಯುವರೈತನ ನೇಗಿಲೊಳಡಗಿದೆ
——————
——————
ನೆಗಿಲ ಗೆರೆಯೇ ಸಗ್ಗದ ಹಾದಿ
ಕರ್ಮವೆ ಬಾಗಿಲಿಗೊಯ್ಯುವ ಬೀದಿ
ಹಕ್ಕಿಗಳುಲಿಯಲು ಹೂವೂಗಳಗಳಲು
——————
——————"(ಸಮಗ್ರ ಕಾವ್ಯ ಸಂಕಲನ ಸಂಪುಟ–೧,ಪುಟ–೭೫)

ಪುರಾಣ ಕಲ್ಪಿತ ಸ್ವರ್ಗ ಪ್ರಾಪ್ತಿ ಇಹ ಜೀವನದ ಕರ್ಮದ ಫಲವಾಗಿರುತ್ತದೆ.ಒಳ್ಳೆಯ ಕೆಲಸ ಮಾಡಿದರೆ ಸ್ವರ್ಗ,ಕೆಟ್ಟ–ಪಾಪದಂತಹ ಕೆಲಸ ಮಾಡಿದರೆ ನರಕ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ ನಮ್ಮಲ್ಲಿದೆ.ಅಂದರೆ ಸ್ವರ್ಗದಲ್ಲಿ ಎಲ್ಲ ಬಗೆಯ ಸುಖ

ದೊರೆಯುತ್ತದೆಂಬ ಕಲ್ಪಿತ ನಂಬಿಕೆ ಇದೆ.ವಿಶ್ವದ ಎಲ್ಲ ಚೆಲವು– ನಲಿವು –ಒಲವುಗಳ ನೆಲೆ ಸ್ವರ್ಗವೆಂಬುದ ಮಾನವ ಕಲ್ಪಿತ ನಂಬಿಕೆಯಲ್ಲಿ ಬದುಕುವ ಕ್ರಿಯೆಯನ್ನು ಪ್ರಸ್ತುತ ಕವನದಲ್ಲಿ ನಿರಾಕರಿಸಿದ್ದಾರೆ.ನಿಜ ಸ್ವರ್ಗದ ಸುಖ ಹಕ್ಕಿಗಳ ಗಾನದಲ್ಲಿ, ಬಣ್ಣ ಬಣ್ಣ ಹೂವಿನ ಸೌಂದರ್ಯದಲ್ಲಿ,ದುಡಿಯುವ ರೈತನ ನೇಗಿಲದಲ್ಲಿ, ಅರಳಿ ನಿಂತಿರುವ ಹೂವುಗಳಲ್ಲಿ, ತಾಯಿಯ ಪ್ರೀತಿಯಲ್ಲಿ ಸಿಗುತ್ತದೆ.ಅಂದರೆ ಸಾಕಾರಾತ್ಮಕ ಮಾತು, ಸತ್ಯ, ಕರ್ಮ(ಕಾಯಕ), ಪ್ರೀತಿಯಲ್ಲಿ ಸ್ವರ್ಗ ಸುಖ ಕಾಣುತ್ತೇವೆ. ಹೊರತು ಗುಡಿ–ಗುಂಡಾರಗಳಲ್ಲಿ ಕಾರ್ಮಣ್ಯದ ಪುರೋಹಿತ ಪ್ರಕ್ರಿಯೆಯ ಆಚರಣೆಗಳಲ್ಲಿ ಸ್ವರ್ಗ ಸುಖ ಕಾಣದು.

'ಅಹಂ ಬ್ರಹ್ಮಾಸ್ಮಿ' ಅದ್ವೈತ ಆಧಾರವಾಗಿರುವ 'ಸತಂ ಶಿವಂ ಸುಂದರಂ' ಅನ್ನುವ ತತ್ವಕ್ಕೆ ದಾರ್ಶನಿಕರು ಹೆಚ್ಚು ಮನ್ನಣೆ ನೀಡಿದ್ದಾರೆ. ಸತ್ಯ ಸತ್ಯವೇ ಇದರಲ್ಲಿ ಯಾವುದೇ ಕಲ್ಪನೆಗಳಿಲ್ಲ, ತ್ರಿತ್ವಗಳಿಂದುಂಟಾದ ಭಾವ ರೂಪಗಳಿಲ್ಲ, ಸತ್ಯ ಸಾಕ್ಷಾತ್ಕಾರದಲ್ಲಿ ಸಾಕಾರತ್ಮಕಗಳ ಭಾವ ಆಲಿಂಗದಲ್ಲಿ ಹೊರಹೊಮ್ಮುವ ಮಾತು "ಹಕ್ಕಿಯ ಟುವ್ವಿಯಾಗಿದೆ" ಶಿವಂ ಎಂದರೆ ಶ್ರಮ/ಸದ್ಗುಣ, ಅತ್ಯಮೂಲ್ಯವಾದುದು. "ಸುಂದರಂ" ಎಂದರೆ ಸತ್ಯವನ್ನು ಅನುಭವಿಸಿದೆ. ಮನುಷ್ಯನ ಪ್ರಜ್ಞೆಯ ಅರುಳುವಿಕೆ ಆನಂದ ಸಂತೋಷಗಳಾಗಿವೆ, ನಿಸ್ಕಾಮ ಪ್ರೀತಿ, ನಿಸ್ಕಾಮ ಕಾಯಕ, ಸಾತ್ವಿಕ ಚಿಂತನೆಯ ಉಲಿಗಳಲ್ಲಿ ಸೌಂದರ್ಯಾನುಭೂತಿ ಇದೆ.ಆ ಸೌಂದರ್ಯಾನುಭವವೇ ಸಗ್ಗದ ಸುಖವಾಗಿದೆ.ಅಂದರೆ ಪ್ರತಿ ಮಾನವನೂ ತನ್ನ ಅಂತರಂಗದ ಆನಂದದನುಭೂತಿ ಪಡೆಯುವ ಸ್ವರೂಪ ಅರಿತಾಗಲೇ ಸಗ್ಗದಂತ ಸೌಂದರ್ಯ ಸಾಕ್ಷಾತ್ಕರಿಸಲು ಸಾಧ್ಯ. ಕವಿ ಕುವೆಂಪು ಅವರ ಆಧ್ಯಾತ್ಮಿಕ ದರ್ಶನಕ್ಕೆ ಸೌಂದರ್ಯಾನುಭೂತಿಯೇ ಮೂಲ. ಸೌಂದರ್ಯದ ಪೂರ್ಣ ಸಿದ್ಧಿ ಪಡೆಯುವ ಪೂರ್ವ ಸ್ಥಿತಿಯಲ್ಲಿ ಅನೇಕ ಯಮಯಾತನೆಗಳನ್ನು ಎದುರಿಸುವ ರೀತಿಗಳು, ನಿರಂತರ ಪ್ರಯತ್ನಗಳನ್ನು ಕವಿ ಹೀಗೆ ಹೇಳಿದ್ದಾರೆ.

"ಹೂವಿನ ಸೊಬಗನ್ನು ನೋಡುತ್ತಾ ನಾನು
ಕೋಮಲವೆನ್ನುತ್ತಾ ಮುತ್ತಿಡುವೆ
ಹೂವಿನ ಪೆಂಪಿಗೆ ಬಾಳನ್ನು ಕೊಟ್ಟಾ
ಮೊಳಕೆಯ ಗೋಳನು ನೀನರಿಯೇ" ( ಸಮಗ್ರ ಕವನ ಸಂಕಲನ ಸಂಪುತಟ–೧,ಪುಟ–೭೬)

ಪ್ರಸ್ತುತ ಸಾಲುಗಳು ಸೌಂದರ್ಯದ ಹಿಂದಿರುವ ಸತ್ಯ ಶೋಧಿಸುತ್ತದೆ; ಬಿತ್ತುವ ಬೀಜದಿಂದ ಅದರ ಪ್ರಕ್ರಿಯೆ ಪ್ರಾರಂಭವಾಗಿ ಅಂಕುರಗೊಂಡು ಸಸ್ಯವಾಗಿ, ಗಿಡವಾಗಿ ಅದರಲ್ಲಿ ಹೂ ಬಿಡುವ ಚಲನೆ ನಿರಂತರ ಸಾಗುತ್ತದೆ.ಸದಾ ಪ್ರಯತ್ನಶೀಲತೆಯ ಗುಣ ಮತ್ತು ಸತತ ಪರಿಶ್ರಮಗಳಿಂದ ಸೌಂದರ್ಯ ಪಕ್ವಗೊಳ್ಳುತ್ತದೆ.ಇದು ಪ್ರಕೃತಿ ಸಹಜ ವ್ಯಾಪಾರ.ಇದರಂತೆ ಮಾನವ ತನ್ನ ಸಾಧಾನಾ ಸಿದ್ಧಿ ಪೂರ್ವದಲ್ಲಿ ಮೊಳಕೆಯ ಗೋಳನ್ನು ಅನುಭವಿಸುವದು ಸಹಜ.ನಿರಂತರ ಸಾತತ್ಯ,ಸದೃಢ ಸಂಕಲ್ಪ ಸ್ಥಿರತೆಗಳಿಂದ ಹೂವಿನಂತಹ ಸೊಬಗನ್ನು ಹೊಂದಲು ಸಾಧ್ಯವಾಗುತ್ತದೆ.

"ವಸಂತ ವನದಲ್ಲಿ ಕೂಗುವ ಕೋಗಿಲೆ
ರಾಜನ ಬಿರುದನು ಬಯಸುವದಿಲ್ಲ
ಹೂವಿನ ಮರದಲಿ ಜೇನುಂಬುಳುಗಳು
ಮೊರೆವುದುರಾಜನ ಭಯದಿಂದಲ್ಲ
ವನದೇಕಾಂತದಿ ಪೆಣ್ ನವಿಲೆಡೆಯಲಿ
ಮಯೂರ ನೃತ್ಯೋನ್ಮತ್ತ ವಿಲಾಸಕೆ
ರಾಜನ ಕತ್ತಿಯ ಗಣನೆಯೆ ಇಲ್ಲ
–––––––––––––––––
–––––––––––––––––
–––––––––––––––––
ಕತ್ತಲೆ ಮುತ್ತಿದ ಬಾನಲಿ ಮಿಣುಕುವ
ತಾರೆಗೆ ದೊರೆಯಾಣತಿ ತೃಣವಿಲ್ಲ
ವಿಪ್ಲವ ಮೂರ್ತಿಯ ಸಖನಾಗಿಹನ್ನೈ
ಕವಿಗೆರಸುಗಿರಸುಗಳ ಋಣವಿಲ್ಲ
ಅವನಗ್ನಿ ಮುಖಿ
ಪ್ರಳಯ ಶಿಖಿ."(ಸ.ಕ.ಸಂ ಸಂಪುಟ–೧,ಪುಟ–೧೩೨)

ನಿಸರ್ಗದ ವಸ್ತುಗಳನ್ನು ಪ್ರತಿಮೆ, ಸಂಕೇತಗಳನ್ನಾಗಿ ಬಳಸಿದ ಕವಿ ಕುವೆಂಪು ಅವರ ಕವಿತೆಗಳಲ್ಲಿ (ಸಾಹಿತ್ಯದಲ್ಲಿ) ಪ್ರಬುದ್ಧ ಚಿಂತನೆಯ ಪ್ರವಾಹ ಹರಿದಿದೆ. ನಿಸರ್ಗದಡಿಯಲಿ ಸುಮಧುರವಾಗಿ ಹಾಡುವ ಕೋಗಿಲೆ, ಸುಂದರವಾಗಿ ಅರಳಿರುವ

ಹೂವುಗಳು, ಮನಮೋಹಕವಾಗಿ ನರ್ತಿಸುವ ನವಿಲುಗಳು, ಆಕಾಶದಲ್ಲಿ ತೇಲುವ ಮೋಡಗಳು, ಹೊಳೆಯುವ ಬೆಳದಿಂಗಳು, ಮೊಳಗುವ ಸಿಡಿಲುಗಳು, ಕಂಗೊಳಿಸುವ ಮಿಂಚು, ಮಿನಗುವ ಚುಕ್ಕೆಗಳು– ಇವು ಸ್ವತಂತ್ರತೆಯಿಂದ ಮುಕ್ತ ಪರಿಸರದಲ್ಲಿ ಬೆಳೆದು ತಮ್ಮ ಚೆಲವನ್ನು ಬೀರುತ್ತಾ ಜನಮನ ಆಕರ್ಷಿಸುತ್ತಾ ನಿಂತಿವೆ.ಅದರಂತೆ ಒಬ್ಬ ಸೃಜನಶೀಲ ಕವಿ ಯಾರ ಹಂಗಿಲ್ಲದೆ ಬೆಳೆದರೆ ಆತ ರಚಿಸಿದ ಸಾಹಿತ್ಯ ಶ್ರೇಷ್ಠ ಗುಣಗಳಿಂದ ಕೂಡಿರುತ್ತದೆ. ಏಕೆಂದರೆ ರಾಜನ ಹಂಗಿನಲ್ಲಿ ಬೆಳೆದ ಕವಿ ಆತ ರಚಿಸಿದ ಸಾಹಿತ್ಯದಲ್ಲಿ ಸಾಹಿತ್ಯಧರ್ಮ ಗೌಣವಾಗುವ ಸಾಧ್ಯತೆ ಇರುತ್ತದೆ.ರಾಜಾಶ್ರಯದಲ್ಲಿದ್ದ ಪ್ರಾಚೀನ ಕವಿಗಳು ಕಾವ್ಯಗಳು ಕಾವ್ಯಧರ್ಮ ಮತ್ತು ಮತಧರ್ಮ ಸಮನ್ವಯವಾಗಿ ಸಾಧಿಸಿದ್ದರೂ ಸಹ ಅಲ್ಲಲ್ಲಿ ಕೆಲವೊಂದು ಅನೌಚಿತ್ಯದ ಸಂಗತಿಗಳನ್ನು ಹೊಂದಿವೆ. ಸಮಾಜದ ಶುದ್ಧಿಕರಣದ ಹೊಣೆ ಹೊತ್ತ ಕವಿಗಳು ಯಾವ ಋಣ ಬಾಧೆಗಳಿಂದ ನೆರಳ ಬಾರದು; ಜೋಳದ ಪಾಳೆಗಾಗಿ ಆಗಾಧವಾದ ಪ್ರತಿಭಾ ಸಂಪನ್ನತೆ ಒತ್ತೆಯಿಡದೆ, ಸ್ವಚ್ಛಂದ ಮುಕ್ತತೆಯಿಂದ ಸಾಹಿತ್ಯ ಸೃಷ್ಟಿಯಾಗಬೇಕೆಂದು ಪ್ರಸ್ತುತ ಕವನ ಧ್ವನಿಸುತ್ತದೆ. 'ಅಗ್ನಿಮುಖಿ ಪ್ರಳಯ ಶಿಖಿ" ಎಂಬ ರೂಪಕದ ಮೂಲಕ ಕವಿಯ ವ್ಯಕ್ತಿತ್ವವನ್ನ ವರ್ಣಿಸಲಾಗಿದೆ. "ಅಗ್ನಿಮುಖಿ" ಎಂಬುದು ಕ್ರೋಧಾಗ್ನಿಯ ಭಾವ. ಸಾರ್ವತ್ರಿಕ ಹಿತವನ್ನುಂಟು ಮಾಡುವ ಸಾತ್ವಿಕದ ಕೋಪಗಳು ಹೊಸ ಪರಿವರ್ತನೆ– ವರ್ತನೆಗಳನ್ನು, ಹೊಸ ಹೊಸ ಆಲೋಚನ ಕ್ರಮಗಳನ್ನು ಸೃಷ್ಟಿಸುತ್ತದೆ.ಅಂತಯೇ ಪ್ರಳಯಗಳು ಹೊಸ ಯುಗಗಳಿಗೆ ನಾಂದಿ ಆಗುತ್ತವೆ. ಆಡಳಿತ ವರ್ಗದಕ್ರೌರ್ಯ, ದಬ್ಬಾಳಿಕೆ, ಬಡವರ ಮೇಲಿನ ಶೋಷಣೆ, ಪರರ ಹಿಂಸಿಸಿ ಹಣದೋಚುವ ಪರಾಕ್ರಮದ ದೌಲತುಗಳನ್ನು ಮಾಡುವ ಆಳರಸರಿಗೆ ಕವಿ 'ಅಗ್ನಿಮುಖಿ ಪ್ರಳಯ ಮುಖಿ' ಯಾಗಬೇಕೆಂಬುದು ಪ್ರಸ್ತುತ ಕವಿತೆ ಧ್ವನಿಸುತ್ತದೆ.ಯಾವ ಹಂಗಿಲ್ಲದೆ ಕವಿ ಹೃದಯ ಹೊಸ ಸೃಷ್ಟಿಗೆ ಕಾರಣವಾಗಿ ಶೋಷಣೆರಹಿತ ಸಮಾಜ ನಿರ್ಮಾಣ ಮಾಡುವ ಗುರಿ ಅನುರಣಿಸಬೇಕು. ವ್ಯಕ್ತಿ ಸ್ವಾತಂತ್ರ್ಯ ನೀಡಿ, ವರ್ಗ–ವರ್ಣ–ಲಿಂಗ ಬೇಧರಹಿತ ಸಮಾನತೆಗಳನ್ನು ಸಾಧಿಸುವದರಿಂದ ಸರ್ವೋದಯವಾಗಲು ಸಾಧ್ಯವಾಗುತ್ತದೆಂಬ ಕವಿ ಕುವೆಂಪು ಅವರ ಆಶಯ.

"ಮಲೆಯನಾಡು ಬನಗಳಲ್ಲಿ
ಮುಗುದ ಬಾಲನೆಲೆಯುತಿರಲು
ಅರಿಯದಂತೆ ಹೆಜ್ಜೆಯಿಟ್ಟು
ಬೆನ್ನ ಹಿಂದೆ ನೀನು ಬಂದೆ
ಕಬ್ಬಿದಂಗನೆ!
ನಿನ್ನ ಪುಣ್ಯ ಸಂಗ ಲಭಿಸಿ
ಧನ್ಯನಾದನು!
ನಿನ್ನಕೂಡ ಜನರಿಗೆಲ್ಲ
ಗಣ್ಯನಾದೇನು
ಅಲ್ಲಗಳೆಯುತ್ತಿದ್ದ ಜನಕೆ
ಮಾನ್ಯನಾದನು" (ಕೊಳಲು–ಪು–೬)

ಮಲೆನಾಡಿನಲ್ಲಿ ತಿರುಕನಂತೆ ತಿರುಪೆ ಬೇಡಿ ತಿರುಗುತ್ತಿದ್ದ ಮುಗ್ಧ ಬಾಲಕ ಕಬ್ಬದಂಗನೆಯ ಸಖ್ಯದಿಂದ ಗಣ್ಯನಾಗಲು, ಮಾನ್ಯನಾಗಲು ಸಾಧ್ಯವಾದುದು ಮಲೆನಾಡಿನ ನಿಸರ್ಗದ ಸೌಂದರ್ಯಾನುಭವ ಮತ್ತು ಆಂತರಿಕ ಅನ್ವೇಷಣೆಗಳಿಂದ. 'ಅಲ್ಲಗಳೆಯುತ್ತಿದ್ದ ಜನಕೆ ಮಾನ್ಯನಾದನು'–ಎನ್ನುವಲ್ಲಿ ಶ್ರೇಣಿಕೃತ ಸಮಾಜ ರಚನೆಯನ್ನು ನವಿರಾಗಿ ಅಲ್ಲಗಳೆದಿದ್ದಾರೆ. ಮಲೆನಾಡಿನಲ್ಲಿ ತಿರುಗುತ್ತಿದ್ದ ಬಾಲಕ ಗಣ್ಯ ಮಾನ್ಯರಾಗಿ ಬೆಳೆದಿದ್ದು ಕವಿ ಕುವೆಂಪು ಅವರಿಗೆ ಚಾರಿತ್ರಿಕ ಮಹತ್ವ ದೊರೆತಿದೆ.

ನಿಸರ್ಗದ ವ್ಯಾಪಾರಕ್ಕೂ ಕವಿ ಮನಸ್ಸಿನ ವ್ಯಾಪಾರಕ್ಕೂ ತಾದಾತ್ಮ್ಯತೆ ಇದೆ.

"ದಿಗಂತದಿಂದ ದಿಗಂತಕೆ ಹಬ್ಬಿದೆ
ವಿಶ್ವವತಬ್ಬಿದೆ
ರುಂಧ್ರರಾತ್ರಿ!
ಸಾಂದ್ರ ತಮಂಧದ ಮುಳು ಮುಳುಂಗುತೆ
ಕರಂಗಿದೋಲಿದ ರಾತ್ರಿ" ( ಸ.ಕ.ಸಂಕಲನ ಸಂಪುಟ–೧,ದೇವರು–ಪೂಜಾರಿ)

ಇದು ಒಂದು ರಾತ್ರಿಯ ತಮಂಧತೆ ಅಲ್ಲ. ಮಾನವ ಮತಿಗೆ ನಿರಂತರವೂ ಕವಿಯುತ್ತಿರುವ ಅಜ್ಞಾನ ಇಂತಹ ಮತಿ ಭ್ರಮೆ ನಿವಾರಣೆಗಾಗಿ ಸುಂದರವಾದ ಪರಿಸರ, ತನ್ಮಯಗೊಳ್ಳುವ ಸಹೃದಯತೆ ಸೌಂದರ್ಯ ಆಸ್ವಾದಿಸುವ ರಸಿಕತನಗಳಿದ್ದಾಗ ಬದುಕಿನ ಸೊಬಗುಂಟಾತ್ತದೆ.ಮತಿಕ್ಲಬ್ಯ ನಿರ್ಮೂಲನೆಗೊಳ್ಳಬೇಕಾದರೆ ಶ್ರಮ ಸಂಸ್ಕೃತಿ ಅನುಸರಿಸಬೇಕು.

"ಪ್ರಕೃತಿ ಸೌಂದರ್ಯಮಂ ಭಾವನೋಜ್ವಲವಾಗಿ

ನೋಡಿದಿಹ ಬಾಳೊಂದು ಬಾಳಲ್ಲ! "ಸೊಬಗಿನಲಿ
ಶಿವನಿಹನು; ಶಿವನೆ ಸೊಬಗಾಗಿಹನು" ಎನಿತೊರೆಯೆ
ಈ ವಚನ ಪುನರುಕ್ತಿಯಾದೀತು? ಹೇಳನೀತು?
ಸತ್ಯಂ ಶಿವಂ ಸುಂದರಂಎಂದು ಹಾಡಿದರು".

ಪ್ರಕೃತಿ ಸೌಂದರ್ಯ ಆನಂದಮಯ: ಈ ಸಮಯದಲ್ಲಿ ಮೂಡಿರುವ ಮಹೋನ್ನತ ಭಾವಗಳು ಸ್ವರ್ಗ ಸುಖ ನೀಡಿವೆ.ಅಂದ–ಚೆಂದದಲ್ಲಿ ಶಿವನಿರುವನು.ಅಂದ–ಚೆಂದ, ಸೊಬಗುಗಳು ಮೇಲ್ನೋಟದ ಭಾವದರ್ಶನದ ರೂಪಗಳು. ಇವು ಸೃಷ್ಟಿಗೊಳ್ಳಲು ಶ್ರಮ ಸಂಸ್ಕೃತಿ ಬಹುಮುಖ್ಯ. ಶ್ರಮ ಸಂಸ್ಕೃತಿಯಿಂದಲೆ ಬದುಕು ಸೊಬಗಿನ ಅರೆಮನೆಯಾಗುವದು.ಅದಕ್ಕೆ ಪೂರಕವಾಗಿ ಸತ್ಯವೆಂಬ ಪ್ರಮಾಣಬದ್ಧ ಗುಣ ಅನವರತ ಅನುಸರಿಸಬೇಕು.ಇಂತಹ ಕೆಲ ನಿಯಮ ಶಿಸ್ತುಗಳನ್ನು ಪಾಲಿಸಿದರೆ ವ್ಯಕ್ತಿ ಆಂತರಿಕ ಸೌಂದರ್ಯ ದರ್ಶನದೊಂದಿಗೆ ಬಾಹ್ಯ ಸೌಂದರ್ಯ ಕಂಗೊಳಿಸುತ್ತದೆ.

ವಿಶ್ವದ ಚರಾಚರ ವಸ್ತುಗಳಲ್ಲಿ ಜೀವ ಸೆಲೆ ಇದೆ. ಅವು ಎಲ್ಲವೂ ಚೇತನ ಮೂರ್ತಿಗಳೇ....

"ಚೇತನ ಮೂರ್ತಿಯು ಆ ಕಲ್ಲು
ತೆಗೆಜಡವೆಂಬುದೆ ಬರು ಸುಳ್ಳು"(ಪಕ್ಷಿಕಾಶಿ–ಪು–೭)

ಕಲ್ಲು–ಮಣ್ಣಿನಲ್ಲಿಯೂ ಜೀವ ಸೆಲೆ ತುಂಬಿದೆ.ಕಲ್ಲು ಅಚೇತನವಾಗಿದ್ದರೆ ಭವ್ಯ ಮಹೋನ್ನತ ಭಾವ ಉಂಟು ಮಾಡುತ್ತಿದ್ದ ಶಿಲ್ಪ ಅದರಲ್ಲಿ ಮೂಡುತ್ತಿರಲಿಲ್ಲ. ಮಣ್ಣಿನಲ್ಲಿ ಹಸಿರು ಸೌಂದರ್ಯ ಉತ್ಪನ್ನ ಮಾಡುವ ಕಾಂತಿಯ ಗುಣವಿದೆ. ಹೀಗಾಗಿ ವಸುಂಧರೆ ನಿತ್ಯ ನೂತನ ಆಕೆ ಚಿರನೂತನ ಗರ್ಭಿಣಿ.

"ಪಚ್ಚೆಯಾಗಿ ಮೆರೆಯುತ್ತಿತ್ತು
ಭುವಿಯ ಮಣ್ಣು
ಪಸುರ ಸಿರಿಯ ಮೇಯುತ್ತಿತ್ತು
ಕವಿ ಕಣ್ಣು"( ಪಕ್ಷಿಕಾಶಿ–ಪು–೧೩)

ರಸಾನಂದನುಭೂತಿಗೆ ಮೂಲ ಭೂಮಿಕೆಯಾಗಿರುದು ಭವನ. ಹಸಿರು ತರುಮರಗಳಿಂದ,ರಸಬಳ್ಳಿಗಳಿಂದ ಮತ್ತು ಚಿತ್ರಾರೇಖಾ ವಿನ್ಯಾಸಗಳಿಂದ ಸುಂದರ ಶಿಲ್ಪ ಕೃತ್ತಿಕೆಗಳಿಂದ ಆವೃತ್ತವಾಗಿದೆ.ಇದನ್ನ ಅನುಭವಿಸಿದ ಕವಿ ಹೃದಯ ಹಂದರದಲ್ಲಿ ನವನವೋನ್ಮೇಷ ಶಾಲನಿಯಾಗಿರುವ ಭಾವ ಬುದ್ಧಿಗಳು ಪ್ರಕಾಶಿಸಲ್ಪಡುತ್ತಿವೆ. ಹೀಗೇ ಕವಿ ದರ್ಶನದಲ್ಲಿ ' ಸಾಕ್ಷಿಭೂತವಾಗಿ ನಿಂತ ಜ್ಞಾನ ಪ್ರಗಲ್ಪತೆಗಳಿಂದ ಮೂಡಿದ ಸಾಹಿತ್ಯ ನಿತ್ಯ ನೂತನವಾಗಿರುತ್ತದೆ.ದೃಷ್ಟಿಯಂತೆ ಸೃಷ್ಟಿ; ನೋಡುವ ದೃಷ್ಟಿಯಲ್ಲಿ ಸಾಕಾರತ್ಮಕ ಇದ್ದರೆ ಅದರ ಫಲದಿಂದುಂಟಾಗುವ ಭಾವಗಳು ಚೇತೋಹಾರಿಯಾಗಿ ರಸಮಯವಾಗಿರುತ್ತವೆ. ಪ್ರಕೃತಿಯಲ್ಲಿರುವ ಗಿಡ–ಮರಗಳು ಕೇವಲ ಹಸಿರು ಎಂದು ತಿಳಿದರೆ ನಿರಸವುಂಟಾಗುತ್ತದೆ. ಬಾಳಿನಲ್ಲಿ ಬರಿ ನೋವು ಕಷ್ಟಗಳು ಕಂತೆನ್ನುವ ನಿರುತ್ಸಾಹ ಉಂಟಾಗುತ್ತದೆ.ಆದ್ದರಿಂದ ಪ್ರತಿ ವ್ಯಕ್ತಿ ಸಾಕಾರಾತ್ಮಕ ಯೋಚನೆ–ಚಿಂತನೆಗಳಿಂದ ಬದುಕು ಸಮೃದ್ಧಿಗೊಳಿಸಿಕೊಳ್ಳಬೇಕು.ಪ್ರತಿ ನಿಮಿಷ ರಸಗಳಿಗೆ ಮತ್ತುಜ್ಞಾನ ಗಳಿಕೆಯ ಗಳಿಗೆಗಳಾದರೆ ಬದುಕು ಮನಗಳೆರಡು ಸೌಂದರ್ಯಾನಂದದ ನೆಲೆಯಾಗಿ ಬೆಲೆ ಬರುವುದು.

ಸಹ್ಯಾದ್ರಿ ದಟ್ಟ ಅರಣ್ಯದ ಸೌಂದರ್ಯಾನುಭೂತಿಯನ್ನ ಪಡೆದ ಕವಿ, ಸಾಹಿತ್ಯದ ಅಭಿವ್ಯಕ್ತಿಯಲ್ಲಿ ಅದರದಟ್ಟ ಪ್ರಭಾವಇದೆ. ಕುವೆಂಪು ಅವರಿಗೆ ಸಾಹಿತ್ಯಧರ್ಮ ಮತ್ತು ಪ್ರಕೃತಿಧರ್ಮಎರಡೂ ಅಭಿನ್ನ. ಕಾಡಿನ ರುದ್ರತೆ, ಅದರ ಭಯಾನಕತೆ, ಅದರ ಸೌಂದರ್ಯದ ಭೂಮ, ಅದರ ನಿಸ್ವಾರ್ಥತೆಯ ಕಾರ್ಯ ವೈಖರಿಗಳು ಕುವೆಂಪು ಅವರ ವಿಶಿಷ್ಟ ಪಾತ್ರಗಳ ಸೃಷ್ಟಿಗೆ ಕಾರಣವಾಗಿವೆ. 'ಬೆರಳ್ ಗೆ ಕೊರಳ್'–ಏಕಲವ್ಯ, ಜಲಗಾರ, ಶೂದ್ರ ತಪಸ್ವಿ ಮುಂತಾದ ಪಾತ್ರಗಳು ವಿಪಿನ ದ್ರವ್ಯದಂತೆ ವಿವೇಕದ ಬಲಿಷ್ಠತೆ, ಪ್ರತಿಭಾ ಸಂಪನ್ನತೆ ವಿಶಿಷ್ಟ ಚಿಂತನಗಳು ಪ್ರಸನ್ನಗೊಂಡಿವೆ. ಏಕಲವ್ಯನ ಕಲಿಕೆಯ ಹಸಿವು ತನ್ನ ಗುರುವಿನ ನಿರಾಕಾರದಡಿಯಲ್ಲಿ ನಿಸ್ಕಾಮ ಭಕ್ತಿಯಿಂದ ಮಾಡಿದ ತಪಸ್ಸು (ಪ್ರಯತ್ನ) ಧ್ಯಾನಗಳಿಂದ (ಏಕಾಗ್ರತೆ) ಸಿದ್ಧಿಸಿವೆ. ಕಾಡಿನ ಸೃಷ್ಟಿಯ ಪ್ರಕ್ರಿಯೆಗಳೆಲ್ಲವೂ ಏಕಲವ್ಯನಲ್ಲಿ ಆವರ್ಭವಿಸಿದ ಕಾರಣ ನಿಸ್ಕಾಮ–ನಿರ್ಮೋಹ, ನಿರ್ಮತ್ಸರ ಗುಣಗಳಿಂದ ಆತ ಪ್ರದೀಪ್ತನಾಗುತ್ತಾನೆ. ಶೂದ್ರ ತಪಸ್ವಿ ಮತ್ತು ಜಗದ ಜಲಗಾರದಂತಹ ಪಾತ್ರಗಳು ಸನಾತನ ಧರ್ಮದ ಸಂಕೋಲೆಗಳನ್ನು ಸಡಿಲುಗೊಳಿಸಿ ಜಗತ್ತಿಗೆ ಪ್ರಖರ ವೈಚಾರಿಕತೆ ಕಟ್ಟಿಕೊಟ್ಟಿವೆ.

"ಪ್ರಕೃತಿಯ ಸಂಪರ್ಕವಿರದಿದ್ದರೆ ನಿಮ್ಮ ಸಾಹಿತ್ಯ ಬೇರೆ ದಾರಿ ಹಿಡಿಯುತ್ತಿತ್ತಲವೆ? ಈ ಪ್ರಶ್ನೆಗೆ ಉತ್ತರ ಹೀಗಿದೆ.ಅದರಲ್ಲಿ ಅನುಮಾನವಿಲ್ಲ.ನಾನು ಹುಟ್ಟಿದ್ದು ಬೆಳೆದಿದ್ದು ಕಾಡಿನ ಮಧ್ಯ.ನಾನು ಮೈಸೂರು ಸೇರುವ ಮುನ್ನ ನನ್ನದು ಕಾಡು ಜೀವನ.ಅಲ್ಲಿಯ ಪಶುಪಕ್ಷಿಯ ಜೊತೆಯಲ್ಲಿ ನನ್ನ ಬಾಳು ಸಾಗುತ್ತಿತ್ತು.ಮೀನು ಹಿಡಿಯೋದು,ಹಕ್ಕಿಹೊಡೆಯೋದು,ಶಿಖಾರಿ ಮಾಡೋದು ನನ್ನ ಹವ್ಯಾಸಗಳಾಗಿದ್ದವು.ವಾಲ್ಮೀಕಿ ವ್ಯಾಧನಾಗಿದ್ದಾಗ ದರೋಡೆ ಹೊಡೆದು ನನ್ನಂತೆಯೆ ಕಾಡು ಜೀವಿಯಾಗಿದ್ದನಷ್ಟೆ. ನಾನು ಭೌತಿಕವಾಗಿ ಮೈಸೂರಿನಲ್ಲಿದ್ದರೂ ಮಾನಸಿಕವಾಗಿ ಹಾಗೂ ಅಧ್ಯಾತ್ಮಿಕವಾಗಿ ಸದಾ

ಮಲೆನಾಡಿನಲ್ಲಿರುತ್ತೇನೆ. ಪ್ರತಿನಿತ್ಯ ಹಲವು ಸಾರಿ ನವಿಲು ಕಲ್ಲಿಗೆ ಹೋಗಿ ಬರ್ತೀನಿ.ಕವಿಶೈಲದಲ್ಲಿ ಕುಳಿತು ಧ್ಯಾನ ಮಾಡ್ತೀನಿ.ತುಂಗಾ ತೀರದ ಮರಳು ಗುಡ್ಡೆಯ ಮೇಲೆ ಅಲೆದಾಡ್ತೀನಿ.ನಾನು ಮಲೆನಾಡಿನಲ್ಲಿ, ಸಹಾದ್ರಿಯ ತೋಳ್ತೊಟ್ಟಿಲಲ್ಲಿ ಹುಟ್ಟಿದೆ ಇದ್ದ ಪಕ್ಷದಲ್ಲಿ ನನ್ನ ಮೂಲಕ ಇಂಥ ಸಾಹಿತ್ಯ ಹುಟ್ಟುತ್ತಿರಲಿಲ್ಲ, ಅದರಲ್ಲಿ ಪೂರ್ಣದೃಷ್ಟಿ ಮೂಡಲು ಸಹ ಸಾಧ್ಯವಾಗುತ್ತಿರಲಿಲ್ಲ."( ಕುವೆಂಪು ದರ್ಶನ ಸಂಪುಟ–೧, ಲೇ: ದೇಜಗೌ.ಪುಟ:೫೪೮,೫೪೯)

ಹೀಗೆ ಕಾಡು, ಕಾಡಿನ ಪ್ರತಿಮೆ, ನಿಸರ್ಗ ಸೌಂದರ್ಯ, ಪ್ರಕೃತಿಯ ಚರಾಚರ ವಸ್ತು– ವ್ಯಾಪಾರಗಳನ್ನೆ ಗರ್ಭಿಕರಿಸಿಕೊಂಡ ಬೆಳದ ಕುವೆಂಪು ಅವರ ಸಾಹಿತ್ಯ ಹೊಸ ಹೊಸ ಚಿಂತನೆಯ ಸೆಲೆಗಳನ್ನು ಚಿಮ್ಮುತ್ತಲಿರುತ್ತದೆ.

**ಆಕರ ಗ್ರಂಥಗಳು**

೧) ಕುವೆಂಪು ಅವರ ಸಮಗ್ರ ಕವನಸಂಕಲನ ಸಂಪುಟ–೧,ಪ್ರ: ಕನ್ನಡ ವಿಶ್ವವಿದ್ಯಾಲಯ,ಹಂಪಿ

೨) ಕುವೆಂಪು ದರ್ಶನ ಸಂಪುಟ–೧, ಪ್ರ:ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

೩) ಕೋಗಿಲೆ ಮತ್ತು ಸೋಹಿಯಟ್ ರಷ್ಯಾ

೪) ಕೊಳಲು

೫) ಕುವೆಂಪು ಪುನರಾಲೋಕನ,ಲೇ: ಡಾ ಜಿ ಎಸ್ ಶಿವರುದ್ರಪ್ಪ,ಪ್ರ:ಅಮಕಿತ ಪುಸ್ತಕಾಲಯ,ಬೆಂಗಳೂರು

# ಕುವೆಂಪುರವರ 'ಜಲಗಾರ' ನಾಟಕದಲ್ಲಿ ಕಾಯಕ ಹಾಗೂ ಧಾರ್ಮಿಕ ಪ್ರಭುತ್ವದ ವೈಚಾರಿಕ ನೆಲೆಗಳು

**ಡಾ.ಕೆ.ಕುಸುಮಾದೇವಿ**
**ಕನ್ನಡ ಸಹಾಯಕ ಪ್ರಾಧ್ಯಾಪಕರು,**
**ಕೊಟ್ಟೂರೇಶ್ವರ ಮಹಾವಿದ್ಯಾಲಯ, ಕೊಟ್ಟೂರು.**

ಕನ್ನಡ ಸಾಹಿತ್ಯದ ನವೋದಯವನ್ನು ಪ್ರವೇಶಿಸಿದ ಕುವೆಂಪು ಕಾಡಿನ ಕವಿಯಾಗಿ ಆನಂತರದಲ್ಲಿ ನಾಡಿನ ಕವಿಯಾಗಿ **'ಕುವೆಂಪು'** ಎಂಬ ಮೂರಕ್ಷರದಿಂದಲೆ ಕನ್ನಡಿಗರ ಮನೆ ಮಾತಾದ ಕುವೆಂಪುರವರು ಹೊಸಗನ್ನಡ ಸಾಹಿತ್ಯವನ್ನು ವಿಶ್ವವೇದಿಕೆಗೆ ಕೊಂಡೊಯ್ದ ಮಹಾನ್ ಚೇತನವಾಗಿದ್ದಾರೆ.

ಕುವೆಂಪುರವರ ನಾಟಕಗಳಲ್ಲಿ ಶ್ರೀಸಾಮಾನ್ಯರ ಬದುಕಿನ ಬಗೆಗಿನ ಕಾಳಜಿಯನ್ನು ನಾವು ಕಾಣಬಹುದಾಗಿದೆ. ಪ್ರಸ್ತುತ ಪ್ರಬಂಧದಲ್ಲಿ **'ಜಲಗಾರ'** ನಾಟಕದಲ್ಲಿ ಶ್ರಮಸಂಸ್ಕೃತಿ ಮೌಲ್ಯದ ಪ್ರಬಲವಾದ ಪ್ರತಿಪಾದನೆಯಿದೆ.ಪುರೋಹಿತ ಶಾಹಿಯ ನಿರಾಕರಣೆ, ಕೋಮುಸೌಹಾರ್ದತೆ,ಕಂದಾಚಾರಗಳಿಗೆ ವಿರೋಧವಾಗಿರುವುದನ್ನು ಪ್ರತಿ ಹಂತದಲ್ಲಿ ನಾವು ಕಾಣಬಹುದಾಗಿದೆ.ಈ ನಾಟಕ ಪ್ರಧಾನ ಪಾತ್ರ ಜಲಗಾರನದ್ದಾಗಿದೆ. ಈತನಿಗೆ ಮುಖಾಮುಖಿಯಾಗುವ ಸ್ಥರದಲ್ಲಿ ಶ್ರೀಸಾಮಾನ್ಯನಾದ ರೈತ,ತರುಣರು, ಪುರೋಹಿತರು ಹಾಗೂ ಕೊನೆಯಲ್ಲಿ ಶಿವನ ಪಾತ್ರಗಳಿವೆ. ಶಿವನನ್ನು ಜಗದ ಜಲಗಾರನೆಂದು ನಿರೂಪಿಸಿ ಆತನನ್ನು ಜಲಗಾರ ಜಾತಿಗೆ ಸೇರಿಸಿ ಅಸ್ಪೃಷ್ಯತಾ ಸಮಸ್ಯೆಯ ಕಡೆಗೆ ಲೋಕದ ಗಮನವನ್ನು ಸೆಳೆಯಲಾಗಿದೆ. ಈ ನಾಟಕದಲ್ಲಿ ಶ್ರೀ ರಾಮಕೃಷ್ಣರ ಧರ್ಮಸಮನ್ವಯತೆ, ಗಾಂಧಿಜೀಯವರ ಕರ್ಮಯೋಗ ಹಾಗೂ ಕೋಮುಸೌಹಾರ್ದತೆಯ ಸಂದೇಶವಾಗಿ ಮೂಡಿಬಂದಿರುವುದನ್ನು ವಿಶ್ಲೇಷಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ಕುವೆಂಪುರವರ ಜಲಗಾರ ನಾಟಕವು ಮುಖ್ಯವಾಗಿ ಕಾಯಕದ ಮಹತ್ವವನ್ನು ಹೇಳುತ್ತದೆ. ಅಲ್ಲದೆ ರೂಢಿಯಿಂದ ಬಂದಿರುವ ಧರ್ಮ, ಮತಧರ್ಮ, ಅಸ್ಪೃಶ್ಯತೆ, ದೇವಾಲಯ ಪ್ರವೇಶ, ಸ್ಥಾವರ ಪೂಜೆಯ ಕಲ್ಪನೆ ಹಾಗೂ ಪುರೋಹಿತಶಾಹಿ ಪ್ರಭುತ್ವ ಇವುಗಳ ರಾಜಕಾರಣವನ್ನೂ ಚರ್ಚಿಸುತ್ತದೆ. ಪ್ರಧಾನ ಸಂಸ್ಕೃತಿ ಮತ್ತು ಅಧೀನ ಸಂಸ್ಕೃತಿ ಇವೆರಡರ ನಡುವಿನ ಸಂಘರ್ಷಗಳ ಚಿತ್ರಣವನ್ನು ಈ ನಾಟಕ ಕಟ್ಟಿ ಕೊಡುತ್ತದೆ. ಇನ್ನೊಂದು ನೆಲೆಯಲ್ಲಿ ಪಾರಂಪರಿಕ ಸಮಾಜದ ಮೌಲ್ಯಗಳು ಅವೈಚಾರಿಕ ನೆಲೆಗಳನ್ನು ನಿರಾಕರಿಸಿ, ಒಂದು ಸರಳ ನೈತಿಕ ಚೌಕಟ್ಟಾಗಿ ಹೊಸ ಧಾರ್ಮಿಕ ಪರಂಪರೆಯನ್ನು ನಿರ್ಮಿಸುತ್ತದೆ. ಕುವೆಂಪುವರು ಜಡ ಸಾಂಪ್ರದಾಯಿಕ ಮೌಲ್ಯಗಳು ಹಾಗೂ ಜಾತಿ ವ್ಯವಸ್ಥೆಯ ಸಂಕುಚಿತತೆಯನ್ನು ನಿರಂತರವಾಗಿ ಪ್ರಶ್ನಿಸಿದವರು. ಈ ಹಿನ್ನೆಲೆಯಲ್ಲಿ ಕಾಯಕ ನಿಷ್ಠೆ, ಆಂತರಿಕ ನಿಷ್ಠೆ, ಮಾನವೀಯತೆ ಹಾಗೂ ವೈಚಾರಿಕ ಮೌಲ್ಯಗಳನ್ನು ಮಂಡಿಸುವ ನಾಟಕವಾಗಿ 'ಜಲಗಾರ' ರೂಪಿತವಾಗಿದೆ.

ಜಲಗಾರ : ಮುಂಜಾನೆಯೊಳಗೆ ಹೋಗುತಿಹ ರೈತ ?

ರೈತ: (ಹಿಂತಿರುಗಿ ನೋಡಿ) ಓಹೋ ನೀನರಿಯೆಯಾ? ಇಂದು ನಮ್ಮೂರ ಶಿವಗುಡಿಯ ಜಾತ್ರೆ !ಬರುವುದಿಲ್ಲವೆ ನೀನು? ತೇರೆಳೆಯಲೆಂದನಿಬರೂ ಬರುತಿಹರು.ಬಳಿಗೆನ್ನ ಸೇರಿಸರು.

ಜಲಗಾರ : ನನಗೇಕೆ ಶಿವಗುಡಿಯ ಜಾತ್ರೆ?

ಜೋಯಿಸರು ದೇಗುಲದ ನಾಟಕದ ಪ್ರಾರಂಭದಲ್ಲಿ ಶಿವಗುಡಿಯ ಜಾತ್ರೆಗೆ ಹೊರಟಿರುವ ರೈತ ಮತ್ತು ಕಾಯಕ ಕರ್ಮಿ ಜಲಗಾರ– ಇವರ ನಡುವಿನ ಸಂವಾದದಲ್ಲಿ ಮಹತ್ವದ ವಿಚಾರಗಳು ಚರ್ಚಿತವಾಗುತ್ತವೆ. 'ಜಲಗಾರ' ನಾಟಕದಲ್ಲಿ **'ಕಾಲೇ ಕಂಬ, ದೇಹವೇ ದೇಗುಲ ಮತ್ತು ಕಾಯಕವೇ ಶಿವಾರಾಧನೆ'** ಎಂಬ ವಚನಕಾರರ ತಾತ್ವಿಕ ಚಿಂತನೆ ಬಹಳ ಪ್ರಧಾನವಾಗಿ ಕಂಡು ಬರುತ್ತದೆ. ಕಾಯಕ ತತ್ವಕ್ಕೂ ದೇವಾಲಯ ಕಲ್ಪನೆಗೂ ಪರಸ್ಪರ ಸಂಬಂಧ ಹಾಗೂ ವೈರುಧ್ಯಗಳಿರುವುದನ್ನು ನಾಟಕವು ಪ್ರತಿಪಾದಿಸುತ್ತದೆ. ಮೇಲುಜಾತಿ, ಮೇಲುವರ್ಗದವರಿಂದ ತಿರಸ್ಕಾರಕ್ಕೆ ಗುರಿಯಾದ ಊರ ಜಲಗಾರನೊಬ್ಬ ಕರ್ಮಯೋಗಿಯಾಗಿ ಜಗದ ಜಲಗಾರನಲ್ಲಿ ಶಿವತ್ವದಲ್ಲಿ ಸಮನ್ವಯ ಸಾಧಿಸಿದ ಕಥೆಯನ್ನು ಈ ನಾಟಕವು ಹೇಳುತ್ತದೆ. ಶತಶತಮಾನಗಳಿಂದ ಅಧಿಕಾರವುಳ್ಳ ಮತಪಂಥಗಳು, ಧಾರ್ಮಿಕ ತತ್ವಗಳು ತಮ್ಮದೇ ಆದ ಧಾರ್ಮಿಕ ಮೌಲ್ಯಗಳನ್ನು ನಿರ್ವಚಿಸುತ್ತಾ ಬಂದವು. ಧಾರ್ಮಿಕ ಮೌಲ್ಯಗಳು ಶಿವತತ್ವ ಮಿಗಿಲಿಂ ಶರಣಧರ್ಮದ ನಿಷ್ಠುರತೆಯನ್ನು ಪ್ರತಿಪಾದಿಸುತ್ತಾರೆ.

ಜನಸಮುದಾಯವನ್ನು ಆಳುವುದಕ್ಕಾಗಿ, ಅಧಿಕಾರ ವಿಸ್ತರಣೆ ಮತ್ತು ಅಸ್ತಿತ್ವ ಸ್ಥಾಪನೆಗಾಗಿ ದೇವಸ್ಥಾನ, ಮಠಗಳಂತಹ ಅಧಿಕಾರ ಕೇಂದ್ರಗಳನ್ನು ಸ್ಥಾಪಿಸಿಕೊಂಡವು. ಇದು ಆಧುನಿಕ ಪೂರ್ವಯುಗದ ಅಧಿಕಾರ ನಿರ್ಮಾಣದ ಹಾಗೂ ಸಾಂಸ್ಕೃತಿಕ

ಪ್ರಭುತ್ವದ ಒಂದು ಮುಖ. ಅದೇ ರೀತಿಯಲ್ಲಿ ರಾಜಪ್ರಭುತ್ವಕ್ಕಿಂತ ಮತಧರ್ಮ ಪ್ರಭುತ್ವವು ಜನತೆಯ ಮೇಲೆ ಪ್ರಭುತ್ವವನ್ನು ಸಾಧಿಸುತ್ತಾ ಬಂದಿತು. ಇದು ಹೆಚ್ಚು ಅಪಾಯಕಾರಿಯೂ, ಪ್ರಭಾವಶಾಲಿಯೂ ಆಗಿತ್ತು. ಇದರ ಮೂಲಕ ಈ ದೇಶದ ವೈದಿಕ ಸಂಪ್ರದಾಯವಾದಿಗಳು ಸಮಾಜದಲ್ಲಿ ಅಸಮಾನತೆಯ ಬೀಜ ಬಿತ್ತುತ್ತಾ ಬಂದರು. ಕೆಳಜಾತಿ–ಸಮುದಾಯಗಳ ಮೇಲೆ ಪುರೋಹಿತಶಾಹಿ ಯಜಮಾನಿಕೆಯ ಶಕ್ತಿಗಳು ಧರ್ಮ ಹಾಗೂ ಜಾತಿಯ ಹೆಸರಿನಲ್ಲಿ ಭಯ, ಶೋಷಣೆ, ನಿಯಂತ್ರಣ ಹಾಗೂ ಅಸ್ಪೃಶ್ಯತೆಯನ್ನು ಹೇರಿದ್ದವು. ಲಾಭ–ನಷ್ಟಗಳ ಜಿಜ್ಞಾಸೆಯಲ್ಲಿ, ಕಾಲ್ಪನಿಕ ದೈವಗಳ ಅಸ್ತಿತ್ವ ಹಾಗೂ ಉಪಾಸನೆಗಳ ನಂಬಿಕೆಯಲ್ಲಿ ಧರ್ಮ ಮತ್ತು ಧಾರ್ಮಿಕ ಮೌಲ್ಯಗಳು ಅಸ್ತಿತ್ವ ಪಡೆದವು. ರೂಢಿಗತವಾಗಿ ಬಂದ ಈ ಬಗೆಯ ಕಲ್ಪನೆಗಳನ್ನು ಧಿಕ್ಕರಿಸಿ, 'ಧರ್ಮ' ಎಂಬುದು ಮನುಷ್ಯನ ಚೇತನ, ಬೆಳಕು, ಜೀವ, ಮನುಷ್ಯ ಹಾಗೂ ವಿಶ್ವಸಂಬಂಧ ಎಂಬುದಾಗಿ ಧರ್ಮದ ಹೊಸ ಕಲ್ಪನೆಯನ್ನು ಕುವೆಂಪು ಈ ನಾಟಕದಲ್ಲಿ ಪ್ರತಿಪಾದಿಸಿರುವುದು ಔಚಿತ್ಯಪೂರ್ಣವಾಗಿದೆ.

"ಒಂದು ಧರ್ಮದ ಕಿರಿಯ ಕಾರ್ಯ ಶತಕೋಟಿ
ಸೂರ್ಯರಿಗೆ ಬೆಳಕು; ಲೋಕ ಲಕ್ಷಕೆ ಜೀವ
ನಮ್ಮ ಬಾಳಿದು ಬರಿಯ ಮಾಯೆಯಲ್ಲ! ನಮ್ಮ ಕರ್ಮವು ಬರಿಯ ಕನಸಲ್ಲ!
ಎಂಬುದಾಗಿ ಧರ್ಮವನ್ನು ಹೊಸ ರೀತಿಯಲ್ಲಿ ಕುವೆಂಪರವರು ಅರ್ಥೈಸಿದ್ದಾರೆ. ಮುಂದುವರಿದು,
"ಕರ್ಮ ಲೀಲೆಯು ಲೀಲೆ ಕರ್ಮವು' ಎಂಬುದೆಮ್ಮಯ ಧರ್ಮವು; ಪಡೆವುದೆಮಗೇನಿಲ್ಲವು,
ಕಳೆವುದೆಮಗೇನಿಲ್ಲವು,
'ಲಾಭನಷ್ಟಗಳೊಂದುಮಿಲ್ಲವು' ಎಂಬುದೇ ವರಮರ್ಮವು".

ಎಂದು ಧಾರ್ಮಿಕ ಪರಿಭಾಷೆಯನ್ನು ಪುನರ್ಪರಿಶೀಲನೆಗೆ ಒಳಪಡಿಸಿದ್ದು ಇಲ್ಲಿ ಮುಖ್ಯವಾಗಿ ತೋರುತ್ತದೆ. ಕುವೆಂಪು ಮೈಸೂರು ಅರಸೊತ್ತಿಗೆಯ ಕಾಲದಲ್ಲಿದ್ದು ಪ್ರಭುತ್ವವನ್ನು ಧಿಕ್ಕರಿಸಿದರು. ವೈದಿಕ ವ್ಯವಸ್ಥೆಯ ಯಜಮಾನ್ಯ ಸಂಸ್ಕೃತಿಯನ್ನು ವಿರೋಧಿಸಿದರು. ದುಡಿಯುವ ವರ್ಗದ ಧ್ವನಿಯಾಗಲೆತ್ನಿಸಿದರು. ಸ್ವಯಂಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೇ ನಿರಂಕುಶಮತಿತ್ವ ಅಸ್ಪೃಶ್ಯತೆ, ಮತಚಾರಿತ್ರ್ಯ ಹಾಗೂ ಜಾತಿಕೇಂದ್ರಿತ ಶಕ್ತಿಯಿಂದ ಪಾರಾಗುವುದೇ ನಿಜವಾದ ನಿರಂಕುಶಮತಿತ್ವ" ಎಂಬ ಸಂದೇಶವನ್ನು 'ಜಲಗಾರ' ನಾಟಕದಲ್ಲಿ ಕುವೆಂಪು ಮಂಡಿಸುತ್ತಾರೆ. ಮತದ ಹುಟ್ಟು, ಬೆಳೆವಣಿಗೆ, ಅದರ ವಿಕಾರ ಮತ್ತು ನಾಶಗಳನ್ನು ಕುರಿತ ಚಿಂತನೆಯು ನಾಟಕದಲ್ಲಿದೆ;

"ಕೊನೆಯ ದೊರೆಯ ಕೊರಳಿಗಾ ಕೊನೆ ಪುರೋಹಿತನ ಕರುಳ
ಉರುಳಾಗುವಾವರೆಗೆ ಸುಖವಿಲ್ಲ ಈ ಧರೆಗೆ!"

ಕೇಂದ್ರಗಳನ್ನು ಸ್ಥಾಪಿಸಿದ್ದನ್ನು ಮತೀಯ ವಿವರಗಳನ್ನು ಎಂದು ರಾಜಪ್ರಭುತ್ವ ಮತ್ತು ಧರ್ಮಪ್ರಭುತ್ವಗಳೆರಡೂ ಪೋಷಿಸಿ, ಆ ಮೂಲಕ ಒಂದಾಗಿ ಜಾತಿ, ಅಧಿಕಾರ, ಜನಸಮುದಾಯವನ್ನು ಶೋಷಿಸಿದ್ದನ್ನು ಕುವೆಂಪು ಖಂಡಿಸುತ್ತಾರೆ. ಕುವೆಂಪು ಅವರ ಜಲಗಾರ ನಾಟಕ ಸ್ಥಾವರಲಿಂಗ ಪೂಜೆಯ ಕಲ್ಪನೆಯನ್ನು ನಿರಾಕರಿಸಿ, ಜಂಗಮತ್ವವನ್ನು ಪ್ರತಿಪಾದಿಸುವ ನಾಟಕವಾಗಿದೆ. ಕಾಯಕ ಕಲ್ಪನೆ ಮತ್ತು ದೇವಾಲಯದ ಪ್ರವೇಶದಂಥ ಪ್ರಶ್ನೆಗಳನ್ನು ಎತ್ತುವುದರ ಮೂಲಕ ವರ್ಣ ಮತ್ತು ವರ್ಗ ಸಂಘರ್ಷಗಳನ್ನು ಹೇಳುತ್ತದೆ. ಬಸವಣ್ಣನವರು ಮೇಲು ವರ್ಗದವರ ಅಧಿಕಾರದ, ಜಾತೀಯತೆಯ, ಶೋಷಣೆಯ ಕೇಂದ್ರವಾಗಿದ್ದ ದೇವಾಲಯ ಕಲ್ಪನೆ ಹಾಗೂ ಸ್ಥಾವರ ಪೂಜೆಯನ್ನು ಸಂಪೂರ್ಣವಾಗಿ ಅಲ್ಲಗಳೆದರು. **'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ'** ಎಂದು ಘೋಷಿಸಿದರು. ಮನುಷ್ಯನ ದೇಹವನ್ನೇ ದೇವಾಲಯವನ್ನಾಗಿ ಪರಿವರ್ತಿಸಿಕೊಂಡರು. ಕುವೆಂಪು ಅವರು ಪ್ರಕೃತಿಯ ಮುಕ್ತ ವಾತಾವರಣದಲ್ಲಿಯೇ ದೈವ ಸಾಕ್ಷಾತ್ಕಾರ ಸಾಧ್ಯ ಎಂದು ಹೇಳಿದರು. ಸಾಮಾಜಿಕ ಕ್ರೋಧ, ಸಾಂಸ್ಕೃತಿಕ ಪ್ರತಿರೋಧ ಮತ್ತು ಆಧ್ಯಾತ್ಮಿಕ ಹುಡುಕಾಟದ ಮಾದರಿಗಳು ಈ ನಾಟಕದಲ್ಲಿ ಮಂಡಿತವಾಗಿವೆ. ಪುರೋಹಿತಶಾಹಿ ಗರ್ಭಗುಡಿ ಸಂಸ್ಕೃತಿಯ ವಿರುದ್ಧದ ಪ್ರತಿಭಟನೆ ನಾಟಕದ ತಿರುಕನ ಪಾತ್ರದಲ್ಲಿ ವ್ಯಕ್ತವಾಗುತ್ತದೆ.

"ನೀನೇಕೆ ಗುಡಿಯೊಳಗೆ ಸೇರಿರುವೆಯಪ್ಪಾ
ಪರಮಾತ್ಮ ? ಗುಡಿಗಳಿವು ಪಾಪಿಗಳ, ಭೋಗಿಗಳ ಗೂಡುಗಳು!
ಪೂಜೆಯೆಂಬುದೊ ಧರ್ಮಬುದ್ಧಿಯನು
ಜೋಗುಳದಿ ಮಲಗಿಸುವ ಕಾಳಮಂತ್ರವು, ದೇವ! ಕಾಪಾಡು! ಕಾಪಾಡು!"

ಧರ್ಮ, ದೇವರ ಹೆಸರಿನಲ್ಲಿ ಬಡವರನ್ನು ಸುಲಿಗೆ ಮಾಡುವ ಪುರೋಹಿತಶಾಹಿಗಳ ಸ್ವಾರ್ಥ ರಾಜಕಾರಣದ ತೀವ್ರ ವಿಡಂಬನೆಯು ಜಲಗಾರ ನಾಟಕದಲ್ಲಿ ಬರುತ್ತದೆ. ಇಬ್ಬರು ಪಾರ್ವರು ನಡೆಸುವ ಹರಟೆಯಲ್ಲಿ ತಾವೆಂಥ ವಂಚಕರು, ಠಕ್ಕರು, ಕುತಂತ್ರಿಗಳು ಎಂಬುದನ್ನು ಅವರಿಂದಲೇ ಹೇಳಿಸಲಾಗಿದೆ.

ಮೊದಲನೆಯ ಪಾರ್ವ : ಇಂದಾದ ಲಾಭವೇ ಲಾಭ
ಎರಡನೆಯ ಪಾರ್ವ : ನನಗಂತು ದಕ್ಷಿಣೆಯ ಹಬ್ಬ: ಹಣ್ಣು, ಕಾಯಿನ ದುಡ್ಡು,ತೀರ್ಥ ಮಾರಿದ ದುಡ್ಡು

ಮೊದಲನೆಯ ಪಾರ್ವ : ನಾನೊಬ್ಬ ಶೂದ್ರನನು ಸುಲಿಗೆ ಮಾಡಿದ ದುಡ್ಡು–
ಎರಡನೆಯ ಪಾರ್ವ : ಅಂತೂ ನಮಗೆಲ್ಲ ಶಿವಗುಡಿಯ ದೆಸೆಯಿಂದ ಹಿಟ್ಟು ಹೊಟ್ಟೆಗೆ, ದುಡ್ಡು ಬಟ್ಟೆಗೆ
ಮೊದಲನೆಯ ಪಾರ್ವ : ಗುಟ್ಟು ಬಿಟ್ಟರೆ ಕೆಟ್ಟೆ, ನಡೆ ಬೇಗ.

ಈ ಬಗೆಯ ಶೋಷಣೆಗೆ ಒಳಗಾದವರಲ್ಲಿ ಮಹಿಳೆಯರು, ಶೂದ್ರರು ದಲಿತರೇ ಮುಖ್ಯವಾಗಿ ನಾಟಕದಲ್ಲಿ ಕಾಣಿಸಿಕೊಳ್ಳುತ್ತಾರೆ. ಜನ ಸಮುದಾಯದ ಮನಸ್ಸಿನ ಮೇಲೆ ಧರ್ಮ–ದೇವರು, ಸ್ವರ್ಗ–ನರಕ, ಪಾಪ–ಪುಣ್ಯ, ಕರ್ಮ–ಪ್ರಾರಬ್ಧ ಮೊದಲಾದ ಅಮೂರ್ತ ಭಯವನ್ನು ಇಲ್ಲಿನ ಪುರೋಹಿತಶಾಹಿಗಳು ಸೃಷ್ಟಿಸಿರುವುದನ್ನು ನಾಟಕದಲ್ಲಿ ಪ್ರಶ್ನಿಸಲಾಗಿದೆ. ಹುಟ್ಟು, ಗುಣ, ಕರ್ಮಗಳಿಗೂ ಸೃಜನಶೀಲ ಪ್ರತಿಭೆಗೂ ಸಂಬಂಧ . ಈ ಬಗೆಯ ಶೂದ್ರತ್ವದ ಸೃಜನಶೀಲತೆಯನ್ನು ಹಾಗೂ ಕಲ್ಪಿಸಿದ್ದನ್ನು ಕುವೆಂಪು ಇಲ್ಲಿ ಮುರಿಯುತ್ತಾರೆ. ಪರಿವರ್ತನಾಶೀಲತೆ ಹಾಗೂ ಜಾತಿವ್ಯವಸ್ಥೆಯಲ್ಲಿ ಪಲ್ಲಟ ಉಂಟಾದುದನ್ನು ನಾಟಕದಲ್ಲಿ ಬರುವ ಪುರೋಹಿತಶಾಹಿ ವರ್ಗ ಪ್ರಶ್ನಿಸುತ್ತದೆ ಮತ್ತು ವ್ಯಂಗ್ಯಕ್ಕೆ ಗುರಿಪಡಿಸುತ್ತದೆ.

"ಶೂದ್ರರೊಳ್
ಕವಿವರ್ಯರುದಿಸುವರೆ ? ಹುಟ್ಟುವರೆ ಪಂಡಿತರ್ ?
ಜನಿಸುವರೆ ಶಿಲ್ಪಿಗಳ್ ? ಗಾಯಕರ್ ? ಯೋಗಿಗಳ್ ? ಅಸದಳಂ !"

ಮೇಲುವರ್ಗದವರ ಈ ಪ್ರಶ್ನೆಗಳಿಗೆ ಪ್ರತಿಭೆಯುಳ್ಳವರು ಏನು ಬೇಕಾದರೂ ಆಗಬಹುದು. ಕವಿಗಳು, ಪಂಡಿತರು, ಯೋಗಿಗಳು, ಜ್ಞಾನಿಗಳು ಅಥವಾ ಚಲಿಸುವ ದೇವರುಗಳೂ ಆಗಬಹುದು. ಊರ ಜಲಗಾರ ಜಗದ ಜಲಗಾರನಾಗಬಹುದು ಎಂಬುದಕ್ಕೆ ಕುವೆಂಪು ಖಚಿತ ನಿದರ್ಶನಗಳನ್ನು ಕೊಡುತ್ತಾರೆ. "ನಿಜ ಶಿವನು ಜಲಗಾರ ! ನಿನ್ನ ಮುಂದಿಹನು ನೋಡು!" ಎಂದು ಜಗದ ಜಲಗಾರ ಶಿವನು ಶೂದ್ರತ್ವದಲ್ಲಿ ಗುರುತಿಸಿಕೊಳ್ಳುವ ಚಿತ್ರಣ ಇಲ್ಲಿದೆ. ಶೂದ್ರ ಸಂಸ್ಕೃತಿಯ ದೇವರಾಗಿದ್ದ ಶಿವನನ್ನು, ಶಿಷ್ಟ ಸಂಸ್ಕೃತಿ ತನ್ನ ದೈವವನ್ನಾಗಿ ಮಾಡಿಕೊಂಡದ್ದಕ್ಕೆ ಪ್ರತಿಯಾಗಿ, ಶಿವನನ್ನು ಪುನಃ ಶೂದ್ರತ್ವದಲ್ಲಿ ಕುವೆಂಪು ನೆಲೆನಿಲ್ಲಿಸಿದ್ದಾರೆ. ಪುರಾಣರೂಪಿ ಶಿವನು ಪುರಾಣದ ಪ್ರತಿಮೆಗಳನ್ನು ಅಂದರೆ ಮೇಲ್ವರ್ಗದವರು ತೊಡಿಸಿದ್ದ ಪೋಷಾಕುಗಳನ್ನು ಕಳಚಿಕೊಂಡು ಜಗದ ಜಲಗಾರನಾಗಿ ಸಮಕಾಲೀನ ಹಾಗೂ ಸಾರ್ವತ್ರಿಕ ನೆಲೆಯಲ್ಲಿ ಅಸ್ತಿತ್ವ ಪಡೆಯುತ್ತಾನೆ. ಅದೇ ರೀತಿ ಜಗದ ಜಲಗಾರ ಶಿಷ್ಟ ಜಗತ್ತು ಅಥವಾ ಘನೀಕೃತ ಜಗತ್ತಿನಿಂದ ಅನಿಷ್ಟ ಜಗತ್ತಿನೆಡೆಗೆ ಪಲ್ಲಟಗೊಳ್ಳುವ ನಾಟಕೀಯ ಸನ್ನಿವೇಶ ಸೃಷ್ಟಿ ಈ ಕೃತಿಯ ಮಹತ್ವವಾಗಿದೆ.

ಈ ರೀತಿಯಾಗಿ ಕುವೆಂಪು ಮನುಷ್ಯ ನಿರ್ಮಿತ ದೇವರು, ದೇವಾಲಯ, ಕಲುಷಿತ ವಾತಾವರಣ ನಿರ್ಬಂಧಗಳನ್ನು ನಿರಾಕರಿಸುತ್ತಾರೆ. ನಿಸರ್ಗವೇ ದೇಗುಲ, ಕಾಯಕವೇ ಶಿವಾರಾಧನೆ, ಭಕ್ತಿಯೇ ಮೌಲ್ಯ ಹಾಗೂ ಮನುಷ್ಯತ್ವವೇ ದೈವತ್ವ ಎಂಬ ಮಹತ್ವದ ಆಧ್ಯಾತ್ಮಿಕ ವಿಚಾರಗಳನ್ನು 'ಜಲಗಾರ' ನಾಟಕದಲ್ಲಿ ಅವರು ಮಂಡಿಸಿದ್ದಾರೆ. ಸನಾತನ ಧರ್ಮದ ಸ್ಥಾವರ ಪ್ರತೀಕಗಳಾದ ಗುಡಿ–ಗೋಪುರ, ಧಾರ್ಮಿಕ ಆಚರಣೆ, ಜಾತಿ–ಮತ, ಮೌಢ್ಯಗಳು ಹಾಗೂ ಅವುಗಳ ನಿಯಂತ್ರಣಗಳನ್ನು ಧಿಕ್ಕರಿಸಿ, ಕಾಯಕ ತತ್ವವನ್ನೇ ಎತ್ತಿಹಿಡಿದಿರುವುದನ್ನು ನಾಟಕ ಚಿತ್ರಿಸುತ್ತದೆ.

ಕುವೆಂಪುರವರ 'ಜಲಗಾರ' ನಾಟಕದಲ್ಲಿ ಶಿವನನ್ನೇ ಜಲಗಾರನನ್ನಾಗಿ ತೋರಿಸಿದ ಮಹತ್ವ ಪೂರ್ಣವಾದ ನಾಟಕವಾಗಿದೆ. ಇಲ್ಲಿ ಬರುವ ಸಮಾಜದ ವಿವಿಧ ವರ್ಗಗಳ ಸಾಮಾನ್ಯ ಜನರಾದವರೆಲ್ಲರೂ ಶಿವನ ಗುಡಿ ಜಾತ್ರೆಯತ್ತ ಅಭಿಮುಖರಾಗಿ ಸಂಭ್ರಮದಲ್ಲಿ ಕ್ರಿಯಾಶೀಲರಾದರೆ 'ಜಲಗಾರ' ಮಾತ್ರ ತನ್ನ ನಿತ್ಯ ಕಾಯಕದಲ್ಲಿ ನಿರತನಾಗಿದ್ದಾನೆ. ಕಾಯಕದಲ್ಲಿಯೆ ಶಿವನನ್ನು ಕಾಣುವ ಆಶಯ ಜಲಗಾರನದಾಗಿದೆ. ಈ ದೃಷ್ಟಿಯಿಂದ ಅವಲೋಕಿಸಿದಾಗ ಸಮಾಜದ ಕೆಳವರ್ಗಗಳ ಕಾಯಕಗಳಿಗೆ ಪವಿತ್ರವಾದ ಆಯಾಮವು ಕಲ್ಪಿತವಾಗಿದೆ. ಈ ಅಂಶವು ಬಸವಾದಿ ಶಿವಶರಣರ ಆಂದೋಲನದ ಪ್ರತಿಪಾದನೆಯಾಗಿದೆ. ಶಿವಶರಣರ ಎಲ್ಲಾ ತಾತ್ವಿಕ ಚಿತಂನೆಗಳು ಕುವೆಂಪುರವರ ಮೇಲೆ ಪ್ರಭಾವ ಬೀರಿರುವುದನ್ನು 'ಜಲಗಾರ' ನಾಟಕದಲ್ಲಿ ಕಾಣಬಹುದಾಗಿದೆ.

## ಪರಾಮರ್ಶನ ಗ್ರಂಥಗಳು

೧) ಕುವೆಂಪು, ವಿಚಾರ ಕ್ರಾಂತಿಗೆ ಆಹ್ವಾನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೭.
೨) ಕುವೆಂಪು ಅವರ ಜಲಗಾರ ನಾಟಕ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩.
೩) ಕುವೆಂಪು, ಮಲೆನಾಡಿನ ಚಿತ್ರಗಳು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೦.
೪) ಶ್ರೀಕುವೆಂಪು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೦.
೫) ಜಲಗಾರ–ಕುವೆಂಪು ಉದಯರವಿ ಪ್ರಕಾಶನ, ವಾಣಿವಿಲಾಸಪುರಂ ಮೈಸೂರು. ೨೦೧೨,

# ಕುವೆಂಪುರವರ 'ಶ್ರೀಸಾಮಾನ್ಯ' ಕವಿತೆಯಲ್ಲಿ ವೈಚಾರಿಕ ಮೌಲ್ಯಗಳ ವಿಶ್ಲೇಷಣೆ.

**ಡಾ. ಕೆ. ಎಸ್. ಶಿವಪ್ರಕಾಶ**
**ಕನ್ನಡ ಸಹಾಯಕ ಪ್ರಾಧ್ಯಾಪಕರು**
**ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ**
**ಬಳ್ಳಾರಿ.**

"ಓಂ ಖಠಣಾಡಿಥಿಜ ಓಂ ಊಱಣಂಡಿಥಿ' ಎಂಬಂತೆ ವಸ್ತುವಿಲ್ಲದೆ ಕಾವ್ಯವಿಲ್ಲವೆಂದು ಹೇಳಬಹುದು. ಆದರೆ ವಾಸ್ತವವಾಗಿ ವಿಶ್ಲೇಷಿದಾಗ ವಸ್ತುವೇ ಕಾವ್ಯ ಹಾಗೂ ವಸ್ತುವೇ ಕಾವ್ಯಕ್ಕೆ ಮೂಲಾಧಾರವಾಗಿದೆ. ಆದರೂ ಮೀಮಾಂಸಕರಲ್ಲಿ ವಸ್ತುವಿನ ಬಳಕೆಯ ವಿಧಾನಗಳ ಬಗೆಗೆ ಸಾಕಷ್ಟು ಚರ್ಚೆಗಳು ನಡೆದಿವೆಯೋ ಹೊರತು, ವಸ್ತುವಿನನ ಬಗೆಗಾಗಲಿ, ಅದರ ಮಹತ್ವದ ಬಗೆಗಾಗಲಿ ಚರ್ಚೆಗಳು ನಡೆದಿಲ್ಲ. ಪಾಶ್ಚಾತ್ಯರು ವಸ್ತುವನ್ನು 'ಖಣಾಥರಿಜಥಿಣ', "ಒಚಿಣಜಡಿ', 'ಕಟಂಣ' ಎಂಬುದಾಗಿ ಗುರುತಿಸಿದ್ದಾರೆ. ಪ್ಲೇಟೋ, ಅರಿಸ್ಟಾಟಲ್ ಮೊದಲಾದವರು ಕಾವ್ಯದ ವಸ್ತುವಿನ ಬಗೆಗೆ ಸಾಕಷ್ಟು ಚರ್ಚಿಸಿದ್ದಾರೆ. 'ವಸ್ತು' ಇಂತದ್ದೇ ಇರಬೇಕೆಂದು ಹೇಳಿರುವ ಪ್ಲೇಟೋನ ಮಾತು ಮತ್ತು "ಅಯ್ಯಾ ಲೇಖಕರೇ ನಿಮ್ಮ ಬೆನ್ನು ಎಷ್ಟನ್ನು ಹೊರಬಲ್ಲರೋ ಅಷ್ಟನ್ನೊ ಮಾತ್ರ ಆಯ್ಕೆ ಮಾಡಿಕೊಳ್ಳಿ" ಎಂದಿರುವ ಅರಿಸ್ಟಾಟಲನ ಮಾತಿನಲ್ಲಿ ಕಾವ್ಯವಸ್ತುವಿನ ಜಿಜ್ಞಾಸೆಯ ಸೂಚನೆಯು ಕಂಡು ಬರುತ್ತದೆ.

ವಸ್ತುವನ್ನು ಆಯ್ದುಕೊಳ್ಳುವುದು ಹಾಗೂ ಅದರ ವಿನ್ಯಾಸವನ್ನು(ಃಟಣಾಜ ಠಿಡುಟಣ) ಸಿದ್ಧಪಡಿಸಿಕೊಳ್ಳುವುದು ಕವಿಗೆ ಬಿಟ್ಟ ವಿಚಾರವಾಗಿದೆ. ಒಬ್ಬ ಕವಿಯು ಎಂತಹ ವಸ್ತುವನ್ನು ಆಯ್ದುಕೊಳ್ಳುತ್ತಾನೆ ಹಾಗೂ ಅದನ್ನು ಹೇಗೆ ನಿರ್ವಹಿಸುತ್ತಾನೆಂಬುದುರ ಆಧಾರದಿಂದ ಆ ಕವಿಯ ಪ್ರತಿಭಾಸಾಮರ್ಥ್ಯವನ್ನು ಗುರುತಿಸಬಹುದಾಗಿದೆ. ಈ ದೃಷ್ಟಿಯಿಂದ ಕವಿ ಕುವೆಂಪುರವರ 'ಶ್ರೀಸಾಮಾನ್ಯ'ರ ದೀಕ್ಷಾಗೀತೆ ಕವಿತೆಯ ವಸ್ತುವಿನ್ಯಾಸ, ಪ್ರಭುತ್ವವಾದಿ ವ್ಯವಸ್ಥೆ, ವಿಶ್ವಮಾನವ ತತ್ವಗಳಾದ ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಇತ್ಯಾದಿ ದರ್ಶನರೂಪೀ ತತ್ವಗಳನ್ನು ಕವಿಯು ನಿರ್ವಹಿಸಿದ ರೀತಿ, ಕವಿಯ ಆಶಯ, ದೂರದೃಷ್ಟಿ ಇತ್ಯಾದಿ ಅಂಶಗಳ ಮೇಲೆ ಬಿಡುದೀಪ ಹಾಯಿಸುವುದು ಈ ಪ್ರಬಂಧದ ಮೂಲೋದ್ದೇಶವಾಗಿದೆ.

"ಕನ್ನಡ ಎನೆ ಕುಣಿದಾಡುವುದೆನ್ನದೆ
ಕನ್ನಡ ಎನೆ ಕಿವಿನಿಮಿರುವುದು"

ಕುವೆಂಪುರವರು ಈ ರೀತಿಯ ಗೀತೆಗಳ ಮೂಲಕ ಕನ್ನಡಿಗರನ್ನು ಸಾಹಿತ್ಯದಲೆಗಳ ಮೇಲೆ ತೆಲುವಂತೆ ಮಾಡಿದ ಶಬ್ದ ಮಾಂತ್ರಿಕ, ಕರುನಾಡಿಗೆ 'ಜಯ ಭಾರತ ಜನನಿಯ ತನುಜಾತೆ ಜಯಯೇ ಕರ್ನಾಟಕ ಮಾತೆ' ಎಂಬ ನಾಡಗೀತೆಯ ಪದಪುಂಜಗಳಿಂದ ಕನ್ನಡ ತಾಯಿಗೆ ಶಬ್ದಾರ್ಚನೆ ಮಾಡಿದ ಸಹ್ಯಾದ್ರಿ ಸಾಲಿನ ಕವಿಕುಲೋತ್ತಮ ಕುವೆಂಪುರವರು ಸಾಹಿತ್ಯದ ಲೋಕದ ಅಪ್ಪಟ ಕವಿ ಕೋಗಿಲೆಯಾಗಿದ್ದಾರೆ. ಕುವೆಂಪುರವರು ಒಬ್ಬ ದಾರ್ಶನಿಕ ಕವಿ. ವರ್ತಮಾನದ ನಿತ್ಯವನ್ನು, ತ್ರಿಕಾಲದ ಭವ್ಯವನ್ನು, ಭೂಮವನ್ನು ಒಂದು ಪೂರ್ಣದೃಷ್ಟಿಯಲ್ಲಿ ಒಳಗೊಳಿಸಲು ಪ್ರಯತ್ನಿಸಿದ ತಪಸ್ವಿಗಳಾಗಿದ್ದಾರೆ. ನಮ್ಮ ಹಳೆಯ ಶಾಸ್ತ್ರ, ಪುರಾಣಗಳನ್ನು ಹೊಸ ಬೆಳಕಿನಲ್ಲಿಟ್ಟು ನೋಡಿ ಅದರೊಳಗಿನ ಕಸ–ಕೊಳೆಗಳನ್ನು ತೆಗೆದೆಸೆದು ಹೊಸ ದೃಷ್ಟಿಕೋನವ ನಿಟ್ಟು ಕಸಿಮಾಡಿರುವುದನ್ನು 'ಶ್ರೀಸಾಮಾನ್ಯ'ನೆಂಬ ದೀಕ್ಷಾ ಗೀತೆಯ ಮೂಲಕ ಕಾಣಬಹುದಾಗಿದೆ.

ಕುವೆಂಪುರವರ ಸಾಮಾಜಿಕ ಗೀತೆಗಳಲ್ಲಿ ಅತ್ಯಂತ ಪ್ರಸಿದ್ಧವಾದದ್ದು 'ಶ್ರೀಸಾಮಾನ್ಯ'ರ ದೀಕ್ಷಾಗೀತೆಯಾಗಿದೆ. ಕವಿಯೇ ಹೇಳಿದಂತೆ ಅವರ ಸಮಸ್ತ ಸಾಹಿತ್ಯವೂ ಸಾಮಾಜಿಕ ಅಸ್ತ್ರವಾಗಿ ನಿರ್ದಿಷ್ಟವಾದುದು. ಬದಲಾವಣೆಯ ಹೊಸ ಆಶಯದಿಂದ ಪೂರ್ಣದೃಷ್ಟಿ, ಸರ್ವೋದಯ, ಸಮನ್ವಯ ಸಂದೇಶಗಳನ್ನು ಸಾರುವುದಕ್ಕೆ ಅತ್ಯುತಮ ನಿದರ್ಶನವಾಗಿ 'ಶ್ರೀಸಾಮಾನ್ಯ'ರ ದೀಕ್ಷಾಗೀತೆಯನ್ನು ಗಮನಿಸಬಹುದು. ಕುವೆಂಪುರವರು ೧೯೫೯ ರಲ್ಲಿ ರಚಿಸಿದ "ಇಕ್ಷು ಗಂಗೋತ್ರಿ" ಸಂಕಲನದಿಂದ ಈ ಕವಿತೆಯನ್ನು ಆಯ್ದುಕೊಂಡಿದ್ದು ಇದನ್ನು ೧೯೫೦ ನೆಯ ಜನವರಿ ೨೯ ನೆಯ ಗುರುವಾರ ಭಾರತವು ಗಣರಾಜ್ಯವಾಗಿ ಮಾನ್ಯತೆ ಪಡೆದ ಸಂದರ್ಭದಲ್ಲಿ ರಚನೆಯಾಗಿರುವ ಈ ಕವಿತೆಯು ಚಾರಿತ್ರಿಕ ಮೌಲ್ಯವಾದ ಹೊಸ ಸಮಾಜ ನಿರ್ಮಾಣದ ಶ್ರೀಸಾಮಾನ್ಯನಿಗೆ ರಚಿಸಿದ ಸಂವಿಧಾನದಂತಿದೆ.

ಈ ಕವಿತೆಯ ಶಿರ್ಷಿಕೆಯನ್ನು ಅಕ್ಷರಶಃ ಅವಲೋಕಿಸಿದಾಗ 'ಶ್ರೀ' ಅಕ್ಷರವನ್ನು ಪದವಾಗಿ, ವಾಕ್ಯವಾಗಿ ವಿಸ್ತರಿಸಿದವರು ಕುವೆಂಪು. ಸೀಮಿತಾರ್ಥದಲ್ಲಿ ಬಳಕೆಯಾಗುತ್ತಿದ್ದ 'ಶ್ರೀ' ಉಪಸರ್ಗವನ್ನು ಸಾಮಾನ್ಯನಿಗೆ ಸೇರಿಸಿ 'ಶ್ರೀಸಾಮಾನ್ಯ' ಎಂಬ ಪದವನ್ನು

ಮೊದಲು ಬಳಸಿದ ಶ್ರೇಯಸ್ಸು ಕುವೆಂಪುರವರಿಗೆ ಸಲ್ಲುತ್ತದೆ. ಅವರ ದೃಷ್ಟಿಯಲ್ಲಿ 'ಸಾಮಾನ್ಯತೆ' ಎಂಬುದು "ಭಗವಂತನ ರೀತಿ" ಅಂದರೆ ಭಗವಂತನಿಗೆ ಪ್ರಿಯವಾದುದು. ಎನ್ನುವ ಮೂಲಕ ಶ್ರೀ ಮತ್ತು ಸಾಮಾನ್ಯ ಎರಡು ಪದಗಳಿಗೂ, ಹೊಸ ನೆಲೆಯನ್ನು, ಅರ್ಥವನ್ನು ನೀಡಿ ನವ ಸಮಾಜ ನಿರ್ಮಾಣದ ತಾತ್ವಿಕ ದೃಷ್ಟಿಯನ್ನಾಗಿಸಿಕೊಂಡಿದೆ.

'ಶ್ರೀಸಾಮಾನ್ಯ'ರ ದೀಕ್ಷಾಗೀತೆ ಕವಿತೆಯನ್ನು ಅಧ್ಯಯನದ ಅನುಕೂಲತೆಗಾಗಿ ಐದು ಭಾಗಗಳಾಗಿ ವಿಂಗಡಿಸಬಹುದಾಗಿದೆ. ಮೊದಲ ಭಾಗದಲ್ಲಿ ಸಾಮಾನ್ಯನನ್ನು 'ಶ್ರೀ' ಪದವಿಗೇರಿಸುವ ಹಾಗೂ ಆತನನ್ನು ಭವದುನ್ನತಿಯ ಪ್ರತೀಕವಾಗಿ ಕಾಣುವ ದೃಷ್ಟಿಯಿದೆ.

ಕವಿತೆಯ ಎರಡನೆಯ ಭಾಗದಲ್ಲಿ ಸರ್ವಸಮಾನತೆಯ ತತ್ವದ ಪ್ರತಿಪಾದನೆಯಿದೆ 'ಸರ್ವ' ಎಂಬ ಸಾಮಾಜಿಕ ವ್ಯಾಪ್ತಿಯು ಆಮೂರ್ತವಾಗಿ ಸಾಮಾನ್ಯರೆಲ್ಲರನ್ನೂ ಒಳಗೊಳ್ಳುವಂತೆ ಮಾಡಲಾಗಿದೆ.

ಮೂರನೆಯ ಭಾಗದಲ್ಲಿ ದಾಸ್ಯದ ಕುರುಹುಗಳನ್ನು ಬಣ್ಣಿಸುತ್ತಲೇ ಅದರಿಂದ ಹೊರಬರಬೇಕಾದ ಆಶಯವನ್ನು ಹೇಳಲಾಗಿದೆ. ಇಲ್ಲಿಯ ಭಾಗವು ರೈತಾಪಿ ವರ್ಗಕ್ಕೆ ಹೆಚ್ಚು ಅನ್ವಯಿಸುವಂತಿದೆ.

ನಾಲ್ಕನೆಯ ಭಾಗದಲ್ಲಿ 'ಶ್ರೀಸಾಮಾನ್ಯ'ನಿಗೆ ಹೆಸರಿನ ಹಂಗಿಲ್ಲ ಸಾಮಾನ್ಯನೇ ಭಗವಂತ, ಸರ್ವೋತ್ತಮ ಶ್ರೀಮಂತನ್ ಎಂಬ ಉದಾರವಾದ ಕಲ್ಪನೆಯನ್ನು ಪ್ರತಿಪಾದಿಸಿದ್ದಾರೆ. ಈ 'ಶ್ರೀಸಾಮಾನ್ಯ' ದೀಕ್ಷಾಕವಿತೆಯ ಮೂಲ ಆಶಯವೇ ಸರ್ವಸಮಾನತೆ, ಹಾಗೂ ಸ್ವಾತಂತ್ರ್ಯ ಪರಿಕಲ್ಪನೆಯುಳ್ಳದ್ದಾಗಿದೆ. ಕವಿತೆಯ ಆರಂಭದ ಸಾಲುಗಳು ಈ ಕೆಳಗಿನಂತಿವೆ.

"ಶ್ರೀ ಸಾಮಾನ್ಯವೆ ಭಗವನ್ ಮಾನ್ಯಂ
ಶ್ರೀಸಾಮಾನ್ಯನೇ ಭಗವಾದ್ ಧನ್ಯಂ
ಸಾಮಾನ್ಯರೊ ನಾವು"

ಈ ಮೇಲಿನ ಸಾಲುಗಳಲ್ಲಿ ಸಾಮಾನ್ಯನ ಬದುಕನ್ನು ಭಗವಂತನ ನೆಲೆಯಲ್ಲಿ ಕಾಣುವಂಥದ್ದು ಕ್ರಾಂತಿಕಾರಕ ಆಲೋಚನೆಯಾಗಿದೆ. ಹಾಗೆಯೇ ಪ್ರಜಾತಂತ್ರದ ಕಾರ್ಯಸಾಧನೆಗಳು ಸಾಗಬೇಕಾದ ದಿಕ್ಕನ್ನು ಮುಂದಿನ ಪಂಕ್ತಿಗಳಲ್ಲಿ ಉಲ್ಲೇಖಿಸಿರುವ ಬಗೆಯು ಅನನ್ಯವಾಗಿದೆ.

"ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿ ನಿವೊ!
ಸರ್ವರಿಗಾಗಿಯೇ ಸರ್ವವ ತನ್ನಿ
ಓ ಬನ್ನಿರಿ, ಓ ಬನ್ನಿರಿ
ಸಾಮಾನ್ಯದ ಪೂಜೆಗೆ ಶ್ರೀ ದೀಕ್ಷೆಯ ಕೊಳ್ಳಿಂ"

ಕುವೆಂಪುರವರು ಸರ್ವೋದಯದ ದರ್ಶನದೊಂದಿಗೆ ಸರ್ವ ಸಮಾನತೆಯ ಸಮಾಜದ ನಿರ್ಮಾಣಕ್ಕೆ ಅದರ ಅನುಷ್ಠಾನಕ್ಕೆ ಎಲ್ಲರೂ ಬನ್ನಿರೆಂದು ಕರೆಕೊಡುವ 'ಓ ಬನ್ನಿಂ' ಎಂಬ ಮಾತು ಸರ್ವದಿಕ್ಕುಗಳನ್ನು ವ್ಯಾಪಿಸಿ ಮೊಳಗುವ ನುಡಿಯಾಗಿದೆ.

'ವಿದ್ಯಾರ್ಥಿ ಮಿತ್ರರನ್ನು ಕುರಿತು ಈ ಕವಿತೆಯಲ್ಲಿ ಸರ್ವಸಮಾನತೆಯ ನವಸಮಾಜದ ಮಂತ್ರವಿದಾಗಿದೆ'.ನಿರ್ಮಾಣಕ್ಕೆ ಬೋಧಿಸಿದ ದೀಕ್ಷಾ

"ಕೊನೆಗೊಂಡಿತೊ ಓರೋರ್ವರ ಗರ್ವದ ಕಾಲ
ಇದು ಸರ್ವರ ಕಾಲ! ಸರ್ವೋದಯ! ಸರ್ವೋದಯ
ಸರ್ವೋದಯ ಯುಗಮಂತ್ರ
ಸರ್ವೋದಯವೇ ಸ್ವಾತಂತ್ರ್ಯದ ಶ್ರೀತಂತ್ರ"

ಈ ಮೇಲಿನ ಕವಿತೆಯಲ್ಲಿ ರಾಜಪ್ರಭುತ್ವದ ಸರ್ವಾಧಿಕಾರದ ಕಾಲ ಮುಗಿಯಿತೆಂದು ನೇರವಾಗಿ ಕರೆ ಕೊಟ್ಟಿರುವ ಕವಿಯು ಇದು ಸರ್ವರ ಕಾಲವೆಂದು ಉಲ್ಲೇಖಿಸಿದ್ದಾರೆ. ಸ್ವಾತಂತ್ರ್ಯದ ಸಂಭ್ರಮದಲ್ಲಿ ಸಾಮಾನ್ಯನಿಗೆ ಸಂವಿಧಾನವನ್ನು ರಚಿಸಿದ್ದಾರೆ. ಹಾಗೆಯೇ ಪ್ರಜಾಪ್ರಭುತ್ವಕ್ಕೆ ಭಾಷ್ಯಾ ಬರೆದಿದ್ದಾರೆ. ಇಷ್ಟಾದರೂ ಕವಿಗೆ ನಾವೆಲ್ಲರೂ ಸಾಮಾನ್ಯರೆಂದು ಹೇಳಿಕೊಳ್ಳುವುದರಲ್ಲಿಯೇ ಅತಿಶಯವಾದ ಆತ್ಮಾಭಿಮಾನವಿದೆ.

"ನಿಲ್ ಇಸ್, ದಿಟ್ಟಗೆ ನಿಲ್ ಇನ್!
ಬಾಗಿದ ಸೊಣಂಟವ ನೆಟ್ಟಗಿಡು
ಎದುರಾಳಿಯ ಮೊಗನೋಡು"

ಎಂಬ ಸಾಲುಗಳಲ್ಲಿ ಶತಮಾನಗಳಿಂದ ದಾರಿದ್ರಗಳ ಹೊಡೆತಕ್ಕೆ ಸಿಲುಕಿ ಜೀವಂತ ಶವದಂತೆ ಆಗಿರುವ ಶ್ರೀಸಾಮಾನ್ಯರು ಉಳ್ಳವರ ದರ್ಪದ ಪದಾಘಾತಕ್ಕೆ ಸಿಕ್ಕಿ, ಕುಗ್ಗಿ, ಬಗ್ಗಿ, ತಗ್ಗಿ ನಡೆಯುವುದನ್ನು ಬಿಟ್ಟು ಎದೆಯುಬ್ಬಿಸಿ ನಡೆಯುವುದನ್ನು ಕಲಿಯಬೇಕೆಂಬ ಆಶಯವನ್ನು ಸೊಗಸಾಗಿ ಚಿತ್ರಿಸಿದೆ.

* ಶತಮಾನಂ ಗಗನವ ಹೇರದೆ
ಕನಿದಿಹ ವಕ್ಷವನುಬ್ಬಿಸಿ ಉಸಿರಾಡು"

ಈ ಅವತರಣಿಕೆಗಳು ಸಮಾನ್ಯನಲ್ಲಿ ಸ್ವಾಭಿಮಾನದ ಕಿಚ್ಚನ್ನು, ಆತ್ಮವಿಶ್ವಾಸವನ್ನು ಹೆಚ್ಚಿಸುವ ಮೂರ್ದನಿಗಳಾಗಿ ಮೂಡಿ ಬಂದಿವೆ.

"ತೊಲಗಿಸು ನಿನ್ನೆಯ ನಾಯ್ಪಾಡು
ಇನ್ ಮೀಸಲ್ ನೀ ಉಳುವ ಇಳೆ"

ಈ ಪದ್ಯದ ಭಾಗದ ಸಾಲುಗಳಲ್ಲಿ 'ನಿನ್ನದೆ' 'ನಿನ್ನದೆ' ಪದದ ಪುನರುಕ್ತಿಯಿದೆ, ಇದು ಸಾಮಾನ್ಯನು ಇನ್ನೂ ಮುಂದೆ ಯಾರ ಹಂಗಿಗೂ ಒಳಗಾಗಿ ಬದುಕಬೇಕಾಗಿಲ್ಲ ಎಂಬ ಚಿತ್ರಣವನ್ನು ಉಲ್ಲೇಖಿಸಿ, ರೈತನು ನಿಷ್ಠೆಯಿಂದ, ಶ್ರದ್ಧೆಯಿಂದ ದಿನವಿಡೀ ದುಡಿದು ಉತ್ತು ಬಿತ್ತಿ ತೆಗೆದ ಫಸಲಿನ ಪಾಲೆಲ್ಲವೂ ಆತನದೇ ಎಂಬ ಭಾವನೆಯಿದೆ. ಅಂದರೆ ಗಣರಾಜ್ಯವಾದ ಭಾರತ ಶ್ರೀಸಾಮಾನ್ಯನ ಪಾಲಿಗೆ ಸ್ವರ್ಗವಾಗಿ ಪರಿಣಮಿಸುತ್ತದೆ ಎಂಬ ದೃಢವಿಶ್ವಾಸದ ಅಭಿವ್ಯಕ್ತಿಯು ನಿನಾದಿಸುತ್ತದೆ. ಇತಿಹಾಸದುದ್ದಕ್ಕೂ ಹೆಸರಿನ ಆಸೆಗೆ, ಕೀರ್ತಿಯ ಪ್ರತಿಷ್ಠೆಗೆ ಸಂಘರ್ಷಗಳು ನಡೆದು ಸಮಾಜವನ್ನು ಕಾಡಿವೆ. ಆದಕಾರಣ ಕೀರ್ತಿಯಾಸೆಯ ಬೆನ್ನಿಗೆ ಬಿದ್ದು 'ಶ್ರೀಸಾಮಾನ್ಯ'ರ ಜೀವನವನ್ನು ನೋಯಿಸಲಾರೆವು, ಕೀರ್ತಿಯ ಚಟಕ್ಕೆ ಬಿದ್ದು ಯಾರ ಬದುಕನ್ನು ಹೆಬ್ಬಾವಿನಂತೆ ನುಂಗಲಾರೆವು ಎಂಬ ಅಂಶವು ಧ್ವನಿತವಾಗಿದೆ.

"ನೇಗಿಲ್ ಲೇಖನಿ ತಕ್ಕಡಿ ಕತ್ತಿ
ಅಖ್ಯಾತಿಯ ಸಾಮಾನ್ಯರ ಶ್ರೀಮನ್ ಮಾರ್ಗಂ"

ನೇಗಿಲು, ಲೇಖನಿ, ತಕ್ಕಡಿ, ಕತ್ತಿ ಎಲ್ಲವೂ ಸಾಮಾನ್ಯರ ಪಾಲಿಗೆ ಸಮರಸದ ಸಂಪತ್ತುಗಳಾಗಿವೆ. ವರ್ಗತಾರತಮ್ಯತೆ, ವೃತಿತಾರತಮ್ಯತೆಯ ಬೇಧ ಇಲ್ಲಿರಲಾರದು ಎಲ್ಲರೂ ಮಾನ್ಯರು. ಹಾಗಾಗಿಯೇ ಅಖ್ಯಾತಿಯ ಸಾಮಾನ್ಯರ ಶ್ರೀಮನ್ ಮಾರ್ಗಂ" ಎಂಬುದು ಕುವೆಂಪುರವರ ಸ್ಪಷ್ಟೋಕ್ತಿಯಾಗಿದೆ. ಕುವೆಂಪುರವರು ವ್ಯಷ್ಟಿಗಿಂತ ಸಮಷ್ಟಿ ಪ್ರಜ್ಞೆಯ ಬಗ್ಗೆ, ಆ ಬಲದ ಬಗ್ಗೆ ಒಲವು ಉಳ್ಳವರಾಗಿದ್ದು, ಜನತಾ ಭಕ್ತಿಯನ್ನು ಶಕ್ತಿಯನ್ನಾಗಿ ಪರಿವರ್ತಿಸಬಲ್ಲ ಗುಣವನ್ನು ಈ ಕೆಳಗಿನಂತೆ ದರ್ಶಿಸಿದ್ದಾರೆ.

"ಹನಿ ಹನಿ ಸೇರುತ್ತ ಹರಿಯುವ ಜನ ಜನತಾ ಭಕ್ತಿ
ತಾನದೆ ತಿಳಿಯಯ್ ಸಾಮಾನ್ಯರ ಶ್ರೀಶಕ್ತಿ"

"ಸರ್ವೋದಯ" ನವ ಸಮಾಜದ ನಿರ್ಮಾಣಕ್ಕೆ ಗಾಂಧೀಜಿಯವರು ಕೊಟ್ಟ ದಿವ್ಯಮಂತ್ರವಾಗಿದ್ದು, ಇದನ್ನೇ ಕುವೆಂಪುರವರು ಯುಗ ಮಂತ್ರವನ್ನಾಗಿ ಸ್ವೀಕರಿಸಿದರು. ಸರ್ವಸಮಾನತೆಯ ಅಡಿಗಲ್ಲ ಮೇಲೆ ನವಸಮಾಜದ ನಿರ್ಮಾಣವಾಗಬೇಕೆಂಬ ಆಶಯದ ದೃಷ್ಟಿಯಿಂದ ಈ ಕವಿತೆಯ ಕೊನೆಯ ಸಾಲುಗಳು ಗಮನಾರ್ಹವಾಗಿವೆ.

"ಸರ್ವೋದಯವೆಮ್ಮಯ ಗುರುದೀಕ್ಷಾಮಂತ್
ಸರ್ವಪ್ರೇಮಜ ಸಮತಾಭಾವಂ ಶಕ್ಷಾ ತಂತ್ರಂ
ಸಾಮಾನ್ಯರ ಪೂಜೆಗೆ ದೀಕ್ಷೆಯ ಕೊಳ್ಳಿಂ"

ನೀವು ಓ ಬನ್ನಿರಿ...... ನೀವೂ! ನೀವೂ ಎಂಬುವುದನ್ನು ವಿಶೇಷವಾಗಿ ಗಮನಿಸಬೇಕು. ಸರ್ವಸಮಾನತೆಯ ಸಮಾಜ ಕಟ್ಟುವುದಕ್ಕೆ ಎಲ್ಲರೂ ಸಮಾನತೆಯ ದೀಕ್ಷೆಯನ್ನು ಕೈಗೊಂಡು ಒಗ್ಗೂಡಿ ನಡೆಯಬೇಕೆಂಬುದನ್ನು ಕಟ್ಟಿಕೊಡುತ್ತದೆ. ಸಾಮಾನ್ಯರ ಬದುಕಿನ ಅಭಿವೃದ್ಧಿಗೆ ಸರ್ವೋದಯ ಯುಗಮಂತ್ರವಾಗಬೇಕೆಂಬುದು ಕುವೆಂಪುನವರ ಆಶಯವಾಗಿದೆ. ಈ ಕವಿತೆಯ ಐದು ಭಾಗಗಳಲ್ಲೂ ಶ್ರೀಸಾಮಾನ್ಯನ ಬದುಕಿನ ಬೇರೆ ಬೇರೆ ತತ್ವ ಸಿದ್ಧಾಂತಗಳನ್ನು ಪ್ರತಿಪಾದಿಸಿದೆ. ಈ ಕವಿತೆಯು ಸುದೀರ್ಘತೆಯಲ್ಲಿ ಸರ್ವಸಮಾನತೆಯ ಸಮಾಜಾರ್ಥಿಕ ಸಂಗತಿಗಳನ್ನು ಮನಮುಟ್ಟಿಸುವಂತೆ ಚಿತ್ರಿಸಿರುವ ಪರಿಯು ಅನನ್ಯವಾಗಿದೆ.

ಭಾಷಿಕ ದೃಷ್ಟಿಯಿಂದ ಹೇಳುವುದಾದರೆ ಕುವೆಂಪುರವರ ಭಾಷೆಯು ತುಂಬಾ ವೀರವತಾದುದು, ಸಂಸ್ಕೃತ ಭೂಯಿಷ್ಟತೆ ಇವರ ಭಾಷೆಯಲ್ಲಿ ಪ್ರಧಾನವಾಗಿ ಕಂಡುಬರುತ್ತದೆ. ಆಡು ಭಾಷೆಗಿಂತ ಭಿನ್ನವಾದ ಭಾಷೆಯ ಬಳಕೆಯನ್ನು ಕುವೆಂಪುರವರ ಕಾವ್ಯಗಳಲ್ಲಿ ಕಾಣಬಹುದು. ಸಂಸ್ಕೃತ ಶಬ್ದಗಳು, ಸಮಾಸ ಶಬ್ದಗಳ ಬಳಕೆಯು ಅಧಿಕೃತವಾಗಿ ಕಂಡುಬರುವುದರಿಂದ ಕುವೆಂಪುರವರ ಕಾವ್ಯಗಳು ಸ್ವಲ್ಪಮಟ್ಟಿಗೆ ನೆಲವನ್ನು ಬಿಟ್ಟು ಭವ್ಯತೆಯತ್ತ ಮೊರೆದಿರುಗಿಸುತ್ತವೆ. ವಸ್ತುವಿನ್ಯಾಸದ ಅರಹುಗೆ ಅನುಗುಣವಾಗಿ ಅವರ ಕಾವ್ಯ ಭಾಷೆ ದಾಂಗುಡಿಯಿಟ್ಟು ಝೇಂಕರಿಸಿ ಸಮರ್ಥವಾಗಿ ಮುನ್ನಡೆದಿದ್ದು, ಪ್ರತಿ ಶಬ್ದಕ್ಕೂ ಅದರಷ್ಟೇ ಆದ ನಾದ–ಮಾಧುರ್ಯವಿರುವುದು ಅಧ್ಯಯನದ ಫಲಿತವಾಗಿದೆ. ಈ ಕಾರಣಗಳಿಂದಲೇ ಕುವೆಂಪುರವರ ಕವಿತೆಗಳಿಗೆ ಮಹತ್ವ ಪ್ರಾಪ್ತವಾಗುತ್ತದೆ.

ಕುವೆಂಪುರವರ "ಶ್ರೀಸಾಮಾನ್ಯರ ದೀಕ್ಷಾಕವಿತೆಯನ್ನು ಸೂಕ್ಷ್ಮವಾಗಿ ವಿಮರ್ಶಿಸಿದಾಗ ನಿಶ್ಚಿತವಾದ ನೀಲನಕ್ಷೆಯಿಲ್ಲದೆ ಕವಿಯು ಕಾವ್ಯರಚನೆಗೆ ಮುಂದಾಗಿಲ್ಲವೆಂಬುದು ಅರಿವಿಗೆ ಬರುತ್ತದೆ. ಒಬ್ಬ ಕಟ್ಟಡ ಶಿಲ್ಪಿಯಂತೆ, ಒಬ್ಬ ಗಣಿತಕಾರನಂತೆ ಕುವೆಂಪುರವರು ತಮ್ಮ ಈ ಕವಿತೆಗೆ ನಿಶ್ಚಿತವಾದ ಗಡಿಗೆರೆಗಳನ್ನು ಗುರುತಿಸಿಕೊಂಡಿರುವುದು ಕಂಡುಬರುತ್ತದೆ. ಒಟ್ಟಾರೆ ಈ

ಕವಿತೆಯಲ್ಲಿ ನಿಶ್ಚಿತವಸ್ತು, ನಿಶ್ಚಿತ ಭಾಷಾನೀತಿ, ನಿಶ್ಚಿತರೂಪ ಇವುಗಳ ಬಗೆಗೆ ಕವಿ ಕುವೆಂಪುರವರು ಸಾಕಷ್ಟು ಆಲೋಚಿಸಿರುವುದು ಕಂಡುಬರುತ್ತದೆ. ಈ ಅಂಶಗಳನ್ನು ಹಿನ್ನೆಲೆಯಾಗಿಟ್ಟುಕೊಂಡು **"ಶ್ರೀಸಾಮಾನ್ಯ"** ಕವಿತೆಯಲ್ಲಿ ವೈಚಾರಿಕ ಮೌಲ್ಯಗಳ ತಾತ್ವಿಕ ಚಿಂತನೆಗಳನ್ನು ಈ ಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ.

**ಪರಾಮರ್ಶನ ಗ್ರಂಥಗಳು:**

೧. ಇಕ್ಷು ಗಂಗೋತ್ರಿ – ಕುವೆಂಪು.
೨. ನಾದಲೀಲೆ – ದ.ರಾ.ಬೇಂದ್ರೆ.
೩. ಇಂಗ್ಲೀಷ್ ಗೀತೆಗಳು – ಬಿ.ಎಂ.ಶ್ರೀ
೪. ಹೊಸಗನ್ನಡ ಸಾಹಿತ್ಯ ಚರಿತ್ರೆ – ಎಸ್. ಎಲ್. ಶೇಷಗಿರಿರಾವ್.
೫. ಪಂಜೆಯವರ ಕೃತಿಗಳು – ಸಂ. ಪಂಜೆ ರಾಮರಾಯ

# ಕುವೆಂಪು ಮತ್ತು ತ್ರಿಭಾಷೆಗಳು

**ಡಾ.ಅರುಂಧತಿ ಎಫ್. ಬದಾಮಿ**
**ಸಹಾಯಕ ಪ್ರಾಧ್ಯಾಪಕರು, ಕನ್ನಡವಿಭಾಗ**
**ಕೆ.ಎಲ್.ಇ ಸಂಸ್ಥೆಯ ಎಸ್.ವಿ.ಎಸ್. ಬೆಳ್ಳುಬ್ಬಿ**
**ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ**
**ಸವದತ್ತಿ, ಜಿಲ್ಲಾ: ಬೆಳಗಾವಿ**

ಈ ಶತಮಾನ ಕಂಡ ಭಾರತದ ಅತ್ಯದ್ಭುತ ದೈತ್ಯ ಪ್ರತಿಭೆ. ಭಾರತದ ಸಂಸ್ಕೃತಿಕ ಪ್ರತ್ಯಯೀಕರಣವನ್ನು ಪುನಃ ಕಟ್ಟುವ ಕೆಲಸವನ್ನು ಮಾಡಿದವರು ಕುವೆಂಪು. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾನಂತರದ ಭಾರತವನ್ನು ತೆರೆದ ಕಣ್ಣುಗಳಿಂದ ನೋಡುತ್ತಾ ಭಾರತದ ಎಲ್ಲ ಕ್ಷೇತ್ರಗಳಲ್ಲೂ ಅದರ ಸ್ಥಿತಿಗತಿಯನ್ನು ಅವಲೋಕಿಸುತ್ತಾ ಅದಕ್ಕೆ ಪ್ರತಿಕ್ರಿಯಿಸುತ್ತಾ ಆ ಕಾಲಘಟ್ಟದಲ್ಲಿ ಅತ್ಯಂತ ಚಲನಶೀಲತೆಯಿಂದ ,ಸೃಜನಾತ್ಮಕವಾಗಿ ಕಾರ್ಯೋನ್ಮುಖರಾದವರು. ಪ್ರಗತಿಪರ ವೈಜ್ಞಾನಿಕ ಚಿಂತನೆಯ ಜೊತೆಗೆ ದಾರ್ಶನಿಕತ್ವದ ಅಮೃತವನ್ನು ತಮ್ಮ ಸಾಹಿತ್ಯದ ಮುಖೇನ ಉಣಬಡಿಸಿದವರು. ಆ ಮೂಲಕ ಕನ್ನಡತ್ವವನ್ನು ವಿಶ್ವಮಟ್ಟಕ್ಕೆ ಒಯ್ದವರು. ಈಡೀ ಜಗತ್ತಿಗೆ ವಿಶ್ವಮಾನವ ಸಂದೇಶವನ್ನು ಸಾರಿದ ಕವಿ, ಕತೆಗಾರ, ಕಾದಂಬರಿಕಾರ, ನಾಟಕಕಾರ, ಜೀವನಚರಿತ್ರೆಕಾರರು ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕೃಷಿ ಮಾಡಿದ ಕುವೆಂಪು ವೈಜ್ಞಾನಿಕ ಚಿಂತನ ಧಾರೆಯ ಮೂಲಕ ಮೌಢ್ಯತೆಯನ್ನು ತಮ್ಮ ಸಾಹಿತ್ಯದ ಚಾಟಿ ಏಟಿನಿಂದ ಹೊಡೆದೋಡಿಸಲೆತ್ನಿಸಿದವರು. ಕನ್ನಡ ಡಿಂ ಡಿಮವನ್ನು ಬಾರಿಸಿ ಕನ್ನಡಕ್ಕಾಗಿ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷವಾಗುವುದೆಂದು ಕನ್ನಡದ ಶ್ರೇಷ್ಠತೆಯನ್ನು ಸಾರಿದ, ವಿಶ್ವದ ಅಗ್ರಗಣ್ಯ ಸಾಹಿತಿಗಳಲ್ಲೊಬ್ಬರಾದ ಕುವೆಂಪು ಕನ್ನಡಾಂಬೆಯ ಹೆಮ್ಮೆಯ ಪುತ್ರ. ವರಕವಿ ಬೇಂದ್ರೆಯವರು ಹೇಳಿದಂತೆ ಕುವೆಂಪು ಜಗದ ಕವಿ ಯುಗದ ಕವಿಯಾಗಿದ್ದಾರೆ.. ಅವರೊಬ್ಬ ಶತಮಾನದ ದಾರ್ಶನಿಕ, ಸಮಾಜಶಾಸ್ತ್ರಜ್ಞ, ವೈಜ್ಞಾನಿಕ ಚಿಂತನ ಧಾರೆಯ ವಿಜ್ಞಾನಿ, ರಸಋಷಿ, ಭಾಷಾವಿಜ್ಞಾನಿ, ಶಿಕ್ಷಣ ತಜ್ಞರು.

ಅವೈದಿಕ ಸಮುದಾಯದಿಂದ ಬಂದ ಕುವೆಂಪು ಭಾರತದ ಶ್ರೇಣೀಕೃತ ವ್ಯವಸ್ಥೆಯನ್ನು ವಿರೋಧಿಸಿದವರು. ಮತ್ತೊಂದು ಕಡೆ ಬ್ರಿಟಿಷ್ ಆಡಳಿತದಲ್ಲಿ ಅಂಗ್ಲ ಶಿಕ್ಷಣವನ್ನು ಪಡೆಯುತ್ತಾ ಬೆಳೆದವರು. ಇಂಗ್ಲೀಷ ಭಾಷೆ, ಸಾಹಿತ್ಯ ನಮ್ಮ ದೇಶದ ಸಾಮಾಜಿಕ, ಶೈಕ್ಷಣಿಕ ವ್ಯವಸ್ಥೆಯ ಮೇಲೆ ಗಾಢ ಪ್ರಭಾವ ಬೀರಿರುವುದನ್ನು ಕುವೆಂಪು "ನನ್ನ ಚೇತನ ಮೊದಲು ಅಭಿವ್ಯಕ್ತಿಯನ್ನು ಕಂಡುಕೊಂಡದ್ದು ತನ್ನ ತಾಯಿ ನುಡಿಯಲ್ಲಲ್ಲ; ಅದು ಮೊದಲು ಮೈದೋರಿದ್ದು ವಿದೇಶಿಯಾದ ಇಂಗ್ಲೀಷನಲ್ಲಿ; ಯಾವ ಬ್ರಿಟಿಷರನ್ನು ಹೊಡೆದೋಡಿಸಲು ಭರತಖಂಡ ಪ್ರಚಂಡ ಚಳುವಳಿ ಹೂಡಿತ್ತೋ ಆ ಬ್ರಿಟಿಷ್ ಭಾಷೆಯಾದ ಇಂಗ್ಲೀಷನಲ್ಲಿ. ಇಂಡಿಯಾ ದೇಶವನ್ನು ಶೋಷಣೆ ಮಾಡಿ ದಬ್ಬಾಳಿಕೆ ನಡೆಸುತ್ತಿದ್ದ ಇಂಗ್ಲೀಷರ ಮೇಲೆ ನನಗೆ ಎಷ್ಟು ದ್ವೇಷವಿದ್ದಿತೊ ಅದಕ್ಕೆ ದ್ವಿಗುಣಿತ ತ್ರಿಗುಣಿತವಾಗಿ ಇಂಗ್ಲಿಷ್ ಭಾಷೆಯ ಮೇಲೆ ನನಗೆ ಗೌರವ ಮಮತೆಗಳಿದ್ದವು"[1] ಎಂದು ಹೇಳುತ್ತಾರೆ. ಒಂದು ಕಾಲದಲ್ಲಿ ಶ್ರೇಷ್ಠವೆನಿಸಿಕೊಂಡ ಸರ್ವವೂ ಕೆಲವರಿಗೆ ಮಾತ್ರ ಮೀಸಲಾಗಿರುವುದರ ಕುರಿತು ಚಿಂತನೆ ಮಾಡಲು ಹಚ್ಚಿದ್ದು ಇಂಗ್ಲೀಷ ಸಾಹಿತ್ಯ ಮಾತ್ರವಲ್ಲ ವಿವೇಕಾನಂದರಿಂದ ಸಾಕಷ್ಟು ಪ್ರಭಾವಿತರಾಗಿದ್ದ ಕುವೆಂಪು ಅವರಿಗೆ ವಿವೇಕಾನಂದರ ಸಾಹಿತ್ಯ ಲಭ್ಯವಾಗಿದ್ದು ಇಂಗ್ಲೀಷನಲ್ಲಿಯೇ ಎಂಬುದು ಮಹತ್ವವಾದುದು. ಇದಕ್ಕೆ ಕಾರಣ ಸಮಾಜದಲ್ಲಿನ ಜಾತಿ ವ್ಯವಸ್ಥೆಯನ್ನು, ಮೌಢ್ಯತೆಯ ಕೂಪವನ್ನು ನೋಡುತ್ತಲೇ ಬೆಳೆದ ಮೂಲತಃ ಪ್ರತಿಭಾವಂತರಾದ,ಸೂಕ್ಷ್ಮಪ್ರಜ್ಞೆಯ ಕುವೆಂಪು ಭಾರತದ ಸಿಡಿಲ ಸಂನ್ಯಾಸಿಯ ವಿಚಾರಗಳಿಂದ ಬಹಳಷ್ಟು ಪ್ರಭಾವಿತರಾಗುತ್ತಾರೆ. ವಿವೇಕಾನಂದರ ಭಾಷಣ, ಪತ್ರ, ಬರಹಗಳು ಅವರ ಉನ್ನತ ವೈಚಾರಿಕ ನಿಲುವುಗಳಿಗೆ ಮೂಲ ಸ್ಫೂರ್ತಿಯಾಗಿರುವುದನ್ನು ಅವರ ಬರಹಗಳಲ್ಲಿ ನಾವು ಕಾಣುತ್ತೇವೆ.

ಇಂಗ್ಲೀಷ ವ್ಯಾಮೋಹ, ಬ್ರಿಟಿಷರು ನಮ್ಮ ದೇಶದಿಂದ ತೊಲಗಿ ಏಳೂವರೆ ದಶಕಗಳು ಕಳೆದರೂ ಅವರ ಸೆರೆಯಿಂದ ನಾವಿನ್ನೂ ಬಿಡುಗಡೆ ಹೊಂದಿಲ್ಲ. ಇವತ್ತು ಜಾಗತಿಕ ಭಾಷೆಯಾಗಿ ಅನೇಕ ದೇಶಗಳ ಮೇಲೆ ತನ್ನದೇ ಪ್ರಭಾವ ಬೀರಿರುವ ಇಂಗ್ಲೀಷಗೆ ಯಾವಾಗಲೂ ಐಚ್ಛಿಕ ಸ್ಥಾನವನ್ನು ನೀಡಬೇಕೆಂಬ ಗಾಂಧೀಜಿಯ ವಿಚಾರವನ್ನು ಸಮ್ಮತಿಸುವ ಕುವೆಂಪು ಕೇಂದ್ರದ ಆಡಳಿತ ದೃಷ್ಟಿಗೆ ಅವಶ್ಯಕವಾದ ಹಿಂದಿ ಭಾಷೆಗೆ ದ್ವಿತೀಯ ಸ್ಥಾನವನ್ನು , ಪ್ರಾದೇಶಿಕ ಭಾಷೆಗಳಿಗೆ ಪ್ರಥಮ ಆದ್ಯತೆ ನೀಡಬೇಕೆಂದು ಆಶಿಸುತ್ತಾರೆ. "ದೇಶ ಭಾಷೆಗೆ ಪ್ರಥಮ ಸ್ಥಾನ ಸಲ್ಲಬೇಕು. ದೇಶ ಭಾಷೆ ಶಿಕ್ಷಣ ಮಾಧ್ಯಮವಾಗಬೇಕು ಎಂದೊಡನೆ ಕೆಲವರು ಇಂಗ್ಲೀಷ್ ಭಾಷಾ ಸಾಹಿತ್ಯಗಳಿಗೆ ಸಂಪೂರ್ಣ ಅರ್ಧಚಂದ್ರ ಪ್ರಯೋಗವಾಗಿ ಬಿಡುತ್ತದೆ ಎಂದು ವ್ಯಾಖ್ಯಾನ ಮಾಡಿ ದೇಶವಾದಿಗಳನ್ನು ಸ್ವಭಾಷಾಭ್ರಾಂತರೆಂದೂ ವಿದ್ಯಾ ಸಂಸ್ಕೃತಿ ವಿದ್ವೇಷಿಗಳೆಂದ ಸಂಕುಚಿತ

ಮನೋಭಾವದವರೆಂದೂ ಟೀಕಿಸಿ ಖಂಡಿಸುತ್ತಾರೆ. ಇಂಗ್ಲೀಷ್ ಮೋಹಿಗಳ ಈ ಪ್ರಥಮ ಭ್ರಾಂತಿ ಮೊದಲು ನಿರಸನಗೊಳ್ಳಬೇಕು. ಇಂಗ್ಲೀಷ್ ಭಾಷೆಯ ಯೋಗ್ಯತೆ, ಅದರ ವ್ಯಾಪ್ತಿ, ಅದರಿಂದೊದಗುವ ಪ್ರಜ್ಞಾ ವೈಶಾಲ್ಯ, ಅದು ನಮ್ಮಲ್ಲಿ ಪ್ರಚೋದಿಸಿರುವ ವಿಚಾರ ಬುದ್ಧಿ, ಅದರಿಂದ ಮುಂದೆ ಎಂದೆಂದಿಗೂ ನಮಗೆ ಲಭಿಸಲಿರುವ ಸಂಪರ್ಕ ಸಹಾಯ ಮೊದಲಾದವುಗಳನ್ನೆಲ್ಲ ಅರಿತವರಾರೂ ಬ್ರಿಟಿಷರನ್ನು ಓಡಿಸಿದಂತೆ ಇಂಗ್ಲೀಷ್ ಭಾಷೆಯನ್ನೂ ಓಡಿಸಬೇಕೆಂದು ಹೇಳುವ ಅವಿವೇಕಕ್ಕೆ ಹೋಗಲಾರರು. ಹಾಗೆ ಹೇಳುವವರನ್ನು ಪ್ರಚ್ಛನ್ನ ದೇಶದ್ರೋಹಿಗಳೆಂದು ಕರೆಯಬೇಕಾಗುತ್ತದೆ. ಆದ್ದರಿಂದ ಇಂಗ್ಲಿಷ್ ನಮ್ಮೊಡನೆ ಉಳಿಯಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿರುವುದಕ್ಕೆ ಅವಕಾಶವೇ ಇಲ್ಲ."[೨]

ಸಂಸ್ಕೃತ ಭಾಷೆ ಕಲಿಯಬೇಕೆಂದಾಗ ಅವರಿಗೆ ಸುಲಭವಾಗಿ ದಕ್ಕದೇ ಹೋದುದನ್ನೂ ತಮ್ಮ ನೆನಪಿನ ದೋಣಿಯಲ್ಲಿ ಕುವೆಂಪು ಉಲ್ಲೇಖಿಸುತ್ತಾರೆ. ಕುವೆಂಪು ಸಂಸ್ಕೃತದಿಂದ ದೂರವಾಗಿ ಕನ್ನಡಕ್ಕೆ ಬರಲಿಲ್ಲ. ಬದಲಾಗಿ ಇಂಗ್ಲೀಷನ್ನು ಆಶ್ರಯಿಸಿದರು. ದುರಂತವೆಂದರೆ ಸಂಸ್ಕೃತ ಇಂಗ್ಲೀಷ್ ಎರಡೂ ಪ್ರಭುತ್ವದ ಭಾಷೆಗಳೇ–ಕುವೆಂಪು ಅಂಥವರ ಪಾಲಿಗೆ"[೩] "ನನಗೆ ಚಿಕ್ಕಂದಿನಿಂದಲೂ ಸಹಜವಾಗಿದ್ದ ಆಧ್ಯಾತ್ಮಿಕ ಆಸಕ್ತಿಗೆ ಮತ್ತು ವಿಚರಾತ್ಮಕವಾದ ಜಿಜ್ಞಾಸೆಗೆ ಮೊತ್ತ ಮೊದಲು ಆಹಾರ ಒದಗಿದುದು ಆಂಗ್ಲೇಯ ಭಾಷೆಯ ಮುಖಾಂತರವೇ.. ವಸ್ತು ಭಾರತೀಯವಾದದ್ದೇ ಆದರೂ ಅದನ್ನು ನಾನು ಇಂಗ್ಲೀಷಿನ ಮುಖಾಂತರವೇ ಪಡೆಯಲು ಸಾಧ್ಯವಾಗಿತ್ತು. ಪ್ರಚಲಿತ ವೈದಿಕ ಹಿಂದೂ ಧರ್ಮದ ಅನೇಕ ಶ್ರದ್ಧೆ ಆಚಾರ ವಿಚಾರಗಳಲ್ಲಿ ನನಗೆ ನಂಬುಗೆ ಇರಲಿಲ್ಲ ಮಾತ್ರವಲ್ಲ, ಅತ್ಯಂತ ತಿರಸ್ಕಾರವೂ ಇತ್ತು. ಮೇಲುಕೀಳೂ ಭಾವನೆಗಳು, ಜಾತಿಪದ್ಧತಿ, ಬ್ರಾಹ್ಮಣನೆ ಬ್ರಹ್ಮದ ಬಾಯಿಂದ ಬಂದಿರುವ ಶ್ರೇಷ್ಠ ವಸ್ತು, ಶೂದ್ರನು ಸಂಸ್ಕೃತ ಓದಬಾರದು ಮತ್ತು ಅದನ್ನು ಯಾರಾದರೂ ಉಚ್ಚರಿಸುವುದನ್ನು ಅವನು ಆಲಿಸಿದರೆ ಅವನ ಕಿವಿಗೆ ಸೀಸ ಕಾಯಿಸಿ ಹೊಯ್ಯಬೇಕು ಎಂಬಂತಹ ಮನುವಿನಂತಹರ ಶಾಸ್ತ್ರಾಜ್ಞೆ– ಇತ್ಯಾದಿ ಒಂದಲ್ಲ ಎರಡಲ್ಲ ಸಾವಿರಾರು ಪ್ರಚಲಿತ ಹಿಂದೂ ಧರ್ಮದ ಅನುದಾರವೂ ಅವಿವೇಕವೂ ಆದ ನೀಚಭಾವನೆಗಳಲ್ಲಿ ಬದ್ಧ ದ್ವೇಷವಿತ್ತು. ಅಂತಹ ದುರ್ಭಾವನೆಗಳಿಗೆಲ್ಲ ಕುಠಾರ ಸ್ವರೂಪವಾಗಿದ್ದ ಸ್ವಾಮಿ ವಿವೇಕಾನಂದರಂತಹವರ ವಾಣಿ ನನಗೆ ದೊರೆತದ್ದು ಇಂಗ್ಲೀಷ್ ಭಾಷೆಯ ಮೂಲಕವೆ. ನನ್ನ ಜೀವಕ್ಕೆ ಅಭಯ ಘೋಷಣೆ ಮಾಡಿ, ತಾನು ಶಿವತತ್ವದಿಂದ ಅಭಿನ್ನ ಎಂಬುದನ್ನೂ ಸಾರಿ, ಆತ್ಮದ ಔನ್ನತ್ಯ ನೈರ್ಮಲ್ಯ ಗೌರವಗಳನ್ನು ಮನಮುಟ್ಟುವಂತೆಯೂ ಎದೆವೊಗುವಂತೆಯೂ ಹಾಡಿದ ಪ್ರಾಚೀನ ಮಹರ್ಷಿಗಳ ವೇದಾಂತವಾಣೀ ನನ್ನ ಪ್ರಜ್ಞೆಗೆ ಪ್ರವೇಶಿಸಲು ಸಾಧ್ಯವಾದುದು ಇಂಗ್ಲೀಷ್ ಭಾಷಾ ಕೃಪೆಯಿಂದಲೆ "[೪] ಕುವೆಂಪು ಅವರಿಗೆ ಇಂಗ್ಲೀಷ ಭಾಷೆಯ ಮೇಲಿನ ವ್ಯಾಮೋಹ ಕೇವಲ ವೈಯಕ್ತಿಕ ನೆಲೆಯಿಂದ ಮಾತ್ರ ಬಂದುದಲ್ಲ. ಒಂದು ಕಾಲ ಘಟ್ಟದಲ್ಲಿ ಇಡೀ ಭಾರತೀಯ ಬದುಕನ್ನು ಪುನರ್ ಕಟ್ಟುವ ಪ್ರಯತ್ನವನ್ನು ತಮ್ಮ ಸ್ವಾರ್ಥಕ್ಕಾಗಿಯೇ ವಸಾಹತು ಸಂಸ್ಕೃತಿ ಮಾಡಿಕೊಂಡರೂ ಸಹಿತ ಭಾರತದ ಕೆಳವರ್ಗದ, ಕೆಳಜಾತಿಯ ಜನರಲ್ಲಿ ಹೊಸ ಆಶಾಕಿರಣವನ್ನು ಮೂಡಿಸಿತು ಎಂಬುದರಲ್ಲಿ ಎರಡು ಮಾತಿಲ್ಲ. ಇಂಗ್ಲೀಷ್ ಸಾಹಿತ್ಯ ಅನೇಕ ಭಾರತೀಯರಲ್ಲಿ ವೈಚಾರಿಕತೆ ಮೈದಾಳುವಂತೆ ಮಾಡಿತು.

ಕುವೆಂಪು ತಮ್ಮ ಸಾಹಿತ್ಯದ ಮೂಲಕ ಏಕಕಾಲಕ್ಕೆ ಎರಡು ರೀತಿಯ ಚಳುವಳಿಗೆ ಜನರನ್ನು ಅಣಿಗೊಳಿಸದರು. ರಾಷ್ಟ್ರೀಯ ಹೋರಾಟಕ್ಕೆ ಜನರನ್ನು ಪ್ರೇರೆಪಿಸಿದುದು ಒಂದಾದರೆ ಇನ್ನೊಂದು ಜಾತಿ, ಮತ ಧರ್ಮಗಳ ಭ್ರಾಂತಿಯಿಂದ ಹೊರಬರಲು ಪ್ರೇರೆಪಿಸಿದುದು ಮತ್ತೊಂದು. ರಾಷ್ಟ್ರೀಯ ಹೋರಾಟದ ಜೊತೆಜೊತೆಯಾಗಿಯೇ ಕರ್ನಾಟಕ ಏಕೀಕರಣ, ಕನ್ನಡ ಭಾಷೆ, ಸಾಹಿತ್ಯದ ಬೆಳವಣಿಗೆಗೆ ಕುವೆಂಪು ಅವಿರತ ಪ್ರಯತ್ನಿಸುತ್ತಾರೆ. ಒಂದು ಕಾಲಘಟ್ಟದಲ್ಲಿ ಇಂಗ್ಲೀಷ್ ಭಾಷೆಯಿಂದ ಸಾಕಷ್ಟು ಪ್ರಭಾವಿತರಾಗಿದ್ದ, ಜೊತೆಗೆ ತಮ್ಮ ಮೊದಲ ಸಾಹಿತ್ಯವೆಲ್ಲವನ್ನು ಇಂಗ್ಲೀಷನಲ್ಲಿಯೇ ಬರೆದ ಕುವೆಂಪು ಜೇಮ್ಸ್ ಕಸಿನ್ಸ್ ಅವರ ಪ್ರೇರಣೆಯಿಂದ ಕನ್ನಡಕ್ಕೆ ಒದಗುತ್ತಾರೆ. ಆಕಾಶವಾಣಿಯ ಭಾಷಣವೊಂದರಲ್ಲಿ ಕನ್ನಡ ತನಗೆ ಸರ್ವಸ್ವವನ್ನು ಕೊಟ್ಟಿರುವುದನ್ನು ನೆನೆಯುತ್ತಾರೆ. ಕನ್ನಡ ಬಿಟ್ಟು ಬೇರೆ ಯಾವ ಭಾಷೆಯಲ್ಲಿ ಸಾಹಿತ್ಯವನ್ನು ರಚಿಸಿದ್ದರೂ ಸಿಗದ ಮಾನ್ಯತೆ ತನಗೆ ಕನ್ನಡನಾಡು, ಭಾಷೆ ನೀಡಿರುವುದನ್ನು ಅತ್ಯಂತ ಅಭಿಮಾನದಿಂದ ಹೇಳುತ್ತಾರೆ.

ನಮ್ಮ ಭಾಷೆಯಲ್ಲಿ ನಮ್ಮ ಭಾವೋದ್ದೀಪನಗಳನ್ನು ಪ್ರಚುರ ಪಡಿಸಿದಂತೆ ಉಳಿದ ಭಾಷೆಗಳಲ್ಲಿ ಸಾಧ್ಯವೇ ಇಲ್ಲವೆಂಬುದನ್ನು ಕುವೆಂಪು ಸ್ಪಷ್ಟಪಡಿಸುತ್ತಾರೆ. ಒಂದು ಕಾಲದಲ್ಲಿ ಕೀರ್ತಿ, ಪ್ರತಿಷ್ಠೆ, ಧನ, ಸಂಪತ್ತ ಏಳಿಗೆ ಇವುಗಳು ಇಂಗ್ಲೀಷ್ ಮೂಲಕ ಬರುತ್ತದೆಂದು ಜನ ಭಾವಿಸಿದ್ದರು. ಈಗ ದೇಶಭಾಷೆಗಳ ಮೂಲಕವೇ ಅವುಗಳನ್ನು ಪಡೆಯಬಹುದೆಂಬುದು ಸರ್ವವಿದಿತ. ಇಂದು ಇಂಗ್ಲೀಷ ಕಲಿಯುತ್ತಿರುವುದರಿಂದ ಆಗುವ ಮನಃಶಕ್ತಿಯ ದುರ್ವ್ಯಯ ನಿಲ್ಲಬೇಕಾಗಿದೆ. ಇಂಗ್ಲೀಷ್ ಕಲಿಸುವವರ ಹಾಗೂ ಕಲಿಯುವವರ ವಿಲಕ್ಷಣವೂ ಶೋಚನೀಯವೂ ಆದ ಸ್ಥಿತಿ ಹೋಗಬೇಕಾಗಿದೆ. ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಕಲೆ,ತತ್ವ,ಸಾಹಿತ್ಯ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ನೋಡಿದರೆ ಕನ್ನಡದ ಸತ್ವ ಅರ್ಥವಾಗುತ್ತದೆ. ಆದ್ದರಿಂದ ಇಂಗ್ಲೀಷ್ ಭಾಷಾ ಮಾಧ್ಯಮದ ಮೂಲಕವಾಗಿಯೇ ಪ್ರಗತಿಯನ್ನು ಸಾಧಿಸಬಹುದೆಂಬ ವಾದದ ಜಳ್ಳು ಇದರಿಂದ ವ್ಯಕ್ತವಾಗುತ್ತದೆ. ಯಾವ ಜನ ಬ್ರಿಟಿಷರು ಭಾರತದಿಂದ ಕಾಲ್ತೆಗೆದರೆ ದೇಶ ಹಾಳಾಗುತ್ತದೆ ಎಂದು ಭಾವಿಸಿದ್ದರೋ ಅಂತಹ ಜನ ಇಂದು ಇಂಗ್ಲೀಷ ಹೋದರೆ ನಾವು ಹಾಳಾಗುತ್ತೇವೆ ಎಂದು ಕೂಗುತ್ತಿದ್ದಾರೆ. ಇಂಗ್ಲೀಷರು ಹೋದರು; ಆದರೆ ಭಾರತವೇನೂ ಅಳಿಯಲಿಲ್ಲ! ಅವರ ಆಳ್ವಿಕೆಯಲ್ಲಿದ್ದುದಕ್ಕಿಂತಲೂ ನೂರ್ಮಡಿ

ಇಂದು ಭಾರತ ಪ್ರಗತಿ ಪಥದಲ್ಲಿ ಸಾಗುತ್ತಿದೆ. ಈಗಾಗಲೇ ಪ್ರಗತಿಯನ್ನೂ ಸಾಧಿಸಿದೆ. ಈಗ ಪ್ರಾಂತಭಾಷೆಗಳ ವಿಷಯದಲ್ಲಿ, ಅವುಗಳ ಸಾಮರ್ಥ್ಯದಲ್ಲಿ ಎಳ್ಳಷ್ಟೂ ಅಧೈರ್ಯಪಡಬೇಕಾಗಿಲ್ಲ. ಇಂಗ್ಲೀಷಿಗೆ ಸರಿದೊರೆಯಾಗಿ ಹೆಗಲೆಣೆಯಗಿ ನಿಲ್ಲಬಲ್ಲ ಕನ್ನಡದಂತಹ ಭಾಷೆಗಳು ಭಾರತದಲ್ಲಿವೆ. ಎಂತಹ ಗಹನವಾದ ವಿಷಯವನ್ನಾಗಲೀ, ಸೂಕ್ಷ್ಮವಾದ ಭಾವವನ್ನಾಗಲಿ ಕನ್ನಡದಲ್ಲಿ ಸರಳವಾಗಿಯೂ ಸುಲಭವಾಗಿಯೂ ಶಕ್ತಿಪೂರ್ಣವಾಗಿಯೂ ವಿವರಿಸುವುದು ಸಾಧ್ಯ. ಕನ್ನಡಿಗರ ಸರ್ವತೋಮುಖವಾದ ಉದ್ಧಾರ ಕನ್ನಡದಿಂದಲೇ ಸಾಧ್ಯ.. ಕನ್ನಡಿಗರಿಗೆ ಕನ್ನಡವೇ ಗತಿ!"[೫] ಎಂದು ಕನ್ನಡಿಗರ ಅಸ್ತಿತ್ವ ಕನ್ನಡದ ಅಸ್ಮಿತತೆಯಿಂದಲೆ ಎಂಬುದನ್ನು ಕುವೆಂಪು ಒತ್ತಿ ಹೇಳುತ್ತಾರೆ.

ಇಂಗ್ಲೀಷನ ಮೂಲಕ ಮಾತ್ರ ಉದ್ಧಾರ. ಇಲ್ಲದಿದ್ದರೆ ಇಲ್ಲವೇ ಇಲ್ಲ ಎನ್ನುವವರಿಗೆ ಕುವೆಂಪು ಇಂಗ್ಲೀಷನ ಕುರಿತಾಗಿ ಭಾಷಾ ದೃಷ್ಟಿಯಿಂದ ಕಲಿಯುವವರು ಮತ್ತು ಸಾಹಿತ್ಯ ದೃಷ್ಟಿಯಿಂದ ಕಲಿಯುವವರು ಎಂದು ಎರಡು ರೀತಿಯಾಗಿ ವಿಂಗಡಿಸುತ್ತಾ ಭಾಷೆ ದೃಷ್ಟಿಯಿಂದ ಇಂಗ್ಲೀಷನ್ನು ಕಲಿಯುವವನು ಅಗತ್ಯವಾಗಿ ಆ ಭಾಷೆಯಲ್ಲಿ ಚೆನ್ನಾಗಿ ಮಾತನಾಡುವುದಕ್ಕೆ ಬರೆಯುವುದಕ್ಕೆ, ಓದುವುದಕ್ಕೆ  ಬಲ್ಲವರಾಗಬೇಕು. ಆದ್ರೆ ಸಾಹಿತ್ಯಿಕ ದೃಷ್ಟಿಯಿಂದ ಓದುವವರಿಗೆ ಅದನ್ನು ತಮ್ಮ ದೇಶೀ ಭಾಷೆಗಳ ಮೂಲಕ ಅಭ್ಯಸಿಸಿದರೂ ಸಾಕು ಆ ಸಾಹಿತ್ಯದ ರಸ ಸ್ವಾದನೆಯಾಗುತ್ತದೆ ಎಂದು ಹೇಳುತ್ತಾರೆ. ರಾಜಕೀಯ ಕಾರಣದಿಂದ ವಸಾಹತು ಸಂದರ್ಭದಲ್ಲಿ ಪ್ರವೇಶ ಪಡೆದ ಇಂಗ್ಲೀಷ ಭಾಷೆಯಿಂದಾಗಿ ಆ ಕಾಲ ಸಂದರ್ಭದಲ್ಲಿ ಕುವೆಂಪು ಅಂತವರಿಗೆ ಇಂಗ್ಲೀಷ ಭಾಷಾ ಕಲಿಕೆ ಅನಿವಾರ್ಯವಾಗಿರಬಹುದು. ಕುವೆಂಪು ಈ ಕುರಿತು ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ಹೇಳುತ್ತಾರೆ. " ಇಂಡಿಯಾದೇಶವನ್ನು ಗೆದ್ದು ಅದರ ರಾಜಕೀಯ ಅವ್ಯವಸ್ಥೆಗೆ ಒಂದು ಸುವ್ಯವಸ್ಥೆಯನ್ನು ತಂದುಕೊಟ್ಟು, ಬ್ರಾಹ್ಮಣಾದಿ ಉಚ್ಚವರ್ಣದವರಿಂದ ಸಾವಿರಾರು ವರ್ಷಗಳಿಂದ ತುಳಿಯಲ್ಪಟ್ಟು ಶೋಷಿಸಲ್ಪಟ್ಟು ದಾಸ್ಯತ್ವವನ್ನೆ ದೈವದತ್ತವೆಂದೂ ವಿಧಿಯೆಂದೂ ಒಪ್ಪಿಕೊಂಡು ಕಾಲಡಿಯ ಕಸವಾಗಿ ಬಿದ್ದಿದ್ದ ಶೂದ್ರಾದಿವರ್ಗದವರನ್ನು ತಲೆಯೆತ್ತುವಂತೆ ಪ್ರೇರೆಪಿಸಿದ್ದೂ ಇಂಗ್ಲೀಷರೆ: ಮತ್ತು ಇಂಗ್ಲೀಷ್ ಭಾಷೆ ಸಾಹಿತ್ಯ ಚರಿತ್ರ ಮೊದಲಾದವುಗಳನ್ನೋದಿ, ಅವರ ಸಂಸ್ಕೃತಿಯಿಂದ ಪ್ರಭಾವಿತರಾಗಿದ್ದ ಭಾರತೀಯರೆ! ಇಂಗ್ಲೀಷ್ ಆಳುವವರ ಅಧಿಕೃತ ಭಾಷೆಯಾಗಿ ಸಮಸ್ತ ಭರತಖಂಡವನ್ನೂ ಮೊತ್ತ ಮೊದಲಿಗೆಂಬಂತೆ ಏಕತ್ವದಲ್ಲಿ ಬಿಗಿದು, ನಮ್ಮಲ್ಲಿ ಧಾರ್ಮಿಕ ಭೂಮಿಕೆಯಲ್ಲಿ ಮಾತ್ರವೆ ಇದ್ದ ಅಖಿಲ ಭಾರತೀಯತ್ವವೂ ರಾಜಕೀಯಾದಿ ಭೂಮಿಕೆಗಳಲ್ಲಿಯೂ ನಿಶ್ಚಿತವಾಗುವಂತೆ ಕೃಪಗೈದಿತ್ತು. ಶೇಕಡ ಆರ್ಧವೊ ಕಾಲೊ ಜನಕ್ಕೆ ಮಾತ್ರ ಆ ಭಾಷೆ ತಿಳಿದಿದ್ದರೂ ಅದಕ್ಕೆ ಅಖಿಲ ಭಾರತೀಯ ವ್ಯಾಪ್ತಿ ಪ್ರಾಪ್ತವಾಯಿತು. ಎಲ್ಲರ ಗೌರವಕ್ಕೂ ಭಾಜನವಾಯಿತು.ಇಂಗ್ಲೀಷ್ ಜನವೆಂತೋ ಅಂತೆ ಇಂಗ್ಲೀಷ್ ಮಾತನಡುವವರೂ "ಪೂಜ್ಯ"ರಾಗಿಬಿಟ್ಟರು, "ದೊರೆ"ಗಳಾದರು, "ಸಾಹೇಬ"ರೂ ಆದರು. ಆ ಕಾರಣದಿಂದಲೂ ಆ ಭಾಷೆ ನನ್ನಂತಹ ಎಳೆಯರ ಮೇಲೆ ತನ್ನ ಪ್ರಭುತ್ವಾಧಿಕಾರ ಸ್ಥಾಪಿಸಿ, ಪೂಜ್ಯಸ್ಥಾನವನ್ನೂ ಗಿಟ್ಟಿಸಿಕೊಂಡು ಬಿಟ್ಟಿತು!"[೬] ಶಾಲೆಯಲ್ಲಿ ಒಂದು ಪಠ್ಯವಿಷಯವನ್ನಾಗಿ ಮಾತ್ರ ಓದಿದ್ದ ಕುವೆಂಪು ಅವರಿಗೆ ಕನ್ನಡ ಎಮ್.ಎ ತರಗತಿಗೆ ಬರುವವರೆಗೂ ಯಾವ ಕನ್ನಡ ಸಾಹಿತಿಯ ಸಂಪರ್ಕವಾಗಲಿ, ಕನ್ನಡ ಸಾಹಿತ್ಯ ಪರಿಷತ್ತಿನಂತ ಒಂದು ಬೃಹತ್ ಸಂಸ್ಥೆಯಿದೆ ಎಂಬುದೂ ಗೊತ್ತಿರಲಿಲ್ಲವೆಂಬುದನ್ನು ತಮ್ಮ ಆತ್ಮಕಥನದಲ್ಲಿ ಜ್ಞಾಪಿಸಿಕೊಳ್ಳುತ್ತಾರೆ."ನಮ್ಮ ದೇಶದಲ್ಲಿ ಪರಕೀಯರ ಸೌಕರ್ಯಾರ್ಥವಾಗಿ ಆ ಭಾಷೆಯಲ್ಲಿ ಬರೆದು ಮಾತಾಡುವುದಕ್ಕಾಗಿಯೆ ನಮ್ಮ ವಿದ್ಯಾಭ್ಯಾಸ ಏರ್ಪಟ್ಟುದುದರಿಂದ ನಾವು ಪರಭಾಷಾ ಸಾಹಿತ್ಯವನ್ನು ಆ ಭಾಷಾ ಮಾಧ್ಯಮದಿಂದಲೇ ಕಲಿಯಬೇಕಾಯಿತು. ಮೊದಲಿನಿಂದಲೂ ಆ ಸಾಹಿತ್ಯವನ್ನು  ನಮ್ಮ ಭಾಷಾ ಮಾಧ್ಯಮದಿಂದಲೇ ಕಲಿಸಿದ್ದರೆ ನಮ್ಮವರಿಗೆ ಈಗ ಒದಗಿರುವ ರಸಪುಷ್ಟಿಗಿಂತಲೂ ಸಾವಿರ ಪಾಲು ಹೆಚ್ಚಿನ ರಸಪುಷ್ಟಿ ಒದಗುತ್ತಿತ್ತು."[೭]

ಅಧ್ಯಯನದ ಸಂದರ್ಭಕ್ಕಿಂತಲೂ ತದನಂತರದ ಕರ್ನಾಟಕದ ಪರಿಸ್ಥಿತಿಯನ್ನು ಅವಲೋಕಿಸಿದಾಗ ಸಾಕಷ್ಟು ಬದಲಾವಣೆ, ಅಭಿವೃದ್ಧಿಗಳಾಗಿರುವುದನ್ನು ಕುವೆಂಪು ಗಮನಿಸಿದ್ದಾರೆ ಕುವೆಂಪು ಅವರನ್ನು  ದೇಜಗೌ ಅವರು ತಮ್ಮ ಸಂದರ್ಶನವೊಂದರಲ್ಲಿ "ಕನ್ನಡ ನಾಡಿನ ಹಾಗೂ ಕನ್ನಡ ಭಾಷೆಯ ಭವಿತವ್ಯದ ಬಗ್ಗೆ ಭವ್ಯವಾದ ಕನಸು ಕಂಡವರು ನೀವು. ಆ ಕನಸು ನನಸಾಗುತ್ತಿದೆಯೇ? ೧೯೮೩ ನೆಯ ವರ್ಷದಲ್ಲಾದರೂ ಕನ್ನಡ ಭಾಷೆಯ ಸ್ಥಾನಮಾನ ಸುಧಾರಿಸಿವೆಯೆಂದು ಹೇಳಬಹುದೇ? ನಿಮ್ಮ ಕನ್ನಡತನ ನೀವೇ ಪ್ರತಿಪಾದಿಸುತ್ತಿರುವ ವಿಶ್ವಮಾನವ ತತ್ವಕ್ಕೆ ವಿರೋಧವಾಗುವುದಿಲ್ಲವೇ?" ಎಂಬ ಪ್ರಶ್ನೆಗೆ ಕುವೆಂಪು "ಕನಸು ನನಸಾಗುತ್ತಿದೆ ಎಂಬ ಆಶಾವಾದದಿಂದಲೇ ನಾವು ಬದುಕುವುದು ಸಾಧ್ಯ. ಕನ್ನಡ ಭಾಷೆಯ ಸ್ಥಾನಮಾನ ಸುಧಾರಿಸಿದೆಯೆಂದು ಹೇಳಲಾಗದಿದ್ದರೂ ಇತ್ತೀಚಿನ ದಿನಗಳಲ್ಲಿ ಸುಧಾರಣೆಯ ಕಡೆಗೆ ಮುಖವಾಗಿವೆಯೆಂದು ಹೇಳಬಹುದು. ನನ್ನ ಕನ್ನಡತನ ನಿಷೇಧಾತ್ಮಕ ವಲ್ಲದ್ದರಿಂದ ವಿಶ್ವಮಾನವತತ್ವಕ್ಕೆ ವಿರೋಧವಾಗಲಾರದು. ಅಂಗವೆಂದಾದರೂ ಅಂಗಿಗೆ ವಿರೋಧವಾಗುತ್ತದೆಯೇ?"[೮]

ತ್ರಿಭಾಷಾ ಸೂತ್ರವನ್ನಂತೂ ಅಲ್ಲಗೆಳೆಯುವ ಕುವೆಂಪು ಬಲಾತ್ಕಾರ ರೂಪದ ಭಾಷಾನೀತಿಯಿಂದ ವ್ಯಕ್ತಿತ್ವದ ವಿಕಾಸಕ್ಕೆ, ಭಾವೈಕ್ಯಕ್ಕೆ ಹಾಗೂ ವ್ಯಕ್ತಿಸ್ವಾತಂತ್ರ್ಯಕ್ಕೆ ಅಡಚಣೆಯಾಗುತ್ತದೆ. ಎಲ್ಲ ಭಾಷೆಗಳ ಕಲಿಕೆಗೂ ಅವಕಾಶವಿರಬೇಕು.ಆದರೆ ಪ್ರತಿಯೊಬ್ಬ ವಿದ್ಯಾರ್ಥಿಯೂ ತಂತನ್ನ ಜಾಯಮಾನ ಅಭಿರುಚಿ ಅನುಕೂಲ ಅವಶ್ಯಕತೆಗಳಿಗನುಗುಣವಾಗಿ ತನಗೆ ಬೇಕಾದ ಭಾಷೆಗಳನ್ನಾರಿಸಿಕೊಂಡು ಕಲಿಯಲು ಅನುವು ಕಲ್ಪಿಸಬೇಕು. ಹಿಂದಿಯಾಗಲಿ, ಇಂಗ್ಲೀಷಾಗಲಿ ಎಲ್ಲರೂ ಏಕೆ ಕಡ್ಡಾಯವಾಗಿ

ಕಲಿಯಬೇಕು? ಅವನ್ನು ಜೀವನದುದ್ದಕ್ಕೂ ಬಳಸುವ ಅವಕಾಶ ಎಷ್ಟು ಜನರಿಗಿದ್ದೀತು? ಇಲ್ಲವೆನ್ನುವುದಾದರೆ ಆರ್ಥಿಕ ಶಕ್ತಿಯನ್ನಾಗಲೀ ಮಾನಸಿಕ ಶಕ್ತಿಯನ್ನಾಗಲೀ ಅನಾವಶ್ಯಕವಾಗಿ ಏಕೆ ಪೋಲು ಮಾಡಬೇಕು? ನಮ್ಮ ವಿದ್ಯಾರ್ಥಿಗಳು ಮಾನವಿಕ, ವೈಜ್ಞಾನಿಕ ಹಾಗೂ ತಾಂತ್ರಿಕ ವಿಷಯಗಳಲ್ಲಿ ಹೆಚ್ಚು ಪರಿಣಿತಿ ಸಂಪಾದಿಸಬೇಕಾಗಿರುವಾಗ ಅವರ ಮನಸ್ಸಿನ ಮೇಲೆ ಬಹುಭಾಷೆಗಳ ಭಾರವನ್ನು ಹೇರುವುದು ತರವಲ್ಲ. ಅದರಲ್ಲಿಯೂ ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಅಂಥ ಹೇರಿಕೆ ಶಾಪವಾಗುತ್ತದೆ. ಅವರು ಎರಡು ಭಾಷೆಗಳಲ್ಲಿ ಕೌಶಲ್ಯ ಪಡೆದಿರಬೇಕೆಂದು ಕಡ್ಡಾಯಗೊಳಿಸುವಾಗ ಮೂರು ನಾಲ್ಕು ಭಾಷೆಗಳನ್ನು ಕಲಿಯಬಾರದೆಂದು ಯಾರೂ ಕಟ್ಟು ಮಾಡುವುದಿಲ್ಲ. ಇದೊಂದು ಕನಿಷ್ಠ ಮಿತಿಯೇ ಹೊರತು ವರಿಷ್ಠ ಮಿತಿಯಲ್ಲ. ಅಗತ್ಯವಿಲ್ಲದಿದ್ದರೆ ಕನ್ನಡವನ್ನಾದರೂ ಏಕೆ ಕಲಿಯಬೇಕು ಕನ್ನಡ ನಾಡಿನಲ್ಲಿ ತಮ್ಮ ಜೀವಿತವನ್ನು ಸಾಗಿಸಬೇಕೆನ್ನುವವರು ಅಲ್ಲಿಯ ಭಾಷೆಯನ್ನು ಕಲಿಯಲೇಬೇಕು. ಪ್ರಾದೇಶೀಕ ಭಾಷೆ ಆಡಳಿತ ಮಾಧ್ಯಮವಾದರೆ ಭಾಷಾ ಸಂಬಂಧವಾದ ವಿರಸ ವೈಷಮ್ಯಗಳು ತಾವಾಗಿಯೇ ಕರಗಿಹೋಗುತ್ತವೆ. ಪ್ರಜಾಪ್ರಭುತ್ವದಲ್ಲಿ ಬಹುಜನರ ಭಾಷೆ ಆಡಳಿತ ಭಾಷೆಯಾಗಬೇಕಾದ್ದು ಸಹಜ. ಆಡಳಿತ ಮಾಧ್ಯಮವೇ ಶಿಕ್ಷಣ ಮಾಧ್ಯಮವೂ ಆಗಿರಬೇಕೆಂಬುದರಲ್ಲಿ ಲವಲೇಶವೂ ಸಂದೇಹವಿಲ್ಲ. ಭಾಷಾಬಾಹುಳ್ಯವಿರುವ ದೇಶದಲ್ಲಿ ಆಯ್ಕೆಯ ಸ್ವಾತಂತ್ರ್ಯದಿಂದ ಐಕ್ಯ: ಬಲಾತ್ಕಾರದಿಂದ ಅನೈಕ್ಯವೆಂಬುದನ್ನು ಸರ್ವರೂ ತಿಳಿದಿರಬೇಕು”[೯] ಎಂದು ತ್ರಿಭಾಷಾ ಸೂತ್ರ ಎಲ್ಲರಿಗೂ ಅವಶ್ಯಕವಿಲ್ಲವೆಂಬುದನ್ನು ಮನಗಾಣಿಸುತ್ತಾರೆ.

ಕನ್ನಡಿಗರು ಕರ್ನಾಟಕದಾಚೆ ಬದುಕನ್ನು ಕಟ್ಟಿಕೊಳ್ಳಲು ತ್ರಿಭಾಷೆ ಬೇಕೆಬೇಕು ಎಂದು ಒತ್ತಾಯದಿಂದ ತ್ರಿಭಾಷಾ ಸೂತ್ರವನ್ನು ಹೇರುವವರಿಗೆ ಕುವೆಂಪು 'ಬಲಾತ್ಕಾರದ ಭಾಷಾ ತ್ರಿಶೂಲ' ಕವನದ ಮೂಲಕ ಈ ರೀತಿ ಉತ್ತರಿಸುತ್ತಾರೆ.

“ ಭಾಷಾ ತ್ರಿಶೂಲವೀ ತ್ರಿಭಾಷಾ ಸೂತ್ರ;/ಬಾಲಕರ ರಕ್ಷಿಸೈ,ಹೇ ತ್ರಿಣೇತ್ರ!
ಚೂರುತಿಂಡಿಗೆ ಸಿಕ್ಕಿಸಿಹರೊ ಈ ಮೂರು ಗಾಳ/ ನುಂಗದಿದ್ದರೆ ಹಸಿವೆ; ನುಂಗಿದರೆ ಪ್ರಾಣಶೂಲ! ವ

ಮುಂದೆ ದಿಳ್ಳಿಯ ಮಂತ್ರಿಯಾಗುವವ ನೀನೊ?/ಬೇಡವೆಂಬುವರಾರು? ಹಿಂದಿಯನು ಕಲಿಯೊ!
ಬದುಕಿ ಇಲ್ಲಿಯೆ ಬಾಳಿ ಸಾಯುವವ ನಾನೊ!/ನಿನ್ನ ಸೂತ್ರಕೆ ಏಕೆ ನನ್ನ ಬಲಿಯೊ?

ಮುಂದೆ ಇಂಗ್ಲೆಂಡಿನಲಿ ನೀ ರಾಯಭಾರಿ?/ ಬೇಡವೆಂಬುವರಾರು?
ಹೊಡೆಬಿರಿಯೆ ಕುಡಿಯೊ ಇಂಗ್ಲಿಷಿನ ಹೆಂಡ ಹೀರಿ!/ನನ್ನ ಮೇಲೇತಕ್ಕೆ ಮಾಡುವೆ ಬಲಾತ್ಕಾರ ಸವಾರಿ?

ನೀನು ಅಂತರರಾಷ್ಟ್ರ ಕೀರ್ತಿಯಂ ಪೊತ್ತು ಗರ್ಜಿಸುವ /ಜಗತ್ ಪ್ರಸಿದ್ಧ ಹುಲಿಯೆ?
ಇದೆಕೊ ನಿನಗೆನ್ನ ಭೋ ಪರಾಕು! ನಾನು ಅಜ್ಞಾತ ಅಖ್ಯಾತ ಅನಾಮಿಕ ಅಲ್ಪ ಇಲಿಯೆ?

ಇರಲಿ:/ಕನ್ನಡದ ಬೆನಕದೇರನ್ನೆಳೆವ ಈ ಧನ್ಯತೆಯ ಸಾಕು![೧೦] ಸಾಕು ಈ ಬಲಾತ್ಕಾರವೆಂಬ ಪದ್ಯದಲ್ಲಿ
“ಬೇಕಾದವರಿಗೆ ಕೊಡಿರೊ, ಬೇಡವೆಂದವರಾರು?/ ಹೇರಿ ಎಲ್ಲರ ಮೇಲೆ ಕೊಲಗೈವಿರೇಕೋ

ಓ ಕಂದ! ಓ ತರುಣ, ಓ ಯುವಕ ಭಾರತೀಯ/ಮೇಲೆ ಕುಳಿತವರಿಕ್ಕಿದುಕ್ಕು ಬಲೆಯನು ಕಿತ್ತು/
ನಿನ್ನ ಸ್ವಾತಂತ್ರ್ಯವನು, ಓ ನೀನೆ ರಕ್ಷಿಸಿಕೊ” ಎಂದು ಕನ್ನಡ ಜನರನ್ನು ಎಚ್ಚರಿಸುತ್ತಾರೆ.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸಾಹಿತ್ಯ ಮತ್ತು ಸಾಹಿತ್ಯೇತರ ಹೀಗೆ ಎರಡು ಕಾರಣಗಳಿಗಾಗಿ ಕುವೆಂಪು ಅವರಷ್ಟು ಚರ್ಚೆಗೆ ಒಳಗಾದ ಲೇಖಕ ಮತ್ತೊಬ್ಬ ಇಲ್ಲ”[೧೧] “ನಾನು ಅವಧೂತನಾಗಿ ಹೋಗುವುದಿಲ್ಲ. ಕನ್ನಡವು ತನ್ನ ಸ್ಥಾನವನ್ನು ಅಧಿಕೃತವಾಗಿ ಪಡೆಯುವ ತನಕ, ನನ್ನ ಪ್ರಾಣವಿರುವ ತನಕ ಕನ್ನಡಕ್ಕಾಗಿ ದುಡಿಯುವುದು, ಕನ್ನಡಕ್ಕಾಗಿ ದುಡಿಯಲು ವ್ಯಕ್ತಿಗಳನ್ನು ಪ್ರಚೋದಿಸುವುದು, ಅದಕ್ಕಾಗಿ ಭಗವಂತನಲ್ಲಿ ಮೊರೆಯಿಡುವುದು ಮಾಡುತ್ತೇನೆ. ನನ್ನೆಲ್ಲ ತಪಶಕ್ತಿಯನ್ನು ಅಥವಾ ಪ್ರಾರ್ಥನಾ ಶಕ್ತಿಯನ್ನು ಕನ್ನಡ ಸೇವೆಗಾಗಿ ಮೀಸಲಿಡುತ್ತೇನೆ”[೧೨] ಎಂದ ಕುವೆಂಪು ತಮ್ಮ ಜೀವನಪೂರ್ತಿ ಕನ್ನಡ, ಕರ್ನಾಟಕವನ್ನೇ ಉಸಿರಾಡಿದರು. ಭಾರತಕ್ಕೆ ರವೀಂದ್ರನಾಥ ಠಾಕೂರರು ರಾಷ್ಟ್ರಗೀತೆಯನ್ನು ಕೊಟ್ಟಂತೆ ಕುವೆಂಪು ಕರ್ನಾಟಕಕ್ಕೆ ನಾಡಗೀತೆಯನ್ನು ಕೊಟ್ಟು ಅಜರಾಮರರಾಗಿ ಉಳಿದಿದ್ದಾರೆ. ಕನ್ನಡಿಗರ ಅಸ್ಮಿತತೆ ಕನ್ನಡ ಮತ್ತು ಕರ್ನಾಟಕದಿಂದಲೆ ಎಂಬ ವಿಚಾರವನ್ನು ಬಿತ್ತಿ ಹೋಗಿದ್ದಾರೆ.

**ಅಡಿಟಿಪ್ಪಣಿಗಳು:**

೧. ಕುವೆಂಪು: ನೆನಪಿನ ದೋಣಿಯಲ್ಲಿ: ಪುಟ: ೧೭೩ ಉದಯರವಿ ಪ್ರಕಾಶನ; ಮೈಸೂರು: ೧೯೮೦

೨. ನಮಗೆ ಬೇಕಾಗಿರುವ ಇಂಗ್ಲೀಷ್: ವಿಚಾರ ಸಾಹಿತ್ಯ: ಸಂಪುಟ ೧:ಪ್ರಸಾರಾಂಗ: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು: ಪುಟ:೧೪–೧೫
೩. ನರಹಳ್ಳಿ ಬಾಲಸುಬ್ರಹ್ಮಣ್ಯ: ಕುವೆಂಪು ಕಾವ್ಯ: ಸಂಸ್ಕೃತಿ ಚರಿತ್ರೆಯ ರೂಪಕ: ಪುಟ:೨೪
೪. ಕುವೆಂಪು: ನೆನಪಿನ ದೋಣಿಯಲ್ಲಿ ಪುಟ: ೧೭೩–೧೭೪
೫. ಕೋ.ಚೆನ್ನಬಸಪ್ಪ: ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ– ಸಾಮಾಜಿಕ ನಿಷ್ಠೆ: ಪುಟ: ೧೨೯
೬. ನೆನಪಿನ ದೋಣಿಯಲ್ಲಿ: ಪುಟ: ೧೭೪
೭. ಕುವೆಂಪು ಸಮಗ್ರ ಗದ್ಯ:ಸಂಪುಟ೨: ಪುಟ:೯೮
೮. ದೇಜಗೌ: ರಾಷ್ಟ್ರಕವಿ ಸಂದರ್ಶನ: ಪುಟ:೧೮–೧೯
೯. ದೇಜಗೌ: ರಾಷ್ಟ್ರಕವಿ ಸಂದರ್ಶನ: ಪುಟ:೧೯–೨೦
೧೦. ಕೋ. ಚೆನ್ನಬಸಪ್ಪ:ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ: ಪುಟ: ೪೨–೪೩
೧೧. ಕುವೆಂಪು: ಕೆ.ಎಂ ಮುನಿಕೃಷ್ಣಪ್ಪ:ಪುಟ೦೫
೧೨. ಕೋ. ಚೆನ್ನಬಸಪ್ಪ:ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ: ಪುಟ: ೪೨–೪೩

**ಆಕರ ಗ್ರಂಥಗಳು:**

೧. ನೆನಪಿನ ದೋಣಿ: ಕುವೆಂಪು: ಉದಯರವಿ ಪ್ರಕಾಶನ: ೨೦೧೧
೨. ವಿಚಾರ ಸಾಹಿತ್ಯ: ಸಂಪುಟ ೧:ಪ್ರಸಾರಾಂಗ: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
೩. ಕುವೆಂಪು ಕಾವ್ಯ: ಸಂಸ್ಕೃತಿ ಚರಿತ್ರೆಯ ರೂಪಕ: ನರಹಳ್ಳಿ ಬಾಲಸುಬ್ರಹ್ಮಣ್ಯ: ಅಂಕಿತ ಪ್ರಕಾಶನ:೨೦೦೪
೪. ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ: ಕೋ.ಚೆನ್ನಬಸಪ್ಪ: ಸಾಮಾಜಿಕ ನಿಷ್ಠೆ:ನವಕರ್ನಾಟಕ ಪ್ರಕಾಶನ: ೨೦೦೪
೫. ಕುವೆಂಪು ಸಮಗ್ರ ಗದ್ಯ:ಸಂಪುಟ೨:ಸಂ:ಕೆ.ಸಿ.ಶಿವಾರೆಡ್ಡಿ:ಕನ್ನಡ ವಿಶ್ವ ವಿದ್ಯಾಲಯ, ಹಂಪಿ : ೨೦೦೪
೬. ಕುವೆಂಪು: ಕೆ.ಎಂ ಮುನಿಕೃಷ್ಣಪ್ಪ: ಕರ್ನಾಟಕ ಸಾಹಿತ್ಯ ಅಕಾಡೆಮಿ: ೨೦೦೩
೭. ರಾಷ್ಟ್ರಕವಿ ಸಂದರ್ಶನ: ದೇಜಗೌ:ಸಹ್ಯಾದ್ರಿ ಪ್ರಕಾಶನ: ೧೯೮೪

# ....ನಮ್ಮ ಹೃದಯವೇ ನಮಗೆ ಶ್ರೀಧರ್ಮ ಸೂತ್ರ

**ರಾಮರೆಡ್ಡಿ.ಕೆ.**
**ಕನ್ನಡ ಅಧ್ಯಾಪಕ,**
**ಕೆ.ಎಲ್.ಇ.ಸಂಸ್ಥೆಯ,**
**ಎಸ್.ವಿ.ಎಸ್.ಬೆಳ್ಳುಬ್ಬಿ**
**ಕಲಾ ಹಾಗೂ ವಾಣಿಜ್ಯ**
**ಮಹಾವಿದ್ಯಾಲಯ,**
**ಸವದತ್ತಿ–೫೯೧೧೨೬. ಬೆಳಗಾವಿ ಜಿಲ್ಲೆ.**

ವೈಚಾರಿಕತೆ ಎನ್ನುವುದು ಒಂದು ವಿಷಯವನ್ನು ಒಳಿತು ಕೆಡುಕುಗಳ ಹಿನ್ನೆಲೆಯಲ್ಲಿ ತರ್ಕಬದ್ಧವಾಗಿ ಯೋಚಿಸುವ ಒಂದು ಪ್ರಕ್ರಿಯೆ. ‘ಬುದ್ಧಿ, ತಿಳುವಳಿಕೆ, ಜ್ಞಾನ, ಪ್ರಜ್ಞೆ, ವೈಚಾರಿಕತೆಯ ಪ್ರಧಾನ ಅಂಶಗಳು. ಯಾವುದು ಚರ್ಚೆಗೆ ವಸ್ತುವಾಗುವದೋ ಮತ್ತು ತಿಳುವಳಿಕೆಗೆ ಹೊಸದೊಂದು ಆಯಾಮವನ್ನು ನೀಡಿ ಹೊಸ ಹೊಸ ಕ್ಷಿತಿಜಗಳನ್ನು ತೆರೆದು ತೋರಿಸುವದೋ ಅದೇ ವೈಚಾರಿಕತೆ’ಿ ಇದನ್ನು ಬಹುತೇಕರು ತಪ್ಪಾಗಿ ಅರ್ಥೈಸಿಕೊಳ್ಳುವ ಸಾಧ್ಯತೆ ಹೆಚ್ಚು. ‘ವೈಚಾರಿಕತೆ ಎಂದರೆ ಕಾರಣಗಳಿಂದ ಮಾರ್ಗದರ್ಶನ ಮಾಡುವ ಅಥವಾ ಆಧರಿಸಿದ ಗುಣ. ಈ ನಿಟ್ಟಿನಲ್ಲಿ ಒಬ್ಬ ವ್ಯಕ್ತಿಯು ತಾನು ಮಾಡುವ ಕಾರ್ಯಕ್ಕೆ ಒಳ್ಳೆಯ ಕಾರಣವಿದ್ದರೆ ಅಥವಾ ಬಲವಾದ ಪುರಾವೆಗಳನ್ನು ಆಧರಿಸಿದ್ದರೆ, ನಂಬಿಕೆ ತರ್ಕಬದ್ಧವಾಗಿದ್ದರೆ ತರ್ಕಬದ್ಧವಾಗಿ ವರ್ತಿಸುತ್ತಾನೆ’ು ಇದನ್ನೇ ವೈಚಾರಿಕತೆ ಎನ್ನಬಹುದು. ‘ವೈಚಾರಿಕತೆ ಎಂದರೆ ದೇವರು ಧರ್ಮವನ್ನು ಪ್ರತಿಭಟಿಸುವದಲ್ಲ. ಅದರ ಹೆಸರಿನಲ್ಲಿ ನಡೆಯುವ ಶೋಷಣೆಯ ವಿರುದ್ಧ ದನಿ ಎತ್ತುವುದು. ವೈಚಾರಿಕತೆಯಲ್ಲಿಯೇ ಬದುಕು ಇದೆ ಎಂಬುದು ಕುವೆಂಪು ಅವರ ದೃಷ್ಟಿಕೋನವಾಗಿತ್ತು’ಉು. ‘ದೇವರು, ಧರ್ಮ, ಜೋತಿಷ್ಯ, ಪವಾಡ ಮುಂತಾದವುಗಳು ನಮ್ಮಲ್ಲಿ ವಾಣಿಜ್ಯ ಉದ್ಯಮಗಳಾಗಿದ್ದು ಶೋಷಣೆಯ ಸಾಧನಗಳಾಗಿವೆ’ಿತ ಎಂದು ಎಚ್.ನರಸಿಂಹಯ್ಯನವರು ತಮ್ಮ ಆತ್ಮಕಥೆಯಲ್ಲಿ ಬರೆಯುತ್ತಾರೆ. ಹೀಗಾಗಿ ವೈಚಾರಿಕತೆ, ವಿಚಾರವಾದ, ಭೌದ್ಧಿಕತೆ ಇವೆಲ್ಲ ಒಂದೆ ಅರ್ಥವುಳ್ಳ ಪದಗಳಾಗಿವೆ.

ಕುವೆಂಪು ತಮ್ಮ ಬರಹಗಳಲ್ಲಿ ವೈಚಾರಿಕತೆಯ ಅಂಶಗಳನ್ನು ಸಮರ್ಥವಾಗಿ ಚಿತ್ರಿಸಿದ ಮಹತ್ವದ ಕವಿ. ಅವರ ಸಾಹಿತ್ಯವು ಸಮಾಜಕ್ಕೆ ಆವರಿಸಿಕೊಂಡ ಅಜ್ಞಾನದ ಕತ್ತಲೆಯಲ್ಲಿ ಹೊಸ ಬೆಳಕನ್ನು ತೋರುವಂತಹದ್ದು.

**‘ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ,**
**ಬಡತನವ ಬುಡ ಮಟ್ಟ ಕೀಳಬನ್ನಿ..........**
**ಆ ಮತದ ಈ ಮತದ ಹಳೆಮತದ ಸಹವಾಸ**
**ಸಾಕಿನ್ನು ಸೇರಿರೈ ಮನುಜ ಮತಕೆ,**
**ಓ ಬನ್ನಿ ಸೋದರರೇ ವಿಶ್ವ ಪಥಕೆ’ತಿ**

ಎಂದು ಕುವೆಂಪು ಅವರು ತಮ್ಮ ಕವಿತೆಯಲ್ಲಿ ದಾಖಲಿಸುತ್ತಾರೆ. ಭಾರತದಂತಹ ಬಹು ಭಾಷಿಕ, ಬಹು ಧರ್ಮದ, ಬಹು ಜಾತಿಗಳಿರುವ ಬಹುತ್ವದ ಭಾರತದಲ್ಲಿ ಧರ್ಮ ಮತ್ತು ದೇವರುಗಳನ್ನು ಕೇಂದ್ರವಾಗಿಟ್ಟುಕೊಂಡು ನಡೆಸಿದ ಶೋಷಣೆ ಅಗಣಿತವಾದುದು. ಇಲ್ಲಿ ದೇವರು ಅಸ್ತ್ರವಾಗಿ ಬಳಕೆಯಾಗಿದ್ದಾನೆ. ಈ ಕಾರಣಕ್ಕಾಗಿಯೇ ಕುವೆಂಪು ಬಡತನ, ಮೌಢ್ಯ, ಜಾತಿ ಮತಗಳ ನಡುವಿನ ಅಸಮಾನತೆಯ ಕೇಂದ್ರವನ್ನು ಬಿಟ್ಟು ಹೊರಬಂದು ವೈಜ್ಞಾನಿಕ ಮನೋಭಾವ ಬೆಳೆಸಿಕೊಂಡು **‘ಮನುಜಮತ’**ಕ್ಕೆ ಸೇರಿ **‘ವಿಶ್ವಪಥ’**ದಲ್ಲಿ ಸಾಗಲು ಕರೆ ನೀಡುತ್ತಾರೆ. ಇಲ್ಲಿ **‘ಮನುಜಮತ’**ವೆಂದರೆ ಇದು ಈಗಿರುವ ಎಲ್ಲ ಮತಗಳಂತೆ ಮತ್ತೊಂದು ಮತದ ಸೃಷ್ಟಿ ಅಲ್ಲ. ಪ್ರಪಂಚದಲ್ಲಿರುವ ಎಲ್ಲ ಜನರಿಗೂ ಅವರವರದೇ ಆದ ಸ್ವಂತಿಕೆಯ, ಸ್ವಾವಲಂಬನೆಯ, ಮುಕ್ತ ಬದುಕನ್ನು ಪಡೆಯುವ ಮತವಾಗಬೇಕು ಎನ್ನುತ್ತಾರೆ. ನಮ್ಮ ದೇಶದಲ್ಲಿ ನೂರು ಕೋಟಿ ಜನಸಂಖ್ಯೆ ಇದ್ದರೆ ನೂರು ಕೋಟಿ ಮತಗಳಿರಬೇಕೆಂಬುದು ಕುವೆಂಪು ಅವರ ಆಲೋಚನೆ.

**‘ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು?,**
**ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?......**
**....ಹಿಂದಿನಾ ಋಷಿಗಳು ಮಾನವರೇ ನಮ್ಮಂತೆ,**
**ಅವರ ಶಾಸ್ತ್ರ ವು ಅವರ ಕಾಲಕ್ಕೆ ಮಾತ್ರ;**

**ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ,**
**ನಮ್ಮ ಹೃದಯವೇ ನಮಗೆ ಶ್ರೀಧರ್ಮ ಸೂತ್ರ!'**[ತು]

ಎನ್ನುವ ಈ ಕವಿತೆ ಪುರಾತನ ಕಾಲದಿಂದಲೂ ಶಾಸ್ತ್ರವನ್ನು ಮುಂದಿಟ್ಟುಕೊಂಡು ಜನರನ್ನು ಶೋಷಿಸಿದ ಪರಿಗೆ ಈ ಕವಿತೆ ಉತ್ತರದಾಯಿತ್ವವಾಗಿದೆ. ಸಂಪ್ರದಾಯಗಳು, ಹಬ್ಬಗಳು, ಅನೇಕ ಮಂಗಳ ಕಾರ್ಯಗಳ ಆಚರಣೆಯ ಸಂದರ್ಭದಲ್ಲಿ ಮೇಲ್ವರ್ಗದ ಸಮುದಾಯಗಳು ಮತ್ತು ಪುರೋಹಿತ ವರ್ಗವು ಶಾಸ್ತ್ರವನ್ನು ಬೆರಳು ಮಾಡಿ ತೋರಿಸುತ್ತ ಅದರಲ್ಲಿ ಹಾಗೆ ಹೇಳಿದೆ, ಹೀಗೆ ಹೇಳಿದೆ ಎಂದು ಹೇಳುತ್ತ ಜನರನ್ನು ಯಾಮಾರಿಸಿದ ಪ್ರಸಂಗಗಳು ಈಗಲೂ ನಡೆಯುತ್ತಿರುವುದು ಸೂರ್ಯ ಚಂದ್ರರಷ್ಟೇ ದಿಟವಾದುದು. ಸಮಾಜದಲ್ಲಿ ಬೇರೂರಿದ್ದ ಸಾಮಾನ್ಯ ನಡವಳಿಕೆಗಳಲ್ಲಿ ಒಬ್ಬ ದಾರಿ ಹೋಕನು ಬಾಯಾರಿಕೆಗೆ ನೀರು ಕೇಳಿದಾಗ ಅವನ ಜಾತಿಯನ್ನು ಕೇಳಿ ಅವನು ಕೆಳ ಜಾತಿಯವನಾಗಿದ್ದರೆ ಅವನಿಗೆ ನೀರನ್ನು ಎತ್ತರಿಸಿ ಬೊಗಸೆಯಲ್ಲಿ ನೀರನ್ನು ಸುರಿಯುವ ಪದ್ಧತಿ ಸಾಮಾನ್ಯವಾಗಿತ್ತು. ಹೀಗಾಗಿ ಕುವೆಂಪು ಅವರು **'ನೀರಡಿಸಿ ಬಂದ ಸೋದರನಿಗೆ ನೀರನ್ನು ಕೊಡಲು, ನೊಂದವನ ಕಂಬನಿ ಒರೆಸಲು, ದಲಿತ ಮಗು ನೀರಲ್ಲಿ ಮುಳುಗುತ್ತಿದ್ದರೆ ಆ ಮಗುವನ್ನು ಬದುಕಿಸಲು ಶಾಸ್ತ್ರಗಳು ಮಾರ್ಗದರ್ಶನ ಮಾಡಬೇಕೇನು**? ಎಂದು ಪ್ರಶ್ನಿಸುತ್ತಾರೆ. ಇಂತಹವುಗಳಿಗೆ ಶಾಸ್ತ್ರಗಳ ಮಾರ್ಗದರ್ಶನ ಬೇಕಾಗಿಲ್ಲ, ಬದಲಾಗಿ ಮಾನವೀಯತೆಯ ಅರಿವು ಇರಬೇಕೆನ್ನುತ್ತಾನೆ. ಒಂದು ವೇಳೆ ಇವುಗಳನ್ನು ಪಾಲಿಸಬೇಕೆಂದು ಮನು ಹೇಳಿದ್ದರೆ **'ಹೇಳಿದ್ದರವನನ್ನು ಶಾಸ್ತ್ರದೊಳು ಸುತ್ತಿ, ಸ್ವರ್ಗ ಹೋಗಲಿ, ಮತ್ತೆ ನರಕ ಬಂದರು ಬರಲಿ, ಎದೆಯ ಧೈರ್ಯವ ಮಾಡಿ ಬಿಸುಡಾಚೆಗೆತ್ತಿ!'**[ತು] ಎಂದು ಕಠೋರವಾಗಿ ನುಡಿಯುವ ಮೂಲಕ ಧೈರ್ಯವನ್ನು ಕೊಡುತ್ತಾನೆ. ಇದರ ಜೊತೆಗೆ **'ಸ್ವರ್ಗ ಹೋಗುವುದಿಲ್ಲ, ನರಕ ಬರುವುದಿಲ್ಲ; ಸ್ವರ್ಗ ನರಕಗಳೇನು ಶಾಸ್ತ್ರಸ್ಥವಲ್ಲ'**[ತುು] ಎಂದು ಸ್ವರ್ಗ ನರಕಗಳ ಪರಿಕಲ್ಪನೆಯನ್ನೇ ಸರಳೀಕರಿಸುತ್ತಾನೆ. ಇದನ್ನೇ ವಚನಕಾರರು **'ದೇವಲೋಕ, ಮರ್ತ್ಯ ಲೋಕವೆಂಬುದು ಬೇರಿಲ್ಲ ಕಾಣಿರೋ! ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ ಅನಾಚಾರವೇ ನರಕ ಕೂಡಲ ಸಂಗಮದೇವಾ ನೀವೇ ಪ್ರಮಾಣು'**[ಥ] ಎಂದು ಬಸವಣ್ಣನವರು ತಮ್ಮದೊಂದು ವಚನದಲ್ಲಿ ನುಡಿಯುತ್ತಾರೆ. ಕೊನೆಗೆ **'ಹಿಂದಿನಾ ಋಷಿಗಳು ಮಾನವರೆ ನಮ್ಮಂತೆ; ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ; ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ ನಮ್ಮ ಹೃದಯವೇ ನಮಗೆ ಶ್ರೀಧರ್ಮ ಸೂತ್ರ!'**[ಥ] ಎಂದು ಪುರಾತನ ಕಾಲದ ಋಷಿಮುನಿಗಳ ವಿಚಾರಗಳನ್ನು ಅತೀತವಾದ ಕಾಲ್ಪನಿಕ ಜಗತ್ತಿಗೆ ಕೊಂಡೊಯ್ಯದೆ ಅವುಗಳೆಲ್ಲ ನಮ್ಮಂತೆ ಇರುವ ಋಷಿಗಳು ಹೇಳಿದ ವಿಚಾರಗಳು. ಅವುಗಳನ್ನು ಮೌಢ್ಯತೆಯಿಂದ ಪಾಲಿಸದೆ ಕಾಲಕ್ಕೆ ತಕ್ಕ ಹಾಗೆ ಅವುಗಳನ್ನು ವೈಚಾರಿಕ ಮತ್ತು ವೈಜ್ಞಾನಿಕ ಮನೋಭಾವದಿಂದ ಪರಿಶೀಲಿಸುವ ನಮ್ಮ ಹೃದಯವೇ ನಮಗೆ ಶ್ರೀಧರ್ಮದ ಸೂತ್ರವಾಗಬೇಕು. ಆಗ ಮಾತ್ರ ನಮ್ಮ ಜೀವನ ಸರಿಯಾದ ಮಾರ್ಗದಲ್ಲಿ ಸಾಗುತ್ತದೆನ್ನುತ್ತಾರೆ ಕುವೆಂಪು.

ಭಾರತದಲ್ಲಿ ನಡೆದ ಮತಾಂತರದ ಸನ್ನಿವೇಶವನ್ನು ಕುವೆಂಪುರವರು 'ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ವಿಶ್ಲೇಷಿಸುವ ಪರಿ ವಿಭಿನ್ನವಾದುದು. ಮುಕುಂದಯ್ಯನು ವಿದೇಶಿ ಪಾದ್ರಿ ಎದುರೇ **'ಮತಾಂತರವನ್ನು ಸಾಮಾಜಿಕ ಜೀವನವನ್ನು ಬುಡಮೇಲು ಮಾಡುವ ಕಾರ್ಯವೆಂದು'** ಜರೆದಾಗ, ಆ ಪಾದ್ರಿಯು **'ನಮ್ಮ ಮತಾಂತರದ ಚಟುವಟಿಕೆಗಳನ್ನೇನೋ ನೀವು ಸಾಮಾಜಿಕ ಜೀವನವನ್ನು ಬುಡಮೇಲು ಮಾಡುವ ಕಾರ್ಯ ಎಂದು ವರ್ಣಿಸುತ್ತಿದ್ದೀರಿ.....ಆದರೆ ಗೌಡರೇ ನಾನು ಹೇಳುವುದನ್ನು ದಯವಿಟ್ಟು ಗಮನಿಸಿ ಕೇಳಿ. ನಿಮ್ಮ ಜಾತಿಯವರು ಎಲ್ಲಿಯವರೆಗೆ ಬ್ರಾಹ್ಮಣರ ಪಾದ ತೊಳೆದು, ಅದನ್ನು ತೀರ್ಥವೆಂದು ಕುಡಿಯುವದನ್ನೇ ತಮ್ಮ ಧರ್ಮ ಜೀವನದ ಸರ್ವಸ್ವ ಎಂದು ಭಾವಿಸುವರೋ, ನಿಮಗೆ ನಾಮಧಾರಿ ಗೌಡರಿಗೆ ಮತ್ತು ಇತರ ಬ್ರಾಹ್ಮಣೇತರ ವರ್ಗದವರಿಗೆ ಉದ್ಧಾರವಿಲ್ಲ, ಉಳಿಗತಿಯಿಲ್ಲ. ನಿಮ್ಮ ಮೂಢಾಚಾರಗಳು ಬ್ರಾಹ್ಮಣರ ಜೀವನೋಪಾಯಕ್ಕೆ ಸಂಪಾದನೆಗೆ, ಬಂಡವಾಳ ಸ್ವರೂಪವಾಗಿವೆ. ನಿಮ್ಮನ್ನು ಅವರು ನಾಯಿಗಳು ಕಂಡ ಹಾಗೆ ಕಾಣುತ್ತಾರೆ. ಮುಟ್ಟುವುದಿರಲಿ ಹತ್ತಿರ ಬಂದರೂ ಅವರಿಗೆ ಮೈಲಿಗೆ..... ಕ್ರೈಸ್ತ ಧರ್ಮದಲ್ಲಿ ಜಾತಿ ಭೇದವಿಲ್ಲ ಎಲ್ಲರೂ ದೇವರ ಇದಿರಿನಲ್ಲಿ ಸಮಾನರು.....'**[ಥು] ಎನ್ನುತ್ತಾನೆ. ಇದು ಭಾರತದಲ್ಲಿ ಮತಾಂತರಕ್ಕೆ ಇರುವ ಕಾರಣಗಳನ್ನು ದಾಖಲಿಸುತ್ತದೆ. ನಾವು ಬಹಳಷ್ಟು ಸಾರಿ ಮತಾಂತರಕ್ಕೆ ಕೆಟ್ಟ ಕಾರಣಗಳನ್ನು ಕ್ರೈಸ್ತ ಪಾದ್ರಿಗಳ ಮೇಲೆ ಹೊರಿಸಿ ಅವರನ್ನು ಅಪರಾಧಿಗಳನ್ನಾಗಿ ಮಾಡಿ ನಮ್ಮ ಧರ್ಮ ಮತ್ತು ದೇಶಪ್ರೇಮವನ್ನು ಮೆರೆಯುತ್ತೇವೆ. ಆದರೆ ಈ ಮತಾಂತರದ ಮೂಲ ಬೇರನ್ನು ಪತ್ತೆ ಮಾಡಿ ಪರಿಹಾರ ಕಂಡು ಹಿಡಿಯುವಲ್ಲಿ ಸೋಲುತ್ತೇವೆ.

ಉದಾಹರಣೆಗಾಗಿ ಒಂದು ನೈಜ ಘಟನೆಯನ್ನು ಇಲ್ಲಿ ಉಲ್ಲೇಖಿಸಲು ಬಯಸುವೆ. ಡಾ.ಪ್ರಭುಶಂಕರ ಅವರು ಬರೆದ ಮದರ್ ತೆರೆಸಾ ಅವರ ಜೀವನ ಚರಿತ್ರೆಯನ್ನು ಪಾಠ ಮಾಡುವಾಗ ತರಗತಿಯಲ್ಲಿ ಒಬ್ಬ ವಿದ್ಯಾರ್ಥಿ ಕೇಳಿದ ಪ್ರಶ್ನೆ. **'**ಸರ್ ಮದರ್ ತೆರೆಸಾ ಅವರು ನಮ್ಮ ದೇಶದಲ್ಲಿ ಕುಷ್ಠರೋಗಿಗಳ ಸೇವೆ, ಅನಾಥಾಶ್ರಮಗಳು ಮತ್ತು ಶಾಲೆಗಳನ್ನು ನಡೆಸಿದ್ದು ನಮ್ಮ ದೇಶದ ಜನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡುವುದಕ್ಕಾಗಿ ವಿನಃ ನಮ್ಮ ದೇಶದ ಜನರ ಸೇವೆ ಅಲ್ಲ**'** ಎಂದು ಉತ್ತರಿಸಿದ. ಆಗ ಅವನಿಗೆ ಗೋಚರಿಸಿದ್ದು ಮದರ್ ತೆರೆಸಾ ಅವರು ಕ್ರಿಶ್ಚಿಯನ್ನರಾಗಿದ್ದ ಕಾರಣದಿಂದ ಅವರ ಸೇವೆಯನ್ನು ಮಾನವೀಯ ನೆಲೆಯಿಂದ ಭಾವಿಸದೆ ಮತಾಂತರದ ದೃಷ್ಟಿಕೋನದಿಂದ ಭಾವಿಸಿದ್ದು ಪ್ರಧಾನವಾಗಿತ್ತು. ಅಂದು ನಮ್ಮ

ದೇಶದಲ್ಲಿದ್ದ ವಿವಿಧ ಮತ ಮಾನ್ಯಗಳ ಧರ್ಮ ಗುರುಗಳು ಮದರ್ ತೆರೆಸಾ ಅವರು ಮಾಡುತ್ತಿದ್ದಂತಹ ಜನಸೇವೆಯನ್ನೇ ಏಕೆ ಮಾಡಲಿಲ್ಲ? ಎನ್ನುವ ಪ್ರಶ್ನೆ ಅನೇಕರಿಗೆ ಕಾಡಿರುವದಿಲ್ಲ. ಇಂತಹ ಸನ್ನಿವೇಶದಲ್ಲಿ ನಾವು ನಮ್ಮಲ್ಲಿಯೇ ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗಿದೆ. ಭಾರತದಂತಹ ದೇಶದಲ್ಲಿ ಹಿಂದೂ ಧರ್ಮ ಶ್ರೇಷ್ಠವೆಂದು ಭಾವಿಸುವ ನಾವುಗಳು ನಮ್ಮ ದೇಶದ ಹಿಂದುಳಿದ ಮತ್ತು ದಲಿತ ಜನರನ್ನು ನಾವು ಪ್ರಾಣಿಗಳಿಗಿಂತಲೂ ಕೀಳಾಗಿ ಕಂಡ ಪರಿ ಎಂತಹದು. ಇದನ್ನೇ ಸಿದ್ಧಲಿಂಗಯ್ಯವನರು ಹೊಲೆ ಮಾದಿಗರ ಹಾಡು ಸಂಕಲನದ 'ಒಂದು ಪದ'ದಲ್ಲಿ **'....ದೇವ್ರು ಒಬ್ನೇ ಅಂತಾರೆ, ಓಣಿಗೊಂದು ಗುಡಿ ಕಟ್ಟವ್ರೆ, ಎಲ್ಲಾರೂ ದೇವ್ರ ಮಕ್ಳು ಅಂತಾರೆ, ಹೊಲೇರ್ನ ಕಂಡ್ರೆ ಹಾವ್ ಕಂಡಂಗಾಡ್ತಾರೆ. ಹೋಟ್ಲು, ಬಾವಿ, ಮನೆ ಯಾವುದ್ಕೂ ಸೇರ್ಸಲ್ವಲ್ರೋ, ನಮ್ ಹೇಲ್ ತಿನ್ನೋ ನಾಯ್ನ ಕ್ವಾಣೆವಳೀಕ್ ಬುಟ್ಕತ್ತಾರೆ, ನಾವ್ ಬೆಳೆದಿತ್ ತಿಂತಾರೆ ನಾವು ದುಡಿದಿತ್ ತಗತ್ತಾರೆ, ನಾವ್ ಮಾತ್ರ ಬ್ಯಾಡಾ.....'**[13] ಎನ್ನುವ ನೋವು ಸಿಡಿದಿದ್ದು ಹೀಗೆ. ಇಂತಹ ಸಂದರ್ಭಗಳು ನಿತ್ಯದ ಚಿತ್ರಣವಾಗಿದ್ದ ಕಾಲದಲ್ಲಿ ಶೋಷಣೆಗೊಳಗಾದವನ ಮನಸ್ಸಿಗಾಗಿರುವ ನೋವನ್ನು ಕುವೆಂಪುರವರ ಬರಹಗಳು ಸ್ಪಂದಿಸುತ್ತವೆ.

ಇಂದು ನಾವು ಶಿಕ್ಷಣ, ವಿಜ್ಞಾನ, ತಂತ್ರಜ್ಞಾನದಲ್ಲಿ ಅಗಾಧ ಪ್ರಮಾಣದಲ್ಲಿ ಬೆಳವಣಿಗೆಯನ್ನು ಹೊಂದಿದ್ದರೂ ನಮ್ಮ ಮನಸ್ಸುಗಳು ಇನ್ನೂ ಮನುವಾದಿ ಚಿಂತನೆಯಲ್ಲಿ ಮುಳುಗೇಳುತ್ತಿದೆ. ಇಪ್ಪತ್ತೊಂದನೇ ಶತಮಾನದಲ್ಲೂ ದೇವಸ್ಥಾನ, ಸಾರ್ವಜನಿಕ ಸ್ಥಳಗಳಲ್ಲಿ ಅಸ್ಪೃಶ್ಯತೆ ಆಚರಣೆ ನಿಂತಿಲ್ಲ. ಪೂಜಾರಿಯ ಬೆಳ್ಳಿ ಕೋಲನ್ನು ಮುಟ್ಟಿದ್ದಕ್ಕಾಗಿ ಎಂಟು ವರ್ಷದ ಬಾಲಕನ ಕುಟುಂಬಕ್ಕೆ ಅರವತ್ತು ಸಾವಿರ ದಂಡ ಹಾಕಿದ ಗ್ರಾಮದ ಮುಂಖಂಡರು, ದೇವಸ್ಥಾನ ಪ್ರವೇಶ ಮಾಡಿದ ಕಾರಣಕ್ಕಾಗಿ ವಯಸ್ಸಾದ ವೃದ್ಧನನ್ನು ಜೀವಂತ ಸುಟ್ಟಿರುವ ಘಟನೆಗಳು, ದಲಿತನೊಬ್ಬ ಕುದುರೆ ಸವಾರಿ ಮಾಡಿದ ಕಾರಣಕ್ಕೆ ಅವನನ್ನು ಥಳಿಸಿದ್ದು, ಹೆಣ್ಣು ಮಕ್ಕಳು ದೇವರನ್ನು ಮುಟ್ಟಿದರೆ ದೇವರು ಮತ್ತು ದೇವಾಲಯ ಅಪವಿತ್ರನಾಗುವನೆಂದು ಶುದ್ಧೀಕರಣ ಮಾಡುವುದು, ದಲಿತರು ತಿನ್ನುವ ಆಹಾರವನ್ನು ಕೀಳಾಗಿ ನೋಡುವುದು ಮುಂತಾದ ಅಮಾನವೀಯ ಕೃತ್ಯಗಳು ನಿರಂತರ ನಡೆಯುತ್ತಲೇ ಇವೆ. ಇಂತಹ ಅವಮಾನಗಳನ್ನು ಹಿಂದೂ ಧರ್ಮದ ಅಡಿಯಲ್ಲಿ ಅಂಬೇಡ್ಕರ್ ಕಂಡಿದ್ದರಿಂದಲೇ ಹಿಂದೂವಾಗಿ ಹುಟ್ಟಿದ್ದೇನೆ, ಹಿಂದೂವಾಗಿ ಸಾಯಲಾರೆ ಎಂದು ಭಾವಿಸಿ ತಮ್ಮ ಕೊನೆಗಾಲದಲ್ಲಿ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಇಂದಿಗೂ ನಮ್ಮ ದೇಶದಲ್ಲಿ ಮತಾಂತರವಾದ ಸಮುದಾಯಗಳನ್ನು ಮರಳಿ ಹಿಂದೂ ಧರ್ಮಕ್ಕೆ ಕರೆತರುವದಾದರೆ ಅವರನ್ನು ಯಾವ ಜಾತಿ ಅಥವಾ ಧರ್ಮದಲ್ಲಿ ಬದುಕಲು ಅವಕಾಶ ನೀಡಬಹುದು ಎನ್ನುವ ಪ್ರಶ್ನೆ? ಎದುರಾಗುತ್ತದೆ. ಮತ್ತೆ ಅವರು ತಮ್ಮ ಹಿಂದಿನ ಜಾತಿಯಲ್ಲಿ ಸೇರುವುದಾದರೆ ಮತ್ತೆ ಅವಮಾನಕ್ಕೊಳಗಾಗುವ ಜಾತಿಗೆ ಮರಳಿ ಸೇರಲಾರರು. ಇಂತಹ ವಿಷಮ ಪರಿಸ್ಥಿತಿಯನ್ನು ಬೃಹತ್ ಭಾರತದಲ್ಲಿ ನಿರ್ಮಿಸಿಕೊಂಡಿದ್ದೇವೆ. ಇದಕ್ಕೆ ಕುವೆಂಪುರವರ ವೈಚಾರಿಕ ವಿಚಾರಗಳೇ ಸರಿಯಾದ ನ್ಯಾಯ ನಿರ್ಣಯವನ್ನು ನೀಡಬಲ್ಲವು. ಅವರ ಪಂಚ ತತ್ವಗಳಾದ **ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ**ಯನ್ನು ನಾವು ಹೊಂದಬೇಕು. ಭವಿಷ್ಯದ ಭಾರತ ಸುಂದರವಾಗಬೇಕಾದರೆ ಕುವೆಂಪುರವರ ವಿಶ್ವಮಾನವ ಕಲ್ಪನೆಯನ್ನು ಸಾಕಾರಗೊಳಿಸಬೇಕು. ಆಗ ಭಾರತವೆಂಬುದು ವಿವಿಧ ಬಗೆಯ ಹೂಗಳು ಅರಳಿದ ಸುಂದರ ತೋಟವಾಗಬಲ್ಲದು. ಇದು ಕುವೆಂಪು ಅವರ ಆಶಯವೂ ಹೌದು, ನಮ್ಮೆಲ್ಲರ ಆಶಯವೂ ಆದಾಗ ಮಾತ್ರ ಬಹುತ್ವದ ಭಾರತ ಸುಂದರವಾಗಿ ರೂಪುಗೊಳ್ಳಲು ಸಾಧ್ಯ.

---

**ಕೊನೆ ಟಿಪ್ಪಣಿ:**

1. ಡಾ.ಕೊಳ್ಚಪ್ಪೆ ಗೋವಿಂದ ಭಟ್– ಉದಯವಾಣಿ:13–02–2021, ದಿನಪತ್ರಿಕೆ.
2. ಎಚ್‌ಟಿಟಿಪಿಎಸ್://ಇಎನ್.ವಿಕಿಪಿಡಿಯಾ.ಓಆರ್ಜಿ>ರ್‍ಯಾಷನ್ಯಾಲಿಟಿ.
3. ಡಾ.ಶ್ರೀಪತಿ ಹಳಗುಂದ – ಪ್ರಜಾವಾಣಿ: 08–12–2017ರ ದಿನಪತ್ರಿಕೆ.
4. ಡಾ.ಎಚ್.ನರಸಿಂಹಯ್ಯ–ತೆರೆದಮನ, ಅಭಿನವ ಪ್ರಕಾಶನ, ಬೆಂಗಳೂರು, 2015
5. ಕುವೆಂಪು – ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪುಟ–23, 24
6. ಕುವೆಂಪು–ಕೋಗಿಲೆ ಮತ್ತು ಸೋವಿಯಟ್ ರಷ್ಯಾ, 1944 ಪುಟ–21, 22
7. –ಅದೇ –
8. –ಅದೇ –
9. ಡಾ.ಎಂ.ಎಂ.ಕಲಬುರ್ಗಿ–ಬಸವ ಯುಗದ ಮಹಾಸಂಪುಟ, ವ॥239, ಪುಟ28.
10. ಕುವೆಂಪು–ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪುಟ–21, 22
11. ಕುವೆಂಪು – ಮಲೆಗಳಲ್ಲಿ ಮದುಮಗಳು, ಪುಟ–831
12. ಸಿದ್ಧಲಿಂಗಯ್ಯ–ನನ್ನ ಜನಗಳು ಮತ್ತು ಇತರ ಕವಿತೆಗಳು, ಪುಟ–5,

**ಆಕರ ಗ್ರಂಥಗಳು:**


[1]. ಡಾ.ಕೊಳ್ಳಪ್ಪೆ ಗೋವಿಂದ ಭಟ್– ಉದಯವಾಣಿ:13–02–2021, ದಿನಪತ್ರಿಕೆ.

2. ಎಚ್‌ಟಿಟಿಪಿಎಸ್://ಇಎನ್.ವಿಕಿಪಿಡಿಯಾ.ಓಆರ್ಜಿ>ರ್‍ಯಾಷನ್ಯಾಲಿಟಿ.

3. ಡಾ.ಶ್ರೀಪತಿ ಹಳಗುಂದ – ಪ್ರಜಾವಾಣಿ: 08–12–2017ರ ದಿನಪತ್ರಿಕೆ.

4. ಡಾ.ಎಚ್.ನರಸಿಂಹಯ್ಯ–ತೆರೆದಮನ, ಅಭಿನವ ಪ್ರಕಾಶನ, ಬೆಂಗಳೂರು, 2015

5. ಕುವೆಂಪು – ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪಬ್ಲಿಷಿಂಗ್ ಹೌಸ್, ಮೈಸೂರು, 1944 ಪುಟ–23, 24

[6]. ಡಾ.ಎಂ.ಎಂ.ಕಲಬುರ್ಗಿ–ಬಸವಯುಗದ ಮಹಾಸಂಪುಟ, ವ॥239, ಪುಟ28, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2016.

[7]. ಕುವೆಂಪು – ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ಪುಟ–831

[8]. ಸಿದ್ಧಲಿಂಗಯ್ಯ–ನನ್ನ ಜನಗಳು ಮತ್ತು ಇತರ ಕವಿತೆಗಳು, ಪುಟ–5, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,2010.

Volume : XI | Issue : I | January 2022 ISSN: 2347-7660 (Print) | ISSN : 2454-1818 (Online)

# ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಮಹಿಳೆಯರ ಪಾತ್ರ

ಸಂಶೋಧನಾ ವಿಧ್ಯಾರ್ಥಿ
ರೂಪ ಜಿ. ಎಂ
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ.
ದಾವಣಗೆರೆ– ೫೭೭೦೦೭

ಮಾರ್ಗದರ್ಶಕರು
ಡಾ. ಪಿ. ನಾಗಭೂಷಣಗೌಡ
ಸಹಾಯಕ ಪ್ರಾಧ್ಯಾಪಕರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ.
ದಾವಣಗೆರೆ– ೫೭೭೦೦೭

**ಸಾರಾಂಶ:–**

ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ತ್ಯಾಗ ಬಲಿದಾನಗಳ ರೋಚಕ ಹೃದಯ ವಿದ್ರಾವಕ ಪುಟಗಳಲ್ಲಿ ಕರ್ನಾಟಕದ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡು ಸಹನೆ ಮತ್ತು ಧೀಮಂತ ಶಕ್ತಿಯಿಂದ ಹೊರಾಡಿದರು. ಗಾಂಧಿ ಶಕೆ ಆರಂಭವಾದ ಮೇಲೆ ಪುರುಷರೊಂದಿಗೆ ಸಹಸ್ರಾರು ಮಂದಿ ಮಹಿಳೆಯರು ಸರಿಸಮನಾಗಿ ಭಾಗವಹಿಸಿ ಅನುಪಮ ತ್ಯಾಗ ಮತ್ತು ಕಷ್ಟ ಸಹಿಷ್ಣುತೆಯಿಂದ ಗಣ್ಯತೆಯನ್ನು ಪಡೆದಿರುವುದು ಮಹತ್ವದ ಸಂಗತಿ. ಪುರುಷರ ಪರಿಶ್ರಮ ಒಂದು ರೀತಿಯಲ್ಲಿ ಬ್ರಿಟೀಷ್ ಸರ್ಕಾರವನ್ನು ಧಿಕ್ಕರಿಸುತ್ತಾ ಹೋದರೆ, ಮಹಿಳೆಯರ ಪಾತ್ರ ಮತ್ತೊಂದು ರೀತಿಯಲ್ಲಿ ಬ್ರಿಟಿಷರನ್ನು ನಡುಗಿಸಿತು. ಮಹಿಳೆಯು ಮಾನವೀಯತೆಯ ಶಕ್ತಿಯಾಗಿ, ಸಮಾಜದ ಕನ್ನಡಿಯಾಗಿ, ಆಡಳಿತದ ಚತುರೆಯಾಗಿ ಅಗತ್ಯ ಬಂದಾಗ ದೇಶದ ರಕ್ಷಣೆಯಲ್ಲೂ ಹಿಂದೆ ಬಿದ್ದಿಲ್ಲ ಎಂದು ತೋರಿಸಿಕಟ್ಟವಳು. ಅಂದು ಇಂದು ಎಂದೆಂದಿಗೂ ತಾನು ಕೇವಲ ನಾಲ್ಕು ಗೋಡೆಯ ಮಧ್ಯೆ ಇದ್ದ ಕಾಲದಲ್ಲಿಯೂ ದೇಶಕ್ಕಾಗಿ ಪ್ರಾಣದ ಹಂಗು ತೊರೆದು ಹೋರಾಡಿದ ಮಹಿಳೆಯರು " ತೊಟ್ಟಿಲು ತೂಗುವ ಕೈ ದೇಶವನ್ನೂ ಆಳಬಲ್ಲದು" ಎಂದು ಸಾಭೀತು ಪಡಿಸಿ ಇತಿಹಾಸದಲ್ಲಿ ಅಮರರಾಗಿದ್ದಾರೆ. ಅಂಥ ಮಹಿಳೆಯರ ಪಾತ್ರವನ್ನು ಇತಿಹಾಸದ ಪುಟಗಳಲ್ಲಿ ಸುರ್ವಣ ಅಕ್ಷರದಲ್ಲಿ ಬರೆಯಬೇಕಾಗಿದೆ. ತಮ್ಮ ತಾಯ್ನಾಡಿನ ಸ್ವಾತಂತ್ರ್ಯ ಸಾಧಿಸಲು ತಮ್ಮ ನೆಲ ಸಂಸ್ಕೃತಿಯನ್ನು ಉಳಿಸಲು ತಮ್ಮ ಜೀವನವನ್ನು ಮತ್ತು ತಮ್ಮ ಗುರಿಗಳನ್ನು ತ್ಯಾಗ ಮಾಡಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ. ಹೀಗೆ ತ್ಯಾಗ ಬಲಿದಾನಗಳ ಮುಖಾಂತರ ಹೋರಾಡಿದ ಒಬ್ಬೊಬ್ಬ ಮಹಿಳೆಯದು ಒಂದೊಂದು ಕಥೆಯಾದರೆ ಉದ್ದೇಶ ಮಾತ್ರ ಒಂದೇ ಅದೇ ರಾಷ್ಟ್ರದ ರಕ್ಷಣೆ,ಬ್ರಿಟಷರ ದಾಸ್ಯದಿಂದ ಮುಕ್ತಿ.

ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡತಿಯರು ಯಾರಿಗೇನು ಕಡಿಮೆ ಇಲ್ಲ ಎಂದು ದಿಟ್ಟತನದಿಂದ ಹೋರಾಡಿ ಅಮರರಾಗಿರುವ ಮಹನೀಯ ಮಹಿಳೆಯರು ಸ್ತ್ರೀ ಸಂಕುಲಕ್ಕೆ ಮಾದರಿಯಾಗಿದ್ದಾರೆ. ಸ್ವಾತಂತ್ರ್ಯ ಸಾಧನೆಯಲ್ಲಿ ಪುರುಷರ ಸಮಾನ ಪಾತ್ರ ವಹಿಸಿ ಛಾಪು ಮೂಡಿಸಿದ ಮಹಿಳೆಯರಲ್ಲಿ ಕೆಲವರು ಬೆಳಕಿಗೆ ಬಂದರೆ ಮತ್ತೆ ಕೆಲವರು ಬೆಳಕಿಗೆ ಬರಲಿಲ್ಲ. ಅಂಥ ಮಹಿಳಯರ ಪಾತ್ರವು ಕರ್ನಾಟಕದಲ್ಲಿ ವಿಶಿಷ್ಟವಾಗಿದೆ. ಕೆಲವರು ಸ್ವಾತಂತ್ರ್ಯ ಹೋರಾಟದಲ್ಲಿ ಹಾಗೂ ಕರ್ನಾಟಕ ಏಕೀಕರಣದಲ್ಲಿಯೂ ಮುಂಚೂಣಿಯಲ್ಲಿದ್ದು ಸ್ವಾತಂತ್ರ್ಯಾ ನಂತರ ಫಲಾಪೇಕ್ಷೆ ಇಲ್ಲದೆ ತೆರೆಯ ಮರೆಗೆ ಸರಿದಿದ್ದೂ ಉಂಟು. ಅಂಥ ಮಹಿಳೆಯರಲ್ಲಿ ಶ್ರೀಮತಿ ಹಳ್ಳಿಕೇರಿ ಚನ್ನಮ್ಮ, ಶ್ರೀಮತಿ ಜಿ.ಸಿ ಭಾಗೀರಥಮ್ಮ, ಶ್ರೀಮತಿ ಯಶೋದರಮ್ಮ ದಾಸಪ್ಪ, ಶ್ರೀಮತಿ ಕಮಲಾದೇವಿ ಚಟ್ಟೋಪಧ್ಯಾಯ, ಶ್ರೀಮತಿ ಬಳ್ಳಾರಿ ಸಿದ್ದಮ್ಮ, ಶ್ರೀಮತಿ ಜಯದೇವಿ ತಾಯಿ ಲಿಗಾಡೆ, ಶ್ರೀಮತಿ ಉಮಾಬಾಯಿ ಕುಂದಾಪುರ, ಶ್ರೀಮತಿ ಕೃಷ್ಣಬಾಯಿ ಪಂಜೀಕರ್, ಶ್ರೀಮತಿ ಶಕುಂತಲಾ ಕುರ್ತಕೋಟಿ, ಶ್ರೀಮತಿ ಸುಬ್ಬಮ್ಮ ಜೋಯಿಸ್, ಶ್ರೀಮತಿ ಟಿ. ಸುನಂದಮ್ಮ, ಶ್ರೀಮತಿ ಟಿ. ಎಸ್. ನಾಗರತ್ನಮ್ಮ, ಶ್ರೀಮತಿ ಪದ್ಮಾವತಿ ಬದಾರಿ, ಶ್ರೀಮತಿ ಸೀತಾಬಾಯಿ ಮಡಗಾಂವಕರ್ ಮುಂತಾದ ಮಹಿಳೆಯರು ಸಕ್ರೀಯವಾಗಿ ಭಾಗವಹಿಸಿದರು.

ಪ್ರಸ್ತಾವನೆ:_

ಕರ್ನಾಟಕದಲ್ಲಿ ಪ್ರಾರಂಭವಾದ ಮಹಿಳೆಯರ ಸ್ವಾತಂತ್ರ್ಯ ಚಳುವಳಿಯು ಬೇರೆ ಯಾವ ಚಳುವಳಿಗಿಂತಲೂ ಏನೂ ಕಡಿಮೆ ಇರಲಿಲ್ಲ. ಕರ್ನಾಟಕ ಆಗ ಅರ್ಧಭಾಗ ಪ್ರೆಸಿಡೆನ್ಸಿಗಳು ಮತ್ತು ಉಳಿದರ್ಧಭಾಗ ದೇಶೀಯ ಸಂಸ್ಥಾನಗಳಿಂದ ಕೂಡಿತ್ತು. ಬ್ರಿಟಿಷ್ ಪ್ರಾಂತ್ಯದಲ್ಲಿ ಚಳುವಳಿಗೆ ಹೆಚ್ಚು ಉತ್ತೇಜನ ದೊರೆತಿದ್ದು ರಾಷ್ಟ್ರೀಯ ಪ್ರಜ್ಞೆ ಬೆಳವಣಿಗೆಯಾಗುವುದರ ಜೊತೆಗೆ ವಿಧವಾ ವಿವಾಹ, ಮಹಿಳಾ ವಿಮೋಚನಾ ಚಳುವಳಿಯಂತಹ ಸಮಾಜ ಸುಧಾರಣಾ ಕಾರ್ಯಗಳು ನಡೆದವು. ಆದರೆ ದೇಶೀಯ ಸಂಸ್ಥಾನಗಳಲ್ಲಿ ಈ ಕಾರ್ಯ ಹೆಚ್ಚು ಬೆಳಕಿಗೆ ಬರಲ್ಲಿಲ್ಲ. ಹಾಗಾಗಿ ಮಹಿಳೆಯರು ರಾಜಕೀಯ ಪ್ರವೇಶ ಮಾಡುವುದು ತಡವಾಯಿತು. ೧೯೨೪ ರಲ್ಲಿ ಬೆಳಗಾವಿ ಕಾಂಗ್ರೆಸ್ಸಿಗೆ ಪ್ರಪ್ರಥಮವಾಗಿ ೧೫೦ ಜನ ಸೇವಕಿಯರು ಭಾಗವಹಿಸಿದ್ದು ಕರ್ನಾಟಕದ ಸ್ತ್ರೀಯರಿಗೆ ಸಾರ್ವಜನಿಕ ರಂಗ ಪ್ರವೇಶಕ್ಕೆ ಅವಕಾಶವಾಯಿತು. ಪ್ರೆಸಿಡೆನ್ಸಿ ಪ್ರಾಂತ್ಯಗಳಲ್ಲಿ ಭಾಗವಹಿಸಿದ ಮಹಿಳೆಯರು ಮುಂದೆ ರಾಷ್ಟ್ರಮಟ್ಟದ ನಾಯಕೀಯರಾಗಿ ರೂಪುಗೊಂಡರು. ಮುಂಬಯಿ ಪ್ರಾಂತ್ಯದ ಮಹಿಳೆಯರು ಗೋಪಾಲ ಕೃಷ್ಣ ಗೋಖಲೆ ಮತ್ತು ಬಾಲ ಗಂಗಾಧರ ತಿಲಕರಂಥ ನಾಯಕರಿಂದ ಪ್ರಭಾವಿತರಾಗಿದ್ದರೆ, ಮದ್ರಾಸ್ ಪ್ರಾಂತ್ಯದ ಮಹಿಳೆಯರಿಗೆ ಶ್ರೀಮತಿ ಅನಿಬೆಸೆಂಟ್, ಮಾರ್ಗರೇಟ್ ಕಸಿನ್ಸ್ ಮತ್ತು ಸರೋಜಿನಿ ನಾಯ್ಡುರಂಥವರ ನಿಕಟ ಸಂಪರ್ಕ ಬೆಳೆಯಿತು. ಇವರು ಭಾರತೀಯ ಮಹಿಳೆಯರಲ್ಲಿ ವಿಚಾರವಾದ ಚಿಂತನೆಗಳನ್ನು ಮೂಡಿಸುವುದರ ಜೊತೆಯಲ್ಲಿ ಧಕ್ಷಿಣದ ಮಹಿಳೆಯರಲ್ಲಿ ಸಾಮಾಜಿಕ ಹಾಗೂ ರಾಜಕೀಯ ತತ್ವಗಳಿಗಾಗಿ ಹೋರಾಡುವ ಮನೋಭಾವ ಬೆಳೆಯುವುದಕ್ಕೂ ಕಾರಣರಾದರು.

ದೇಶಭಾಂಧವ್ಯದಲ್ಲಿ ಅಣ್ಣ ತಂಗಿಯರೂ ಸತಿ ಪತಿಯರೂ ತಂದೆ ತಾಯಿ ಮಕ್ಕಳು ತಮ್ಮ ತಮ್ಮ ಪಾಲಿನಲ್ಲಿ ಧರ್ಯೋತ್ಸಾಹಭರಿತರಾದರು. ಬೀದಿಬೀದಿಯಲ್ಲಿ ಮೆರವಣಿಗೆ ನಡೆದು ಗಗನದೆತ್ತರಕ್ಕೆ ವೀರಗೀತೆಯ, ದೇಶಭಕ್ತಿಯ ಘೋಷಣೆಯು ಕೇಳಿಸಿತು. ಪತಿಯು ಸ್ವಾತಂತ್ರ್ಯ ಸಂಗ್ರಾಮದದಲ್ಲಿ ಧುಮುಕಿ ಶ್ರಮಜೀವನ ಅನುಭವಿಸುತ್ತಿದ್ದಾಗ ಸತಿಯೂ ಸಹಕರಿಸಿ ಭೋಗ ಜೀವನಕ್ಕೆ ಬದಲಾಗಿ ತ್ಯಾಗ ಜೀವನವನ್ನು ಸ್ವೀಕರಿದಳು. ಮನೆಯ ಒಳಗೂ ಹೊರಗೂ ಇಂತಹ ವಾತಾವರಣ ಹಬ್ಬಿ ಹರಡಿದಾಗ ಮಹಿಳೆಯರು ಅಡುಗೆಮನೆ ಸೆರೆ ತೊರೆದು ಸೆರೆಮನೆಯ ಕಠಿಣ ಶಕ್ಷೆಯ ವಾಸವನ್ನು ಮನಪೂರ್ವಕವಾಗಿ ಅನುಭವಿಸಿದರು. ಇದು ಸಮಾಜದ ಬೇರೆ ವಲಯದ ಮಹಿಳೆಯರ ಮೇಲೆ ಪ್ರಭಾವ ಭೀರಿತು ಇಂಗ್ಲೀಷರಿಗೆ ಆಶ್ಚರ್ಯವಾಗುವ ರೀತಿಯಲ್ಲಿ ನಮ್ಮ ನಾಡಿನ ಮಹಿಳೆಯರು ವೀರವನಿತೆಯಾದರು.

ಕರ್ನಾಟಕದಲ್ಲಿ ಮಹಿಳೆಯರ ಕ್ರಾತಿಕಾರಿ ಚಟುವಟಿಕೆಗಳು:–

ಭಾರತದಲ್ಲಿ ಮಹಿಳೆಯರು ಗಾಂಧೀಜಿಯವರ ಇಚ್ಛೆಗನುಸಾರವಾಗಿ ದೀರ್ಘಕಾಲದವರೆಗೆ ರಚನಾತ್ಮಕ ಕಾರ್ಯಕ್ರಮಕ್ಕೆ ಚಟುವಟಿಕೆಗಳನ್ನು ಸೀಮಿತಗೊಳಿಸಿಕೊಂಡಿದ್ದರು. ಆದರೆ ಈ ಪರಿಮಿತಿಯಿಂದ ಹೊರಗೆ ಬರಬೇಕಾದ ಅಗತ್ಯತೆ ಕಂಡುಬಂದಿದ್ದು ಉಪ್ಪಿನ ಸತ್ಯಾಗ್ರಹದಲ್ಲಿ. ಈ ಸತ್ಯಾಗ್ರಹದಿಂದ ಮಹಿಳೆಯರು ನೇರವಾಗಿ ಭಾಗವಹಿಸಿದರು. ಗಾಂಧೀಜಿಯವರು ಈಸತ್ಯಾಗ್ರಹದಲ್ಲಿ ಮಹಿಳಯರು ಭಾಗವಹಿಸದಂತೆ ಬುದ್ಧಿಪೂರ್ವಕವಾಗಿ ಪ್ರಯತ್ನಿಸಿದರೂ ಬಿಡದ ಮಹಿಳೆಯರು ಗಾಧೀಜಿಯವರ ಈ ಮನೋಭಾವವನ್ನು ವಿರೋಧಿಸಿದರು. ಶ್ರೀಮತಿ ಕಮಲಾದೇವಿ ಚ್ಚಟೋಪಧ್ಯಾಯ ಇವರು ಗಾಂಧೀಯವರ ವಿರುದ್ಧ ಧನಿಯೆತ್ತಿ ನೇರವಾಗಿ ಮಹಿಳೆಯರು ಚಳುವಳಿಯಲ್ಲಿ ಭಾಗಿಯಾಗಲು ಕಾರಣರಾದರು.೧

ಶ್ರೀಮತಿ ಕಮಲಾದೇವಿ ಚಟ್ಟೋಪಧ್ಯಾಯ, ಶ್ರೀಮತಿ ಉಮಾಬಾಯಿ ಕುಂದಾಪುರ, ಶ್ರೀಮತಿ ಕೃಷ್ಣಬಾಯಿ ಪಂಜೀಕರ್, ಶ್ರೀಮತಿ ಬಳ್ಳಾರಿ ಸಿದ್ಧಮ್ಮ ರಂತಹ ಮಹಿಳೆಯರು ಪಟ್ಟ ಶ್ರಮ ಕರ್ನಾಟಕದ ಪ್ರತಿಯೊಂದು ವಲಯದಿಂದಲೂ ಅನೇಕ ಮಹಿಳಾ ನಾಯಕರಲ್ಲಿ ರಾಷ್ಟ್ರಪ್ರಜ್ಞೆ ಮೂಡುವಲ್ಲಿ ಯಶಸ್ವಿಯಾಯಿತು. ಕರ್ನಾಟಕದ ಮಹಿಳಾ ನಾಯಕೀಯರು ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದರು. ಪ್ರತಿಯೊಬ್ಬ ಮಹಿಳಾ ನಾಯಕಿಯರ ಹಿಂದೆ ಒಬ್ಬ ಪುರುಷರ ಪಾತ್ರ ಇದೆ ಎಂಬುದನ್ನು ನಾವು ಮನಗಾಣಬೇಕು. ರಾಷ್ಟ್ರ ನಾಯಕಿರಾಗಿ ಬೆಳೆದ ಈ ಮಹಿಳಾ ಹೋರಾಟಗಾರರು ಬಾಲ್ಯದಲ್ಲೇ ರಾಜಕೀಯ ತರಬೇತಿಯನ್ನು ಪಡೆದು ನಂತರದಲ್ಲಿ ಬದ್ಧ ರಾಷ್ಟ್ರ ಸೇವಕರಾದ ಪುರುಷರ ಕೈ ಹಿಡಿದಿದ್ದು ಅವರು ದೇಶ ಸೇವೆಯನ್ನು ಮುಂದುವರೆಸಲು ಅನುಕೂಲವಾಯಿತು. ಅವರಲ್ಲಿ ಅನೇಕರಿಗೆ ತನ್ನ ತಂದೆ ಮತ್ತು ಪತಿಯ ಸಹಕಾರ ಲಭಿಸಿದರೆ, ಉಮಾಬಾಯಿ ಕುಂದಾಪುರ ಇಂಥವರಿಗೆ ತಮ್ಮ ಮಾವನ ಪ್ರೋತ್ಸಾಹ ದೊರೆಯಿತು. ರಾಷ್ಟ್ರದ ಉದ್ದೇಶಗಳಿಗಾಗಿ ಪುರುಷರು ಇಂಥ ಮಹಿಳೆಯರ ಪ್ರತಿಭೆ ಹಾಗು ಸಾಮರ್ಥ್ಯವನ್ನು ಉಪಯೋಗಿಸಿಕೊಂಡರು.೩

೧೯೩೦ ರ ಕನೂನುಭಂಗ ಚಳುವಳಿಯಲ್ಲಿ ಮಹಿಳೆಯರು ಹೆಚ್ಚು ಕ್ರೀಯಾಶೀಲರಾಗಿದ್ದರು. ಅಸಹಕಾರ ಚಳುವಳಿಯು ಪ್ರೆಸಿಡೆನ್ಸಿಗಳಲ್ಲಿ ಉತ್ತಮವಾಗಿದ್ದರೆ, ಮೈಸೂರು ಸಂಸ್ಥಾನದಲ್ಲಿ ಅಷ್ಟಾಗಿ ಇರಲಿಲ್ಲ. ಮುಂದುವರೆದು ಕರ್ನಾಟಕದಲ್ಲಿ ಕರ ನಿರಾಕರಣೆ ಅಂದೋಲನದಲ್ಲಿ ಅಪಾರ ಸಂಖ್ಯೆಯ ಸ್ತ್ರೀಯರೂ ಸೇರಿ ಅದನ್ನು ಬೆಂಬಲಿಸಿ ಕಾರ್ಯ ಪ್ರವೃತ್ತರಾದರು. ಈ ದೊಡ್ಡ ಹೋರಾಟದಲ್ಲಿ ಉತ್ತರ ಕರ್ನಾಟಕ ರೈತರ ಪಾತ್ರ ಅತ್ಯಂತ ಪ್ರಮುಖವಾಗಿತ್ತು. ಬ್ರಿಟಷರ ಕಂದಾಯ ಪದ್ಧತಿ ಆ ವೇಳೆಗಾಗಲೆ ರೈತರನ್ನು ತುಂಬಾ ಬಡವರನ್ನಾಗಿ ಮಾಡಿತ್ತು. ಹಾಗಾಗಿ ಧಾರವಾಡ, ಹೀರೆಕೆರೂರು, ಕಾರವಾರ, ಶಿರಸಿ, ಸಿದ್ಧಾಪುರ, ಅಂಕೋಲ ಮುಂತಾದ ತಾಲೂಕುಗಳಲ್ಲಿ ಹೆಚ್ಚು ಸಕ್ರೀಯವಾಯಿತು. ಕಂದಾಯ ವಿರುದ್ಧ ಪ್ರತಿಭಟನೆ ಈ ಆಂದೋಲನದ ಮುಖ್ಯ ಉದ್ದೇಶವಾಗಿತ್ತು.೨ ಕಂದಾಯ ಕೊಡಲು ನಿರಾಕರಿಸಿದ್ದನ್ನು ಆಗಿನ ಸರ್ಕಾರ ಹೇಯ ಕೃತ್ಯವೆಂದು

ಪರಿಗಣಿಸಿ ಗ್ರಾಮಗಳ ಪುರುಷರನ್ನು ದಸ್ತಗಿರಿ ಮಾಡಿ, ಅವರ ಆಸ್ತಿ ಪಾಸ್ತಿಗಳನ್ನು ಮುಟ್ಟುಗೋಲು ಮಾಡಿಕೊಂಡು ಕುಟುಂಬಗಳನ್ನು ಬಲವಂತವಾಗಿ ಬೀದಿಪಾಲು ಮಾಡಿದಾಗ ಗ್ರಾಮಾಂತರ ಜನರು ತಮ್ಮ ಮನೆ ಮಠ ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡು ವಸತಿ ಹೀನರಾದರು. ಸಾಮಾನ್ಯರಾದ ತಿಳುವಳಿಕೆ ಇಲ್ಲದ ಗ್ರಾಮೀಣ ಪ್ರದೇಶದ ಸ್ತ್ರೀಯರು ಆ ಸಮಯದಲ್ಲಿ ಪೋಲಿಸ್ ರವರ ದೌರ್ಜನ್ಯ ತಾಳಲಾರದೆ ಕಾನೂನುಭಂಗ ಚಳುವಳಿಯನ್ನು ಪ್ರಾರಂಭಿಸಿದರು. ಸರ್ಕಾರ ಬಲವಂತವಾಗಿ ವಶಪಡಿಸಿಕೊಂಡಿದ್ದ ತಮ್ಮ ಮನೆಗಳಲ್ಲಿ ಪ್ರವೇಶ ಮಾಡಲು ಪ್ರಯತ್ನಿಸದರು. ಗರ್ಭಿಣಿಯರು ಹಾಗು ಬಾಣಂತಿಯಯರು ಸಹ ಪೋಲಿಸ್ ರವರ ಕ್ರೌರ್ಯಕ್ಕೆ ಹೆದರದೆ ಮುನ್ನುಗ್ಗಿದರು. ಸರ್ಕಾರ ವಶಪಡಿಸಿಕೊಂಡ ಆಸ್ತಿಗಳನ್ನೆಲ್ಲಾ ಹರಾಜು ಮಾಡುವ ಅನೇಕ ಸಂಧರ್ಭಗಳಲ್ಲಿ ಮಹಿಳೆಯರು ಅದನ್ನು ತಡೆದ ಉದಾಹರಣೆಗಳಿವೆ. ಹರಾಜಿನಲ್ಲಿ ಕೊಂಡುಕೊಂಡ ವಸ್ತುಗಳನ್ನು ಪಡೆಯಲು ಕೊಂಡುಕೊಂಡವರ ಮನೆ ಮುಂದೆ ಉಪವಾಸ ಕುಳಿತು ಪ್ರತಿಭಟಿಸಿದರು. ಶಿವಮೊಗ್ಗದ ಹೆಚ್ಚೆ ಎಂಬಲ್ಲಿ ಇಂಥ ಪ್ರತಿಭಟನೆ ನಡೆಯಿತು. ಗೌರಮ್ಮ, ಕಾವೇರಮ್ಮ, ಲಕ್ಷ್ಮಮ್ಮ ಮುಂತಾದವರ ಸಂಘಟನಾ ಸಾಮರ್ಥ್ಯ ಮೆಚ್ಚುವಂಥದ್ದು. ಅಕ್ಕಂಜಿಯಲ್ಲಿ ಈ ರೀತಿಯ ಸತ್ಯಾಗ್ರಹ ದುಗ್ಗಮ್ಮ, ಮತ್ತು ಭಗೀರಥಮ್ಮರವರನ್ನೊಳಗೊಂಡು ನಡೆಯಿತು. ತಿಗಣೆ ಸತ್ಯಾಗ್ರಹದಲ್ಲಿ ಸುಬ್ಬಮ್ಮ ಜೋಯಿಸ್ ರವರು ಸತ್ಯಾಗ್ರಹಿಗಳಿಗೆ ಇನ್ನೂ ದೃಢವಾಗಬೇಕೆಂದು ಮನವರಿಕೆ ಮಾಡಿಕೊಟ್ಟರು.೪

ಮೂಲತಃ ಹರಾಜಿನಲ್ಲಿ ಚರಾಸ್ತಿಗಳನ್ನು ಎಮ್ಮೆಗಳೂ ಸೇರಿದಂತೆ ಕೊಂಡುಕೊಂಡ ಕಾರಣ ಈ ಸತ್ಯಾಗ್ರಹಗಳು ನಡೆದವು. ಅವಮಾನ ನಿಂದನೆ ಹಾಗು ಅನೇಕ ಬಗೆಯ ಹಿಂಸೆಗೆ ಒಳಗಾದರೂ ಮಹಿಳೆಯರು ಅದನ್ನೆಲ್ಲ ಲೆಕ್ಕಿಸದೆ ಮುಂದುವರೆದರು. ಇದರ ಪರಿಣಾಮವಾಗಿ ಅನೇಕ ಮಹಿಳೆಯರು ಏಟು ತಿಂದರು, ಗಂಭೀರವಾಗಿ ಗಾಯಗೊಂಡರೂ ಸಹ ತಮ್ಮ ಚಟುವಟಿಕೆಗಳನ್ನು ನಿಲ್ಲಿಸಲು ಒಪ್ಪಲಿಲ್ಲ. ಸೆರಮೆನಯಲ್ಲಿದ್ದ ಮಹಿಳೆಯರೂ ಸಹ ಇದೇ ರೀತಿ ಚಿತ್ರ ಹಿಂಸೆಗೆ ಒಳಗಾದರು. ಪತ್ರಿಕೆಗಳು ಸೆರೆಮನೆಯಲ್ಲಿದ್ದ ರಾಜಕೀಯ ಖೈದಿಗಳ ಹಿಂಸೆಯ ವಿರುದ್ಧ ಧನಿಯೆತ್ತಿದವು.೫

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೩೧ ರಲ್ಲಿ ಕಾನೂನು ಬಾಹಿರ ಉಪ್ಪಿನ ತಯಾರಿಕೆಯನ್ನು ನಿಷೇದಿಸಲಾಯಿತು, ಮಧ್ಯದಂಗಡಿಗಳ ಮುಂದೆ ಪಿಕಟಿಂಗ್ ಮಾಡುವುದನ್ನು ನಿಷೇದಧಿಸಲಾಯಿತು.೬ ಪಿಕೆಟಿಂಗ್ ನಲ್ಲಿ ಭಾಗವಹಿಸಿದ ಮಹಿಳೆಯರು ಅವರ ಸಂಬಂಧಿಗಳೂ ಭಾಗವಹಿಸದಂತೆ ಎಚ್ಚರವಹಿಸಲಾಯಿತು. ಕೆಲವು ಪುರುಷರು ನಿಷ್ಕ್ರೀಯರಾದರು. ಇದನ್ನು ಗಮನಿಸಿದ ಮಹಿಳೆಯರು ಅಂಥ ಪುರುಷರಿಗೆ ಬಳೆಗಳನ್ನು ನೀಡಲು ಮುಂದಾದರು. ಉಮಾಬಾಯಿ ಕುಂದಾಪುರ ಇವರು ಉಪ್ಪಿನ ಸತ್ಯಾಗ್ರಹದಲ್ಲಿ ಬೆಳಕಿಗೆ ಬಂದರು. ಇವರು ರಾಜ್ಯಾದಂತ ಪ್ರವಾಸ ಮಾಡಿ ಮಹಿಳಯರು ಸಾಮಾಜಿಕವಾಗಿ ಸೇವೆ ಸಲ್ಲಿಸುವ ಅಗತ್ಯತೆಯ ಬಗ್ಗೆ ಅದರಲ್ಲೂ ವಿಶೇಷವಾಗಿ ಬಾಲಕಿಯರ ಶಿಕ್ಷಣದ ಬಗ್ಗೆ ಒತ್ತಿ ಹೇಳಿದರು.

ಕರ್ನಾಟಕದ ಚಳುವಳಿಗಳಲ್ಲಿ ಮೈಸೂರು ಮತ್ತು ಬೆಂಗಳೂರಿನ ಮಹಿಳೆಯರು ಹೆಚ್ಚು ಮುಂಚೂಣಿಯಲ್ಲಿದ್ದರು. ಕಮಲಾದೇವಿ ಚಟ್ಟೋಪಧ್ಯಾಯರಿಂದಲೇ ಸಮಾಜವಾದಿ ಚಿಂತನೆಗಳು ಬೀಜಾಂಕುರವಾದವೆಂದರೆ ತಪ್ಪಾಗಲಾರದು.೫ ರಾಜ್ಯದ ವಿವಿಧ ಬಾಗಗಳನ್ನು ಇವರು ಸುತ್ತಾಡಿ ಸಭೆಗಳಲ್ಲಿ ಸ್ಪೂರ್ತಿ ತುಂಬಿ ಮಾಡಿದ ಭಾಷಣದ ಫಲವಾಗಿ ಅನೇಕ ಮಹಿಳೆಯರು ಸ್ಪೂರ್ತಿ ಪಡೆದರು. ಬೆಂಗಳೂರು, ಮೈಸೂರು, ವಿರಾಜಪೇಟೆ ಮುಂತಾದ ಕಡೆಗಳಲ್ಲಿ ಇವರ ಭಾಷಣವನ್ನು ತಡೆಯುವಂತೆ ನಿಷೇದಾಜ್ಞೆ ವಿಧಿಸಿದರೂ ಅಂಜದೆ ಅನೇಕರೊಡನೆ ಆ ಕಾಲದಲ್ಲಿ ಪತ್ರ ವ್ಯವಹಾರದಿಂದ ಸ್ಪಷ್ಟವಾಗುವಂತೆ ಕಮಲಾದೇವಿ ಚಟ್ಟೋಪಧ್ಯಾಯರು ತಮ್ಮ ಅನುಯಾಯಿಗಳಿಗೆ ದಾರಿ ದೀವಿಗೆಯಾದರು.

೧೯೩೮ನೇ ಏಪ್ರಿಲ್ ೧೧ ರಂದು ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದ ಸಂಧರ್ಭದಲ್ಲಿ ಮೈಸೂರಿನ ಮಹಿಳೆಯರು ಮೊದಲ ಬಾರಿಗೆ ತಮ್ಮ ಧೈರ್ಯ ಮೆರೆದರು. ಸರ್ಕಾರದ ನಿಷೇಧಾಜ್ಞೆಯನ್ನು ಮೀರಿ ಧ್ವಜಾರೋಹಣವನ್ನು ಮಾಡಿದರು. ಆಗ ಅಧ್ಯಕ್ಷರಾದ ಹೆಚ್. ಸಿ. ದಾಸಪ್ಪರವರನ್ನೂ, ಧ್ವಜಾರೋಹಣ ಮಾಡಿದ ಸಿದ್ಧಲಿಂಗಯ್ಯನವರನ್ನೂ, ಭಾಷಣ ಮಾಡಿದ ಸುಬ್ಬಮ್ಮ ಜೋಯಿಸ್ ರವರನ್ನೂ, ಕಾರ್ಯಕ್ರಮದ ಮುಂಚೂಣಿಯಲ್ಲಿದ್ದ ಬಳ್ಳಾರಿ ಸಿದ್ಧಮ್ಮರವರನ್ನೂ, ಯಶೋದರಮ್ಮ ದಾಸಪ್ಪ ರವರನ್ನೂ, ಕಮಲಮ್ಮ, ಸಾವಿತ್ರಮ್ಮ, ವೆಂಕಮ್ಮ ಮುಂತಾದ ಮಹಿಳಾ ನಾಯಕಿಯರನ್ನು ಪುರಪಷರೊಂದಿಗೆ ದಸ್ತಗಿರಿ ಮಾಡಲಾಯಿತು. "ರಾಷ್ಟ್ರ ಧ್ವಜವನ್ನು ರಕ್ಷಿಸುವಲ್ಲಿ ವೀರ ಸ್ವರ್ಗವನ್ನು ಸೇರಿ" ಎಂದು ಬಳ್ಳಾರಿ ಸಿದ್ಧಮ್ಮ ಧ್ವಜಾರೋಹಣದ ಹಿಂದಿನ ದಿನ ಯುವಕರಿಗೆ ಕರೆ ನೀಡಿದ್ದರು. ಧ್ವಜ ರಕ್ಷಣೆಗಾಗಿ ಬಂದಿದ್ದ ಸ್ವಯಂ ಸೇವಾ ತಂಡದ ನಾಯಕಿಯಾಗಿ ಟಿ, ಸುನಂದಮ್ಮ ಇದ್ದರು. ಈ ಸಮಾವೇಶ ತೀವ್ರ ಚಟುವಟಿಕೆಗಳಿಗೆ ನಾಂದಿಯಾಯಿತು.೭

ವಿಧುರಾಶ್ವತ್ಥ ದುರಂತದಲ್ಲಿ ಅಮಾಯಕರು ಬಲಿಪಶುವಾದರು. ಇದು ಮೈಸೂರು ಜನರು ಹೋರಾಟ ಮುಂದುವರೆಸಲು ಕಾರಣವಾಯಿತು. ಗೌರಮ್ಮ ಎಂಬ ಗರ್ಭಿಣಿ ಸ್ತ್ರೀಯನ್ನು ಕೊಂದ ಘಟನೆ ಹೃದಯ ವಿದ್ರಾವಕವಾಗಿತ್ತು. ಈ ವೇಳೆಗಾಗಲೆ ಸತ್ಯಾಗ್ರಹ ನಡೆಸುವುದು ಹಚ್ಚು ರೂಢಿಗೆ ಬಂದು ಮಹಿಳೆಯರು ಪ್ರಧಾನ ಪಾತ್ರ ವಹಿಸತೊಡಗಿದರು.

ಯಶೋದರಮ್ಮ ದಾಸಪ್ಪ ಸಂಘಟನೆಯಲ್ಲಿ ಮೈಸೂರಿನ ದೊಡ್ಡಪೇಟೆಯಲ್ಲಿನ "ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ" ೧೯೩೯ರ ಫೆಬ್ರವರಿ ೧೫ ರಂದು ನಡೆಯಿತು. ಪೋಲಿಸ್ ಠಾಣೆಯೊಂದಕ್ಕೆ ವಿದೇಶಿ ಅಧಿಕಾರಿ ಐ. ಜಿ.ಪಿ. ಹ್ಯಾಮಿಲ್ಟನ್ ಹೆಸರಿಟ್ಟ ಕಾರಣ ಕೆರಳಿದ ದೇಶೀಯರು ಸತ್ಯಾಗ್ರಹ ಕೈಗೊಂಡರು ಇದರಲ್ಲಿ ಟಿ. ಸುನಂದಮ್ಮ ಪ್ರಮುಖ ಪಾತ್ರ ವಹಿಸಿದರು.೮

೧೯೩೯ ರ ಏಪ್ರಿಲ್ ನಲ್ಲಿ ಮೈಸೂರು ಕಾಂಗ್ರಸ್ಸಿನ ಎರಡನೆ ಸಮಾವೇಶ ವಿಧುರಾಶ್ವತ್ಥದಲ್ಲಿ ಪ್ರಾರಂಭವಾಯಿತು. ಅಲ್ಲಿ ನಡೆಯಲಿದ್ದ ಅಖಿಲ ಕರ್ನಾಟಕ ಸಮಾಜವಾದಿ ಸಮಾವೇಶದಲ್ಲಿ ಭಾಗವಹಿಸುವ ಸಲುವಾಗಿ ಕಮಲಾದೇವಿ ಚಟ್ಟೋಪಧ್ಯಾಯರವರು ವಿಧುರ ನಗರದಲ್ಲಿದ್ದಾಗ ಸಮಾವೇಶದಲ್ಲಿ ಬಾಗವಹಿಸದಂತೆ ಭಾಷಣ ಮಾಡದಂತೆ ಡೆಪ್ಯುಟಿ ಕಮಿಷನರ್ ಆದೇಶ ನೀಡಿದರೂ ಸಹ ಆ ನಿರ್ಭಂಧವನ್ನು ಧಿಕ್ಕರಿಸಿ ರೋಷಭರಿತವಾಗಿ ತಮ್ಮ ಭಾಷಣದಲ್ಲಿ "ಧ್ವಜವನ್ನು ಗೌರವಿಸುವುದೆಂದರೆ ರಾಷ್ಟವನ್ನು ಗೌರವಿಸುವುದು ಮತ್ತು ರಾಷ್ಟವನ್ನು ಗೌರವಿಸುವುದೆಂದರೆ ಅದರ ರಕ್ಷಣೆಗಾಗಿ ಹೋರಾಡುವುದು ಅನಿವಾರ್ಯ" ಎಂದು ಗುಡುಗಿದರ್ರು ಮತ್ತು ಅದೇ ದಿನ ಮೈಸೂರು ಕಾಂಗ್ರೆಸ್ ಸಮಾಜವಾದಿ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿ ಅದರ ಗುರಿ ಮತ್ತು ಉದ್ದೇಶಗಳನ್ನು ವಿವರಿಸಿದರು. ಯಶೋದರಮ್ಮ ದಾಸಪ್ಪ ಹಾಗು ಅನ್ನಪೂರ್ಣ ತಿಮ್ಮರೆಡ್ಡಿಯವರು ವಿಧುರ ನಗರದಲ್ಲಿ ಮಹಿಳಾ ಸಮಾವೇಶದಲ್ಲಿ ಸ್ವಾತಂತ್ರ್ಯ ಹೋರಾಟದ ಅವಶ್ಯಕತೆಯ ಬಗ್ಗೆ ಹಾಗು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಅಗತ್ಯತೆಯನ್ನು ವಿವರಿಸಿದರು.

ಅರಣ್ಯ ಸತ್ಯಾಗ್ರಹವನ್ನು ಗಮನಿಸಿದಾಗ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುವ ಪ್ರಕ್ರೀಯೆಯನ್ನು ಮುಂದುವರೆಸಿದರು, ಚಿತ್ರದುರ್ಗದ ಈಚಲ ಮರ ಕಡಿಯುವ ಸತ್ಯಾಗ್ರಹದಲ್ಲಿ, ೧೯೩೯ ರ ತುರುವನೂರು ಸತ್ಯಾಗ್ರಹದಲ್ಲಿ ಬಳ್ಳಾರಿ ಸಿದ್ಧಮ್ಮ ಹಾಗು ನಾಗರತ್ನಮ್ಮ ಹಿರೇಮಠ್ ಇವರು ಮಹಿಳೆಯರನ್ನು ಸಂಘಟನೆಗೆ ಹೆಚ್ಚು ಪ್ರೋತ್ಸಾಹಿಸಿದರು. ಈ ಸತ್ಯಾಗ್ರಹದಲ್ಲಿ ಮಹಿಳೆಯರ ಪಾತ್ರ ಪುರುಷರ ಪಾತ್ರದಷ್ಟೇ ಪ್ರಧಾನವಾಗಿದ್ದು ಹೆಚ್ಚಿನ ಗಮನಾರ್ಹ. ಸುಮಾರು ೫೦೦೦ ಈಚಲ ಮರಗಳನ್ನು ಕಡಿಯುವಲ್ಲಿ ಸತ್ಯಾಗ್ರಹಿಗಳು ಯಶಸ್ವಿಯಾದರು. ಹಾಗೆ ಅವರ ದಸ್ತಗಿರಿಯೂ ಪ್ರಾರಂಭವಾಯಿತು. ದಸ್ತಗಿರಿಯಾದವರಲ್ಲಿ ಬಳ್ಳಾರಿ ಸಿದ್ಧಮ್ಮ ಪ್ರಮುಖರು. ನಂತರ ಆ ಚಳುವಳಿ ದಾವಣಗೆರೆ, ತುಮಕೂರು ಹಾಗು ಸಿರಾ ತಾಲೂಕುಗಳಲ್ಲಿ ಹರಡಿತು.

ಸ್ವಾತಂತ್ರ್ಯ ಚಳುವಳಿಯ ಕಡೇ ಘಟ್ಟವನ್ನು ಸೂಚಿಸುವ "ಕ್ವಿಟ್ ಇಂಡಿಯಾ ಚಳುವಳಿ"ಯಲ್ಲಿಯೂ ಮಹಿಳೆಯರು ಪುರುಷರಷ್ಟೇ ಪ್ರದಾನ ಪಾತ್ರ ನಿರ್ವಹಿಸಿದರು. "ಮಾಡು ಇಲ್ಲವೆ ಮಡಿ" ಎಂಬ ಘೋಷಣೆಯಿಂದ ಸ್ಫೂರ್ತಿಗೊಂಡು ಮಹಿಳೆಯರು ಸ್ವತಃ ತಾವೇ ಚಳುವಳಿಯಲ್ಲಿ ಪಾಲ್ಗೊಂಡರು. ವಿದ್ಯಾರ್ಥಿನಿಯರೂ ಸಹ ಆಸಕ್ತಿಯಿಂದ ಈ ಚಳುವಳಿಯಲ್ಲಿ ಪಾಲ್ಗೊಂಡರು. ತರಗತಿಗಳನ್ನು ಬಹಿಷ್ಕರಿಸಿ ಲಾಟಿ ಪ್ರಹಾರ ಹಾಗು ದಸ್ತಗಿರಿಗೆ ಹೆದರದೇ ಮುನ್ನುಗ್ಗಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಕೃಷ್ಣಬಾಯಿ ಪಂಜೀಕರ್ ರವರು ಒಂದು ವರ್ಷ ಸೆರೆವಾಸಕ್ಕೆ ಗುರಿಯಾದರು. ತಮ್ಮ ವಿದೇಶಿ ಯಾತ್ರಯಿಂದ ಮರಳಿದ ಕಮಲಾದೇವಿ ಚಟ್ಟೋಪಧ್ಯಾಯರೂ ಸಹ ತುಂಬಾ ಶ್ಲಾಘನೀಯ ಕಾರ್ಯದಲ್ಲಿ ತೊಡಗಿದರು.

ಈ ಹೋರಾಟದಲ್ಲಿ ಮಹಿಳೆಯರು ಅಗಾಧವಾದ ರೀತಿಯ ಕ್ರೌರ್ಯ ಹಾಗು ದಮನಕ್ಕೆ ಬಲಿಯಾದರು. ಬೆಂಗಳೂರು ಮತ್ತು ಮೈಸೂರು ನಗರಗಳು ಈ ಹೋರಾಟದಲ್ಲಿ ಚಟುವಟಿಕೆಯ ಪ್ರಧಾನ ಕೇಂದ್ರಗಳಾಗಿದ್ದವು. ಬೆಂಗಳೂರಿನಲ್ಲಿ ಪೇಟೆ ಹಾಗು ದಂಡು ಪ್ರದೇಶ ಎಂಬ ಎರಡು ಗಲಭೆಗಳು ನಡೆದವು. ಬೆಂಗಳೂರು ನಗರ ವಿದ್ಯಾರ್ಥಿನಿಯರ ಚಳವಳಿಯ ಕೇಂದ್ರವಾಗಿತ್ತು.

ಇತರ ಜಿಲ್ಲೆಗಳಿಗೂ ಗಲಭೆ ಹರಡುತ್ತಾ ಹೋಯಿತು. ಇದನ್ನು ತಡೆಯಲು ಆಳುವ ಸರ್ಕಾರಕ್ಕೆ ಕಷ್ಟವಾಯಿತು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ದಾವಣಗೆರೆ, ಶ್ರವಣಬೆಳಗೊಳ ಹಾಗು ಈಸೂರು ಘಟನೆಗಳು ಗಮನಾರ್ಹವಾದವು, ಎಲ್ಲಕ್ಕಿಂತ ಶಿವಮೊಗ್ಗ ಜಿಲ್ಲೆಯ ಈಸೂರುನಲ್ಲಿ ಶಾಂತವಾಗಿ ಪ್ರಾರಂಭವಾಗಿ ಕೊನೆಗೆ ಹಿಂಸಾರೂಪ ತಾಳಿತು. ಕೊನೆಕೊನೆಗೆ ಗಸ್ತು ತಿರುಗುವ ತಂಡದವರು ಜನರಿಗೆ ಚಿತ್ರಹಿಂಸೆ ನೀಡಿದರು. ಮನೆಗಳನ್ನು ಲೂಟಿ ಮಾಡಿ ಹೆಂಗಸರು ಮತ್ತು ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೆ ಅತ್ಯಾಚಾರವೆಸಗಿದರು. ಈ ಕಾರ್ಯದಿಂದ ಅನೇಕರ ದಸ್ತಗಿರಿಯಾಯಿತು. ಜೀವಾವಧಿ ಶಿಕ್ಷೆ ವಿಧಿಸಿದ ಸಂಧರ್ಭದಲ್ಲಿ ಹಾಲಮ್ಮ ಮತ್ತು ಪಾರ್ವತಮ್ಮ ೧೪ ವರ್ಷದವರು ಸರ್ಕಾರದ ಕ್ರೌರ್ಯಕ್ಕೆ ಬಲಿಯಾದರು೧೦

ಕಾರ್ಮಿಕ ಚಳುವಳಿಯಲ್ಲಿಯೂ ಮಹಿಳೆಯರು ಪುರುಷರ ಸರಿಸಾಟಿಯಾಗಿ ಹೋರಾಡಿದರು. ದಿನಾಂಕ ೬/೯/೧೯೪೨ ರಂದು ಬೆಂಗಳೂರಿನಲ್ಲಿ ಕಾರ್ಮಿಕರು ಸಂಘಟಿಸಿದ ಮೆರವಣಿಗೆಯಲ್ಲಿ "ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್" ಎಂಬ ಪ್ರತಿಮೆಯನ್ನಿಟ್ಟು ಶವ ಪೆಟ್ಟಿಗೆಯನ್ನು ಹೊತ್ತವರಲ್ಲಿ ಭಾಗೀರಥಮ್ಮ ಚಂಗಲಾರಾಧ್ಯರು ಒಬ್ಬರಾಗಿದ್ದರು. ಅವರನ್ನು ದಸ್ತಗಿರಿ ಮಾಡಿ ಶಿಕ್ಷೆಗೆ ಗುರಿಪಡಿಸಲಾಯಿತು. ಕಾರ್ಮಿಕರ ಮುಷ್ಕರಗಳಲ್ಲಿ ಬಾಗವಹಿಸಿದ್ದ ಬಾಲಕಿಯರು ಪೋಲಿಸರ ದಮನದಕ್ಕೆ ಹೆದರದವರಾಗಿದ್ದರು.

ಕ್ವಿಟ್ ಇಂಡಿಯಾ ಸಂಧರ್ಭದಲ್ಲಿ ಈಸೂರಿನ ದುರಂತ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಅತ್ಯಂತ ಪ್ರಮುಖ ಘಟನೆಯಾಗಿದ್ದು ಈ ಚಳುವಳಿಯಲ್ಲಿಯೂ ಮಹಿಳೆಯರು ಪುರುಷರಿಗೆ ಸರಿಸಮನಾಗಿ ಹೋರಾಡಿದ್ದು ಗಣನೀಯವಾಗಿದೆ. ಪೋಲಿಸರು ಮತ್ತು ಮಿಲಿಟರಿಯವರ ಕ್ರೌರ್ಯಕ್ಕೆ ಬಲಿಯಾದವರು ಮಹಿಳೆಯರು. ಶಾಂತಿ ಮತ್ತು ಅಹಿಂಸಾತ್ಮಕ ವಿಧಾನವನ್ನು ಮಹಿಳೆಯರು ಹೆಂಡ ಮತ್ತು ವಿದೇಶಿ ವಸ್ತು ಮರಾಟ ಮಾಡುವ ಅಂಗಡಿಗಳ ಪಿಕೆಟಿಂಗ್ ಸಂದರ್ಭದಲ್ಲಿ ಅನುಸರಿಸಿದ ಕಾರಣ ಗ್ರಾಹಕರು ಹಾಗು ಅಧಿಕಾರಿಗಳಿಗೆ ಏಕಕಾಲದಲ್ಲಿ ನುಂಗಲಾರದ ತುತ್ತಾದರು. ಭಾವನಾತ್ಮಕವಾಗಿ ಅವರು

ತೊಡಗಿದ್ದರಿಂದ ಹೆಚ್ಚು ಜನರನ್ನು ಆಕರ್ಷಿಸಲು ಸಾಧ್ಯವಾಯಿತು. ಈ ಚಳುವಳಿಯನ್ನು ಒಂದು ಜನಾಂದೋಲನವನ್ನಾಗಿ ಮಾರ್ಪಡಿಸಿದ ಕೀರ್ತಿಯೂ ಮಹಿಳೆಯರಿಗೆ ಸಲ್ಲುತ್ತದೆ೧೧

ಉಪಸಂಹಾರ:–

ರಾಷ್ಟೀಯ ಹೋರಾಟದ ಎಲ್ಲ ಹಂತಗಳೂ ಹಾಗು ಅಂಗಗಳನ್ನು ಅಧ್ಯಯನ ಮಾಡುವಾಗ ಮಹಳೆಯರು ಹೊಂದಿದ್ದ ಧೈರ್ಯ ಮತ್ತು ಸಾಮರ್ಥ್ಯ ಶ್ಲಾಘನೀಯವಾದುದು. ಕರುನಾಡ ಮಹಿಳೆಯರು ಕಾಲ್ನಡಿಗೆಯಲ್ಲೇ ಊರೂರು ಸುತ್ತಿ ಹೋರಾಟ ನಿರತರಾಗಿ ಸೀಮಿತ ವಲಯಗಳಿಂದ ವಿಶಾಲ ಪ್ರಪಂಚಕ್ಕೆ ಹೊರಬರುವ ಪ್ರೇರಣೆ ದೊರೆತಾಗ ತ್ಯಾಗ ಮತ್ತು ಬಲಿದಾನಗಳ ಮುಖಾಂತರ ರಾಷ್ಟ್ರ ರಕ್ಷಣೆ ಮಾಡಿದ ವೀರ ವನಿತೆಯರಾದರು. ಸ್ತ್ರೀಯು ತನ್ನ ಶಕ್ತಿಗೆ ಪೈಪೋಟಿ ನೀಡಿದ ಯಾವುದೇ ಶಕ್ತಿಯನ್ನು ದಿಟ್ಟತನದಿಂದ ಎದುರಿಸಬಲ್ಲಳು ಎನ್ನುವುದು ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಮಹಿಳೆಯರ ಹೋರಾಟದ ಸ್ಥಿತಿ ಗತಿ ಗಳನ್ನು ಅರಿತಾಗ ತಿಳಿದು ಬರುತ್ತದೆ.

## ಕೊನೆ ಟಿಪ್ಪಣಿಗಳು:–

೧. ಚಟ್ಟೋಪಧ್ಯಾಯ ಕಮಲಾದೇವಿ: ಇನ್ನರ್ ರಿಸೆಸಸ್ ಔಟರ್ ಸ್ಪೇಸಸ್, ಮೆಮ್ಮೈರ್ಸ್ ನವದೆಹಲಿ ೧೯೮೬, ಪು.ಸ

೨. ಪ್ರೊ. ಬಿ ಷೇಕ್ ಅಲಿ ಪ್ರ.ಸಂ & ಡಾ. ಎಸ್ ಚಂದ್ರಶೇಖರ್ ಸಂ.ಸಂ " ಕರ್ನಾಟಕ ಚರಿತ್ರೆ" ಸಂಪುಟ–೭, ಪು. ಸಂ. ೨೦೬, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ –೨೦೧೮.

೩.ವಿವರಗಳಿಗಾಗಿ ನೋಡಿ. ಕಾಮತ್ ಎಸ್.ಯು (ಸಂ) ಡಾಕ್ಯುಮಂಟ್ಸ್ ಆನ್ ನೋ ಟ್ಯಾಕ್ಸ್ ಕ್ಯಾಂಪೇಯ್ಸ್ ಇನ್ ಉತ್ತರ ಕನ್ನಡ, ೧೯೩೦–೩೪

೪.ಡಾ. ಎಸ್. ನಾಗರತ್ನಮ್ಮ, ಕರ್ನಾಟಕದಲ್ಲಿ ಅಸಹಕಾರ ಮತ್ತು ಕಾನೂನು ಭಂಗ ಚಳುವಳಿ, ಪು. ಸಂ. ೧೩೧ ದೇಶೀ ಪುಸ್ತಕ, ಬೆಂಗಳೂರು, ೨೦೦೯.

೫. ಸ್ವದೇಶಭಿಮಾನಿ, ಮಂಗಳೂರು, ೨೬ ಡಿಸೆಂಬರ್ ೧೯೩೦.

೬. ಸೌತ್ ಕೆನರಾ ಡಿಸ್ಟಿಕ್ ಡಿ.ಎಸ್.ಪಿಯವರ ಟಿಪ್ಪಣಿ. ದ ಸಿವಿಲ್ ಡಿಸೋಬಿಯಸ್ ಮೂವ್ಮೆಂಟ್ ೧೯೩೦–೩೧

೭. ಕಾಂಗ್ರೆಸ್ ಕನ್ವೆನ್ಷನ್, ಶಿವಪುರ ೧೯೩೮, ಇನ್ ದಿ ಕೋರ್ಟ್ ಆಫ್ ದಿ ಡಿಸ್ಟಿಕ್ಟ್, ದಿನಾಂಕ: ೯ ಏಪ್ರಿಲ್ ೧೯೩೮.

೮. ಡಾ. ಪಿ. ನಾಗಭೂಷಣಗೌಡ, ಮೈಸೂರು ಸಂಸ್ಥಾನದಲ್ಲಿ ರಾಷ್ಟೀಯತೆಯ ಕಿಚ್ಚು: ಹ್ಯಾಮಿಲ್ಟನ್ ಸತ್ಯಾಗ್ರಹ ಮತ್ತು ಕೆ.ಜಿ.ಎಫ್ ಸತ್ಯಾಗ್ರಹಗಳನ್ನು ಕುರಿತು ಒಂದು ನೋಟ.

೯. ಕಾಂಗ್ರೆಸ್ ಕನ್ವೆನ್ಷನ್ ವಿಧುರಾಶ್ವತ್ಥ.

೧೦ ಡಾ. ಸೂರ್ಯನಾಥ ಕಾಮತ. ಸ್ವಾತಂತ್ರ್ಯ ಸೂರ್ಯೋದಯ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು೨೦೨೩.

೧೧. ಶ್ರೀ ಕೆ. ಶ್ರೀನಿವಾಸಮೂರ್ತಿಯವರು ಪ್ರಕಟಿಸಿರುವ ಈಸೂರು ದುರಂತ, ಹುಬ್ಬಳ್ಳಿ ೧೯೪೬. ಎಂಬ ಪುಸ್ತಿಕೆಯಲ್ಲಿ ಲಕ್ಷ್ಮೀದೇವಿ ಕಡಿದಾಳ್ ಅವರು.

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ರಾಷ್ಟ್ರೀಯ ಪಕ್ಷಗಳ ಪಾತ್ರ

**ಹೈದರಲಿ ಎಂ.**
**ಸಂಶೋಧನಾರ್ಥಿ**
**ರಾಜ್ಯಶಾಸ್ತ್ರ ಅಧ್ಯಯನ ವಿಭಾಗ**
**ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ**
**ದಾವಣಗೆರೆ-೫೭೭೦೦೭**

**ಸಾರಾಂಶ:**

ಭಾರತವು ಪ್ರಜಾಪ್ರಭುತ್ವ ರಾಷ್ಟ್ರವಾಗುವುದಕ್ಕಿಂತ ಮೊದಲು ಅದು ಹಲವಾರು ಶತಮಾನಗಳ ಕಾಲ ವಸಹಾತುಶಾಯಿ ಆಳ್ವಿಕೆಗೆ ಒಳಪಟ್ಟಿತ್ತು. ಸ್ವಾತಂತ್ರ್ಯ, ಸಮಾನತೆ, ಭಾತೃತ್ವಕ್ಕಾಗಿ ನಡೆದ ಜಾಗತಿಕ ಹೋರಾಟಗಳ ಪರಿಣಾಮ ಭಾರತದ ಜನಸಾಮಾನ್ಯರ ಮೇಲೆ ಬೀರಿತು ಹಾಗೂ ಹಲವಾರು ನಾಯಕರು ಪತ್ರಿಕೆಗಳು ಬರಹಗಳು ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ ಮೂಡಿಸಿ ಅದರ ಮುಖೇನ ಸ್ವಾತಂತ್ರ್ಯ ಚಳುವಳಿಗೆ ಧುಮುಕಿ ಭಾರತಕ್ಕೆ ೧೯೪೭ ಆಗಸ್ಟ್ ೧೫ ರಂದು ಸ್ವಾತಂತ್ರ್ಯ ತಂದುಕೊಟ್ಟು ತದನಂತರ ೧೯೫೦ ಜನವರಿ ೨೬ ರಂದು ಭಾರತದ ಸಂವಿಧಾನ ಜಾರಿಗೆ ಬಂದಿತ್ತು. ೧೯೫೧-೧೯೫೨ ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆ ನಡೆಯಿತು ಜನರಿಂದ ನೇರವಾಗಿ ಅಥವಾ ಅವರಿಂದ ಚುನಾಯಿತರಾದ ಜನಪ್ರತಿನಿಧಿಗಳಿಂದ ಆಡಳಿತ ನಡೆಸುವ ಸರ್ಕಾರ ಇರುವ ವ್ಯವಸ್ಥೆಯೇ ಪ್ರಜಾಪ್ರಭುತ್ವ ಇಲ್ಲಿ ರಾಜಕೀಯ ಪಕ್ಷಗಳು ಪ್ರಮುಖ ಪಾತ್ರ ವಹಿಸುತ್ತವೆ.ಇವುಗಲ್ಲದೆ ಯಾವುದೇ ಸರ್ಕಾರ ಅಸ್ತಿತ್ವಕ್ಕೆ ಬರಲು ಆಗದು ಸಂವಿಧಾನದ ಭಾಗಗಳಲ್ಲಿ ರಾಜಕೀಯ ಪಕ್ಷಗಳ ಬಗ್ಗೆ ನಿರ್ದಿಷ್ಟತೆ ಇಲ್ಲ.ಭಾರತವು ಒಂದು ಜಾತ್ಯಾತೀತ ರಾಷ್ಟ್ರವಾಗಿರುವುದರಿಂದ ಹಾಗೂ ವೈವಿಧ್ಯಮಯ ಸಂಸ್ಕೃತಿಗಳು ನೆಲೆಗೊಂಡಿರುವುದರಿಂದ ಇಲ್ಲಿ ಬಹುಪಕ್ಷ ಪದ್ಧತಿ ಅಸ್ತಿತ್ವದಲ್ಲಿದೆ. ಯಾವುದೇ ಒಂದು ರಾಜಕೀಯ ಪಕ್ಷದ ಮುಖ್ಯ ಉದ್ದೇಶ ಅಧಿಕಾರ ಪಡೆಯುವುದೇ ಆಗಿದೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು ತಮ್ಮ ತಮ್ಮ ಐಡಿಯಾಲಜಿಗಳ ಮುಖೇನ ಅಧಿಕಾರ ಪಡೆಯಲು ಬಕಪಕ್ಷಿಗಳಂತೆ ಹವಣಿಸುತ್ತವೆ ಸಮಕಾಲೀನ ದಿನಮಾನಗಲ್ಲಿ ರಾಜಕೀಯ ಪಕ್ಷಗಳಿಗೆ ಜ್ವಲಂತ ಸಮಸ್ಯೆಗಳಿಗಿಂತ ತಮ್ಮ ಐಡಿಯಾಲಜಿಗಳ ಸಂಘರ್ಷವೆ ಮುಖ್ಯವಾಗಿದೆ, ಇವುಗಳು ತಮ್ಮ ಜವಾಬ್ದಾರಿಯನ್ನು ಮರೆತಂತಿದೆ ಯಾವುದೇ ರಾಜಕೀಯ ಪಕ್ಷವಾಗಲಿ ಯಾವುದೇ ನಿರ್ದಿಷ್ಟ ಐಡಿಯಾಲಜಿಗೆ ಜೋತು ಬೀಳದೆ ವಾಸ್ತವವನ್ನು ಅರಿತು ಕೆಲಸ ಮಾಡಿದರೆ ಆರಾಜ್ಯವು ಅಭಿವೃದ್ಧಿ ಹೊಂದಲು ಸಾಧ್ಯ.

**ಮುಖ್ಯ ಪದಗಳು:**

ಪ್ರಜಾಪ್ರಭುತ್ವ ರಾಜಕೀಯ ಪಕ್ಷಗಳು ಸ್ವಾತಂತ್ರ್ಯ ಸಮಾನತೆ ಭಾತೃತ್ವ, ಸಂವಿಧಾನ, ಜಾತ್ಯಾತೀತ, ಐಡಿಯಾಲಜಿ ಅಧ್ಯಯನದ ಪೀಠಿಕೆ.

**ಉದ್ದೇಶಗಳು:**

೧) ಸಮಕಾಲೀನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಪಾತ್ರ ಅರಿಯುವುದು.

೨) ರಾಜಕೀಯ ಪಕ್ಷಗಳ ಐಡಿಯಾಲಜಿಯನ್ನು ಸ್ಪಷ್ಟೀಕರಿಸುವುದು.

**ಪೀಠಿಕೆ:**

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಜನರು ಮತ ಚಲಾವಣೆ ಮಾಡಿ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ.ಚುನಾವಣೆಗಳು ಎಂದಾಕ್ಷಣ ನಮಗೆ ನೆನಪಾಗುವುದು ರಾಜಕೀಯ ಪಕ್ಷಗಳು ಕೇವಲ ವ್ಯಕ್ತಿಗಳು ಪ್ರತಿನಿಧಿಸುವುದಿಲ್ಲ ಅವರ ಜೊತೆಗೆ ರಾಜಕೀಯ ಪಕ್ಷಗಳು ಇರುತ್ತವೆ ಆಯ್ಕೆಯಾದ ಅಭ್ಯರ್ಥಿಗಳು ಪಕ್ಷದ ಅಭ್ಯರ್ಥಿಗಳಾಗುತ್ತಾರೆ, ಪಕ್ಷೇತರ ಅಭ್ಯರ್ಥಿಗಳು ಸಹ ಜಯಗಳಿಸುತ್ತಾರೆ.ಚುನಾವಣೆಗಳಲ್ಲಿ ಜನರಿಂದ ಆಯ್ಕೆಯಾದ ಪ್ರತಿನಿಧಿಗಳು ಶಾಸಕಾಂಗದ ನಿಯಮಗಳಡಿಯಲ್ಲಿ ಸರ್ಕಾರವನ್ನು ಬಹುಮತದ ಆಧಾರದ ಮೇಲೆ ರಚಿಸುತ್ತಾರೆ.ರಾಜಕೀಯ ಪಕ್ಷ ಒಂದು ನಿರ್ದಿಷ್ಟ ಸಿದ್ಧಾಂತ ಅಥವಾ ತತ್ವಗಳನ್ನು ಆಧರಿಸಿ ಸಂಘಟಿತವಾಗಿ ರಾಜಕೀಯ ಉದ್ದೇಶಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಸಮೂಹವೆ ರಾಜಕೀಯ ಪಕ್ಷ. ಪ್ರತಿಯೊಂದು ರಾಜಕೀಯ ಪಕ್ಷವು ತಮ್ಮದೇ ಆದ ರೂಪುರೇಷೆಗಳನ್ನು ಹೊಂದಿರುತ್ತದೆ. ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನದ ಸಾರ್ವಭೌಮತ್ವ ಪಾರ್ಲಿಮೆಂಟರಿ ವ್ಯವಸ್ಥೆ ಸರ್ಕಾರದ ಶಾಂತಿಯುತ ಬದಲಾವಣೆ ಮುಂತಾದವುಗಳನ್ನು ಎಲ್ಲಾ ಪಕ್ಷಗಳು ಒಪ್ಪಿಕೊಳ್ಳಬೇಕಾಗುತ್ತದೆ ಪಕ್ಷ ವ್ಯವಸ್ಥೆಯ ಮೂಲತತ್ವಗಳು ನಮ್ಮ ಸಂವಿಧಾನದಲ್ಲಿ

ಒಳಗೊಂಡಿದೆ ನಮ್ಮ ಸಂವಿಧಾನವು ಅವುಗಳನ್ನು ನೇರವಾಗಿ ಹೇಳದೆ ಪರೋಕ್ಷವಾಗಿ ತಿಳಿಸುತ್ತದೆ ಭಾರತದ ಚುನಾವಣೆ ನಡೆಸುವುದರ ಜೊತೆಗೆ ರಾಷ್ಟ್ರ ಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಪಕ್ಷಗಳಿಗೆ ಅಧಿಕೃತ ಮನ್ನಣೆ ನೀಡುತ್ತದೆ. ದೇಶದ ಏಕತೆ ಮತ್ತು ಸಮಗ್ರತೆ, ರಕ್ಷಣೆ, ಆರ್ಥಿಕಾಭಿವೃದ್ಧಿ ಸರ್ಕಾರ ರಚನೆ ಜನತೆಯ ಸಾಮಾಜಿಕ ನ್ಯಾಯ ಮೂಲಭೂತ ಹಕ್ಕುಗಳು ಜಾತ್ಯಾತೀತ ಮೌಲ್ಯಗಳು ಅವುಗಳನ್ನು ಸಾಕಾರಗೊಳಿಸುವುದು ರಾಜಕಾರಣ ಜನಾಭಿಪ್ರಾಯದ ತಿರುಳಾಗಿದೆ. ಜನಾಭಿಪ್ರಾಯವನ್ನು ಸರ್ಕಾರದ ಮೂಲಕ ಕಾರ್ಯಗತಗೊಳಿಸುವ ಮಾರ್ಗವೇ ರಾಜಕೀಯ ಪಕ್ಷವಾಗಿದೆ ಪ್ರಜಾಪ್ರಭುತ್ವದ ಯಶಸ್ಸು ರಾಜಕೀಯ ಪಕ್ಷಗಳನ್ನು ಅವಲಂಭಿಸಿದೆ

**ಮನ್ರೋರವರ ಪ್ರಕಾರ:** ತತ್ವಗಳನ್ನು ಘೋಷಿಸಿ ಕಾರ್ಯತಂತ್ರವನ್ನು ಗೊತ್ತುಪಡಿಸುವ ಯಂತ್ರವೇ ರಾಜಕೀಯ ಪಕ್ಷ.

**ಎಡ್ಮಂಡ್ ಬರ್ಕ್‌ನ ಪ್ರಕಾರ:** ತಾವೆಲ್ಲರೂ ಒಪ್ಪಿರುವ ನೀತಿ ತತ್ವದ ಆಧಾರದ ಮೇಲೆ ರಾಷ್ಟ್ರೀಯ ಹಿತಾಸಕ್ತಿಯನ್ನು ಸಾಧಿಸಲು ಒಂದುಗೂಡಿರುವ ಜನರ ಸಮೂಹವೇ ರಾಜಕೀಯ ಪಕ್ಷ.

**ಮೈಕೈವರ್'ರವರ ಪ್ರಕಾರ:** ಸಾರ್ವಜನಿಕ ಅಭಿಪ್ರಾಯವನ್ನು ಸರ್ಕಾರದ ಮೂಲಕ ಕಾರ್ಯಗತಗೊಳಿಸುವ ನಿಯೋಗವೇ ರಾಜಕೀಯ ಪಕ್ಷ.

ರಾಜಕೀಯ ಪಕ್ಷಗಳು ಜನರ ಅಶೋಕ್ತರಗಳನ್ನು, ಭಾವನೆಗಳನ್ನು ಹಂಚಿಕೊಳ್ಳಲು ಅವರ ಭಾವನೆ ಬೇಡಿಕೆಗೆ ತಕ್ಕಂತೆ ಸಂವಿಧಾನಕ್ಕೆ ಒಳಪಟ್ಟು, ಆಡಳಿತ ನಡೆಸುತ್ತವೆ.ಪ್ರಾಪಂಚಿಕವಾಗಿ ಅಮೇರಿಕಾ, ಕೆನಡಾ, ನ್ಯೂಜಿಲ್ಯಾಂಡ್ ದೇಶಗಳ ಕೆಲವೊಂದು ರಾಜ್ಯಗಳಲ್ಲಿ ಇಂದಿಗೂ ರಾಜಕೀಯ ಪಕ್ಷಗಳನ್ನು ಹೊಂದಿರುವುದಿಲ್ಲ, ಆಧುನಿಕ ಪ್ರಜಾಪ್ರಭುತ್ವವು ಪ್ರತಿನಿಧಿ ಪ್ರಜಾಪ್ರಭುತ್ವವಾದುದರಿಂದ ಪ್ರಾತಿನಿಧ್ಯಕ್ಕೆ ಪ್ರಾಮುಖ್ಯತೆ ಹೆಚ್ಚು, ನಮ್ಮ ಇಂದಿನ ರಾಜತಂತ್ರದಲ್ಲಿ ಮತ್ತು ಮೇಲಾಟದಲ್ಲಿ ಪಕ್ಷಗಳನ್ನು ಕೇಂದ್ರಬಿಂದುವೆಂದು ಪರಿಗಣಿಸಲಾಗಿದೆ, ಸಂಸದೀಯ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳು ಅನಿವಾರ್ಯವಾಗಿವೆ.

**ರಾಜಕೀಯ ಪಕ್ಷಗಳ ಪ್ರಮುಖ ಲಕ್ಷಣಗಳು:**

೧. ರಾಜಕೀಯ ಪಕ್ಷಗಳು ಜನರಿಗೆ ಶಾಂತಿಯುತ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಅವಕಾಶ ಮಾಡಿಕೊಡುತ್ತವೆ.

೨. ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವದಲ್ಲಿ ಜನಾಭಿಪ್ರಾಯವನ್ನು ರೂಪಿಸುತ್ತವೆ. ಸಾರ್ವಜನಿಕ ಅಭಿಪ್ರಾಯವನ್ನು ರಾಜಕೀಯ ಪಕ್ಷಗಳು ಅಭಿವ್ಯಕ್ತಿಸುತ್ತವೆ.

೩. ರಾಜಕೀಯ ಪಕ್ಷಗಳು ಪ್ರಜಾಸತಾತ್ಮಕ ಹಾಗೂ ಸಂವಿಧಾನಾತ್ಮಕ ವಿಧಾನಗಳ ಮೂಲಕ ರಾಜಕೀಯ ಅಧಿಕಾರವನ್ನು ಪಡೆಯುವ ಉದ್ದೇಶವನ್ನು ಹೊಂದಿರುತ್ತವೆ.

೪. ಸಾಮಾನ್ಯ ಪ್ರಜೆಗಳಿಗೆ ರಾಜಕೀಯ ಶಿಕ್ಷಣ ಮತ್ತು ಸಾರ್ವಜನಿಕ ವಲಯಗಳಿಗೆ ಪ್ರವೇಶಿಸುವ ಅವಕಾಶಗಳನ್ನು ರಾಜಕೀಯ ಪಕ್ಷಗಳು ಕಲ್ಪಿಸುತ್ತವೆ.

೫. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳು ವಿಚಾರ ವಿನಿಮಯಕ್ಕೆ ಅಭಿಪ್ರಾಯ ಹಂಚಿಕೆಗೆ ಅನುಕೂಲವಾಗುವಂತಹ ವೇದಿಕೆಯನ್ನು ಮತ್ತು ವಾತಾವರಣವನ್ನು ಸೃಷ್ಟಿಸುತ್ತವೆ.

೬. ಪ್ರಜಾಪ್ರಭುತ್ವದಲ್ಲಿ ಶ್ರೀಮಂತ–ಬಡವ, ಅನಕ್ಷರಸ್ಥ–ಅಕ್ಷರಸ್ಥ, ಮುಂದುವರೆದ–ಹಿಂದುಳಿದ ಎಂಬ ತಾರತಮ್ಯವಿಲ್ಲದೆ, ಜಾತಿ–ಭೇಧಗಳ ಮೀರಿ ಸಮಾಜದ ಪ್ರತಿಯೊಬ್ಬರಿಗೂ ಸಮಾನವಾಗಿ ಸಾರ್ವಜನಿಕ ವೇದಿಕೆಯಲ್ಲಿ ನಿಲ್ಲಲು ಪಕ್ಷ ವ್ಯವಸ್ಥೆ ಅವಕಾಶ ಕಲ್ಪಿಸುತ್ತದೆ. ಅತ್ಯಂತ ಕಡು ಬಡವನೂ ಸಂಸತ್ತಿಗೋ, ವಿಧಾನಸಭೆಗೋ, ಆಯ್ಕೆಯಾಗುವ ಅವಕಾಶವಿದ್ದು, ರಾಜಕೀಯ ಪಕ್ಷಗಳು ಒದಗಿಸಿಕೊಡುತ್ತವೆ.

**<u>ಪಕ್ಷ ವ್ಯವಸ್ಥೆ</u>**

ಪ್ರಜಾಪ್ರಭುತ್ವದಲ್ಲಿ ಪಕ್ಷಗಳನ್ನು ಸ್ಥಾಪಿಸಲು, ಬೆಳೆಸಲು, ಕಾರ್ಯಕರ್ತರನ್ನು ಸಂಘಟಿಸಲು ಎಲ್ಲಾ ಪ್ರಜೆಗಳಿಗೂ ಸಮಾನ ಅವಕಾಶ ಉಂಟು.ಸಾಮಾನ್ಯವಾಗಿ ಪಕ್ಷಗಳ ವ್ಯವಸ್ಥೆಯಲ್ಲಿ ಮೂರು ವಿಧಗಳಿವೆ.

ಎ) ಏಕಪಕ್ಷ ವ್ಯವಸ್ಥೆ.

ಬಿ) ದ್ವಿಪಕ್ಷ ವ್ಯವಸ್ಥೆ.

ಸಿ) ಬಹುಪಕ್ಷ ವ್ಯವಸ್ಥೆ.

ಎ) ಏಕಪಕ್ಷ ವ್ಯವಸ್ಥೆ:

ಅನೇಕ ದೇಶಗಳಲ್ಲಿ ಕೇವಲ ಒಂದೇ ಒಂದು ಪಕ್ಷವು ಕಂಡುಬರುತ್ತದೆ.ಅದೊಂದೇ ಕಾನೂನು ಬದ್ಧವಾದ ಪಕ್ಷವಾಗಿರುತ್ತದೆ.ಈ ದೇಶದಲ್ಲಿ ವಿರೋಧ ಪಕ್ಷಗಳಿಗೆ ಅವಕಾಶವಿರುವುದಿಲ್ಲ.ಉದಾಃ ಸೋವಿಯತ್ ಯೂನಿಯನ್, ಕ್ಯೂಬಾ, ಚೀನಾ, ಉತ್ತರ ಕೋರಿಯಾ ಹಾಗೂ ಪೂರ್ವ ಯುರೋಪಿನ ರಾಷ್ಟ್ರಗಳಲ್ಲಿ ಕಂಡು ಬರುತ್ತವೆ.ಪ್ರಪಂಚದಲ್ಲಿ ಮೊಟ್ಟ ಮೊದಲ ಏಕಪಕ್ಷ ರಾಷ್ಟ್ರವೆಂದು ಟ್ರೂವಿಗ್ ಪಕ್ಷವನ್ನು ಕರೆಯುತ್ತಾರೆ ಇದು ಲೈಬೀರಿಯಾದಲ್ಲಿದೆ.ಇಲ್ಲಿ ಕೇವಲ ಏಕಪಕ್ಷ ಆಡಳಿತ

ನಡೆಸುತ್ತದೆ, ಇಲ್ಲಿ ಪ್ರಜೆಗಳು ತಮ್ಮ ಅಭಿಪ್ರಾಯ ಮತ್ತು ಅಸಮಾಧಾನವನ್ನು ಕೇವಲ ಒಂದೇ ಪಕ್ಷದ ಮೇಲೆ ವ್ಯಕ್ತಪಡಿಸಬೇಕಾಗುತ್ತದೆ.ಬಹಳಷ್ಟು ಜನ ಏಕಪಕ್ಷೀಯ ದೇಶಗಳಲ್ಲಿ ನಿಜವಾದ ಪ್ರಜಾಪ್ರಭುತ್ವವಿಲ್ಲವೆಂದು ಭಾವಿಸುತ್ತಾರೆ.ಏಕಪಕ್ಷ ವ್ಯವಸ್ಥೆಯು ನಿರಂಕುಶ ಪ್ರಭುತ್ವದ ಅನೇಕ ಲಕ್ಷಣಗಳನ್ನು ಹೊಂದಿರುತ್ತದೆ.

ಬಿ) **ದ್ವಿಪಕ್ಷ ವ್ಯವಸ್ಥೆ:**

ಇನ್ನು ಹಲವಾರು ದೇಶಗಳಲ್ಲಿ ದ್ವಿಪಕ್ಷ ವ್ಯವಸ್ಥೆ ಇದೆ.ಇಲ್ಲಿ ಜನರು ತಮಗೆ ಇಷ್ಟವಾಗುವ ನೀತಿಯನ್ನು ಹೊಂದಿದ ಪಕ್ಷದ ಅಭ್ಯರ್ಥಿಗಳನ್ನು ಚುನಾಯಿಸಬಹುದು. ಉದಾ: ಅಮೇರಿಕಾ, ಯುಕೆ, ಜಮೈತಾ, ಜಪಾನ್, ಘಾನಾ – ಈ ದೇಶಗಳಲ್ಲಿ ಎಡಪಂಥೀಯ ಸಮ್ಮಿಶ್ರ ಪಕ್ಷ ಮತ್ತು ಬಲಪಂಥೀಯ ಸಮ್ಮಿಶ್ರ ಪಕ್ಷಗಳು ಕಂಡು ಬರುತ್ತದೆ.

**ಅಮೇರಿಕಾ ಸಂಯುಕ್ತ ಸಂಸ್ಥಾನ:**

೧. ಡೆಮಾಕ್ರಟಿಕ್ ಪಕ್ಷ ಮತ್ತು
೨. ರಿಪಬ್ಲಿಕ್ ಪಕ್ಷಗಳು ಎರಡು ಪ್ರಬಲ ಪಕ್ಷಗಳು

**ಯುನೈಟೆಡ್ ಕಿಂಗ್ಡಮ್:**

೧. ಲೇಬರ್ ಪಾರ್ಟಿ ಮತ್ತು
೨. ಕನ್ಸರ್ವೇಟಿವ್ ಪಕ್ಷಗಳು

**ಜಪಾನ್**

೧. ಡೆಮಾಕ್ರಟಿಕ್ ಪಾರ್ಟಿ ಆಫ್ ಜಪಾನ್ ಮತ್ತು
೨. ಲಿಬರಲ್ ಡೆಮಾಕ್ರಟಿಕ್ ಪಾರ್ಟಿ

ಸಿ) **ಬಹುಪಕ್ಷೀಯ ವ್ಯವಸ್ಥೆ**

ಅನೇಕ ದೇಶಗಳಲ್ಲಿ ಮೂರು ಅಥವಾ ಅದಕ್ಕಿಂತ ಹೆಚ್ಚಿನ ಪಕ್ಷಗಳು ಅಸ್ಥಿತ್ವದಲ್ಲಿದ್ದು, ಅವುಗಳು ಸ್ವಾತಂತ್ರ್ಯವಾಗಿ ಆಡಳಿತ ನಡೆಸಲು ಪೈಪೋಟಿ ನಡೆಸುತ್ತವೆ ಮತ್ತು ಆಡಳಿತ ನಡೆಸುತ್ತಿವೆ ಕೆಲವೊಮ್ಮೆ ಈ ಪಕ್ಷಗಳು ಸಮ್ಮಿಶ್ರವಾಗಿ ಕೂಡ ಆಡಳಿತಕ್ಕೆ ಬರುತ್ತವೆ. ಈ ರಾಷ್ಟ್ರಗಳಲ್ಲಿ ಮೂರು ಅಥವಾ ಮೂರಕ್ಕಿಂತ ಹೆಚ್ಚು ಪಕ್ಷಗಳಲ್ಲಿ ಯಾವುದಾದರೂ ಪಕ್ಷವು ಆಡಳಿತಕ್ಕೆ ಬರುವ ಸಾಧ್ಯತೆ ಇದೆ ಉದಾ: ಭಾತರ, ಜರ್ಮನಿ, ಡೆನ್ಮಾರ್ಕ್, ಇಂಡೋನೇಷ್ಯಾ, ನ್ಯೂಜಿಲ್ಯಾಂಡ್, ಫ್ರಾನ್ಸ್, ಐರ್ಲ್ಯಾಂಡ್ ಮತ್ತು ಇಸ್ರೇಲ್.

**ಭಾರತದಲ್ಲಿ ಬಹುಪಕ್ಷೀಯ ಪದ್ಧತಿ:**

ಭಾರತವು ಬಹುಪಕ್ಷೀಯ ಪದ್ಧತಿಯನ್ನು ಹೊಂದಿದ್ದು ಈ ಪಕ್ಷಗಳನ್ನು ಪ್ರಮುಖವಾಗಿ ಎರಡು ರೀತಿಯಲ್ಲಿ ವಿಂಗಡಿಸುತ್ತಾರೆ.

೧. ರಾಷ್ಟ್ರೀಯ ಪಕ್ಷಗಳು
೨. ರಾಜ್ಯ / ಪ್ರಾದೇಶಿಕ ಪಕ್ಷಗಳು ಭಾರತದ ಚುನಾವಣಾ ಆಯೋಗವು ಸ್ಥಳೀಯ ಪಕ್ಷಗಳೆಂದು ವರ್ಗೀಕರಿಸುತ್ತದೆ.

**ರಾಷ್ಟ್ರೀಯ ಮತ್ತು ರಾಜ್ಯ ಪಕ್ಷವೆಂದು ಅಂಗೀಕಾರ ಮಾಡುವ**

ದೇಶದಲ್ಲಿರುವ ರಾಜಕೀಯ ಪಕ್ಷಗಳನ್ನು ಚುನಾವಣೀಯ ಮತಗಳ ಆಧಾರದ ಮೇಲೆ ಚುನಾವಣಾ ಆಯೋಗವು ಚುನಾವಣಾ ಉದ್ದೇಶಕ್ಕಾಗಿ ಅವುಗಳನ್ನು ರಾಷ್ಟ್ರೀಯ ಮತ್ತು ರಾಜ್ಯಪಕ್ಷಗಳೆಂದು ಗುರುತಿಸುತ್ತದೆ.ಉಳಿದ ಪಕ್ಷಗಳನ್ನು ಅಧಿಕೃತ ಮತ್ತು ಅನಧಿಕೃತ ಪಕ್ಷಗಳೆಂದು ಘೋಷಿಸುತ್ತದೆ.

**ಬಹುಪಕ್ಷ ಪದ್ಧತಿಯ ಪಕ್ಷಗಳು:**

೧. ಇದು ಪ್ರಜಾಪ್ರಭುತ್ವದ ಸ್ಪೂರ್ತಿಗೆ ಅನುಗುಣವಾಗಿದೆ ರಾಜ್ಯದ ಎಲ್ಲಾ ವಿವಿಧ ಹಿತಾಸಕ್ತಿಗಳಿಗೆ ಪ್ರಾತಿನಿಧ್ಯವನ್ನು ಒದಗಿಸುತ್ತದೆ.
೨. ಈ ಪದ್ಧತಿಯು ಮಂತ್ರಿಮಂಡಲದ ಸರ್ವಾಧಿಕಾರವನ್ನು ತಡೆಯುತ್ತದೆ.
೩. ಸದಸ್ಯರ ಸ್ವಾತಂತ್ರ್ಯ ಮತ್ತು ವ್ಯಕ್ತಿತ್ವದ ವಿಕಾಸಕ್ಕೆ ಸಾಕಷ್ಟು ಅವಕಾಶ ಸಿಗುವುದು.
೪. ಮತದಾರರಿಗೆ ಆಯ್ಕೆಯ ಕ್ಷೇತ್ರವನ್ನು ವಿಸ್ತಾರಗೊಳಿಸುತ್ತದೆ.
೫. ವಿಭಿನ್ನ ಅಭಿರುಚಿಯನ್ನು ಹೊಂದಿರುವವರು ಪ್ರತ್ಯೇಕ ರಾಜಕೀಯ ಪಕ್ಷಗಳನ್ನು ರಚಿಸಿಕೊಳ್ಳಲು ಈ ವ್ಯವಸ್ಥೆಯಲ್ಲಿ ಸಾಧ್ಯವಿದೆ.

**ಬಹುಪಕ್ಷ ಪದ್ಧತಿಯ ದೋಷಗಳು:**

೧. ಸ್ಥಿರ ಸರ್ಕಾರವನ್ನು ಸ್ಥಾಪಿಸಲು ಸಾಧ್ಯವಾಗುವುದಿಲ್ಲ.
೨. ಇದು ಪ್ರಜಾಪ್ರಭುತ್ವವನ್ನು ವಿನಾಶದ ಅಂಚಿಗೆ ತಳ್ಳುತ್ತದೆ.

೩. ಸರ್ಕಾರ ಆಗಾಗ್ಗೆ ಬದಲಾಗುವುದರಿಂದ ಆಡಳಿತ ದಕ್ಷತೆ ತಗ್ಗುತ್ತದೆ.
೪. ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ತೊಂದರೆ ಉಂಟಾಗುವುದು.
೫. ಸಚಿವ ಜವಾಬ್ದಾರಿ ಮತ್ತು ಸಾಮೂಹಿಕ ಜವಾಬ್ದಾರಿ ಎಂಬ ತತ್ವಗಳು ಬಹುಪಕ್ಷ ಪದ್ಧತಿಯಲ್ಲಿ ಅರ್ಥವಾಗುತ್ತದೆ.

**ರಾಜಕೀಯ ಪಕ್ಷಗಳ ಕಾರ್ಯಗಳು (ಪಾತ್ರ):**

ಪ್ರಜಾಪ್ರಭುತ್ವ ಹಾಗೂ ಸಂಸದೀಯ ಸರ್ಕಾರಗಳ ಆಳ್ವಿಕೆಯಲ್ಲಿ ರಾಜಕೀಯ ಪಕ್ಷಗಳು ಅನಿವಾರ್ಯವಾಗಿವೆ.ಇಡೀ ಸರ್ಕಾರದ ಚಲನವಲನಗಳು ರಾಜಕೀಯ ಪಕ್ಷಗಳನ್ನು ಅವಲಂಭಿಸಿದೆ.ಪ್ರಸ್ತುತ ದಿನಮಾನಗಳಲ್ಲಿ ಪಕ್ಷವು ಸರ್ಕಾರವಾಗಿದೆ ಪಕ್ಷಗಳಿಲ್ಲದೆ ಪ್ರಾತಿನಿಧ್ಯ ಸರ್ಕಾರಗಳನ್ನು ನೋಡಲಾಗದು.ರಾಜಕೀಯ ಪಕ್ಷಗಳು ಒಂದು ರಾಜ್ಯದ ಸಮಸ್ತ ಪ್ರತ್ಯಕ್ಷ ಮತ್ತು ಪರೋಕ್ಷ ಕಾರ್ಯಗಳಿಗೆ ಚಾಲನಶಕ್ತಿಯಾಗಿದೆ ಇವುಗಳು ಪ್ರಜಾಪ್ರಭುತ್ವದ ಬೆನ್ನೆಲುಬುಗಳಾಗಿವೆ ರಾಜಕೀಯ ಪಕ್ಷಗಳ ಕಾರ್ಯಗಳು ಈ ಕೆಳಗಿನಂತಿದೆ.

೧. ಸಮಾಜದ ಧೋರಣೆಗಳು ರೂಪುಗೊಳ್ಳಲು ಮತ್ತು ವ್ಯಕ್ತವಾಗಲು ಅಗತ್ಯವಾದ ಸಂಘಟಿತ ಸಂಸ್ಥೆಯ ನೆರವನ್ನು ಪಕ್ಷಗಳು ಒದಗಿಸುತ್ತದೆ ಅಲ್ಲದೆ ಯಾವುದೇ ಧೋರಣೆಗೆ ಅಥವಾ ಅಭಿಪ್ರಾಯಕ್ಕೆ ಬಹುಜನರ ಸಮ್ಮತಿಯನ್ನು ಪಡೆಯಲು ಅವಶ್ಯಕವಾದ ಸಾಧನವನ್ನು ಪಕ್ಷಗಳು ಒದಗಿಸುತ್ತದೆ. ಲೋವೆಲ್ ಹೇಳಿರುವಂತೆ ರಾಜಕೀಯ ಪಕ್ಷಗಳು ವಿಚಾರಗಳು ಮತ್ತು ರಾಷ್ಟ್ರದ ಸಂಸ್ಥೆಗಳ ದಲ್ಲಾಳಿಗಳಂತೆ ಕಾರ್ಯ ಮಾಡುತ್ತದೆ.
೨. ಚುನಾವಣೆಯ ಅಖಾಡಕ್ಕೆ ಇಳಿಯಲು ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ಮತ್ತು ಹುದ್ದೆಗಳನ್ನು ಪಡೆಯುವುದು ಪಕ್ಷದ ಮತ್ತೊಂದು ಅತಿ ಮುಖ್ಯವಾದ ಕೆಲಸ.
೩. ವಿಶಾಲದ ದೇಶದಲ್ಲಿ ಚುನಾವಣೆಗಳು ಮತದಾರರಿಗೆ ಅನೇಕ ಸಮಸ್ಯೆಗಳನ್ನು ಒಡ್ಡುತ್ತವೆ. ಅವುಗಳಲ್ಲಿ ಪ್ರಮುಖವಾದುದು ಎಂದರೆ ಮತದಾರರಿಗೆ ಉಮೇದುವಾರರನ್ನು ಪರಿಚಯ ಮಾಡಿಕೊಡುವುದಲ್ಲದೆ ಅದರ ದಕ್ಷತೆ ಬಗ್ಗೆಯೂ ನೈತಿಕ ಹೊಣೆಯನ್ನು ತೆಗೆದುಕೊಳ್ಳುತ್ತದೆ.
೪. ರಾಜಕೀಯ ಪಕ್ಷಗಳು ಸರ್ಕಾರ ಮತ್ತು ಜನರ ನಡುವೆ ಸಂಪರ್ಕ ಸೇತುವೆಯನ್ನು ಒದಗಿಸಿ ಮತದಾರರಿಗೆ ರಾಜಕೀಯ ಶಿಕ್ಷಣ ಕೊಟ್ಟು ತಿಳುವಳಿಕೆ ನೀಡಿ ಅವರನ್ನು ಸಕ್ರಿಯಗೊಳಿಸಲು ಅವುಗಳು ಪ್ರಯತ್ನಿಸುತ್ತವೆ. ಲೋವೆಲ್'ರವರ ಪ್ರಕಾರ ಅವು ಸಾರ್ವಜನಿಕ ಅಭಿಪ್ರಾಯದ ಗಮನ ಸೆಳೆಯುತ್ತವೆ ಮತ್ತು ಜನರ ತೀರ್ಮಾನಕ್ಕಾಗಿ ಸಮಸ್ಯೆಗಳಿಗೊಂದು ರೂಪವನ್ನು ಕೊಡುತ್ತವೆ.
೫. ರಾಜಕೀಯ ಪಕ್ಷಗಳು ಅಧಿಕಾರಕ್ಕಾಗಿ ಹೋರಾಡುತ್ತವೆ ಮತ್ತು ಗೊಂದಲದಲ್ಲಿ ಇರುವಲ್ಲಿ ಸುವ್ಯವಸ್ಥೆ ತರಲು ಶ್ರಮಿಸುತ್ತವೆ. ಅವು ಪ್ರತಿನಿಧಿಸುವ ಹಿತಾಸಕ್ತಿಗಳನ್ನು ವ್ಯಾಪಕಗೊಳಿಸಲು ಪ್ರಯತ್ನಿಸುತ್ತವೆ.
೬. ರಾಜಕೀಯ ನಾಯಕರನ್ನು ನೇಮಿಸುವುದು ಪಕ್ಷಗಳ ಮತ್ತೊಂದು ಕಾರ್ಯವಾಗಿದೆ.
೭. ರಾಜಕೀಯ ಪಕ್ಷಗಳು ಸಮಸ್ಯೆಗಳನ್ನು ಪ್ರಸ್ತುತ ಪಡಿಸುತ್ತವೆ. ಸಮಾಜಕ್ಕಾಗಿ ಕೆಲವು ಮೂಲಗಳನ್ನು ಮತ್ತು ಧ್ಯೇಯಗಳನ್ನು ಸಾದರ ಪಡಿಸುತ್ತವೆ.
೮. ಎಲ್ಲಾ ರಾಜಕೀಯ ಪಕ್ವಗಳ ಧ್ಯೇಯ ಒಂದೇ ಆಗಿದೆ ಅದು ಮಾನವ ಕಲ್ಯಾಣ.
೯. ರಾಜಕೀಯ ಪಕ್ಷಗಳು ತಮ್ಮ ನಿರ್ದಿಷ್ಟವಾದ ಐಡಿಯಾಲಜಿಗಳ ಮುಖೇನ ಜನರನ್ನು ಆಕರ್ಷಿಸಿ ಅವರನ್ನು ಮತ ಬ್ಯಾಂಕ್ ಆಗಿ ಪರಿವರ್ತಿಸುತ್ತದೆ.
೧೦.ರಾಜಕೀಯ ಪಕ್ಷಿಗಳು ಚುನಾವಣಾ ಪ್ರಣಾಳಿಕೆ ನೀಡುವುದರ ಮೂಲಕ ಜನಸಾಮಾನ್ಯರಿಗೆ ಹತ್ತಿರವಾಗಲು ಪ್ರಯತ್ನಿಸುತ್ತವೆ.

**ಸಮಕಾಲೀನ ರಾಜಕಾರಣದಲ್ಲಿ ರಾಜಕೀಯ ಪಕ್ಷಗಳು**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು ಬಹಳ ಉತ್ತಮ ಸ್ಥಾನಮಾನವನ್ನು ಪಡೆದು ಅವುಗಳು ಈ ನೆಲದ ಕಾನೂನು ಆದ ಸಂವಿಧಾನದ ಆಶಯಗಳಡಿಯಲ್ಲಿ ಕಾರ್ಯ ನಿರ್ವಹಿಸುತ್ತವೆ. ೧೮೮೫ ರಲ್ಲಿ ಸ್ಥಾಪನೆಯಾದ ಕಾಂಗ್ರೆಸ್ ಹಾಗೂ ೧೯೮೦/೯೦ರ ದಶಕದಲ್ಲಿ ಸ್ಥಾಪನೆಯದ ಭಾರತಿಯ ಜನತಾ ಪಾರ್ಟಿ ಅಖಿಲ ಭಾರತ ತೃಣಮೂಲ ಕಾಂಗ್ರೆಸ್, ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ, ೨೩ ಸೆಪ್ಟಂಬರ್ ೨೦೨೧ರ ಭಾರತದ ಚುನಾವಣಾ ಆಯೋಗದ ಪ್ರಕಾರ ಒಟ್ಟು ದಾಖಲಾದ ಪಕ್ಷಗಳ ಸಂಖ್ಯೆ ೨೮೫೮ ಅದರಲ್ಲಿ ೯ ರಾಷ್ಟ್ರೀಯ ಪಕ್ಷಗಳು ೫೪ ರಾಜ್ಯ ಪಕ್ಗಳು ೨೭೯೬ ಗುರುತಿಸಲಾಗದ ಪಕ್ಷಗಳು ಪ್ರತಿಯೊಂದು ರಾಜಕೀಯ ಪಕ್ವಗಳು ತಮ್ಮ ವಿಶಿಷ್ಟವಾದ ಐಡಿಯಾಲಜಿಗಳ ಮುಖಾಂತರ ಜನರನ್ನು ತಮ್ಮ ಪ್ರಚಾರದ ಸಮಯದಲ್ಲಿ ಆಕರ್ಷಿಸಿ ಅವರನ್ನು ಮತಬ್ಯಾಂಕ್ ಆಗಿ ಪರಿವರ್ತಿಸಲು ಪ್ರಯತ್ನಿಸಿರುತ್ತಾರೆ ಉದಾ: ಕಾಂಗ್ರೇಸ್ ಪಕ್ಷವು ಜಾತ್ಯಾತೀತ ಪಕ್ಷವೆಂದು ಹೇಳುತ್ತಾ ಪಶ್ಚಿಮದಲ್ಲಿ ಬೆಳೆದು ಬಂದಂತಹ ಸೆಕ್ಯುಲರ್ ಎಮಬ ಚರ್ಚ್ ಮತ್ತು ಸ್ಟೇಟ್ ನಡುವಿನ ಸಂಘರ್ಷ ತಡೆಯಲು ತಂದ ಒಂದು ಅಂಶ ಅದನ್ನು ಇಲ್ಲಿ ವ್ಯಕ್ತಿಗತವಾಗಿ ಬಳಸುತ್ತದ್ದಾರೆ. ಈ ಒಂದು ಅಸ್ತ್ರದ ಮುಖೇನ

ಅಹಿಂದ ಮತಗಳನ್ನು ಕಳೆಯಲು ಪ್ರಯತ್ನಿಸುತ್ತಿದೆ ಅದೇ ರೀತಿ ಭಾರತೀಯ ಜನತಾ ಪಾರ್ಟಿ ಸ್ಥಾಪನೆಯಾಗಿ ೪೩ ವರ್ಷಗಳು ಕಳೆದಿವೆ ಅದು ಸಾಂಪ್ರದಾಯಿಕ ವಿಷಯಗಳಾದ ಹಿಂದೂಯಿಸಂ ಏಕರೂಪ ನಾಗರೀಕ ಸಂಹಿತೆ, ಗೋಹತ್ಯೆ ಇಂತಹ ವಿಚಾರಗಳು ಇಂದು ಮುನ್ನಾಲೆಗೆ ಬರುತ್ತಿವೆ, ಇಲ್ಲಿ ನಾವು ಮುಖ್ಯವಾಗಿ ಗಮನಿಸುವಂತಹ ವಿಚಾರವೇನೆಂದರೆ ಎರಡು ಪಕ್ಷಗಳ ಉದ್ದೇಶ ಒಂದೇ ಆಗಿದೆ ಅದು ಅಧಿಕಾರ ಪಡೆಯುವುದು, ಅದರ ಮಾರ್ಗಗಳು ಬೇರೆಯಾಗಿವೆ ಅದು ಒಂದು ಪಶ್ಚಿಮದ ವಿಚಾರಗಳಿಗೆ ಪ್ರಾಮುಖ್ಯತೆ ನೀಡಿದರೆ ಇನ್ನೊಂದು ರಾಷ್ಟ್ರೀಯ ವಿಚಾರಗಳಿಗೆ ಮನ್ನಣೆ ನೀಡುತ್ತೆ ಯಾವುದೇ ರಾಜಕೀಯ ಪಕ್ಷ ನಿರ್ದಿಷ್ಟವಾದ ಐಡಿಯಾಲಜಿಗೆ ಒಳಪಟ್ಟಾಗ ಅಂತಹ ರಾಜ್ಯಗಳಲ್ಲಿ ಸಾಕಷ್ಟು ಪ್ರಗತಿ ಹೊಂದಲು ಅಸಾಧ್ಯವಾಗುತ್ತದೆ. ರಾಜಕೀಯ ಪಕ್ಷಗಳು ಸಮಕಾಲೀನ ದಿನಮಾನಗಳಲ್ಲಿ ಅತೀ ಸೂಕ್ಷ್ಮ ವಿಚಾರಗಳನ್ನು ರಾಜಕೀಕರಣಗೊಳಿಸಿ ಆ ಮುಖೇನ ಜನಾಭಿಪ್ರಾಯ ಮೂಡಿಸಿ ಅದನ್ನು ಮತ ಬ್ಯಾಂಕ್ ಆಗಿ ಪರಿವರ್ತನೆ ಮಾಡಲು ಹವಣಿಸುತ್ತಿವೆ. ಐಡಿಯಾಲಜಿ ಇದು ಬದಲಾವಣೆ ಆಗಲು ಸಾಧ್ಯವಿಲ್ಲ.ಆದ್ದರಿಂದ ಐದು ವರ್ಷಕ್ಕೊಮ್ಮೆ ಬರುವ ಮತದಾನದ ಹಬ್ಬದಲ್ಲಿ ಇಂದಿನ ಮತದಾರ ಪ್ರಜೆಗಳಾದ ನಾವು ನಮ್ಮ ಶ್ರೇಷ್ಠವಾದ ಅಧಿಕಾರವನ್ನು ಯಾವುದೇ ಪ್ರಲೋಬನೆಗಳಿಗೆ ಒಳಗಾಗದೆ ಉತ್ತಮವಾದ ಸರ್ಕಾರವನ್ನು ಆಯ್ಕೆ ಮಾಡಬೇಕು.ಆ ಸರ್ಕಾರವು ಐಡಿಯಾಲಜಿಗಿಂತ ಅಭಿವೃದ್ಧಿ ಹಾಗೂ ಉತ್ತಮ ಸಮಾಜ ನಿರ್ಮಾಣ ಮಾಡುವ ಆಶಯವನ್ನು ಹೊಂದಿರಬೇಕು.

**ಉಪಸಂಹಾರ**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು ಇರುವುದೇ ಜನಸಾಮಾನ್ಯರ ಮೇಲೆ ಆಳ್ವಿಕೆ ನಡೆಸಲು ಪ್ರಸ್ತುತ ದಿನಮಾನಗಲ್ಲಿ ರಾಜಕೀಯ ಪಕ್ಷಗಳು ನಾಯಿಕೊಡೆಯಂತೆ ತಲೆ ಎತ್ತಿವೆ ಒಂದು ನಿರ್ದಿಷ್ಟವಾದ ಅಜೆಂಡಾದ ಮುಖಾಂತರ ರಾಜಕೀಯ ಪಕ್ಷಗಳು ಜನರ ಮುಂದೆ ಬರುತ್ತವೆ ತಮ್ಮ ಪ್ರಣಾಳಿಕೆ ಪ್ರಚಾರ, ತಂತ್ರಗಾರಿಕೆ ಮುಖೇನ ಜನರನ್ನು ಆಕರ್ಷಿಸುತ್ತವೆ. ನಾವೆಲ್ಲರೂ ಇಂದು ನಮ್ಮ ನಿಜವಾದ ಕರ್ತವ್ಯವನ್ನು ಮರೆತಿದ್ದೇವೆ ಏಕೆಂದರೆ ಸಮಕಾಲೀನ ದಿನಮಾನಗಳಲ್ಲಿ ಗಾಂಧೀಜಿ ಅವರು ಚುನಾವಣೆಗೆ ಸ್ಪರ್ಧೆ ಮಾಡಿದರೆ ಸೋಲುತ್ತಾರೆ ಇದರರ್ಥ ಇಂದು ಚುನಾವಣೆಗಳು ಅಂದರೆ ಹಣ, ಹೆಂಡ, ತೋಳ್ಬಲ, ಜಾತಿ, ಧರ್ಮ ಇವುಗಳನ್ನು ಆಧರಿಸಿ ಮತದಾನ ನಡೆಯಿತ್ತಿದೆ ಇದು ಬದಲಾಗಬೇಕು.ಚುನಾವಣಾ ಆಯೋಗನ್ಯಾಯೋಚಿತ, ನಿಷ್ಪಕ್ಷಪಾತ, ಪಾರದರ್ಶಕ ಚುನಾವಣೆಗಳನ್ನು ನಡೆಸುತ್ತಿದೆ, ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದರೆ, ಮೊದಲು ಮತದಾರನ ಮನಃ ಪರಿವರ್ತನೆಯಾಗಬೇಕು, ಆ ಮೂಲಕ ನಿಜವಾದ ಪ್ರಜಾಪ್ರಭುತ್ವ ಹೊಂದಲು ಸಾಧ್ಯವಾಗುತ್ತದೆ.

**ಆಧಾರಗ್ರಂಥಗಳು**

೧. ಎಂ.ಲಕ್ಷ್ಮೀಕಾಂತ, ೨೦೧೮ ಇಂಡಿಯನ್ ಪೊಲಿಟಿ, ಎಂ.ಸಿ ಗ್ರಾಹಿಲ್ ಎಜುಕೇಶನ್ ಇಂಡಿಯಾ ಪ್ರೈ.ಲಿ. ತಮಿಳುನಾಡು.
೨. ಕೆ.ಎನ್. ಅಶ್ವತ್ಥಪ್ಪ, ೨೦೧೬, ಸಮಗ್ರ ಭಾರತದ ಇತಿಹಾಸ ಸುಭಾಷ್ ಸ್ಟೋರ್ಸ್, ಬೆಂಗಳೂರು.
೩. ಮೇರುನಂದನ್ ಕೆ.ಬಿ., ೨೦೧೬, ಭಾತರದ ಸಂವಿಧಾನ ಮೆರುಗು ಪ್ರಕಾಶನ, ಬೆಂಗಳೂರು.
೪. ಎ. ಅಪ್ಪಾದೊರೈ, ೨೦೧೦, ಸಬ್‌ಸ್ಟೆನ್ಸ್ ಆಫ್ ಪೊಲಿಟಿಕ್, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಡಲ್ಲಿ.
೫. ಪ್ರೊ. ಎನ್.ಹಾಲಪ್ಪ, ೨೦೧೯, ರಾಜ್ಯಶಾಸ್ತ್ರ, ಉನ್ನತಿ ಪ್ರಕಾಶನ, ಬೆಂಗಳೂರು.
೬. ಡಾ. ಕೆ.ಎಂ. ಸುರೇಶ್ ೨೦೨೦, ಭಾರತದ ಸಂವಿಧಾನ, ವಸಂತ ಪ್ರಕಾಶನ, ಬೆಂಗಳೂರು.
೭. ಡಬ್ಲ್ಯೂಡಬ್ಲ್ಯೂಡಬ್ಲ್ಯೂ.ಅಂತರ್‌ಜಾಲ ಹುಡುಕಾಟ.
೮. ಪತ್ರಿಕೆಗಳು.

# ಹುಕ್ಕೇರಿಕರ್ ಮೇಲೆ ತಿಲಕರ ವಿಚಾರಧಾರೆಗಳ ಪ್ರಭಾವ

**ಸಂಶೋಧನಾ ವಿಧ್ಯಾರ್ಥಿ**
**ಮಾಲತೇಶ ಮಾಚೇನಹಳ್ಳಿ**
**ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
**ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ.**
**ದಾವಣಗೆರೆ– ೫೭೭೦೦೭**

**ಪಿಠಿಕೆ:** ಈ ಕಾಲಾವದಿಯಲ್ಲಿ ಜನತೆಗೆ ಅದ್ಬುತ ಜಾಗೃತಿಯನ್ನುಂಟು ಮಾಡಿದವರಲ್ಲಿ ಲೋಕಮಾನ್ಯ ತಿಲಕರು ಅವರು ನಂತರ ಮಹಾತ್ಮಾಗಾಂಧಿ ಎಂದು ಹೇಳುವುದು . ಈ ಲೋಕೊತ್ತರ ಪುರುಷರ ಪ್ರಭಾವಕ್ಕೆ ಒಳಗಾಗಿ ದೇಶಾಭಿಮಾನ ಪೂರಿತವಾಗಿ ಮಾತೃಭೂಮಿಯ ಲೋಕೊದ್ಧಾರಕ್ಕಾಗಿ ಸರ್ವಸ್ವವನ್ನೆ ತ್ಯಾಗಮಾಡಿ ಶ್ರಮಿಕರ ದೇಶಭಕ್ತರಲ್ಲಿ ಕರ್ನಾಟಕದ ವರಪುತ್ರರು ಅನೇಕರಿದ್ದಾರೆ. ಅವರಲ್ಲಿ ಹುಕ್ಕೇರಿಕರ್ ಪ್ರಮುಖರಾಗಿದ್ದಾರೆ.

**ಜೀವನ ಮತ್ತು ಆರಂಭಿಕ ಶಿಕ್ಷಣ:**

ಇವರ ಪೂರ್ಣ ಹೆಸರು ಶ್ರೀ ರಾಮರಾವ್ ಶ್ರೀನಿವಾಸರಾವ್ ಹುಕ್ಕೇರಿಕರ್ ಇವರು ೨೨–೧೦–೧೮೮೬ ರಂದು ಚಂಚಲಿಯ ರಾಯಭಾಗ ತಾಲೂಕ ಬೆಳಗಾವಿ ಜಿಲ್ಲೆಯಲ್ಲಿ ಜನಿಸಿದರು. ಇದು ಮೊದಲು ಕೊಲ್ಲಾಪುರ ಸಂಸ್ಥಾನದಲ್ಲಿದ್ದ ಗ್ರಾಮವಾಗಿತ್ತು. ಬಡತನದ ಅಂಚಿನಲ್ಲಿದ್ದ ಒಂದು ಸಾಮಾನ್ಯ ಕುಟುಂಬದಲ್ಲಿ ಜನಿಸಿದರು.

ಚಿಂಚಲಿಯ ಮರಾಠಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದರು. ಮಾಧ್ಯಮಿಕ ಶಿಕ್ಷಣವನ್ನು ಶಹಪೂರ ಮತ್ತು ಬೆಳಗಾವಿಯಲ್ಲಿ ಮುಗಿಸಿದರು. ಉಚ್ಚ ಶಿಕ್ಷಣವನ್ನು ಪುಣೆಯ ಪರ್ಗ್ಯೂಸನ್ ಕಾಲೇಜಿನಲ್ಲಿ ಬಿ ಎ ಪದವಿಯನ್ನು ೧೯೧೦ ರಲ್ಲಿ ಪಡೆದರು. ಹಾಗು ಮುಂಬೈ ವಿಶ್ವವಿಧ್ಯಾಲಯದಲ್ಲಿ ಎಂ ಎ ಪದವಿಯನ್ನು ೧೯೧೨ ರಲ್ಲಿ ಮುಗಿಸಿದರು.

**ಲೋಕಮಾನ್ಯರ ನೆರವು:**

ಹುಕ್ಕೇರಿಕರ್ ಶಿಕ್ಷಣದ ಬಗ್ಗೆ ತುಂಬಾ ಆಸಕ್ತಿ ಹೊಂದಿದ್ದರು ಇದಕ್ಕೆ 'ಕಾಕಾ ಕಾಲೇಕರಂಥವರು' ಉಚ್ಚ ಶಿಕ್ಷಣದ ಬಗ್ಗೆ ಹೇಳಿದ ಮಾತುಗಳೇ ಸ್ಪೂರ್ತಿದಾಯಕವಾಗಿದ್ದವು. ಆದರೆ ಉಚ್ಚ ಶಿಕ್ಷಣಕ್ಕಾಗಿ ಕಾಲೇಜು ಸೇರುವುದು ಹೇಗೆ ಎಂಬ ವಿಚಾರ ಹೊಳಿಯಿತು. ಆಗ ಇವನ ಹಿರಿಯ ಅಣ್ಣ ಮಹಾರಾಜರ ಕಾರಕೂನನಾಗಿದ್ದ. ಆತನಿಗೆ ತಿಲಕರ ಅಲ್ಪ ಸ್ವಲ್ಪ ಪರಿಚಯವಿತ್ತು. ಆಗ ಅವರಿಂದ ತಿಲಕರಿಗೆ ಪರಿಚಯ ಪತ್ರ ಒಯ್ಯಬೇಕೆಂದು ನಿರ್ಧರಿಸಿದ ಆದರೆ ಲೋಕಮಾನ್ಯರಂತಹ ಲೋಕನಾಯಕರ ಹತ್ತಿರ ಹೋಗುವರು ಯಾರು ? ಅವರು ಹಿಮಾಲಯ ಪರ್ವತವಿದ್ದ ಹಾಗೆ ಎಂಬ ಆತಂಕಗಳು ಮೂಡಿದವು ಕೊನೆಗೆ ಇವರ ತೀವ್ರವಾದ ಆಸೆಯನ್ನು ಯಾರೋ ಒಬ್ಬರು ಲೋಕಮಾನ್ಯರ ಹತ್ತಿರ ಹೇಳಿದರು . ಇದನ್ನು ಕೇಳಿಕೊಂಡು ಮೆಚ್ಚಿದ ತಿಲಕರು ತಾವು ಸಹಾಯ ಮಾಡುವುದಾಗಿ ವಚನವಿತ್ತರು. ಮುಂದೆ ಆ ತರುಣನ ಕಾಲೇಜಿನ ಪ್ರಥಮ ವರ್ಷದ ಪ್ರವೇಶ ಹಣವನ್ನು ಸ್ವತಃ ತಿಲಕರೇ ಕೊಟ್ಟರು.[೧]

ಇಷ್ಟು ಪರಿಶ್ರಮ ಪಟ್ಟು ವಿದ್ಯೆ ಪಡೆದು ಮುಂದೆ ಅದೇ ಕ್ಷೇತ್ರಕ್ಕೆ ತನ್ನ ಆಯುಷ್ಯವನ್ನೆ ಮುಡುಪಾಗಿಟ್ಟ ಯುವಕರೇ 'ಶ್ರೀನಿವಾಸರಾವ್ ಹುಕ್ಕೇರಿಕರ್ ' ಅವರು.

**ಲೋಕಮಾನ್ಯ ತಿಲಕರ ಪ್ರಭಾವ:**

ಲೋಕಮಾನ್ಯ ತಿಲಕರ 'ಕೇಸರಿ" ಪತ್ರಿಕೆಯನ್ನು ಕಾಲೇಜ್ ವಿದ್ಯಾರ್ಥಿಯಾಗಿದ್ದ ಹುಕ್ಕೇರಿಕರ್ ಭಗವದ್ಗೀತೆಯನ್ನು ಓದುವಂತೆ ಓದುತ್ತಿದ್ದರು.[೨] ತಿಲಕರ ವಿಚಾರಧಾರೆಗಳು ಹುಕ್ಕೇರಿಕರ್ ಅವರ ನರ ನಾಡಿಯಲ್ಲಿ ರಕ್ತವಾಗಿ ಹರಿಯಿತು. ಅವರ ಲೇಖನಗಳು ಬಿಟ್ರಿಷರು ದರ್ಪವನ್ನು ನಡುಗಿಸಿ ಬಿಡುತ್ತಿದ್ದವು. ಇದರಿಂದ ಹುಕ್ಕೇರಿಕರ್ ತನ್ನ ನಾಳಿನ ದೇಶ ಸೇವಾ ಕ್ಷೇತ್ರದ ಸ್ವರೂಪವು ಕಣ್ಮುಂದೆ ಚಿತ್ರಿತಗೊಳ್ಳುತ್ತಿತ್ತು. ತಾನು ಇಂತಹದೇ ಒಂದು ಪತ್ರಿಕೆಯನ್ನು ಹೊರಡಿಸಬೇಕೆಂದು ಸಂಕಲ್ಪಿಸಿದ. ತಾನು ರಾಷ್ಟ್ರೀಯ ಸೇವಾ ಪ್ರವೃತ್ತನಾಗಬೇಕಾದರೆ ಪತ್ರಿಕೋಧ್ಯಮ , ಶಿಕ್ಷಣ, ಕೈಕೊಳ್ಳಬೇಕೆಂದು ನಿಶ್ಚಯಿಸಿದ.

ಲೋಕಮಾನ್ಯರು ಹುಕ್ಕೇರಿಕರ್‌ಗೆ ರಾಷ್ಟ್ರೀಯ ಸೇವೆ ಸ್ವಾತಂತ್ರ್ಯ ಹೋರಾಟದ ಗುರಿಯುಳ್ಳ ತರುಣರು ಶಿಕ್ಷಣ , ಪತ್ರಿಕೋದ್ಯಮ ವಕೀಲ ವೃತ್ತಿಯನ್ನು ಆಯ್ದುಕೊಳ್ಳುವುದು ಅನುಕೂಲವೆಂದು ಭೊದಿಸಿದ್ದರಷ್ಟೆ ನಂತರ ಸ್ವಾತಂತ್ರ್ಯ ಹೋರಾಟಗಾರರಾಗಿ ಶಿಕ್ಷಣ ಕ್ಷೇತ್ರದ ತರುವಾಯ ಪತ್ರಿಕೊಧ್ಯಮ ಕ್ಷೇತ್ರದಲ್ಲಿ ಸ್ಮರಣಿಯ ಸೇವೆ ಸಲ್ಲಿಸುದುದಲ್ಲದೆ ಐತಿಹಾಸಿಕ ಘಟನೆಗಳಲ್ಲಿ ನಿಜವಾದ ಹೋರಾಟಗಾರನ ಧೈರ್ಯ ಕೆಚ್ಚುಗಳನ್ನು ಮರೆಯುವಂತಿಲ್ಲ.

ಲೋಕಮಾನ್ಯರ ವಿಚಾರಧಾರೆಗಳು ಹುಕ್ಕೇರಿಕರ್ ಮೇಲೆ ನೇರವಾಗಿ ಪ್ರಭಾವಬಿರಿದವು. ಸ್ವಾಭಿಮಾನ ದೇಶಾಭಿಮಾನ ಶೈಕ್ಷಣಿಕ ಕ್ಷೇತ್ರದಲ್ಲಿನ ಆಸಕ್ತಿ, ಸ್ವದೇಶಿ ಪ್ರಚಾರ ಇವುಗಳನ್ನು ಹೊತ್ತುಕೊಂಡು ಅವರ ಮಹಾರಾಷ್ಟ್ರದಿಂದ ಕರ್ನಾಟಕ್ಕೆ ಬಂದು ಧಾರವಾಡವನ್ನು ತಮ್ಮ ಕಾರ್ಯಕ್ಷೇತ್ರದ ಕೇಂದ್ರ ಬಿಂದುವನ್ನಾಗಿ ಮಾಡಿಕೊಂಡರು.

**ಪತ್ರಿಕಾರಂಗ:**

ಆಗಿನ ಕಾಲದ ರಾಷ್ಟ್ರೀಯ ಚಳುವಳಿಯ ಮೇಲೆ ಲೋಕಮಾನ್ಯ ತಿಲಕರ ಪ್ರಭಾವ ಆಳವಾದದಾಗಿತ್ತು. ಅವರ **'ಕೇಸರಿ'** ಮತ್ತು **'ಮರಾಠ'** ಪತ್ರಿಕೆಗಳ ಜನರ ಮೇಲೆ ಮೋಡಿಯ್ನನ್ನೆ ಮಾಡಿದ್ದವು. ರಾಷ್ಟ್ರೀಯ ಜಾಗೃತಿಯಲ್ಲಿ ಆ ಪತ್ರಿಕೆಗಳು ವಹಿಸುತ್ತಿದ್ದ ಪಾತ್ರವನ್ನು ಕಂಡು ಎಲ್ಲರು ದಂಗು ಬಡೆದಿದ್ದರು. ಆದ್ದರಿಂದ ತಮ್ಮ ತಮ್ಮ ಭಾಷೆಯಲ್ಲಿ ಅಂತಹ ಪತ್ರಿಕೆಗಳನ್ನು ಹೊರಡಿಸಬೇಕೆಂದು ಎಲ್ಲಾ ರಾಜಕೀಯ ನಾಯಕರು ಹಂಬಲಿಸಿತ್ತಿದ್ದರು. ತನ್ಮೂಲಕ ರಾಷ್ಟ್ರೀಯ ಚಳುವಳಿಯ ವೇಗವನ್ನು ಹೆಚ್ಚಿಸಲು ತವಕಗೊಂಡಿದ್ದರು.

ಅದರಂತೆಯೆ ಹುಕ್ಕೇರಿಕರ್ – ದಿವಾಕರ್ ಇವರಿಬ್ಬರು ಜೊತೆಗೂಡಿ ಇಂಗ್ಲಿಷ್ ವಾರ ಪತ್ರಿಕೆಯೊಂದನ್ನು ತರಲು ಯೋಚಿಸಿದರು . ಇದು ಇವರಿಬ್ಬರ ಕನಸಿನ **'ನವಶಕ್ತಿ'** ಅಲ್ಲದೆ ಉತ್ತರ ಕರ್ನಾತಕದ ಮೊದಲ ವಾರ ಇಂಗ್ಲಿಷ್ ವಾರ ಪತ್ರಿಕೆಯಾಗಿ ೧೯೨೩ ಅಗಸ್ಟ ೧ ರಂದು ಪ್ರಾರಂಭವಾಯಿತು.[೪] ದಿವಾಕರ್ ಮೊದಲ ಸಂಪಾದಕರಾದರು . ಆದರೆ ಅವರು ಕೆಲವೇ ತಿಂಗಳಲ್ಲಿ ಜೈಲಿಗೆ ಹೊದುದರಿಂದ ಹುಕ್ಕೇರಿಕರ್ ಅವರೆ ಅದರ ಎಲ್ಲ ಹೊಣೆಗಾರಿಕೆಯನ್ನು ನೋಡಿಕೊಳ್ಳಬೇಕಾಯಿತು.

ರಾಷ್ಟ್ರೀಯ ಜಾಗೃತಿಯೊಡನೆ ಸಮಾಜದ ಉನ್ನತಿಗಾಗಿ ಅವರು ತಮ್ಮ ಕಾರ್ಯಕ್ಷೇತ್ರವನ್ನು ಆರ್ಥಿಕ ಮತ್ತು ಸಮಾಜದ ವೈಜ್ಞಾನಿಕ ವಿಷಯಗಳಲ್ಲಿ ಜನರಿಗೆ ತಿಳುವಳಿಕೆ ಮೂಡಿಸುವುದು ಅಗತ್ಯವೆಂದು ಅವರು " **ಧನಂಜಯ** " ಎಂಬ ಕನ್ನಡ ಮಾಸ ಪತ್ರಿಕೆಯೊಂದನ್ನ ಆರಂಭಿಸಿದರು.[೫] ಅದು ವ್ಯಾಪಾರ, ವಾಣಿಜ್ಯ ಹಣಕಾಸಿನ ವಿಚಾರಗಳಿಗೆ ಸಿಮಿತವಾಗಿತ್ತು.

೧೯೩೭ ರಲ್ಲಿ ' **ಯುನೈಟೆಡ್ ಕರ್ನಾಟಕ** ' ಎಂಬ ಇಂಗ್ಲಿಷ ಪತ್ರಿಕೆಯೊಂದನ್ನ ಪ್ರಾರಂಭಿಸಿದರು. ಇದು ಸುದ್ದಿ ಸಮಾಚಾರಗಳನ್ನು ಬೇರೆ ಭಾಷಿಕರಿಗೆ ಮುಟ್ಟಿಸುವ ದ್ಯೇಯವನ್ನು ಹೊಂದಿತ್ತು.

**ಶೈಕ್ಷಣಿಕ ರಂಗ :**

**ಶಿಕ್ಷಣದ ಬಗ್ಗೆ ಅಭಿಪ್ರಾಯ :**

ಹುಕ್ಕೇರಿಕರ್ ಶಿಕ್ಷಣದ ಕಡೆಗೆ ಅವರು ನೋಡುವ ದೃಷ್ಠಿಯು ತುಂಬಾ ವಿಶಾಲವಾದುದು ಅವರ ಪ್ರಕಾರ ಶಿಕ್ಷಣ ಕೇವಲ ಪಠ್ಯಪುಸ್ತಕಗಳ ಪರೀಕ್ಷೆಗಳ ಸಂಕುಚಿತವಾದ ದೃಷ್ಠಿಯಲ್ಲ.

ಶಿಕ್ಷಣ ಮುಗಿಸಿದ ವ್ಯಕ್ತಿಯು ಕೇವಲ ಪದವಿಯನ್ನು ಪಡೆದವನಾಗಿರದೆ ದೇಶದ ಸಮಸ್ಯೆಗಳನ್ನು ಪೂರ್ಣವಾಗಿ ಅರಿತವನಾಗಿರಬೇಕು ಹಾಗು ಆ ಸಮಸ್ಯೆಗಳನ್ನು ಪರಿಹರಿಸುವಲ್ಲಿ ತನ್ನ ಪಾಲಿನ ಕರ್ತವ್ಯವನ್ನು ಮಾಡಲು ಸಿದ್ಧನಾಗಿರಬೇಕು ಎನ್ನುವ ದೃಷ್ಠಿ ಅವರದು.

ರಾಷ್ಟ್ರೀಯ ಪ್ರಜ್ಞೆಯು ಅವರ ಅಭಿಪ್ರಾಯವನ್ನು ಪರಿಗಣಿಸಿದಾಗ ಅದು ಒಂದು ಅವಿಬಾಜ್ಯ ಅಂಗವಾಗಿದ್ದು ಭಾರತದ ಪಂಚವಾರ್ಷಿಕ ಯೊಜನೆ ಇತ್ಯಾದಿ ವಿಷಯಗಳನ್ನು ವಿದ್ಯಾರ್ಥಿಗಳ ಹಾಗು ಪ್ರಾಧ್ಯಾಪಕರ ಗಮನ ಸೆಳೆಯಬೆಕೇಂದು ಬಯಸುತ್ತಾರೆ. ವಿದ್ಯಾರ್ಥಿ ದೆಸೆಯಿಂದಲೇ ವಿಶಾಲಾರ್ಥದಲ್ಲಿ ಶಿಕ್ಷಣ ನೀಡುವುದು ಅವಶ್ಯಕ ಎಂಬುದು ಅಭಿಪ್ರಾಯವಾಗಿದೆ.

ಲೋಕಮಾನ್ಯ ತಿಲಕರ ಉಪದೇಶದಂತೆ ಹುಕ್ಕೇರಿಕರ್ ಸೇವೆಗಾಗಿ ಶಿಕ್ಷಣ ಕ್ಷೇತ್ರವನ್ನೆ ಆಯ್ಕೆಮಾಡಿಕೊಂಡರು. ಶಿಕ್ಷಣವೇ ಪ್ರಗತಿಯ ಮೂಲವೆಂದು ಅವರ ನಂಬಿಕೆಯಾಗಿತ್ತು.

ಪುಣೆಯ ಡೆಕ್ಕನ್ ಎಜ್ಯುಕೇಶನ್ ಸೊಸೈಟಿಯಂತಹ ಒಂದು ಶಿಕ್ಷಣ ಸಂಸ್ಥೆ ಒಂದು ಮಹಾವಿದ್ಯಾಲಯವನ್ನು ಧಾರವಾಡದಲ್ಲಿ ಸ್ಥಾಪಿಸಬೇಕೆಂಬ ಸಂಕಲ್ಪ ಮಾಡಿದರು.

ಆಲೂರು ವೆಂಕಟರಾಯರ ಮಧ್ಯಸ್ಥಿಕೆಯಿಂದ ಪುಣೆಯಲ್ಲಿದ್ದ ಕನ್ನಡ ಮಿತ್ರರಾದ ದೇಶಪಾಂಡೆ, ಬಳವಂತರಾವ್ ದಾತಾರಾ, ರಣಗರಾವ್ ಅಸುಂಡಿ ಕೂಡಿಕೊಂಡು ೧೯೨೦ ಜೂನ್ ತಿಂಗಳಲ್ಲಿ **ವಿಕ್ಟೋರಿಯಾ ಕಾಲೇಜ್** ಅಸ್ಥಿತ್ವಕ್ಕೆ ಬಂತು ಮುಂದೆ ಕರ್ನಾಟಕ ಎಜ್ಯುಕೇಶನ್ ಸೊಸೈಟಿಯೊಂದು ಪ್ರಸಿದ್ದಿಯಾಯಿತು.[೬] ಸ್ವತಃ ಹುಕ್ಕೇರಿಕರ್ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು ೧೯೪೪ ರಲ್ಲಿ ಕರ್ನಾಟಕ ಏಜ್ಯುಕೇಶನ ಬೋರ್ಡಿನವರು ಡಾ. ಬಿ. ಎನ್. ಕಬ್ಬೂರ್ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದ ಕಾಲೇಜಿನ ಅಧ್ಯಕ್ಷತೆಯನ್ನು ಹುಕ್ಕೇರಿಕರಗೆ ವಹಿಸಿಕೊಟ್ಟರು ಆಗ ಅವರು ಮುಂಬೈ ರಾಜ್ಯದ ವಿಧಾನ ಪರಿಷತ್ತಿನ ಸಭಾಪತಿಗಳಾದರು ಮುಂದೆ ಕಾಲೇಜಿನ ಆಡಳಿತಕ್ಕಾಗಿಯೆ ಪ್ರತ್ಯೇಕವಾದ ಏರ್ಪಾಟವಾಗಬೇಕೆಂದು ಅಭಿಪ್ರಾಯವಾದಾಗ ಅಧ್ಯಕ್ಷತೆಯಿಂದ ಹಿಂದೆ ಸರಿದು ನಂತರ ೧೯೫೪ ರಲ್ಲಿ " **ಜನತಾ ಶಿಕ್ಷಣ ಸಮಿತಿ** " ಎಂಬ ಹೊಸ ಸಂಸ್ಥೆಯನ್ನು ಹುಕ್ಕೇರಿಕರ್ ಸ್ಥಾಪಿಸಿದರು.[೭]

ಜನತಾ ಶಿಕ್ಷಣ ಸಮಿತಿ ಎಂದರೆ ಶ್ರೀ ಹುಕ್ಕೇರಿಕರ್, ಹುಕ್ಕೇರಿಕರ್ ಎಂದರೆ ಜನತಾ ಶಿಕ್ಷಣ ಸಮಿತಿ ಎಂದು ಹೇಳುವಷ್ಟು ಅನ್ಯೋನ್ಯವಾಗಿ ಅವರು ಕೆಲಸ ಮಾಡಿದರು . ಈ ಸಂಸ್ಥೆಯ ಆಶ್ರಯದಲ್ಲಿ ಸೈನ್ಸ್ ಕಾಲೇಜು, ಲಾ ಕಾಲೇಜು, ತಾಂತ್ರಿಕ ಶಿಕ್ಷಣ

ಸಂಸ್ಥೆ, ಅರ್ಥಶಾಸ್ತ್ರ ಸಂಶೋಧನಾ ಸಂಸ್ಥೆ, ಕುಶಲ ಕೈಗಾರಿಕಾ ಸಂಸ್ಥೆ ಹೀಗೆ ಮುಂತಾದ ಸಂಸ್ಥೆಗಳು ಮೈಲಾರಲಿಂಗನ ಗುಡ್ಡದ ಮೇಲೆ ಹಮ್ಮಿಕೊಂಡರು. ಹುಕ್ಕೇರಿಕರ್ ಒಬ್ಬ ವ್ಯಕ್ತಿಯಲ್ಲ ಒಂದು ಸಂಸ್ಥೆ ಎಂಬುದಕ್ಕೆ ಇದು ನಿದರ್ಶನವಾಗಿದೆ.

ಅಂದಿನ ಮೈಲಾರಲಿಂಗನ ಗುಡ್ಡವನ್ನೆ ಈಗಿನ ವಿದ್ಯಾಗಿರಿಯಾಗಿ ಪರಿವರ್ತಿಸಿ ಅದೊಂದು ವಿದ್ಯಾಸಂಸ್ಥೆಗಳ ಸಂಕೀರ್ಣವನ್ನಾಗಿ ಬೆಳೆಯಿಸಿದರು . ಇದು ಅದೇ ವಿದ್ಯಾಗಿರಿ ಜ್ಞಾನ ವಿಜ್ಞಾನಗಳ ದೀಪಸ್ತಂಭವಾಗಿ ಧಾರವಾಡಕ್ಕೆಷ್ಟೆ ಅಲ್ಲ ಕರ್ನಾಟಕಕ್ಕೆ ಹೆಮ್ಮೆಯ ಅಶ್ವತ್ಥಮರವಾಗಿ ಬೆಳೆದು ಪ್ರವರ್ಧಮಾನವಾಗಿದೆ.

## ಸಕೊನೆ ಟಿಪ್ಪಣಿಗಳು :

೧. ಎಚ್.ವಿ. ನಾಗೇಶ್ ಸಂಪಾದಕರು, "ಹುಕ್ಕೇರಿಕರ ಸ್ಮರಣೆ",೧೯೮೬ ಮನೋಹರ ಮುದ್ರಣಾಲಯ ಧಾರವಾಡ, ಲೇಖನ: ಸೋಲರಿಯದ ಶ್ರೀ ಹುಕ್ಕೇರಿಕರ, ಲೇಖಕರು–ರಾ ಯ ಧಾರವಾಡಕರ. ಪು. ೮೩

೨. ಎಚ್.ವಿ. ನಾಗೇಶ್ (ಸಂಪಾದಕರು), "ಹುಕ್ಕೇರಿಕರ ಸ್ಮರಣೆ",೧೯೮೬ ಮನೋಹರ ಮುದ್ರಣಾಲಯ ಧಾರವಾಡ, ಲೇಖನ: ಹಿರಿಯ ಹೋರಾಟಗಾರ ಹುಕ್ಕೇರಿಕರ, ಲೇಖಕರು– ಎನ್ಕೆ. ಪು ೧೧

೩ ಆಲೂರು ವೆಂಕಟರಾಯರು " ನನ್ನ ಜೀವನ ಸ್ಮೃತಿಗಳು" ೧೯೪೧, ಜಯಪ್ರಕಾಶ ಮುದ್ರಣಾಲಯ ಧಾರವಾಡ, ಪು ೧೦೯

೪ ಎಚ್.ವಿ. ನಾಗೇಶ್ (ಸಂಪಾದಕರು), "ಹುಕ್ಕೇರಿಕರ ಸ್ಮರಣೆ",೧೯೮೬ ಮನೋಹರ ಮುದ್ರಣಾಲಯ ಧಾರವಾಡ, ಲೇಖನ: "ಧ್ಯೇಯವಾದಿ ಪತ್ರಕರ್ತ" ಲೇಖಕರು– ಸುರೇಂದ್ರ ದಾನಿ ಪು ೬೭

೫ ಎಚ್.ವಿ. ನಾಗೇಶ್ (ಸಂಪಾದಕರು), "ಹುಕ್ಕೇರಿಕರ ಸ್ಮರಣೆ",೧೯೮೬ ಮನೋಹರ ಮುದ್ರಣಾಲಯ ಧಾರವಾಡ, ಲೇಖನ: "ನಾನು ಕಂಡಂತೆ ಹುಕ್ಕೇರಿಕರ್" ಲೇಖಕರು– ಶಂ ಬಾ ಮನಗೋಳಿ. ಪು ೧೦೬

೬ ಆಲೂರು ವೆಂಕಟರಾಯರು " ನನ್ನ ಜೀವನ ಸ್ಮೃತಿಗಳು" ೧೯೪೧, ಜಯಪ್ರಕಾಶ ಮುದ್ರಣಾಲಯ ಧಾರವಾಡ, ಪು ೨೧೫

# ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧ ಮತ್ತು ಸಮಕಾಲೀನ ಬಿಕ್ಕಟ್ಟುಗಳು

**ಸಂಶೋಧನಾ ವಿಧ್ಯಾರ್ಥಿ**
**ಲಕ್ಷ್ಮಿದೇವಿ. ಇ**
**ರಾಜ್ಯಶಾಸ್ತ್ರ ಅಧ್ಯಯನ ವಿಭಾಗ**
**ದಾವಣಗೆರೆ ವಿಶ್ವವಿದ್ಯಾನಿಲಯ**
**ಶಿವಗಂಗೋತ್ರಿ, ದಾವಣಗೆರೆ –೫೭೭೦೦೭**

**ಮಾರ್ಗದರ್ಶಕರು:**
**ಡಾ. ನಾಗರಾಜು ಎನ್**
**ಎಂಎ,ಎಂಫಿಲ್, ,ಪಿಎಚ್‌ಡಿ ,ಪಿ.ಡಿ.ಎಫ್**
**ಸಹಾಯಕ ಪ್ರಾಧ್ಯಾಪಕರು**
**ರಾಜ್ಯಶಾಸ್ತ್ರ ಅಧ್ಯಯನ ವಿಭಾಗ**
**ದಾವಣಗೆರೆ ವಿಶ್ವವಿದ್ಯಾನಿಲಯ**
**ಶಿವಗಂಗೋತ್ರಿ ದಾವಣಗೆರೆ–೫೭೭೦೦೭೭**

**ಸಾರಾಂಶ:**

ಬಹುತ್ವದ ನೆಲೆಗಟ್ಟಿನ ಮೇಲೆ ರಚನೆಯಾಗಿರುವ ಭಾರತವು ಒಕ್ಕೂಟ ವ್ಯವಸ್ಥೆಯನ್ನು ಒಳಗೊಂಡಿರುವ ದೇಶವಾಗಿದೆ. ಒಕ್ಕೂಟ ವ್ಯವಸ್ಥೆಯ ಬಹುಮುಖ್ಯ ಅಂಶವೇನೆಂದರೆ ಕೇಂದ್ರ ಮತ್ತು ರಾಜ್ಯಗಳ ನಡುವಿನ ಉತ್ತಮ ಸಂಬಂಧಗಳು. ಪ್ರಜಾಪ್ರಭುತ್ವದ ತತ್ವವನ್ನು ಆಧಾರವಾಗಿಟ್ಟುಕೊಂಡು ಆಡಳಿತ ನಡೆಸುತ್ತಿರುವ ಭಾರತದಲ್ಲಿ ಬೃಹತ್ ಗಾತ್ರದ ಜನಸಂಖ್ಯೆಯನ್ನು ಹೊಂದಿರುವುದಲ್ಲದೆ, ವಿವಿಧತೆಯಲ್ಲಿ ಏಕತೆಯನ್ನು ಒಳಗೊಂಡಿದೆ. ಸಂವಿಧನಾತ್ಮಕ ಚೌಕಟ್ಟಿನಲ್ಲಿ ಒಕ್ಕೂಟದ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಪಾತ್ರ ಪ್ರಮುಖವಾದುದಗಿದೆ. ಆಡಳಿತಾತ್ಮಕವಾಗಿ, ಶಾಸನೀಯವಾಗಿ ಮತ್ತು ಹಣಕಾಸಿನ ವಿಚಾರಗಳಿಗೆ ಸಂಬಂಧಿಸಿದಂತೆ ಇರುವ ಸಂಬಂಧಗಳು ಉತ್ತಮವಾಗಿದ್ದಲ್ಲಿ ಆ ರಾಷ್ಟ್ರದ ಪ್ರಗತಿಯು ಸಮರ್ಪಕವಾಗಿ ಸಾಗಲು ಸಾಧ್ಯವಾಗುತ್ತದೆ. ಇಲ್ಲವದಲ್ಲಿ ಇವೆರಡರ ನಡುವಿನ ಗೊಂದಲಗಳು ಘರ್ಷಣೆಗಳಿಗೆ ಕಾರಣವಾಗುತ್ತದೆ. ಅಲ್ಲದೆ ಆಡಳಿತಾತ್ಮಕ ಸರ್ಕಾರಗಳಿಗೆ ಸವಾಲುಗಳಾಗಿ ಪರಿಣಮಿಸುತ್ತದೆ. ಪ್ರಸ್ತುತ ಭಾಷವಾರು ಪ್ರಾಂತ್ಯಗಳ ವಿಂಗಡಣೆಯಿಂದಾಗಿ ಉಂಟಾದ ಗಡಿ ಸಮಸ್ಯೆಗಳು ,ತ್ರಿಭಾಷಸೂತ್ರ, ಜಲ ವಿವಾದಗಳು, ರಾಜ್ಯಪಲರ ನೇಮಕಾತಿ, ಜಿಎಸ್ಟಿ ಯಂತಹ ಅಂಶಗಳು ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧಗಳಿಗೆ ಸಂಘರ್ಷಗಳನ್ನುಂಟುಮಾಡುತ್ತಿವೆ. ಪ್ರಸ್ತುತ ಲೇಖನವು ಕೇಂದ್ರ ಮತ್ತು ರಾಜ್ಯಗಳ ನಡುವಿನ ವೈರುದ್ಯಗಳಿಗೆ ಕಾರಣವಾಗಿರುವ ಮೂಲ ಅಂಶಗಳನ್ನು ಗುರುತಿಸುವುದರೊಂದಿಗೆ ಕೇಂದ್ರ ಮತ್ತು ರಾಜ್ಯಗಳ ನಡುವಿನ ಹೊಂದಾಣಿಕೆಯು ಅಷ್ಟೆ ಅಗತ್ಯವಾದುದು ಎಂಬುದನ್ನು ವಿಶ್ಲೇಷಿಸಲಾಗಿದೆ.

**ಉದ್ದೇಶಗಳು:**

೧.ಕೇಂದ್ರ ಮತ್ತು ರಾಜ್ಯಗಳ ನಡುವಿನ ಬಿಕ್ಕಟ್ಟುಗಳಿಗೆ ಕಾರಣವಾಗಿರುವ ಅಂಶಗಳನ್ನು ಗುರುತಿಸುವುದು.

೩.ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧಗಳನ್ನು ಸ್ಪಷ್ಟೀಕರಿಸುವುದು.

**ಪೀಠಿಕೆ:**

ಭಾರತ ಸಂವಿಧಾನದ ಭಾಗ ೧ರಲ್ಲಿ ಒಂದನೇ ವಿಧಿಯಿಂದ ನಾಲ್ಕನೇ ವಿಧಿವರೆಗೆ ಕೇಂದ್ರ ಮತ್ತು ಅದರ ಭೂಪ್ರದೇಶಗಳ ಬಗ್ಗೆ ವಿವರಣೆ ಇದೆ. ಭಾರತವು ರಾಜ್ಯಗಳ ಒಕ್ಕೂಟವಾಗಿರುತ್ತದೆ ಎಂದು ತಿಳಿಸುತ್ತದೆ. ಡಾ.ಬಿ.ಆರ್ ಅಂಬೇಡ್ಕರವರು ರಾಜ್ಯಗಳ ಒಕ್ಕೂಟ ಎಂಬುದನ್ನು ಸಂವಿಧಾನದಲ್ಲಿ ಸೇರ್ಪಡೆಮಾಡಲು ಸಮರ್ಥನೆ ನೀಡಿದ್ದಾರೆ. "ಭಾರತ ದೇಶದಲ್ಲಿ ಯಾವುದೇ ರಾಜ್ಯಗಳು ಒಡಂಬಡಿಕೆಯಿಂದ ಸೇರ್ಪಡೆಯಾಗಿಲ್ಲ, ಅವುಗಳು ಸ್ವತಂತ್ರವಾಗಿ ಪ್ರತ್ಯೇಕವಾಗಲೂ ಸಾಧ್ಯವಿಲ್ಲ ಅದ್ದರಿಂದ ಭಾರತವನ್ನು ರಾಜ್ಯಗಳ ಒಕ್ಕೂಟ ಎಂದು ಕರೆಯುವುದು ಸೂಕ್ತ" ರಾಜ್ಯಗಳ ಒಕ್ಕೂಟ ವ್ಯವಸ್ಥೆಯು

ವಿಶ್ವದಲ್ಲಿಯೇ ವಿಶಿಷ್ಟವಾದ ಮಾದರಿಯಾಗಿದ್ದು ಒಕ್ಕೂಟದ ಸಂಯುಕ್ತ ಸಹಕಾರಿ ತತ್ವಕ್ಕೆ ಅನುಸಾರವಾಗಿ ಭಾರತ ಸಂವಿಧಾನವು ಶಾಸನಿಸೇಯ, ಕಾರ್ಯಂಗೀಯ, ಹಣಕಾಸಿನ ಅಧಿಕಾರವನ್ನು ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿಕೆ ಮಾಡಿದ್ದು ಒಕ್ಕೂಟ ಸರ್ಕಾರ ಮತ್ತು ಒಕ್ಕೂಟದ ಘಟಕದ ರಾಜ್ಯಗಳು ತಮ್ಮ ವ್ಯಾಪ್ತಿಯೂಳಗೆ ಕಾನೂನು ಮಾಡುವ, ಅನುಷ್ಠಾನಗೊಳಿಸುವ ಮತ್ತು ಕಾನೂನು ಉಲ್ಲಂಗಿಸಿದರೆ ಶಿಕ್ಷಿಸುವ ಅಧಿಕಾರವನ್ನು ಹೊಂದಿವೆ. ಸಂಯುಕ್ತ ಸಹಕಾರಿ ವ್ಯವಸ್ಥೆಯ ಮೂಲಕ ಸಾಮಾಜಿಕ, ಆರ್ಥಿಕ, ಸಂಸ್ಕೃತಿಕ ಕ್ಷೇತ್ರಗಳ ಕಲ್ಯಾಣದ ಗುರಿಗಳನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಕೇಂದ್ರದ ಒಕ್ಕೂಟದ ಘಟಕಗಳ ನಡುವೆ ಕೇಂದ್ರಪಟ್ಟಿ, ರಾಜ್ಯಪಟ್ಟಿ ಮತ್ತು ಸಮವರ್ತಿಪಟ್ಟಿಗಳಲ್ಲಿ ಅಧಿಕಾರ ಹಂಚಿಕೆಯನ್ನು ಮಾಡಲಾಗಿದ್ದು ಕೇಂದ್ರವು ಪ್ರಬಲವಾಗಿರುವುದನ್ನು ಗುರುತಿಸಬಹುದು. ವಿಕೇಂದ್ರೀಕರಣ ವ್ಯವಸ್ಥೆಯು ಕೇಂದ್ರದ ಹೊರೆಯನ್ನು ಕಡಿಮೆ ಮಾಡಿದೆ. ಸಂವಿಧನಾತ್ಮಕವಾಗಿ ಇವುಗಳ ನಡುವೆ ಅಧಿಕಾರವನ್ನು ಪ್ರತ್ಯೇಕಿಸಿರುವುದರಿಂದ ಕೇಂದ್ರ ಮತ್ತು ರಾಜ್ಯಗಳ ನಡುವಿನ ಗೊಂದಲಗಳು, ಘರ್ಷಣೆಗಳು ಕಡಿಮೆಯಾಗಿ ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ. ಅಲ್ಲದೆ ಆಡಳಿತವನ್ನು ಹೆಚ್ಚು ಪರಿಣಾಮಕಾರಿಯಾಗಿ ಸುಲಭವಾಗಿಸುವುದರೊಂದಿಗೆ ದೇಶದ ಸಮಗ್ರ ಅಭ್ಯುದಯಕ್ಕೆ ಸಹಕಾರಿಯಾಗುತ್ತದೆ.

**ಒಕ್ಕೂಟದ ಲಕ್ಷಣಗಳು ಮತ್ತು ಸಾಂವಿಧಾನಿಕ ನಿಬಂಧನೆಗಳು:**

ಭಾರತ ಸಂವಿಧಾನವು ಏಕಾತ್ಮಕ ಹಾಗೂ ಸಂಯುಕ್ತ ವ್ಯವಸ್ಥೆಯ ಲಕ್ಷಣಗಳನ್ನು ಒಳಗೊಂಡಿದೆ. ಕೆ.ಸಿ.ವಿಯ್ಹಿರ್ ಎಂಬ ರಾಜಕೀಯ ಚಿಂತಕರು ಭಾರತವನ್ನು ಒಂದು ಅರೆಸಂಯುಕ್ತ ವ್ಯವಸ್ಥೆ ಎಂದು ಟೀಕಿಸಿದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರವರು "ಸಾಮಾನ್ಯ ಸಂದರ್ಭಗಳಲ್ಲಿ ಸಂಯುಕ್ತ ವ್ಯವಸ್ಥೆಯಾಗಿಯು ಸಂದಿಗ್ದ ಪರಿಸ್ಥಿತಿಗಳಲ್ಲಿ ಏಕಾತ್ಮಕ ವ್ಯವಸ್ಥೆಯಾಗಿಯು ಕಾರ್ಯನಿರ್ವಯಿಸುತ್ತದೆ" ಎಂದು ಅಬಿಪ್ರಾಯ ವ್ಯಕ್ತಪಡಿಸಿದ್ದಾರೆ.

**ಒಕ್ಕೂಟದ ಲಕ್ಷಣಗಳು:**

ನಮ್ಮ ಸಂವಿಧಾನವು ಲಿಖಿತ ರೂಪದಲ್ಲಿದ್ದು ಸರ್ಕಾರದ ಅಂಗಗಳ ರಚನೆ, ಅಧಿಕಾರ ಮತ್ತು ಕಾರ್ಯವ್ಯಾಪ್ತಿ, ಮೂಲಭೂತಹಕ್ಕು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದಂತೆ ಬರವಣಿಗೆಯರೂಪದಲ್ಲಿರುವುದನ್ನು ಕಾಣಬಹುದು. ಅಲ್ಲದೆ ಕೇಂದ್ರ ಮತ್ತು ರಾಜ್ಯಸರ್ಕಾರಗಳೆರಡು ಅಸ್ತಿತ್ವದಲ್ಲಿರುವುದರ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮದ್ಯೆ ಸಂವಿಧಾನಾತ್ಮಕವಾಗಿ ಅಧಿಕಾರವನ್ನು ವಿಭಜಿಸಲಾಗಿದೆ. ಅಲ್ಲದೆ ಸಂವಿಧಾನದ ವ್ಯಾಪ್ತಿಯನ್ನು ಉಲ್ಲಂಘಿಸುವ ಕೇಂದ್ರ ಹಾಗು ರಾಜ್ಯ ಸರ್ಕಾರಗಳ ನಿರ್ಧಾರಗಳನ್ನು ಸಂವಿಧಾನ ಬಾಹಿರ ಹಾಗೂ ಅಸಿಂಧು ಎಂದು ಸರ್ವೋಚ್ಚನ್ಯಾಯಾಲಯ ಘೋಷಿಸುತ್ತದೆ. ಇದು ಸಂವಿಧಾನದ ಶ್ರೇಷ್ಠತೆಯನ್ನು ತೋರಿಸುತ್ತದೆ. ಅನಮ್ಯ ಸಂವಿಧಾನವಾಗಿದ್ದು ಸಂವಿಧಾನ ತಿದ್ದುಪಡಿಯು ವಿಶೇಷ ವಿಧಾನದಿಂದ ಕೂಡಿದೆ. ಕೇಂದ್ರ ಮತ್ತು ರಾಜ್ಯಗಳ ಅಧಿಕಾರ ವ್ಯಾಪ್ತಿಯಲ್ಲಿ ಉದ್ಭವಿಸಬಹುದಾದ ವಿವಾದಗಳನ್ನು ಇತ್ಯರ್ಥಪಡಿಸಲು ಸ್ವತಂತ್ರ ನ್ಯಾಯಾಂಗವಿದ್ದು ಸರ್ವೋಚ್ಚ ನ್ಯಾಯಾಲಯವು ಈ ಜವಾಬಬ್ದಾರಿ ನಿರ್ವಹಿಸುತ್ತದೆ.

**ಸಾಂವಿಧಾನಿಕ ನಿಬಂಧನೆಗಳು:**

ಭಾರತ ಸಂವಿಧಾನದ ಭಾಗ ೧೧ ಮತ್ತು ೧೨ ರಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧಗಳ ಕುರಿತು ವಿವರಣೆ ನೀಡುತ್ತದೆ.

ಶಾಸನೀಯ ಸಂಬಂಧಗಳು: ಸಂವಿಧಾನದ ೭ ಅನುಸೂಚಿಯಲ್ಲಿ ಭಾಗ ೧೧ ರಲ್ಲಿ ೨೪೫ ರಿಂದ ೨೫೫ ರ ವರೆಗಿನ ವಿಧಿಗಳು ಶಾಸನೀಯ ಸಂಬಂಧಗಳ ಕುರಿತು ವಿವರಿಸುತ್ತದೆ. ಸಂವಿಧಾನದ ೨೪೬(೪) ವಿಧಿಯ ಪ್ರಕಾರ ಸಂಸತ್ತು ಭಾರತದಾದ್ಯಂತ ಅಥವ ಭಾರತದ ಯಾವುದೇ ಭಾಗಕ್ಕೆ ಅನ್ವಯವಗುವಂತೆ ಶಾಸನಗಳನ್ನು ರೂಪಿಸುವ ಅಧಿಕಾರ ಹೊಂದಿದೆ. ಸಂವಿಧಾನದ ೨೪೫(೧) ನೇ ವಿಧಿಯ ಪ್ರಕಾರ ರಾಜ್ಯ ಶಾಸಕಾಂಗಗಳು ರಾಜ್ಯಾದಾದ್ಯಂತ ಅಥವ ರಾಜ್ಯದ ಯಾವುದೇ ಭಾಗಕ್ಕೆ ಅನ್ವಯವಾಗುವಂತೆ ಶಾಸನ ರೂಪಿಸುವ ಅಧಿಕಾರವನ್ನು ಹೊಂದಿದೆ. ಕೇಂದ್ರಪಟ್ಟಿಯಲ್ಲಿ ರಾಷ್ಟ್ರೀಯ ಮಹತ್ವ ಪಡೆದ ೧೦೦ ವಿಷಯಗಳಕುರಿತು ಶಾಸನ ರೂಪಿಸುವ ಅಧಿಕಾರ ಕೇಂದ್ರಸರ್ಕಾರಕ್ಕೆ ಮಾತ್ರ ಇದೆ. ರಾಜ್ಯಪಟ್ಟಿಯು ೬೧ ವಿಷಯಗಳನ್ನೂಳಗೊಂಡಿದೆ. ಸ್ಥಳೀಯ ಮಹತ್ವ ಪಡೆದ ಕೃಷಿ ,ಸ್ಥಳೀಯ ಸರ್ಕಾರಗಳು, ಮುಂತಾದ ವಿಷಯಗಳನ್ನೂಳಗೂಂಡಂತೆ ಕಾಯ್ದೆರೂಪಿಸುವ ಅಧಿಕಾರ ರಾಜ್ಯ ಸರ್ಕಾರಕ್ಕಿರುತ್ತದೆ. ಸಮವರ್ತಿಪಟ್ಟಿ ಆರ್ಥಿಕ, ಸಾಮಾಜಿಕ ಯೋಜನೆ, ಜನಸಂಖ್ಯಾ ನಿಯಂತ್ರಣ, ತೂಕ ಮತ್ತು ಅಳತೆ, ಮುದ್ರಣ ಇತರ ೫೨ ವಿಷಯಗಳನ್ನೂಳಗೊಂಡಿದೆ. ೨೪೮ನೇ ವಿಧಿಯಲ್ಲಿ ಮೂರು ಪಟ್ಟಿಯಲ್ಲಿ ಸೇರದೆ ಇರುವ ವಿಷಯಗಳನ್ನು ಶೇಷಾಧಿಕಾರದ ವ್ಯಾಪ್ತಿಗೆ ಸೇರಿಸಿ ಈ ಅಧಿಕಾರಗಳನ್ನು ಕೇಂದ್ರಕ್ಕೆ ನೀಡಿದೆ.

ಆಡಳಿತಾತ್ಮಕ ಸಂಬಂಧಗಳು: ಭಾಗ ೧೧ ರಲ್ಲಿ ೨೫೬ ರಿಂದ ೨೬೩ ರವರೆಗಿನ ವಿಧಿಗಳು ಕೇಂದ್ರ ಮತ್ತು ರಾಜ್ಯಗಳ ನಡುವಣ ಆಡಳಿತಾತ್ಮಕ ಸಂಬಂಧಗಳಿಗೆ ಸಂಬಂದಿಸಿದೆ.
ಹಣಕಾಸಿನ ಸಂಬಂಧಗಳು: ಭಾಗ ೧೨ರಲ್ಲಿ ೨೬೮ ರಿಂದ ೨೯೩ ರವರೆಗಿನ ವಿಧಿಗಳು ಕೇಂದ್ರ ಹಾಗೂ ರಾಜ್ಯಗಳ ಹಣಕಾಸಿನ ಸಂಬಂಧಗಳನ್ನು ವಿವರಿಸುತ್ತದೆ.

**ಐತಿಹಾಸಿಕ ಹಿನ್ನೆಲೆ :**

ಭಾರತ ಸ್ವಾತಂತ್ರ ಪಡೆಯುವುದಕ್ಕೂ ಮುಂಚೆ ಬ್ರಿಟೀಷ್ ಪ್ರಾಂತ್ಯ ಮತ್ತು ದೇಶಿಯ ಸಂಸ್ಥಾನಗಳೆಂದು ಎರಡು ವಿಧದ ರಾಜ್ಯಗಳು ಅಸ್ತಿತ್ವದಲ್ಲಿದ್ದವು. ೧೯೪೭ ರಲ್ಲಿ ಸ್ವಾತಂತ್ರ ಬರುತ್ತಿದ್ದಂತೆ ಬ್ರಿಟೀಷ್ ಪ್ರಾಂತ್ಯಗಳು ಭಾರತ ಸರ್ಕಾರದ ಆಳ್ವಿಕೆಗೆ ಒಳಪಟ್ಟವು. ದೇಶಿಯ ಸಂಸ್ಥಾನಗಳು ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾದವು. ಸೇರ್ಪಡೆಗೆ ವಿರೋಧಿಸಿದ ಜುನಗಡ, ಹೈದರಾಬಾದ್, ಜಮ್ಮು ಕಾಶ್ಮೀರಗಳನ್ನು ಸರ್ದಾರ್ ವಲ್ಲಭಬಾಯಿ ಪಾಟೇಲ್ ರವರ ಮುಂದಾಳತ್ವದಿಂದ ಒಕ್ಕೂಟಕ್ಕೆ ಸೇರಿಸುವಲ್ಲಿ ಯಶಸ್ವಿಯದರು. ೧೯೫೦ ರ ವೇಳೆಗೆ ಕೇಂದ್ರ ಸರ್ಕಾರ ಎ,ಬಿ,ಸಿ,ಡಿ ಎಂದು ನಾಲ್ಕು ವರ್ಗಗಳಾಗಿ ರಾಜ್ಯಗಳನ್ನು ವಿಂಗಡಣೆ ಮಾಡಿತು. ತದನಂತರ ಭಾಷೆಯನ್ನು ಆಧರಿಸಿ ರಾಜ್ಯವನ್ನು ಪುನರ್ ವಿಂಗಡಿಸಬೇಕೆಂಬ ಬೇಡಿಕೆ ಹೆಚ್ಚಾಗಿದ್ದರಿಂದ ಎಸ್.ಕೆ ಧಾರ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಯಿತು. ಈ ಸಮಿತಿಯು ಭಾಷೆಯ ಆಧಾರದ ಮೇಲೆ ರಾಜ್ಯಗಳನ್ನು ಪುನರ್‌ರಚಿಸುವುದು ಸೂಕ್ತವಲ್ಲ ಎಂದು ಸಲಹೆ ನೀಡಿತು. ತದನಂತರ ರಚನೆಯಾದ ಜೆ.ವಿ.ಪಿ ಸಮಿತಿಯು ಭಾಷೆ ಆಧರಿತ ಪುನರ್ ರಚನೆ ದೇಶದ ಸಮಗ್ರತೆಗೆ ಧಕ್ಕೆಯನ್ನುಂಟುಮಾಡುತ್ತದೆ ಎಂದು ತಿಳಿಸಿತು. ವಿವಿಧ ಆಯೋಗಗಳು ಭಾಷೆ ಆಧಾರದ ಮೇಲೆ ರಾಜ್ಯವಿಂಗಡಣೆಯನ್ನು ತಳಿಹಾಕಿದ ನಂತರ ಪೋಟ್ಟಿ ಶ್ರೀರಾಮುಲು ರವರ ಅಮರಣಾಂತ ಉಪವಾಸ ಹಾಗೂ ಅವರ ಮರಣದ ಪರಿಣಾಮ ಪ್ರಥಮ ಭಾಷಾಧಾರಿತ ರಾಜ್ಯವಾಗಿ ಆಂಧ್ರಪ್ರದೇಶದ ರಚನೆಯಾಯಿತು. ೧೯೫೩ ರಲ್ಲಿ ಫಜಲ್ ಅಲಿ ಅಧ್ಯಕ್ಷತೆಯಲ್ಲಿ ನೇಮಿಸಿದ ಸಮಿತಿ ಎ,ಬಿ,ಸಿ,ಡಿ ವರ್ಗದ ರಾಜ್ಯಗಳನ್ನು ರದ್ದುಗೊಳಿಸಿತು ೭ನೇ ಸಂವಿಧಾನದ ತಿದ್ದುಪಡಿ ಮೂಲಕ ೧೪ ರಾಜ್ಯಗಳು ೬ಕೇಂದ್ರಡಳಿತ ಪ್ರದೇಶಗಳನ್ನು ರಚಿಸಿತು. ತದನಂತರ ಹಂತ ಹಂತವಾಗಿ ಇತರೆ ಪ್ರದೇಶಗಳು ಭಾರತದ ಒಕ್ಕೂಟ ಘಟಕಗಳಾದವು.

**ತ್ರಿಭಾಷಸೂತ್ರದ ವೈರುದ್ಯಗಳು:**

ಸ್ವಾತಂತ್ರದ ನಂತರ ೧೯೫೨ ರಲ್ಲಿ ಡಾ.ಲಕ್ಷ್ಮಣಸ್ವಾಮಿ ಮೊದಲಿಯಾರ್ ಶಿಕ್ಷಣ ಆಯೋಗವು ರಾಷ್ಟ್ರೀಯ ಭಾಷೆಯಾಗಿ ಹಿಂದಿಯನ್ನು, ಆಡಳಿತಾತ್ಮಕ ಭಾಷೆಯಾಗಿ ಇಂಗ್ಲೀಷ್ ಮತ್ತು ಪ್ರಾದೇಶಿಕ ಭಾಷೆ ಯನ್ನೂಳಗೊಂಡ ತ್ರಿಭಾಷಸೂತ್ರವನ್ನು ಶಿಫಾರಸ್ಸು ಮಾಡಿತು. ೧೯೬೮ ರ ಕೊಠಾರಿ ಆಯೋಗ ಹಾಗೂ ೧೯೮೬ ರ ಹೊಸ ರಾಷ್ಟ್ರೀಯ ಶಿಕ್ಷಣನೀತಿಯಲ್ಲಿ ಅದೇ ಸೂತ್ರವನ್ನು ಮುಂದುವರೆಸಲಾಯಿತು. ದಕ್ಷಿಣ ಭಾರತದ ಹಲವು ರಾಜ್ಯಗಳಲ್ಲಿ ವಿರೋಧ ವ್ಯಕ್ತವಾದರು ೨೦೨೦ರ ರಾಷ್ಟ್ರೀಯ ಶಿಕ್ಷಣನೀತಿಯಲ್ಲೂ ಅದೇ ತ್ರಿಭಾಷ ಸೂತ್ರ ಮುಂದುವರೆದ ವಿಚಾರವಾಗಿ ವಿರೋಧಗಳು ವ್ಯಕ್ತವಾದವು " ಸ್ಪಷ್ಟವಾಗಿ ಹೇಳಬೇಕೆಂದರೆ ತಿಭಾಷಸೂತ್ರ ಮತ್ತು ಅದರ ಸಮಸ್ಯೆಯ ಮೂಲವು ಸಂವಿಧಾನದ ೧೭ ನೇ ಭಾಗದಲ್ಲಿದೆ. ಆ ಭಾಗದ ೩೪೩ನೇ ವಿಧಿ ಒಂದರಲ್ಲಿ ಹಿಂದಿಯು ಕೆಂದ್ರ ಸರ್ಕಾರದ ಆಡಳಿತ ಭಾಷೆಯಾಗಿರತಕ್ಕದ್ದು, ಸಂವಿಧಾನ ಜಾರಿಗೆ ಬಂದ ೧೫ ವರ್ಷಗಳ ವರೆಗೆ ಈ ಮೊದಲು ಇದ್ದಂತೆ ಇಂಗ್ಲೀಷ್ ಭಾಷೆಯು ಆಡಳಿತ ಭಾಷೆಯಾಗಿರಬೇಕು ಎಂದು ಹೇಳಿದ್ದರೂ ಭಾರತದ ಯಾವ ಭಾಷೆಗೂ ಸಿಗದಿರುವ ಪ್ರಾಧಾನ್ಯವು ಸಂವಿಧಾನದಲ್ಲಿ ಹಿಂದಿಗೆ ಸಿಕ್ಕಿದೆ". (ತ್ರಿಭಾಷಸೂತ್ರ ಮತ್ತು ಸಂವಿಧಾನ. ಎಸ್ ಎಂ ಜಮಾದಾರ್ ೦೯/೯/೨೦೨೦) ಜನಸಂಖೆ ಆಧಾರದ ಮೇಲೆ ನೋಡುವುದಾದಾರೆ ೩೪% ಜನಸಂಖ್ಯೆ ಹಿಂದಿಭಾಷೆಯನ್ನು ಮಾತೃಭಾಷೆಯಾಗಿ ಹೊಂದಿದ್ದು, ೬೬% ಜನಂಖ್ಯೆ ಮೇಲೆ ಹಿಂದಿ ಹೇರುವುದು ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ನ್ಯಾಯಸಮ್ಮತವೇ ಎಂಬುದನ್ನು ಪುನರ್ ಪರಿಶೀಲಿಸಬೇಕಾಗಿದೆ. ೧೯೬೩ ರ ಅಧಿಕೃತ ಭಾಷೆಗಳ ಕಾಯ್ದೆಗೆ ತಿದ್ದುಪಡಿ ತರಲು ಸಾಧ್ಯವಿದೆ ಎಂಬುದನ್ನು ಸುಪ್ರಿಂಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿದೆ. ದಕ್ಷಿಣ ರಾಜ್ಯಗಳ ವಿರೋಧವು ಕೇಂದ್ರದ ಮೇಲೆ ವ್ಯತಿರಿಕ್ತ ಪ್ರಭಾವವನ್ನು ಬೀರುತ್ತಿದೆ. ಉದಾ: ೧೯೬೯ ರಿಂದಲೂ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸುತ್ತಿದ್ದು ದ್ವಿಭಾಷಾಸೂತ್ರವನ್ನು ಅಳವಡಿಸಿಕೊಂಡಿದೆ. ಹಿಂದಿ ನಮ್ಮ ಅಧಿಕೃತ ಭಾಷೆ ಹೊರತು ರಾಷ್ಟ್ರೀಯ ಭಾಷೆ ಅಲ್ಲವಾದ್ದರಿಂದ ಕೇಂದ್ರವು ಸಂವಿಧಾನ ಮಾನ್ಯಮಾಡಿರುವ ಎಲ್ಲ ಭಾಷೆಗಳಿಗೆ ಮಾನ್ಯತೆಯನ್ನು ನೀಡಬೇಕು. ನೀಟ್, ಜೆಇಇ, ಯುಪಿಎಸ್‌ಸಿ, ಎಸ್‌ಎಸ್‌ಸಿ, ಐ.ಎ.ಎಸ್, ಐ.ಪಿ.ಎಸ್ ನಂತಹ ಭಾರತೀಯ ನಾಗರೀಕ ಸೇವಾ ಹುದ್ದೆಗಳಿಗೆ ಕೇಂದ್ರ ಲೋಕಸೇವಾ ಆಯೋಗವು ನಡೆಸುವ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಹಿಂದಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಮಾತ್ರ ಲಭ್ಯ. ಹಿಂದಿಯನ್ನು ಮಾತೃಭಾಷೆಯಾಗಿ ಹೊಂದಿರುವ ರಾಜ್ಯಗಳ ಅಭ್ಯರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ

ಉದ್ಯೋಗ ಪಡೆದುಕೊಳ್ಳಲು ಸಾಧ್ಯವಾಗುತ್ತಿದೆ. ಇತರ ರಾಜ್ಯಗಳ ಮಾತೃಭಾಷೆ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಕೇಂದ್ರದ ಅರ್ಹತಾ ಪರಿಕ್ಷೆಗಳಲ್ಲಿ ತ್ರಿಭಾಷಾಸೂತ್ರವನ್ನು ಅಳವಡಿಸುವುದರಿಂದ ಇಂತಹ ಗೊಂದಲಗಳನ್ನು ಬಗೆಹರಿಸಬಹುದು. ೮ನೇ ಪರಿಚ್ಛೇದದಡಿ ಬರುವ ೨೨ ಭಾರತೀಯ ಭಾಷೆಗಳಲ್ಲಿ ಪತ್ರಿಕೆ ನೀಡಬೇಕೆಂಬ ಒತ್ತಾಯವನ್ನು ಪರಿಗಣಿಸದೆ ಹಿಂದಿಯೇತರ ಭಾಷಿಕರನ್ನು ಅವಮಾನಿಸುತ್ತಿದೆ. ಪ್ರಾದೇಶಿಕ ಭಾಷೆಗಳಿಗೆ ತಾರತಮ್ಯಮಾಡುತ್ತಿರುವುದು ಎಲ್ಲರಿಗೂ ತಿಳಿದಿರುವ ಬಹಿರಂಗ ಸತ್ಯವಾಗಿದೆ. ಕೇಂದ್ರವು ಹಿಂದಿಯೇತರ ರಾಜ್ಯಗಳಿಗೆ ಇಂಗ್ಲೀಷ್ ನಲ್ಲಿ ಹಿಂದಿ ಭಾಷೆಯನ್ನು ಒಳಗೊಂಡ ರಾಜ್ಯಗಳಿಗೆ ಹಿಂದಿಯಲ್ಲಿ ಸುತ್ತೋಲೆಗಳನ್ನು ಹೊರಡಿಸುವ ಅಂಶಗಳು ಕೇಂದ್ರ ರಾಜ್ಯಗಳ ನಡುವೆ ವೈರುದ್ಯಗಳಿಗೆ ಕಾರಣವಾಗಿದೆ.

**ಭಾಷಾವಾರು ಪ್ರಾಂತ್ಯಗಳ ರಚನೆಯ ಸಮಸ್ಯೆಗಳು:**

ಭಾಷಾವಾರು ಪ್ರಾಂತ್ಯಗಳ ರಚನೆಯಿಂದ ಉಂಟಾದ ಗಡಿ ಸಮಸ್ಯೆಗಳು ಇಂದಿಗೂ ಮುಂದುವರೆದಿದೆ. ಕರ್ನಾಟಕ ರಾಜ್ಯದಮಟ್ಟಿಗೆ ಹೇಳುವುದಾದರೆ ೧೯೫೩ರಲ್ಲಿ ಫಜಲ್ ಅಲಿ ಅಧ್ಯಕ್ಷತೆಯಲ್ಲಿ ೩ ಜನರ ಸಮಿತಿ ರಚನೆಯಾಯಿತು. ಈ ಸಮಿತಿ ೮೬೫ ಗ್ರಾಮಗಳು ಬೆಳಗಾವಿಗೆ(ಮೈಸೂರು ಸಂಸ್ಥಾನಕ್ಕೆ ಸೇರಿತ್ತು) ಸೇರಿವೆ ಎಂಬುದನ್ನು ಸ್ಪಷ್ಟಿಪಡಿಸಿತು. ಮಹಾರಾಷ್ಟ್ರ ಇದನ್ನು ತೀವ್ರವಾಗಿ ವಿರೋಧಿಸಿತು. ನಂತರ ಸುಪ್ರಿಂಕೋರ್ಟ ನಿರ್ದೇಶನದ ಮೇರೆಗೆ ಕೇಂದ್ರಸರ್ಕಾರ ಮೆಹರ ಚಂದ್ ಮಹಾಜನ ನೇತೃತ್ವದ ಸಮೀತಿ ರಚಿಸಿತು. ಈ ಸಮೀತಿಯ ನ್ಯಾಯಯುತ ತೀರ್ಮಾನವನ್ನು ಮಹರಾಷ್ಟ್ರ ಸರ್ಕರವು ತಿರಸ್ಕರಿಸಿತು. ಅಲ್ಲದೆ ಇದನ್ನು ಪ್ರಶ್ನಿಸಿ ೨೦೦೪ ರಲ್ಲಿ ಸುಪ್ರಿಂಕೋರ್ಟ್ ಮೆಟ್ಟಿಲೇರಿತು. ಪ್ರಸ್ತುತ ಇವೆರಡು ರಾಜ್ಯಗಳ ಗಡಿವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹಸಚಿವ ಅಮಿತ್ ಷಾ ಅಧ್ಯಕ್ಷತೆಯಲ್ಲಿ ಗಡಿವಿವಾದ ಇತ್ಯರ್ಥ ಹಾಗೂ ಸಂವಿಧಾನಿಕ ಚೌಕಟ್ಟಿನಲ್ಲಿ ಪರಿಹಾರಕ್ಕಾಗಿ ಎರಡು ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಸಭೆನಡೆಸಿ ಗಡಿವಿವಾದ ಇತ್ಯರ್ಥಪಡಿಸಲು ೬ ಜನ ಸಚಿವರ ತಟಸ್ಥ ಸಮಿತಿ ರಚಿಸಲು ತೀರ್ಮಾನಿಸಲಾಗಿದ್ದು ಈ ತೀರ್ಮಾನಕ್ಕೆ ಉಭಯ ರಾಜ್ಯಗಳ ಮುಖ್ಯಮಂತ್ರಿಗಳು ಉತ್ತಮ ಪ್ರತಿಕ್ರಿಯೆ ತೋರಿದಂತಾದರು ಎರಡು ರಾಜ್ಯಗಳು ಗಡಿಯ ವಿಚಾರದಲ್ಲಿ ಆಯಾ ರಾಜ್ಯಗಳ ವಿಧಾನಮಂಡಲಗಳಲ್ಲಿ ಗಡಿ,ನೆಲ,ಜಲವನ್ನು ರಕ್ಷಿಸಿಕೊಳ್ಳುವ ಸರ್ವಾನುಮತದ ನಿರ್ಣಯವನ್ನು ಅಂಗೀಕರಿಸಿದರೆ, ಮಹಾರಾಷ್ಟ್ರವು ೮೬೫ ಗ್ರಾಮಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಿಕೊಳುವ ನಿರ್ಣಯವನ್ನು ಅಲ್ಲಿನ ವಿಧಾನಮಂಡಲದಲ್ಲಿ ಅಂಗೀಕರಿಸಲಾಯಿತು. ಇತಂತಹ ಬೆಳವಣಿಗೆಗಳಿಂದ ರಾಜ್ಯಗಳ ನಡುವೆ ಸೌಹಾರ್ದಯುತ ಸಂಬಂಧಗಳು ಹಳಸುತ್ತಿದ್ದು ಕೇಂದ್ರವು ಇವುಗಳನಡುವಿನ ವೈರುದ್ಯಗಳನ್ನು ನ್ಯಾಯಯುತವಾಗಿ ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಿದೆ. ಭಾಷಾವಾರು ಪ್ರಾಂತ್ಯಗಳ ರಚನೆಯಿಂದ ಉಂಟಾದ ಗಡಿ ಸಮಸ್ಯೆಗಳು ಇತರ ರಾಜ್ಯಗಳಲ್ಲಿಯೂ ಇದ್ದು ಹಲವು ಬಾರಿ ದೊಡ್ಡಮಟ್ಟದ ಘರ್ಷಣೆಗಳಿಗೆ ಕಾರಣವಾಗಿವೆ.

**ಜಲವಿವಾದಗಳಿಗೆ ಸಂಬಂದಿಸಿದ ವೈರುದ್ಯಗಳು:**

ಕರ್ನಾಟಕಕ್ಕೆ ಮಹಾರಾಷ್ಟ್ರದೊಂದಿಗೆ ಜಲವಿವಾದವು ಇದೆ. ಕೃಷ್ಣ ನದಿ ನೀರಿನಲ್ಲಿ ಮಹಾರಾಷ್ಟ್ರದ ಪಾಲಿದೆ ಎಂಬ ವಿರೋಧಗಳು ವ್ಯಕ್ತವಾಗುತ್ತಿದ್ದು ಕೃಷ್ಣನ್ಯಾಯಮಂಡಳಿಯ ತೀರ್ಪಿನಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಕರ್ನಾಟಕ ಮತ್ತು ಗೋವಕ್ಕೆ ಸಂಬಂಧಿಸಿದಂತೆ ಕಳಸಬಂಡುರಿ ಯೋಜನೆಯ ವಿವಾದಕ್ಕೆ ಕೇಂದ್ರದ ಜಲ ಆಯೋಗದ ಮಲತಾಯಿ ಧೋರಣೆಯು ಈ ವಿವಾದಗಳಿಗೆ ಅಂತ್ಯವನ್ನು ಹೇಳದೆ ವಿವಾದವು ಜೀವಂತವಗಿದೆ. ಪಾಲರ್ ಪನ್ನಾರ್ ನದಿ ಹರಿಯುವ ಕೋಲಾರ ಚಿಕ್ಕಬಳ್ಳಾಪುರ ಜಿಲ್ಲೆಗಳ ಬಂಜರು ಭೂಮಿಗೆ ನೀರುಣಿಸಲು ಕರ್ನಾಟಕ ರೂಪಿಸಿರುವ ಪರಗೊಡು ಯೋಜನೆಗೆ ಆಂಧ್ರ ತಕರಾರು ತೆಗೆದಿದೆ. ರಾಯಚೂರು ತಾಲೂಕಿನ ಕೃಷ್ಣನದಿಗೆ ಅಡ್ಡಲಾಗಿ ಕರ್ನಾಟಕ ನಿರ್ಮಿಸಿರುವ ಗೂಗಲ್ ಬ್ಯಾರೆಜ್ ಕೈಬಿಡಬೇಕೇಂದು ಆಂದ್ರ ತಕರಾರು ತೆಗೆದಿದೆ. ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ನಡುವಿನ ೧೨೦ ವರ್ಷಗಳ ಇತಿಹಾಸ ಹೊಂದಿರುವ ಕಾವೇರಿ ಜಲವಿವಾದಕ್ಕೆ ಪೂರ್ಣವಿರಾಮ ದೊರೆತಿಲ್ಲ. ಗೋದಾವರಿ ಜಲ ವಿವಾದಕ್ಕೆ ಸಂಬಂದಿಸಿದಂತೆ ಮಹಾರಾಷ್ಟ್ರ, ಛತ್ತೀಸಗಢ, ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳ ನಡುವೆ ಸಮಸ್ಯೆಗಳುಂಟಾಗಿದ್ದು ನಿರಂತರವಾಗಿ ರಾಜ್ಯ ರಾಜ್ಯಗಳ ಮಧ್ಯ ಶಾಂತಿ ಕದಡುವ ಸಂಘರ್ಷಗಳು ನಡೆಯುತ್ತಿವೆ. ಕರ್ನಾಟಕ ಮಾತ್ರವಲ್ಲದೆ ಭಾರತದ ಹಲವು ರಾಜ್ಯಗಳ ಮಧ್ಯ ಜಲವಿವಾದಗಳಿದ್ದು ಕೇಂದ್ರವು ಈ ಕುರಿತ ಗೊಂದಲಗಳಿಗೆ ತೆರೆಯೆಳೆಯದಿರುವವುದು ಸೌಹಾರ್ದಯುತ ಸಂಬಂದಗಳು ಹದಗೆಡಲು ಕಾರಣವಾಗಿದೆ. ಜಲವಿವಾದಗಳನ್ನು ಬಗೆಹರಿಸಲು ನ್ಯಾಯಮಂಡಳಿಗಳಿಗಳನ್ನು ರಚಿಸಿ ಸಮಸ್ಯೆಗಳ ಕುರಿತಾಗಿ ತಟಸ್ಥತೆಯನ್ನು ಕಾಪಾಡಿಕೊಂಡಿದೆ.

**ಜಿ.ಎಸ್.ಟಿ ಬಗೆಗಿನ ಗೊಂದಲಗಳು:**

ಗ್ರಾಹಕನೇ ದೊರೆ ಎಂಬ ಧ್ಯೇಯದಡಿ ರೂಪಿತವಾದ ಜಿ.ಎಸ್.ಟಿ. ಯು ಒಂದು ದೇಶ, ಒಂದು ತೆರಿಗೆ, ಒಂದು ಮಾರುಕಟ್ಟೆ ಎಂಬ ತತ್ವದಡಿ ರಾಷ್ಟ್ರದಾದ್ಯಂತ ಜಾರಿಗೆ ಬಂದಿತು. ಸ್ವಾತಂತ್ರ್ಯ ನಂತರ ೭೦ ವರ್ಷಗಳ ಇತಿಹಾಸದಲ್ಲಿ ತೆರಿಗೆ ವ್ಯವಸ್ಥೆ ಸುಧಾರಣೆಗಾಗಿ ಸರಕು ಮತ್ತು ಸೇವಾ ತೆರಿಗೆಯನ್ನು ೨೦೧೭ ಜೂನ್ ೩೦ ರಂದು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಪ್ರಧಾನಮಂತ್ರಿ ನರೇಂದ್ರಮೋದಿಯವರ ಉಪಸ್ಥಿತಿಯಲ್ಲಿ ಅಧಿಕೃತವಾಗಿ ಅನುಷ್ಠಾನಕ್ಕೆ ತರಲಾಯಿತು. ದೇಶಿಯ ಆರ್ಥಿಕತೆಯ ಸಾಮರ್ಥ್ಯವನ್ನು ವೃದ್ದಿಸುವ ಸಲುವಾಗಿ ದೇಶದಾದ್ಯಂತ ಸರಕು ಮತ್ತು ಸೇವೆಗಳ ಮೇಲೆ ವಿಧಿಸಲಾಗುವ ಏಕರೂಪದ ಸಾಮಾನ್ಯ ಪರೋಕ್ಷತೆರಿಗೆಯಾಗಿದೆ. ಮಸೂದೆ ಜಾರಿಯಿಂದ ಉಂಟಾಗುವ ವಿವಾದಗಳ ಇತ್ಯರ್ಥಕ್ಕಾಗಿ ಜಿಎಸ್‌ಟಿ ಮಂಡಳಿಯನ್ನು ರಚಿಸಿಕೊಂಡಿದೆ. ಜಿ.ಎಸ್.ಟಿ ಜಾರಿಗೆ ಬಗ್ಗೆ ಆರಂಭದಲ್ಲಿ ವಿರೋಧವಿತ್ತು. ಆ ಬಗ್ಗೆ ಸ್ಪಷ್ಟ ಅರಿವು ಇರಲಿಲ್ಲ. ಜಿಎಸ್‌ಟಿ ಯಿಂದ ರಾಜ್ಯಗಳ ಆರ್ಥಿಕ ಸ್ವಾಯತ್ತತೆಗೆ ಧಕ್ಕೆಯುಂಟಾಗುತ್ತದೆ ಎಂದು ಹಲವು ರಾಜ್ಯಗಳು ಅಬಿಪ್ರಾಯ ವ್ಯಕ್ತಪಡಿಸಿವೆ. ಜಿಎಸ್‌ಟಿಗೆ ವಿರೋಧಿಸಿದ ರಾಜ್ಯಗಳು ಕೊನೆಗೆ ನಷ್ಟ ಭರ್ತಿ ಮಡಿಕೊಡಲಾಗುವುದು ಎಂಬ ಷರತ್ತಿನ ಮೇಲೆ ಒಲ್ಲದ ಮನಸ್ಸಿನಿಂದ ಒಪ್ಪಿಗೆ ನೀಡಿದವು. ನಷ್ಟ ಭರ್ತಿ ಕಾಲಾವಧಿ ಐದುವರ್ಷಗಳು ಮುಗಿದಿದ್ದು ಪ್ರಸ್ತುತ ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ರಾಜ್ಯಗಳು ಪರಿಹಾರವನ್ನು ಇನ್ನು ಐದು ವರ್ಷಗಳ ಕಾಲ ಮುಂದುವರೆಸಬೇಕು ಇಲ್ಲದಿದ್ದಲ್ಲಿ ಜಿಎಸ್ ಟಿ ವರಮಾನದ ಶೇಕಡ ೭೦ ರಿಂದ ೮೦% ರಾಜ್ಯಗಳಪಾಲಿಗೆ ಬಿಟ್ಟುಕೊಡಬೇಕೇಂದು ಅಗ್ರಹಿಸಿವೆ. ಆದರೆ ಇಂದು ರಾಜ್ಯಗಳಿಗೆ ಪರಿಹಾರ ಕೊಡಲು ಕೇಂದ್ರಕ್ಕೆ ಸಾಧ್ಯವಾಗದಿರುವುದರೊಂದಿಗೆ ಅತೀ ಹೆಚ್ಚಿನ ಮಟ್ಟದಲ್ಲಿ ತೆರಿಗೆ ಸಂಗ್ರಹವಾಗುತ್ತಿರುವ ರಾಜ್ಯಗಳಿಗೆ ಅನುದಾನದಲ್ಲಿ ಹಂಚಿಕೆಯಲ್ಲಿ ತಾರತಮ್ಯಮಾಡುತ್ತಿರುವ ಅಂಶಗಳು ಕೇಂದ್ರ ಮತ್ತು ರಾಜ್ಯಗಳ ನಡುವೆ ವೈರುದ್ಯಗಳಿಗೆ ಕಾರಣವಾಗಿವೆ.

**ರಾಜ್ಯಪಾಲರ ನೇಮಕಾತಿ ಗೊಂದಲಗಳು:**

ಪ್ರತಿಯೋಂದು ರಾಜ್ಯಗಳಿಗೂ ಒಬ್ಬ ರಾಜ್ಯಪಾಲರಿರಬೇಕು ಎಂದು ಸಂವಿಧಾನದ ೧೫೩ ನೇ ವಿಧಿ ತಿಳಿಸುತ್ತದೆ. ರಾಜ್ಯಪಾಲರನ್ನು ಕೇಂದ್ರ ನೇಮಿಸುವ ಪದ್ದತಿಯೇ ಒಕ್ಕೂಟ ಪ್ರಜಾಪ್ರಭುತ್ವ ರಾಜಕಾರಣಕ್ಕೆ ಒಂದು ಗೊಂದಲದ ವಿಚಾರವಾಗಿದೆ. ರಾಜ್ಯದ ಮುಖ್ಯಮಂತ್ರಿ ಕಳಿಸುವ ಸಮರ್ಥ ೩ ಜನರ ಹೆಸರುಗಳ ಪೈಕಿ ಒಬ್ಬರಾಗಿರಬೇಕು. ಆದರೆ ಆಯ್ಕೆಯು ಅದಕ್ಕೆ ವಿರೋಧವಾಗಿದೆ. ಕೇಂದ್ರವು ರಾಜ್ಯಗಳ ಆಡಳಿತವನ್ನು ಹಿಡಿತದಲ್ಲಿಟ್ಟುಕೊಳ್ಳಲು ಕೇಂದ್ರದ ಆಡಳಿತರೂಡ ಪಕ್ಷದ ಪರವಾದವರನ್ನೆ ರಾಜ್ಯಪಾಲರನ್ನಾಗಿ ನೇಮಿಸುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಕೇಂದ್ರದ ಸೂತ್ರದ ಗೊಂಬೆಗಳಂತೆ ರಾಜ್ಯಪಾಲರು ಕೆಲಸ ಮಾಡುತ್ತಿದ್ದಾರೆ ಎಂಬ ಟೀಕೆಗಳು ವ್ಯಕ್ತವಾಗುತ್ತಿವೆ. ಪ್ರಸ್ತುತ ದಕ್ಷಿಣ ರಾಜ್ಯಗಳಾದ ಕೇರಳ, ತಮಿಳುನಾಡುಗಳಲ್ಲಿ, ತೆಲಾಂಗಣಗಳಲ್ಲಿ ಆಡಳಿತರೂಡ ಪಕ್ಷಗಳು ಮತ್ತು ರಾಜ್ಯಪಾಲರ ನಡುವೆ ತೀಕ್ಷ್ಣ ದಾಳಿ ಮತ್ತು ಪ್ರತಿದಾಳಿಗಳು, ತೀವ್ರ ಸಂಘರ್ಷಗಳು ನಡೆಯುತ್ತಿವೆ. ಒಂದೆಡೆ ರಾಜ್ಯಪಾಲರು ಕೇಂದ್ರದ ಏಜೆಂಟ್ ವರ್ತಿಸುತ್ತಾರೆ ಎಂಬ ಆರೋಪಗಳನ್ನು ಪ್ರಾದೇಶಿಕ ಪಕ್ಷಗಳ ಆಡಳಿತರೂಡ ಸರ್ಕಾರಗಳು ಆರೋಪಿಸುತ್ತಿವೆ. ಸಮಕಾಲೀನ ಸಂದರ್ಭದಲ್ಲಿ ಮುಖ್ಯ ಸಮಸ್ಯೆಯಾಗಿ ಕೇರಳ ಸರ್ಕಾರ ಮತ್ತು ರಾಜ್ಯಪಾಲರಾದ ಆರಿಫ್ ಮಹಮದ್ ಖಾನ್ ರವರ ನಡುವೆ ವಿಶ್ವವಿದ್ಯಾಲಯಗಳ ಉಪಕುಲಪತಿಗಳ ನೇಮಕದ ವಿಚಾರವಾಗಿ ಉಂಟಾಗಿರುವ ಸಂಘರ್ಷವು ತಾರಕಕ್ಕೇರಿದೆ. ರಾಜ್ಯಪಾಲರದ್ದು ಸಂವಿಧಾನಿಕ ಸ್ಥಾನ, ಕುಲಪತಿಗಳದ್ದು ಶಾಸನಬದ್ದ ಸ್ಥಾನ ಭಾರತ ಸಂವಿಧಾನದಲ್ಲಿ ಎಲ್ಲಿಯೂ ಕುಲಪತಿಯೇ ರಾಜ್ಯಪಾಲರಾಗಿರಬೇಕು ಎಂದು ಹೇಳಿಲ್ಲ, ಯುಜಿಸಿಯ ಯಾವುದೇ ನಿಯಮಗಳಲ್ಲಿ ಕುಲಪತಿಗಳೇ ರಾಜ್ಯಪಾಲರಾಗಿರಬೇಕು ಎಂದು ಎಲ್ಲಿಯೂ ಹೇಳಿಲ್ಲವೆಂದು ಸುಗ್ರೀವಾಜ್ಞೆ ಮೂಲಕ ರಾಜ್ಯಪಾಲರನ್ನು ಕೆಳಗಿಳಿಸುವ ಸರ್ಕಾರದ ನಿರ್ಧಾರ ಕೇಂದ್ರ ಮತ್ತು ರಾಜ್ಯದ ನಡುವೆ ವೈರುದ್ಯಕ್ಕೆ ಕಾರಣವಾಗಿದೆ. ಪಶ್ಚಿಮಬಂಗಳದ ಮಮತಾಬೆನರ್ಜಿ ಮತ್ತು ರಾಜ್ಯಪಾಲರ ನಡುವೆ ಶಿತಲಸಮರವೇ ಏರ್ಪಟ್ಟಂತಿದೆ. ರಾಜ್ಯಪಾಲರ ಹುದ್ದೆಯ ಜವಾಬ್ದಾರಿಯನ್ನು ಮುಖ್ಯ ನ್ಯಾಯಾಧೀಶರಿಗೆ ನೀಡಿ ರಾಜ್ಯಪಾಲರ ಹುದ್ದೆಯನ್ನು ರದ್ದುಗೊಳಿಸಬೇಕೆಂದು ಅಬಿಪ್ರಾಯಗಳು ವ್ಯಕ್ತವಾಗುತ್ತಿರುವುದು ಆರೋಗ್ಯಕರ ಬೆಳವಣಿಗೆಯಲ್ಲ. ರಾಜ್ಯ ಅಸೆಂಬ್ಲಿಗಳು ಅಂಗೀಕರಿಸುವ ಮಸೂದೆಗಳಿಗೆ ರಾಜ್ಯಪಾಲರು ಸಹಿ ಹಾಕಲು ಅತೀ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದರ ಮೂಲಕ ರಾಜ್ಯಾಡಳಿತದ ಪ್ರಕ್ರೀಯೆಗಳು ತಟಸ್ಥವಾಗಿಯೇ ಉಳಿಯುತ್ತಿವೆ ಎಂಬ ಆರೋಪಗಳು ಕೇಳಿಬರುತ್ತಿವೆ. ಕೇಂದ್ರದ ಆಡಳಿತರೊಡ ಪಕ್ಷದಂತೆ ರಾಜ್ಯದಲ್ಲೂ ಅದೇ ಪಕ್ಷವಿದ್ದರೆ ಇಂತಹ ವಿವಾದಗಳು ಹುಟ್ಟವುದು ಬಹುತೇಕ ಕಡಿಮೆ. ಆದರೆ ಪ್ರಾದೇಶಿಕ ಪಕ್ಷಗಳು ಆಡಳಿತವಿರುವ ಕಡೆ ಈ ಸಮಸ್ಯೆ ಸಹಜವಾದುದಾಗಿದೆ. ರಾಜ್ಯಪಾಲರು ಕೇಂದ್ರ ಮತ್ತು ರಾಜ್ಯಗಳ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸಬೇಕೇ ವಿನಃ ವೈರುಧ್ಯಗಳನ್ನು ಸೃಷ್ಟಿ ಮಾಡುವುದಲ್ಲ ಎಂಬುದನ್ನು ಅರಿತುಕೊಳ್ಳಬೇಕು.

**ಉಪಸಂಹಾರ:**

ಪ್ರಜಾಪ್ರಭುತ್ವದ ವಿಶಿಷ್ಟ ಲಕ್ಷಣವಾದ ವಿಕೇಂದ್ರೀಕರಣವು ಕೇಂದ್ರದಿಂದ ರಾಜ್ಯಗಳಿಗೆ ರಾಜ್ಯಗಳಿಂದ ಜಿಲ್ಲೆಗಳಿಗೆ ಜಿಲ್ಲೆಗಳಿಂದ ಗ್ರಾಮಗಳಿಗೆ ರಾಜಕೀಯ, ಆರ್ಥಿಕ, ಸಾಮಾಜಿಕ ಹಕ್ಕು ಮತ್ತು ಅಧಿಕಾರಗಳ ವಿಕೇಂದ್ರೀಕರಣವಾಗಿದೆ. ರಾಜಕೀಯ ಮತ್ತು ಆರ್ಥಿಕ ಹಕ್ಕುಗಳ ಅಧಿಕಾರಗಳು ಆಳತೆ ಮೀರಿ ಕೇಂದ್ರ ಸರ್ಕಾರದಲ್ಲಿ ಕೇಂದ್ರೀಕೃತವಾಗಿವೆ. ಆದರೆ ರಾಜ್ಯಸರ್ಕಾರಗಳ ಮೇಲೆ ಅತೀ ಹೆಚ್ಚಿನ ಹೊಣೆಗಾರಿಕೆಗಳು ಇವೆ. ರಾಜ್ಯಗಳಿಗೆ ಅಗತ್ಯವಾದ ಸ್ವಯತ್ತತೆಯು ಇಲ್ಲವಾದರೆ ಅಬಿವೃದ್ದಿಗೆ ಅಡೆತಡೆಗಳುಂಟಾಗುತ್ತವೆ. ಇಂತಹ ಅಸಮತೋಲನಗಳನ್ನು ಸರಿಪಡಿಸುವ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಮೂಲಕ ರಾಜ್ಯಗಳನ್ನು ನ್ಯಾಯಬದ್ದ ಸಬಲೀಕರಿಸುವ ಅಗತ್ಯವಿದೆ. ವೈವಿಧ್ಯತೆಯಲ್ಲಿ ಏಕತೆಯೇ ಇಲ್ಲಿನ ಜೀವಾಳವಾಗಿದೆ. ಅನೇಕ ಗಣರಾಜ್ಯಗಳನ್ನು ಒಗ್ಗೂಡಿಸಿ ದೇಶವನ್ನು ಆಳುವವರು ಎಲ್ಲಾ ರಾಜ್ಯಗಳನ್ನು ಸಮಾನವಾಗಿ ನೋಡಬೇಕು. ಪ್ರತಿ ರಾಜ್ಯ ಅಲ್ಲಿನ ಭಾಷೆ ಅದರ ಅನನ್ಯವಾದ ಸಂಸ್ಕೃತಿಯನ್ನು ಗೌರವಿಸಬೇಕು. ಕೇಂದ್ರ ಮತ್ತು ರಾಜ್ಯಗಳ ನಡುವಿನ ಬಿಕ್ಕಟ್ಟುಗಳಿಗೆ ಕಾರಣವಾಗಿರುವ ಸಮಸ್ಯೆಗಳ ಪರಿಹರಿಸುವಲ್ಲಿ ರಾಜಕೀಯವನ್ನು ಬಂಡವಾಳವಾಗಿಟ್ಟುಕೊಳ್ಳದೆ ನಿಷ್ಪಕ್ಷಪಾತವಾಗಿ ಬಗೆಹರಿಸಿದಾಗ ಮಾತ್ರ ಅಖಂಡ ಭಾರತದ ಸರ್ವತೋಮುಖ ಪ್ರಗತಿಗೆ ಸಾಧ್ಯವಾಗುತ್ತದೆ.

**ಆಧಾರ ಗ್ರಂಥಗಳು**

೧. ಪಿ.ಎಸ್.ಗಂಗಾಧರ್, ೨೦೦೯, ಭಾರತ ಸಂವಿಧಾನ ಮತ್ತು ರಾಜಕೀಯ, ಚೈತ್ರ ಪ್ರಕಾಶನ ಬೆಂಗಳೂರು.
೨. ಪ್ರೋ.ಡಿ.ಎಲ್.ದೇವರಾಜ್. ಭಾರತ ಸಂವಿಧಾನ. ಯಶ್ ಪ್ರಕಾಶನ, ಬೆಂಗಳೂರು
೩. ತ್ರಿಭಾಷಸೂತ್ರ ಮತ್ತು ಸಂವಿಧಾನ. ಎಸ್ ಎಂ ಜಮಾದಾರ್, ಪ್ರಜಾವಾಣಿ, ೦೯/೯/೨೦೨೦
೪. ಭಾರತ ಸಂವಿಧಾನ,೨೦೨೦, ಕೆ.ಎಂ. ಸುರೇಶ್, ವಸಂತ ಪ್ರಕಾಶನ ಬೆಂಗಳೂರು.

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವಿನ ಸಂಬಂಧಗಳು

ಲೇಖಕರು
ಡಾ.ಮಂಜಣ್ಣ, ಪಾ, ಜಂಗವಾಡ
ಸ.ಪ್ರ.ದ ಕಾಲೇಜು ಕಲಘಟಗಿ

**ಪೀಠಿಕೆ:**

ಸಂವಿಧಾನ ರಚನಾಕಾರರು ಹಾಗೂ ಭಾರತೀಯ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷ ಸರಕಾರ ಹೊರಡಿಸಿದ ಕಾಯ್ದೆಗಳು ಭಾರತಕ್ಕೆ ಶಕ್ತಿಯುತ ಕೇಂದ್ರ ಸರಕಾರವನ್ನೊಳಗೊಂಡ ಸಂಯುಕ್ತ ವ್ಯವಸ್ಥೆಯನ್ನು ಪ್ರತಿಪಾದಿಸಿದವು. ಅದರಂತೆ ನೆಹರುರವರು ತಮ್ಮ ಧ್ಯೇಯಗಳ ನಿರ್ಣಯದಲ್ಲಿ ಪ್ರಸ್ತಾಪಿಸಿದಂತೆ ಶಕ್ತಿಯುತ ಕೇಂದ್ರದ ಪರವಾಗಿಯೇ ತಮ್ಮ ಒಲವು ವ್ಯಕ್ತಪಡಿಸಿದರು. ವಾಸ್ತವದಲ್ಲಿ ಭಾರತದ ಸಂವಿಧಾನದ ಯಾವ ಭಾಗದಲ್ಲೂ ಸಂಯುಕ್ತವೆಂಬ ಪದದ ಬಳಕೆಯಿಲ್ಲ ಬದಲಾಗಿ 'ಒಕ್ಕೂಟ' ಎಂಬ ಪದ ಬಳಕೆಯಿದೆ. ಅಂದರೆ ಭಾರತವು 'ರಾಜ್ಯಗಳ ಒಕ್ಕೂಟ' ಎಂಬುದಾಗಿದೆ. ಆದರೂ ಸಂಯುಕ್ತ ವ್ಯವಸ್ಥೆಯ ಲಕ್ಷಣಗಳನ್ನು ನಾವು ಕಾಣುತ್ತೇವೆ. ಉದಾ: ಲಿಖಿತ ಸಂವಿಧಾನ, ಕೇಂದ್ರ ರಾಜ್ಯಗಳಿಗೆ ಅಧಿಕಾರ ಹಂಚಿಕೆ,ಸಂಬಧ ಹಾಗೂ ಪ್ರತ್ಯೇಕ ಆಡಳಿತ ಸೇವೆ, ದ್ವಿ–ಸದನ ಶಾಸಕಾಂಗ, ಶ್ರೇಷ್ಟ ನ್ಯಾಯಾಂಗ ವ್ಯವಸ್ಥೆ ಮುಂತಾದವುಗಳು. ಭಾರತೀಯ ಸಂಯುಕ್ತ ವ್ಯವಸ್ಥೆಯ ಕಾರ್ಯಾಚರಣೆಯ ಸ್ವರೂಪವನ್ನು ಹಾಗೂ ಸಂಬಂಧಗಳನ್ನು ನೋಡಿದಾಗ ವಾಸ್ತವದಲ್ಲಿ ರಾಜ್ಯಗಳು ಪ್ರಬಲ್ ಕೇಂದ್ರ ಸರಕಾರದ ನಿಯಂತ್ರಣಕ್ಕೆ ಒಳಪಟ್ಟಿದ್ದು ಸ್ಪಷ್ಟವಾಗಿದೆ.

**ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧಗಳು**

ಭಾರತದ ಸಂಯುಕ್ತ ವ್ಯವಸ್ಥೆಯ ಸ್ವರೂಪವನ್ನು ಸಂವಿಧಾನಾತ್ಮಕವಾಗಿ ಈ ರೀತಿಯಾಗಿ ನಿರೂಪಿಸಬಹುದು. ಸಂವಿಧಾನದ ಹನ್ನೊಂದನೇ ಭಾಗದಲ್ಲಿಕೇಂದ್ರ ಮತ್ತು ರಾಜ್ಯಗಳ ನಡುವಿನ ಶಾಸನೀಯ, ಕಾರ್ಯಾಂಗೀಯ ಹಾಗೂ ಹಣಕಾಸಿನ ಸಂಬಂಧಗಳನ್ನು ಅಧಿಕಾರಗಳ ವಿಭಜನೆಯ ಆಧಾರದ ಮೇಲೆ ಭಾರತೀಯ ಕೇಂದ್ರ ರಾಜ್ಯಗಳ ನಡುವಿನ ಸಂಬಂಧಗಳ ಸ್ವರೂಪ ನಿರ್ಧಾರವಾಗುವುದು.

**ಶಾಸನೀಯ ಅಧಿಕಾರಗಳು:**

ಕೇಂದ್ರ ಮತ್ತು ರಾಜ್ಯಗಳ ಆಡಳಿತದ ಅನುಕೂಲಕ್ಕಾಗಿ ಶಾಸನೀಯ ಅಧಿಕಾರಗಳನ್ನು ಮೂರು ಪಟ್ಟಿಗಳ ವಿಷಯದ ಆಧಾರದಲ್ಲಿ ವರ್ಗೀಕರಿಸಲಾಗಿದೆ.

೧. **ಕೇಂದ್ರ ಪಟ್ಟಿ ವಿಷಯಗಳು** ಪ್ರಸ್ತುತ ೧೦೦ ಇದ್ದುಕೇಂದ್ರ ಸರಕಾರವೇ ಇವುಗಳ ಮೇಲೆ ಕಾನೂನು ಮಾಡುವ ಹಕ್ಕನ್ನು ಪಡೆದಿರುತ್ತದೆ. ಸಾಮಾನ್ಯವಾಗಿ ಈ ವಿಷಯಗಳು ಇಡೀರಾಷ್ಟ್ರಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಉದಾ: ರಕ್ಷಣಾ, ಹಣಕಾಸು, ಅಂಚೆ, ವಿದೇಶಿ ವ್ಯವಹಾರ ಮುಂತಾದವು.

೨. **ರಾಜ್ಯಪಟ್ಟಿ ವಿಷಯಗಳು** ಪ್ರಸ್ತುತ ೬೧ ಇವುಗಳ ಮೇಲೆ ರಾಜ್ಯ ಸರಕಾರಗಳು ಕಾನೂನು ಮಾಡುವ ಸ್ವಾತಂತ್ರ್ಯ ಹೊಂದಿವೆ. ಉದಾ: ಪೋಲೀಸ್, ಕಾನೂನು ಸುವ್ಯವಸ್ಥೆ, ಆರೋಗ್ಯ ಮುಂತಾದವುಗಳು. ಆದರೆ ಭಾರತದಲ್ಲಿಕೇಂದ್ರ ಸರಕಾರ ಪ್ರಬಲವಾಗಿರುವುದರಿಂದ

   ರಾಜ್ಯಪಟ್ಟಿಯ ಯಾವುದಾದರೂ ಒಂದು ವಿಷಯದ ಮೇಲೆ ರಾಜ್ಯಸಭೆ ೨/೩ ಬಹುಮತದಿಂದ ರಾಷ್ಟ್ರೀಯ ಹಿತಾಸಕ್ತಿಯ ಆದ್ಯತೆ ಮೇರೆಗೆ ಲೋಕಸಭೆಗೆ ಕಾನೂನು ಮಾಡುವಂತೆ ಕೇಳಿಕೊಂಡಾಗ ರಾಜ್ಯಗಳು ತಮ್ಮ ವ್ಯಾಪ್ತಿಯ ವಿಷಯಗಳನ್ನು ಕೇಂದ್ರಕ್ಕೆ ಬಿಟ್ಟುಕೊಡಬೇಕಾಗುತ್ತದೆ. ಇದು ರಾಜ್ಯಗಳನ್ನು ಅಶಕ್ತಗೊಳಿಸುವ ಮಾರ್ಗವಾಗಿದೆ. ಹಾಗೂ ಕೇಂದ್ರದ ಪ್ರಾಬಲ್ಯವನ್ನು ಎತ್ತಿತೋರಿಸುತ್ತದೆ.

೩. **ಸಮವರ್ತಿ ಪಟ್ಟಿಯ ವಿಷಯಗಳು:** ಪ್ರಸ್ತುತ ೫೨ ವಿಷಯಗಳಿದ್ದು ಕೇಂದ್ರ ಮತ್ತು ರಾಜ್ಯಗಳು ಸಮಾನವಾಗಿ ಈ ವಿಷಯಗಳನ್ನು ಕಾನೂನು ಮಾಡುವ ಉದ್ದೇಶಕ್ಕಾಗಿ ಬಳಸಿಕೊಳ್ಳಬಹುದು. ಉದಾ: ಶಿಕ್ಷಣ, ಸಾಮಾಜಿಕ ಯೋಜನೆಗಳು, ಕಾರ್ಮಿಕಕಲ್ಯಾಣ, ಆರ್ಥಿಕ ಯೋಜನೆಗಳು ಮುಂತಾದವುಗಳು.

   ಈ ವಿಷಯಗಳ ಸಮಾನ ಬಳಕೆಗೆ ಎರಡು ಸರಕಾರಗಳಿಗೆ ಅವಕಾಶವಿದ್ದರೂ ರಾಜ್ಯ ಮಾಡಿದ ವಿಷಯದ ಮೇಲೆ ಕೇಂದ್ರ ಕಾನೂನು ಮಾಡಲು ನಿರ್ಧರಿಸಿದರೆ ಆ ವಿಷಯವನ್ನು ರಾಜ್ಯ ಕೇಂದ್ರಕ್ಕೆ ಬಿಟ್ಟುಕೊಡಬೇಕು. ಇಲ್ಲಿಯವರೆಗೆ ಕೇಂದ್ರವೇ ಪ್ರಬಲವಾಗಿ ರಾಜ್ಯಗಳು ಅಶಕ್ತವಾಗಿವೆ.

೪. **ಶೇಷಾಧಿಕಾರಗಳು:** ಈ ಮೇಲಿನ ಮೂರು ಪಟ್ಟಿಗಳ ಹೊರತಾಗಿ ಉಳಿದಿರುವ ವಿಷಯಗಳೇ ಶೇಷಾಧಿಕಾರಗಳು. ಈ ವಿಷಯಗಳಂತು ಸಂಪೂರ್ಣವಾಗಿ ಕೇಂದ್ರ ಸರಕಾರದ ಅಧೀನಕ್ಕೆ ಒಳಪಡುವವು ರಾಜ್ಯ ಸರಕಾರಗಳಿಗೆ ಯಾವುದೇ ಸ್ವಾತಂತ್ರ್ಯಗಳನ್ನು ನೀಡಿಲ್ಲ.

ಅಂದರೆ ಶಾಸನೀಯ ಅಧಿಕಾರಗಳೆಲ್ಲ ಸಂಪೂರ್ಣವಾಗಿ ಕೇಂದ್ರವೇ ಪ್ರಬಲವಾಗಿರುವುದು ಸ್ಪಷ್ಟವಾಗಿದೆ ಎಂಬುವುದನ್ನು ಕೇಂದ್ರದ ಆಡಳಿತ ಸ್ವರೂಪದಿಂದ ತಿಳಿದುಕೊಳ್ಳುತ್ತೇವೆ.

**ಕಾರ್ಯಾಂಗೀಯ ಅಧಿಕಾರಗಳು:**

ಭಾರತೀಯ ಆಡಳಿತ ವ್ಯವಸ್ಥೆಯಲ್ಲಿ ಮೂರು ಪ್ರಕಾರದ ಆಡಳಿತ ವ್ಯವಸ್ಥೆಯನ್ನುಕಾಣುತ್ತೇವೆ.

೧. ಅಖಿಲ ಭಾರತೀಯ ಸೇವೆಗಳು

೨. ಕೇಂದ್ರ ಸೇವೆಗಳು

೩. ರಾಜ್ಯ ಸೇವೆಗಳು

ರಾಜ್ಯ ಸರಕಾರಗಳಿಗೆ ರಾಜ್ಯ ಸೇವೆಗಳಲ್ಲಿ ಅದರ ನೇಮಕ, ಅರ್ಹತೆ, ವೇತನ, ಬಡ್ತಿ, ಪದಚ್ಯುತಿ, ವರ್ಗಾವಣೆ ಹಾಗೂ ಇತರೆ ಸೇವಾ ಸೌಲಭ್ಯಗಳ ಕುರಿತು ಕಾನೂನು ರೂಪಿಸುವ ಸ್ವಾತಂತ್ರ್ಯವಿದೆ. ಉಳಿದಂತೆ ಅಖಿಲ ಭಾರತ ಹಾಗೂ ಕೇಂದ್ರ ಸೇವೆಗಳು ಅವು ಸಂಪೂರ್ಣಕೇಂದ್ರ ಸರಕಾರದ ನಿಯಂತ್ರಣದಲ್ಲಿದ್ದು ರಾಜ್ಯಗಳಿಗೆ ಆ ಸೇವೆಗಳನ್ನು ಕೇಂದ್ರವೇ ನಿಯುಕ್ತಿಗೊಳಿಸುತ್ತದೆ. ರಾಜ್ಯದ ಎಲ್ಲ ಪ್ರಮುಖ ಸರಕಾರಿ ಇಲಾಖೆಗಳಲ್ಲಿ ಕೇಂದ್ರದ ಆಡಳಿತಾಧಿಕಾರಿಗಳೇ ಮುಖ್ಯಸ್ಥರಾಗಿದ್ದು ಅವರೇ ರಾಜ್ಯ ಸರಕಾರಗಳ ನೈಜಕಾರ್ಯಾಂಗವಾಗಿ ಆಡಳಿತ ನಿರ್ವಹಿಸುತ್ತಾರೆ. ಉದಾ: ಐ.ಎ.ಎಸ್. ಐ.ಪಿ.ಎಸ್. ಇಲ್ಲಿಯು ರಾಜ್ಯಸೇವೆಗಳಿಗೆ ಹೆಚ್ಚಿನ ಆದ್ಯತೆಗಳೆಲ್ಲ ಕಾರ್ಯಾಂಗೀಯ ವಿಷಯಗಳಲ್ಲೂ ಕೇಂದ್ರ ಪರಮ ಶ್ರೇಷ್ಠವಾಗಿಕಾಣುತ್ತದೆ. ಸಂವಿಧಾನದ ೩೫೫ ಹಾಗೂ ೨೫೬ ವಿಧಿಗಳನ್ವಯ ರಾಜ್ಯ ಸರಕಾರ ಕೇಂದ್ರದ ಯಾವುದೇ ಕಾನೂನುಗಳನ್ನು ಉಲ್ಲಂಘಿಸುವಂತಿಲ್ಲ. ಒಂದು ವೇಳೆ ಉಲ್ಲಂಘಿಸಿದರೆ ೩೫೬ನೇ ವಿಧಿಯ ಪ್ರಕಾರ ರಾಜ್ಯಗಳ ಮೇಲೆ ರಾಷ್ಟ್ರಪತಿ ಆಡಳಿತ ಜಾರಿಗೆತಂದು ರಾಜ್ಯ ಸರಕಾರಗಳನ್ನು ವಜಾಗೊಳಿಸಲುಬಹುದು. ಅಷ್ಟೊಂದು ಪ್ರಬಲ ಅಧಿಕಾರ ಕೇಂದ್ರಕ್ಕಿದೆ.

**ಹಣಕಾಸಿನ ಅಧಿಕಾರಗಳು:**

ಕೇಂದ್ರ ರಾಜ್ಯಗಳ ನಡುವಿನ ಹಣಕಾಸಿನ ಸಂಬಂಧಗಳಿಗೆ ಸಂಬಂಧಿಸಿದಂತೆ ಸಮಾನ ಹಣಕಾಸಿನ ಸಂಪನ್ಮೂಲ ಹಂಚಿಕೆಯಉದ್ದೇಶದಿಂದ ಸಂವಿಧಾನದ ೨೮೦ನೇ ವಿಧಿಯನ್ವಯ ಹಣಕಾಸು ಆಯೋಗವನ್ನು ಸ್ಥಾಪನೆ ಮಾಡಲಾಗಿದ್ದು, ಕೇಂದ್ರವು ರಾಜ್ಯಗಳ ಆರ್ಥಿಕ ಪರಿಸ್ಥಿತಿಗಳನ್ನು ಮೇಲ್ವಿಚಾರಿಸುತ್ತದೆ. ಆದರೂ ರಾಜ್ಯಗಳು ಹಣಕಾಸಿನ ವಿಷಯದಲ್ಲಿ ಸ್ವಾಯತ್‌ವಾಗಿಲ್ಲ.

೧. ೨೬೮ನೇ ವಿಧಿಯ ಪ್ರಕಾರಕೇಂದ್ರ ವಿಧಿಸಿದ ತೆರಿಗೆಯನ್ನು ಕಾರ್ಯಗಳು ಸಂಗ್ರಹಿಸಿ ಅವುಗಳನ್ನು ಕೇಂದ್ರದೊಂದಿಗೆ ಹಂಚಿಕೊಳ್ಳಬೇಕು.

೨. ೨೬೯ನೇ ವಿಧಿಯ ಮೂಲಕ ಕೆಲವು ತೆರಿಗೆಗಳನ್ನು ಕೇಂದ್ರವೇ ವಿಧಿಸಿ ಅದುವೇ ಸಂಗ್ರಹಿಸಿ ರಾಜ್ಯಗಳಿಗೆ ಹಂಚುವುದು.

೩. ೨೭೦ನೇ ವಿಧಿಯ ಪ್ರಕಾರ ಕೇಂದ್ರವು ಆದಾಯತೆರಿಗೆಯನ್ನು ವಿಧಿಸಿ ತಾನೂ ಹಾಗೂ ರಾಜ್ಯಗಳ ನಡುವೆ ಹಂಚಿಕೊಳ್ಳುವದು.

೪. ಇನ್ನೂ ಕೆಲವು ತೆರಿಗೆಗಳಾದ ದೂರವಾಣಿ, ಅಂಚೆ, ಕಾರ್ಪೋರೇಷನ್‌ಟ್ಯಾಕ್ಸ್ ಮುಂತಾದ ತೆರಿಗೆಗಳನ್ನು ತಾನೇ ವಿಧಿಸಿ ತಾನೇ ಬಳಕೆ ಮಾಡುವ ಅಧಿಕಾರ ಕೇಂದ್ರಕ್ಕಿದೆ.

ಇಲ್ಲಿ ಮಹತ್ವದ ವಿಷಯವೆಂದರೆತೆರಿಗೆ ವಿಧಿಸುವಲ್ಲಿಕೇಂದ್ರದ ಪಾಲು ಶೇಕಡ ೬೭% ವಿದ್ದು ರಾಜ್ಯಗಳ ಪಾಲು ೩೩% ವಿದೆ. ಇತ್ತೀಚಿನ ಬೆಳವಣಿಗೆಗಳಲ್ಲಿ ಕಂಡು ಬಂದಿರುವ ಈ ಅನುದಾನದ ತಾರತಮ್ಯತೆ ಕೆಲ ರಾಜ್ಯಗಳನ್ನು ಆರ್ಥಿಕ ಅಭದ್ರತೆಗೆದೂಡಿವೆ. ಉದಾ: ಕೇಂದ್ರದಲ್ಲಿ ಒಂದು ಪಕ್ಷ ಅಧಿಕಾರದಲ್ಲಿದ್ದು ರಾಜ್ಯಗಳಲ್ಲಿ ಬೇರೊಂದು ಪಕ್ಷ ಅಧಿಕಾರದಲ್ಲಿದ್ದಾರೆ. ಆ ರಾಜ್ಯಗಳಿಗೆ ಅನುದಾನವನ್ನು ಸಮರ್ಪಕವಾಗಿ ನೀಡದಿರುವುದನ್ನು ಕಂಡಿದ್ದೇವೆ. ಇನ್ನೂ ಬರಗಾಲ, ನೆರೆ, ಪ್ರಾಕೃತಿಕ, ವಿಕೋಪಗಳ ಸಂದರ್ಭದಲ್ಲಿ ಕೇಂದ್ರ ರಾಜ್ಯಗಳಿಗೆ ಸಮರ್ಪಕ ಅನುದಾನ ನೀಡದೆ ರಾಜ್ಯಗಳ ಮನವಿಗೆ ಸ್ಪಂದಿಸಿದೆ ಇರುವುದು ಇತ್ತೀಚಿನ ಬೆಳವಣಿಗೆಗಳಾಗಿವೆ.

ಒಟ್ಟಾರೆಕೇಂದ್ರದಿಂದಲೇ ಸ್ಥಾಪಿತವಾದ ಪ್ರಧಾನಿಯ ಅಧ್ಯಕ್ಷತೆಯ ಹಣಕಾಸು ಆಯೋಗ ಯೋಜನಾ ಆಯೋಗಗಳು ರಾಜ್ಯಗಳಿಗೆ ಸಮರ್ಪಕ ರೀತಿಯ ಹಣಕಾಸಿನ ನೇರವು ನೀಡಿಕೆಯಲ್ಲಿ ಸಮಂಜಸವಾದ ಕಾರ್ಯವನ್ನು ಮಾಡಬೇಕಾಗಿದೆ. ಇಂದು ರಾಜ್ಯಗಳು ತಮ್ಮ ಹಣಕಾಸಿನ ಸಂಪನ್ಮೂಲಕ್ಕಾಗಿ ಕೇಂದ್ರದ ಮೇಲೆ ಅವಲಂಬನೆಯಾಗಿದ್ದು ಸುಳ್ಳಲ್ಲ.

**ವಿವಾದಗಳ ಇತ್ಯರ್ಥ:**

ರಾಜ್ಯ ರಾಜ್ಯಗಳ ಮಧ್ಯದ ಒಪ್ಪಂದ/ಕರಾರುಗಳು ಮತ್ತು ಭೂಗಡಿ, ಜಲ ವಿವಾದಗಳು ಹಾಗೂ ಕೇಂದ್ರ ರಾಜ್ಯಗಳ ನಡುವಿನ ವಿವಾದಗಳು ಇವೆಲ್ಲವು ಸಂವಿಧಾನದ ೧೩೧, ೨೬೨, ೨೬೩ ವಿಧಿಯ ಪ್ರಕಾರ ಕೇಂದ್ರ ರಚಿಸಿದ ನ್ಯಾಯಾಧೀಕರಣ, ಅಂತರಾಜ್ಯ ನ್ಯಾಯಮಂಡಳಿಗಳ ಮೂಲಕವೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು.

೧. ಗೋವಾ–ಮಹಾರಾಷ್ಟ್ರ–ಕರ್ನಾಟಕ ನಡುವಿನ ಮಹದಾಯಿ ಜಲ ವಿವಾದ.
೨. ಕರ್ನಾಟಕ–ಮಹಾರಾಷ್ಟ್ರ ನಡುವಿನ (ಬೆಳಗಾವಿ) ಗಡಿ ವಿವಾದ.
೩. ತಮಿಳುನಾಡು–ಕರ್ನಾಟಕ ನಡುವಿನ ಕಾವೇರಿ ವಿವಾದಇನ್ನೂ ಹಲವಾರು ವಿಚಾರಣೆಗಳು ಕೇಂದ್ರ ಸ್ಥಾಪಿಸಿದ ನ್ಯಾಯಾಧೀಕರಣದ ಮುಂದಿರುವುದರಿಂದ, ಇಲ್ಲಿ ರಾಜ್ಯಗಳ ಪಾತ್ರವೇನು? ಎಲ್ಲವನ್ನು ಕೇಂದ್ರವೇ ಪರಿಹರಿಸುವದಾದರೆ ರಾಜ್ಯಗಳ ಸ್ವಾಯತ್ತತೆ ಏನು? ಎಂಬ ಪ್ರಶ್ನೆಗಳಿಗೆ ಉತ್ತರ ನೀಡುವುದು ಕಠಿಣವಾಗಿದೆ.

ಈ ರೀತಿಯಾಗಿ ಭಾರತೀಯ ಕೇಂದ್ರ ರಾಜ್ಯಗಳ ನಡುವಿನ ಸಂಬಂಧಗಳಲ್ಲಿ ಎಲ್ಲ ವಿಷಯಗಳಲ್ಲಿ ಕೇಂದ್ರ ಸರಕಾರವನ್ನು ಪ್ರಬಲಗೊಳಿಸಿ ರಾಜ್ಯಗಳನ್ನು ಅಶಕ್ತಗೊಳಿಸಿದೆ. ಆದಕಾರಣ ಭಾರತದ ಸಂಯುಕ್ತ ವ್ಯವಸ್ಥೆಯು ಶುದ್ಧವಾದ ಸಂಯುಕ್ತ ವ್ಯವಸ್ಥೆಯಾಗಿರದೆ ಅದು ಏಕೀಕೃತ ಸಂಯುಕ್ತ ವ್ಯವಸ್ಥೆಯಾಗಿ ಮಾರ್ಪಟ್ಟಿದೆ ಎಂಬುದು ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧಗಳನ್ನು ಅಧ್ಯಯನ ಮಾಡುವುದರ ಮೂಲಕ ತಿಳಿದುಕೊಳ್ಳಬಹುದಾಗಿದೆ.

**ಆಧಾರ ಗ್ರಂಥಗಳು :**


1. J. C. Johavi : Indian Government and Politics, Sterling Publishers, Dehli-2007.
2. R.C. Agarwal : Indian Political System, S Chand and Company, New Delhi-2003.
3. D.C. Gupta : Indian Government and Politics, Viks Publishing House, Ltd – 1994.
4. J.C. Johari : Indian Polity, Lotus Press, New Delhi-2004
5. B.L. Fadia : Indian Government and Politics, Sahitya Bhavan, Agra- 2005.
6. D. Srinivasan : Indian Constitution, Himalaya Publishing House, New Delhi – 2005.
7. ಎಚ್.ಸಿ.ಲೋಹಿತಾಶ್ವ : ತುಲನಾತ್ಮಕ ಸರಕಾರ ಮತ್ತುರಾಜಕೀಯ, ವಿದ್ಯಾನಿಧಿ ಪ್ರಕಾಶನ, ಗದಗ–೨೦೦೬.
7 ಪ್ರೋ.ಎಚ್.ಎಮ್.ರಾಜಶೇಖರ : ಭಾರತ ಸರಕಾರ ಮತ್ತುರಾಜಕೀಯ, ಕಿರಣ್ ಪ್ರಕಾಶನ, ಕುವೆಂಪು ನಗರ, ಮೈಸೂರು–೨೦೦೮.
8 ಡಾ॥ ಕೆ.ಎಂ.ಸುರೇಶ : ಭಾರತದ ಸಂವಿಧಾನ, ಸ್ಪರ್ಧಾ ವಿಜೇತ ಪ್ರಕಾಶನ, ಬೆಂಗಳೂರು–೨೦೧೩.
9 ಪ್ರೋ.ಎನ್.ಬಿ.ಪಾಟೀಲ, ಪ್ರೋ.ಬಿ.ವಿ.ಶೀಲವಂತರ : ಭಾರತದರಾಜಕೀಯ ಪ್ರಕ್ರಿಯೆಗಳು ಹಾಗೂ ಸಂಸ್ಥೆಗಳು, ಅರುಣ ಪ್ರಕಾಶನ, ವಿಜಯಪೂರ–೨೦೧೪.
10 ಪ್ರೋ.ಎನ್.ಬಿ.ಪಾಟೀಲ : ತುಲನಾತ್ಮಕ ಸರಕಾರ ಮತ್ತುರಾಜಕೀಯ, ಅರುಣ ಪ್ರಕಾಶನ, ವಿಜಯಪೂರ–೨೦೧೫.

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಭಾರತದ ಒಕ್ಕೂಟ ವ್ಯವಸ್ಥೆ ಮತ್ತು ಸಮಕಾಲೀನ ನಿರೂಪಣೆಗಳು

**ಯುವರಾಜ. ಎಂ. ಹಿತ್ಲರ್,**
ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ.

**ಡಾ. ಉದ್ದಗಟ್ಟಿ ವೆಂಕಟೇಶ,**
ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ.

**ಪೀಠಿಕೆ:**

ಭಾರತ ಸಂವಿಧಾನದ ಒಂದನೇ ವಿಧಿಯ ಪ್ರಕಾರ ಭಾರತವು 'ರಾಜ್ಯಗಳ ಒಕ್ಕೂಟ'ವಾಗಿದೆ. ಅಖಂಡವಾದ ರಾಷ್ಟ್ರವನ್ನು ವಿವಿಧ ಆಡಳಿತ ಘಟಕಗಳನ್ನಾಗಿ ವಿಭಜಿಸಿ, ಕೆಲವೊಂದು ಆಡಳಿತ ವಿಷಯಗಳನ್ನು ಹಂಚಿಕೆ ಮಾಡುವುದರ ಮೂಲಕ ಭಾರತದ 'ಒಕ್ಕೂಟ ವ್ಯವಸ್ಥೆ' ಅಸ್ತಿತ್ವಕ್ಕೆ ಬಂದಿದೆ. ಇಂದು ಭಾರತದಲ್ಲಿ ೨೮ ರಾಜ್ಯಗಳು ಹಾಗೂ ೮ ಕೇಂದ್ರಾಡಳಿತ ಪ್ರದೇಶಗಳಿವೆ. ಭಾರತವು ಬಹುಸಂಸ್ಕೃತಿಯುಳ್ಳ ದೇಶವಾಗಿದ್ದು ಇಲ್ಲಿ ವಿವಿಧ ಧರ್ಮ, ಜಾತಿ, ಮತ, ಪಂಗಡ, ವಿವಿಧ ಭಾಷೆಗಳನ್ನಾಡುವ, ಅನುಸರಿಸುವ ಜನರಿದ್ದಾರೆ. ಆದರೂ ಭಾಷೆಯ ಆಧಾರದ ಮೇಲೆ ರಾಜ್ಯಗಳನ್ನು ಸೃಷ್ಟಿಸಲಾಗಿದೆ. ಆದರೆ ಭಾರತದ ರಾಷ್ಟ್ರೀಯ ಸಮಗ್ರತೆಗೆ ಕೋಮುವಾದ, ಜಾತೀಯತೆ, ಪ್ರಾದೇಶಿಕವಾದ, ಭಾಷಾಂಧತೆ, ಪ್ರಾದೇಶಿಕ ಪಕ್ಷಗಳು ಸವಾಲಾಗಿ ಪರಿಣಮಿಸಿವೆ. ಈ ಅಂಶಗಳ ಹಿನ್ನಲೆಯಲ್ಲಿಯೇ ರಾಜ್ಯಗಳ ಸ್ವಾಯತ್ತತೆಯ ಹೆಸರಿನಲ್ಲಿ ಸಾರ್ವಭೌಮತೆಗೆ ಬೇಡಿಕೆಗಳು ನಡೆಯುತ್ತಿವೆ. ಅಮೇರಿಕಾ ಸಂಯುಕ್ತ ವ್ಯವಸ್ಥೆಯಲ್ಲಿ ರಾಜ್ಯಗಳಿಗೆ ಹೇಗೆ ಸ್ವಾಯತ್ತತೆ ನೀಡಲಾಗಿದೆಯೋ ಅದರ ಆಧಾರದ ಮೇಲೆ ಭಾರತದಲ್ಲಿ ರಾಜ್ಯಗಳಿಗೆ ಸ್ವಾಯತ್ತತೆ ಇದೆ, ಅ ರಾಜ್ಯಗಳ ಸ್ವಾಯತ್ತತೆಯನ್ನು ಕೇಂದ್ರ ಸರ್ಕಾರವು ಕಿತ್ತುಕೊಂಡಿದೆ ಎಂಬ ಚರ್ಚೆಗಳು ಪ್ರಚಲಿತದಲ್ಲಿವೆ.

ಅಮೇರಿಕಾವು ಬೇರೆ ಬೇರೆ ಘಟಕಗಳು ಪರಸ್ಪರ ಒಪ್ಪಂದವನ್ನು ಮಾಡಿಕೊಂಡು ರೂಪಿಸಿಕೊಂಡಿರುವ ರಾಜಕೀಯ ವ್ಯವಸ್ಥೆಯಾಗಿದ್ದು, ಇದನ್ನು ಸಂಯುಕ್ತ ವ್ಯವಸ್ಥೆ ಎಂದು ಕರೆಯುತ್ತಾರೆ. ಆದರೆ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಅಧಿಕಾರ ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಹಂತಗಳಲ್ಲಿ ಸಂವಿಧಾನಾತ್ಮಕವಾಗಿ ಹಂಚಿಕೆಯಾಗಿರುವ ಒಕ್ಕೂಟ ವ್ಯವಸ್ಥೆಯಾಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಸಂವಿಧಾನಿಕ ಅಧಿಕಾರದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುವ ಗುಣಗಳನ್ನು ಹೊಂದಿರುತ್ತವೆ. ಆದರೆ ಸಂಯುಕ್ತ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಅಧಿಕಾರವನ್ನು ಹೊಂದಿರುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಅಮೇರಿಕಾ ಸಂಯುಕ್ತ ಸಂಸ್ಥಾನವಾಗಿದೆ. ಭಾರತೀಯ ಸಂವಿಧಾನವು ಭಾರತವು ಒಂದು ಒಕ್ಕೂಟ ವ್ಯವಸ್ಥೆ ಎಂದು ಸ್ಪಷ್ಟವಾಗಿ ಹೇಳಿದ್ದರೂ, ಕೇಂದ್ರಕ್ಕೆ ಹೆಚ್ಚಿನ ಅಧಿಕಾರವನ್ನು ನೀಡುವ ಮೂಲಕ ರಾಜ್ಯಗಳ ಅಧಿಕಾರವನ್ನು ಮೊಟಕುಗೊಳಿಸಿದೆ ಎಂಬ ಮುಂತಾದ ಕಾರಣಗಳನ್ನು ಚಿಂತಕರು ಗುರುತಿಸುತ್ತಾರೆ. ಈ ಮೂಲಕ ಭಾರತದ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿ ವಾದಗಳನ್ನು ಮಂಡಿಸುತ್ತಾರೆ. ಸಂವಿಧನಾತ್ಮಕವಾಗಿ ಭಾರತವು ಒಕ್ಕೂಟ ವ್ಯವಸ್ಥೆಯನ್ನು ಹೊಂದಿದ್ದರೂ, ರಾಜ್ಯಗಳಿಗೆ ಸ್ವಾಯತ್ತತೆಯನ್ನು ನೀಡುವ ಸಂಯುಕ್ತ ವ್ಯವಸ್ಥೆಯ ನಿರೀಕ್ಷೆಯ ವಾದಗಳು ಮುನ್ನಲೆಗೆ ಬರುತ್ತವೆ. ಈ ರೀತಿಯ ಗೊಂದಲಗಳು ಉಂಟಾಗಲು ಕಾರಣವೇನು? ಎಂಬ ಪ್ರಶ್ನೆ ಮೂಡುತ್ತದೆ. ಈ ನಿಟ್ಟಿನಲ್ಲಿ ಭಾರತವು ಸಂಯುಕ್ತವೋ ಅಥವಾ ಒಕ್ಕೂಟ ವ್ಯವಸ್ಥೆಯೇ? ಈ ಕುರಿತಾದ ನಿರೂಪಣೆಗಳು ಸಂಯುಕ್ತ ಹಾಗೂ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**ಭಾರತವು ಸಂಯುಕ್ತ ಅಥವಾ ಒಕ್ಕೂಟ ವ್ಯವಸ್ಥೆಯೇ? ನಿರೂಪಣೆಗಳು ಹಾಗೂ ಸಮಸ್ಯೆಗಳು**

ನಾರಾಯಣ (**೨೦೨೨**) ರವರು ಅಭಿಪ್ರಾಯ ಪಡುವಂತೆ **"**ಕೇಂದ್ರ ಮತ್ತು ದೇಶದ ಎಲ್ಲಾ ರಾಜ್ಯಗಳ ಹಿತಾಸಕ್ತಿಗಳಿಗೆ ಪೂರಕವಾಗುವಂತೆ ಒಕ್ಕೂಟ ವ್ಯವಸ್ಥೆಯನ್ನು ನಿರ್ಮಿಸಲಾಗಿದೆ. ಕೇಂದ್ರ ಮತ್ತು ರಾಜ್ಯಗಳು ಪರಸ್ಪರ ಪೂರಕ ಕೆಲಸ ಮಾಡುವಂತೆ ಈ ಒಕ್ಕೂಟ ವ್ಯವಸ್ಥೆಯನ್ನು ರೂಪಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಅಖಿಲ ಭಾರತ ಮಟ್ಟದ ನೌಕರಿಯ ವ್ಯವಸ್ಥೆಯು ವಿಶೇಷವಾಗಿರುವ ಸಾಂವಿಧಾನಿಕ ಸೃಷ್ಟಿ. ಸಂವಿಧಾನಿಕವಾಗಿ ಅಖಿಲ ಭಾರತ ಸೇವೆಗಳು ಭಾರತದ ಒಕ್ಕೂಟ ವ್ಯವಸ್ಥೆಯ ಅಧೀನದಲ್ಲಿದೆ. ಆದರೆ ಕೇಂದ್ರ ಸರ್ಕಾರ ಅಖಿಲ ಭಾರತ ಸೇವೆಗಳನ್ನು ಕೇಂದ್ರದಲ್ಲಿ ನೀಯೋಜನೆ ಮಾಡಿಕೊಳ್ಳುವ ಮೂಲಕ ಒಕ್ಕೂಟ ವ್ಯವಸ್ಥೆಯ ಮೇಲೆ ಪ್ರಹಾರ ಮಾಡುತ್ತಿದೆ ಹಾಗೂ ಅಖಿಲ ಭಾರತ ಸೇವೆಗಳನ್ನು ಸಾಂವಿಧಾನಿಕ ಸಮತೋಲನವನ್ನು ಕೆಡಿಸುವ ಮೂಲಕ ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಿದೆ**"** ಎಂದು ಹೇಳುತ್ತಾರೆ. ಈ ರೀತಿಯಾಗಿ, ಸಂವಿಧಾನಾತ್ಮಕವಾಗಿ ಅಖಿಲ ಭಾರತ ಸೇವೆಗಳು ಒಕ್ಕೂಟ ವ್ಯವಸ್ಥೆಯಲ್ಲಿವೆ ಎಂದು ವಿವರಿಸಿದರೂ, ಅಖಿಲ

ಭಾರತ ಸೇವೆಗಳನ್ನು ಕೇಂದ್ರ ಸರ್ಕಾರಕ್ಕೆ ನೀಯೋಜನೆ ಮಾಡುವ ಮೂಲಕ ರಾಜ್ಯಗಳ ಅಧಿಕಾರಗಳನ್ನು ಮೊಟಕುಗೊಳಿಸುತ್ತಿದೆ ಎಂದು ಹೇಳುತ್ತಾರೆ.

ಅಖಿಲ ಭಾರತ ಸೇವೆಗಳು ಒಕ್ಕೂಟ ವ್ಯವಸ್ಥೆಯಲ್ಲಿ ಇದ್ದರೂ ಅದರ ಮೇಲಿನ ಅಧಿಕಾರವನ್ನು ಸಂವಿಧಾನ ಕೇಂದ್ರ ಸರ್ಕಾರಕ್ಕೆ ನೀಡಿದ್ದರೂ ಸಹ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರವು ಹಸ್ತಕ್ಷೇಪ ಮಾಡುತ್ತಿದೆ ಎನ್ನುವ ಇವರ ಹೇಳಿಕೆ ಇವರಿಗೆ ಭಾರತ ಒಕ್ಕೂಟ ವ್ಯವಸ್ಥೆ ಸ್ವರೂಪದ ಅರ್ಥವೇ ಆಗಿಲ್ಲ ಎಂಬುದು ತಿಳಿಯತ್ತದೆ.

ಭಾರತ ಸಂವಿಧಾನವು ಭಾರತದ ರಾಜಕೀಯ ವ್ಯವಸ್ಥೆಗೆ ಒಕ್ಕೂಟದ ಸ್ವರೂಪವನ್ನು ಒದಗಿಸಿದೆ. ಇಲ್ಲಿನ ರಾಜಕೀಯ ವ್ಯವಸ್ಥೆಯಲ್ಲಿ ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳು ಇದ್ದು, ಸಂವಿಧಾನಾತ್ಮಕವಾಗಿ ಅಧಿಕಾರ ಈ ಮೂರು ಹಂತಗಳ ಸರ್ಕಾರಗಳ ನಡುವೆ ಹಂಚಿಕೆಯಾಗಿದೆ. ಆದರೆ ರಚನಾತ್ಮಕವಾಗಿ ಭಾರತೀಯ ಸಂವಿಧಾನ ಕೇಂದ್ರಕ್ಕೆ ಹೆಚ್ಚಿನ ಅಧಿಕಾರವನ್ನು ನೀಡಿದೆ ಎಂದು ಹೇಳುವ ಮೂಲಕ ಹಲವಾರು ಚಿಂತಕರು ಈ ವ್ಯವಸ್ಥೆಯ ಕುರಿತು ಭಾರತವು **"ಕೇಂದ್ರಿಕೃತ ಒಕ್ಕೂಟ ವ್ಯವಸ್ಥೆ", "ಅರೆ ಸಂಯುಕ್ತ ಪದ್ದತಿ", "ರಾಜ್ಯಗಳಿಗೆ ಸ್ವಾಯತ್ತತೆ ನೀಡಿಲ್ಲ"** ಎಂದು ಹೇಳುವ ಮೂಲಕ ಭಾರತದ ಒಕ್ಕೂಟ ವ್ಯವಸ್ಥೆಗೆ ವಿರುದ್ದವಾಗಿ ವಾದಗಳನ್ನು ಮುಂದಿಡುತ್ತಿದ್ದಾರೆ. ಈ ಕುರಿತು ಸಂವಿಧಾನ ರಚನಾ ಸಭೆಯ ಚರ್ಚೆಗಳನ್ನು ವಿವರಿಸುವುದು ಸೂಕ್ತವಾದುದಾಗಿದ್ದು ಕೆಳಗಿನ ವಿವರಣೆ ಅದಕ್ಕೆ ಪೂರಕವಾಗಿದೆ.

**ಒಕ್ಕೂಟ ವ್ಯವಸ್ಥೆಯ ಕುರಿತು ಭಾರತ ಸಂವಿಧಾನ ರಚನಾ ಸಭೆಯ ಚರ್ಚೆಗಳು:**

ಭಾರತವು ಯಾವ ಕಾರಣಕ್ಕೆ ಒಕ್ಕೂಟ ವ್ಯವಸ್ಥೆಯಾಗಿರಬೇಕು ಎಂಬುದಕ್ಕೆ ಹಲವಾರು ಚಿಂತಕರುಗಳು ವಿವರಣೆ ನೀಡುತ್ತಾರೆ. ಕೆ.ಎಂ ಮುನ್ಷಿಯವರು **"**ಕಳೆದ ಒಂದುನೂರು ವರ್ಷಗಳಲ್ಲಿ ಭಾರತದ ಸಾರ್ವಜನಿಕ ಜೀವನವು ಇಂಗ್ಲಿಷ್ ಸಾಂವಿಧಾನಾತ್ಮಕ ಕಾನೂನಿನ ಪರಂಪರೆಯಲ್ಲೆ ರೂಪಿತವಾಗಿದೆ ಎನ್ನುವುದನ್ನು ನಾವು ಮರೆಯಬಾರದು. ನಮ್ಮ ಸಂವಿಧಾನಿಕ ಪರಂಪರೆಯು ಸಂಸದೀಯ ವ್ಯವಸ್ಥೆಯಾಗಿದೆ ಮತ್ತು ನಾವು ಹೊಂದಿರುವ ಎಲ್ಲ ಪ್ರಾಂತ್ಯಗಳು ಹೆಚ್ಚು ಕಡಿಮೆ ಬ್ರಿಟಿಷ್ ಮಾದರಿಯಲ್ಲಿಯೇ ಕಾರ್ಯ ನಿರ್ವಹಿಸುತ್ತಿವೆ. ಈ ಅನುಭವದ ನಂತರವು ನಾವೇಕೆ ಇಂದು ನೂರುವರ್ಷಗಳಿಂದ ಕಟ್ಟಿಬೆಳೆಸಿದ ಪರಂಪರೆಯನ್ನು ಬಿಟ್ಟು ಅಮೇರಿಕಾದಲ್ಲಿಯೂ ಯಶಸ್ವಿಯಾಗದ ನೂರೈವತ್ತು ವರ್ಷಗಳ ಹಿಂದಿನ ಹೊಸ ಪ್ರಯೋಗಕ್ಕೆ ಹೋಗಬೇಕು?**"**[೧] ಕೆಲವು ಗುಣಾತ್ಮಕ ಬದಲಾವಣೆಗಳಿಂದ ಕೂಡಿದ ಸಂಸದೀಯ ವ್ಯವಸ್ಥೆ ಹಾಗೂ ನಿಗದಿತ ಅವಧಿಯ ಕಾರ್ಯಾಂಗವಿರಬೇಕು ಎಂದು ವಾದಿಸುವವರ ವಿರುದ್ದವಾಗಿ ಹಲವು ಸದಸ್ಯರು ಬಹಳ ಪ್ರಬಲವಾದ ಪ್ರತಿವಾದವನ್ನು ಮಂಡಿಸಿದರು. ಸಂಸತ್ತಿನ ಮೇಲೆ ಹೇರಲ್ಪಡುವ ನಿಗದಿತ ಅವಧಿಯ ಕಾರ್ಯಾಂಗವು ರಾಜಕೀಯ ಬದುಕನ್ನು ವಿಛಿದ್ರಗೊಳಿಸುತ್ತದೆ ಹಾಗೂ ಒಗ್ಗಟ್ಟಿಲ್ಲದ ಸಚಿವಾಲಯಗಳನ್ನು ಸೃಷ್ಟಿಸುತ್ತದೆ ಎನ್ನುವುದು ಮುನ್ಷಿಯವರ ಅಭಿಪ್ರಾಯವಾಗಿತ್ತು.[೨] ಅಂತಹ ಸನ್ನಿವೇಶಗಳಲ್ಲಿ ಸರ್ಕಾರವು ಕೆಲವೇ ಕಳಕಳಿಗಳನ್ನು ಹೊಂದಿರುವ, ದುರ್ಬಲವಾಗಿರುವ ಹಾಗೂ ಅಸಂಗತವಾಗಿರುವ ಪುಟ್ಟ ಸರ್ಕಾರವಾಗಿರುತ್ತದೆ. ಒಂದು ಗಟ್ಟಿಯಾದ ಸರ್ಕಾರ ಬೇಕೆಂದಿದ್ದರೆ ಅದು ಪಕ್ಷಾಧಾರಿತ ಸರ್ಕಾರವೇ ಆಗಿರಬೇಕು. ಈ ವಾದಕ್ಕೆ ಪುಷ್ಟಿಕೊಡುತ್ತಾ ಎನ್. ವಿ ಗಾಡ್ಗಿಲ್‌ರವರು, **"**ಒಂದು ಪಕ್ಷ ಅಧಿಕಾರಕ್ಕೆ ಬಂದಾಗ ಸರಕಾರದ ಸಂಪೂರ್ಣ ಕಾರ್ಯಾಂಗದ ಜವಬ್ದಾರಿ ದೊರಕದ ಹೊರತು ತನ್ನ ಭರವಸೆಗಳನ್ನು ಈಡೇರಿಸಲು ಅದಕ್ಕೆ ಸಾಧ್ಯವಾಗುವುದಿಲ್ಲ**"**.[೩] **"**ಸಂಯುಕ್ತ ಸಚಿವಾಲಯವು ಒಂದು ದುರ್ಬಲ ಸಚಿವಾಲಯ ಹಾಗೂ ದುರ್ಬಲ ಸರಕಾರವಾಗುತ್ತದೆ ಎನ್ನುವುದು ನೆಹರೂರವರ ದೃಢವಾದ ಅಭಿಪ್ರಾಯವಾಗಿತ್ತು**"**[೪]

ಮುನ್ಷಿ, ಗಾಡ್ಗಿಲ್ ಹಾಗೂ ನೆಹರೂ ಅವರ ಚರ್ಚೆಯ ಹೇಳಿಕೆಗಳನ್ನು ಗಮನಿಸಿದಾಗ ಸಂಸದೀಯ ಮಾದರಿ ಎಂಬುದು ಭಾರತಕ್ಕೆ ಸೂಕ್ತವಾದುದು. ಅಧ್ಯಕ್ಷೀಯ ಮಾದರಿಯು ಜವಬ್ದಾರಿಯುತ ಸರ್ಕಾರವನ್ನು ದುರ್ಬಲಗೊಳಿಸುತ್ತದೆ. ಅಲ್ಲದೇ ಸಂಯುಕ್ತ ವ್ಯವಸ್ಥೆಯನ್ನು ಭಾರತದಲ್ಲಿ ಅಳವಡಿಸಿಕೊಂಡರೆ ಅಲ್ಲಿ ಜವಬ್ದಾರಿಯುತ ಸರ್ಕಾರವು ದುರ್ಬಲ ಸರ್ಕಾರವಾಗುತ್ತದೆ. ಅ ದೃಷ್ಟಿಯಿಂದಲೇ ವೈವಿಧ್ಯತೆಯನ್ನು ಹೊಂದಿರುವ ಭಾರತಕ್ಕೆ ಸಂಯುಕ್ತ ಪದ್ದತಿ ಸೂಕ್ತವಾದುದಲ್ಲ ಹಾಗೂ ಅಮೆರೀಕಾದಲ್ಲಿಯೇ ಯಶಸ್ವಿ ಕಾಣದ ಈ ವ್ಯವಸ್ಥೆ ಭಾರತದಲ್ಲಿ ಯಶಸ್ವಿಯಾಗುವುದಿಲ್ಲ ಎನ್ನುವ ದೃಷ್ಟಿಯಿಂದಲೇ ಭಾರತವನ್ನು ರಾಜ್ಯಗಳ ಒಕ್ಕೂಟ ಎಂದು ರಚಿಸಲಾಗಿದೆ.

ವಿ.ಪಿ ಮೆನನ್ ರವರು ತಿಳಿಸಿರುವಂತೆ "೧೯೧೯ ರಲ್ಲಿ ಅಧಿಕಾರವನ್ನು ವಿಕೇಂದ್ರಿಕರಿಸುವುದರೊಂದಿಗೆ ರಾಜಕೀಯ ವ್ಯವಸ್ಥೆ ಆರಂಭವಾಗುವುದರಿಂದ ಹಿಡಿದು ೧೯೩೫ರ ಭಾರತ ಸರ್ಕಾರ ಕಾಯ್ದೆಯೊಂದಿಗೆ ಭಾರತೀಯ ಸಂಯುಕ್ತ ವ್ಯವಸ್ಥೆಗೆ ಹೆಚ್ಚಿನ ಸ್ಥಾನಮಾನ ಒದಗಿಸಲಾಗಿತ್ತು. ಭಾರತದಲ್ಲಿ ಆಶ್ಚರ್ಯಕರವಾಗಿ ಪ್ರಾಂತ್ಯಾಭಿಮಾನ ಬೆಳವಣಿಗೆಯಾದ ಸಂದರ್ಭದಲ್ಲಿ ಮತ್ತು ರಾಷ್ಟ್ರೀಯವಾದಿಗಳ ಚಳವಳಿಯಿಂದ ವಿದೇಶಿ ಕಾನೂನನ್ನು ತೆಗೆದು ಹಾಕುವ ಅಥವಾ ಭಂಗಗೊಳಿಸುವ ಕ್ರಮ ಕೈಗೊಳ್ಳಲಾಯಿತು. ಜನಾಂಗೀಯ ಹಾಗೂ ಸಂಸ್ಕೃತಿಗಳ ರಚನೆಯಲ್ಲಿಯ ವಿವಿಧತೆಯಲ್ಲಿ ತೋರಿಕೆಯನ್ನಾಗಿಸಿರುವುದು ಸ್ವಯಂ ನಿರ್ವಹಣೆಯಾಗಿರಲಿಲ್ಲ. ಇದು ಪ್ರಾಂತೀಯ ಅನುಭವದಲ್ಲಿರುವ ಪ್ರತಿಬಿಂಬವಾಗಿದ್ದು, ಪ್ರಾಂತೀಯ ಅಥವಾ ಪ್ರಾದೇಶಿಕ ಆಸಕ್ತಿಗಳ ಎಲ್ಲಾ ವಿಶೇಷ ವಿಷಯಗಳಲ್ಲಿ ಯಾವುದೇ ಹೊರಗಿನ ಪ್ರತಿನಿಧಿಗಳಿಂದ ಜೀವನ ನಡೆಸಲು ತಡೆಯೊಡ್ಡಿದಂತೆ

ಪ್ರತಿಯೊಂದು ಪ್ರಾಂತೀಯ ಜನಾಂಗೀಯ, ಸಾಂಸ್ಕೃತಿಕ ಗುಂಪಿಗೆ ಅಧಿಕಾರ ನೀಡುವುದಕ್ಕೆ ಪ್ರಾಂತೀಯ ಸ್ವಾಯತ್ತತೆ ಬೇಡಿಕೆಗೆ ವಿರಾಮ ನೀಡುವುದಾಗಿದೆ".[೫] ಈ ಮೇಲಿನ ವಿವರಣೆಗಳನ್ನು ಗಮನಿಸಿದಾಗ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳಿಗೆ ಸ್ವಾಯತ್ತತೆ ಎಂಬುದು ಇರುವುದಿಲ್ಲ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಭಾರತವು ಯಾವ ಕಾರಣಕ್ಕೆ ಒಕ್ಕೂಟ ವ್ಯವಸ್ಥೆಯಾಗಿರಬೇಕು ಎಂಬುದಕ್ಕೆ ಹಾಗೂ ಪ್ರಸ್ತುತದ ಸ್ವರೂಪಕ್ಕೆ ಈ ನಿರೂಪಣೆಗಳು ಸ್ಪಷ್ಟವಾಗಿವೆ. ಭಾರತವು ರಾಜ್ಯಗಳ ಒಕ್ಕೂಟವಾಗಿರಬೇಕು ಎನ್ನುವುದಕ್ಕೆ ಹಲವಾರು ಚಿಂತಕರು ವಿವರಣೆ ನೀಡಿದ್ದಾರೆ. ಪ್ರಮುಖವಾಗಿ ಹೆಚ್. ವಿ. ಕಾಮತ್ ರವರು ತಿಳಿಸಿರುವಂತೆ **"ಭಾರತಕ್ಕೆ** ಸಂಯುಕ್ತ ಎನ್ನುವ ಪದವನ್ನು ಕೈಬಿಟ್ಟು, ಒಕ್ಕೂಟ ಎನ್ನುವ ಪದವನ್ನು ಉಳಿಸಿಕೊಳ್ಳಲಾಗಿದೆ. ನಮ್ಮ ಸಂವಿಧಾನದಲ್ಲಿ ಸಂಯುಕ್ತ ಎನ್ನುವ ಪದಕ್ಕಿಂತ ಒಕ್ಕೂಟ ಎನ್ನುವ ಪದಕ್ಕೆ ಹೆಚ್ಚು ಒತ್ತು ಬಿದ್ದಿದೆ. ಚರಿತ್ರೆಯ ಉದಯದ ಅನಂತರ ನಮ್ಮ ರಾಜ್ಯವ್ಯವಸ್ಥೆ ತುಂಬಾ ತೀವ್ರವಾಗಿ ಕಡಿವಾಣ ಹಾಕಬೇಕು ಎಂದರೆ ಸಂಯುಕ್ತ ಎನ್ನುವ ಶಬ್ದವನ್ನು ೧ನೇ ಅನುಚ್ಛೇದದಿಂದ ತೆಗೆದು ಹಾಕಬೇಕು. ಸಂಯುಕ್ತ ವ್ಯವಸ್ಥೆಯ ಅಂಶಗಳನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಲಾಗಿದೆ. ಆದರೆ ಆ ಅಂಶಗಳಿಗೆ ಒಕ್ಕೂಟಕ್ಕೆ ನಾವು ಹಲವು ಬಗೆಯ ಪಟ್ಟಿಗಳನ್ನು ಗೊತ್ತುಪಡಿಸಿದ್ದೇವೆ. ಹಾಗಾಗಿ ಎಲ್ಲಿಯವರೆಗೆ ಈ ಅಂಶಗಳು ನಮ್ಮ ಸಂವಿಧಾನದಲ್ಲಿರುತ್ತವೆಯೋ ಅಲ್ಲಿಯವರೆಗೆ ಸಂಯುಕ್ತ ಎನ್ನುವ ಶಬ್ದವನ್ನು ಸೇರಿಸುವ ಅಗತ್ಯವಿಲ್ಲ" **(ಭಾರತದ ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ ೩, ಪು ೫೪೯)** ಎಂದು ಹೇಳಿದ್ದಾರೆ.

ಸಂವಿಧಾನ ರಚನಾ ಸಭೆಯಲ್ಲಿ ಅಂಬೇಡ್ಕರ್ ಅವರು ಭಾರತವನ್ನು **"**ಯೂನಿಯನ್ ಆಫ್ ಸ್ಟೇಟ್ಸ್ ಎಂದು ಕರೆದಿರುವುದಕ್ಕೆ ಕಾರಣವಿದೆ. ಏಕೆಂದರೆ ರಾಜ್ಯಗಳು ಒಪ್ಪಿಗೆಯನ್ನು ನೀಡುವ ಮೂಲಕ ಭಾರತದ ಒಕ್ಕೂಟವನ್ನು ಸೇರಿಲ್ಲ, ಒಕ್ಕೂಟವು ಒಪ್ಪಿಗೆಯ ಮೂಲಕವು ರಚನೆಯಾಗಿಲ್ಲ. ಯಾವ ರಾಜ್ಯಗಳು ಪ್ರತ್ಯೇಕತೆಯ ಹಕ್ಕನ್ನು ಪಡೆದಿಲ್ಲ. ದೇಶದಲ್ಲಿ ವಿವಿಧ ಜನಾಂಗ, ಭಾಷೆ, ಧರ್ಮ, ಸಂಸ್ಕೃತಿ ಹಾಗೂ ಜಾತಿಯ ಜನರಿದ್ದಾರೆ. ಆ ದೃಷ್ಟಿಯಿಂದ ಭಾರತವು ಸಮಗ್ರವಾಗಿ ಒಂದು ರಾಜ್ಯಗಳ ಒಕ್ಕೂಟವಾಗಿದೆ" **(ಸಂವಿಧಾನ ರಚನಾ ಸಭೆಯ ಚರ್ಚೆಗಳು, ಸಂಪುಟ ೩)** ಎಂದು ಹೇಳಿದ್ದಾರೆ.

ಅಂಬೇಡ್ಕರ್ ರವರು ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರವು ಯಾವ ಕಾರಣಕ್ಕೆ ಒಂದು ಜವಬ್ದಾರಿಯುತ ಸರ್ಕಾರವಾಗಿರಬೇಕು ಎಂಬುದಕ್ಕೆ ಈ ರೀತಿಯಾಗಿ ವಿವರಣೆ ನೀಡುತ್ತಾರೆ– "ಸಂವಿಧಾನವು ಕೇಂದ್ರಕ್ಕೆ ಸಂಪೂರ್ಣ ಸ್ವಾಯತ್ತತೆ ನೀಡಿದ್ದರೂ ಸಹ ರಾಜ್ಯಗಳನ್ನು ಕುಂಠಿತಗೊಳಿಸುವ ಅಥವಾ ಯಾವುದೇ ಬದಲಾವಣೆಗೆ ಸಂವಿಧಾನ ಅವಕಾಶ ನೀಡಿಲ್ಲ. ಕೇಂದ್ರ ಸರ್ಕಾರವನ್ನು ಕೆಲವು ಉದ್ದೇಶಗಳಿಗೆ ಮಾತ್ರ ಒಂದೇ ಸಂಸ್ಥೆಯಾಗುವಂತಹ ಅನೇಕ ಸರ್ಕಾರಗಳಿಂದ ಕೂಡಿದ ಒಂದು ಒಕ್ಕೂಟವನ್ನಾಗಿ ಮಾಡುವುದಕ್ಕೂ ವಿರೋಧವಿದೆ. ಈ ರೀತಿಯ ಒಪ್ಪಂದದ ಪರಿಣಾಮ ಸ್ಪಷ್ಟವಾಗಿದೆ. ಅಂತಹ ಸಂಘಟನೆಯು ಸರ್ಕಾರಗಳ ಒಂದು ಸಮೂಹವಾಗಿರುವುದರಿಂದ ಆ ಸರ್ಕಾರಗಳು ಪರಸ್ಪರರಿಂದ ಬೇರೆಯಾಗಲು ನಿರ್ಧರಿಸಿದಾಗ ಅದು ಅಳಿಸಿ ಹೋಗುವುದು. ಅಂತಹ ಕೇಂದ್ರ ಸರ್ಕಾರ ದುರ್ಬಲ ಸರ್ಕಾರವೆನಿಸುವುದು. ಕೇಂದ್ರ ಸರ್ಕಾರ ಪ್ರಾಂತೀಯ ಸರ್ಕಾರಗಳ ಬೆಂಬಲದಿಂದ ಅಸ್ತಿತ್ವದಲ್ಲಿದೆ ಎಂಬ ಭಾವನೆ ಉಂಟಾಗಬಾರದೆಂಬುದು ಅಂಬೇಡ್ಕರ್ ವಿಚಾರವಾಗಿದೆ"[೧].

ಅಂದರೆ ಕೇಂದ್ರದ ಸ್ಥಾನ ಎಷ್ಟು ಸುಭದ್ರ ಮತ್ತು ಸ್ವತಂತ್ರವಾಗಿರಬೇಕೆಂದರೆ ಎಲ್ಲಾ ಪ್ರಾಂತೀಯ ಸರ್ಕಾರಗಳು ಅಳಿದು ಹೋದರು ತಾನು ಅಸ್ತಿತ್ವದಲ್ಲಿರಬೇಕಲ್ಲದೆ, ಯಾವುದೇ ಪ್ರಾಂತೀಯ ಸರ್ಕಾರವು ದಂಗೆ ಅಥವಾ ಇನ್ನಾವುದೆ ಕಾರಣದಿಂದ ಕರ್ತವ್ಯ ನಿರ್ವಹಿಸುವ ಸ್ಥಿತಿಯಲ್ಲಿಲ್ಲದಂತಾಗಲೂ ಆ ಪ್ರಾಂತ್ಯದ ಆಡಳಿತವನ್ನು ತಾನು ನಡೆಸಿಕೊಂಡು ಹೋಗುವ ಹಾಗೆ ಇರಬೇಕು. ಈ ಪ್ರಶ್ನೆಯ ಆಧಾರದ ಮೇಲೆ ಎಲ್ಲಾ ಶೇಷಾಧಿಕಾರಗಳು ಕೇಂದ್ರ ಸರ್ಕಾರಕ್ಕಿರಬೇಕು. ಅವಿಧೇಯ ಅಥವಾ ದಂಗೆಕೋರ ಪ್ರಾಂತ್ಯವು ದೇಶದ ಹಿತಕ್ಕೆ ದಕ್ಕೆಯುಂಟು ಮಾಡುವಂತೆ ವರ್ತಿಸಿದಾಗ ಅದನ್ನ ನಿಯಂತ್ರಿಸುವ ಮತ್ತು ದಂಡಿಸುವ ನಿರ್ದಿಷ್ಟ ರೂಪದ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕು, ಪ್ರಾಂತೀಯ ಸರ್ಕಾರ ನಿಷ್ಕ್ರಿಯವಾದಾಗ ಅದಕ್ಕೆ ನೀಡಲಾದ ಎಲ್ಲ ಅಧಿಕಾರಗಳು ಕೇಂದ್ರ ಸರ್ಕಾರಕ್ಕೆ ಮರಳಬೇಕು ಎಂದು ಅಂಬೇಡ್ಕರ್ ಶಿಫಾರಸ್ಸು ಮಾಡುತ್ತಾರೆ

ಅಂಬೇಡ್ಕರವರ ಈ ಹೇಳಿಕೆಯನ್ನು ಗಮನಿಸಿದಾಗ ಸಂವಿಧಾನವೇ ಕೇಂದ್ರಕ್ಕೆ ಹೆಚ್ಚಿನ ಅಧಿಕಾರ ನೀಡುವ ಮೂಲಕ ಸ್ವಾಯತ್ತತೆಯನ್ನು ನೀಡಿದೆ. ಆ ಮೂಲಕ ಕೇಂದ್ರವು ರಾಜ್ಯಗಳನ್ನು ರಕ್ಷಿಸುವ ಜವಬ್ದಾರಿಯನ್ನು ಹೊಂದಿರುತ್ತದೆ. ಅಂದರೆ ರಾಜ್ಯಗಳು ಒಕ್ಕೂಟದಿಂದ ಬೇರ್ಪಡದೇ ಇರುವ ರೀತಿಯಲ್ಲಿ ನೋಡಿಕೊಳ್ಳುವುದು ಜವಬ್ದಾರಿಯುತ ಕೇಂದ್ರದ ಕಾರ್ಯವಾಗಿರುತ್ತದೆ. ಆ ಕಾರಣದಿಂದಾಗಿ ಕೇಂದ್ರಕ್ಕೆ ಹೆಚ್ಚಿನ ಅಧಿಕಾರವನ್ನು ನೀಡಲಾಗಿದೆ ಎಂಬುದು ಅಂಬೇಡ್ಕರ್ ಹೇಳಿಕೆ ಸ್ಪಷ್ಟಪಡಿಸುತ್ತದೆ. ಈ ದೃಷ್ಟಿಯಿಂದಲೇ ಭಾರತದ ಸಂವಿಧಾನದ ೧ನೇ ಅನುಚ್ಛೇದವು ಭಾರತವು ರಾಜ್ಯಗಳ ಒಕ್ಕೂಟವಾಗಿರಬೇಕು ಎಂಬುದರ ಬಗ್ಗೆ ವಿವರಿಸುತ್ತದೆ. ಭಾರತದಲ್ಲಿ ಬಹುತ್ವ ಹಾಗೂ ಸಮಗ್ರತೆಯನ್ನು ಕಾಪಾಡುವ ಉದ್ದೇಶದಿಂದ ಸಂವಿಧಾನ ರಚನಾಕಾರರು ಬಲಿಷ್ಟ ಕೇಂದ್ರದ ಒಕ್ಕೂಟ ಪದ್ದತಿಯನ್ನು ಒದಗಿಸಿಕೊಟ್ಟಿದ್ದಾರೆ.

1. ಭಾರತ ಸಂವಿಧಾನ ರಚನಾ ಸಭೆಯ ಚರ್ಚೆಗಳು, ಸಂ 6, ಪು. 984

2. ಅದೇ, ಪುಟ 651
3. ಅದೇ, ಪುಟ 635
4. ಅದೇ, ಪುಟ 915
5. ಲಕ್ಷ್ಮೀಪತಿ ಸೊಂದಲಗೆರೆ, 2021, ಪು.ಸಂ 75
6. **ಅಂಬೇಡ್ಕರ್ ಸಮಗ್ರ ಬರಹಗಳು ಮತ್ತು ಭಾಷಣಗಳು, ಸಂಪುಟ 2, ಪು 506–509**.

**ಪರಾಮರ್ಶನ ಗ್ರಂಥಗಳು:**


1. ಲಕ್ಷ್ಮೀಪತಿ ಸೊಂದಲಗೆರೆ. ೨೦೨೧. ಭಾರತೀಯ ಸಂಸ್ಥಾನಗಳ ಏಕೀಕರಣ. ಬೆಂಗಳೂರು: ಕಾವ್ಯಕಲಾ ಪ್ರಕಾಶನ. ಪು: ೨೬–೭೫.
2. ಭಾರತ ಸಂವಿಧಾನ ರಚನಾ ಸಭೆಯ ಚರ್ಚೆಗಳು. ೨೦೧೮. ಸಂಪುಟ–೩. ಬೆಂಗಳೂರು: ಕುವೆಂಪು ಭಾಷಭಾರತಿ ಪ್ರಾಧಿಕಾರ. ಪು: ೫೪೫–೫೬೦.
3. ಭಾರತ ಸಂವಿಧಾನ ರಚನಾ ಸಭೆಯ ಚರ್ಚೆಗಳು. ೨೦೧೮. ಸಂಪುಟ–೭. ಬೆಂಗಳೂರು: ಕುವೆಂಪು ಭಾಷಭಾರತಿ ಪ್ರಾಧಿಕಾರ. ಪು: ೪೩.
4. ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು. ೨೦೧೫. ಸಂಪುಟ–೧. ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ. ಪು: ೧೬೪.
5. ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು. ೨೦೧೫. ಸಂಪುಟ ೨. ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ. ಪು: ೫೦೬–೫೦೯.
6. ಸದಾನಂದ, ಜೆ ಎಸ್. ೨೦೧೮. ಭಾರತದ ಸಂಸತ್ತು ಒಂದು ಕಾರ್ಯನಿರತ ಪ್ರಜಾಪ್ರಭುತ್ವ. ಬೆಂಗಳೂರು: ಅಂಕಿತ ಪುಸ್ತಕ. ಪು: ೬೭–೬೮.
7. ನಾಟಿಕಾರ, ಹೆಚ್.ಎಂ. ೨೦೦೪. ಭಾರತ ಮತ್ತು ಅಮೇರಿಕಾ ಸಂಯುಕ್ತ ಪದ್ಧತಿಯ ಕಾರ್ಯಚರಣೆ. ಪಿಹೆಚ್‌ಡಿ ಮಹಾ ಪ್ರಬಂಧ. ಪು: ೬೧–೬೨
8. ಕೆ. ಬಿ., ಮೇರುನಂದನ್. ೨೦೧೭. ಭಾರತದ ಸಂವಿಧಾನ ಒಂದು ಪರಿಚಯ. ಬೆಂಗಳೂರು: ಮರುಗು ಪ್ರಕಾಶನ.
9. ಶಾರದಾ, ರಾತ್. ೧೯೮೪. ಫೆಡರಲಿಸಂ ಟುಡೇ. ಸ್ಟೇರಲಿಂಗ್ ಪಬ್ಲಿಷರ್ಸ್ ಪ್ರವೈಟ್ ಲಿಮಿಟಿಡ್. ನ್ಯೂ ದೆಹಲಿ. ಪು: ೭.
10. ಬಸು, ದುರ್ಗಾದಾಸ್. ೨೦೧೫. ಭಾರತದ ಸಂವಿಧಾನ ಪರಿಚಯ. ಪು: ೯೩.
11. Fadia, B. L and Fadia Kuldeep. 2021. Indian Government and Politics. Agra: Sahitya Bhawan. P: 192-210.
12. Dodwell, H. H. The Cambridge History of India. Valume 6. New Delhi: S Chand And Company Ltd. P: 907.
13. G. N, Joshi. 1954. The Constitution of India. P: 32.
14. J. P, Suda. 1951. Indian Constitutional Development and National Movement. P: 523.
15. Iover Jennings. 1953. Some Characterstics of the Indian Constitustion. P: 1.
16. Patil. S.H. 1998. State Formation in Fedaral India. Manak publication. P: 148-149.
17. Raj, Hans. 2008. Indian Government and Politics. New Delhi: Surjeet Publication. P: 30.
18. Maya, Chadda. 2002. Intigration through Internal Reorgnization; Containing Ethnic Conflict in India. Vol-2. P: 50.

# ಕರ್ನಾಟಕ ರಾಜಕಾರಣದಲ್ಲಿ "ಅಹಿಂದ" ಚಳವಳಿಯ ಪಾತ್ರ

**ರಘುವೀರ್**
ಸಂಶೋಧನಾ ವಿದ್ಯಾರ್ಥಿ
ರಾಜ್ಯಶಾಸ್ತ್ರ ವಿಭಾಗ ಕುವೆಂಪು ವಿಶ್ವವಿದ್ಯಾಲಯ

**ಡಾ.ಉದ್ದಗಟ್ಟಿ ವೇಂಕಟೇಶ್**
ಪ್ರಾಧ್ಯಾಪಕರು ರಾಜ್ಯಶಾಸ್ತ್ರ ವಿಭಾಗ ಕುವೆಂಪು ವಿಶ್ವವಿದ್ಯಾಲಯ

**ಪೀಠಿಕೆ:**

ಸರ್ಕಾರವು ದೇಶ ಹಾಗೂ ರಾಜ್ಯಗಳಿಗೆ ಬೇಕಿರುವಂತಹ ಪ್ರಮುಖವಾದ ಅಧಿಕಾರವಗಿದೆ. ಸರ್ಕಾರವು ರಾಜಕೀಯವಾಗಿ ಬಹುಮತ ಪಡೆದ ಒಂದು ಪಕ್ಷ ಅಧಿಕಾರಕ್ಕೆ ಬಂದು ಆಡಳಿತ ಚುಕ್ಕಾಣಿಯನ್ನು ಹಿಡಿದು, ಜನರ ಸರ್ವಾಂಗೀಣ ಅಭಿವೃದ್ಧಿ ಮತ್ತು ರಾಷ್ಟ್ರಾಭಿವೃದ್ಧಿಯನ್ನು ಮಾಡುವಂತಹ ಅಂಗವೇ ಸರ್ಕಾರ

ಇಲ್ಲಿ ಮುಖ್ಯವಾಗಿ ಅಹಿಂದ ರಾಜಕಾರಣದ ಹುಟ್ಟಿಗೆ ಕಾರಣ,ಅದರ ತತ್ವಗಳು ಮತ್ತು ಅಹಿಂದ ರಾಜಕಾರಣದ ಪಾತ್ರ ಮತ್ತು ಪ್ರಭಾವ ಯಾವ ರೀತಿಯಾದಂತಹ ರೂಪವನ್ನು ತಾಳಿದೆ ಎಂಬುದನ್ನು ನಾವು ಪರಿಶೀಲಿಸುತ್ತಾ ಹೊದರೆ ನಮಗೆ ತಿಳಿಯುವುದು, ರಾಜಕೀಯ ಎನ್ನುವುದು ಅಧಿಕಾರಕ್ಕಾಗಿ ನಡೆಯುವಂತಹ ಒಂದು ಪ್ರಕ್ರಿಯೆಯಾಗಿದೆ. ರಾಜಕೀಯ ಮತ್ತು ಸರ್ಕಾರ ಎಂಬುದು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಆದ್ದರಿಂದ ಸರ್ಕಾರ ಮತ್ತು ರಾಜಕೀಯ ಒಂದು ಎಂದು ಇಲ್ಲಿ ನಾವು ತಿಳಿಯಬಹುದಾಗಿದೆ. ಸರ್ಕಾರವು ಪ್ರಮುಖವಾಗಿ ಜನರ ಕಲ್ಯಾಣ ಮಾಡುವುದು ಮತ್ತು ಅವರ ಅಭಿವೃದ್ಧಿಯನ್ನು ಮಾಡುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರಗಳು ಯೋಜನೆ ಮತ್ತು ನೀತಿಗಳನ್ನು, ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತದೆ. ಅನೇಕ ಯೋಜನೆಗಳನ್ನು ಜನರ ಕಲ್ಯಾಣಕ್ಕಾಗಿ ತಂದರೂ ಅವುಗಳು ಯಶಸ್ವಿಯಾಗಿದೆಯೇ ಎಂಬುದನ್ನು ಪರಿಶೀಲಿಸಿ ಯಶಸ್ವಿಯಾಗುವ ಹಾಗೆ ಮಾಡುವುದು ಪ್ರಮುಖವಾಗಿದೆ. ಪ್ರಸ್ತುತ ಕರ್ನಾಟಕ ರಾಜಕೀಯದಲ್ಲಿ ಜಾತಿವಾರು ಲೆಕ್ಕಾಚಾರ ಪ್ರಮುಖ ಪಾತ್ರ ವಹಿಸಿದೆ ಎಂಬುದನ್ನು ನಾವು ನೋಡಬಹುದಾಗಿದೆ (ಹೆಚ್.ವಿ. ಕೃಷ್ಣಪ್ಪ, ೨೦೦೨, ಪುಟ ೧೦).

ರಾಜ್ಯದಲ್ಲಿ ಬಹುಸಂಖ್ಯಾತರಾಗಿರುವ ಲಿಂಗಾಯಿತ ಮತ್ತು ಒಕ್ಕಲಿಗ ಸಮುದಾಯಗಳನ್ನು ನಾವು ನೋಡಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಲಿಂಗಾಯಿತರು ಬಿ.ಜೆ.ಪಿ. ಪಕ್ಷವನ್ನು ಬೆಂಬಲಿಸಿದರೆ, ಒಕ್ಕಲಿಗರು ಜೆ.ಡಿ.ಎಸ್. ಪಕ್ಷವನ್ನು ಬೆಂಬಲಿಸುತ್ತಾರೆ. ಈ ನಡುವೆ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು ಎಲ್ಲಿ ಹೋಗಬೇಕು? ಸಾಮಾನ್ಯವಾಗಿ ಕಾಂಗ್ರೆಸ್ ಪಕ್ಷದ ಮೊರೆ ಹೋಗುತ್ತಾರೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲವನ್ನು ಸೂಚಿಸುತ್ತಾರೆ. ಈ ನಡುವೆ ಶ್ರೀ ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರನ್ನು ಒಗ್ಗೂಡಿಸಿ ಅಭಿವೃದ್ಧಿಗೊಳಿಸಲು 'ಅಹಿಂದ' ಬೆಂಬಲಿತ ಸರ್ಕಾರವೆಂದು ಘೋಷಿಸಿ, ಇವರ ಅಭಿವೃದ್ಧಿಗೆ ಮುನ್ನುಡಿ ಬರೆಯಲು ಮುಂದಾಗಿತ್ತು. ಕರ್ನಾಟಕ ರಾಜ್ಯದಲ್ಲಿ ಸರ್ಕಾರವು ಅನೇಕ ಯೋಜನೆ ಭಾಗ್ಯಗಳನ್ನು, ಕಾರ್ಯಕ್ರಮಗಳನ್ನು, ನೀತಿಗಳನ್ನು ತಂದರೂ ಸಹ ಬಡತನ, ನಿರುದ್ಯೋಗ ಮತ್ತು ಸೌಕರ್ಯಗಳ ವಂಚಿತರನ್ನು ನಾವು ನೋಡಬಹುದಾಗಿದೆ. ಹೀಗಿರುವಾಗ 'ಅಹಿಂದ' ಎಂಬ ಘೋಷಣೆಯ ಮೂಲಕ ಜನರ ಕಲ್ಯಾಣವನ್ನು ಮಾಡಲು ಮುಂದಾಯಿತು. ಮಾಜಿ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಇದನ್ನು ಬೆಳೆಸಿದ ದೊಡ್ಡ ನಾಯಕ. ಇದನ್ನು ಮೊಟ್ಟಮೊದಲು ಅಂದಿನ ಮುಖ್ಯಮಂತ್ರಿ ದಿ॥ ಶ್ರೀ ದೇವರಾಜ ಅರಸು ಅವರು 'ಅಹಿಂದ' ಘೋಷಣೆ ಇಲ್ಲದೆಯೇ ಅಲ್ಪಸಂಖ್ಯಾತರ, ಹಿಂದುಳಿದವರ ಮತ್ತು ದಲಿತರ ಅಭಿವೃದ್ಧಿಗೆ ಹೆಚ್ಚಿನ ಪ್ರಮಾಣದ ಬೆಂಬಲವನ್ನು ಆದ್ಯತೆಯನ್ನು ನೀಡಿ ಅಭಿವೃದ್ಧಿಗೆ ನಾಂದಿ ಹಾಡಿದರು. ಅದಿಕೃತವಾಗಿ ಅಹಿಂದ ಚಳವಳಿಯು ೧೯೭೫ ರಿಂದ ಇಂದಿನವರೆಗೂ ಚಾಲ್ತಿಯಲ್ಲಿದೆ.

ಮೀಸಲಾತಿ ಜನ ಕಲ್ಯಾಣ ವ್ಯವಸ್ಥೆ ಮೂಲಕ ಅಲ್ಪಸಂಖ್ಯಾತರ, ಹಿಂದುಳಿದವರ ಮತ್ತು ದಲಿತರ ಅಭಿವೃದ್ಧಿಗೆ ಮುಂದಾದರು. ಅಲ್ಲಿಂದ ಇದುವರೆಗೂ ಈ ಯೋಜನೆಯು ಸ್ವಲ್ಪ ಪ್ರಮಾಣದ ಕಾರ್ಯವನ್ನು ನಿರ್ವಹಿಸಿಕೊಂಡು ಬಂದಿದ್ದು, ಇದನ್ನು 'ಅಹಿಂದ' ಎಂಬ ಘೋಷಣೆ ಮಾಡಿ, ಇದರ ನೇತೃತ್ವವನ್ನು ಶ್ರೀ ಸಿದ್ಧರಾಮಯ್ಯನವರು ಯಶಸ್ವಿಗೊಳಿಸಿ, ಅನುದಾನಗಳ ಮೂಲಕ ಅಭಿವೃದ್ಧಿ ಮೀಸಲಾತಿ ಸೌಲಭ್ಯಗಳನ್ನು ನೀಡಿ, ಅನೇಕ ಕಾರ್ಯಕ್ರಮಗಳನ್ನು ಇದರ ಅಡಿಯಲ್ಲಿ ಜಾರಿಗೆ ತಂದರು. ಅಲ್ಪಸಂಖ್ಯಾತರು ಎಂದರೆ ಸಾಮಾನ್ಯವಾಗಿ ಕ್ರಿಶ್ಚಿಯನ್, ಮುಸ್ಲಿಂ, ಬೌದ್ಧ, ಜೈನ, ಸಿಖ್ ಮತ್ತು ಪಾರ್ಸಿ ಪ್ರಮುಖವಾಗಿವೆ. ಹಿಂದುಳಿದವರು ಎಂದರೆ ಎಲ್ಲಾ ವರ್ಗಗಳಲ್ಲಿಯೂ ಸೌಲಭ್ಯ ವಂಚಿತರಾಗಿ ಹಿಂದುಳಿದವರು. ಇನ್ನು ದಲಿತರು

ಎಂದರೆ ಸಮಾಜದಿಂದ ದೂರ ತಳ್ಳಲ್ಪಟ್ಟ ಕೆಳ ಸಮುದಾಯಗಳಾಗಿವೆ. ಸ್ವಾತಂತ್ರ್ಯ ಪೂರ್ವದಿಂದಲೂ ದಲಿತರನ್ನು ಶೋಷಣೆಗೆ ಒಳಪಡಿಸುತ್ತಿದ್ದರು. ಮೇಲ್ವರ್ಗದ ಜನರಿಂದ ತುಳಿತಕ್ಕೆ ಒಳಗಾಗಿದ್ದರು. ಇದರ ಹೊರತಾಗಿ ಮಹಾತ್ಮ ಗಾಂಧಿ ದಲಿತರ ಪರವಾಗಿ ನಿಂತು ಇವರನ್ನು ಹರಿಜನ ಎಂದು ಕರೆದರು. ಇನ್ನು ದೇಶ ಸ್ವಾತಂತ್ರ್ಯಗೊಂಡ ನಂತರವೂ ದೇಶದಲ್ಲಿ ಈ ಸಮಸ್ಯೆಯು ಇರುವುದನ್ನು ನಾವು ನೋಡಬಹುದಾಗಿದೆ (https://timesofindia)

‘ಅಹಿಂದ’ ಇತ್ತೀಚಿನ ದಿನಗಳಲ್ಲಿ ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಮತ್ತು ದಲಿತರನ್ನು ಪ್ರಮುಖ ಜಾತಿಗಳ ಪ್ರಬಲ ಕೋಟೆಯ ವಿರುದ್ಧ ಸಜ್ಜುಗೊಳಿಸುವ ಪ್ರಯತ್ನವಾಗಿದೆ. ‘ಅಹಿಂದ’ ಸ್ಪಷ್ಟವಾದ ಸೈದ್ಧಾಂತಿಕ ನಿಲುವನ್ನು ಹೊರತಂದಿಲ್ಲ. ಅದು ಇನ್ನೂ ತನ್ನ ರಾಜಕೀಯ ಕಾರ್ಯತಂತ್ರವನ್ನು ರೂಪಿಸಿಲ್ಲ. ಅದೇನೇ ಇದ್ದರೂ ‘ಅಹಿಂದ’ವನ್ನು ಪರ್ಯಾಯ ರಾಜಕೀಯ ಗುಂಪುಗಳಾಗಿ ನಿರ್ಮಿಸಲು ಬಯಸುವವರೆಲ್ಲರೂ ಕೆಲಸ ಮಾಡುವ ಕೆಲವು ಊಹೆಗಳಾಗಿವೆ (ಜೆ.ಎಸ್. ಸದಾನಂದ, ೨೦೦೫, ಪುಟ ೮೬–೮೭).

## ಅಹಿಂದ ವರ್ಗಗಳು ನಡೆದುಬಂದ ಹಾದಿ:

ಇತಿಹಾಸದಲ್ಲಿ ನಾವು ನೋಡುವ ಹಾಗೆ ಮೇಲ್ವರ್ಗದ ಜನರು ದಲಿತರನ್ನು ಶೋಷಣೆಗೆ ಒಳಪಡಿಸಿದ್ದಾರೆ ಎಂಬುದು ಕಂಡುಬರುತ್ತದೆ. ಯಾವುದೇ ರೀತಿಯ ಸೌಲಭ್ಯಗಳಿಂದ ವಂಚಿತರಾದವರೆಂದು ನಾವು ನೋಡಬಹುದು. ಆದರೆ ಅದು ಅಂಬೇಡ್ಕರ್ ಅವರು ಬರುವವರೆಗೂ ಇದ್ದ ಪರಿಸ್ಥಿತಿಯಾಗಿದೆ. ಅಂಬೇಡ್ಕರ್ ಬಂದ ನಂತರ ನಡೆದಂತಹ ದಲಿತರ ಹೋರಾಟಗಳು ಗಮನಾರ್ಹವಾಗಿವೆ. ಅಂಬೇಡ್ಕರ್ ಅವರು ಇದರ ಮುಂದಾಳತ್ವ ವಹಿಸಿ ಸಂವಿಧಾನದಲ್ಲಿ ಮೀಸಲಾತಿಯನ್ನು ನೀಡಿದರು.

ಮೈಸೂರುನಲ್ಲಿ ಹಿಂದುಳಿದ ವರ್ಗಗಳ ಚಳವಳಿಯು ಬ್ರಾಹ್ಮಣೇತರ ಚಳವಳಿಯ ಒಂದು ಭಾಗವಾಗಿದೆ. ೧೮೭೫ರಲ್ಲಿ ಮೈಸೂರು ರಾಜ್ಯದಲ್ಲಿ ಸಾರ್ವಜನಿಕ ಸೇವಾ ನೇಮಕಾತಿಗೆ ಸಂಬಂಧಿಸಿದಂತೆ ವಿವಾದವುಂಟಾಯಿತು. ೧೮೮೧–೧೮೯ರ ಅವಧಿಯಲ್ಲಿ ಮದ್ರಾಸ್ ಮತ್ತು ಮೈಸೂರು ಬ್ರಾಹ್ಮಣರ ನಡುವೆ ಘರ್ಷಣೆ ಇತ್ತು. ಈ ವಿವಾದವು ಸರ್. ಎಂ. ವಿಶ್ವೇಶ್ವರಯ್ಯನವರನ್ನು ೧೯೧೨ರಲ್ಲಿ ಮೈಸೂರಿನ ದಿವಾನರನ್ನಾಗಿ ನೇಮಕಾತಿ ಮಾಡುವುದರ ಮೂಲಕ ಕೊನೆಗೊಂಡಿತು. ಆಗಲೇ ಬ್ರಾಹ್ಮಣೇತರರು ಸಾಮಾಜಿಕ ಸಮಾನತೆಗಾಗಿ ಒತ್ತಾಯ ಮಾಡಿದರು. ಆಗಲೇ ಹಿಂದುಳಿದ ವರ್ಗಗಳ ಹೋರಾಟದ ಬೀಜ ಮೊಳಕೆಯೊಡೆಯಿತು. ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ರಾಜಕೀಯ, ಔದ್ಯೋಗಿಕ ಸೌಲಭ್ಯಗಳನ್ನು ಹೆಚ್ಚಿಸಿ ಸಮಾಜದಲ್ಲಿ ಅಂತಸ್ತನ್ನು ಪಡೆಯಲು ಮುಂದಾಗಿದ್ದು, ಹಿಂದುಳಿದ ವರ್ಗಗಳ ಚಳವಳಿಯಾಯಿತು (ಮಂಜು ಎಸ್.ಕೆ., ಪುಟ ೧೩೯–೧೪೦).

ಐತಿಹಾಸಿಕವಾಗಿ ಬೆಳೆದುಬಂದ ಹಿಂದುಳಿದ ವರ್ಗಗಳ ಜಾಗೃತ ಬೆಳವಣಿಗೆ ಮೈಸೂರು ಸಂದರ್ಭದಲ್ಲಿ ಇತ್ತೀಚಿನ ದಿನಗಳಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ ಬಹುಸಂಖ್ಯಾತ ವಂಚಿತ ವರ್ಗವನ್ನು ಎಚ್ಚರಗೊಳಿಸಿತು. ಅವರು ರಾಜಕೀಯವಾಗಿ ಸಂಘಟಿತರಾಗಲು ಕಾರಣವಾಗಿದ್ದು, ಈ ಬೆಳವಣಿಗೆಯನ್ನು ಕರ್ನಾಟಕ ರಾಜಕೀಯದಲ್ಲಿ ಶ್ರೀ ಡಿ. ದೇವರಾಜ ಅರಸು ಅವರ ಆಡಳಿತ ಅವಧಿಯಲ್ಲಿ ಗುರುತಿಸಲಾಗಿದ್ದು, ಅಪಾರ ಬಹುಸಂಖ್ಯಾತ ಅಧಿಕಾರ ವಂಚಿತ ಅಹಿಂದ ವರ್ಗಗಳು ರಾಜಕೀಯದೆಡೆಗೆ ಬಂದು ಪ್ರತಿನಿಧಿಸಲು ಕಾರಣವಾಯಿತು. ಅರಸು ನಂತರದ ಕಾಲದಲ್ಲಿ ಇದಕ್ಕೆ ಒಂದು ಹೊಸ ರೂಪ ಕೊಟ್ಟವರು ಮಾಜಿ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು. ತಮ್ಮ ಆಡಳಿತಾವಧಿಯಲ್ಲಿ ಅಲ್ಪಸಂಖ್ಯಾತ, ಹಿಂದುಳಿದ ಮತ್ತು ದಲಿತರನ್ನು ಒಟ್ಟುಗೂಡಿಸಿ ‘ಅಹಿಂದ’ ಘೋಷಣೆಯ ಮೂಲಕ ಯಶಸ್ವಿ ಅಧಿಕಾರವನ್ನು ಚಲಾಯಿಸಿ ಒಗ್ಗೂಡಿಸುವಲ್ಲಿ ಯಶಸ್ವಿಯಾದರು. ಆದರೂ ಅಲ್ಪಸಂಖ್ಯಾತರು ಮತ್ತು ದಲಿತರು ಅಧಿಕಾರದ ಗದ್ದುಗೆ ಹಿಡಿಯಲು ಸಾಧ್ಯವಾಗಿಲ್ಲ (ಲಕ್ಷ್ಮಣ ತೆಲಗಾವಿ, ೧೯೯೯, ಪುಟ ೩೨).

ಪ್ರಸ್ತುತದಲ್ಲಿ ಅಹಿಂದ ವರ್ಗಗಳ ಪ್ರಮುಖ ನಾಯಕರು, ರಾಜಕೀಯದಲ್ಲಿ ಇವರ ಪಾತ್ರ ಮತ್ತು ಪ್ರಭಾವ ಪ್ರಮುಖವಾಗಿದ್ದು, ಒಬ್ಬೊಬ್ಬರು ತಮ್ಮ ತಮ್ಮ ಜಾತಿ ಧರ್ಮಗಳ ಪರವಾಗಿ ಅವರು ನಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ಅವರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಒಬ್ಬೊಬ್ಬರು ತಮ್ಮದೇ ಆದಂತಹ ವ್ಯಕ್ತಿಗಳನ್ನು ಹೊಂದಿರುತ್ತಾರೆ. ತಮ್ಮವರಿಗಾಗಿ ಅಪಾರ ಶ್ರಮಿಸುತ್ತಿದ್ದಾರೆ. ಅದರಲ್ಲಿಯೂ ಮುಖ್ಯವಾಗಿ ಸರ್ಕಾರದ ನೇತೃತ್ವ ವಹಿಸಿ ಮುಖ್ಯಮಂತ್ರಿಯಾದವರು ಅದರಲ್ಲಿಯೂ ಅಹಿಂದ ವರ್ಗಗಳಲ್ಲಿ ಬೆರಳೆಣಿಕೆಯಷ್ಟು. ಹಿಂದುಳಿದ ವರ್ಗಕ್ಕೆ ಸೇರಿದವರು ಡಿ. ದೇವರಾಜ ಅರಸ್ ಮೊದಲಿಗರು, ಎಂ. ವೀರಪ್ಪ ಮೊಯ್ಲಿ, ಎಸ್. ಬಂಗಾರಪ್ಪ, ಧರ್ಮಸಿಂಗ್, ಎಸ್. ಸಿದ್ಧರಾಮಯ್ಯನವರು. ಆದರೆ ಒಬ್ಬ ದಲಿತ ಮತ್ತು ಅಲ್ಪಸಂಖ್ಯಾತರು ಮುಖ್ಯಮಂತ್ರಿಗಳಾಗಿಲ್ಲ, ಬದಲಾಗಿ ಉಪಮುಖ್ಯಮಂತ್ರಿ ಮತ್ತು ವಿವಿಧ ಮಂತ್ರಿಗಿರಿಯನ್ನು ಪಡೆದಿದ್ದಾರೆ. ರಾಜಕೀಯದಲ್ಲಿ ಈ ಐದು ಜನ ಮುಖ್ಯಮಂತ್ರಿಗಳ ಪ್ರಭಾವ ಅಭೂತಪೂರ್ವವಾಗಿತ್ತು. ಇವರುಗಳಿಗೆ ಕೇಂದ್ರ ಹೈ ಕಮಾಂಡ್‌ಗಳೇ ತಲೆಬಾಗುತ್ತಿದ್ದರು. ಅದರಲ್ಲಿಯೂ ಮುಂಚೂಣಿಯಲ್ಲಿ ಬರುವವರು ಡಿ. ದೇವರಾಜ ಅರಸ್. ಇವರು ಅಲ್ಪಸಂಖ್ಯಾತರಿಗೆ, ದಲಿತರಿಗೆ ಮತ್ತು ಹಿಂದುಳಿದ ವರ್ಗಗಳಿಗೆ ತಂದ ಯೋಜನೆಗಳು ಇಂದಿಗೂ ಮುಂದುವರೆದಿದೆ. ಇದನ್ನು

ಇವರ ನಂತರ ಬಂದ ಎಸ್. ಬಂಗಾರಪ್ಪ, ಎಂ. ವೀರಪ್ಪ ಮೊಯ್ಲಿ ಮತ್ತು ಅಹಿಂದ ವರ್ಗದ ದೊಡ್ಡ ನಾಯಕ ಸಿದ್ಧರಾಮಯ್ಯನವರು ಮುಂದುವರೆಸಿದರು. ಮುಂದೆಬಂದಂತಹ ರಾಜ್ಯ ಸರ್ಕಾರವು ಅದನ್ನು ಅಳವಡಿಸಿಕೊಂಡು ಹೋಗುತ್ತಿದೆ. ಒಟ್ಟಾರೆಯಾಗಿ ನಾವು ನೋಡುವುದಾರೆ ಅಧಿಕೃತವಾಗಿ ಅಹಿಂದ ಚಳವಳಿಯ ನಂತರದಲ್ಲಿ, ಅಹಿಂದ ವರ್ಗಗಳು ಅಭಿವೃದ್ದಿಯನ್ನು ಹೊಂದುತ್ತಿರುವುದನ್ನು ನಾವು ನೋಡಬಹುದು. ಇಂದಿನ ರಾಜ್ಯ ಸರ್ಕಾರ ದಲಿತರಿಗೆ ಮೀಸಲಾತಿಯನ್ನು ಹೆಚ್ಚಿಸಿದ್ದು, ಹಿಂದುಳಿದ ವರ್ಗಗಳಿಗೆ ಅನೇಕ ಯೋಜನೆಯನ್ನು ಜಾರಿಗೆ ತಂದಿದ್ದು, ಅಲ್ಪಸಂಖ್ಯಾತರಿಗೆ ವಿಷೇಶವಾದ ಕೊಡುಗೆಯನ್ನು ನಿಡಿದೆ.

**ಆಧಾರ ಗ್ರಂಥಗಳು**


- Sadananda J.s. 2005. “Karnataka Journal of Politics’’,AHINDA-Retrospect and prospects of backword class movement,.mangalore.
- ಪೂಜಾರಹಳ್ಳಿ ವಿರೂಪಾಕ್ಷಿ, ೨೦೦೫. “ದಲಿತರು ಮತ್ತು ಚರಿತ್ರೆ”, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಯೋಗರಾಜ್ ಎಸ್.ಡಿ. ಮತ್ತು ಕೆ.ಎಚ್. ಲಕ್ಷ್ಮಣ, ೨೦೧೫. “ಭಾರತದ ಸಂವಿಧಾನ ಮತ್ತು ಮಾನವ ಹಕ್ಕುಗಳು”, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್.
- ದೇವೇಗೌಡ ಡಿ.ಟಿ., ೨೦೧೪. “ಮಾನವ ಹಕ್ಕುಗಳು”, ಲಕ್ಷ್ಮಿ ಪ್ರಿಂಟಿಂಗ್ಸ್ ಮತ್ತು ಪಬ್ಲಿಷಿಂಗ್ ಹೌಸ್.
- ತೇಲ್ತುಂಬ್ಡಿ ಆನಂದ್, ನಾ. ದಿವಾಕರ, ೨೦೧೬. “ಜಾಗತೀಕರಣ ಮತ್ತು ದಲಿತರು”, ಲಡಾಯಿ ಪ್ರಕಾಶನ.
- ರಾವ್ ಕೆ. ಬದರಿನಾಥ್, ೨೦೦೨. “ಧರ್ಮ ನಿರಪೇಕ್ಷತೆ ಮತ್ತು ಅಲ್ಪಸಂಖ್ಯಾತರು”, ನವ ಕರ್ನಾಟಕ ಪ್ರಕಾಶನ.
- ಚಿದಾನಂದಮೂರ್ತಿ ಎಂ., ೨೦೧೧. “ಮಧ್ಯಕಾಲೀನ ಕರ್ನಾಟಕ ಮತ್ತು ಅಸ್ಪೃಶ್ಯತೆ”, ಎಸ್.ಬಿ.ಎಸ್. ಪಬ್ಲಿಕೇಷನ್ಸ್.
- ಅಂಜನಪ್ಪ ಕೆ., ೨೦೦೭. “ಡಾ. ಅಂಬೇಡ್ಕರ್ ಮತ್ತು ಅಸ್ಪೃಶ್ಯತೆ”, ಅಂಬೇಡ್ಕರ್ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ.
- ಮುನಿವೆಂಕಟಪ್ಪ ವಿ., ೨೦೦೦. “ಮತಾಂತರ ಮತ್ತು ಇತರೆ ಲೇಖನಗಳು”, ವಿಚಾರವಾದಿ ಪ್ರಕಾಶನ.

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಡಿಜಿಟಲ್ ಗ್ರಂಥಾಲಯ ಮತ್ತು ಅದರ ಭವಿಷ್ಯ

**ಬಸವರಾಜ ಮಾಲಿಪಾಟೀಲ್**
ಗ್ರಂಥಪಾಲಕ
ಡಾ. ಅಂಬೇಡ್ಕರ್ ಪ್ರಥಮ ದರ್ಜೆ ಮಹವಿದ್ಯಾಲಯ ರಂಗಂಪೇಟ ತಾ॥ ಸುರಪುರ
ಜಿ॥ ಯಾದಗಿರಿ. ೫೮೫೨೨೦ ರಾಜ್ಯ-ಕರ್ನಾಟಕ

**ಸಾರಾಂಶ**

ಡಿಜಿಟಲ್ ಗ್ರಂಥಾಲಯಗಳು ದಿನದ ಅಗತ್ಯ. ಬಳಕೆದಾರರ ಆಸಕ್ತಿಯ ದಾಖಲೆಯನ್ನು ಬಳಕೆದಾರರು ಹುಡುಕಲು ಮತ್ತು ಹಿಂಪಡೆಯಲು ಸಾಧ್ಯವಾಗುವಂತಹ ದಾಖಲೆಗಳ ಡಿಜಿಟಲ್ ಸಂಗ್ರಹಗಳಿಗೆ ಡಿಜಿಟಲ್ ಗ್ರಂಥಾಲಯಗಳು ಸಲಭವಾಗಿ ಪ್ರವೇಶವನ್ನು ಒದಗಿಸುತ್ತವೆ ನೆಟ್ವರ್ಕ ಪರಿಸರದಲ್ಲಿ ವೈವಿಧ್ಯಮಯ ಸಂವಹನಕ್ಕಾಗಿ ಮತ್ತು ವಿಭಿನ್ನ ಪ್ರದೇಶದಲ್ಲಿ ಡಿಜಿಟಲ್ ಗ್ರಂಥಾಲಯಗಳನ್ನು ಇಂದು ರಚಿಸಲಾಗುತ್ತಿದೆ ಉದಾ. ಶಿಕ್ಷಣ ವಿಜ್ಞಾನ ಸಂಸ್ಕೃತಿ, ಅಭಿವೃದ್ಧಿ ಹೀತ್, ಆಡಳಿತ ಹೀಗೆ, ಡಿಜಿಟಲ್ ಗ್ರಂಥಾಲಯ ಮತ್ತು ಮಾಹಿತಿ ಸೇವೆಗಳಲ್ಲಿ ಮಾತ್ರವಲ್ಲದೆ ನಿಯಮಗಳು ಮತ್ತು ಗ್ರಂಥಾಲಯಗಳು ಮತ್ತು ಮಾಹಿತಿ ವೃತ್ತಿಪರರ ನಿರೀಕ್ಷೇಯಲ್ಲೂ ಸಾಕಷ್ಟು ಬದಲಾವಣೆಗಳನ್ನು ಮಾಡಿದೆ. ಈ ಕಾಗದವು ವಸ್ತುನಿಷ್ಠ ಉದ್ದೇಶಗಳ ಘಟಕಗಳು ಮತ್ತು ಭವಿಷ್ಯದ ಅಗತ್ಯತೆಗಳ ಮೇಲೆ ಕೇಂದ್ರಿಕರಿಸಿದೆ ಗ್ರಂಥಾಪಾಲಕರ ಪಾತ್ರ.

**ಪರಿಚಯ**

ನಾವು ಮಾಹಿತಿ ಸಮಾಜದಲ್ಲಿ ವಾಸಿಸುತ್ತಿದ್ದೇವೆ. ಅಲ್ಲಿ ಮಾಹಿತಿಯನ್ನು ಅಮೂಲ್ಯ ವಸ್ತುವಾಗಿ ಪರಿಗಣಿಸಲಾಗುತ್ತದೆ. ಯಾವುದೇ ಜೀವನಕ್ಕಾಗಿ ಮಾಹಿತಿ ತಂತ್ರಜ್ಞಾನದ ಆಗಮನವು ಗ್ರಂಥಾಲಯಗಳ ಗಾತ್ರವನ್ನು ದೊಡ್ಡದರಿಂದ ಚಿಕ್ಕದಕ್ಕೆ ತಗ್ಗಿಸಲು ದಾರಿ ಮಾಡಿಕೊಟ್ಟಿದೆ. ವಾಸ್ತವವಾಗಿ, ಆಧುನಿಕ ಗ್ರಂಥಾಲಯಗಳು ಚಿಕ್ಕದಾದ ಆದರೆ ಸಮೃದ್ಧ ಮಾಹಿತಿಯೊಂದಿಗೆ ಸಾಗುತ್ತಿವೆ. ಗ್ರಂಥಾಲಯಗಳ ಈ ಸಣ್ಣತನವು ಮಾಹಿತಿಯ ಡಿಜಿಟಲೀಕರಣದಿಂದಾಗಿ ಇದು ಸಾಂಪ್ರದಾಯಿಕೆ ಗ್ರಂಥಾಲಯಗಳು ಬಹಳ ಹಿಂದಿನಿಂದಲೂ ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಉಂಟುಮಾಡಿದೆ. ಡಿಜಿಟಲ್ ಗ್ರಂಥಾಲಯಗಳು ಮಾಹಿತಿಯ ಡಿಜಿಟಲೀಕರಿಸಿದ ದತ್ತಾಂಶವನ್ನು ಆಧರಿಸಿವೆ ಅದು ಕಾಗದ ಆಧಾರಿತ ದಾಖಲೆಗಳನ್ನು ಕ್ರಮೇಣ ಬದಲಿಸಿದೆ. ದೃಷ್ಟಿಗೋಚರ ಮಾಹಿತಿ ವ್ಯವಸ್ಥೆಯು ಹೆಚ್ಚು ಜನಪ್ರಿಯವಾಗುತ್ತಿರುವುದರಿಂದ ಇವು ಪಠ್ಯ ಆಧಾರಿತ ಮಾಹಿತಿ ವ್ಯವಸ್ಥೆಗೆ ಸಂಕುಚಿತವಾಗಿವೆ, ಆದ್ದರಿಂದ ಡಿಜಿಟಲ್ ಗ್ರಂಥಾಲಯಗಳು, ಇಂದು ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿವೆ ಮತ್ತು ಪ್ರಕೃತಿಯಲ್ಲಿ ಹೆಚ್ಚು ಚಿತ್ರಾತ್ಮಕವಾಗಿವೆ. ಡಿಜಿಟಲ್ ಗ್ರಂಥಾಲಯಗಳು ಅವುಗಳಲ್ಲಿ ಸ್ಥಳಾವಕಾಶದ ತೊಂದರೆಗಳನ್ನು ಕಡಿಮೆ ಮಾಡಿವೆ.

ಪದಗಳ ಸಂಖ್ಯೆ ಇವೆ ಡಿಜಿಟಲ್ ಗ್ರಂಥಾಲಯಗಳ ಪರಿಕಲ್ಪನೆಯನ್ನು ಪ್ರತಿನಿಧಿಸಲು ಲೇಖಕರು ಬಳಸುತ್ತಾರೆ. ಈ ಪದಗಳು ಪಾಲಿಗ್ಲೋಟ್ ಗ್ರಂಥಾಲಯ ಎಲೆಕ್ಟ್ರಾನಿಕ್ ಗ್ರಂಥಾಲಯ ಡಿಸ್ ಎಂಟು ಉನ್ನತ ಗ್ರಂಥಾಲಯ, ಗೋಡೆಗಳಿಲ್ಲದೆ ಇತ್ಯಾದಿ. ಈ ಪದಗಳಿಂದ ಡಿಜಿಟಲ್ ಗ್ರಂಥಾಲಯ ಆಗಿದೆ ಸಾಮಾನ್ಯವಾಗಿ ಬಳಸುವುದು ಜನಸಂಖ್ಯೆಯ ಬಹುಪಾಲು. ಡಿಜಿಟಲ್ ಗ್ರಂಥಾಲಯಗಳು ವೈವಿಧ್ಯಮಯವಾಗಿದೆ ಪ್ರಕೃತಿ. ಮಾಹಿತಿಗೆ ಸಂಬಂಧಿಸಿದ ಕೆಲಸ ಮತ್ತು ಡಿಜಿಟಲೀಕರಣ ಮಾಡುವುದು ಸಂಗ್ರಹಿಸುವುದು, ಹುಡುಕುವುದು ಲಿಂಕ್ ಮಾಡುವುದು ಬಳಕೆಯನ್ನು ದೃಶ್ಯೀಕರಿಸುವುದು ಹೇಗೆ ಎಂದು ಪ್ರಕಟಿಸುವುದು. ಡಿಜಿಟಲ್ ಗ್ರಂಥಾಲಯ ಜಾಗತಿಕ ವರ್ಚುವಲ್ ಆಗಿದೆ ಗ್ರಂಥಾಲಯ ಮತ್ತು ಅದರ ಡಿಜಿಟಲ್‌ನಲ್ಲಿ ಲಭ್ಯವಿರುವ ಎಲ್ಲ ಮಾಹಿತಿಯೊಂದಿಗೆ ಗ್ರಂಥಾಲಯ ಎಂದು ವ್ಯಾಖ್ಯಾನಿಸಬಹುದು. ವೈವಿಧ್ಯಮಯ ಸಮುದಾಯಗಳಿಗೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ಡಿಜಿಟಲ್ ಗ್ರಂಥಾಲಯಗಳನ್ನು ಇಂದು ರಚಿಸಲಾಗುತ್ತಿದೆ. ಕಲೆ ಮೂಲತಃ ಎಲೆಕ್ಟ್ರಾನಿಕ್ಸ ಸ್ವರೂಪದಲ್ಲಿ ವಸ್ತುಗಳ ರಾಶಿಯನ್ನು ಸಂಗ್ರಹಿಸುತ್ತದೆ ಮತ್ತು ಆ ವಸ್ತುಗಳ ದೊಡ್ಡ ಸಂಗ್ರಹವನ್ನು ಸಮರ್ಥವಾಗಿ ನಿರ್ವಹಿಸುತ್ತದೆ. ಆದಾಗ್ಯೂ ಇ-ಸಂಗ್ರಹಣೆಗಳಿಂದ ಮತ್ತು ಅಡ್ಡಲಾಗಿ ಅಪೇಕ್ಷಿತ ಆಯ್ದ ಮಾಹಿತಿಯನ್ನು ಹೇಗೆ ಹುಡುಕುವುದು ಮತ್ತು ಪ್ರದರ್ಶಿಸುವುದು ಎಂಬುದು ಪ್ರಮುಖ ತಾಂತ್ರಿಕ ಕಾಳಜಿ.

**ಡಿಜಿಟಲ್ ಗ್ರಂಥಾಲಯ ವ್ಯಾಖ್ಯಾನಗಳು**

ಅಮೇರಿಕನ್ ಡಿಜಿಟಲ್ ಗ್ರಂಥಾಯಲ ಫೆಡೆರೇಶನ್ ಡಿಜಿಟಲ್ ಗ್ರಂಥಾಲಯಯನ್ನು " ಡಿಜಿಟಲ್ ಗ್ರಂಥಾಲಯಗಳು ಎಂದು ವ್ಯಾಖ್ಯಾನಿಸಿದೆ ಆಯ್ದ ರಚನೆಗೆ ಸಿಬ್ಬಂದಿ ಸೇರಿದಂತೆ ಸಹಾಯವನ್ನು ಒದಗಿಸುವ ಸಂಸ್ಥೆ ಬೌದ್ಧಿಕ ಪ್ರದೇಶವನ್ನು ನೀಡುತ್ತದೆ, ವ್ಯಾಖ್ಯಾನಿಸುವುದು, ವಿತರಿಸುವುದು ಸಮಗ್ರತೆಯನ್ನು ಕಾಪಾಡುವುದು ಮತ್ತು ಹಾಸ್ಯಮಯವಾಗಿ ಲಭ್ಯವಿದೆ.

ಲಾರ್ಸನ್ ಪ್ರಕಾರ ಡಿಜಿಟಲ್ ಗ್ರಂಥಾಲಯಗಳು ಏಕೈಕ ಸ್ವತಂತ್ರವಲ್ಲ ಮತ್ತು ಡಿಜಿಟಲ್ ಡೇಟಾದ ಭಂಡಾರಗಳಾಗಿವೆ, ಬದಲಿಗೆ ಅವು ಬಳಕೆದಾರರ ಸಂವಹನ ದತ್ತಾಂಶ ಎನ್‌ಕೋಡಿಂಗ್ ಮತ್ತು ಪ್ರಸರಣಕ್ಕಾಗಿ ಉತ್ಪನ್ನದ ವೈವಿಧ್ಯಮಯ ಸಂಗ್ರಹವಾಗಿದೆ. ಬ್ರೆಕ್ಲಿಯ ಪ್ರಕಾರ "ಡಿಜಿಟಲ್ ಗ್ರಂಥಾಲಯವು ವಿತರಿಸಿದ ಮಾಹಿತಿ ಮೂಲದ ಸಂಗ್ರಹವಾಗಿದೆ. ಮಾಹಿತಿಯ ನಿರ್ಮಾಪಕರು ಅದನ್ನು ಅಭ್ಯವೆಂದು ಗುರುತಿಸುತ್ತಾರೆ ಮತ್ತು ಗ್ರಾಹಕರು ಅದನ್ನು ಸ್ವಯಂಚಾಲಿತ ಏಜೆಂಟಗಳ ಸಹಾಯದಿಂದ ಕಂಡುಕೊಳ್ಳಯತ್ತಾರೆ. ಲೆಸ್ಕ್ ಪ್ರಕಾರ" ಡಿಜಿಟಲ್ ಗ್ರಂಥಾಲಯ ಡಿಜಿಟಲೀಕರಣಗೊಂಡ ಮತ್ತು ಸಂಘಟಿತವಾದ ಮತ್ತು ಸಾಂಪ್ರದಾಯಿಕ ಗ್ರಂಥಾಲಯಕ್ಕಿಂತ ಹೆಚ್ಚಿಮ ಸಾಮರ್ಥ್ಯಗಳನ್ನು ಒದಗಿಸುವ ಮಾಹಿತಿಯ ಸಂಗ್ರಹವಾಗಿದೆ.

ಇ.ಎ. ಪ್ರಕಾರ ಫಾಕ್ಸ್ "ಡಿಜಿಟಲ್ ಗ್ರಂಥಾಲಯಯನ್ನು ಗ್ರಂಥಾಲಯಗಳ ಕಾರ್ಯಗಳನ್ನು ನಿರ್ವಹಿಸುವ ಹೊಸ ವಿಧಾನವು ಹೊಸ ಪ್ರಕಾರದ ಮಾಹಿತಿ ಸಂಪನ್ಮೂಲವನ್ನು ವರ್ಗೀಕರಣಕ್ಕೆ ಹೊಸ ವಿಧಾನಗಳನ್ನು ನಿಯೋಜಿಸುತ್ತದೆ ಮತ್ತು ಎಲೆಕ್ಟ್ರಾನಿಕ್ ಸಿಸ್ಟಮ್ ಮತ್ತು ನೆಟ್‌ವರ್ಕಗಳ ತೀವ್ರ ಬಳಕೆಯನ್ನು ಪಟ್ಟಿಮಾಡುತ್ತದೆ, ಬೌದ್ಧಿಕ ಸಾಂಸ್ಥಿಕ ಮತ್ತು ಎಲೆಕ್ಟ್ರಾನಿಕ್ ಅಭ್ಯಾಸಗಳಲ್ಲಿ ನಾಟಕೀಯ ಬದಲಾವಣೆಗಳು.

ಡಿಜಿಟಲ್ ಗ್ರಂಥಾಲಯ ಎನ್ನುವುದು ಡಿಜಿಟಲ್ ಮತ್ತು ಸೇವೆಗಳನ್ನು ಒಳಗೊಂಡಿರುವ ಗ್ರಂಥಾಲಯವಾಗಿದೆ. ಡಿಜಿಟಲ್ ವಸ್ತಗಳು ಮತ್ತು ವಸ್ತುಗಳನ್ನು ಡಿಜಿಟಲ್ ಸಾಧನಗಳು ಮತ್ತು ನೆಟ್‌ವರ್ಕಗಳ ಮೂಲಕ ಸಂಗ್ರಹಿಸಲಾಗುತ್ತದೆ ಸಂಸ್ಕರಿಸಲಾಗುತ್ತದೆ ಮತ್ತು ವರ್ಗಾಯಿಸಲಾಗುತ್ತದೆ. ಡಿಜಿಟಲ್ ಸೇವೆಗಳು ಕಂಪ್ಯೂಟರ್ ನೆಟ್‌ವರ್ಕಗಳಲ್ಲಿ ಡಿಜಿಟಲ್ ರೂಪದಲ್ಲಿ ತಲುಪಿಸುವ ಸೇವೆಗಳಾಗಿವೆ. ಇದು ಕಂಪ್ಯೂಟರ್‌ನಲ್ಲಿ ತನ್ನ ಸಂಗ್ರಹದ ಎಲ್ಲಾ ಅಥವಾ ಗಣನೀಯ ಭಾಗವನ್ನು ಪರ್ಯಾಯವಾಗಿ ಪ್ರವೇಶಿಸಬಲ್ಲದು ಪ್ರಸ್ತುತ ಗ್ರಂಥಾಲಯ ಸಂಗ್ರಹಣೆಯನ್ನು ಅನಾಮಧೇಯಗೊಳಿಸುವ ಸಾಂಪ್ರದಾಯಿಕೆ ಮುದ್ರಿತ ಮತ್ತು ಮೈಕ್ರೊಫಾರ್ಮ ವಸ್ತುಗಳಿಗೆ ಪೂರಕವಾಗಿದೆ. "ಎಲೆಕ್ಟ್ರಾನಿಕ್ ಗ್ರಂಥಾಲಯ" ವೆಬ್ ಗ್ರಂಥಾಲಯ ಮತ್ತು ವರ್ಚುವಲ್ ಗ್ರಂಥಾಲಯ ನಂತಹ ಡಿಜಿಟಲ್ ಗ್ರಂಥಾಲಯ ಪದಗಳ ಅನೇಕ ವ್ಯಾಖ್ಯಾಗಳಿಗೆ ಹೆಚ್ಚಾಗಿ ಸಮಾನಾರ್ಥಕವಾಗಿ ಬಳಸಲ್ಪಡುತ್ತವೆ. ಡಿಜಿಟಲ್ ಗ್ರಂಥಾಲಯ ಹೈಪರ್ಟೆಕ್ಸ್ಟ್ ಪರಿಸರದಲ್ಲಿ ಕೆಲಸ ಮಾಡುವ ಜನರಿಗೆ ದೊಡ್ಡ ಡೇಟಾ ಬೇಸ್ ಮಾತ್ರವಲ್ಲ. ಇದು ಒಂದು ಇದು ಸೃಷ್ಟಿ ಶೇಖರಣೆಯ ಸಂಪೂರ್ಣ ಜೀವನ ಚಕ್ರವನ್ನು ಬೆಂಬಲಿಸುತ್ತದೆ, ದತ್ತಾಂಶ ಮಾಹಿತಿ ಮತ್ತು ಜ್ಞಾನದ ಸಂರಕ್ಷಣೆ ಭೂ ಪ್ರಸರಣ ಬಳಕೆ. ಶಸ್ತ್ರಾಸ್ತ್ರಗಳ ಪ್ರಕಾರ ಡಿಜಿಟಲ್ ಗ್ರಂಥಾಲಯ ಸಂಬಂಧಿತ ಸೇವೆಗಳೊಂದಿಗೆ ನಿರ್ವಹಿಸಿದ ಮಾಹಿತಿಯ ಸಂಗ್ರಹಣೆ ಅಲ್ಲಿ ಮಾಹಿತಿಯನ್ನು ಡಿಜಿಟಲ್ ಸ್ವರೂಪದಲ್ಲಿ ಸಂಗ್ರಹಿಸಲಾಗುತ್ತದೆ ಮತ್ತು ನೆಟ್‌ವರ್ಕಗಳಲ್ಲಿ ಪ್ರವೇಶಿಸಬಹುದು. (ಯುಎಸ್)ನಲ್ಲಿನ ಡಿಜಿಟಲ್ ಗ್ರಂಥಾಲಯ ಫೆಡರೇಶನ್ ಪ್ರಕಾರ "ಡಿಜಿಟಲ್ ಗ್ರಂಥಾಲಯಗಳು ಆಯ್ಕೆ ಮಾಡಲು ವಿಶೇಷ ಸಿಬ್ಬಂದಿ ಸೇರಿದಂತೆ ಸಂಪನ್ಮೂಲಗಳನ್ನು ಒದಗಿಸುವ ಸಂಸ್ಥೆಗಳು ರಚನೆಯು ಅರ್ಥೈಸಲು ಬೌದ್ಧಿಕ ಪ್ರವೇಶವನ್ನು ನೀಡುತ್ತದೆ ಸಮಗ್ರತೆಯನ್ನು ಕಾಪಾಡುತ್ತದೆ. ಡಿಜಿಟಲ್ ಕೃತಿಗಳ ಸಂಗ್ರಹದ ಸಮಯದ ನಿರಂತರತೆಯನ್ನು ಖಚಿತಪಡಿಸಿಕೊಳ್ಳಿ ಮತ್ತು ಅವುಗಳು ಡಿಜಿಟಲ್ ಅಥವಾ ಆದರ ಡಿಜಿಟಲ್‌ನಲ್ಲಿ ಹಿಡಿದಿಟ್ಟುಕೊಳ್ಳುವುದರಿಂದ ಇತರ ಪ್ರೋಟೋಕಾಲ್ ಅನ್ನು ಬಳಸಿಕೊಂಡು ನೆಟ್‌ವರ್ಕನಲ್ಲಿರುವ ಕಂಪ್ಯೂಟರ್‌ನಿಂದ ಪ್ರವೇಶಿಸಬುಹುದು.

**ಡಿಜಿಟಲ್ ಗ್ರಂಥಾಲಯ ಉದ್ದೇಶಗಳು**

ಡಿಜಿಟಲ್ ಗ್ರಂಥಾಲಯಗಳ ಮುಖ್ಯ ಉದ್ದೇಶವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ.

೧. ಸಂವಹನ ಚಾನೆಲ್‌ಗಳ ಸಾಮೂಹಿಕ ವ್ಯವಸ್ಥಿತಗೊಳಿಸಲು ಮತ್ತು ಡಿಜಿಟಲ್‌ನಲ್ಲಿ ಮಾಹಿತಿಯನ್ನು ಪ್ರವೇಶಿಸಲು ಮತ್ತು ದೊಡ್ಡದಾದ ಡಿಜಿಟೈಸ್ಡ ಡೇಟಾ ಬೇಸ್ ಅನ್ನು ಹೊಂದಲು.
೨. ದಿನನಿತ್ಯದ ಕೆಲಸವನ್ನು ತಪ್ಪಿಸುವ ಮೂಲಕ ಗ್ರಂಥಾಲಯದ ಸಿಬ್ಬಂದಿಯ ಸಮಯವನ್ನು ಉಳಿಸುವುದು ಮತ್ತು ವೆಚ್ಚವನ್ನು ಕಡಿಮೆ ಮಾಡುವುದು ವಿವಿಧ ಗ್ರಂಥಾಲಯ ಚಟುವಟಿಕೆಗಳು
೩. ಯಾವುದೇ ಸ್ವರೂಪದಲ್ಲಿ ಗ್ರಂಥಾಲಯಲ್ಲಿ ಎಲ್ಲಾ ಮಾಹಿತಿಯ ಸುಸಂಬದ್ಧ ನೋಟವನ್ನು ಒದಗಿಸುವುದು.
೪. ಉತ್ತಮ ಸೇವೆಯನ್ನು ನೀಡುವ ಮೂಲಕ ಅವಶ್ಯಕತೆಗಳನ್ನು ಪೂರೈಸುವುದು ಮತ್ತು ಒದಗಿಸುವುದು ಕಸ್ಟಮ್–ನಿರ್ಮಿತ ಮತ್ತು ಪುನರಾವಲೋಕನ ಸೇವೆಗಳು ಸಮರ್ಥ ರೀತಿಯಲ್ಲಿ
೫. ನೆಟ್ವರ್ಕ್ನಾದ್ಯಂತ ವ್ಯಾಪಕವಾಗಿ ಚದುರಿದ ಸಮುದಾಯಗಳಿಗೆ ಸೇವೆ ಸಲ್ಲಿಸುವುದು
೬. ದೊಡ್ಡ ಗ್ರಂಥಾಲಯದ ಬೃಹತ್ ಸಂಗ್ರಹಣೆ ಮತ್ತು ಸ್ಥಳಾವಕಾಶದ ಸಮಸ್ಯೆಯನ್ನು ಕಡಿಮೆ ಮಾಡುವುದು.

**ಡಿಜಿಟಲ್ ಗ್ರಂಥಾಲಯ ಕಾರ್ಯಗಳು**

೧. ಇಂಟರ್ನೆಟ್ನಲ್ಲಿ ನೆಟ್ವರ್ಕ ಪ್ರವೇಶಿಸುವಿಕೆ
೨. ನ್ಯಾವಿಗೇಷನ್‌ನ ಹೈಪರ್ಟೆಕ್ಸ್ಟ್ ಲಿಂಕಗಳು
೩. ಕ್ಲೈಂಟ್–ಸರ್ವರ್ ಆರ್ಕಿಟೆಕ್ಚರ್
೪. ಪಠ್ಯದ ಜೊತೆಗೆ ಮಲ್ಟಿಮೀಡಿಯಾ ವಿಷಯವನ್ನು ಬೆಂಬಲಿಸಿ

೫. ಬಳಕೆದಾರ ಸ್ನೇಹಿ ಇಂಟರ್ಫೇಸ್
೬. ಪ್ರಾಥಮಿಕ ಮಾಹಿತಿ ಮೂಲಗಳಿಗೆ ಪ್ರವೇಶ
೭. ಬಳಕೆದಾರರಿಗೆ ಅಗತ್ಯವಿರುವಾಗ ಮತ್ತು ಎಲ್ಲಿ ಬೇಕಾದರೂ ಹೆಚ್ಚಿನ ಪ್ರಮಾಣದ ಮಾಹಿತಿಗೆ ಪ್ರವೇಶ
೮. ಸುಧಾರಿತ ಹುಡುಕಾಟ ಮತ್ತು ಮರುಪಡೆಯುವಿಕೆ
೯. ಇತರೆ ಡಿಜಿಟಲ್ ಗ್ರಂಥಾಲಯಗಳೊಂದಿಗೆ ಏಕೀಕರಣ

**ಡಿಜಿಟಲ್ ಗ್ರಂಥಾಲಯ ಘಟಕಗಳು**

ಡಿಜಿಟಲ್ ಗ್ರಂಥಾಲಯಗಳಿಗೆ ಉತ್ತಮವಾಗಿ ಸ್ಥಾಪಿತ ಮತ್ತು ಸಾಬೀತಾಗಿರುವ ಮಾಹಿತಿ ತಂತ್ರಜ್ಞಾನಗಳು ಬೇಕಾಗುತ್ತವೆ. ನೆಟ್‌ವರ್ಕಗಳ ಮೂಲಕ ಡೇಟಾಬೇಸ್ ಅಥವಾ ಸರ್ವರ್‌ಗಳನ್ನು ಪ್ರವೇಶಿಸುವುದು. ಕೆಳಗಿನ ಘಟಕಗಳು ತುಂಬಾ ಡಿಜಿಟಲ್ ಗ್ರಂಥಾಲಯಯನ್ನು ರಚಿಸಲು ಅವಶ್ಯಕ.

**ಹಾರ್ಡವೇರ್ ಅವಶ್ಯಕತೆ**

**ಡಿಜಿಟಲ್ ಗ್ರಂಥಾಲಯ ಅವಶ್ಯಕತೆಯನ್ನು ಇಲ್ಲಿ ಉಲ್ಲೇಖಿಸಲಾಗಿದೆ**

ಎ) ಹೈಪವರ್ ಯುಪಿಎಸ್
ಬೌ) ೨೪ ಗಂಟೆಗಳ ಇಂಟರ್ನೆಟ್ ಸಂಪರ್ಕ
ಸಿ) ನೆಟ್ ವರ್ಕಗಳು
ಡಿ) ಮಲ್ಟಿಮೀಡಿಯಾ ಇಂಟರ್ಫೇಸ್ಗಳು
ಇ) ಕಂಪ್ಯೂಟರ್ ಸರ್ವರ್ಗಳು
ಎಫ್) ಐಂಓ ಅಥವಾಘಂಓ

**ಡಿಜಿಟಲ್ ಗ್ರಂಥಾಲಯಗಾಗಿ ಅಗತ್ಯವಿದೆ**

ಮಾನವಿಕತೆ ಮತ್ತು ಸಾಮಾಜಿಕ ವಿಜ್ಞಾನ. ಬಳಕೆದಾರರಿಗೆ ತಮ್ಮ ಸೇವೆಗಳನ್ನು ನಿರ್ವಹಿಸಲು ಗ್ರಂಥಾಲಯಗಳು ಸಮಸ್ಯೆಯನ್ನು ಎದುರಿಸುತ್ತಿವೆ. ಪ್ರಸ್ತುತ ಸನ್ನಿವೇಶದಲ್ಲಿ ಡಿಜಿಟಲ್ ಗ್ರಂಥಾಲಯಗಳು ಪ್ರಪಂಚದ ಪ್ರತಿಯೊಂದು ಭಾಗದಲ್ಲೂ ಹರಡುತ್ತಿವೆ. ಒಂದೇ ಕಂಪ್ಯೂಟರ್‌ನಲ್ಲಿ ಬೃಹತ್ ಡೇಟಾವನ್ನು ನಿಯಂತ್ರಿಸುವುದು ತುಂಬಾ ಸುಲಭ. ಕೆಲವು ಪ್ರಮುಖ ಅಗತ್ಯಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ.

೧. ಡಿಜಿಟಲ್‌ನಲ್ಲಿ ಮಾಹಿರಿಯನ್ನು ಸಂಗ್ರಹಿಸಲು, ಸಂಗ್ರಹಿಸಲು, ಸಂಘಟಿಸಲು ಮತ್ತು ಪ್ರವೇಶಿಸಲು.
೨. ಸಂಪನ್ಮೂಲ ಹಂಚಿಕೆಯನ್ನು ಉತ್ತೇಜಿಸಲು
೩. ದಿನನಿತ್ಯದ ಕೆಲಸವನ್ನು ತಪ್ಪಿಸುವ ಮೂಲಕ ಗ್ರಂಥಾಲಯದ ಸಿಬ್ಬಂದಿ ಮತ್ತು ಸಮಯವನ್ನು ಉಳಿಸುವುದು
೪. ಮಾಹಿತಿಯ ಆರ್ಥಿಕ ಮತ್ತು ಪರಿಣಾಮಕಾರಿಯಾಗಿ ವಿತರಣೆಯನ್ನು ಉತ್ತೇಜಿಸುವುದು
೫. ತಿತಿತಿ.ನಲ್ಲಿ ಪ್ರವೇಶಿಸಬಹುದು
೬. ಉತ್ತಮ ಸೇವೆಯನ್ನು ನೀಡುವ ಮೂಲಕ ಬಳಕೆದಾರರ ಅಗತ್ಯವನ್ನು ಪೂರೈಸುವುದು
೭. ಹುಡುಕಾಟ ಮತ್ತು ಮರುಪಡೆಯುವಿಕೆಗೆ ಬೆಂಬಲ ನೀಡಲು
೮. ಬಳಕೆದಾರರಿಗೆ ಸ್ನೇಹಿ ಇಂಟರ್ಫೇಸ್ ಒದಗಿಸಲು
೯. ಪಚಾರಿಕ ಮತ್ತು ಅನೌಪಚಾರಿಕ ಕಲಿಕೆಯನ್ನು ಬೆಂಬಲಿಸುವುದು.

**ಡಿಜಿಟಲ್ ಗ್ರಂಥಾಲಯ ವೈಶಿಷ್ಟ್ಯ**

ನಾವು ಮಾಹಿತಿ ಸ್ಫೋಟ ಮತ್ತು ಮಾಹಿತಿ ತಂತ್ರಜ್ಞಾನ ಕ್ರಾಂತಿಯ ಮಧ್ಯದಲ್ಲಿದ್ದೇವೆ ಯುಗದ ಎಲೆಕ್ಟ್ರಾನಿಕ್ಸ ಮಾಹಿತಿಯ ಹೊರಹೊಮ್ಮುವಿಕೆಗೆ ಕಾರಣವಾಗುತ್ತೆದೆ. ಮಾಹಿತಿಯಲ್ಲಿ ತ್ವರಿತ ಪ್ರಗತಿ ಸಂಸ್ಕರಣೆ, ಮತ್ತು ಸಂವಹನ ತಂತ್ರಜ್ಞಾನಗಳು ಪಾತ್ರದಲ್ಲಿ ಕ್ರಾಂತಿಯನ್ನುಂಟು ಮಾಡಿವೆ ಮಾಹಿತಿ ಸೇವೆಯನ್ನು ತಮ್ಮ ಬಳಕೆದಾರರಿಗೆ ಪ್ರಸಾರ ಮಾಡುವಲ್ಲಿ ವಿಶ್ವದಾದ್ಯಾಂತದ ಗ್ರಂಥಾಲಯಗಳು, ಆದ್ದರಿಂದ ಡಿಜಿಟಲ್ ಗ್ರಂಥಾಲಯಗಾಗಿ ಗುರುತಿಸಲಾದ ವಿವಿಧ ವೈಶಿಷ್ಟ್ಯಗಳು

೧. ಬಹಳ ದೊಡ್ಡ ಮಾಹಿತಿ ಸಂಗ್ರಹಕ್ಕೆ ಪ್ರವೇಶವನ್ನು ಒದಗಿಸಿ.
೨. ಕೇವಲ (ಆದರೆ ಸಂಪೂರ್ಣ) ಮಾಹಿತಿಗೆ ಪ್ರವೇಶವನ್ನು ಒದಗಿಸುವತ್ತ ಗಮನಹರಿಸಿ ಬಾಡಿಗೆ ಅಥಾವಾ ಸೂಚ್ಯಂಕಗಳು
೩. ಬಹು ಮಾಧ್ಯಮ ವಿಷಯವನ್ನು ಬೆಂಬಲಿಸಿ
೪. ಮಾಹಿತಿಯನ್ನು ಪ್ರವೇಶಿಸಲು ಬಳಕೆದಾರ ಸ್ನೇಹಿ ಇಂಟರ್ಫೇಸ್ ಅನ್ನು ಒದಗಿಸಿ
೫. ಸ್ಥಳೀಯ ಶಾಶ್ವತ ವಸ್ತುಗಳಿಗೆ ಲಿಂಕ್ ಪ್ರಾತಿನಿಧ್ಯವನ್ನು ಸಕ್ರಿಯಗೊಳಿಸಿ (ಹೈಪರ್ಟೆಕ್ಸ್ಟ)

೬. ಕ್ಲೈಂಟ್ ಸರ್ವರ್ ವಾಸ್ತುಶಿಲ್ಪವನ್ನು ಒದಗಿಸಿ
೭. ಸುಧಾರಿತ ಹುಡುಕಾಟ ಮತ್ತು ಇತರ ರಾಷ್ಟ್ರೀಯರೊಂದಿಗೆ ಮಾಹಿತಿ ಸಂಪರ್ಕವನ್ನು ಹಿಂಪಡೆಯಲು ಬೆಂಬಲ ನೀಡಿ ಮತ್ತು ಅಂತರರಾಷ್ಟ್ರೀಯ ಡಿಜಿಟಲ್ ಗ್ರಂಥಾಲಯ ವ್ಯವಸ್ಥೆ.

**ಡಿಜಿಟಲ್ ಗ್ರಂಥಾಲಯ ಸುಧಾರಣೆಗಳು**

ಡಿಜಿಟಲ್ ಗ್ರಂಥಾಲಯ ಸ್ಥಳದ ಮಿತಿಯಿಲ್ಲ ಆದರೆ ಪ್ರಪಂಚದಾದ್ಯಂತ ವಿತರಿಸಲಾಗುತ್ತದೆ ಮತ್ತು ಮಾಹಿತಿಯನ್ನು ಇಂಟರ್ನೆಟ್ನಲ್ಲಿ ಕಾಣಬಹುದು. ವಾಸ್ತವವಾಗಿ ಇದು ಮಲ್ಟಿಮೀಡಿಯಾ ವ್ಯವಸ್ಥೆಯ ನೆಟ್ ವರ್ಕ ಆಗಿದೆ ಇದು ಬೆರಳ ತುದಿಯ ಪ್ರವೇಶವನ್ನು ಒದಗಿಸುತ್ತದೆ.

೧. ಸ್ವಯಂಚಾಲಿತ ಮೂಲಕ ವಿಶ್ವಾದ್ಯಂತ ಗ್ರಂಥಾಲಯಗಳ ಹಿಡಿವಳಿಗಳಿಗೆ ವೇಗವಾಗಿ ಪ್ರವೇಶವನ್ನು ಒದಗಿಸಿ ಕ್ಯಾಟಲಾಗ್ಗಳು
೨. ಅಮೂಲ್ಯವಾದ ದಾಖಲೆ, ಗ್ರಂಥಾಲಯಗಳು, ದಾಖಲೆಗಳು ಮತ್ತು ಅಪರೂಪದ ಮತ್ತು ವಿಶೇಷ ಸಂಗ್ರಹವನ್ನು ಸಂರಕ್ಷಿಸಿ ವಸ್ತು ಸಂಗ್ರಹಾಲಯಗಳು
೩. ವಿದ್ವತ್ಪೂರ್ಣ ಲೇಖನಗಳು ಮತ್ತು ಪುಸ್ತಕದ ಭೌತಿಕ ಮತ್ತು ಡಿಜಿಟಲೀಕೃತ ಆವೃತ್ತಿಯನ್ನು ಕಂಡುಹಿಡಿಯಲು ಸಹಾಯ ಮಾಡಿ ಏಕ ಇಂಟರ್ಫೇಸ್ ಮೂಲಕ.
೪. ಹುಡುಕಾಟ ಆಪ್ಟಿಮೈಸೇಶನ್, ಅಂತರ್ಜಾಲದ ಏಕಕಾಲಿಕ ಹುಡುಕಾಟಗಳು ಸಾಧ್ಯವಾಗುತ್ತವೆ ವಾಣಿಜ್ಯ ಡೇಟಾಬೇಸ್ ಮತ್ತು ಗ್ರಂಥಾಲಯ ಸಂಗ್ರಹಗಳನ್ನು ಸಿದ್ಧಪಡಿಸುವುದು
೫. ಆನ್ಲೈನ್ ಕಲಿಕೆಯ ವಾತಾವರಣವನ್ನು ನೀಡುವುದು
೬. ಲೇಖಕರಿಂದ ಬಳಕೆದರರಿಗೆ ಸರಪಣಿಯನ್ನು ಚಿಕ್ಕದಾಗಿಸುವುದು
೭. ತಯಾರಿಕೆ/ಸಂರಕ್ಷಣೆ, ವೆಚ್ಚ, ಸ್ಥಳ ಮತ್ತು ಹೆಚ್ಚಿನ ಬಳಕೆದಾರರನ್ನು ಒಂದೇ ಮೂಲದಿಂದ ಉಳಿಸಿ ಬೇರೆ ಯಾವುದೇ ರೂಪಗಳನ್ನು ಸಂಗ್ರಹಿಸಿದ ವಸ್ತುಗಳಿಗೆ ಸಾಧ್ಯವಿಲ್ಲ.

**ಉಪಸಾಂಹಾರ**

ನಾವು ಡಿಜಿಟಲ್ ಗ್ರಂಥಾಲಯವನ್ನು ಅನಿಮಯವಾಗಿ ಅವಶ್ಯಕತೆಗನುವಾಗಿ ಸ್ವೀಕರಿಸಬೇಕು ಏಕೆಂದರೆ ಪ್ರಪಂಚದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ತಕ್ಕಂತೆ ಪ್ರತಿಯೊಬ್ಬರಿಗೂ ನಾವು ಮಾಹಿತಿಯನ್ನು ನೀಡಬೇಕಲಾಗಿದೆ ಮತ್ತು ಎಲ್ಲರನ್ನು ಸಂಕ್ಷರರನ್ನಾಗಿ ಮಾಡಬೇಕಾಗಿದೆ ಅತ್ಯಂತ ಕಡಿಮೆ ವೆಚ್ಚದಲ್ಲಿ ಹಾಗೂ ಸಮಯಲ್ಲಿ ನಾವು ಅದನ್ನ ಅಳವಡಿಕೊಂಡು ನಮ್ಮ ಭವಿಷ್ಯಕ್ಕಾಗಿ ಡಿಜಿಟಲ್ ಗ್ರಂಥಾಲಯವನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ಇದು ೨೧ನೇ ಶತಮಾನದ ಮಾಹಿತಿ ಕ್ರಾಂತೀಯ ಭಾಗವಗಿವೆ.

**ಉಲ್ಲೇಖಗಳು**


1. Patel AK and srivastava v. (2006) access to legal through internet; an experience of judges library ILA bulletin 42(3):27-3
2. Denial J.O. (2002) virtual library for Nigerien libraries vo136 no.2 p55
3. Black law dictionary (2006) $9^{th}$ edition west group publishing st. poul minn
4. http://en. Wikipedia. Org/wiki/digital library
5. http://liswiki.org/wiki/digital library
6. V. sreenivasulu (2000). The role of digital librarian in the management of digital information system (Dis). The electronic library. Vol.18.no.1
7. chowudhary and chowdhary s. introduction to digital libraries London facet pulsing: 2003
8. Bearman D. (2007) “digital libraries Annual review of information science and technology vol 41 pp-223-272.
9. https://www.researchgate.net
10. www.emerald.com
11. https://journals.tdl.org
12. https://digitalhumanities.org

13. https://www.clir.org
14. https://digital.library.ryerson.ca
15. https://www.degruyter.com
16. https://www.sciencedirect.com
17. https://ieeexplore.ieee.org
18. https://www.researchinformation.info
19. https://www.springer.com
20. https://www.tandfonline.com

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಕುವೆಂಪುರವರ ವೈಚಾರಿಕತೆಯಲ್ಲಿ ವಿಶ್ವಮಾನವ ಪ್ರಜ್ಞೆ

**ಲಕ್ಷ್ಮೀದೇವಿ ಎನ್**
**ಕನ್ನಡ ಸಹಾಯಕ ಪ್ರಾಧ್ಯಾಪಕಿ**
**ನಾಗಾರ್ಜುನ ಕಾಲೇಜ್‌ಆಫ್‌ಮ್ಯಾನೇಜ್ಮೆಂಟ್‌ಸ್ಟಡೀಸ್,**
**ಚಿಕ್ಕಬಳ್ಳಾಪುರ** ೫೬೨೧೦೧

ಕಾಲದ ಬದಲಾವಣೆಯೊಂದಿಗೆ ಮನುಷ್ಯನಿಂದ ಆಲೋಚನೆಗಳನ್ನು ಕೂಡ ಬದಲಾವಣೆಗಳು ಸೃಷ್ಟಿಸುತ್ತವೆ. ಪ್ರತಿಯೊಂದು ಆಲೋಚನೆಗಳು ಸಂಭವಿಸುವ ಹೊಸ ಪ್ರಭಾವಗಳು ಮನುಷ್ಯನ ಮೇಲೆ ತನ್ನ ಅಗಾಧ ಪ್ರಭಾವ ಬೀರುತ್ತವೆ. ಇದರ ನಡುವೆಯು ಮಾನವೀಯತೆಗೆ ಹಾಯಿಸುವ ವೈಚಾರಿಕ ಪ್ರಜ್ಞೆಯನ್ನ ಉಳಿಸಿಕೊಳ್ಳಲು ಕತ್ತಲನ್ನ ಬೆಳಕಿನತ್ತ ಕೊಂಡೊಯ್ಯುವ ಸಾಧಕರು ಸದಾ ಹುಟ್ಟುತ್ತಲೆ ಬೆಳಗುತ್ತಲೆ ಇರುತ್ತಾರೆ. ಇಂತಹ ಮಹಾನ್‌ಪರಂಪರೆ ಬುದ್ಧನಿಂದ ಆರಂಭವಾಗಿ ೨೦ನೇ ಶತಮಾನದ ಕುವೆಂಪುವರೆಗೂ ಸದಾ ಪ್ರಜ್ವಲಿಸುತ್ತಲೇ ಇದೆ.

**ಹುಟ್ಟುವ ಪ್ರತಿ ಮಗುವು ವಿಶ್ವಮಾನವನೇ!**
**ಆ ನಂತರ ಆ ಮಗುವನ್ನು ಜಾತಿ, ಮತದ**
**ಕಟ್ಟುಪಾಡುಗಳಿಂದ ಬಂಧಿಸಲಾಗುತ್ತದೆ.**
**ಹಾಗಾಗಬಾರದು. ಯಾವುದೇ ವ್ಯಕ್ತಿ**
**ಜಾತಿಯಿಂದ ಮುಖ್ಯನಾಗಬಾರದು. ನೈತಿಕ**
**ವ್ಯಕ್ತಿತ್ವದಿಂದ ಮುಖ್ಯನಾಗಬೇಕು.**

"ವೈಚಾರಿಕತೆ ಎಂಬುದು ಬದುಕನ್ನು ಕುರಿತ ಗಾಢವಾದ ಪ್ರೀತಿ ಹಾಗೂ ಚಿಂತನೆಗಳಿಂದ ನಿಷ್ಪನ್ನವಾಗುವ ಒಂದು ದೃಷ್ಟಿಕೋನ. ಒಬ್ಬ ಬರಹಗಾರ ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಮಾನವೀಯ ಕಾಳಜಿಗಳ ಮೂಲಕ ರೂಪಿಸಿಕೊಳ್ಳುವ ಒಂದು ವ್ಯಕ್ತಿಯ ವಿಶಿಷ್ಟವಾದ ಚಿಂತನಪರ ಬುದ್ಧಿ ಸ್ಥಿತಿಯನ್ನು ಆತನ ವೈಚಾರಿಕತೆ ಎನ್ನಬಹುದು. ಅದು ಕೇವಲ ಪುಸ್ತಕ ಪಾಂಡಿತ್ಯದಿಂದ ಬಂದುದಲ್ಲ. ಅದು ಎಲ್ಲವನ್ನೂ ಪರೀಕ್ಷಿಸುತ್ತ, ಪ್ರಶ್ನಿಸುತ್ತ ಸತ್ಯಾನ್ವೇಷಣೆಗೆ ತೊಡಗುವ ವೈಜ್ಞಾನಿಕ ದೃಷ್ಟಿಯನ್ನು ತನ್ನ ಚಿಂತನೆಯ ನೆಲೆಗಟ್ಟನ್ನಾಗಿ ಮಾಡಿಕೊಂಡ ಒಂದು ಮನೋಧರ್ಮ" ಎಂಬುದಾಗಿ ಜಿ.ಎಸ್. ಶಿವರುದ್ರಪ್ಪನವರು ಅಭಿಪ್ರಾಯ ಪಡುತ್ತಾರೆ.

ಇಂದಿನ ತರುಣ ಪೀಳಿಗೆಯಲ್ಲಿ ಕುವೆಂಪುರವರ ವೈಚಾರಿಕತೆಯ ಅರಿವು ಮೂಡಿಸುವುದು ಅಗತ್ಯವಾಗಿದೆ. ಬಂಗಾಳದಲ್ಲಿ ಮೌಢ್ಯ ವಿರೋಧಿ ಕಹಳೆಯನ್ನು ಸ್ವಾಮಿ ವಿವೇಕಾನಂದರು ಊದಿದರು. ಹೀಗೆಯೇ ಕನ್ನಡದಲ್ಲಿ ಮೌಢ್ಯ ವಿರೋಧಿ ಕಹಳೆ ಊದಿದವರು ಕುವೆಂಪು. ಮೌಢ್ಯ ವಿರೋಧಿ ನೆಲೆಗಟ್ಟಿನಲ್ಲಿ ವಿಜ್ಞಾನ ಹಾಗೂ ಸಮಾಜವನ್ನು ಕುವೆಂಪು ಸಜ್ಜುಗೊಳಿಸಿದರು. ಕನ್ನಡದಲ್ಲಿ ವೈಚಾರಿಕ ಆಂದೋಲನ ಶುರುವಾಗಿದ್ದೇ ಕುವೆಂಪು ಅವರ ಜಲಗಾರ ನಾಟಕದ ಮೂಲಕ. ಜಗತ್ತಿನಲ್ಲಿ ಹೆಚ್ಚು ಅಧ್ಯಯನಕ್ಕೆ ಒಳಗಾದವನು ಷೇಕ್ಸ್ ಪಿಯರ್. ಹೀಗೆಯೇ ಕನ್ನಡದಲ್ಲಿ ಅತಿ ಹೆಚ್ಚು ಅಧ್ಯಯನಕ್ಕೆ ಒಳಗಾದವರು ಬಸವೇಶ್ವರ ಮತ್ತು ಕುವೆಂಪು' ಬಸವೇಶ್ವರ ಕುರಿತು ೧೦೭ ಕ್ಕೂ ಹೆಚ್ಚು ಪಿ.ಎಚ್.ಡಿ. ಗ್ರಂಥಗಳಾದರೆ ಕುವೆಂಪು ಕುರಿತು ೨೭ ಪಿ.ಎಚ್.ಡಿ ಗ್ರಂಥಗಳಾಗಿವೆ. ಪ್ರಗತಿಪರ ಧೋರಣೆಯಿಂದಾಗಿ ಬಸವೇಶ್ವರ ಮತ್ತು ಕುವೆಂಪು ಇಬ್ಬರೂ ಮುಖ್ಯರಾಗುತ್ತಾರೆ.

ಕುವೆಂಪು ಅವರು ಮೈಸೂರು ವಿ.ವಿ.ಯ ಕುಲಪತಿಯಾಗಿದ್ದಾಗ ಕನ್ನಡ ಕಟ್ಟುವ ಕೆಲಸದಿಂದ ಹಿಂದೆ ಸರಿಯಲಿಲ್ಲ. ಕನ್ನಡ ಮಂತ್ರ ಕಣಾ, ಕನ್ನಡ ಶಕ್ತಿ ಕಣಾ, ಎಂದು ಕವನ ಬರೆದುದಕ್ಕೆ ಆಗ ಸಚಿವರಾಗಿದ್ದ ಕೆ.ಸಿ.ರೆಡ್ಡಿ

ಅವರು ಕುವೆಂಪು ಅವರಿಗೆ ನೋಟಿಸ್ ಕೊಟ್ಟರು.ಅದಕ್ಕೆ ಉತ್ತರವಾಗಿ ಕುವೆಂಪು ಪತ್ರ ಬರೆದರು. ಇದಕ್ಕೆ ಇನ್ನೊಂದು ನೋಟಿಸ್ ಕೊಡುವೆ ಎಂದು ಸಚಿವ ರೆಡ್ಡಿ ಅವರು ಮುಂದಾದಾಗ ಸುಪ್ರೀಂಕೋರ್ಟ್ ನ್ಯಾಯಾಧೀಶರೊಬ್ಬರು ಅವರನ್ನು ಸುಮ್ಮನಿರಿಸಿದರು. ಈ ವಿಚಾರವು ಕುವೆಂಪು ಅವರಲ್ಲಿದ್ದ ಕನ್ನಡ ಪ್ರಜ್ಞೆ ಹಾಗೂ ಧೈರ್ಯವನ್ನು ಪ್ರತಿನಿಧಿಸುತ್ತದೆ.

ಕುವೆಂಪು ಗುಡಿ, ಚರ್ಚ್, ಮಸೀದಿಗಳ ಬಿಟ್ಟು ಹೊರಬನ್ನಿ ಎಂದರು. ಆದರೆ ಅವರು ವಾರಕ್ಕೊಮ್ಮೆ ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ಹೋಗಿ ಅಲ್ಲಿದ್ದ ರಾಮಕೃಷ್ಣ ಪರಮಹಂಸರ ಭಾವಚಿತ್ರಕ್ಕೆ ದೀರ್ಘದಂಡ ನಮಸ್ಕಾರ ಹಾಕುತ್ತಿದ್ದರು. ಈ ಕುರಿತು ಕುವೆಂಪುರವರನ್ನು ಕೇಳಿದಾಗ, "ಪರಮಹಂಸರು ಸರ್ವಧರ್ಮ ಸಮನ್ವಯಾಚಾರ್ಯರು" ಎಂದಿದ್ದರು. ಕುವೆಂಪುರವರನ್ನು ಬದುಕಿನಾದ್ಯಂತ ಕಾಡಿದ ಬಹುಮುಖ್ಯ ಭಾಗಗಳೆಂದರೆ ಮೊದಲಿನದು ಕನ್ನಡ ಭಾಷೆ, ಎರಡನೆಯದು ಹಿಂದೂ ಧರ್ಮದ ಭಯಾನಕ ಸ್ವರೂಪಗಳಾದ ಜಾತಿಪದ್ಧತಿ ಮತ್ತು ಮಠಗಳ ಬಗ್ಗೆ ತರತಮ ಮನಸ್ಥಿತಿ ಕವಿಯು ತಮ್ಮ ಕವಿತೆಗಳಲ್ಲಿ ತಾಯ್ನುಡಿಯ ಉನ್ನತೀಕರಣದ ರಮ್ಯಸೃಷ್ಟಿಯನ್ನೇ ರೂಪಿಸಿದ್ದಾರೆ.

ಕುವೆಂಪು ಅವರದು ಮೇರು ಸದೃಶ ವ್ಯಕ್ತಿತ್ವ ಒಂದು ಯುಗವನ್ನು ನಿರ್ಮಿಸಬಲ್ಲ ಅಸದೃಶ, ಅಪರೂಪದ ಪ್ರತಿಭೆ. ಆಧುನಿಕ ಕನ್ನಡದ ಮಹತ್ವದ ಕವಿ ನಾಟಕಕಾರ, ಕಾದಂಬರಿಕಾರ, ಕಾವ್ಯಮೀಮಾಂಸಕ ಹೀಗೆ ಹಲವು ಪ್ರಕಾರಗಳಲ್ಲಿ ಶ್ರೇಷ್ಠವಾದುದನ್ನುಕೊಟ್ಟ ಇಪ್ಪತ್ತನೆಯ ಶತಮಾನದ ಬಹುದೊಡ್ಡ ವಿಚಾರವಾದಿ. ಮೌಢ್ಯ ಸಂಪ್ರದಾಯ, ಜಾತೀಯತೆಯನ್ನು ಅವರು ಉಗ್ರವಾಗಿ ವಿರೋಧಿಸುತ್ತಿದ್ದರು. ಹಿಂದೂ ಸಂಸ್ಕೃತಿಯನ್ನು ಅವರು ಕುರುಡಾಗಿ ಅನುಸರಿಸಲಿಲ್ಲ. ಆರಾಧಿಸಲೂ ಇಲ್ಲ ಮತ್ತು ಸಂಪೂರ್ಣವಾಗಿ ತಿರಸ್ಕರಿಸಲೂ ಇಲ್ಲ. ಅವರ ನಾಟಕ, ಕಾವ್ಯ, ವೈಚಾರಿಕ ಬರಹಗಳು ಭಾಷಣಗಳಲ್ಲಿ ಹಿಂದೂ ಸಂಸ್ಕೃತಿಗೆ ಮುಖಾಮುಖಿಯಾದುದನ್ನು ಕಾಣುತ್ತೇವೆ. ಮುದ್ರಣನಿಂದ ಹಿಡಿದು ಆ ಕಾಲದ ಯಾವ ಲೇಖಕರ ಬರಹಗಳಲ್ಲಿಯೂ ಕುವೆಂಪು ಸಾಹಿತ್ಯದಲ್ಲಿ ಕಾಣುವಷ್ಟು ಆಧುನಿಕ ವಿಚಾರಗಳು, ವೈಚಾರಿಕ, ವೈಜ್ಞಾನಿಕ ಸಂಗತಿಗಳು ಕಂಡು ಬರುವುದಿಲ್ಲ.

ಕುವೆಂಪು ಅವರ ವೈಚಾರಿಕತೆಯ ಪ್ರಖರತೆಗೆ ಅಂದಿನ ಪುರೋಹಿತ ಶಾಹಿಯನ್ನು ವಿರೋಧಿಸಿದ್ದು ಪ್ರತಿಭಟನೆ ನಡೆಸಿದ್ದು, ಸಾಹಿತ್ಯ ಚರಿತ್ರೆಯ ಒಂದು ಭಾಗವಾಗಿದೆ. ಆದರೆ ಕುವೆಂಪು ಅವರದ್ದು ನಿಜಕ್ಕೂ ಏಕಾಂಗಿ ಹೋರಾಟವಾಗಿತ್ತು. ಜಾತಿ, ಮತ, ಮೌಢ್ಯ, ಪುರೋಹಿತಶಾಹಿಯ ವಿರುದ್ಧ ತಾವು ತಲೆ ಎತ್ತಿ ನಿಂತದ್ದು ಮಾತ್ರವಲ್ಲದೆ ಶೂದ್ರುವರ್ಗವನ್ನು ತಲೆಎತ್ತಿ ನಿಲ್ಲುವಂತೆ ತಮ್ಮ ಭಾಷಣ ಬರಹಗಳ ಮೂಲಕ ಪ್ರೇರಪಿಸಿದರು.

"**ಪ್ರತಿಯೊಂದು ಮಗುವೂ ಹುಟ್ಟುತ್ತಲೆ ವಿಶ್ವಮಾನವ ಬೆಳೆಯುತ್ತಾ ನಾವು ಅದನ್ನು ಅಲ್ಪ ಮಾನವನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು ಮಿಶ್ವಮಾನವನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು**".

ಪ್ರಸ್ತುತ ಭಾರತಕ್ಕೆ ಅತ್ಯಂತ ಅಪಾಯಕಾರಿಯಾಗಿ ಬೆಳೆಯುತ್ತಿರುವ ಮತೀಯ ಸಂಘರ್ಷದ ಸಂದರ್ಭದಲ್ಲಿ, ಕುವೆಂಪು ಅವರ ಚಿಂತನೆಗಳು ಬರಹಗಳು ಪ್ರಭುತ್ವ ಹಾಗೂ ಪುರೋಹಿತಶಾಹಿ ವಿರುದ್ಧ ಇರುವ ಅವರ ಗಟ್ಟಿ ಆಕ್ರೋಶ ನಮ್ಮಲ್ಲಿ ವಿಶ್ವಮಾನವತೆಯ ಸಸಿ ನೆಡಬಲ್ಲವು. ನಾವೂ ನಮ್ಮನ್ನು ಎಷ್ಟು ಕಲುಷಿತಗೊಳಿಸಿ ಕೊಂಡಿದ್ದೇವೆ ಎನ್ನುವ ಸತ್ಯವನ್ನು ಅರಿಯಬೇಕಾದರೆ, "**ನಾನು ಯಾವ ಮತದವನಲ್ಲ ಎಲ್ಲ ಮತದವನು**" **ಎಂದು ಘೋಷಿಸಿಕೊಂಡ ಕುವೆಂಪುರವರು** " **ನೂರು ಮತದ ಹೊಟ್ಟ ತೂರಿ, ಎಲ್ಲ ತತ್ವದೆಲ್ಲೆ ಮೀರಿ, ನಿರ್ದಿಗಂತವಾಗಿ ಏರಿ, ಓ ನನ್ನ ಚೇತನ ಆಗು ನೀ ಅನಿಕೇತನ**"। ಮತವನ್ನು ತಿರಸ್ಕರಿಸಿ ಮನುಜಮತಕ್ಕೆ, ವಿಶ್ವಪಥಕ್ಕೆ ಬರಬೇಕೆಂದು ಯುವಕರಿಗೆ ಕರೆ ನೀಡಿದ್ದಾರೆ.

**ಯಾವ ಕಾಲದ ಶಾಸ್ತ್ರವೇನು ಹೇಳಿದರೇನು**?
**ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು**?

ಕುವೆಂಪು ತಮ್ಮ ಭಾಷಣಗಳಲ್ಲಿ ಪುರೋಹಿತಶಾಹಿಯನ್ನು ಅತ್ಯುಗ್ರವಾಗಿ ಖಂಡಿಸಿದ್ದಾರೆ. ಪುರೋಹಿತಶಾಹಿ ಎಂದರೆ ಬರೀ ಬ್ರಾಹ್ಮಣ ವರ್ಗವಲ್ಲ ಹಿಂದೂಗಳಲ್ಲಿ ಬ್ರಾಹ್ಮಣವರ್ಗವಾಗುತ್ತದೆ. ಕ್ರೈಸ್ತರಲ್ಲೂ ಪುರೋಹಿತಶಾಹಿಇದೆ. ಮುಸ್ಲಿಮರಲ್ಲೂ ಪುರೋಹಿತಶಾಹಿ ಇದೆ. ಬೌದ್ಧರಲ್ಲೂ ಪುರೋಹಿತಶಾಹಿ ಇದೆ. ಎಲ್ಲಾ ಮತಗಳಲ್ಲೂ ಪುರೋಹಿತಶಾಹಿಇದ್ದೇಇದೆ. ಪುರೋಹಿತಶಾಹಿಯಿಂದ ಶ್ರೀಸಾಮಾನ್ಯರು ಅನೇಕ ರೀತಿಯ ಶೋಷಣೆಗೆ ಒಳಗಾಗಿದ್ದಾರೆ ಜಗತ್ತು ಇವರ ಹಿಡಿತಕ್ಕೆ ಸಿಲುಕಿ ನಲುಗಿ ಹೋಗಿದೆ. ರಷ್ಯಾದವರು, ಚೀನಾದವರು, ಇದರಿಂದ ಸ್ವಲ್ಪ

ಬಿಡಿಸಿಕೊಂಡಿದ್ದಾರೆ. ಇಂಗ್ಲೆಂಡ್, ಅಮೇರಿಕಾದಲ್ಲಿ ಮಹಾಲೇಖಕರು, ಚಿಂತಕರು, ನಾಸ್ತಿಕವಾದಿಗಳು, ಬರ್ಟ್ರಂಡ್‌ರಸಲ್, ಇಂಗರ್‌ಸಾಲ್‌ಮುಂತಾದವರು ಪುರೋಹಿತಶಾಹಿಯ ವಿರುದ್ಧ ಹೋರಾಡಿದ್ದಾರೆ. ಅದಕ್ಕಾಗೆ ಸಾಹಿತ್ಯ ಸೃಷ್ಟಿಸಿದ್ದಾರೆ.

**ಆ ಮತದ ಈ ಮತದ ಹಳೆಮತದ ಸಹವಾಸ**
**ಸಾಕಿನ್ನು ಸೇರಿರೈ ಮನುಜ ಮತಕೆ**
**ಓ ಬನ್ನಿ ಸಹೋದರರೆ ವಿಶ್ವ ಪಥಕೆ** ಎಂಬುದು ಅವರ ಅಂತಿಮ ನಿಲುವು, ಸಂದೇಶ ಕೂಡ ಹೌದು. ಗುಡಿ, ಚರ್ಚು, ಮಸೀದಿಗಳನ್ನು ನಿರಾಕರಿಸುವ ಗಟ್ಟಿದನಿ ಕುವೆಂಪು ಅವರದು, ಜಲಗಾರ ನಾಟಕದಲ್ಲಿ "ಗುಡಿಗಳಿವು ಪಾಪಿಗಳ ಭೋಗಿಗಳ ಗೂಡುಗಳು" ಎಂಬ ಮಾತು ಬರುತ್ತದೆ. "ನೂರು ದೇವರನ್ನೆಲ್ಲ ನೂಕಾಚೆ ದೂರ", "ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ" ಎಂಬ ಸಾಲುಗಳನ್ನು ಕುವೆಂಪು ಬರೆಯುವ ಮೂಲಕ ದೇವರು ದೇವಸ್ಥಾನಗಳ ಬಗ್ಗೆ ತಮಗಿರುವ ಸಿಟ್ಟನ್ನು ವ್ಯಕ್ತಪಡಿಸಿದ್ದಾರೆ.

ಕುವೆಂಪು ಅವರ ಚಿಂತನೆಯೆಲ್ಲ ಸರ್ವೋದಯ, ಸಮಾನತೆ, ಪೂರ್ಣದೃಷ್ಟಿ ಎಂಬ ಮೂರು ಪದಗಳಲ್ಲಿ ಸಂಗಮಗೊಂಡಿದೆ. ನನ್ನ ಜೀವನ ದೃಷ್ಟಿ ಒಂದು ರೀತಿಯಲ್ಲಿ ಸಮಾನತಾವಾದಿಯ ದೃಷ್ಟಿ, ನೀವು ಸಮಾಜವಾದಿ, ಸಮತಾವಾದಿ ಎಂದೆಲ್ಲ ವ್ಯಾಖ್ಯಾನ ಮಾಡಬಹುದು. ಆದರೆ ನಾನು ಸಮಾನತಾವಾದಿ ಎಂದು ಕುವೆಂಪು ಹೇಳಿಕೊಂಡಿದ್ದಾರೆ. (ಸಮಗ್ರ ಗದ್ಯ ಸಂಪುಟ ೨ ಪುಟ೪೮೯) " ಹಿಂದಾಯಿತು ಓರ್ರೋರ್ವರ ಗರ್ವದ ಕಾಲ ಇದು ಸರ್ವರ ಕಾಲ" ಎಂದು ಹೇಳಿದ್ದಾರೆ. "ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು" ಇದು ಅವರ ಬದುಕಿನ ಸಿದ್ಧಾಂತ ಕೂಡ ಆಗಿದೆ. ಇಂಥ ಸರ್ವೋದಯಕ್ಕೆ, ಸಮಾನತೆಗೆ ವಿರೋಧಿಯಾದುದು ಜಾತಿ ಮತ, ಚಾತುರ್ವರ್ಣ ವ್ಯವಸ್ಥೆ, ಜಾತಿ ಮತ ಬೆಂಬಲಿಸುವ ಶಾಸ್ತ್ರಗ್ರಂಥಗಳನ್ನು ವಿಮರ್ಶಿಸುವ, ಧಿಕ್ಕರಿಸುವ ಜನತಾಪ್ರಜ್ಞೆಯೊಂದು ಜಾಗ್ರತಗೊಳ್ಳಬೇಕು ಎಂದು ಕುವೆಂಪು ಮತ್ತೆ ಮತ್ತೆ ಹೇಳುತ್ತಾರೆ.

ಸಂಸ್ಕೃತಿಕ್ರಾಂತಿಗೆ ಕಹಳೆನಾಂದಿ ಎಂಬ ಉಪನ್ಯಾಸದಲ್ಲಿ ಭಗವದ್ಗೀತೆಯಲ್ಲಿ ಬರುವ "ಚಾತುರ್ವರ್ಣಂ ಮಯಾಸೃಷ್ಟಂ" ಎಂಬ ಉಕ್ತಿಯನ್ನು ಕುರಿತು, ಒಂದು ವೇಳೆ ಜಾತಿ ವರ್ಣ ವರ್ಗಗಳನ್ನು ಆ ದೇವರೇ ಸೃಷ್ಟಿ ಮಾಡಿದ್ದರೂ ಅವನ್ನೆಲ್ಲ ಸರ್ವೋದಯಕ್ಕಾಗಿ ನಾವು ಧ್ವಂಸ ಮಾಡಬೇಕಾಗುತ್ತದೆ. ಕಾಲರಾ, ಪ್ಲೇಗು ಮಲೇರಿಯಾಗಳನ್ನು ದೇವರೇ ಸೃಷ್ಟಿ ಮಾಡಿದ್ದು ಅಂತ ಹೇಳಿ ನಾವು ಸುಮ್ಮನಿರುವುದಕ್ಕೆ ಆದೀತೆ? ಅನಾರೋಗ್ಯಕರವೂ, ಮೃತ್ಯುಕರವೂ ಆಗಿರುವ ಅವನ್ನೆಲ್ಲ ನಾಶಪಡಿಸಿ ನಮ್ಮ ಆರೋಗ್ಯವನ್ನು ನಾವು ರಕ್ಷಿಸಿಕೊಳ್ಳುವಂತೆ ವರ್ಣ, ಜಾತಿ, ವರ್ಗ ಮೊದಲಾದ ದುರ್ಭಾವನೆಗಳನ್ನೆಲ್ಲ ಧ್ವಂಸ ಮಾಡಿ ಸಮಾಜದ ಕ್ಷೇಮವನ್ನು ಸಾಧಿಸಬೇಕು ಎಂದಿದ್ದಾರೆ.(ಸಮಗ್ರ ಗದ್ಯ ಸಂಪುಟ ೨ ಪುಟ ೪೮೫) ಇದೇ ರೀತಿ ಜನತಾ ಪ್ರಜ್ಞೆ ಮತ್ತು ವೈಚಾರಿಕತೆ ಎಂಬ ಭಾಷಣದಲ್ಲಿ ಹಳೆಯ ಶಾಸ್ತ್ರ, ಬೂಸಲುಧರ್ಮ, ಕೇಡಿ ಜಗದ್ಗುರು, ಸ್ವಾರ್ಥಶೀಲ ಆಚಾರ್ಯ ಇವರನ್ನೆಲ್ಲ ಮುಲಾಜಿಲ್ಲದೆ ಧಿಕ್ಕರಿಸುವಂತಾಗಬೇಕು ಎಂದಿದ್ದಾರೆ.

ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?
.....ನೀರಡಿಸಿ ಬಂದ ಸೋದರರಗೆ ನೀರನು ಕೊಡಲು
ಮನುಧರ್ಮಶಾಸ್ತ್ರವೆನಗೊರೆಯ ಬೇಕೇನು?
ನೊಂದವರ ಕಂಬನಿಯೊರೆಸಿ ಸಂತೈಸುವೊಡೆ
ಶಾಸ್ತ್ರ ಪ್ರಮಾಣವದಕಿರಲೆಬೇಕೇನು:
ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ
ದಡದಲ್ಲಿ ಮೀಯುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೊಟ್ಟು ಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರ ಸಮ್ಮತವದೇನು?

.....ಅಂತು ಮನು ಹೇಳಿರಲಾನಯ್ಯಯ್ಯೊ! ಎಂದಿದ್ದಾರೆ ಕುವೆಂಪು.

ಪ್ರಾಚೀನ ಕಾಲಕ್ಕೆ ಅತಿ ಪಂಡಿತರೆನಿಸಿಕೊಂಡವರು ಸೃಷ್ಟಿಸಿದ ಜಾತಿ ಮತಗಳ ಜತೆಗೆ ಹತ್ತಾರು ನೂರಾರು ದೇವತೆಗಳನ್ನು ಸೃಷ್ಟಿಸಿದ್ದಾರೆ. ಇವೆಲ್ಲವೂ ಪುತೋಹಿತಶಾಹಿಯ ಲಾಭಕ್ಕೆ ತಕ್ಕಂತೆ ಸೃಷ್ಟಿಯಾಗಿವೆ ಇದನ್ನೇ ಅಲ್ಲಮಪ್ರಭು ಭಕ್ತಿಯೆಂಬುದು ತೋರಿ ಎಂಬ ಲಾಭ ಎಂದಿರುತ್ತಾನೆ. ಭಾರತದಲ್ಲಿ ಸೃಷ್ಟಿಯಾದ ದೈವಗಳ ರೂಪ ಒಂದೆರಡಲ್ಲ, ಅವು ಮಣ್ಣು, ಕಲ್ಲು, ಮರ, ಲೋಹ ಇತ್ಯಾದಿಗಳೆಲ್ಲದರಿಂದ ಸೃಷ್ಟಿಯಾಗಿರುತ್ತದೆ. ಇದು ಕೇವಲ ಭಾರತದಲ್ಲೇ ಅಲ್ಲದೆ ಜಗತ್ತಿನಾದ್ಯಂತ ನಡೆದಾಡುವ ವಿದ್ಯಮಾನ. ಭಾರತದಲ್ಲಿ ನೂರಾರು ದೈವಗಳನ್ನಿಟ್ಟುಕೊಂಡು ವ್ಯಾಪಾರ ನಡೆದಿದ್ದರೆ, ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಒಂದೇ ದೈವವನ್ನಿಟ್ಟುಕೊಂಡು ಅಜ್ಞಾನ, ಅಂಧಶ್ರದ್ಧೆಯ ಪ್ರಸಾರ ನಡೆದಿದೆ.

ಕುವೆಂಪುರ ಅವರ ವೈಚಾರಿಕತೆಯಲ್ಲಿ ಮುಖ್ಯವಾಗಿ ಕಂಡುಬರುವ ಸಂಗತಿಗಳು

-  ಪರಂಪರೆಯನ್ನು ತಿರಸ್ಕರಿಸಬಾರದು, ಪರಿಷ್ಕರಿಸಬೇಕು
-  ವರ್ಣ ವ್ಯವಸ್ಥೆ, ಜಾತಿ ವ್ಯವಸ್ಥೆಯ ಉಗ್ರ ಖಂಡನೆ
-  ಪರೋಹಿತಶಾಹಿಯ ತಿರಸ್ಕಾರ
-  ದೇಗುಲಗಳ ನಿರಾಕರಣೆ
-  ಸಮಾನತೆಯ ಪರವಾದ ನಿಲುವು
-  ಯುವಜನಾಂಗ ಮತ್ತು ಶ್ರೀಸಾಮಾನ್ಯರ ಬಗೆಗಿನ ಕಾಳಜಿ

ಕುವೆಂಪುರವರ ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿಚಾರಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ, ಈ ಮೂರು ಲೀಖನಗಳು ವೈಚಾರಿಕತೆಯ ಪ್ರಾತಿನಿಧಿಕ ಲೇಖನಗಳಾಗಿವೆ. ಮಾನವನ ಮತಿಯನ್ನು ನಿಸ್ತೇಜವಾಗಿಸಿರುವ ಬಹುದೊಡ್ಡ ಬಂಧನ ಮತವಾಗಿದೆ. ನಾಡಿನ ಏಳ್ಗೆಯ ಕುತ್ತಿಗೆಗೆ ಮತ ಉರುಳಾಗಿದೆ. ಒಬ್ಬರನ್ನೊಬ್ಬರು ಮುಟ್ಟದಿರುವುದು, ನೋಡದಿರುವುದು, ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು, ನಾಮ ಹಾಕಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳುವುದು, ಕೆಲವರನ್ನು ಸಾರ್ವಜನಿಕವಾದ ಬಾವಿ ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು, ಕೆಲವರನ್ನು ದೇವಸ್ಥಾನದೊಳಕ್ಕೆ ಸೇರಿಸದಿರುವುದು, ಇತ್ಯಾದಿ ಕೆಲಸಕ್ಕೂಬಾರದ, ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ ವ್ಯವಹಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ. ಸರ್ವಮತಗಳಿಗಿಂತಲೂ ಶುದ್ಧ ಹೃದಯದ ಮತ್ತು ಸನ್ಮತಿಯ ಮತವೇ ಮಹೋನ್ನತವಾದುದು. ಆ ಗುಗು, ಈ ಆಚಾರ್ಯ ಆ ಧರ್ಮಶಾಸ್ತ್ರ, ಈ ಮನುಸ್ಮೃತಿ ಮೊದಲಾದುವು ಏನೇ ಹೇಳಲಿ ಎಲ್ಲವನ್ನು ವಿಮರ್ಶಿಸುವ ಪರೀಕ್ಷಿಸುವ ಒರೆಗಲ್ಲಿಗೆ ಹಚ್ಚುವ ಹಕ್ಕು ನಮ್ಮದಾಗಿರುತ್ತದೆ.

ಒಬ್ಬ ಕೃತ ವಿದ್ಯಾರಾದ ಗೌರವಸ್ಥರು ದೇವಾಲಯಕ್ಕೆ ಹೋಗಿ ಬಂದುದಕ್ಕೆ ಪ್ರತಿಯಾಗಿ ಸಂಪ್ರೋಕ್ಷಣೆಗೆ ಜುಲುಮಾನೆ ಕೊಡಬೇಕಾಗಿ ಬಂದಿತಂತೆ, ಕಾರಣ ಅವರು ಅಸ್ಪೃಶ್ಯರ ಜಾತಿಗೆ ಸೇರಿದವರಂತೆ, ಅವರಿಗಿಂತಲೂ ಮೂಢರೂ, ಕೊಳಕರೂ, ದುಷ್ಟರೂ, ರೋಗಿಗಳೂ ದುರಾಚಾರಿಗಳೂ ಆದ ಸ್ಪೃಶ್ಯರೆಂರೆನಿಸಿಕೋಂಡವರು ಹಿಡಿಯೊಳಗೆ ಹೋದರೆ ಮೈಲಿಗೆಯಾಗುವುದಿಲ್ಲವಂತೆ! ಸ್ಪೃಶ್ಯ ಯುವಕರು ತಮ್ಮ ಸಹೋದರರನಿಗಾದ ಅವಮಾನ ತಮ್ಮದೆಂದು ಭಾವಿಸಿ ದೇವಾಲಯಗಳಿಗೆ ಹೋಗುವುದನ್ನೆ ಬಿಟ್ಟು, ಹೊರಗೆ ಪ್ರಕೃತಿ ಸೌಂದರ್ಯದಲ್ಲಿ ಉದಯಿಸುವ ಸೂರ್ಯನಲ್ಲಿ, ಸಾಹಿತ್ಯದಲ್ಲಿ, ದರಿದ್ರನಾರಾಯಣನ ಸೇವೆಯಲ್ಲಿ ತಮ್ಮ ದೇವಾಲಯಗಳನ್ನು ಕಟ್ಟಿಕೊಂಡು ಮತದ ಅನೌದಾರ್ಯವನ್ನು ಮುರಿಯಬೇಕು. ಅಸ್ಪೃಶ್ಯ ಯುವಕರಾದವರಿಗೆ ನನ್ನದೊಂದು ಬಿನ್ನಹ, ನೀವು ಅವಮಾನಿಸಿಕೊಂಟು ದೇವಾಲಯಕ್ಕೆ ಹೋಗದಿದ್ದರೆ ಏನಾಗುತ್ತದೆ? ಹುಡಿಯ ಕಲ್ಲಿನಲ್ಲಿ ದೇವರಿದ್ದಾನೆ ಎಂಬ ಭ್ರಾಂತಿ ನಿಮಗೇಕೆ? ಗುಡಿಯೊಳಗೆ ಹೋಗಿ ಮತದ ಮೌಢ್ಯಕ್ಕೂ ಪುರೋಹಿತರ ಸುಲಿಗೆಗೂ ಒಳಗಾಗುವುದಕ್ಕಿಂತ ಕೂರವಾಗಿದ್ದುಕೊಂಡು ಎದರೆಯ ದೇಗುಲದಲ್ಲಿಯೆ ಈಶ್ವರನನ್ನು ಇನ್ನಷ್ಟು ಅತಿಶಯವಾದ ಭಾವಭಕ್ತಿಯಿಂದ ಪೂಜಿಸಬಾರದೆ? ಎಂದು ಕುವೆಂಪು ದೇವಾಲಯದ ಪ್ರವೇಶವನ್ನು ಕುರಿತು ಹೇಳಿದ್ದಾರೆ.

"ಇಲ್ಲಿ ಯಾರು ಮುಖ್ಯರಲ್ಲ, ಯಾರು ಅಮುಖ್ಯರಲ್ಲ" ಎನ್ನುವ ಮೂಲಕ ಕುವೆಂಪುರವರು ಎಲ್ಲೆಡೆಯಲ್ಲೂ ಶ್ರೇಷ್ಠತೆಯನ್ನು ಸಾಬೀತು ಪಡಿಸಿದವರು. ಕುವೆಂಪುಗೆ ಕುವೆಂಪೆ ಸರಿಸಾಟಿ, ಅವರ ಸಾಹಿತ್ಯದಲ್ಲಿ ಕಾಣಬರುವ ವೈಚಾರಿಕತೆ, ಮಾನವೀಯತೆ, ಸಾಮಾಜಿಕ ಪ್ರಜ್ಞೆ, ವಿಶ್ವಮಾನವ ಸಂದೇಶಗಳು ಸರ್ವಕಾಲೀಕ ಬರಹಗಳು.

**ಪರಾಮರ್ಶನ ಗ್ರಂಥಗಳು**

ಕುವೆಂಪು ಸಮಗ್ರ ಗದ್ಯ-೧ ಮತ್ತು ೨
ಕುವೆಂಪು ಸಾಹಿತ್ಯ ಸಂಧಾನ-ಡಾ. ಸಿ.ಪಿ.ಕೃಷ್ಣಕುಮಾರ್
ಕುವೆಂಪು ಸಾಹಿತ್ಯ ವಿಮರ್ಶನ-ರಾಗೌ
ಕಾವ್ಯವಿಚಾರ ಚರ್ಚೆ-ಡಾ. ಸಿ.ಪಿ.ಕೆ.

# ಸಾವಳಗಿ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಸುರೇಂದ್ರತಮ್ಮಣ್ಣ ನಾಂದ್ರೇಕರ

**ಶ್ರೀನಿವಾಸ ಎಸ್. ಕಟ್ಟಿಮನಿ**
**ಸಹಾಯಕ ಪ್ರಾಧ್ಯಾಪಕರು**
**ಇತಿಹಾಸ ವಿಭಾಗ**
**ಬಿ.ಎಲ್.ಡಿ.ಇ ಸಂಸ್ಥೆಯ ವಾಣಿಜ್ಯ, ಬಿ.ಎಚ್.ಎಸ್ ಕಲಾ**
**ಮತ್ತು ಟಿ.ಜಿ.ಪಿ ವಿಜ್ಞಾನ ಮಹಾವಿದ್ಯಾಲಯ, ಜಮಖಂಡಿ**

ಬಾಗಲಕೋಟೆಜಿಲ್ಲೆಯಜಮಖಂಡಿತಾಲೂಕಿನ ಸಾವಳಗಿ ಗ್ರಾಮವುತನ್ನದೆಯಾದಐತಿಹಾಸಿಕ ಹಿನ್ನೆಲೆಯನ್ನು ಒಳಗೊಂಡು ಜಮಖಂಡಿತಾಲೂಕಿನ ಹಿರಿಹೊಳೆ ಹರಿದಿರುವಎರಡು ಭಾಗಗಳಲ್ಲಿ ಉತ್ತರ ವಲಯಕ್ಕೆ ಸಾವಳಗಿಯ ಕೇಂದ್ರ ಸ್ಥಳವಾಗಿದೆ. ಇದುಇಪ್ಪತ್ತುನಾಲ್ಕು ಹಳ್ಳಿಗಳನ್ನು ಒಳಗೊಂಡಿದೆ.ಸಾವಳಗಿಯ ಶ್ರೀ ಶಿವಲಿಂಗೇಶ್ವರ ಮಠದ ಸಂಬಂಧಇರುವುದರಿಂದ ಮತ್ತುಆರು ಗ್ರಾಮಗಳು ಒಂದೇಕಡೆ ಸೇರಿದ್ದರಿಂದ ಈ ಹಳ್ಳಿಗೆ **ಸಾವಳಗಿ** ಎಂಬ ಹೆಸರು ಬಂದಿದೆ.

ಸಾವಳಗಿಯಲ್ಲಿ ೧೯೪೩ ರಿಂದ ಹಿಡಿದು ಸ್ವಾತಂತ್ರ್ಯ ಹೋರಾಟದಲ್ಲಿತನ್ನದೆಯಾದ ಕೊಡುಗೆಗಳನ್ನು ನೀಡಿದ್ದಾರೆ.ಅಂತವರಲ್ಲಿ ಪ್ರಮುಖರಾದವರುಶ್ರೀ **ಸುರೇಂದ್ರತಮ್ಮಣ್ಣ ನಾಂದ್ರೇಕರವರು.**

**ಶ್ರೀ ಸುರೇಂದ್ರತಮ್ಮಣ್ಣ ನಾಂದ್ರೇಕರವರು.**ಭಾರತಾಂಬೆಯ ಹೆಮ್ಮೆಯ ಮಗನಾಗಿ ದೇಶಕ್ಕೆ ಸ್ವಾತಂತ್ರ್ಯವನ್ನುತಂದುಕೊಡಲು ವಿರಾವೇಶದಿಂದ ಹೋರಾಡಿದರುಇವರುರಾಜ್ಯ, ಜಿಲ್ಲೆ, ತಾಲೂಕು, ಹಳ್ಳಿಗಳಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಮಾದರಿಯಾದವರು.ಇವರು ಸಾವಳಗಿಯ ಸ್ವಾತಂತ್ರ್ಯ ಹೋರಾಟಗಾರರಲ್ಲಿಅಗ್ರಗಣ್ಯರು.ಇವರುತಮ್ಮ ನಿಷ್ಠಾವಂತ ಸೇವೆಯಿಂದರಾಷ್ಟ್ರನಾಯಕಗಾಂಧೀಜಿಯಚಲೇಜಾವ್ ಚಳುವಳಿಯ ಸ್ಪೂರ್ತಿಯಿಂದ ಸ್ವಾತಂತ್ರ್ಯ ಹೋರಾಟದಲ್ಲಿತೊಡಗಿದವರು.ಇವರಕುಟುಂಬವು ಸಹ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟದಲ್ಲಿ ಭಾಗಿಯಾದವರು.ಇವರತಂದೆತಮ್ಮಣ್ಣನವರುಒಬ್ಬ ಸ್ವತಂತ್ರ್ಯ ಹೋರಾಟಗಾರರಾಗಿ ಅನೇಕ ಚಳುವಳಿಯಲ್ಲಿ ತೊಡಗಿದ್ದವರು. ಸಾವಳಗಿಯ ಇತಿಹಾಸದಲ್ಲಿ ನಾಂದ್ರೇಕರಕುಟುಂಬವು ' ಸ್ವಾತಂತ್ರ್ಯ ಹೋರಾಟಗಾರರಕುಟುಂಬ 'ವೆಂದುಕರೆಯಲಾಗುತ್ತಿದೆ.

**ಬಾಲ್ಯಜೀವನ**

ಬಾಗಲಕೋಟಜಿಲ್ಲೆಯಜಮಖಂಡಿತಾಲೂಕಿನ ಸಾವಳಗಿ ಗ್ರಾಮದಲ್ಲಿ ೧೯೦೮ ರಲ್ಲಿ ಜನಿಸಿದರು.ತಂದೆತಮ್ಮಣ್ಣಪ್ಪಾತಾಯಿ ಸುಂದ್ರವ್ವ. ಇವರು ಸಾಂಪ್ರದಾಯಿಕಜೈನಕುಟುಂಬದವರಾಗಿದ್ದರು.ಇವರುತಮ್ಮ ಮಕ್ಕಳಿಗೆ ದೇಶ ಭಕ್ತಿಯ ಭಾವ ನಮ್ಮದು ಎಂಬ ಮಾನವೀಯ ಮೌಲ್ಯಗಳನ್ನು ಕಲಿಸಿದರು.ನಾಂದ್ರೇಕರವರುತಂದೆ-ತಾಯಿಯ ಆದರ್ಶಗಳಿಂದ ಬೆಳೆದರು.

ಶ್ರೀ ಸುರೇಂದ್ರ ನಾಂದ್ರೇಕರವರು ಪ್ರಾಥಮಿಕ ಶಿಕ್ಷಣವನ್ನು ಸಾವಳಗಿ ಮತ್ತುಅಥಣಿತಾಲೂಕಿನ ಸವದಿಯಲ್ಲಿ ಪಡೆದುಕೊಂಡರು.ಇವರುಕನ್ನಡ, ಮರಾಠಿ, ಇಂಗ್ಲೀಷ್ ಭಾಷೆಗಳಲ್ಲಿ ಅಧ್ಯಯನವನ್ನು ಆರಂಭಿಸಿದರು ಇವರುತಮ್ಮ ಮಾಧ್ಯಮಿಕ( ಪ್ರೌಢ ) ಶಿಕ್ಷಣವನ್ನು ಬಿಜಾಪೂರದ ಪಿ.ಡಿ.ಜೆ ಹೈಸ್ಕೂಲನಲ್ಲಿ ಪಡೆದುಕೊಂಡರು. ನಂತರತಮ್ಮಕಾಲೇಜು ಶಿಕ್ಷಣವನ್ನು ಶ್ರೀ ಕಾಡಸಿದ್ದೇಶ್ವರ ಶಿಕ್ಷಣ ಸಂಸ್ಥೆ ಹುಬ್ಬಳ್ಳಿಯಲ್ಲಿ ಪಡೆದವರು ಶಾಲಾ ಕಾಲೇಜಿನಲ್ಲಿ ನಡೆಯುವ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು.

**ಸುರೇಂದ್ರ ನಾಂದ್ರೇಕರವರಿಗೆ ಪ್ರಭಾವ ಬೀರಿದ ವ್ಯಕ್ತಿಗಳು**

ಶ್ರೀ ಸುರೇಂದ್ರರವರಿಗೆ ಬ್ರಿಟಿಷ ಆಡಳಿತ ವ್ಯವಸ್ಥೆಯ ವಿರುದ್ಧ ಹೋರಾಡಲುಅವರಿಗೆ ಮಹಾತ್ಮಗಾಂಧೀಜಿ ಮತ್ತುಅವರು ಮಾಡಿದ ಭಾರತ ಸ್ವಾತಂತ್ರ್ಯ ಚಳುವಳಿಗಳು ಹಾಗೂ ಗಾಂಧೀಜಿಯವರು ಬರೆದ 'ಯಂಗ್ಇಂಡಿಯಾ ಮತ್ತು ಹರಿಜನ' ಎಂಬ ಪತ್ರಿಕೆಗಳನ್ನು ಓದಿ ಅವರ ಹೋರಾಟಗಳಿಂದ ಅವರ ಪ್ರಭಾವಕ್ಕೆ ಒಳಗಾಗಿ ಅವರಿಂದ ಸ್ಪೂರ್ತಿಯನ್ನು ಪಡೆದುಕೊಂಡರು.೧೯೪೨ರಚಲೋಜಾವ ಚಳುವಳಿಯಲ್ಲಿ ಭಾಗವಹಿಸಿದರು.

**ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿ**

ಗಾಂಧೀಜಿಯವರು ಬ್ರಿಟಿಷರ ದಬ್ಬಾಳಿಕೆಯ ಆಡಳಿತ ನೀತಿಯ ವಿರುದ್ಧ ಹೋರಾಡಲು ೧೯೪೨ರಲ್ಲಿ ಚಳುವಳಿಗಳನ್ನು ಆರಂಭಿಸಿದರು.ಅದೇ ಸಮಯದಲ್ಲಿ ವಿದ್ಯಾರ್ಥಿಯಾಗಿದ್ದ ಸುರೇಂದ್ರ ನಾಂದ್ರೇಕರವರು ಹಾಗೂ ಬಹಳಷ್ಟು ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ತೊರೆದುಗಾಂಧೀಜಿಯವರತೊಡಗಿದರು.

**ಚಲೇಜಾವ ಚಳುವಳಿಯ ಸಂಘಟನೆಗಳು**

**ಸುರೇಂದ್ರ ನಾಂದ್ರೇಕರವರ ನಾಯಕತ್ವದಲ್ಲಿ ವಿದ್ಯಾರ್ಥಿಗಳ ಕೂಟ**

ಕ್ರಿ.ಶ ೧೯೪೨ರಲ್ಲಿ ಗಾಂಧೀಜಿಯವರ ಚಲೇ ಜಾವ್ ಚಳುವಳಿಯ ಕರೆಗೆಓಗೊಟ್ಟು ಸಾವಳಗಿಯಲ್ಲಿ ಆಂಗ್ಲರ ವಿರುದ್ದ ಚಳುವಳಿಯನ್ನು ಪ್ರಾರಂಭಿಸಲು ಸುರೇಂದ್ರರು ನಾಯಕತ್ವವನ್ನು ವಹಿಸಿದರು ಇವರಿಗೆ ಅನೇಕ ಕಾಲೇಜು ವಿದ್ಯಾರ್ಥಿಗಳು ಮತ್ತುಅವರ ಗೆಳೆಯರು ಸಹ ಸಹಾಯವನ್ನು ನೀಡಿದರು.

ವಿದ್ಯಾರ್ಥಿಯಾಗಿದ್ದ ಸುರೇಂದ್ರರವರುಗಾಂಧೀಜಿ ಭೇಟಿಕೊಟ್ಟುತರುಣರನ್ನು ಉದ್ದೇಶಿಸಿ ಮಾತನಾಡುತ್ತಾ 'ತರುಣ ಮಿತ್ರರೇ ನೀವೆಲ್ಲ ವ್ಯಾಸಂಗತೊರೆದು ಬಂದು ಹಳ್ಳಿಗೆ ತೆರಳಿ ಹಳ್ಳಿ ಗ್ರಾಮಗಳ ಜನತೆಗೆ ಸ್ವಾತಂತ್ರ್ಯದಕುರಿತುಅರಿವು ಮೂಡಿಸುವ ಕೆಲಸ ಮಾಡಿ' ಎಂದುಕರೆಕೊಟ್ಟರು. ಕರೆಗನುಸಾರವಾಗಿಅಂದುತರುಣರೆಲ್ಲರುತಮ್ಮ–ತಮ್ಮ ಹಳ್ಳಿಗಳಿಗೆ ಮರಳಿ ಸರಕಾರದ ವಿರುದ್ದಅಸಹಕಾರ ಚಳುವಳಿಗೆ ಸಂಘಟನೆ ಮಾಡತೊಡಗಿದರು.ಇದರಂತೆತನ್ನ ಹುಟ್ಟುರಾದ ಸಾವಳಗಿಗೆ ಬಂದು ಸುರೇಂದ್ರರುಗ್ರಾಮದ ಹಿರಿಯರಿಗೆ ಮತ್ತುತರುಣರಿಗೆಗಾಂಧೀಜಿಯ ವಿಚಾರಗಳನ್ನು ತಿಳಿಸಿ ಪ್ರತಿದಿನ ಪ್ರಭಾತ ಪೇರಿ ಮುಖಾಂತರಗ್ರಾಮದತುಂಬೆಲ್ಲಾ ಸ್ವಾತಂತ್ರ್ಯದ ಬಗ್ಗೆ ಜನರಲ್ಲಿಜಾಗೃತಿ ಮೂಡಿಸಿದರು.

ಸುರೇಂದ್ರ ನಾಂದ್ರೇಕರವರುಚಲೇಜಾವ್ ಚಳುವಳಿಯ ಭಾಷಣದಿಂದ ಪ್ರಭಾವಿತರಾಗಿ ಸಾವಳಗಿಯಲ್ಲಿ ಚಳುವಳಿಯನ್ನು ತೀವ್ರಗೊಳಿಸಲು ಮುಂಬೈಗೆ ಪ್ರಯಾಣ ಬೆಳೆಸಿದರು.ಸುರೇಂದ್ರರುಯಾವುದೇ ಮಾಧ್ಯಮದಸಹಾಯವಿಲ್ಲದ ಸಮಯದಲ್ಲಿ ಮುಂಬೈ ಪ್ರಯಾಣಕ್ಕೆ ಏಕೈಕ ಸಾಧನವಾದಅಟ್ಲೆ ಮೋಟಾರ್ ಮುಖಾಂತರ ಹೋಗಿ ಕರ ಪತ್ರಗಳನ್ನು ತಂದು ಹಂಚುತ್ತಿದ್ದರು.

ಸುರೇಂದ್ರ ನಾಂದ್ರೇಕರವರು ಮೊಟ್ಟ ಮೊದಲು ವಿವಿಧ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಸಂಘಟನೆಗೊಳಿಸಿದರು.ಅಂದರೆ ಸಾವಳಗಿ, ತುಂಗಳ, ಜಮಖಂಡಿ, ತೆಲಸಂಗ, ಅಥಣಿ, ಜತ್ತ, ಹಿಡಕಲ್, ಕುಂಚನೂರ, ಬನಹಟ್ಟಿಗಳಿಗೆ ದಿನಾಲು ಕಾಲನಡಿಗೆಯಿಂದ ಹೋಗಿ ಸ್ವಾತಂತ್ರ್ಯ ಸಂಗ್ರಾಮದಕಿಡಿಯನ್ನು ಹಚ್ಚಿಸಿದರು.ಆಯಾಊರಿನ ಹಿರಿಯರಲ್ಲಿ, ಯುವಕರಲ್ಲಿ ಮನವಿಯನ್ನು ಮಾಡಿಕೊಂಡರು.

ಸಾವಳಗಿಯಲ್ಲಿ ಜನರ ಸಹಕಾರದಿಂದ ೨೦೦ ರಿಂದ ೩೦೦ ಜನರು ಬಹಿರಂಗವಾಗಿ ಸಭೆ ಸೇರುತ್ತಿದ್ದರು.ಇಂತ ಸಭೆಗೆ ಬ್ರಿಟಿಷರರಿಂದ ಪ್ರತಿಬಂಧವಿತ್ತು.ಆದರೂ ಸಹ ಸಾವಳಗಿಯ ಇಮಾಮಸಾಬ್, ವಾಸುದೇವ ನಾಯಕ, ಮಾಧವರಾವದೇಶಪಾಂಡೆ ಮುಂತಾದವರು ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುರೇಂದ್ರರವರಿಗೆ ಬೆಂಬಲ ನೀಡಿದರು.ಸುರೇಂದ್ರರವರು ಸಾವಳಗಿಯ ಬಾವುರಾವ್ ಪೋಲಿಸ್‌ಪಾಟೀಲ, ರಾಯಪ್ಪ ಬೆಳಗಲಿ, ಪಾರೀಸ ನಾಂದ್ರೇಕರ, ಗಂಗವ್ವ ಬೆಳಗಲಿ ಇವರಿಗೆ ಬೇಟಿಯಾಗಿ ಮುಂದಿನ ಕಾರ್ಯಕ್ರಮದಕುರಿತು ವಿಚಾರ ಮಾಡಿದರು.ಮುಂದೆ ಸರಕಾರಿಕಛೇರಿಗೆ ಮುತ್ತಿಗೆ ಹಾಕುವುದು, ದಪ್ತರಕಾಗದ ಪತ್ರಗಳನ್ನು ಸುಟ್ಟು ಹಾಕಲು ಸಿದ್ದರಾದರು.

ಸುರೇಂದ್ರರವರು ಸ್ವತಃತಾವೇ ಈ ಚಳುವಳಿಯ ಮುಂದಾಳತ್ವ ವಹಿಸಿ ಜಿಲ್ಲಾ ಮತ್ತು ಪ್ರಾಂತ್ಯಗಳಿಗೆ ಭೇಟಿ ನೀಡಿ ಸ್ನೇಹಿತರಿಂದ ಹಾಗೂ ಸಾವಳಗಿ, ತೆಲಸಂಗ, ತುಂಗಳ, ಜಂಬಗಿಯ ಹಿರಿಯರು, ಗೌಡರು, ಕುಲಕರ್ಣಿಗಳಿಂದ ಹಣವನ್ನು ಸಂಗ್ರಹಿಸಿ ಪಿಸ್ತೂಲುಗಳನ್ನು, ಬರ್ಚಿ, ಹತಾರ, ಲಾಂಗ, ನಾಡ ಬಂದೂಕಗಳನ್ನು ತರಸಿಕೊಂಡರು.

ಸುರೇಂದ್ರರವರು ಸಾವಳಗಿ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರರುಆಗಿದ್ದರು.ರಾಯಪ್ಪ ಬೆಳಗಲಿ ಅವರ ಮುಂದಾಳತ್ವದಲ್ಲಿ ಊರಿನ ಹಿರಿಯರು, ತರುಣರನ್ನು ಒಟ್ಟುಗೂಡಿಸಿಕೊಂಡು ಬ್ರಿಟಿಷರದುರ್ಬಲ ಆಡಳಿತವನ್ನು ತೆಗೆದು ಹಾಕಲು ಹಾಗೂ ಬ್ರಿಟಿಷರನ್ನು ಭಾರತದಿಂದಓಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡರು.

ಸುರೇಂದ್ರರರುತನ್ನ ಸಂಘಟಿಕರೊಂದಿಗೆ ಬ್ರಿಟಿಷ ಸರಕಾರದ ವಿರುದ್ದ ವಿದ್ವಂಸಕ ಕೃತ್ಯಗಳನ್ನು ಕೈಗೊಂಡರು.ಬಿಜಾಪುರ, ಜಮಖಂಡಿ, ಸಾವಳಗಿ, ಅಥಣಿ ನಡುವಿನ ಸಂಪರ್ಕ ಕೊಂಡಿಗಳಾದ ತಾರತಂತಿಗಳನ್ನು ಕತ್ತರಿಸಲು ಪ್ರಾರಂಭಿಸಿದರು.ಮುಂದೆಒಂದು ದಿನ ಮಿರಜದಿಂದ ಹುಬ್ಬಳ್ಳಿಯವರೆಗೆ ಪ್ರಯಾಣಕೈಗೊಂಡರು.ಮಾರ್ಗ ಮಧ್ಯದಲ್ಲಿಯೇರೈಲ್ವೆತಾರತಂತಿಕತ್ತರಿಸುವ ಕಾರ್ಯಕ್ರಮಗಳನ್ನು ಮಾಡಬೇಕೆಂದುತಮ್ಮ ಸಂಗಡಿಗರಿಗೆಆದೇಶ ನೀಡಿದರು. ಆಗ ರೈಲ್ವೆ ಹಳಿಯ ಮೇಲೆ ಬಂದುರೈಲ್ವೆಇಂಜಿನ್‌ಡಬ್ಬಿಯಲ್ಲಿ ಪೋಲಿಸ್‌ಪಾಟೀಲ ಬಂದೂಕು ಸಹಿತ ಈ ತಾರತಂತಿ ಕಾವಲು ಮಾಡುತ್ತಿದ್ದರು. ಅವರನ್ನು ತಪ್ಪಿಸಿ ರೈಲ್ವೆ ಕಂಬಿ ಕತ್ತರಿಸಲು ಪ್ರಯತ್ನಿಸಿದರು.ಆದರೆಅದನ್ನುಕತ್ತರಿಸಲಿಲ್ಲ. ಆದರೆ ಸುರೇಂದ್ರರುರೈಲ್ವೆ ಹಳಿಯ ಫಿಶ್ ಪ್ಲೇಟ್‌ದ ಬೋಲ್ಟ್‌ಗಳನ್ನು ಬಿಚ್ಚಿದ್ದರು.ಇದರಿಂದರೈಲ್ವೆ ಕೆಳಕ್ಕೆ ಉರುಳಿ ಬಿತ್ತು.ಅಲ್ಲಿಂದ ಸುರೇಂದ್ರರು ಮರಳಿ ಸಾವಳಗಿಗೆ ಪ್ರಯಾಣ ಬೆಳೆಸಿದರು.

**ಬ್ರಿಟಿಷ ಅಧಿಕಾರಿಗಳ ಬಂಗಲೆ ಸುಡುವುದು**

ಸಾವಳಗಿ ಗ್ರಾಮದ ಹೋರಾಟಗಾರರ ೧ನೇ ಕಾರ್ಯಕ್ರಮತೆಲಸಂಗ ಬಂಗಲೆಯು ಸುಮಾರು ಸಾವಳಗಿಯಿಂದ ೧೨ಕಿ.ಮೀ.ದೂರದಲ್ಲಿತ್ತು. ಇವರೆಲ್ಲರುಎರಡು ಸಾಲುಗಳನ್ನು ಮಾಡಿಕೊಂಡು ತುಳಸಿ ವಿವಾಹದ ದಿನ ಮಿಲಟರಿಯವರ ಹಾಗೆ

ವೇಷಧರಿಸಿ ತೆಲಸಂಗ ಬಂಗಲೆಯೊಳಗೆ ನಡೆದರು. ಸುರೇಂದ್ರರರುಆಂಗ್ಲ ಭಾಷೆಯಲ್ಲಿ' ಲೆಫ್ಟ್‌ರಾಯಿಟ್ ' ಅಂದುಆರ್ಡರ್ ಮಾಡುತ್ತಿದ್ದರು. ಬಂಗಲೆಯಕಾವಲುಗಾರರುಇವರು ಬರುವ ಸಪ್ಪಳ ಕೇಳಿ ಅವರೆಲ್ಲರೂಎದ್ದು ನಿಂತುಅವರಿಗೆರಾಮ– ರಾಮಅಂತಾ ಸಲಾಮ ಮಾಡಿದರು. ಆ ಮೇಲೆ ಸಮೀಪದ ಹೊಲದಲ್ಲಿಕೂಡಿಟ್ಟಿದ್ದಒಣಗಿದ್ದ ಶೇಂಗಾದ ಬಳ್ಳಿಯನ್ನು ತಂದುಅದರಿಂದ ಬಂಗಲೆಗೆ ಬೆಂಕಿ ಹಚ್ಚಿದರು.ಅಂದಿನಿಂದತೆಲಸಂಗ ಬಂಗಲೆಯು ಇಂದಿನವರೆಗೆಇತಿಹಾಸದಲ್ಲಿ ಭೂತಬಂಗಲೆಯೆಂದು ಪ್ರಸಿದ್ದವಾಗಿದೆ.

**ರೈಲ್ವೆ ಸ್ಟೇಶನ್ ಮೇಲೆ ದಾಳಿ**

ಸುರೇಂದ್ರ ನಾಂದ್ರೇಕರವರ ಮಾರ್ಗದರ್ಶನದಲ್ಲಿರೈಲ್ವೆ ಸ್ಟೇಶನ್ ಸುಡುವದುನ್ನುತೀರ್ಮಾನ ಮಾಡಲಾಯಿತು.ಸುರೇಂದ್ರ ನಾಂದ್ರೇಕರವರುತಮ್ಮ ಸಂಗಡಿಗರೊಂದಿಗೆಕಾಲ್ನಡಿಗೆಯಲ್ಲಿ ನಡೆದು ಸಾವಳಗಿಯಿಂದ ಸಲಗರಕ್ಕೆ ಬಂದುತಲುಪಿದರು.

ಸಲಗರ ಸ್ಟೇಶನ್ ಮಾಸ್ತರನಕುಟುಂಬ ಸ್ಟೇಶನ್‌ಕಟ್ಟಡದಲ್ಲಿ ವಾಸಿಸುತ್ತಿದ್ದರು.ಆ ಸ್ಟೇಶನ್‌ದಲ್ಲಿ ಕೆಲವು ಕಾವಲುಗಾರರು ಪ್ರವಾಸಿಗರು ಸೇರಿ ೨೦ ಜನ ಮಲಗಿದ್ದರು.ಇತರರಜೀವಕ್ಕೆ ಹಾನಿಯುಂಟು ಮಾಡುವುದು ಬೇಡವೆಂದು ತಿಳಿದು ಸ್ಟೇಶನ್ ಮಾಸ್ತರನಿಗೆ ತಿಳಿಸಿ ಅವರಎಲ್ಲ ವಸ್ತುಗಳನ್ನು ಹೊರಗೆಇಟ್ಟು ಸ್ಟೇಶನ್ ಮೇಲೆ ಹತ್ತಿಕಟ್ಟಡಕ್ಕೆ ಬೆಂಕಿಹಚ್ಚಿದರು.

ಸುರೇಂದ್ರ ನಾಂದ್ರೇಕರವರು ಬ್ರಿಟಿಷ ಸರಕಾರದ ವಿರುದ್ಧ ಮಾಡಿದ ವಿಧ್ವಂಸಕ ಕೃತ್ಯಗಳಿಂದ ಬೇಸತ್ತು ಬ್ರಿಟಿಷರುಅವರನ್ನು ಬಂಧಿಸಲುಆದೇಶ ನೀಡಿದರು.ಆದರೆ ಸುರೇಂದ್ರರವರುತಲೆ ಮರಿಸಿಕೊಂಡು ಭೂಗತರಾಗಿ ಚಳುವಳಿಯನ್ನು ಆರಂಭಿಸಿದರು.ಅದರ ಸುಳಿವು ಸಿಗದ ಕಾರಣ ಬ್ರಿಟಿಷರು ಸುರೇಂದ್ರರ ಮನೆಗೆ ಬಂದುಅವರತಂದೆ, ತಾಯಿ, ಹೆಂಡತಿ ಹಾಗೂ ಸೋದರ ಮಾವನನ್ನು ಬಂಧಿಸಿ ಜೈಲಿಗೆಇಟ್ಟರೂ.ಆದರೂ ಸಹ ಇವರ ಸ್ವಾತಂತ್ರ್ಯ ಹೋರಾಟ ಚಳುವಳಿ ನಿಲ್ಲಲಿಲ್ಲ.

ಬ್ರಿಟಿಷ್ ಅಧಿಕಾರಿಗಳು ಪೋಲಿಸರಿಂದಇವರನ್ನುಕಾನೂನುಭಂಗಆರೋಪದ ಮೇಲೆ ಬಂಧಿಸಿ ಜಮಖಂಡಿಯ ಸೆರೆಮನೆಗೆ ಹಾಕಿದರು.ಸೆರೆಮನೆಯಲ್ಲಿಯೇ ಸುರೇಂದ್ರರರುತಮ್ಮೊಂದಿಗೆಇದ್ದ ಉಳಿದ ಖೈದಿಗಳಿಗೆ ಓದು ಬರಹಗೊತ್ತಿಲ್ಲದವರಿಗೆಅಕ್ಷರಜ್ಞಾನವನ್ನು ನೀಡಿದರು.ಮುಂದೆ ದಿನಾಂಕ ೨೯–೧–೧೯೪೨ರಲ್ಲಿ ನ್ಯಾಯಾಲಯದಲ್ಲಿ ವಿಚಾರಣೆಗೊಂಡ ನಂತರ ಭಾರತದಅಪರಾಧಕಾಯ್ದೆ ೧೯೦ಕಲಂವಿನ ಪ್ರಕಾರಇವರಿಗೆ ೯ ತಿಂಗಳ ಶಿಕ್ಷೆ ಮತ್ತು ೪೦೦೦ರೂ.ದಂಡ ವಿಧಿಸಲಾಯಿತು. ಅದರಂತೆ ದಿನಾಂಕ ೨೩–೧–೧೯೪೩ ರಿಂದ ೨೨–೩–೧೯೪೩ ರ ವರೆಗೆಜಮಖಂಡಿಯ ಸಬ್‌ಜೈಲಿನಲ್ಲಿ ಸೆರೆಮನೆ ವಾಸ ಅನುಭವಿಸಿದರು.

ಎರಡನೇ ಬಾರಿಗೆ ಭಾರತದಅಪರಾಧಕಾಯ್ದೆಅನುಚ್ಛೇದ ೯೩ ಮತ್ತು ೧೨೯ ರಅನ್ವಯಅವರನ್ನು ಬಂಧಿಸಿ ೦೨– ೦೨–೧೯೪೪ ರಿಂದ ೧೧–೦೨–೧೯೪೪ ರವರೆಗೆಇವರನ್ನುಗಡಿಪಾರು ಮಾಡಲಾಯಿತು.

ಸುರೇಂದ್ರರವರುಜೈಲಿನಿಂದ ಬಿಡುಗಡೆಯಾದ ನಂತರ ಮತ್ತೆ ಸಾವಳಗಿಯಿಂದ ಭೂಗತ ಚಳುವಳಿಯಲ್ಲಿ ಭಾಗಿಯಾದರು. ಸಾವಳಗಿಯ ಚಳುವಳಿಗಾರರ ಗುಂಪಿನ ಮುಂದಾಳತ್ವವಹಿಸಿದ ಇವರಿಗೆ ಜೈಲಾಧಿಕಾರಿಗಳು ' ರಿಂಗ್ ಮಾಸ್ಟರ್ ' ಎಂಬ ಬಿರುದನ್ನು ನೀಡಿದರು. ಇವರುಯಾವ ಶಾಲೆಯ ಶಿಕ್ಷಕರಾಗಿರದಿದ್ದರು ' ಸುರೇಂದ್ರ ಮಾಸ್ತರ ' ಎಂದುಖ್ಯಾತರಾಗಿದ್ದರು.

**ಸ್ವಾತಂತ್ರ್ಯದ ನಂತರ ಚಳುವಳಿಯಲ್ಲಿ ಸುರೇಂದ್ರರ ಪಾತ್ರ**

ಸುರೇಂದ್ರರು ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಚಳುವಳಿಗಳು ಶಾಂತವಾಗಿದ್ದವು.ಇವರು ಸಾವಳಗಿಯಲ್ಲಿ ಚರಕ ಸಂಘವನ್ನು ಸ್ಥಾಪಿಸಿಕೊಂಡು ಖಾದಿ ಪ್ರಚಾರವನ್ನು ಮಾಡುತ್ತಿದ್ದರು.

ಕರ್ನಾಟಕದಏಕೀಕರಣದಲ್ಲಿ ಭಾಗವಹಿಸಿದರು.ಸುರೇಂದ್ರರವರು ಹೈದ್ರಾಬಾದ್‌ಕರ್ನಾಟಕದಲ್ಲಿಜಮಖಂಡಿ ಸಂಸ್ಥಾನವನ್ನು ವಿಲೀನಿಕರಣಗೊಳಿಸುವುದಕ್ಕಾಗಿ ಸುರೇಂದ್ರರ ನಾಯಕತ್ವದಲ್ಲಿ ಅನೇಕ ಸಂಗಡಿಗರೊಂದಿಗೆ ಚಳುವಳಿಗಳನ್ನು ಕೈಗೊಂಡರು.ಜನವರಿ ೨೬, ಅಗಸ್ಟ ೧೫ ರಂದು ಸುರೇಂದ್ರರರು ಸಾವಳಗಿಯ ಶಾಲೆ, ಕಾಲೇಜು, ಸಾರ್ವಜನಿಕ ಸ್ಥಳಗಳಲ್ಲಿ ಗಣರಾಜ್ಯೋತ್ಸವದಲ್ಲಿ ಸಂತೋಷದಿಂದ ಪಾಲ್ಗೊಳ್ಳುತ್ತಿದ್ದರು.

ಸುರೇಂದ್ರ ನಾಂದ್ರೇಕರವರು ಕೇವಲ ಸ್ವಾತಂತ್ರ್ಯ ಹೋರಾಟಗಾರಷ್ಟೇಆಗಿದ್ದಲ್ಲದೇತಮ್ಮಗ್ರಾಮದಜನರಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕಕ್ಷೇತ್ರಕ್ಕೂತಮ್ಮ ಸೇವೆಗಳನ್ನು ಮೀಸಲಾಗಿಟ್ಟಿದ್ದರು.

ಸಾವಳಗಿ ಗ್ರಾಮದ ಸಮಾಜದಲ್ಲಿ ವಿವಿಧ ಜಾತಿಗಳಿದ್ದರೂ ಎಲ್ಲಜಾತಿಯವರನ್ನುಒಂದೇರೀತಿಯಾಗಿಕಾಣುತ್ತಿದ್ದರು.ಸಾವಳಗಿಯಲ್ಲಿ ಶ್ರೀ ದುರ್ಗಾದೇವಿ ಹೆಸರಿನಲ್ಲಿ ಪ್ರಾಣಿ ಬಲಿಯನ್ನುಕೊಡುತ್ತಿದ್ದರು.ಕೆಳವರ್ಗದವರಿಗೆ ಬಲಿಕೊಡದ ಹಾಗೇ ಸಂದೇಶ ನೀಡಿದರು.

ಸುರೇಂದ್ರರವರುದಲಿತರಿಗೆತಮ್ಮ ಹೊಲದಲ್ಲಿದುಡಿಯುವ ಅವಕಾಶ ಮಾಡಿಕೊಡುತ್ತಿದ್ದರು.ಸುರೇಂದ್ರರವರು ಸಾವಳಗಿ ಗ್ರಾಮದ ಪ್ರತಿಯೊಬ್ಬ ಬಡ ವಿದ್ಯಾರ್ಥಿಗಳಿಗೆ ಶಾಲೆಯನ್ನುಕಲಿಯಲು ಹಣವನ್ನು ನೀಡುತ್ತಿದ್ದರು.ಇವರಿಗೆ ಸರಕಾರದಿಂದದೊರೆತ ೧೦,೦೦೦/- ರೂ ಮತ್ತು ಪಿಂಚಣಿಯನ್ನು ಬಡವರಿಗಾಗಿ ಮೀಸಲಿಟ್ಟಿದ್ದರು.

ಸುರೇಂದ್ರರರು ಸ್ವಾತಂತ್ರ್ಯ ಸಿಕ್ಕ ನಂತರಗ್ರಾಮೀಣ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಪಡೆಯಲು ಸಹಾಯಕವಾಗುವಂತೆಗ್ರಾಮದ ಹಿರಿಯರಿಂದ ಸಹಾಯವನ್ನು ಪಡೆದು ಸಾವಳಗಿಯಲ್ಲಿ ೧೯೬೪ರಲ್ಲಿ **' ದಿ ನ್ಯೂಇಂಗ್ಲೀಷ್ ಮೀಡಿಯಂ ಹೈಸ್ಕೂಲ್ '** ನ್ನು ಸ್ಥಾಪನೆ ಮಾಡಿದರುಇದರಲ್ಲಿ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ನೀಡುವ ವ್ಯವಸ್ಥೆಯನ್ನುಜಾರಿಗೆತಂದರು.

ಸುರೇಂದ್ರರರುಇಂಚಗೇರಿಯ ಶ್ರೀ ಸ. ಸಾ ಮಾಧವಾನಂದರ ಪರಮ ಶಿಷ್ಯರಾಗಿದ್ದು ಅವರಿಂದಅಧ್ಯಾತ್ಮಿಕ ಸ್ಪೂರ್ತಿಯನ್ನು ಪಡೆದುಕೊಂಡರು ಸಾವಳಗಿಯಲ್ಲಿ ಸಂಗಯ್ಯ ಮಠ, ಶಿವಲಿಂಗೇಶ್ವರ ದೇವಾಲಯ, ದುರ್ಗಾದೇವಿ, ಬಸವಣ್ಣ ಮುಂತಾದ ದೇವಾಲಯಗಳನ್ನು ಕಟ್ಟಿಸಿ ಅವುಗಳ ಜೀರ್ಣೋದ್ದಾರಕ್ಕೆಧನ ಸಹಾಯವನ್ನು ಮಾಡಿದರು.

ಸುರೇಂದ್ರರರುಕೃಷಿಕರಾಗಿದ್ದರಿಂದ ಸಾವಳಗಿ ಗ್ರಾಮದಜನರನ್ನುಕರೆದುಕೊಂಡು ಭೂಮಿಯನ್ನು ಉಳುಮೆ ಮಾಡುತ್ತಿದ್ದರು.ಅವರುತಾವು ಬೆಳೆದ ಅರ್ಧ ಭಾಗಜನರಿಗೆ ಹಂಚುತ್ತಿದ್ದರು.

ಗ್ರಾಮೀಣಜನರುತಮ್ಮ ಸ್ವಂತದುಡಿಮೆಯಲ್ಲಿ ಭಾಗಿಯಾಗುವಂತೆ ಮಾಡಲುಚರಕ ಸಂಘವನ್ನು ಸ್ಥಾಪಿಸಿದರು. ಹಳ್ಳಿಯಲ್ಲಿ ನೂಲುವ ನೆಯೆಯಂತ್ರಗಳನ್ನು ತಯಾರಿಸಿದರು ಸುರೇಂದ್ರರರುಜಮಖಂಡಿ ಸಂಸ್ಥಾನದಅರಸರ ಆಳ್ವಿಕೆಗೊಳಪಟ್ಟ ಸಾವಳಗಿಯಲ್ಲಿ ೧೯೪೮ ರಲ್ಲಿದೇಶದಲ್ಲೇ ಪ್ರಪ್ರಥಮವಾಗಿ ಸಂಸ್ಥಾನ ವಿಲೀನಕರಣಗೊಳಿಸಿದ್ದರ ಸವಿನೆನಪಿಗಾಗಿ ಜಮಖಂಡಿ ಸಂಸ್ಥಾನದಕೊನೆಯರಾಜ**ಪರಶುರಾಮ ಭಾವು ಪಟವರ್ಧನ, ಘೋರ್ಪಡೆಯನ್ನು**ಗೌರವಿಸುವುದಕ್ಕೋಸ್ಕರ ಸುರೇಂದ್ರರಅಧ್ಯಕ್ಷತೆಯಲ್ಲಿಏರ್ಪಟ್ಟ ಪ್ರಥಮ ಸಮಾರಂಭಅತ್ಯಂತ ಮಹತ್ವ ಪೂರ್ಣವಾಗಿತ್ತು. ಸುರೇಂದ್ರರ ಮುಖಂಡತ್ವದಲ್ಲಿ ಕುಸ್ತಿ, ನೃತ್ಯ, ಕೋಲಾಟ, ಹಗ್ಗಜಗ್ಗಾಟ, ಸಂಗ್ರಾಮ, ಮುಂತಾದಗ್ರಾಮೀಣ ಕ್ರೀಡೆಗಳನ್ನು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಹುತಾತ್ಮರ ಸವಿನೆನಪಿಗಾಗಿ ನಡೆಸುತ್ತಿದ್ದರು.

**ಸುರೇಂದ್ರ ನಾಂದ್ರೇಕರರಿಗೆ ಸರಕಾರದಿಂದದೊರೆತ ಸನ್ಮಾನಗಳು**

ಸುರೇಂದ್ರರವರಿಗೆಕೇಂದ್ರ ಹಾಗೂ ರಾಜ್ಯ ಸರಕಾರಗಳಿಂದ **'ಸ್ವಾತಂತ್ರ್ಯ ಹೋರಾಟಗಾರ'** ಪಿಂಚಣಿಯುದೊರೆಯುತ್ತಿತ್ತು.

೧೯೭೨ರ ಅಗಸ್ಟ ತಿಂಗಳಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆಯರಜತ ಮಹೋತ್ಸವದ ಸಂದರ್ಭದಲ್ಲಿಇವರಿಗೆತಾಮ್ರ ಪತ್ರವನ್ನುಕೊಟ್ಟು ಸರಕಾರವುಇವರನ್ನು ಗೌರವಿಸಿತು.೧೯೪೭ರ ಸಂದರ್ಭದಲ್ಲಿಇವರಿಗೆ ಸ್ವಾತಂತ್ರ್ಯ ಹೋರಾಟಗಾರರೆಂಬ ಗೌರವ ಪತ್ರವನ್ನು ನೀಡಿಗೌರವಿಸಲಾಯಿತು. ೧೯೯೬ ರಲ್ಲಿಅನಾರೋಗ್ಯದಿಂದ ಮರಣ ಹೊಂದಿದರು

ಅಪ್ಪಟಗಾಂಧಿವಾದಿಯಾಗಿದ್ದ ಸುರೇಂದ್ರರು ಸಾವಳಗಿ ಗ್ರಾಮದ ಸ್ವಾತಂತ್ರ್ಯ ಹೋರಾಟಕ್ಕೆಅಡಿಪಾಯ ಹಾಕಿದ ಧೀಮಂತ ನಾಯಕ ಹಾಗೂ ಕೆಚ್ಚೆದೆಯ ನಿಸ್ವಾರ್ಥ ಹೋರಾಟಗಾರರಾಗಿದ್ದರು.ಸಾವಳಗಿಯ ಹಲವಾರುಯುವಕರನ್ನು ಸಂಘಟಿಸಿ ವಿವಿಧ ವಿಧ್ವಂಸಕ ಕೃತ್ಯಗಳನ್ನು ಆಂಗ್ಲ (ಬ್ರಿಟಿಷ) ಸರಕಾರದ ವಿರುದ್ಧ ಮಾಡಿ ಸೆರೆಮನೆ ವಾಸವನ್ನು ಸಹ ಅನುಭವಿಸಿದರು.ಇವರು ಸ್ವಾತಂತ್ರ್ಯ ಹೋರಾಟಗಾರರಷ್ಟೇಅಲ್ಲದೇ ಸಮಾಜಚಿಂತಕರು, ಬಡವರ ಬಂಧುಗಳಾಗಿದ್ದರು.ಸಮಾಜದ ಪ್ರತಿಯೊಂದುಕ್ಷೇತ್ರದಲ್ಲಿ ಸುರೇಂದ್ರರಕೊಡುಗೆ ಪ್ರಮುಖವಾಗಿದೆ.

## ಗ್ರಂಥಋಣ

೧. ಸ್ವಾತಂತ್ರ್ಯ ಸಮರದಗಂಡು ಮೆಟ್ಟಿದ ಸಾವಳಗಿ, ಪಂಡಿತ ಮಾಸ್ತರ ಪ. ವರ್ಷ ೨೦೦೮
೨. ಸಾವಳಗಿ ಸಿರಿ, ಎಸ್. ಜಿ ಕೋಟಿ ಮತ್ತು ಮಧುಕೇಶ್ವರ ಬೆಳಗಲಿ ಪ. ಪರ್ವ ೨೦೧೨
೩. ಸ್ವಾತಂತ್ರ್ಯ ವೀರರು, ವಾಸುದೇವ ಭೂಪಾಲ ಪ್ರ. ವರ್ಷ ೧೯೫೦
೪. ಸ್ವಾತಂತ್ರ್ಯ ಸಂಗ್ರಾಮದ ಬನಹಟ್ಟಿಯ ಬಂಡರು, ಶ್ರೀ ಅಪ್ಪಣ್ಣಪ್ಪಾಜಂಬಗಿ ಪ್ರ. ವರ್ಷ ೧೯೯೪
೫. ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರು, ಕರ್ನಾಟಕರಾಜ್ಯ ಸರಕಾರ ಪ್ರಕಟಣೆ ವರ್ಷ ೧೯೭೫

# ಜಮಖಂಡಿ ತಾಲೂಕಿನ ಬಿದರಿ ಗ್ರಾಮದ ವೀರ ಸ್ವಾತಂತ್ರ ಮಹಿಳೆ : ಶ್ರೀಮತಿ ಪದ್ಮಾವತಿಬಾಯಿ ವಾಮನರಾವ ದೇಸಾಯಿ (ಬಿದರಿ)

ಶ್ರೀಮತಿ ಲತಾ ದದ್ದಿ
ಇತಿಹಾಸ ಉಪನ್ಯಾಸಕಿ
ಕೆ.ಎಚ್.ಬಿ ಕಾಲನಿ,
ಕುಂಚನೂರ ರಸ್ತೆ, ಜಮಖಂಡಿ
ಮೊಬೈಲ್ ನಂ:೮೩೧೦೮೪೭೫೮೪

## ಪೀಠಿಕೆ

ಸುಮಾರು ಎರಡು ನೂರು ವರ್ಷಗಳ ಕಾಲ ನಿರಂತರವಾಗಿ ಬ್ರಿಟಿಷರ ದಬ್ಬಾಳಿಕೆಗೆ ಸಿಕ್ಕು ಜರ್ಜರಿತವಾದ ಭಾರತವನ್ನು ಸ್ವತಂತ್ರಗೊಳಿಸಲು ಅನೇಕ ಮಹಾನ್ ರಾಷ್ಟ್ರೀಯವಾದಿಗಳು ತ್ಯಾಗ ಬಲಿದಾನ ನೀಡಿದರು. ಅಂತಹ ಪ್ರಮುಖ ನಾಯಕರ ತತ್ವ ಸಿದ್ಧಾಂತಗಳಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗವಹಿಸಿದ ಜನರು ಹಲವಾರು ಕೇವಲ ಪುರುಷರಷ್ಟೇ ಅಲ್ಲದೇ ಮಹಿಳೆಯರು ಸಹ ಹೋರಾಟಗಳಲ್ಲಿ ಭಾಗವಹಿಸಿದ್ದನ್ನು ನಾವು ಕಾಣಬಹುದು ಅಂತಯೇ ಕರ್ನಾಟಕದಲ್ಲಿಯೂ ಸಹ ಅನೇಕ ಜನ ಮಹಿಳಾ ಸ್ವಾತಂತ್ರ ಹೋರಾಟಗಾರರನ್ನು ಕಾಣುತ್ತೇವೆ ಅಂತವರಲ್ಲಿ ತಮ್ಮ ಪತಿಯು ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸುವಿಕೆಯನ್ನು ಕಂಡು ಪ್ರಭಾವಿತರಾಗಿ ಅವರ ಜೊತೆ ತಾವು ಸಹ ಭಾಗವಹಿಸಿ ತನ್ನ ಪತಿಯ ಮರಣದ ನಂತರವೂ ಆ ಕಾರ್ಯವನ್ನು ಮುಂದುವರೆಕೊಂಡು ಹೋಗಿ ತಮ್ಮದೇ ಆದ ಹೆಸರನ್ನು ಪಡೆದ ವೀರ ಸ್ವಾತಂತ್ರ ಮಹಿಳೆಯೇ ಜಮಖಂಡಿ ತಾಲೂಕಿನ ಬಿದರಿ ಗ್ರಾಮದ ಶ್ರೀಮತಿ ಪದ್ಮಾವತಿಬಾಯಿ ವಾಮನರಾವ್ ದೇಸಾಯಿ (ಬಿದರಿ)

ಶ್ರೀಮತಿ ಪದ್ಮಾವತಿಬಾಯಿಯವರು ಬಿಜಾಪುರ ತಾಲೂಕಿನ ಕಾಖಂಡಕಿ ಗ್ರಾಮದಲ್ಲಿ ಒಂದು ಸಂಪ್ರದಾಯಸ್ಥ ಬ್ರಾಹ್ಮಣರ ಮನೆತನದಲ್ಲಿ ಕ್ರಿ.ಶ ೧೯೧೪ರಲ್ಲಿ ಜನಿಸಿದರು. ಇವರು (ಅಂದಿನ ಕಾಲದಲ್ಲಿ) ಪ್ರಾಥಮಿಕ ಶಿಕ್ಷಣವನ್ನು ಒಂದೆರಡು ವರುಷ ಕಲಿತು ಬಿಟ್ಟವರಾಗಿದ್ದರು. ಆದರೂ ಕನ್ನಡವನ್ನು ಚನ್ನಾಗಿ ಓದಲು ಬರೆಯಲು ಕಲಿತುಕೊಂಡಿದ್ದರು. ಇವರನ್ನು ತವರು ಮನೆಯಲ್ಲಿ ಚಂದ್ರಾಬಾಯಿ ಎಂದು ಕರೆಯುತ್ತಿದ್ದರು. ಇವರು ೧೧ ವರ್ಷದವರಿದ್ದಾಗ ಅಂದರೆ ಕ್ರಿ.ಶ ೧೯೨೫ರಲ್ಲಿ ಸ್ವಾತಂತ್ರ್ಯ ವೀರರಾದ ಶ್ರೀ ವಾಮನರಾವ್ ದೇಸಾಯಿ (ಬಿದರಿ) ಯವರನ್ನು ವಿವಾಹವಾದರು. ಇವರ ವಿವಾಹವು ಬಿದರಿ ಗ್ರಾಮದಲ್ಲಿ ಸರಳ ರೀತಿಯಲ್ಲಿ ನೆರವೇರಿತು. ಇವರು ಪತಿಗ್ರಹಕ್ಕೆ ಬಂದ ನಣತರ ಇವರಿಗೆ ಪದ್ಮಾವತಿ ಎಂಬ ಹೆಸರಿನಿಂದ ಕರೆಯಹತ್ತಿದ್ದರು. ಇವರ ಪತಿ ವಾಮನರಾವ್ ಅವರು ಕ್ರಿ.ಶ ೧೯೨೪ರಲ್ಲಿ ನಡೆದ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ ನಂತರ ಅಪ್ಪಟ ಗಾಂಧಿ ತತ್ವದ ಪರಿಪಾಲಕರಾದರು, ಅಸ್ಪೃಶ್ಯತಾ ನಿವಾರಣೆ, ಮಧ್ಯಪಾನ ನಿಷೇಧ, ಗ್ರಾಮ ಸುಧಾರಣೆ ಮೊದಲಾದ ಗಾಂಧಿಯವರ ಕಾರ್ಯಗಳನ್ನು ಪ್ರಸಾರ ಮಾಡುತ್ತಾ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ನಿರತರಾಗಿದ್ದರು.

ಪದ್ಮಾವತಿಬಾಯಿಯವರು ಈ ದೇಶಪ್ರೇಮಿ ವಾಮನರಾವ್ ಎಲ್ಲ ಕಾರ್ಯಗಳಲ್ಲಿ ಸಹಾಯ ಸಹಕಾರವನ್ನು ಕೊಡುತ್ತಿದ್ದರಲ್ಲದೆ ಅವರ ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿಯನ್ನಿತ್ತರು. ದೇಶದ ಹಿತಕ್ಕಾಗಿ ತಮ್ಮ ಸ್ವಹಿತವನ್ನೇ ಬದಿಗಿರಿಸಿದರು. ಇವರು ನವ ದಾಂಪತ್ಯ ಜೀವನದ ಸುಖ-ಸಂತೋಷದಲ್ಲಿ ಕಾಲ ಕಳೆಯುವುದನ್ನು ಬಿಟ್ಟು, ಒರಟು ಖಾದಿ ಬಟ್ಟೆಗಳನ್ನು ಧರಿಸಿ ಸತಿ-ಪತಿಗಳಿಬ್ಬರೂ ಒಂದಾಗಿ ಸ್ವಾತಂತ್ರ್ಯದ ದೀಕ್ಷೆಯನ್ನು ತೊಟ್ಟರು. ಅಲ್ಲದೇ ತಮ್ಮ ಸ್ವಂತ ಊರಾದ ಬಿದರಿ ಗ್ರಾಮದ ಫಲವತ್ತಾದ ನೂರಾರು ಎಕರೆ ಭೂಮಿಯನ್ನು ತ್ಯಜಿಸಿ ಕುಂದರನಾಡು (ಈಗಿನ ಬೆಳಗಾವಿ ಜಿಲ್ಲೆ) ಹೋಗಿ ಅಲ್ಲಿ ಸ್ವಾತಂತ್ರ್ಯದ ಕಿಡಿಯನ್ನು ಸತಿ-ಪತಿಗಳಿಬ್ಬರು ಹೊತ್ತಿಸಿದರು. ಗಾಂಧೀಜಿಯವರ ಸ್ವದೇಶಿ ಆಂದೋಲನದ ಕರೆಗೆ ಓಗೊಟ್ಟು ಇಬ್ಬರೂ ಕುಂದರನಾಡಿನ ಗ್ರಾಮಗಳಾದ ಹುದಲಿ, ಪಾಚ್ಚಾಪುರ, ಕೊಳವಿ, ಅಕ್ಕತಂಗಿಯರಹಾಳ ಮೊದಲಾದ ಗ್ರಾಮಗಳಿಗೆ ಹೋಗಿ ಖಾದಿ ಪ್ರಚಾರ ಮಾಎತೊಡಗಿದರು. ಪಾಚ್ಚಾಪೂರದಲ್ಲಿದಾಗ ದಿನ ನಿತ್ಯ ಕಾಲನಡಿಗೆಯಿಂದ ಗಾಳಿ, ಮಳೆ ಬಿಸಿಲೆನ್ನದೆ ಪತಿಯ ಜೊತೆಗೆ ಖಾದಿ ಬಟ್ಟೆಯ ಮೂಟೆಯನ್ನು ಹೊತ್ತುಕೊಂಡು ಖಾದಿ ಪ್ರಚಾರ ಮಾಡಿದರು. ಬಂದ ಹಣದಿಂದ ತಮ್ಮ ಜೀವನ ನಡೆಸುತ್ತಿದ್ದರು. ನೈರ್ಮಲ್ಯ, ಪಾನ ನಿಷೇಧ, ಬಡವರಿಗೆ ಉಚಿತ ಔಷಧ ಹಂಚುವುದು, ದಿನ ಪತ್ರಿಕೆಗಳಲ್ಲಿ ಬರುವ ವರದಿಗಳನ್ನು ಗ್ರಾಮೀಣ ಜನತೆಗೆ ತಿಳಿಸಿಕೊಡುವುದು ಮುಂತಾದ ಕಾರ್ಯಗಳನ್ನು ಮಡುತ್ತಿದ್ದರು.

ಪತಿ ವಾಮನರಾವ ಮಾರ್ಗವನ್ನು ಅನುಸರಿಸುವಲ್ಲಿ ಪದ್ಮಾವತಿಯವರು ಹೊಂದೆ ಬಿದ್ದಿರಲ್ಲಿಲ್ಲ. ಕ್ರಿ.ಶ ೧೯೩೨ರ ಕಾಯ್ದೆ ಭಂಗ ಚಳುವಳಿಯಲ್ಲಿ ಭಾಗವಹಿಸಿದ್ದರಿಂದ ಸರಕಾರವು ಇವರನ್ನು ಬಂಧಿಸಿ ಹಿಂಡಲಗಿ ಕಾರಾಗೃಹದಲ್ಲಿ ಒಂದು ತಿಂಗಳ

ಸಾದಾ ಕಾರಾಗೃಹವನ್ನು ವಿಧಿಸಿತ್ತು. ಮುಂದೆ ಇವರು ಬಿಡುಗಡೆಯಾಗಿ ಹೊರಬಂದಾಗ ವಾಮನರಾವರು ಇನ್ನೂ ಕಾರಾಗೃಹದಲ್ಲಿಯೇ ಇದ್ದರು.

ಕ್ರಿ.ಶ ೧೯೩೩ರಲ್ಲಿ ಪದ್ಮಾವತಿಯವರು ವೈಯಕ್ತಿಕ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಆಗ ಅನೇಕ ಮಹಾನ್ ಸ್ವಾತಂತ್ರ್ಯ ಹೋರಾಟಗಾರರೆಲ್ಲರೂ ಇನ್ನು ಬಂಧಿಗಳಾಗಿಯೇ ಇದ್ದರು. ಬೆಳಗಾವಿ ಪೇಟೆಯಲ್ಲಿ ಪದ್ಮಾವತಿಯವರು ನಾಲ್ಕು ಜನ ಮಹಿಳೆಯರನ್ನು ಕೊಡಿಕೊಂಡು ಕೈಯಲ್ಲಿ ರಾಷ್ಟ್ರಧ್ವಜವನ್ನು ಹಿಡಿದು "ಭಾರತ ಮಾತಾ ಕೀ ಜೈ", ಮಹಾತ್ಮಾ ಗಾಂಧೀಜಿ ಕೀ ಜೈ" ಎಂದು ಜಯ ಘೋಷಣೆಯನ್ನು ಮಾಡುತ್ತಾ ಪ್ರಭಾತಫೇರಿಯನ್ನು ನಡೆಸಿದರು. ಇದರಿಂದ ರೊಚ್ಚಿಗೆದ್ದ ಸರಕಾರ ಇವರನ್ನು ಬಂಧಿಸಿ ಇವರ ಮೇಲೆ ಖಟ್ಲೆ ಹಾಕಿ ಆರು ತಿಂಗಳ ಶಿಕ್ಷೆ, ಐವತ್ತು ರೂಪಾಯಿ ದಂಡ ವಿಧಿಸಿತು. ಪದ್ಮಾವತಿಯವರು ದಂಡ ತುಂಬದೇ ಇರುವುದರಿಂದ ಮತ್ತೇ ಏಳು ತಿಂಗಳು ಸೆರೆಮನೆವಾಸ ಅನುಭವಿಸಬೇಕಾಯಿತು(ಹಿಂಡಲಗಾ ಜೈಲು). ಮುಂದೆ ಇವರ ಒಳ್ಳೆಯ ನಡೆತೆಗಾಗಿ ಸರಕಾರ ಒಂದು ತಿಂಗಳ ಮೊದಲೇ ಅಂದರೆ ಕ್ರಿ.ಶ ೧೯೩೪ರಲ್ಲಿ ಬಿಡುಗಡೆ ಮಾಡಿತು.

**ಚಲೇಜಾವ್ ಚಳುವಳಿ ೧೯೪೨:**

ಕ್ರಿ.ಶ ೧೯೩೪ರಲ್ಲಿ ಕಾರಾಗೃಹದಿಂದ ಬಿಡುಗಡೆಯಾಗಿ ಬಂದ ನಂತರ ಪದ್ಮಾವತಿಬಾಯಿಯವರಿಗೆ ಮುಂದೆ ಜೇಲಿನ ಅನುಭವವಾಗಿದ್ದು, ೧೯೪೨ರ ಚಲೇಜಾವ್ ಚಳುವಳಿಯಲ್ಲಿ. ಆಗ ಪತಿ ವಾಮನರಾವ ಅವರು ಭೂಗತರಾಗಿದ್ದರು. ೧೯೪೨ರ ಪ್ರಕ್ಷುಬ್ದ ವಾತಾವರಣದಲ್ಲಿಯೇ ಕುಂದರನಾಡಿನ ವೀರರು "ಮಹಾತ್ಮಾ ಗಾಂಧಿಜೀಯವರ ಹುಟ್ಟು ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಿದರು. ಈ ಕಾರ್ಯಕ್ರಮದ ಮುಂದಾಳತ್ವವನ್ನು ಪದ್ಮಾವತಿಯವರೇ ವಹಿಸಿದ್ದಾರೆ ಎಂಬುದನ್ನು ಅರಿತು ಸರಕಾರ ಇವರನ್ನು ಸಪ್ಟೆಂಬರ್ ತಿಂಗಳಲ್ಲಿಯೇ ಬಂಧಿಸಿ ಹಿಂಡಲಗಿಯಲ್ಲಿ ಸ್ಥಾನಬದ್ಧತೆಯಲ್ಲಿ ಇಟ್ಟಿತು. ಮುಂದೆ ಒಂದುವರೆ ವರ್ಷಗಳ ವರೆಗೆ ಕಾರಾಗ್ರಹದಲ್ಲಿಯೇ ಇದ್ದಿದ್ದರಿಂದ ಕ್ರಮೇಣ ಆರೋಗ್ಯವು ಕೆಡುತ್ತಾ ನಡೆಯಿತು. ಆಗ ಇವರ ಅಣ್ಣ ಗಣಪತಿರಾವ ವೈದ್ಯಕೀಯ ಚಿಕಿತ್ಸೆ ಮತ್ತು ವಿಶ್ರಾಂತಿಗಾಗಿ ಕಾಖಂಡಕಿ ಗ್ರಾಮಕ್ಕೆ ಕರೆದುಕೊಂಡು ಬಂದರು.

೧೯೩೨ರಲ್ಲಿ ಬೆಲಗಾವಿಯಲ್ಲಿ ಕಾಯ್ದೆಭಂಗ ಚಳುವಳಿಯು ಉಗ್ರ ಸ್ವರೂಪವನ್ನು ತಾಳಿತು ಆಗ ಪದ್ಮಾವತಿಯವರು ಗರ್ಭಿಣಿಯಾಗಿದ್ದರೂ ಸಹ ಈ ಚಳುವಳಿಯಲ್ಲಿ ಭಾಗವಹಿಸಿದರು. ಇವರೊಂದಿಗೆ ಅನೇಕ ಸ್ತ್ರೀಯರು ಮುಖ್ಯವಾಗಿ ಶ್ರೀಮತಿ ಶಾಂತಾದೇವಿ ಕರಮರಕರ, ಲೀಲಾತಾಯಿ ಮಾಗಡಿ ಇವರು ಮುನ್ನಡೆಯುತ್ತಿದ್ದರು. ಈ ಸಾಮೂಹಿಕ ಚಳುವಳಿಯಲ್ಲಿ ಪದ್ಮಾವತಿಯವರಿಗರ ಒಂದು ತಿಂಗಳು ಮಾತ್ರ ಶಿಕ್ಷೆಯಾಗಿತ್ತು ಶಿಕ್ಷೆಯ ನಂತರ ತವರೂರಾದ ಕಾಖಂಡಕಿಗೆ ಬಂದು ೧೯೩೨ರಲ್ಲಿ ಗಂಡು ಮಗುವಿಗೆ ಜನ್ಮ ನೀಡಿದರು. ಆತನಿಗೆ ಅರವಿಂದ ಎಂದು ಹೆಸರಿಟ್ಟರು. ಇದಕ್ಕಿಂತ ಪೂರ್ವದಲ್ಲಿ ಅಂದರೆ ೧೯೨೯ರಲ್ಲಿ ಲೀಲಾತಾಯಿ ಎಂಬ ಹೆಣ್ಣು ಮಗಳು ಹುಟ್ಟಿದಳು. ವಾಮನರಾವ-ಪದ್ಮಾವತಿಯವರಿಗೆ ಲೀಲಾವತಿ ಎಂಬ ಹೆಣ್ಣು ಮಗಳು ಮತ್ತು ಅರವಿಂದ ಎಂಬ ಗಂಡು ಮಗು ಹೀಗೆ ಈರ್ವರು ಮಕ್ಕಳಿದ್ದರು.

ಸುಮಾರು ಎರಡು ದಶಕಗಳಿಗಿಂತಲೂ ಹೆಚ್ಚು ಕಾಲ ವಾಮನರಾಯರು ಕುಂದರ ನಾಡಿನಲ್ಲಿ ಹಾಗೂ ಪೆರ್ದೊರೆಯ ನಾಡಿನೆರಡರಲ್ಲಿಯೂ ನಡೆದ ಸ್ವಾತಂತ್ರ್ಯದ ಹೋರಾಟದಲ್ಲಿ ಧುಮುಕಿ ಅನೇಕ ನೋವು-ನಲಿವುಗಳನ್ನುಂಡು, ಶಕ್ತಿಹೀನರಾಗಿ ರೋಗ ಪೀಡಿತರಾದರು. ಎಷ್ಟು ಪ್ರಯತ್ನಿಸಿದರೂ ಇದರಿಂದ ಗುನಮುಖರಾಗದೇ ದುರ್ದೈವದಿಂದ ದಿನಾಂಕ :೧೪-೧೯-೧೯೪೫ ರಲ್ಲಿ ಜಮಖಂಡಿಯಲ್ಲಿ ಅಸುನೀಗಿದರು. ಈ ಮಹಾನ್ ಸ್ವಾತಂತ್ರ ಹೋರಾಟಗಾರನ ಅಗಲುವಿಕೆಯಿಂದ ದುಖಃತಪ್ತರಾದ ನಾಡಿನ ಅನೇಕ ಗಣ್ಯಾತಿಗಣ್ಯರಯ ಕಂಬನಿ ಮಿಡಿದರು.

ಪತ್ನಿ ಪದ್ಮಾವತಿ ಶೋಕ ಸಾಗರದಲ್ಲಿ ಮುಳುಗಿದರು. ಸಾವಿರಾರು ಜನ ಬಂದು ಅವರಿಗೆ ಸಾಂತ್ವನ ಹೇಳಿ ಅವಳ ಸಂಕಟವನ್ನು ಶಮನಗೊಳಿಸಲು ಯತ್ನಿಸಿದರು. ಪತಿಯ ನಿಧನದ ನಂತರ ಪದ್ಮಾವತಿಯವರು ಕೆಲವು ತಿಂಗಳು ರಾಜಕೀಯ ಚಟುವಟಿಕೆಗಳಿಂದ ದೂರ ಉಳಿದರು. ಆದರೆ ಕಾಲಮಾನ ಗತಿಸಿದಂತೆ ಮೆಲ್ಲಮೆಲ್ಲನೆ ಸಂಕಟದಿಂದ ಹೊರಗೆ ಬಂದರು. ಇದೇ ಸಮಯದಲ್ಲಿ ದಿಟ್ಟ ಸ್ವಾತಂತ್ರ್ಯ ಹೋರಾಟಗಾರೂ ಪ್ರಜಾಪರಿಷತ್ತಿನ ಸದಸ್ಯರೂ ಆದ ಅನಂತರಾವ ಸಾಬಡೆ ವಕೀಲರ ಕೊಲೆಯಾಯಿತು. (೧೯೪೭ ಮೇ-೨೫).

ಮೊದಲೇ ಪಾರತಂತ್ರ್ಯ ಅದರಲ್;ಲಿ ಸಂಸ್ಥಾನಿಕರ ಆಡಳಿತದಿಂದ ಜಮಖಂಡಿಯ ಜನ ಬೇಸತ್ತಿದ್ದರು. ಆದ್ದರಿಂದ ಜಮಖಂಡಿ ಸಂಸ್ಥಾನದ ಪ್ರಜಾಪರಿಷತ್ತಿನ ಈ ದಿಶೆಯಲ್ಲಿ ಇನ್ನೂ ಕಾರ್ಯಪ್ರವರ್ತವಾಗಬೇಕಾಗಿತ್ತು. ವಾನನರಾವರ ನಂತರದ ದಿನಗಳಲ್ಲಿ ಪರಿಷತ್ತಿಗೆ ಡಾ. ದಾಮುಅಣ್ಣಾ ಹುಲ್ಯಾಳಕರರು ಅಧ್ಯಕ್ಷರಾಗಿ, ಪದ್ಮಾವತಿಬಾಯಿಯವರು ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಆಗ ಸಂಸ್ಥಾನದ ಶಾಸನ ಸಭೆಗೆ ಚುನಾವಣೆಗಳು ನಡೆದವು. ಇದರಲ್ಲಿ ಪ್ರಜಾಪರಿಷತ್ತಿಗೆ ವಿರೋಧವಾದ ಪಕ್ಷ ಸರಕಾರಿ ಪಕ್ಷ.

**ಸಂಸ್ಥಾನಿ ಶಾಸನ ಸಭೆಯ ಸದಸ್ಯೆಯಾಗಿ ಪದ್ಮಾವತಿಬಾಯಿ:**

ಮಹಿಳಿಯರಿಗೆ ಕಾಯ್ದಿಟ್ಟ ಸ್ಥಾನಕ್ಕೆ ಪದ್ಮಾವತಿಯವರು ಪ್ರಜಾಪರಿಷತ್ತಿನ ವತಿಯಿಂದ ಸಂಸ್ಥಾನಿ ಶಾಸನ ಸಭೆಗೆ ಸ್ಪರ್ಧೆಗಿಳಿದುದರು. ಇವರ ವಿರುದ್ಧ ಸರಕಾರಿ ಪಕ್ಷದ ಅಭ್ಯರ್ಥಿಯಾಗಿ ಶ್ರೀಮತಿ ಲಕ್ಷ್ಮಿಬಾಯಿ ಅಪ್ಟೆಯವರು ನಿಂತಿದ್ದರು. ಶ್ರೀ

ಬಿ.ಡಿ ಜತ್ತಿ, ಅಡಿವಯ್ಯಾ ಮುಧೋಳ, ದಾಮುಅಣ್ಣಾ ಹುಲ್ಯಾಳಕರ ಮೊದಲಾದ ಮುಖಂಡರು ಪದ್ಮಾವತಿಯವರು ಈಗಾಗಲೇ ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡಿ ಜನಾದರಣೆಯನ್ನು ಪಡೆದವರಾಗಿದ್ದರು. ಹೀಗಾಗಿ ಸರಕಾರಿ ಪಕ್ಷದ ಅಭ್ಯರ್ಥಿಯನ್ನು ಸೋಲಿಸಿ ಹೆಚ್ಚಿನ ಮತಗಳ ಅಂತರದಿಂದ ಪದ್ಮಾವತಿಯವರು ಗೆಲುವು ಸಾಧಿಸಿದರು.

ಕ್ರಿ.ಶ ೧೯೪೨ ರಿಂದ ೧೯೪೮ರ ವರೆಗೆ ಸಂಸ್ಥಾನಿ ಶಾಸನ ಸಭೆಯು ಈಗಿನ ಪಿ.ಬಿ ಹೈಸ್ಕೂಲಿನ ಕಟ್ಟಡದಲ್ಲಿ ನಡೆಯುತ್ತಿತ್ತು. ಶ್ರೀ ಬಿ.ಡಿ ಜತ್ತಿಯವರು ಮುಖ್ಯ ಮಂತ್ರಿಯಾಗಿ ಆಯ್ಕೆಯಾಗಿದ್ದರು. ಶಾಸನ ಸಭೆಯಲ್ಲಿ ಪದ್ಮಾವತಿಯವರು ಬಹುಮುಖ ಪಾತ್ರವಹಿಸಿದರು. ಸಂಸ್ಥಾನದ ಆಡಳಿತ ಭಾಷೆ ಮರಾಠಿ, ಇದು ಬಹು ಸಂಖ್ಯಾತ ಹಳ್ಳಿಯ ಜನರಿಗೆ ತಿಳಿಯುತ್ತಿದ್ದಿಲ್ಲ. ಆದ್ದರಿಂದ ಸಾಮಾನ್ಯ ಜನರಿಗೆ ತಿಳಿಯಬೇಕಾದರೆ ಕನ್ನಡವು ಆಡಳಿತ ಭಾಷೆಯಾಗಬೇಕೆಂದು ಪ್ರತಿ ಸಲ ವಾದಿಸುತ್ತಿದ್ದರು. ಪ್ರಾಥಮಿಕ ಶಿಕ್ಷಣ, ಮಹಿಳೆಯರ ಕಲ್ಯಾಣದ ಬಗೆಗೆ ವಿವಿಧ ಪ್ರಶ್ನೆಗಳನ್ನು ಕೇಳಿ ಸಂಬಂಧಿಸಿದ ಅಧಿಕಾರಿಗಳ ಗಮನಸೆಳೆಯುತ್ತಿದ್ದರು.

**ಹರಿಜನ ವಿದ್ಯಾರ್ಥಿ ನಿಲಯ:**

ಇದು ಜಮಖಂಡಿಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇರುವ ಸ್ಥಳದಲ್ಲಿ ಹಿಂದೆ ಸಂಸ್ಥಾನಿಕರ ಆಡಳಿತ ಕಛೇರಿ ಇತ್ತು. ಅಲ್ಲಿ ಅಧಿಕಾರಿಗಳು, ಬಡ ಬ್ರಾಹ್ಮಣರಿಗೆ ನಿತ್ಯ ಮುಧುಕರಿ ಹಂಚುತ್ತಿದ್ದರು. ಅದು ಅಷ್ಟೊಂದು ಸಮರ್ಪಕವಾಗಿ ನಡೆಯುತ್ತಿರಲಿಲ್ಲ. ಅದನ್ನು ಅರಿತ ಪದ್ಮಾವತಿಬಾಯಿಯವರು ಅದೇ ಸ್ಥಳದಲ್ಲಿ ಹರಿಜನ ವಿದ್ಯಾರ್ಥಿಗಳಿಗಾಗಿ ನಿಲಯವನ್ನು ಸ್ಥಾಪಿಸಲು ನಿರ್ಧರಿಸಿದರು. ಮುಂದೆ ಕೆಲವೇ ದಿನಗಳಲ್ಲಿ ಇವರ ಅಪೇಕ್ಷೆಯಂತೆ ನಿಲಯದ ಕಾರ್ಯವು ಪ್ರಾರಂಭವಾಯಿತು. ಈ ವಿದ್ಯಾರ್ಥಿ ನಿಲಯಕ್ಕೆ ತಿಂಗಳಿಗೆ ರೂ.೫೦/– ಕೊಡಲು ಅಂದಿನ ಸಂಸ್ಥಾನಿಕರಾದ ಪರಶುರಾಮ ಭಾವು ಸಾಹೇಬರು ಒಪ್ಪಿದರು. ಇಷ್ಟರಿಂದ ಬಡ ಮಕ್ಕಳ ಹೊಟ್ಟೆಗೆ ಸಾಲುತ್ತಿರಲಿಲ್ಲ. ಆದ್ದರಿಂದ ಪದ್ಮಾವತಿಯವರು ಹಳ್ಳಿ ಹಳ್ಳಿಗೆ ಸಂಚರಿಸಿ ಸುಗ್ಗಿಯ ಕಾಲದಲ್ಲಿ ಸ್ಥಿತಿವಂತ ರೈತರಿಂದ ಧಾನ್ಯಗಳನ್ನು ಸಂಗ್ರಹಿಸಿ ಈ ನಿಲಯದ ಮಕ್ಕಳ ಊಟಕ್ಕಾಗಿ ಬಳಸುತ್ತಿದ್ದರು. ಕ್ರಿ.ಶ ೧೯೪೮ರಲ್ಲಿ ಪ್ರಾರಂಭವಾದ ಈ ನಿಲಯಕ್ಕೆ ಒಂದು ಸಮಿತಿಯನ್ನು ರಚಿಸಲಾಯಿತು. ಇದಕ್ಕೆ ಕೆಲ ಕಾಲ ಶ್ರೀ ಜತ್ತಿಯವರು ಶ್ರೀ ದಾಮುಅಣ್ಣಾ ಹುಲ್ಯಾಳಕರರು ಅಧ್ಯಕ್ಷರಾಗಿದ್ದರು. ಪದ್ಮಾವತಿಯವರು ಕೊನೆಯವರೆಗೂ ಕಾರ್ಯದರ್ಶಿಗಳಾಗಿದ್ದರು. ಮುಂದೆ ಕಾರಣಾಂತರಗಳಿಂದ ಕ್ರಿ.ಶ ೧೯೫೧ರಲ್ಲಿ ಈ ನಿಲಯವು ಮುಚ್ಚಿತು.

ಸಂಸ್ಥಾನದ ವಿಲೀನೀಕರಣದಿಂದ ಶಾಸನ ಸಭೆಯು ವಿಸರ್ಜಿತವಾದ ನಂತರ ಪದ್ಮಾವತಿಯವರ ಚಟುವಟಿಕೆಗಳಿಗೆ ಬಿಡುವೇ ಇರಲಿಲ್ಲ. ಮುಂಬೈ ವಿಧಾನ ಸಭೆಗೆ ಶ್ರೀ ಜತ್ತಿಯವರು ಮೊದಲನೇ ಸಲ ಸ್ಪರ್ಧಿಸಿದ್ದಾಗಿನಿಂದ ಹಿಡಿದು ಅವರು ಕರ್ನಾಟಕ ರಾಜ್ಯ ಸಚಿವ ಸಂಪುಟದಲ್ಲಿ ಇರುವ ತನಕ ನಡೆದ ಚುನಾವಣೆಗಳಲ್ಲಿ ಅವರ ಪರ ಪ್ರಚಾರ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ೧೯೫೧–೫೨ರಲ್ಲಿ ಇವರು ಜಮಖಂಡಿ ತಾಲೂಕ ಪಡಿತರ ಸಮಿತಿಯ ಹಾಗೂ ಪೊಲೀಸ್ ಇಲಾಖೆಯ ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ನಂತರದ ದಿನಮಾನಗಳಲ್ಲಿ ಇವರು ಹೆಚ್ಚಿನ ಕಾರ್ಯಗಳಲ್ಲಿ ಭಗವಹಿಸಲಿಲ್ಲ. ಇದಕ್ಕೆ ಇವರ ಮನೆತನದ ಆರ್ಥಿಕ ಸ್ಥಿತಿಯೇ ಕಾರಣ. ಭೂ ಸುಧಾರಣೆಯ ಕಾಯ್ದೆಯಿಂದ ನೂರಾರು ಎಕರೆಗೂ ಮೀರಿದ ಜಮೀನು ರೈತರ ಪಾಲಾಗಿದ್ದವು. ಸ್ವಾತಂತ್ರ್ಯದ ಆಂದೋಲನದ ಕಾಲದಲ್ಲಿ ಆದ ಜಪ್ತಿಯಿಂದ ಬಿದರಿಯಲ್ಲಿದ್ದ ಇವರ ಮನೆ ಬರಿದ್ದಾಗಿತ್ತು. ಹೀಗಾಗಿ ಪದ್ಮಾವತಿಯವರಿಗೆ ದಿನ ನಿತ್ಯ ಮನೆತನವನ್ನು ನಡೆಸುವುದೇ ಕಷ್ಟವಾಯಿತು. ತಮ್ಮೆಲ್ಲ ಆಸ್ತಿಯನ್ನು ಕಳೆದುಕೊಂಡು ನಿರ್ಗತಿಕರಾಗಿದ್ದರೂ ದೇಶ ಸೇವೆ ಮಾಡಿದ ಸಂತೃಪ್ತಿಯ ಭಾವ ಅವರಲ್ಲಿತ್ತು.

ಕ್ರಿ.ಶ ೧೯೫೬–೫೮ರಲ್ಲಿ ಕರ್ನಾಟಕದ ತುಂಬೆಲ್ಲ ವಿನೋಬಾ ಭಾವೆಯವರ ಭೂಧಾನ, ಗ್ರಾಮಧಾನದ ಸಲುವಾಗಿ ಪ್ರಚಾರ ಕೈಕೊಂಡಿದ್ದರು. ಉತ್ತರ ಕರ್ನಾಟಕದಲ್ಲಿ ನಡೆದ ಈ ಪ್ರಚಾರ ಪಾದಯಾತ್ರೆಯ ಆಂದೋಲನದಲ್ಲಿ ಪದ್ಮಾವತಿಯವರು ಭಾಗವಹಿಸಿದ್ದರು.

ಪದ್ಮಾವತಿಯವರು ತಮ್ಮ ಇಡೀ ಜೀವನವನ್ನೇ ದೇಶ ಸೇವೆಗಾಗಿ ಸವಿಸಿದರು. ಕೊನೆಗೆ ವೃದ್ಯಾಪ್ಯದಲ್ಲಿಯಾದರೂ ಸಂತೃಪ್ತಮಯ ಜೀವನವನ್ನು ಕಳೆಯುವ ಭಾಗ್ಯ ಇವರಿಗೆ ದೊರೆಯಲಿಲ್ಲ. ವಿಧಿಯ ಕೈವಾಡದಿಂದ ತನ್ನ ಮಗ, ಮಗಳು ಅಳಿಯ ಎಲ್ಲರನ್ನೂ ತಮ್ಮ ಮುಂದೆಯೇ ಕಳೆದುಕೊಂಡು ನಿರ್ಗತಿಕರಾದರು. ಆದರೂ ಇವರು ತಮ್ಮ ಮಾನಸಿಕ ನೆಮ್ಮದಿಯನ್ನು ಕಳೆದುಕೊಳ್ಳದೆ ಇದ್ದದ್ದು ಒಂದು ಪವಾಡವೇ ಸರಿ. ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿ ಇಂದಿನವರಿಗೆ ಕೇವಲ ಕುರುವುವೆನಿಸಬಲ್ಲ ವೀರ ಮಹಿಳೆ ಪದ್ಮಾವತಿಬಾಯಿಯು ಜಮಖಂಡಿಯ ಒಂದು ಮುರುಕು ಕೋಣೆಯಲ್ಲಿ ನಿಂತು ಅತ್ಯಂತ ಕಷ್ಟದ ದಿನಗಳನ್ನು ಕಳೆಯುತ್ತಾ ದಿನಾಂಕ ೩–೨–೧೯೯೨ರಲ್ಲಿ ವಿಧಿವಶರಾದರು.

**ಮಾನ ಸನ್ಮಾನಗಳು:**

೧. ಸ್ವಾತಂತ್ರ್ಯದ ರಜತ ಮಹೋತ್ಸವದ ವರ್ಷಾಚರಣೆಯ ಸಂದರ್ಭದಲ್ಲಿ ಅಂದರೆ ಅಗಸ್ಟ ೧೫–೧೯೭೨ರಲ್ಲಿ ತಾಮ್ರಪಟ ನೀಡಿ ಗೌರವಿಸಲಾಯಿತು.

೨. ಬೆಳಗಾವಿ ಜಿಲ್ಲೆಯ ಹುದಲಿ ಗ್ರಾಮದಲ್ಲಿ ಖಾದಿ ಕಾರ್ಯಕರ್ತರ ಸಮ್ಮೇಳನದಲ್ಲಿ ಗೌರವಿಸಲಾಯಿತು.
೩. ೧೯೮೨ರ ಸ್ವಾತಂತ್ರ ದಿನದಂದು ಬೆಳಗಾವಿಯಲ್ಲಿ ಆಗಿನ ರಾಜ್ಯ ಸಚಿವರಾಗಿದ್ದ ಶ್ರೀ ರಾಮಭಾವು ಪೋತದ್ದಾರರು ಸನ್ಮಾನಿಸಿದರು.
೪. ೧೯೮೮ರ ಸ್ವಾತಂತ್ರ್ಯ ದಿನದಂದು ಈಗಿನ ವಿಜಯಪುರದಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀ ಅ.ಅ ಶೆಟ್ಟಿಯವರು ಸನ್ಮಾನಿಸಿದರು.
೫. ೧೯೮೮ರ ಅಗಸ್ಟ ತಿಂಗಳಿನಲ್ಲಿ ಜಮಖಂಡಿಯ ಹೊಕ್ಕಬಾವಿ ಮೈದಾನದಲ್ಲಿ ಸ್ವಾತಂತ್ರ್ಯ ವೀರ ಹುತಾತ್ಮ ಅನಂತರಾವ್ ಸಾಬಡೆಯವರ ಪ್ರತಿಮೆ ಅನಾವರಣಗೊಳಿಸಿದರು.

ಗ್ರಂಥ ಋಣ:


೧. ಆಮಖಂಡಿ ಇತಿಹಾಸ ದರ್ಪಣ ಪ್ರೊ. ಎಸ್. ಬಿ ಮಟೋಳಿ
೨. ಕರ್ನಾಟಕ ಇತಿಹಾಸ ಡಾ. ಎನ್. ಆರ್. ಅಪರಾಂಜಿ
೩. ಬಿಜಾಪುರ – ಬಾಗಲಕೋಟ ಗೆಜೆಟಿಯರ್
೪. ವೀರ ವಾಮನರಾವ್ ದೇಸಾಯಿ (ಬಿದರಿ) ಶ್ರೀ ಮನೋಜ ಪಾಟೀಲ
೫. ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ ಶ್ರೀ ಶಿವರುದ್ರಸ್ವಾಮಿ ಎಚ್.ಎನ್

# ಸ್ವಾತಂತ್ರ್ಯ ಚಳುವಳಿಗೆ ಕರ್ನಾಟಕ ಮಹಿಳೆಯರ ಕೊಡುಗೆ

ರವಿ ಪಾಟೀಲ
ಸಹಾಯಕ ಪ್ರಾಧ್ಯಾಪಕರು
ಎಸೆ.ಎಸ್.ಸಿ.ಎ ಸರ್ಕಾರಿ ಪ್ರಥಮ ದರ್ಜೆ ಮಾಹಾವಿದ್ಯಾಲಯ, ಕೆ.ಕೆ.ಕೊಪ್ಪ
ತಾ/ಜಿಲ್ಲಾ: ಬೆಳಗಾವಿ
ರಾಜ್ಯ: ಕರ್ನಾಟಕ

**ಸಾರಾಂಶ:**

ಸ್ವಾತಂತ್ರ್ಯ ಚಳುವಳಿಗೆ ಕರ್ನಾಟಕ ಮಹಿಳೆಯರ ಕೊಡುಗೆಯನ್ನುಗುರುತಿಸುವಉದ್ದೇಶ ಈ ಲೇಖನದ್ದಾಗಿದೆ.ಏಕೆಂದರೆ ಭಾರತ ಸ್ವತಂತ್ರ್ಯ ಸಂಗ್ರಾಮದಲ್ಲಿಕರ್ನಾಟಕ ಮಹಿಳೆಯರ ಕೊಡುಗೆಅದರಲ್ಲೂ ಬ್ರಿಟಿಷರನ್ನು ಎದುರಿಸಿದ ರೀತಿಅಮೋಘವಾಗಿದೆ.ಈ ಲೇಖನದಲ್ಲಿಕರ್ನಾಟಕದ ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಪ್ರಮುಖ ಧೀರ ಮಹಿಳೆಯರ ಕುರಿತಾಗಿ ವಿವರಿಸಲಾಗಿದೆ.ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಅನುಭವಿಸಿದ ತೊಂದರೆಗಳನ್ನು ವಿಶ್ಲೇಷಿಸಲಾಗಿದೆ.ಮಹಿಳೆಯರು ಭಾಗವಹಿಸಿದ ಹಾಗೂ ಅವರ ಮುಂದಾಳತ್ವದಲ್ಲಿ ಜರುಗಿದ ಚಳುವಳಿಗಳ ಕುರಿತುಚರ್ಚಿಸಲಾಗಿದೆ.ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಶಸ್ತಿ–ಪುರಸ್ಕಾರ, ಸರಕಾರದಉನ್ನತ ಹುದ್ದೆಗಳನ್ನು ತಿರಸ್ಕರಿಸಿದ ಮಹಿಳೆಯರ ಕುರಿತಾಗಿ ವಿವರಿಸಲಾಗಿದೆ.ಮಹಿಳೆಯರು ಕನ್ನಡ ನಾಡಿನತುಂಬೆಲ್ಲಾ ಪ್ರವಾಸಕೈಗೊಂಡು ಸ್ವಾತಂತ್ರ್ಯ ಚಳುವಳಿಯ ಮತ್ತು ಖಾದಿ ಪ್ರಚಾರ ಮಾಡಿದಕುರಿತು ವಿವರಿಸಲಾಗಿದೆ.ಬ್ರಿಟಿಷ್ರ ಶಿಕ್ಷೆಗಳಿಗೆ ಯಾವ ಮಹಿಳೆಯರು ಹೆದರದೆ ಸ್ವಾತಂತ್ರ್ಯದ ಚಳುವಳಿಗಳಲ್ಲಿ ಭಾಗವಹಿಸಿದ ಕುರಿತಾಗಿ ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

**ಪೀಠಿಕೆ**

ಸ್ವಾತಂತ್ರ್ಯ ಸಂಗ್ರಾಮ ಚಳುವಳಿಯಲ್ಲಿ ಕರ್ನಾಟಕದ ಮಹಿಳೆಯರ ಪಾತ್ರ ಪ್ರಮುಖ ಮತ್ತುಅನನ್ಯವಾಗಿದೆ.ಕರ್ನಾಟಕದ ಸಣ್ಣದೊಂದು ಸಂಸ್ಥಾನ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧದಂಗೆಗೆಕರೆ ನೀಡಿತುಅದುವೇಕಿತ್ತೂರು ಸಂಸ್ಥಾನ ಅಲ್ಲಿ ಆಳ್ವಿಕೆ ಮಾಡುತ್ತಿದ್ದ ಮಹಿಳೆಯೇ ಕಿತ್ತೂರರಾಣಿಚೆನ್ನಮ್ಮ.ಭಾರತದಲ್ಲಿ ಬ್ರಿಟಿಷರ ವಿರುದ್ಧಒಂದು ಹೊಸ ಯುಗವನ್ನು ಪ್ರಾರಂಭಿಸಿದ ರಾಣಿಚೆನ್ನಮ್ಮನಿಗೆಅವರನ್ನು ಸೋಲಿಸಲು ಸಾಧ್ಯವಾಗಲಿಲ್ಲ. ಆದರೆ ಅವಳು ದೇಶದಲ್ಲಿ ಬ್ರಿಟಿಷರ ಆಳ್ವಿಕೆ ವಿರುದ್ಧ ಹೋರಾಡಲು ಅನೇಕ ಮಹಿಳೆಯರಿಗೆ ಸ್ಫೂರ್ತಿ ನೀಡಿದಳು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪುರುಷರ ಪರಿಶ್ರಮಒಂದುರೀತಿಯಲ್ಲಿ ಬ್ರಿಟಿಷ್ ಸರ್ಕಾರವನ್ನು ಧಿಕ್ಕರಿಸುತ್ತ ಹೋದರೆ, ಮಹಿಳೆಯರ ಪಾತ್ರ ಮತ್ತೊಂದುರೀತಿಯಲ್ಲಿ ಸರ್ಕಾರವನ್ನು ಭಯಗೊಳಿಸಿತು.ಪತಿಯು ಸಂಗ್ರಾಮದಲ್ಲಿಧುಮುಕಿ ಶ್ರಮಜೀವನಅನುಭವಿಸುತ್ತಿದ್ದಾಗ, ಸತಿಯೂ ಸಹಕರಿಸಿ ಭೋಗಜೀವನಕ್ಕೆ ಬದಲಾಗಿತ್ಯಾಗಜೀವನವನ್ನು ಸ್ವೀಕರಿಸಿದಳು.ಮನೆಯ ಒಳಗೂ ಹೊರಗೂಇಂತಹ ವಾತಾವರಣ ಹಬ್ಬಿ ಹರಡಿದಾಗ ಮಹಿಳೆಯರು ಅಡುಗೆ ಮನೆಯ ಸೆರೆತೊರೆದು, ಸೆರೆಮನೆಯಕಠಿಣ ಶಿಕ್ಷೆಯ ವಾಸವನ್ನುಮನಃಪೂರ್ವಕವಾಗಿ ಅನುಭವಿಸಿದರು.ಬ್ರಿಟಿಷರು ಬೆಚ್ಚಿ ಬೀಳುವಂತೆ ನಮ್ಮ ನಾಡಿನ ಮಹಿಳೆಯರು ಬ್ರಿಟಿಷರು ವಿರುದ್ಧ ಹೋರಾಡಿದರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಕರ್ನಾಟಕದ ಮಹಿಳೆಯರು:

ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದಲ್ಲಿಕಂಡುಬರುವ ಹೋರಾಟಗಾರ್ತಿಯರಲ್ಲಿ ಕೆಲವರು ಸುಶಿಕ್ಷಿತ ಮಧ್ಯಮ ವರ್ಗದ ಮನೆತನದವರು, ಕೆಲವರು ಹೆಸರಾಂತರಾಜಕೀಯಧುರೀಣರಿಗೆ ಸಂಬಂಧ ಪಟ್ಟವರು, ಇನ್ನು ಕೆಲವರು ಹಿಂದುಳಿದ ವರ್ಗದವರುಆಗಿದ್ದರು.ಅವರಲ್ಲಿ ಪ್ರಮುಖರಾದವರು.

**೧. ಉಮಾಬಾಯಿಕುಂದಾಪುರ:**

ಸ್ವಾತಂತ್ರ್ಯ ಹೋರಾಟಗಾರ್ತಿಯರ ಗುಂಪು ಭಗಿನೀ ಮಂಡಲದ ಸ್ಥಾಪಕಿ, ನಾ. ಸು.ಹರ್ಡೀಕರ್‌ಅವರು ಸ್ಥಾಪಿಸಿದ ಹಿಂದೂಸ್ತಾನಿ ಸೇವಾ ದಳದ ಮಹಿಳಾ ವಿಭಾಗದ ಮುಖ್ಯಸ್ಥೆಯಾಗಿದ್ದರು.ತನಗೆ ಬರಬಹುದಾಗಿದ್ದ ಪ್ರಶಸ್ತಿ–ಪುರಸ್ಕಾರ, ಸರಕಾರದಉನ್ನತ ಹುದ್ದೆಎಲ್ಲವನ್ನೂ ತಿರಸ್ಕರಿಸಿದ ಅಪರೂಪದ ಮಹಿಳೆ. ಖಾದಿಯ ಬಗ್ಗೆ ಪ್ರಚಾರ ಮಾಡಲು ಆರಂಭಿಸಿದರು.ಮನೆಮನೆಗೆ ತೆರಳಿ ಮಹಿಳೆಯರನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಪ್ರೇರೇಪಿಸಿದರು.ಚಳುವಳಿಗೆ ಸಂಬಂಧಿಸಿದಂತೆ ಹಲವಾರು ನಾಟಕಗಳನ್ನು ಬರೆದು ಪ್ರದರ್ಶಿಸಿದರು.ಉಮಾಬಾಯಿಯವರು, ನಾ. ಸು.ಹರ್ಡೀಕರ್‌ಅವರು ಸ್ಥಾಪಿಸಿದ್ದ ತಿಲಕ್‌ಕನ್ಯಾ ಶಾಲೆಯಉಸ್ತುವಾರಿ ವಹಿಸಿಕೊಂಡರು.ಇವರುರಾಜ್ಯದಾದ್ಯಂತ ಪ್ರವಾಸಕೈಗೊಂಡು ಸುಮಾರು ೧೫೦ಕ್ಕಿಂತ ಹೆಚ್ಚು ಮಂದಿ ಮಹಿಳೆಯರನ್ನು, ಅದರಲ್ಲೂ ಮನೆಯಲ್ಲಿ ಕುಳಿತ ವಿಧವೆಯರನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುವಂತೆ ಮಾಡಿದರು.

ಉಮಾಬಾಯಿಕುಂದಾಪುರ, ಕೃಷ್ಣಬಾಯಿ ಪಣಜೀಕರ್, ೧೯೩೨ ರಉಪ್ಪಿನ ಸತ್ಯಾಗ್ರಹಕ್ಕೆ ಬೆಂಬಲ ಕೋರಿ, ಧಾರವಾಡಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರಯಾತ್ರೆಕೈಗೊಂಡರು.ಅವರು ಮಾಡಿದಉಗ್ರ ಭಾಷಣಗಳಿಗಾಗಿ ಅವರನ್ನು ಬಂಧಿಸಿ ಯರವಾಡಾ ಸೆರೆಮನೆಗೆದೂಡಲಾಯಿತು.ಆರು ತಿಂಗಳ ಜೈಲು ಶಿಕ್ಷೆ, ೩೦೦ ರೂ.ದಂಡ ವಿಧಿಸಲಾಯಿತು. ಸೆರೆಮನೆಯಿಂದ ಬಿಡುಗಡೆ ಹೊಂದಿದ ಮೇಲೆ ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡರು.ಸ್ತ್ರೀ ಶಿಕ್ಷಣಗೋಸ್ಕರ ಕಸ್ತೂರಿಟ್ರಸ್ಟ್ ಮತ್ತುಗಾಂಧೀಟ್ರಸ್ಟ್ ಗಳಿಗೆ ಹಣ ಸಂಗ್ರಹಕೂಡಾ ಮಾಡಿದರು.

**೨. ಸುಬ್ಬಮ್ಮಜೋಯಿಸ್:**

ಮೈಸೂರಿನಲ್ಲಿ ಸುಬ್ಬರಾಯನಕೆರೆ ಮೈದಾನದಲ್ಲಿರಾಷ್ಟ್ರಧ್ವಜ ಹಾರಿಸಬಾರದೆಂಬ ಕಾನೂನು ಬಹುಕಾಲ ಜಾರಿಯಲ್ಲಿತ್ತು.ಪ್ರತಿ ತಿಂಗಳೂ ಒಬ್ಬರು ಬಾವುಟ ಹಾರಿಸಿ ಸೆರಮನೆ ಸೇರುತ್ತಿದ್ದರು.ಈ ಬಾರಿ ಆ ಹೊಣೆಗಾರಿಕೆ ಸುಬ್ಬಮ್ಮಜೋಯಿಸ್‌ಅವರ ಮೇಲೆ ಬಿತ್ತು.ಸುಬ್ಬಮ್ಮತಮ್ಮಅತ್ತೆಯವರನ್ನುಕರೆದುಕೊಂಡು ಮಗುವನ್ನೆತ್ತಿಕೊಂಡು ಪ್ರತಿಬಂಧಕಾಜ್ಞೆ ಮುರಿಯಲು ಸುಬ್ಬರಾಯನಕೆರೆ ಮೈದಾನಕ್ಕೆ ಬಂದರು.ಸುಬ್ಬಮ್ಮಅವರು ಕಂಕುಳಲ್ಲಿದ್ದ ಮಗುವನ್ನುಅತ್ತೆಯವರಕೈಗಿತ್ತುಧ್ವಜಾರೋಹಣ ಮಾಡಿದರು.ಪೊಲೀಸರು ಸುಬ್ಬಮ್ಮನವರನ್ನುದಸ್ತಗಿರಿ ಮಾಡಲು ಮುಂದೆ ಬಂದರು.ಸುಬ್ಬಮ್ಮಅತ್ತೆಗೆ ನಮಸ್ಕಾರ ಮಾಡಿ ಮಗುವನ್ನುಅವರಿಂದ ಪಡೆದು ಪೋಲೀಸ್‌ಠಾಣೆಗೆ ಹೋದರು.ಸುಬ್ಬಮ್ಮನವರಿಗೆಆರು ತಿಂಗಳ ಸೆರೆಮನೆಯ ಶಿಕ್ಷೆ ವಿಧಿಸಲಾಯಿತು.

೩. ಕಮಲಾದೇವಿ ಚಟ್ಟೋಪಾಧ್ಯಾಯ:

ಮಹಾತ್ಮಗಾಂಧೀಜಿಯವರನ್ನು ಸತ್ಯಾಗ್ರಹದಲ್ಲಿ ಮಹಿಳೆಯರನ್ನು ಸೇರಿಸುವಂತೆ ಒತ್ತಾಯಿಸಿದವರು ಕಮಲಾದೇವಿ.ಸ್ವಾತಂತ್ರ್ಯ ಬರುವವರೆಗೂಕಮಲಾದೇವಿಯವರು ಹಲವಾರು ಬಾರಿಜೈಲಿಗೆ ಹೋಗಿದ್ದರು, ಅದು ಕೆಲವೊಮ್ಮೆಗಾಂಧೀಜಿಯವರ ಹೆಸರು ಹೇಳುತ್ತಾ ಉಪ್ಪು ಮಾರಿದ್ದಕ್ಕಾಗಿ ಮತ್ತು ಕೆಲವೊಮ್ಮೆಕ್ವಿಟ್‌ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ.೧೯೪೨ರಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಅಧ್ಯಕ್ಷೆಯಾಗುವ ಮೂಲಕ ಮಹಿಳೆಯರಿಗೆ ಹೆರಿಗೆರಜೆ ನೀಡುವುದರಜತೆಗೆಅವರ ವೇತನವಿಲ್ಲದದುಡಿಮೆಯನ್ನು ನಿರ್ಲಕ್ಷಿಸದಂತೆ ಮಾತನಾಡಿದರು.೧೯೪೨ ರ ಭಾರತ ಬಿಟ್ಟುತೊಲಗಿ ಸತ್ಯಾಗ್ರಹದಲ್ಲಿಇವರು ಭಾಗವಹಿಸಿದ್ದರಿಂದ ಇವರಿಗೆಐದು ವರ್ಷ ಸೆರೆಮನೆವಾಸ ಅನುಭವಿಸಿದರು.

**೪. ಬಸವ್ವ:**

೧೯೩೦ರ ಉಪ್ಪಿನ ಸತ್ಯಾಗ್ರಹ ನಡೆದ ಸಂದರ್ಭದಲ್ಲಿ ಬಸವ್ವ ಎಂಬ ಸಾಮಾನ್ಯ ಹೆಂಗಸು ಉಪ್ಪಿನ ಪೊಟ್ಟಣಗಳನ್ನು ಗದಗದಲ್ಲಿ ಬಹಿರಂಗವಾಗಿ ಹರಾಜು ಮಾಡಿದಳು.ಆಕೆಯನ್ನೂ ಮತ್ತುಉಪ್ಪಿನ ಪೊಟ್ಟಣಗಳನ್ನು ಕೊಂಡವರನ್ನೂ ಪೋಲೀಸರು ಬಂಧಿಸಿದರು.ರಟ್ಟೆ ಹಿಡಿದು ಎಳೆಯಲು ಯತ್ನಿಸಿದ ಪೋಲೀಸನಿಗೆ ಆಕೆ ಛೀಮಾರಿ ಹಾಕಿದಳು. ನ್ಯಾಯಾಧೀಶರ ಮುಂದೆ ನಿಲ್ಲಿಸಿದಾಗ 'ಹೆಣ್ಣುಮಗಳು ಅಂತಆರು ತಿಂಗಳು ಶಿಕ್ಷೆ

ವಿಧಿಸಿದ್ದೇನೆ' ಎಂದು ನ್ಯಾಯಾಧೀಶರು ತಿಳಿಸಿದಾಗ ಸಾಹೇಬರ, ನೀವು ಉಪಕಾರ ಮಾಡೋದು.ನನಗೆ ಬೇಕಾಗಿಲ್ಲ. ನಿಮ್ಮಕಾಯ್ದೆಯಲ್ಲಿ ಏನು ಹೇಳ್ಯೆಯ್ತೋ ಅಷ್ಟು ಶಿಕ್ಷೆ ನನಗೆ ಕೊಟ್ಟುಬಿಡಿ' ಅಂದಳು.

**೫. ಬಳ್ಳಾರಿ ಸಿದ್ದಮ್ಮ:**

ಇವರುಉನ್ನತ ಶಿಕ್ಷಣವನ್ನು ಗಳಿಸದಿದ್ದರೂ ಸಹ ಎಸ್. ನಿಜಲಿಂಗಪ್ಪ, ಟಿ. ಸಿದ್ಧಲಿಂಗಯ್ಯ ಅಂತವರ ಪ್ರಭಾವಕ್ಕೊಳಗಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿತೊಡಗಿಕೊಂಡರು.ಒಮ್ಮೆ ಮೈಸೂರುಜಿಲ್ಲೆಗುಂಡ್ಲುಪೇಟೆತಾಲ್ಲೂಕಿನಲ್ಲಿ ಪ್ರಚಾರಕಾರ್ಯಕ್ಕೆಯಶೋಧರಾದಾಸಪ್ಪ ಮತ್ತು ಎಂ.ಎನ್, ಜೋಯಿಸ್‌ಜೊತೆಗೂಡಿ ಹೋಗಿ ಭಾಷಣ ಮಾಡುತ್ತಿದ್ದಾಗ ಆ ಭಾಗದ ಸಾಹುಕಾರರಕಡೆಯವರುಒಂದುದಪ್ಪಕಲ್ಲೂತೂರಿದರು.ಆ ಕಲ್ಲು ಬಳ್ಳಾರಿ ಸಿದ್ದಮ್ಮನವರ ಹಣೆಗೆ ಬಡಿಯಿತು.ಧಾರಾಕಾರವಾಗಿರಕ್ತ ಸುರಿಯಲಾರಂಭಿಸಿತು. ಸಿದ್ದಮ್ಮ ಅವರು ಭಾಷಣ ನಿಲ್ಲಿಸಲಿಲ್ಲ. 'ಭಾರತಾಂಬೆಯ ಬಿಡುಗಡೆಗೆ ನಾವು ಹೋರಾಡುತ್ತಿದ್ದೇವೆ. ಈ ಹೋರಾಟದಲ್ಲಿ ನಮ್ಮ ಪ್ರಾಣವೇ ಹೋದರೂ ನಾವು ಹಿಮ್ಮೆಟ್ಟುವುದಿಲ್ಲ. ದೇಶದ ಬಿಡುಗಡೆಗಾಗಿ ನನ್ನರಕ್ತಚೆಲ್ಲಲೂ ಸಿದ್ಧ' ಎಂದುಗುಡುಗಿದರು.ಯಶೋಧರಮ್ಮಅವರುತಾವುಉಟ್ಟಿದ್ದ ಹೊಸ ರೇಷ್ಮೆಸೀರೆಯ ಸೆರಗನ್ನೇ ಹರಿದು ಬಳ್ಳಾರಿ ಸಿದ್ದಮ್ಮನವರ ಹಣೆಗೆ ಬ್ಯಾಂಡೇಜ್‌ಕಟ್ಟಲು ಹೋದಾಗ ಬಳ್ಳಾರಿ ಸಿದ್ದಮ್ಮ ಕಟ್ಟುವುದು ಬೇಡಎಂದರು.೧೯೩೮ ರಲ್ಲಿ ಶಿವಪುರದಲ್ಲಿ ಜರುಗಿದಧ್ವಜ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.ಅಲ್ಲಿನಕಾರ್ಯಕ್ರಮದ ಮೂರನೇ ದಿನ ಧ್ವಜಾರೋಹಣ ಮಾಡಿ ಪೋಲೀಸ್ರಿಂದ ದಸ್ತಗಿರಿಯಾದರು.ಇವರು ಮೈಸೂರು ಸಂಸ್ಥಾನದಲ್ಲಿದಸ್ತಗಿರಿಯಾದ ಮೊದಲ ಮಹಿಳೆ.

**೬. ಗೌರಮ್ಮ:**

ಚಳವಳಿಗಳ ಪಟ್ಟಿಯನ್ನು ಗಮನಿಸಿದಾಗ ಬಹುಶಃ ಕರನಿರಾಕರಣ ಚಳವಳಿಗೇ ಪ್ರಥಮ ಸ್ಥಾನ ಕೊಡಬೇಕು.ಸರದಾರ ವೆಂಕಟರಾಮಯ್ಯನವರ ಪತ್ನಿಗೌರಮ್ಮನವರುಕರನಿರಾಕರಣ ಚಳವಳಿಯ ನಾಯಕಿಯಾಗಿದ್ದರು.ಕರ್ನಾಟಕದಲ್ಲಿ ನಡೆದ ಈ ಚಳವಳಿ ಅತ್ಯಂತ ಯಶಸ್ವಿಯಾಗಲು ಗೌರಮ್ಮನವರ ವೀರತ್ಯಾಗಗಳೇ ಪ್ರಮುಖಕಾರಣ.

**೭. ತಾಂಡೂರು ಸುನಂದಮ್ಮ:**

ತಾಂಡೂರು ಸುನಂದಮ್ಮನವರುತ್ಯಾಗ ವೈರಾಗ್ಯನಿಧಿಯಾಗಿದೇಶಸೇವೆಯನ್ನೇತಮ್ಮ ಉಸಿರಾಗಿಸಿಕೊಂಡು ರಾಷ್ಟ್ರಕ್ಕಾಗಿಜೀವ ಸವೆಸಿದರು. ದೇಶಸೇವೆ ನಿಮಿತ್ತವೇದಾಂಪತ್ಯಜೀವನ ಬೇಡವೆಂದು ಬ್ರಹ್ಮಚಾರಿಣಿಯಾಗಿದ್ದರು.ಮನೆ ಆಸ್ತಿ ಸ್ವಜನರುಎಲ್ಲವನ್ನೂತೊರೆದುಓಡಾಡುತ್ತಾ ಕೆಲಸ ಮಾಡಿದರು.ಸಮಾಜಆಡುತ್ತಿದ್ದ ವ್ಯಂಗ್ಯ ನುಡಿಗಳನ್ನು ಲೆಕ್ಕಿಸದೆ ಚಳುವಳಿಗಳಲ್ಲಿ ತೊಡಗಿಕೊಂಡರು.

**೮. ಕುಂತಲಾ ಸೇತುರಾವ:**

ಇವಳು ಮಹಾರಾಣಿಕಾಲೇಜಿನ ವಿದ್ಯಾರ್ಥಿಯಾಗಿದ್ದು, ೧೯೪೨ ರ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಳು.ಹಾಗೆಯೇಕರಪತ್ರ ಹಂಚುವುದರಲ್ಲಿ ತೊಡಗಿಕೊಂಡಿದ್ದಳು.ಇವಳು ವಿದ್ಯಾರ್ಥಿನಿಯಾಗಿದ್ದಾಗ ಆ ಕಾಲೇಜಿನ ಪ್ರಾಂಶುಪಾಲರ ಹೆಸರು ಮಿಸಸ್ ನಿಖಲ್ಸ್‌ಆಂಗ್ಲ ಮಹಿಳೆ.ಇವಳು ವಿದ್ಯಾರ್ಥಿನಿಯರಿಗೆ ಚಳುವಳಿಗಳಲ್ಲಿ ಭಾಗವಹಿಸದಂತೆ ಭಾಗವಹಿಸಿದರೆ ನಿಮ್ಮನ್ನು ಅಮಾನತುಗೊಳಿಸಲಾಗುವುದು, ನೀವು ಜೈಲು ಸೇರುತ್ತಿರಿ, ನಿಮ್ಮಜೀವನ ಹಾಳಾಗುತ್ತದೆ ಎಂತಲ್ಲಾ ತಿಳಿಸುತ್ತಿದ್ದಳು.ಆದರೆಕುಂತಲಾಅವರತಾಯಿಇವರೇನಾದರೂಕರಪತ್ರಅಥವಾ ಸ್ವತಂತ್ರ್ಯ ಹೋರಾಟದಲ್ಲಿ ಭಾಗವಹಿಸದೇಅನಾರೋಗ್ಯಅಂತಾ ಮಲಗಿದರೆ, ಇವರನ್ನು ಬೈಯುತ್ತಿದ್ದಳು ಜೈಲಿನಲ್ಲಿ ಸ್ವತಂತ್ರ್ಯ ಹೋರಾಟಗಾರರುರಾಗಿ ಬೀಸುತ್ತಿದ್ದಾರೆ, ನೀನು ಮಲಗಿಕೊಂಡಿದ್ದಿಯಾಅಂತಾ ಮಗಳನ್ನು ಬೈಯುತ್ತಿದ್ದಳು.ಕುಂತಲಾಅವರು ಸೆರೆಯಾಗಿಜೈಲಿನಲ್ಲಿಯೇ ಹೆಚ್ಚು ಭಾಗ ಕಳೆದಳು.

**೯. ಮೀನಾಕ್ಷಿಗೋವಿಂದಭಟ್:**

೧೯೪೨ ರಲ್ಲಿ ಮಹಾರಾಣಿಕಾಲೇಜು ವಿದ್ಯಾರ್ಥಿನಿಯಾಗಿದ್ದು, ಕ್ವಿಟ್‌ಇಂಡಿಯಾ ಚಳುವಳಿ, ಕರ ಪತ್ರ ವಿತರಣೆಚಟುವಟಿಕೆಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸುತ್ತಾಳೆ.

**೧೦. ಕೆ. ಕಾಮಾಕ್ಷಮ್ಮಾ:**

ನಮ್ಮರಾಷ್ಟ್ರೀಯ ನಾಯಕರು ಮಾಡುವ ಭಾಷಣಗಳು ಎಲ್ಲರಿಗೂಅರ್ಥವಾಗಬೇಕೆಂದರೆ ಮೊದಲು ಹಿಂದಿ ಎಲ್ಲರಿಗೂ ಬರಬೇಕುಆದ್ದರಿಂದಇವರು ಹಿಂದಿ ಭಾಷಾ ಪ್ರಚಾರವನ್ನುಕೈಗೊಂಡರು.ಹಿಂದಿ ಭಾಷಾ ಪ್ರಮಾಣ ಪತ್ರವನ್ನುಗಾಂಧೀಜಿಯವರಿಂದ ಪಡೆದುಕೊಂಡಂತಹ ಮಹಿಳೆ ಇವರಾಗಿದ್ದಾರೆ.ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ಧ್ವಜ ಹಾರಿಸಿ ಪೋಲೀಸ್ರಿಂದ ಬಂಧಿಸಲ್ಪಡುತ್ತಾಳೆ.ನಂತರ ಮ್ಯಾಜಿಸ್ಟ್ರೇಟ್ ಮುಂದೆಇವಳನ್ನು ನಿಲ್ಲಿಸುತ್ತಾರೆ.ಆಗ ಮ್ಯಾಜಿಸ್ಟ್ರೇಟ್ ಹೇಳುತ್ತಾರೆ ನೀನು ಒಂದು ಪತ್ರವನ್ನು ಬರೆದುಅದರಲ್ಲಿ ನನ್ನ ಹಾಗೂ ನನ್ನ ಮಗುವನ್ನು ಬಿಡಿ ಅಂತಾ ಬರೆದುಕೊಡು ನಾನು ನಿನ್ನ ಮತ್ತು ನಿನ್ನ ಮಗುವನ್ನು ಬಿಡುಗಡೆ ಮಾಡುತ್ತೇನೆಅಂತಾ ಹೇಳಿದಾಗ, ಅದಕ್ಕೆಕಾಮಾಕ್ಷಮ್ಮಾಒಪ್ಪದೇ ಮ್ಯಾಜಿಸ್ಟ್ರೇಟ್‌ಕೊಟ್ಟಂತಹ ಶಿಕ್ಷೆಯನ್ನು ಅನುಭವಿಸುತ್ತಾಳೆ.

ಉಪಸಂಹಾರ:

ಒಟ್ಟಾರೆಯಾಗಿಕನಾಟಕದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಸಕ್ರೀಯವಾಗಿ ಪಾಲ್ಗೊಂಡಿದನ್ನು ಗಮನಿಸಬಹುದು.ಹೋರಾಟದಜೊತೆಜೊತೆಗೆಉಮಾಬಾಯಿಯವರು ಹಿಂದೂಸ್ತಾನ ಸೇವಾದಳದ ಮಹಿಳಾ ವಿಭಾಗದ ಮುಖ್ಯಸ್ಥೆಯಾಗಿಕಾರ್ಯನಿರ್ವಹಿಸಿದ್ದು, ಹೋರಾಟಕ್ಕೆ ವಿಧವಾ ಮಹಿಳೆಯರ ಸಂಘಟನೆ, ಸರ್ಕಾರದ ಬಿರುದುಗಳನ್ನು ತಿರಸ್ಕರಿಸಿದ್ದು ಗಮನಾರ್ಹವಾಗಿದೆ.ಶಿವಪುರದ ಧ್ವಜ ಸತ್ಯಾಗ್ರಹಕ್ಕೆ ಪ್ರೇರಣೆ ನೀಡಿದಯಶೋದಮ್ಮ ಹಾಗೂ ಮೈಸೂರುಧ್ವಜ ಸತ್ಯಾಗ್ರಹದಲ್ಲಿ ಸುಬ್ಬಮ್ಮಜೋಯಿಸ್‌ರವರುಧ್ವಜಾರೋಹಣ ಮಾಡಿ ಮಗುವಿನೊಂದಿಗೆ ಜೈಲುವಾಸ ಅನುಭವಿಸಿದ ಸಂಗತಿಯು ವಿಶೇಷವಾಗಿದೆ.ಅದರುತೆ ಕಮಲಾಬಾಯಿ ಚಟ್ಟೋಪಾಧ್ಯಾಯಅವರುಗಾಂಧೀಯವರೊಂದಿಗೆ ಸತ್ಯಾಗ್ರಹಗಳಲ್ಲಿ ಭಾಗಿಯಾಗಿದ್ದು ಅಖಿಲ ಭಾರತ ಮಹಿಳಾ ಸಮ್ಮೇಳನದ ಅಧ್ಯಕ್ಷರಾಗಿದ್ದು ಅಂದಿನ ಮಹಿಳೆ ನಿರ್ವಹಿಸಿದ ಪಾತ್ರಗಳನ್ನು ಪ್ರತಿಬಿಂಬಿಸುತ್ತದೆ.ಸಾಮಾನ್ಯರಾದ ಬಸವ್ವಗೌರಮ್ಮನಂತಹವರ ಹೋರಾಟಗಳು ಸ್ಫೂರ್ತಿದಾಯಕವಾಗಿವೆ. ಹೀಗೆ ಕರ್ನಾಟಕದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಸಕ್ರೀಯವಾಗಿ ಪಾಲ್ಗೊಂಡಿದ್ದನ್ನುಕಾಣಬಹುದು.

**ಗ್ರಂಥಋಣ:**


೧. ಗಾಯತ್ರಿಎನ್., ೧೯೯೮. ಮಹಿಳಾ ಚಳವಳಿಯ ಮಜಲುಗಳು, ಬೆಂಗಳೂರು: ನವಕರ್ನಾಟಕ ಪ್ರಕಾಶನ,
೨. ಸೂರ್ಯನಾಥ್‌ಕಾಮತ್, ೧೯೯೩. **"**ಕರ್ನಾಟಕದ ಸಂಕ್ಷಿಪ್ತಇತಿಹಾಸ**"**, ಬೆಂಗಳೂರು: ಎಂ.ಸಿ.ಸಿ. ಪಬ್ಲಿಕೇಷನ್ಸ್.
೩. ಡಾ. ಎಸ್. ಎನ್. ಶಿವರುದ್ರಸ್ವಾಮಿ ೨೦೧೪. **"**ಕರ್ನಾಟಕದ ಪ್ರೌಢಇತಿಹಾಸ ಮತ್ತು ಸಂಸ್ಕೃತಿ**"**, ಮೈಸೂರು: ಪೌರಾಸ್ತ್ಯ ಪ್ರಕಾಶನ
೪. ಫಾಲಾಕ್ಷ, ೨೦೦೯. **"**ಕರ್ನಾಟಕಇತಿಹಾಸ**"**, ತುಮಕೂರು: ಶಶಿ ಪ್ರಕಾಶನ
೫. ಕೆ. ಎನ್. ಎ., ೨೦೧೨.**"**ಸಮಗ್ರ ಭಾರತದಇತಿಹಾಸ**"**. ಬೆಂಗಳೂರು: ಸುಭಾಷ ಪಬ್ಲಿಕೇಷನ್ಸ್.

# ಪ್ರಜಾಪ್ರಭುತ್ವದಲ್ಲಿರಾಜಕೀಯ ಪಕ್ಷಗಳ ಪಾತ್ರ

ಲೇಖಕರು ; ಪ್ರೊ.ಜೀವನ
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ
ಅಭಯರತ್ನ ಕಲಾ ಪದವಿ ಮಹಾವಿದ್ಯಾಲಯ, ಕಲಬುರಗಿ

## ರಾಜಕೀಯ ಪಕ್ಷಗಳ ಪರಿಚಯ

ಒಂದುರಾಜಕೀಯ ಪಕ್ಷವುಒಂದು ನಿರ್ದಿಷ್ಟ ಗುಂಪಿನಿಂದ ಮಾಡಲ್ಪಟ್ಟಿದೆಅವರು ಸರ್ಕಾರವನ್ನು ನಡೆಸಲು ಪರಸ್ಪರ ವಿರುದ್ಧ ಸ್ಪರ್ಧಿಸಲುಒಟ್ಟುಗೂಉತ್ತಾರೆ, ಅದುದೇಶದ ಅಗತ್ಯಗಳನ್ನು ಉತ್ತಮವಾಗಿ ನೋಡಿಕೊಳ್ಳಲು ಸಾಧ್ಯವಾಗುತ್ತದೆ.

ರಾಜಕೀಯ ಪಕ್ಷಗಳು ಮೂಲತಹದೇಶವನ್ನು ಮುನ್ನಡೆಸಲುಜನರಗುಂಪನ್ನಹೊಂದಿವೆ ಎಂದುಖಚಿತಪಡಿಸಿಕೊಳ್ಳಲು ರಚಿಸಲಾಗಿದೆ, ಅವರು ಹೊಂದಿರುವ ಸರ್ಕಾರದ ಬಗ್ಗೆ ಪರಿಣಾಮಕಾರಿ ಮತ್ತು ಹೆಚ್ಚು ವಿಕಸನಗೊಂಡ ನಿರ್ಧಾರವನ್ನು ಮಾಡಲುಇದುದೇಶದ ನರಿಗೆ ನಿರ್ದಿಷ್ಟಆಯ್ಕೆಯನ್ನುಒದಗಿಸುತ್ತದೆಎಂದು ನಮೂದಿಸಬಾರದುಇದಲ್ಲದೆಚುನಾವಣೆಯಲ್ಲಿಗೆಲ್ಲುವ ಹಂಬಲವು ಇತರರಾಜಕೀಯ ಪಕ್ಷಗಳನ್ನು ಉತ್ತಮ ಪ್ರದರ್ಶನ ನೀಡಲು ಮತ್ತುತಮ್ಮ ಪ್ರತಿಸ್ಪರ್ಧಿಗಳಿಗಿಂತ ಹಚ್ಚು ಮತಗಳನ್ನು ಸಂಗ್ರಹಿಸಲು ಪ್ರೇರೇಪಿಸುತ್ತದೆ.

ಹಾಗಾಗಿ ದೇಶದ ಒಳಿತಿಗಾಗಿ ರಾಜಕೀಯ ಪಕ್ಷಗಳ ಕಾರ್ಯಗಳು ಖಂಡತವಾಗಿಯೂ ಬಹಳ ಮುಖ್ಯಎಂದು ಹೇಳಬಹುದು. ಹೆಚ್ಚಿನ ಮತಗಳನ್ನು ಪಡೆಯುವ ಪಕ್ಷವುಚುನಾವಣೆಯಲ್ಲಿಗೆಲ್ಲುತ್ತದೆ, ಅಂದರೆ ಭಾರತದಲ್ಲಿ ಬಹುಮತ ಪಡೆದ ಪಕ್ಷವು ಸರ್ಕಾರವನ್ನು ನಡೆಸುತ್ತದೆ. ಕೆಲವೊಮ್ಮೆಒಂದು ಪಕ್ಷವು ಸಂಸತ್ತಿನಲ್ಲಿಅಥವಾರಾಜ್ಯ ಶಾಸಕಾಂಗ ಸಭಯಲ್ಲಿಗಮನಾರ್ಹ ಸಂಖ್ಯೆಯ ಸ್ಥಾನಗಳನ್ನು ಗಳಿಸಿದ್ದಾಗ ಅವರ ಸಮ್ಮಿಶ್ರ ಸರ್ಕಾರವನ್ನು ಆರಿಸಿಕೊಳ್ಳುತ್ತಾರೆ.

ಅದಾಗ್ಯೂ ಇಂದಿನ ರಾಜಕೀಯ ವಾತಾವರಣದಲ್ಲಿರಾಜಕೀಯ ಪಕ್ಷಗಳು ಸರ್ಕಾರವನ್ನು ನಡೆಸುವಾಗಅಧಿಕಾರದಗಮನಾರ್ಹ ಪಾಲನ್ನು ಹೊಂದುವ ಲಾಭಕ್ಕಾಗಿಓಡುತ್ತವೆ. ಇದು ಮತದಾರರಿಗೆಧ್ವನಿಯನ್ನು ಹೊಂದಲು ಮತ್ತುದೇಶದಲ್ಲಿ ಸಾಮಾನ್ಯ ಆಸಕ್ತಿಗಳು ಮತು ಗುರಿಗಳನ್ನು ಉತ್ತೇಜಸಲು ಅನುವು ಮಾಡಿಕೊಡಿತ್ತದೆ.ಭಾರತದಲ್ಲಿನರಾಜಕೀಯ ಪಕ್ಷಗಳ ಪ್ರಮುಖ ಪಾತ್ರವೆಂದರೆ ಹಲವಾರುರಾಜಕೀಯ ನೀತಿಗಳು ಮತ್ತು ಕಾರ್ಯಸೂಚಿಗಳನ್ನು ರಚಿಸಲಾಗಿದೆ, ಜನರಕಲ್ಯಾಣಕ್ಕಾಗಿ ಮತ್ತುದೇಶದ ಒಳಿತಿಗಾಗಿ ನಿಗದಿಪಡಿಸಲಾಗಿದೆಎಂದು ಖಚಿತಪಡಿಕೊಳ್ಳುವುದು.ಆದ್ದರಿಂದ ಪ್ರತಿಯೊಂದುರಾಜಕೀಯ ಪಕ್ಷವುಜನರುತಮ್ಮ ನೀತಿಗಳ ಹಕ್ಕುಗಳನ್ನು ನಂಬುತ್ತಾರೆ ಮತ್ತುಅವರಿಗೆ ಮತ ಹಾಕುವುದನ್ನು ಖಚಿತಪಡಿಕೊಳ್ಳಲು ಪ್ರಯತ್ನಿಸುವ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ.

ವಿಶಾಲ ದೃಷ್ಟಿಕೋನದಿಂದ ನೋಡಿದರೆರಾಜಕೀಯ ಪಕ್ಷದ ಸಹಾಯದಿಂದದೇಶದ ಅಗತ್ಯತೆಗಳು ಮತ್ತು ಅವಶ್ಯಕತೆಗಳ ಬಗ್ಗೆ ಜನರುತಮ್ಮ ಸಂದೇಶಗಳನ್ನು ಸರ್ಕಾಕ್ಕೆ ಕಳುಹಿಸಲು ಸಾಧ್ಯವಾಗುತ್ತದೆ.ಪ್ರತಿಯೊಂದುರಾಜಕೀಯ ಪಕ್ಷವು ಕೆಲವು ಪ್ರಮುಖ ಅಂಶಗಳನ್ನು ಹೊಂದಿರಬೇಕು.

- **ನಾಯಕ**ಪಕ್ಷ ಮಾಡುವಎಲ್ಲಾ ಚಟುವಟಿಕೆಗಳಿಗೆ ಈ ವ್ಯಕ್ತಿಗೆ ಪ್ರಾಥಮಿಕಜವಬ್ದಾರಿಇರುತ್ತದೆ.
- **ಸಕ್ರಿಯ ಸದಸ್ಯರು**ತಮ್ಮ ನಾಯಕನನ್ನಆಯ್ಕೆ ಮಾಡುವಜವಾಬ್ದಾರಿಯನ್ನು ಹೊದಿರುವಜನರು.
- **ಅನುಯಾಯಿಗಳು** ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸುವದು, ಸ್ವಯಂ ಸೇವಕ, ದೇಣಿಗೆ ಮತ್ತು ಮತ ನೀಡುವಜನರು.

## ವ್ಯಾಖ್ಯಾನ

ರಾಜಕೀಯ ಪಕ್ಷವೆಂದರೆಅಧಿಕಾರಕ್ಕಾಗಿಓಡುವ ಮತ್ತು ಸರ್ಕಾರವನ್ನುಅಧಿಕಾರದಲ್ಲಿಟ್ಟುಕೊಳ್ಳವ ಜನರ ಗುಂಪು, ಸಮಾಜಕ್ಕಾಗಿಎಲ್ಲರಿಗೂ ಪ್ರಯೋಜನವಾಗುವ ನೀತಿಗಳು ಮತ್ತು ಯೋಜನೆಗಳನ್ನು ಅವರುಒಪ್ಪುತ್ತಾರೆ. ವಿಭಿನ್ನಜನರುತಮಗೆಯಾವುದು ಒಳ್ಳೆಯದು ಎಂಬುದರ ಬಗ್ಗೆ ವಿಭಿನ್ನ ನಂಬಿಕೆಗಳನ್ನು ಹೊಂದಿರುವುದರಿಂದಎಲ್ಲಾ ಪಕ್ಷಗಳು ತಮ್ಮ ನೀತಿಗಳು ಇತರರಿಗಿಂತಉತ್ತಮವೆಂದುಜನರಿಗೆ ಮನವರಿಕೆ ಮಾಡಲು ಪ್ರಯತ್ನಿಸುತ್ತೆವೆ.

ಚುನಾವಣೆಯಲ್ಲಿಜನಬೆಂಬಲವನ್ನು ಗಳಿಸುವ ಮೂಲಕ ಈ ಆಲೋಚನೆಗಳನ್ನು ಕಾರ್ಯರೂಪಕ್ಕೆತರಲುಅವರು ಬಯಸುತ್ತಾರೆ, ಪರಿಣಾಮವಾಗಿರಾಜಕೀಯ ಪಕ್ಷಗಳು ಸಮಾಜದಲ್ಲಿ ಮೂಲಭೂತರಾಜಕೀಯ ವ್ಯತ್ಯಾಸಗಳನ್ನು ಸಂಕೇತಿಸುತ್ತವೆ. ಅವರು ಸಮುದಾಯದಒಂದು ಭಾಗವಾಗಿರುವುದರಿಂದ ಪಕ್ಷಗಳು ಪಕ್ಷಪಾತವನ್ನು ಒಳಗೊಳ್ಳುತ್ತವೆ. ಪರಿಣಾಮವಾಗಿರಾಜಕೀಯ

ಪಕ್ಷದಗುರುತನ್ನುಅದು ಪ್ರತಿನಿಧಿಸುವ ಬಣ ಅದು ಬೆಂಬಲಿಸುವ ನೀತಿಗಳು ಮತ್ತುಅದುರಕ್ಷಿಸುವ ಹಿತಾಸಕ್ತಿಗಳಿಂದ ನಿರ್ಧರಿಸಲ್ಪಡುತ್ತದೆ.

**ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳ ಪಾತ್ರ**

ಭಾರತೀಯರಾಜಕೀಯ ಪಕ್ಷಗಳ ಪಾತ್ರ ಮತ್ತುಚೌಕಟ್ಟನ್ನು ನಾವು ವಿಶೇಷಿಸು ಮೊದಲು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪಕ್ಷಗಳ ಪ್ರಾಮುಖ್ಯತೆಯನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಬೇಕು.ಸಂಸದೀಯ ಪ್ರಜಾಪ್ರಭುತ್ವವುಒಮ್ಮತ ಮತ್ತುಚರ್ಚೆಯಆದಾರದ ಮೇಲೆ ಸರ್ಕಾರದಒಂದುರೂಪವಾಗಿದೆ. ಪ್ರಮುಖ ನೀತಿ ವಿಷಯಗಳಲ್ಲಿ ನಾಗರಿಕರುಒಪ್ಪುವುದಿಲ್ಲ ರಾಜಕೀಯ ಪಕ್ಷಗಳು ಜನರುತಮ್ಮ ವಿಭಿನ್ನ ದೃಟಿಕೋನಗಳನ್ನು ಶಾಂತಿಯುತವಾಗಿ ವ್ಯಕ್ತಪಡಿಸಲು ಸಂಘಟಿತ ಮಳಿಗೆಗಳಾಗಿ ಕಾರ್ಯನಿರ್ವಹಿಸುತ್ತವೆ. ಸಂಘಟಿತರಾಜಕೀಯ ಪಕ್ಷಗಳ ಅನಪಸ್ಥಿತಿಯಲ್ಲಿ ವಿಚಹಾರಗಳ ಸಂಘರ್ಷವನ್ನು ಬಂದೂಕುಗಳ ಘರ್ಷಣೆಯಿಂದ ಬದಲಾಯಿಸಬಹುದುದಂಗೆಯು ದಿನದಆದೇಶವಾಗಿರಬಹುದು. ವಾಸ್ತವವಾಗಿ ರಾಜಕೀಯ ಪಕ್ಷಗಳು ಹೋಗದಿದ್ದರೆ ಸರ್ಕಾರಗಳು ಅಸ್ಥಿರವಾಗುತ್ತವೆ ಮತ್ತುಅವರ ನೀತಿಗಳು ಗೊಂದಲಕ್ಕೊಳಗಾಗುತ್ತವೆ.

ರಾಜಕೀಯ ಪಕ್ಷಗಳು ತೊರೆದರೆಯಾವುದೇ ಸರ್ಕಾರವು ನಿರಂಕುಶಾಧಿಕಾರಿಯಾಗುವುದಿಲ್ಲಿ ಅಥವಾಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲ. ಪ್ರತಿಪಕ್ಷಗಳು ದುರುದ್ದೇಶಪೂರಿತ ಶಾಸನದಲ್ಲಿ ನ್ಯೂನತೆಗಳನ್ನು ಬಹಿರಂಗಪಡಿಸಲುಕುಶಲೋಪರಿ ನಡಿಸಿದಾಗ ಸಂಸದೀಯ ಸರ್ವಾಧಿಕಾರವೂ ಸೀಮಿತವಾಗಿದೆ.

ಭಾರತದಜನಸಂಖ್ಯೆ ಬೆಳೆಯುತ್ತಲ ಇದೆ ಮತ್ತುಇದರ ಪರಿಣಾಮವಾಗಿ ಪ್ರತಿ ಬಾರಿದೇಶವು ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿದಾಗ ಮತದಾರರ ಸಂಖ್ಯೆಯು ಬೆಳೆಯುತ್ತದೆ.ರಾಜಕೀಯ ಪಕ್ಷಗಳು ಉನಾವಣೆಯನ್ನು ಸುಗುಮಗೊಳಿಸವಲ್ಲಿ ಪ್ರುಖ ಪಾತ್ರವಹಿಸುತ್ತದೆ. ಚುನಾವಣೆಗೂ ಮುನ್ನಆಯಾರಾಜಕೀಯ ಪಕ್ಷಗಳಿಂದ ಅಭ್ಯರ್ಥಿಗಳನ್ನು ನಾಮನಿರ್ದೇಶನ ಮಾಡಲಾಗುತದೆ.ಇದುಚನಾವಣೆಗೆ ಮುಂಚೆಯೇ ಮತದಾರರು ವೈಯಕ್ತಿಕ ಅಭ್ಯರ್ಥಿಗಳ ಮೌಲ್ಯ ಮತ್ತು ವಿವಿಧರಾಜಕೀಯ ಪಕ್ಷಗಳ ಕಾರ್ಯಕ್ರಮಗಳನ್ನು ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ.ಇದಲ್ಲದೆ, ರಾಜಕೀಯ ಪಕ್ಷಗಳು ಬಡಆದರೆಅರ್ಹ ಅಭ್ಯರ್ಥಿಗಳಿಗೆ ಸ್ಪರ್ಧಿಸಲು ಅವಕಾಶ ನೀಡುತ್ತವೆಏಕೆಂದರೆ ಪಕ್ಷದಧನಸಹಾಯ ಮತ್ತು ಸಂಘಟನೆಯುಅವರಿಗೆ ಸಹಾಯ ಮಾಡುತ್ತದೆ.

ರಾಜಕೀಯಪಕ್ಷಗಳು ನಿಸ್ಸಂದೇಹವಾಗಿ ಪ್ರಜಾಪ್ರಭುತ್ವದ ಸಾರಗಮನಾರ್ಹ ಸಂಖ್ಯೆಯ ವಿಮರ್ಶಕರು ಮಾನವ ಸ್ವಭಾವದಲ್ಲಿ ವಿವಿಧ ನ್ಯೂನತಗಳಿಂದಾಗಿ ರಾಜಕೀಯ ಪಕ್ಷಗಳ ಬಗ್ಗೆ ಕಠಿಣ ಟೀಕೆಗಳನ್ನು ಮಾಡಿದ್ದಾರೆ. ಸೈದಾಂತಿಕಆಧಾರದ ಮೇಲೆ ರಚಿಸಲಾದರಾಜಕೀಯ ಪಕ್ಷಗಳ ಪ್ರಾಮುಖ್ಯತೆಯನ್ನು ಪಕ್ಷರಹಿತ ಪ್ರಜಾಪ್ರಭುತ್ತವದ ಪ್ರತಿಪಾದಕರುಅಥವಾ ವರ್ಗರಹಿತ ಮತ್ತು ಸ್ಥಿತಿಯಿಲ್ಲದ ಸಮಾಜದ ಪ್ರತಿಪಾಕರುಅತಿಐಆಗಿ ಹೇಳಲಾಗುವುದಿಲ್ಲ.

ರಾಜಕೀಯ ಪಕ್ಷಗಳಿಗೆ ಪಯಾಯವಾಗಿಅವರಅಂತಿಮ ಹೇಳಿಕೆಗಳಲ್ಲಿ ಯಾವಾಗಲೂ ಪಕ್ಷಗಳು ಇರುತ್ತವೆಯೇಎಂದು ಟೀಕಿಸಿದ ಬ್ರೈಸ್ಅವರನ್ನು ನಾವು ಒಪ್ಪಬಹುದು. ಅವರಿಲ್ಲದೆಅಂತಹ ಸರ್ಕಾರಗಳು ಹೇಗೆ ಕಾರ್ಯನಿರ್ವಹಿಸುತ್ತವೆಎಂಬುದನ್ನುಯಾರು ಪ್ರದರ್ಶಿಸಿಲ್ಲ. ಕೇವಲ ರಾಜಕೀಯ ಪಕ್ಷಗಳ ಪರಿಕಲ್ಪನೆಯನ್ನುಕಟುವಾಗಿ ವಿರೋಧಿಸಿದ ಗಖಂ ಸ್ಥಾಪಕ ಪಿತಾಮಹರುತಮ್ಮಜೀವಿತಾವಧಿಯಲ್ಲಿರಾಜಕೀಯ ಪಕ್ಷಗಳ ಹೊರಹೊಮ್ಮುವಿಕೆಯನ್ನುಕಂಡಿದ್ದಾರೆಎಂಬುದು ಗಮನಿಸಬೇಕಾದ ಸಂಗತಿಅದರಕಾರಣದಿಂದಾಗಿಗಖಂ ರಾಜಕೀಯ ಪಕ್ಷಗಳು ಹುಟ್ಟಿಕೊಂಡವುಇದು ಹೊಸ ಕಾನೂನು ಬೇಳವಣಿಗೆಯಾಗಿದೆ.

ಅಂತೆಯೆ ಸಂಸದೀಯ ಪ್ರಜಾಪ್ರಭುತ್ವದ ಜನ್ಮಸ್ಥಳವಾದ ಯುಕೆ ನಲ್ಲಿ ಪಕ್ಷದ ವ್ಯವಸ್ಥೆಯುಯುಕೆ ನ ಅಲಿಖಿತ ಸಂವಿಧಾನದ ಕಾರ್ಯಚಟುವಟಿಕೆಗಳಿಗೆ ವರದಾನವಾಗಿದೆಎಂದು ಸಾಬೀತಾಗಿದೆ.ಇಂಗ್ಲಿಷ ವಿರೋಧಕ್ಕೆಅಧಿಕೃತ ನಾಯಸಮ್ಮತತೆಯನ್ನು ನೀಡಲಾಯಿತುಏಕೆಂದರೆಇದು ಸರ್ಕಾರದ ಸಮರ್ಥಕಾರ್ಯನಿರ್ವಹಣೆಗೆಅಗತ್ಯವೆಂದು ಪರಿಗಣಿಸಲ್ಪಟ್ಟಿತು. ವಿರೋಧ ಪಕ್ಷದ ನಾಯಕರುನ್ನುಕ್ಯಾಬಿನೆಟ್ ಸ್ಥಾನಮಾನಕ್ಕೆಏರಿಸಲಾಯಿತು. ಇಂಗ್ಲೆಂಡ್ ಪ್ರಧಾನಿಗೆತಮ್ಮ ಪತ್ನಿಗಿಂತ ವಿರೋಧ ಪಕ್ಷದ ನಾಯಕನ ಬಗ್ಗೆ ಹೆಚ್ಚು ತಿಳಿದಿದೆ ಎಂದು ವರದಿಯಾಗಿದೆ.ಅದರ ಸುಪ್ರಸಿದ್ಧ ಪಕ್ಷದರಚನೆಯಿಂದಾಗಿ ಬ್ರಿಟಿಷ್ ಪ್ರಜಾಪ್ರಭುತ್ವವನ್ನು ಮಾದರಿ ಸಂಸದೀಯ ಪ್ರಜಾಪ್ರಭುತ್ವವೆಂದು ಪರಿಗಣಿಸಲಾಗಿದೆ.

ರಾಜಕೀಯ ಪಕ್ಷಗಳ ಪ್ರಾಮುಖ್ಯತೆಯಿಂದಾಗಿಎರಡನೆಯದುರಜಾಪ್ರಭುತ್ವಕ್ಕೆ ಸಮಾನಾರ್ಥಕಎಂದು ಭಾವಿಸಲಾಗಿದೆ **"ರಾಜಕೀಯ ಪಕ್ಷಗಳಿಲ್ಲದ ಪ್ರಜಾಪ್ರಭುತ್ವವು ಪೈಲಟ್ಇಲ್ಲದ ಹಡಗಿನಂತೆಅಥವಾಚುಕ್ಕಾಣಿಇಲ್ಲದದೋಣಿಯಂತೆ"** ಎಂದು ನೆಹರು ಹೇಳಿದರು.

**ರಾಜಕೀಯ ಪಕ್ಷಗಳ ಕಾರ್ಯಗಳು**

ರಾಜಕೀಯ ಪಕ್ಷಕ್ಕೆ ಹಲವಾರು ಕಾರ್ಯಗಳಿವೆ, ರಾಜಕೀಯ ಪಕ್ಷವು ಮೊದಲ ಸ್ಥಾನದಲ್ಲಿರಾಜಕೀಯ ಪಕ್ಷವೆಂದು ಪರಿಗಣಿಸಲು ಈ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ನಾವು ಈ ಕೆಲವು ಕಾರ್ಯಗಳನ್ನು ಮತ್ತುರಾಜಕೀಯ ಪಕ್ಷದ

ವೈಶಿಷ್ಟಗಳನ್ನು ಪಟ್ಟಿ ಮಾಡಲಿದ್ದೇವೆಇದರಿಂದ ನಿವು ಅವಗಳನ್ನ ಉತ್ತಮರೀತಿಯಲ್ಲಿಅರ್ಥ ಮಾಡಿಕೊಳ್ಳಬಹುದಾದ ಈ ಕಾರ್ಯಗಳು ಸರಿವೆ.

**<u>ಚುನಾವಣೆಗೆ ನೆರವಾಗುವ ನಿರ್ದಿಷ್ಟ ಅಭ್ಯರ್ಥಿಗಳನ್ನು ಹಾಕುವುದು</u>**

ಭಾರತದಲ್ಲಿ ಪಕ್ಷದಉನ್ನತ ನಾಯಕರುತಮ್ಮ ಪಕ್ಷಗಳಿಗೆ ಅಭ್ಯರ್ಥಿಯನ್ನುಆಯ್ಕೆ ಮಾಡುವಜವಾಬ್ದಾರಿಯನ್ನು ಹೊಂದಿರುತ್ತಾರೆ, ಆದರೆಯುಎಸ್ಎ ನಲ್ಲಿ ಸದಸ್ಯರು ಮತ್ತು ಪಕ್ಷದ ಬೆಂಬಲಿಗರುತಮ್ಮ ಅಭ್ಯರ್ಥಿಗಳನ್ನು ಆಯ್ಕೆ ಮಾಡಬಹುದುಒಂದು ಪಕ್ಷವು ವಿಭಿನ್ನ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ.ಮತದಾರರುಅವರು ಬೆಂಬಲಿಸುವ ನೀತಿಗಳು ಮತ್ತು ಕಾರ್ಯಕ್ರಮಗಳಿಗೆ ಮತ ಹಾಕುವ ಆಯ್ಕೆಯನ್ನು ಹೊಂದಿರುತ್ತಾರೆ.

ಈ ಚುನಾವಣೆಯಲ್ಲಿಗೆಲ್ಲದ ಸರಕಾರರಚಿಸಲು ಅವಕಾಶ ಸಿಗದ ಪಕ್ಷಗಳನ್ನು ವಿರೋಧ ಪಕ್ಷಎಂದುಕರೆಯಲಾಗುತ್ತದೆ.ಈ ಪಕ್ಷಗಳು ಸಾಮಾನ್ಯವಾಗಿ ಸರ್ಕಾರದಕಾರ್ಯನಿರ್ವಹಣೆಯ ಬಗ್ಗೆ ವಿಭಿನ್ನ ಅಭಿಪ್ರಾಯಗಳು ಮತ್ತು ದೃಷ್ಟಿಕೋನಗಳನ್ನು ಹೊಂದಿವೆ.

ಒಂದುರಾಜಕೀಯಪಕ್ಷವು ಹೊಂದಿರುವ ಮತ್ತೊಂದು ನಿರ್ಣಾಯಕಕಾರ್ಯವೆಂದರೆ ನಮ್ಮದೇಶದಲ್ಲಿಜನರ ಅಭಿಪ್ರಾಯಗಳನ್ನ ರೂಪಿಸುವುದು, ಇಲ್ಲಿಕಾರ್ಯವು ವಿವಿಧಒತ್ತಡ ಗುಂಪುಗಳನ್ನು ರಚಿಸುತ್ತಿದೆ, ಇದುಜನರ ಸಮಸ್ಯೆಗಳು ಮತ್ತು ಆಸೆಗಳನ್ನು ಪರಿಹರಿಸಲು ವಿವಿಧ ಚಳುವಳಿಗಳನ್ನು ಪ್ರಾರಂಭಿಸಲು ಸಹಾಯ ಮಾಡುತ್ತದೆ.

**<u>ಸರ್ಕಾರದ ವಿವಿಧಕಲ್ಯಾಣ ಯೋಜನೆಗಳಿಗೆ ರಾಜಕೀಯ ಪಕ್ಷಗಳಿಗೂ ಪ್ರವೇಶವಿದೆ</u>**

ಭಾರತದಲ್ಲಿನರಾಜಕೀಯ ಪಕ್ಷಗಳ ಪ್ರಮುಖ ಲಕ್ಷಣವೆಂದರೆದೇಶವು ಸರಿಯಾದಕಲ್ಯಾಣ ಯೋಜನೆಗಳನ್ನು ಹೊಂದಿವೆ ಎಂದುಖಚಿತಪಡಿಸಿಕೊಳ್ಳುವುದು.

**<u>ರಾಜಕೀಯ ಪಕ್ಷಗಳ ಅವಶ್ಯಕತೆ</u>**

ವಿಭಿನ್ನರಾಜಕೀಯ ಪಕ್ಷಗಳಿಲ್ಲದಿದ್ದರೆ ಆದೇಶದಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿಲ್ಲ, ಇದುದಶದಜನರಿಗೆತಮ್ಮ ಸರ್ಕಾರವನ್ನುರಚಿಸಲುಯಾವುದೇ ಶಕ್ತಿಯನ್ನು ನೀಡುವುದಿಲ್ಲ. ದೇಶವನ್ನುನಿರ್ವಹಿಸುವ ಜವಾಬ್ದಾರಿಇರುವುದಿಲ್ಲವಾದ್ದರಿಂದಇದುರಾಷ್ಟ್ರದ ಮೇಲೆ ಏಕ ಶಕ್ತಿಯ ಆಡಳಿತಕ್ಕೆ ಕಾರಣವಾಗುತ್ತದೆ.ಈ ಏಕ ಶಕ್ತಿಯು ವಿವಿಧ ಸಂಸ್ಕೃತಿಗಳು, ಧರ್ಮಗಳು ನಂಬಿಕೆಗಳು ಮತ್ತುಆರ್ಥಿಕ ಸ್ಥಾಮಾನಗಳ ಜನರನ್ನು ಒಳಗೊಂಡಿರುವ ಸಂಪೂರ್ಣ ಸಾರ್ವಜನಿಕರ ಮೇಲೆ ತನ್ನ ಸಿದ್ಧಾಂತಗಳನ್ನು ಹರುತ್ತದೆ.

**<u>ಸಾಹಿತ್ಯ ವಿಮರ್ಶೆ</u>**

ಫ್ರೆಡೆರಿಕ್ ವೈಟ್( ಭಾರತದಲ್ಲಿರಾಜಕೀಯ ವಿಕಸನ ೪ ವಿದೇಶಿ ಎಫ್ಎಫ್ ೨೨೩ ೧೯೨೬ ) ಈ ಲೇಖನದಲ್ಲಿ ಲೇಖಕರು ಭಾರತದಲ್ಲಿರಾಜಕೀಯವು ಹೇಗೆ ವಿಕಸನಗೊಳ್ಳುತ್ತದೆ ಎಂಬುದರ ಬಗ್ಗೆ ನಿರ್ದಿಷ್ಟಗಮನವನ್ನು ನೀಡಿದರು. ಇದು ೧೯೧೯ ರಿಂದ ಭಾರತ ಸರ್ಕಾರದಕಾರ್ಯವನ್ನುಅಭಿವೃದ್ಧಿಪಡಿಸುವ ಹಲವು ಮುಖಗಳಾಗಿ ವಿಂಗಡಿಸಲಾಗಿದೆ, ಎರಡನೆಯ ಮಹಾಯುದ್ಧದ ಸಮಯದಲ್ಲಿ ಮತ್ತು ಸ್ವಾತಂತ್ರ್ಯದ ಮೊದಲು ಮತ್ತು ಸ್ವಾತಂತ್ರ್ಯದ ನಂತರ ಬ್ರಿಟಿಷರು ಹೇಗೆ ಸಂಸದೀಯ ವ್ಯವಸ್ಥೆಯನ್ನು ವಿಕಸನಗೊಳಿಸಿದರು ಹಾಗೆ ಸಮಾಜದಲ್ಲಿ ವೈವಿಧ್ಯತೆಯನ್ನು ನೋಡಿದ ನಂತರ ಬಹು ಪಕ್ಷದತಂತ್ರವನ್ನುಅಭಿವೃದ್ಧಿಪಡಿಸಿದರು,ಭಾಷೆ,ಧರ್ಮ ಮತ್ತುಇತರೆ ಅಂಶಗಳು.

"ಃಡಿಣಥಿಜ ಃಣಾಜಟಿಆ ಆಜ ಒಫಡಣಾಣಚಿ" (ಭಾರತದಲ್ಲಿ ಮರುವಿಂಗಡಣೆ ಮತ್ತುರಾಜಕೀಯಏಕೀಕರಣ, ಅಔಒಕ.ಕಔಐ.ಸ್ಟಡ್.೨೭೯ ೧೯೭೮) ಈ ಲೇಖನದಲ್ಲಿ ಲೇಖಕರು ಚರ್ಚಿಸಿದ್ದಾರೆ, ಸಾಮಾನ್ಯವಾಗಿರಾಜಕೀಯಏಕೀಕರಣವುರಾಜಕೀಯಏಕೀಕರಣದಕಡೆಗೆಅಗತ್ಯವಾದಆರಂಭಿಕ ಹಂತವಾಗಿಕಂಡುಬರುತ್ತದೆ.ಪ್ರಗತಿ ಮತ್ತುರಾಷ್ಟೀಯಒಕ್ಕೂಟ ಭಾರತದ ಭಿನ್ನಜಾತಿಯಜನತೆಯನ್ನು ಏಕ ಏಕೀಕೃತರಾಷ್ಟ್ರೀಯಚೌಕಟ್ಟಿನಲ್ಲಿಒಗ್ಗೂಡಿಸುವಕಾಂಗ್ರೆಸ್ ಪಕ್ಷದ ಪ್ರಯತ್ನಗಳು ಯಶಸ್ವಿಯಾಗಿದೆಯೇ ಅಥವಾಇಲ್ಲವೇಎಂಬುದನ್ನು ಭಾರತೀಯರಾಜಕೀಯದ ವಿದ್ಯಾರ್ಥಿಗಳು ಬಹಳ ಹಿಂದಿನಿಂದಲೂ ವಿವಾದಿಸಿದ್ದಾರೆ.

ಮೈರಾನ್ ವೀನರ್ಇಂಡಿಯಾಸ್ ಪೊಲಿಟಿಕಲ್ ಫ್ಯೂಚರ್, ೧೨ ವರ್ಲ್ಡ್ ಪೋಲ್ ೧೦೩ (೧೯೫೯) ಈ ಲೇಖನದಲ್ಲಿ ಲೇಖಕರು ಭಾರತದರಾಜಕೀಯದ ಭವಿಷ್ಯವನ್ನು ಚರ್ಚಿಸಿದ್ದಾರೆ.ನಮ್ಮ ಭಾರತೀಯರಾಷ್ಟ್ರೀಯಅಥವಾ ಪ್ರಾದೇಶಿಕ ರಾಜಕೀಯ ಪಕ್ಷಗಳು ಅನುಸರಿಸುತ್ತಿರುವಅಂತರ ಪಕ್ಷದ ಕುಸಿತವನ್ನು ಸಂಶೋಧನೆಯುತೋರಿಸುತ್ತದೆ.ನಮ್ಮರಾಜಕೀಯ ವ್ಯವಸ್ಥೆಯುಅಸ್ಪಷ್ಟತೆ ಮತ್ತುಅಸ್ಪಷ್ಟ ಸಂಸ್ಥೆಗಳಿಂದ ತುಂಬಿದೆ.ಇದರಲ್ಲಿ ಭ್ರಷ್ಟಾಚಾರವುಉತ್ತುಂಗದಲ್ಲಿದೆ ಮತ್ತುಅದಕ್ಕಾಗಿಯೇ ನಮ್ಮ ಸಂಪನ್ಮೂಲಗಳ ಹೆಚ್ಚಿನ ಭಾಗವು ಚುನಾಣೆಗಳಲ್ಲಿ ವ್ಯರ್ಥವಾಗುತ್ತದೆ.

“ಉಜ್ಮಾ ಬುರ್ಕಿ (ಭಾರತದಲ್ಲಿ ಪ್ರಾದೇಶಿಕ ರಾಜಕೀಯ ಪಕ್ಷಗಳು, ಅಕಾಲಿಕದಳ ಮತ್ತುಆಐಎ–೦ಖಂಆಐಎ, ೧೪ ಫ್ಲೆಚರ್ಎಫ್ ವರ್ಲ್ಡ ೧೨೮ ೧೯೯೦) ಈ ಲೇಖನದಲ್ಲಿ ಲೇಖಕರು ಸ್ವಾತಂತ್ರ್ಯದ ನಂತರ ಪ್ರಾದೇಶಿಕ ಪಕ್ಷಗಳು ಅಳವಡಿಸಿಕೊಂಡ ಪ್ರತಿತಂತ್ರಗಳು ಮತ್ತು ವಿಧಾನಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ.೧೯೪೭ರಲ್ಲಿಗ್ರೇಟ್ ಬ್ರಿಟನ್ ನಿಂದ ಭಾರತ ಸ್ವತಂತ್ರವಾದಾಗಅದು ನಾಯಕರು ಭಾಷಾಜನಾಂಗೀಯ ಮತ್ತುಧಾಮಿಕ ಭಿನ್ನತೆಗಳಿಂದ ವಿಭಜಿಸಲ್ಪಟ್ಟಜನಸಂಖ್ಯೆಯಿಂದಆಧುನಿಕ ಸಯುಂಕ್ತಗಣರಾಜ್ಯವನ್ನುರೂಪಿಸುವ ಅಸಾಧಾರಣ ಕೆಲವನ್ನುಎದುರಿಸಬೇಕಾಯಿತು.

೧೯೪೯ರಲ್ಲಿಜಾರಿಗೆ ಬಂದ ಭಾರತೀಯ ಸಂವಿಧಾನವು ಸಂಯುಕ್ತ ಸರ್ಕಾರವನ್ನು ಸ್ಥಾಪಿಸಿತುಇದು ವೈಯಕ್ತಿಕ ಆಸಕ್ತಿ ಗುಂಪು ಭಾವನೆಗಳ ಅಭಿವ್ಯಕ್ತಿಗೆಖಾತರಿನೀಡುವುದರೊದಿಗೆಕೇಂದ್ರದಅಧಿಕಾರವನ್ನು ಖಾತ್ರಿಪಡಿಸಿತು.ಅಂತಹ ಸ್ಥಳೀಯ ಹಿತಾಸಕ್ತಿಗಳನ್ನು ಪ್ರಾದೇಶಿಕ ರಾಜಕೀಯ ಪಕ್ಷಗಳು ವ್ಯಕ್ತಪಡಿಸುತ್ತವೆ ಮತ್ತು ಸಮರ್ಥಿಸಿಕೊಳ್ಳುತ್ತವೆ. ಎರಡುಅತ್ಯಂತ ಯಶಸ್ವಿ ಪ್ರಾದೇಶಿಕ ಪಕ್ಷಗಳನ್ನು ಪರಿಶೀಲಿಸುವಲ್ಲಿಉಜ್ಮಾ ಬುರ್ಕಿ ಭಾರತೀಯರಾಜಕೀಯದ ಸಂಕೀರ್ಣತೆಗಳು ಮತ್ತು ವಿರೋಧಾಭಾಸಗಳನ್ನು ಬಹಿರಂಗಪಡಿಸಿದರು.

ಕೇಂದ್ರೀಯಅಧಿಕಾರವನ್ನು ಸವಾಲು ಮಾಡುವ ಪ್ರಾದೇಶಿಕ ಪಕ್ಷಗಳ ಸಮರ್ಥ್ಯದ ಹೊರತಾಗಿಯೂ, ಭಾರತದಒಕ್ಕೂಟ ಸರ್ಕಾರದರಚನೆ ಮತ್ತು ನಮ್ಯತೆಎರಡು ಭಾರತೀಯಒಕ್ಕೂಟದಸಮಗ್ರತೆಯನ್ನುರಕ್ಷಿಸುತ್ತದೆಎಂದುಅವರುತೀರ್ಮಾನಿಸುತ್ತಾರೆ.ಅವರ ವಿಶ್ಲೇಷಣೆಯು ಸಂಸ್ಕೃತಿ ಮತ್ತು ಸಂಪ್ರದಾಯಕ್ಕೆ ಪ್ರತಿಕ್ರಿಯೆಯಾಗಿ ನಿರಂತರವಾಗಿ ವಿಕಸನಗೊಳ್ಳುವ ರಾಜಕೀಯ ವ್ಯವಸ್ಥೆಗಳ ನಮ್ಯತೆಯನ್ನು ವಿವರಿಸುತ್ತದೆ.

“ಖತಚಿ ಃಠದಠತುಛಿ, ರಾಜಕೀಯ ಪಕ್ಷಗಳು, ವ್ಯಪಾರ ಗುಂಪುಗಳು ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಭ್ರಷ್ಟಾಚಾರ ಸ್ಟಡ್ ೧೦೪೯(೨೦೧೨).ಈ ಲೇಖನದಲ್ಲಿ ಲೇಖಕರು ಪುಸ್ತಕವನ್ನು ವಮರ್ಶಿಸಿದ್ದಾರೆ (ಜಚಿಜಚಿತ ಗಿ (೨೦೧೧) ರಾಜಕೀಯ ಪಕ್ಷಗಳು ವ್ಯಾಪಾರ ಗುಂಪುಗಳು ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಭ್ರಷ್ಟಾಚಾರಆಕ್ಸಫರ್ಡಯೂನಿರ್ವಸಿಟಿ ಪ್ರೆಸ್, ಯುಕೆ,) ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ರಾಜಕೀಯ ಪಕ್ಷಗಳ ಅಭಿವೃದ್ಧಿಯನ್ನು ಆಧರಿಸಿವೆ”.

**ಅಂತಿಮ ಟಿಪ್ಪಣಿಗಳು;**

ಫೆಡ್ರಿಕ ವೈಟ ಭಾರತದಲ್ಲಿರಾಜಕೀಯ ವಿಕಸನ ೪ ವಿದೇಶಿ ೦ಈಈ೨೨೩ (೧೯೨೬)

ಬ್ರೂಸ್ ಬ್ಯೂನೊ ಡಿ ಮೆಸ್ಕ್ವಿಟಾ ಭಾರತದಲ್ಲಿ ಪುನರ್ವಿಭಜನೆ ಮತ್ತುರಾಜಕೀಯಏಕೀಕರಣ ೧೧ ಅಔಒಕ ಕಔಐ ಸ ಸ್ಟಡ್ ೨೭೯ (೧೯೭೮)

ಮೈರಾನ್ ವೀನರಇಂಡಿಯಾಸ್ ಪೊಲಿಟಿಕಲ್ ಫ್ಯೂಚರ್ ೧೨ ವರ್ಲ್ಡ ಪೋಲ್ ೧೦೩ (೧೯೫೯)

ಉಜ್ಮಾ ಬುರ್ಕಿ ಭಾರತದಲ್ಲಿನ ಪ್ರಾದೇಶಿಕ ರಾಜಕೀಯ ಪಕ್ಷಗಳು; ಅಕಾಲಿದಳ ಮತ್ತುಆಐಎ-

AIADMK,14 FLETCHER F WORLD AFF 128 (1990)

https://en.wikipedia.org/wiki/Official_Opposition_(India)#:~:text=Official%20Opposition%20is%20a%20term,ither%20upper%20or%20lower%20houses.

https://en.wikipedia.org/wiki/Indira_Gandhi#:~:text=Opposition%20to%20her%20in%20the,lead%20the%20protest%20movement%20there.

https://en.wikipedia.org/wiki/List_of_political_parties_in_India

https://en.wikipedia.org/wiki/Election_Commission_of_India

**ತೀರ್ಮಾನ :**

ಆದ್ದರಿಂದರಾಜಕೀಯ ಪಕ್ಷವನ್ನ ಹೊಂದಿರುವುದು ನಜವಾಗಿಯೂ ಮುಖ್ಯ ವೆಂದು ಮೇಲಿನ ಪಠ್ಯವನ್ನುಓದಿದ ನಂತರ ಸುರಕ್ಷಿತವಾಗಿ ಹೇಳಬಹುದು.ಅವರು ನಮ್ಮದೇಶದ ಬೆನ್ನೆಲುಬು ನಮ್ಮ ಸಂವಿಧಾನವನ್ನುರಕ್ಷಿಸಲು ಮತ್ತು ನಮಗೆ ಸೇವೆ ಸಲ್ಲಿಸುವ ಆವು ಆಯ್ಕೆ ಮಾಡಿದವರು ನಾವು ಆಯ್ಕೆ ಮಾಡಿದ ಪ್ರತಿನಿಧಗಳ ಮೂಲಕ ಸಾಮಾಜಿಕಆರ್ಥಿಕಉನ್ನತಿ ಸಂಭವಿಸುತ್ತದೆ.

Volume : XI | Issue : I | January 2023 ISSN: 2347-7660 (Print) | ISSN : 2454-1818 (Online)

# ಕರ್ನಾಟಕ ರಾಜಕೀಯದಲ್ಲಿ ಹಿಂದುಳಿದ ವರ್ಗಗಳ ರಾಜಕೀಯ ಸಂಚಲನದಲ್ಲಿ ವಿವಿಧ ನಾಯಕರುಗಳ ಪಾತ್ರ

**ಪ್ರಸ್ತುತ ವೈ.ಎಸ್**
ಸಂಶೋಧನ ವಿದ್ಯಾರ್ಥಿ
ಕುವೆಂಪು ವಿಶ್ವವಿದ್ಯಾಲಯ
ಶಿವಮೊಗ್ಗ

**ಪೀಠಿಕೆ:**

೨೦ನೇ ಶತಮಾನದಲ್ಲಿ ಎರಡನೇ ದಶಕದಲ್ಲಿ ಮೈಸೂರು ಸಂಸ್ಥಾನದಲ್ಲಿ ಉಂಟಾದ ಜನ ಜಾಗೃತಿ ಪರಿಣಾಮವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಮುಂದುವರೆದಿದ್ದ ಬ್ರಾಹ್ಮಣ ಸಮುದಾಯದ ವಿರುದ್ಧ ಸಂಘಟನೆಗಳು ಕ್ರಿಯಾಶೀಲಗೊಂಡವು. ಈ ಕ್ರಿಯಾಶೀಲತೆಗೆ ಪ್ರಮುಖ ಕಾರಣ ಲಿಂಗಾಯಿತ ಮತ್ತು ಒಕ್ಕಲಿಗ ಸಮುದಾಯದಂತಹ ಪ್ರಮುಖ ಜಾತಿಗಳು ಬ್ರಾಹ್ಮಣರ ವಿರುದ್ಧ ಇತರೆ ಚಿಕ್ಕ ಪುಟ್ಟ ಜಾತಿಗಳನ್ನು ಒಂದೆಡೆ ತರುವ ಪ್ರಯತ್ನ ನಡೆಸಿದವು. ಈ ಪ್ರಯತ್ನ ರಾಜಕೀಯ ನೆಲೆಯಲ್ಲಿ ಚಳುವಳಿಯಾಗಿ ಮಾರ್ಪಟ್ಟು ವ್ಯವಸ್ಥಿತ ರೀತಿಯಲ್ಲಿ ಬೆಳವಣಿಗೆ ಕಂಡಿತು. ಇಂತಹ ಸಂಘಟಿತ ಹೋರಾಟವನ್ನು **"ಬ್ರಾಹ್ಮಣೇತರ ಹಿಂದುಳಿದ ವರ್ಗಗಳ ಚಳುವಳಿ"** ಎಂದು ಕರೆಯಲಾಯಿತು.

ಕರ್ನಾಟಕ ಏಕೀಕರಣ ನಂತರ ಈ ಚಳುವಳಿಂದ ಇನ್ನೊಂದು ಮಜಲಿನಲ್ಲಿ ರೂಪುಗೊಂಡಿತು. ಬ್ರಾಹ್ಮಣೇತರ ಚಳುವಳಿಯ ಲಾಭ ಹೆಚ್ಚಾಗಿ ಒಕ್ಕಲಿಗರು ಮತ್ತು ಲಿಂಗಾಯಿತರು ಪಡೆದುಕೊಂಡ ಪ್ರಬಲವಾಗುವುದರ ಮೂಲಕ ರಾಜಕೀಯ ಅಧಿಕಾರ ಪಡೆಯಲು ಯಶಸ್ವಿಯಾದರು. ಇದರ ವಿರುದ್ಧ ಇತರೆ ಹಿಂದುಳಿದ ವರ್ಗ ಸಾಕಷ್ಟು ಸಂಘಟಿತಗೊಂಡಿರಲಿಲ್ಲ. ಇಂತಹ ಜಾತಿಯನ್ನು ಸಂಘಟಿಸುವ ಮೂಲಕ ಡಿ.ದೇವರಾಜ ಅರಸ್ ಅವರ ಪಾತ್ರ ಪ್ರಮುಖವಾದುದು ಇವರನ್ನು ಸಂಘಟಿಸುವ ಮೂಲಕ ರಾಜಕೀಯ ಅಧಿಕಾರವನ್ನು ಪಡೆಯಲು ಯಶಸ್ವಿಯಾದರು. ಹಿಂದುಳಿದ ವರ್ಗಗಳ ನಾಯಕನಾಗಿ ಹೊರಹೊಮ್ಮಿದರು. ಹಿಂದುಳಿದ ವರ್ಗಗಳ ಪರವಾಗಿ ಅನೇಕ ಯೋಜನೆಯನ್ನು ಹಾಕಿಕೊಳ್ಳುವ ಮೂಲಕ ಇವರನ್ನು ರಾಜಕೀಯವಾಗಿ ಸಂಘಟಿಸುವ ಕೆಲಸ ಮಾಡಿದರು.

**ದೇವರಾಜ್ ಅರಸು ನಾಯಕತ್ವದಲ್ಲಿ:**

ದೇವರಾಜ್ ಅರಸು ಅವರು ಹಿಂದುಳಿದ ಜಾತಿಗಳ ರಾಜಕೀಯ ಸಂಚಲನದ ಕೇಂದ್ರವಾಗಿದ್ದರು. ಹಿಂದುಳಿದ ವರ್ಗಗಳ ಹೋರಾಟಕ್ಕೆ ಹೊಸ ರೂಪುರೇಷೆಗಳನ್ನು ನೀಡಿದರು. ಅರಸು ಅಧಿಕಾರಕ್ಕೆ ಬಂದ ನಂತರ ಹಿಂದುಳಿದ ವರ್ಗಗಳ ಹೊಸ ಯುಗವೊಂದು ಪ್ರಾರಂಭವಾಯಿತು. ಹಿಂದುಳಿದ ವರ್ಗಗಳನ್ನು ಗುರುತಿಸಲು ೧೯೭೨ ಆಗಸ್ಟ್ ೮ರಂದು ಎಲ್.ಜಿ. ಹಾವನೂರು ಅವರ ಅಧ್ಯಕ್ಷತೆಯಲ್ಲಿ ಮೊದಲ ಬಾರಿಗೆ ಹಿಂದುಳಿದ ವರ್ಗಗಳ ಆಯೋಗ ರಚಿಸಲಾಯಿತು. ಈ ಆಯೋಗವು ಸಾಮಾಜಿಕ ಹಿಂದುಳಿದಿರುವಿಕೆಯನ್ನು ಗುರುತಿಸಲು ಜಾತಿಯು ಒಂದು ಮಾನದಂಡವಾಗಿರಬೇಕು. ಜಾತಿಯನ್ನು ಹೊರತುಪಡಿಸಿ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಸಾಧ್ಯವಿಲ್ಲ ಎಂಬ ನಿಲುವನ್ನು ತೆಗೆದುಕೊಂಡಿತು. ಇದರ ಜೊತೆಗೆ ಸಾಮಾಜಿಕ ಹಿಂದುಳಿದಿರುವಿಕೆಗೆ ಪ್ರಮುಖ ಕಾರಣಗಳನ್ನು ಗುರುತಿಸಿತು. ಹಿಂದುಳಿದ ವರ್ಗಗಳನ್ನು ಹಿಂದುಳಿದ ಸಮುದಾಯ, ಹಿಂದುಳಿದ ಜಾತಿಗಳು, ಹಿಂದುಳಿದ ಬುಡಕಟ್ಟುವೆಂದು ವರ್ಗೀಕರಿಸಬಹುದೆಂದು ಸೂಚಿಸಿತು. ಈ ಪ್ರಕಾರ ವಿಂಗಡಿಸಿ ಮೀಸಲಾತಿ ನೀಡಲು ಸರ್ಕಾರ ಪ್ರಯತ್ನಿಸಿತು. ಆದರೆ ದೇವರಾಜ ಅರಸು ಅವರು ಪ್ರಬಲ ಜಾತಿಗಳ ವಿರೋಧದಿಂದಾಗಿ ಮತ್ತು ಹಿಂದುಳಿದ ವರ್ಗಗಳಲ್ಲಿಯೇ ಜಾತಿವಾರು ಇದ್ದ ಭಿನ್ನಾಭಿಪ್ರಾಯದಿಂದಾಗಿ ಅಧಿಕಾರವನ್ನು ಕಳೆದುಕೊಳ್ಳಬೇಕಾಯಿತು. ಇವರ ನಂತರ ಕಾಲದಲ್ಲಿ ಹಿಂದುಳಿದ ವರ್ಗಗಳ ಸಂಘಟನೆ ದುರ್ಬಲಗೊಳ್ಳುತ್ತಾ ಸಾಗಿತು.

**ಅರಸು ನಂತರದ ಕಾಲಘಟ್ಟದಲ್ಲಿ:**

ಹಿಂದುಳಿದ ವರ್ಗಗಳ ನಾಯಕನಾಗಿ ಹೊರಹೊಮ್ಮಿದ ಎಸ್. ಬಂಗಾರಪ್ಪನವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದರು. ಆದರೆ ಬಂಗಾರಪ್ಪನವರು ಮೂಲತಃ ಹಿಂದುಳಿದ ವರ್ಗಕ್ಕೆ ಸೇರಿದ ನಾಯಕನಾದರೂ ಕೂಡ ಚಿನ್ನಪ್ಪ ರೆಡ್ಡಿ ವರದಿಯನ್ನು ಅನುಷ್ಠಾನಗೊಳಿಸುವ ಧೈರ್ಯ ತೋರಲಿಲ್ಲ. ವರದಿಯ ಬಗ್ಗೆ ಜನಾಭಿಪ್ರಾಯ ಸಂಗ್ರಹಿಸುವ ಇಂಗಿತವನ್ನು ವ್ಯಕ್ತಪಡಿಸಿದರು. ಹಿಂದುಳಿದ ವರ್ಗಗಳ ಬಗ್ಗೆ ಹೆಚ್ಚು ಕಾಳಜಿ ವಾಹಿಸಿದರು ಪೂರಕ ಸಹಕರದ ಕೊರತೆಯಿಂದ ಯಶಸ್ಸನ್ನು ಪಡೆಯಲಾಗಿಲ್ಲ.

ನಂತರದಲ್ಲಿ ಬಂದ ಮತ್ತೊರ್ವ ಹಿಂದುಳಿದ ವರ್ಗಗಳ ನಾಯಕರಾದ "ಶ್ರೀ ವೀರಪ್ಪ ಮೊಯಿಲಿ" ಅವರು ಮುಖ್ಯಮಂತ್ರಿಯಾದರು. ಚಿನ್ನಪ್ಪರೆಡ್ಡಿ ವರದಿಯನ್ನು ಕೆಲವು ಮಾರ್ಪಾಡುಗಳೊಂದಿಗೆ ಅನುಷ್ಠಾನಗೊಳಿಸುವ ಪ್ರಯತ್ನ ನಡೆಸಿದರು.ಅದಾಗ್ಯೂ ಹಿಂದುಳಿದವರ್ಗಗಳ ಜನಮನ್ನಣೆ ಗಳಿಸಲು ಸಾದ್ಯವಾಗಿಲ್ಲ. ಅರಸು ನಂತರದ ಕಾಲದಲ್ಲಿ ಎರಡನೇ ತಲೆಮಾರಿನಲ್ಲಿ ಹಿಂದುಳಿದ ವರ್ಗಗಳನ್ನು ಸಂಘಟಿಸಲು ರಾಜಕೀಯ ನಾಯಕತ್ವ ಕೊರತೆಯಿಂದಸೊರಗಿತು.

ಅರಸು ನಂತರದಲ್ಲಿ ಹಿಂದುಳಿದ ವರ್ಗಗಳನ್ನು ಸಂಘಟಿಸಿ ರಾಜಕೀಯ ಅಧಿಕಾರ ಪಡೆಯುವ ಮೂಲಕ ಪ್ರಬಲ ನಾಯಕನಾಗಿ ಹೊರಹೊಮ್ಮಿದ್ದು ಸಿದ್ಧರಾಮಯ್ಯನವರು. ಪ್ರಾರಂಭಿಕ ರಾಜಕೀಯ ಜೀವನ ನೋಡುವುದಾದರೆ ೧೯೮೩ರಲ್ಲಿ ಪಕ್ಷೇತರ ಆಭರ್ಥಿಯಾಗಿ ಚಾಮುಂಡೇಶ್ವರಿ ಯಿಂದ ಚುನಾವಣಾ ರಾಜಕರಣಕ್ಕೆ ಪ್ರವೇಶಿಸಿದರು ೧೯೮೫ರಲ್ಲಿ ಹೆಗಡೆ ಸಂಪುಟದಲ್ಲಿ ಮಂತ್ರಿಯಾಗಿ ಗುರುತರ ಜವಾಬ್ದಾರಿಯನ್ನು ನಿರ್ವಹಿಸಿದರು. ೧೯೯೪ರಲ್ಲಿ ದೇವೆಗೌಡರ ಸರ್ಕಾರದಲ್ಲಿ ಹಣಕಾಸು ಸಚಿವರಾಗಿ ಉಪಮುಖ್ಯಮಂತ್ರಿಯಾಗಿ ಸೇವೆಸಲ್ಲಿಸಿದರು. ಮುಂದೆ ಜನತದಳ ವಿಭಜನೆಯ ಸಂಧರ್ಭದಲ್ಲಿ ದೇವೆಗೌಡರ ಜಾತ್ಯತೀತ ಜನತದಳವನ್ನು ಸೇರಿಕೊಂಡರು ೨೦೦೪ರಲ್ಲಿ ಇವರ ನಾಯಕತ್ವದಲ್ಲಿ ೫೯ ಸ್ಥಾನ ಗೆಲ್ಲುವ ಮೂಲಕ ಮೈತ್ರಿ ಸರ್ಕಾರದಲ್ಲಿ ಮತ್ತೆ ಉಪಮುಖ್ಯಮಂತ್ರಿ ಅತ್ಯಂತ ಜನಪ್ರಿಯ ನಾಯಕನಾಗಿ ಹೊರ ಹೊಮ್ಮಿದರು. ಸಿದ್ದರಾಮಯ್ಯನವರು ಅಹಿಂದ ಸಂಘಟನೆಯ ಮೂಲಕ ಪ್ರಬಲವಾಗುತ್ತಿದ್ದಂತೆ ಜನತದಳದಿಂದ ಉಚ್ಚಟಿಸಿದರು. ನಂತರ ಕಾಂಗ್ರೆಸ್ ಪಕ್ಷ ಸೇರುವ ಮೂಲಕ ಹೊಸ ರಾಜಕೀಯ ಪರ್ವ ಪ್ರಾರಂಭಿಸಿದರು ಅಲ್ಲಿಯು ಕೂಡ ಉತ್ತಮ ನೆಲೆಯನ್ನು ಕಂಡುಕೊಂಡರು ವಿರೋಧಪಕ್ಷದ ನಾಯಕನಾಗಿ ಜನಪರ ಧ್ವನಿಯಾಗಿ ಪಕ್ಷ ಸಂಘಟಕನಾಗಿ ಪ್ರಭಾವಿಸಿದರು. ೨೦೧೪ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ತರುವ ಮೂಲಕ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾಗಿ ಮುಖ್ಯಮಂತ್ರಿ ಹುದ್ದೆಗೇರಿದರು. ಈ ಮೂಲಕ ಯಾವುದೇ ಪ್ರಬಲ ಸಮುದಾಯಗಳ ಹಿಡಿತವಿಲ್ಲದೆ ಹಿಂದುಳಿದ ವರ್ಗ ನಾಯಕನಾಗಿ ವಂಚಿತ ಸಮುದಾಯಗಳ ಧ್ವನಿಯಗಿ ಸಮರ್ಥ ರೀತಿಯಲ್ಲಿ ಆಡಳಿತ ನೆಡೆಸಿ ಐದು ವರ್ಷ ಅಧಿಕಾರ ಅವಧಿಯನ್ನು ಪೂರ್ಣಗೊಳಿಸಿದರು.

ಹೀಗೆ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ನಿರಂತರ ಹೋರಾಟ ಬದಲಾವಣೆ ಹಾಗೂ ಬೆಳವಣಿಗೆಗಳು ನಡೆಯುತ್ತಾ ಬಂದಿರುವುದನ್ನು ಗಮನಿಸಬಹುದಾಗಿದೆ. ವಿವಿಧ ರಾಜಕೀಯ ನಾಯಕತ್ವದಲ್ಲಿ ಧ್ರುವೀಕರಣಗೊಂಡು ತಮ್ಮ ಬೇಡಿಕೆಯನ್ನು ಸಫಲಗೊಳಿಸುವ ಪ್ರಯತ್ನ ನಡೆಸಿದರು. ಜೊತೆಗೆ ಪ್ರಬಲ ನಾಯಕತ್ವ ಬೆಳವಣಿಗೆಗೆ ಕಾರಣವಾಗಿದೆ. ತೊಂಭತ್ತರ ದಶಕದ ನಂತರ ಹಿಂದುಳಿದ ವರ್ಗಗಳ ಹೋರಾಟ ಸ್ವಲ್ಪ ಶಿಥಿಲಗೊಂಡಿರುವುದು ಕಾಣಬಹುದಾಗಿದೆ. ಸಿದ್ದರಾಮಯ್ಯನವರ ರಾಜಕೀಯ ನಾಯಕತ್ವದಲ್ಲಿ ಪುನಃ ಸಫಲತೆಗೊಂಡು ಅಧಿಕಾರ ಪಡೆಯಲು ಯಶಸ್ವಿಯಾದರು. ನಂತರ ಅವರ ಅಧಿಕಾರದಲ್ಲಿ ಹಿಂದುಳಿದ ವರ್ಗಗಳಿಗೆ ಕೈಗೊಂಡ ಕ್ರಮಗಳಿಂದ ಇವರ ನಾಯಕತ್ವದಲ್ಲಿ ಪುನರ್ ಧ್ರುವೀಕರಣಕ್ಕೆ ನಾಂದಿಯಾಯಿತು. ಹಿಂದುಳಿದ ವರ್ಗಗಳ ಜನಪ್ರಿಯ ನಾಯಕ ಡಿ. ದೇವರಾಜ್ ಅರಸು ನಂತರದಲ್ಲಿ ಹಿಂದುಳಿದ ವರ್ಗಗಳ ಮುಂಚೂಣಿಯ ನಾಯಕನಾಗಿ ಈ ವರ್ಗಗಳ ಧ್ವನಿಯಾಗಿ ಹಿಂದುಳಿದ ವರ್ಗಗಳ ಪುನರ್ ಧ್ರುವೇಕರಣದಲ್ಲಿ ಕೇಂದ್ರಬಿಂದುವಾಗಿದ್ದಾರೆ.

**ಗ್ರಂಥಋಣ**


೧. ಮಹದೇವಯ್ಯ ತುಮಕೂರು, ೨೦೧೫ ಇಟ್ಟಗುರಿ–ದಿಟ್ಟ ಹೆಜ್ಜೆ, ಬೆಂಗಳೂರು, ಕರ್ನಾಟಕ ಸಾಹಿತ್ಯ ವೇದಿಕೆ.

೨. ಚಿಕ್ಕಣ್ಣ ಕಾತಾ ೨೦೧೯ ಸಿದ್ದರಾಮಯ್ಯ ಆಡಳಿತ ಆಂತರಂಗ–ಬಹಿರಂಗ ಬೆಂಗಳೂರು, ಚನಯ್ಯನ ಪ್ರಕಾಶನ.

೩. ಏಚಿಡಿಟಿಚಿಣಚಿಞಚಿ ಖಣಚಿಣಜ ಅಂಟಟಿಜಜಿ ಜಿಂಡಿ ಛಿಚಿಛಿಞತಿಚಿಡಿಜ ಛಿಟಚಿಞ ಡಿಜಠಿಂಡಿಣ– ೨೦೧೫: ಖಂಛಿಂ–ಇಜಣಛಿಚಿಣುಂಟಿಚಿಟ ಚಿಟಿಜ ಅಂಟಿಣುಣಣಣುಂಟಿಚಿಟ ಂಛಿಟುಂಚಿಣುಂಟಿ.

೪. ಖಟಂಚಿಛಿಣ ಂಜಿ ಖುಜಜಚಿಡಿಚಿಟಚುಚು ಃಣಜರಜಣ ುಟಿ ಛಿಚಿಛಿಞತಿಚಿಡಿಜ ಛಿಟಚಿಞ: ೦ ಛಿಡುಣುಛಿಚಿಟ ಡಿಜತುಜತಿ– ಒ ಆಜತಿಜಟಜಡಿಚಿ ಃಚಿಛಿಚಿ.

೫. ಃಣಜರಜಣಚಿಡಿಥಿ ೦ಟಟಂಛಿಚಿಣುಂಟಿ ಜಥಂಜಟಜುಣಣಡಿಜ ಚಿಟಿಜ ಖಟಂಟುಛಿಚಿಣುಂಟಿ ಜಿಂಡಿ ಛಿಜಜಣಟಜಜ ಅಛಿಣಞ ುಟಿ ಏಚಿಡಿಟಚಿಣಚಿಞ : ೦ ಛಿಡುಣುಛಿಚಿಟ ಡಿಜಜಿಟಜಛಿಣುಂಟಿ ಒಂಟಿಝುಚಿಡಿ ಜಚಿಜಚಿತ.

೬. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಕಾಯ್ದೆ ೧೯೯೫, ಎಚ್. ಕಾಂತರಾಜ್.

೭. ಮಹದೇವ ಪ್ರಕಾಶ್ ೨೦೧೫, "ಸಿದ್ಧರಾಮಯ್ಯ ರಾಜಕೀಯ ಚೈತ್ರಯಾತ್ರೆ" (ಸಂ) ಮಹಾದೇವಯ್ಯ, ತುಮಕೂರು ಇಟ್ಟಗುರಿ – ದಿಟ್ಟಹೆಜ್ಜೆ.

೮. ಸದಾನಂದ ಜೆ.ಎಸ್. ೧೯೯೪, ಶ್ರೀ ದೇವರಾಜ್ ಅರಸು ಹಿಂದುಳಿದ ವರ್ಗಗಳ ಸಂಘಟನೆಯಲ್ಲಿ ಮತ್ತು ಹಾವನೂರು ಆಯೋಗ ವರದಿ.

೯. ಸದಾನಂದ ಜೆ.ಎನ್.೨೦೧೦. ಹಿಂದುಳಿದ ವರ್ಗಗಳ ಚಳುವಳಿ ಮತ್ತು ಸಾಮಾಜಿಕ ಮಸೂದೆ.

ಚಂದ್ರಶೇಖರ್ ಎಸ್.೧೯೮೩, ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಕೆಲವು ಒಳನೋಟಗಳು (೧೮೮೧–೧೯೪೦